ಮಲೆಕರ್ನಾಟಕದ ಅರಸು ಮನೆತನಗಳು: ಸಂಪಾದಕರ ಮಾತು

ಪ್ರಸ್ತುತ ಗ್ರಂಥದಲ್ಲಿ ಪ್ರಕಟಿಸಲಾದ ಪ್ರಬಂಧಗಳನ್ನು ಫೆಬ್ರುವರಿ ೧೨ ಮತ್ತು ೧೩, ೨೦೦೦ ದಂದು ಶಿವಮೊಗ್ಗದಲ್ಲಿ ನಡೆಸಲಾದ 'ಮಲೆನಾಡು ಕರ್ನಾಟಕದ ಅರಸು ಮನೆತನಗಳು' ಎಂಬ ವಿಚಾರ ಸಂಕಿರಣದಲ್ಲಿ ಮಂಡಿಸಲಾಗಿತ್ತು. ಕನ್ನಡ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾದ ಡಾ. ಎಂ.ಎಂ. ಕಲಬುರ್ಗಿಯವರು ಈ ಕುರಿತು ವಿಶೇಷ ಆಸ್ಥೆ ವಹಿಸಿ ಮಲೆನಾಡಿನ ಪ್ರದೇಶವನ್ನಾಳಿದ ಚಿಕ್ಕ-ಪುಟ್ಟ ಅರಸು ಮನೆತನಗಳ ಕುರಿತು ವಿಚಾರ ಸಂಕಿರಣ ನಡೆಸುವ ಮೂಲ ಪ್ರೇರಣೆಯಾದರು. ಅವರ ಆಶಯದಂತೇ ಕನ್ನಡ ವಿಶ್ವವಿದ್ಯಾಲಯ ಮತ್ತು ಶಿವಮೊಗ್ಗದ ಇತಿಹಾಸ ವೇದಿಕೆ ಇವು ಜಂಟಿಯಾಗಿ ಈ ಕಾರ್ಯಕ್ರಮವನ್ನು ಸಂಘಟಿಸಿ ಈ ಗ್ರಂಥದ ಬಹುತೇಕ ಪ್ರಬಂಧಗಳು ಅದರಲ್ಲಿ ಮಂಡನೆಯಾದವು. ವಿಚಾರಸಂಕಿರಣದಲ್ಲಿ ಮಂಡಿಸದಿದ್ದ ಒಂದೆರಡು ಪ್ರಬಂಧಗಳನ್ನು ವಿಷಯದ ಸಮಗ್ರತೆಗಾಗಿ ನಂತರ ವಿದ್ವಾಂಸರದಿಂದ ತರಿಸಿಕೊಂಡೆವು.

ಈ ಗ್ರಂಥದ ವಿಷಯ ಪ್ರವೇಶಕ್ಕೂ ಪೂರ್ವದಲ್ಲಿ ಈ ಗ್ರಂಥದ ಇತಿಮಿತಿಗಳ ಕುರಿತು ಕೆಲ ಮಾತುಗಳು ಅಗತ್ಯವಾಗಿವೆ ಎಂಬುದು ನಮ್ಮ ಅನ್ನಿಸಿಕೆ. ಅವೆಂದರೆ ೧. ಮೊತ್ತ ಮೊದಲನೆಯದಾಗಿ ಇದರ 'ಭೌಗೋಲಿಕ' ಚೌಕಟ್ಟಿನ ಕುರಿತಾದದ್ದು. ಇಲ್ಲಿ 'ಮಲೆನಾಡು' ಎಂಬ ಭೂವಿಶೇಷವನ್ನು ಸೂಚಿಸಲಾಗಿದೆಯಾದರೂ, ಇಲ್ಲಿ ಮಲೆನಾಡಿನದೇ ಒಂದು ಭಾಗವಾದ ಉತ್ತರ ಕನ್ನಡದ ಘಟ್ಟದ ತಾಲ್ಲೂಕುಗಳನ್ನು ಸೇರಿಸಿಲ್ಲ. ಅದರಂತೆಯೇ ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮೈಸೂರು ಜಿಲ್ಲೆಗಳ ಅರೆಮಲೆನಾಡಿನ ಭಾಗಗಳೂ ಇಲ್ಲಿ ಸೇರಿವೆ. ಒಂದೆಡೆ ಮಲೆನಾಡಿನಲ್ಲಿ ಹಾಗೂ ಮತ್ತೊಂದೆಡೆ ಅರೆಮಲೆನಾಡಿನಲ್ಲಿ ಚಾಚಿಕೊಂಡ ಅರಸೊತ್ತಿಗೆಗಳನ್ನು ಅಧ್ಯಯನ ಮಾಡುವಾಗ ಇಂಥ ಸಮಸ್ಯೆಗಳು ಬರುತ್ತವೆ. ಹಾಗೂ ಅದಕ್ಕಿಂತ ಮುಖ್ಯವಾಗಿ ಮಧ್ಯಕಾಲದಲ್ಲಿ ಇಂದು ನಾವು ಗುರುತಿಸುವ ಅರೆಮಲೆನಾಡಿನ ಬಹುತೇಕ ಭಾಗಗಳು ಮಲೆನಾಡಿನಂತೇ ಅರಣ್ಯಾವೃತವಾಗಿದ್ದವು ಹಾಗೂ ಆ ಕಾರಣದಿಂದ ಬಯಲುನಾಡಿಗಿಂತ ಮಲೆನಾಡಿನ ವೈಶಿಷ್ಟ್ಯತೆಗೇ ಹೆಚ್ಚು ಹೊಂದಿಕೊಂಡಿದ್ದವು ಎಂಬುದೂ ಗಮನಾರ್ಹ.

೨. ಎರಡನೆಯ ಸಮಸ್ಯೆ ಎಂದರೆ 'ಅರಸು ಮನೆತನ' ಎಂಬ ಪರಿಭಾಷೆಯ ಮಿತಿಗಳು. ಇಲ್ಲಿ ಮಂಡಿಸಲಾದ ಪ್ರತೀ ಮನೆತನವೂ ತನ್ನಷ್ಟಕ್ಕೇ ವಿಶಿಷ್ಟವಾಗಿದೆ. ಇವನ್ನೆಲ್ಲ ಒಂದೇ ವರ್ಗದಲ್ಲಿ ಸೇರಿಸುವಂತಿಲ್ಲ. ಸ್ಥೂಲವಾಗಿ ಈ ಮುಂದಿನ ಭಿನ್ನತೆಗಳನ್ನೂ ಗುರುತಿಸಬಹುದು : ಪ್ರಾರಂಭಿಕ ಮಧ್ಯಕಾಲದಿಂದ ವಿಜಯನಗರದ ಕಾಲದವರೆಗಿನ ಮನೆತನಗಳು ಹಾಗೂ ವಿಜಯನಗರಾನಂತರದ ಮನೆತನಗಳು. ಈ ಎರಡೂ ಕಾಲಘಟ್ಟಗಳಲ್ಲಿ ಮಲೆನಾಡಿನ ಭಾಗದಲ್ಲೇ ಅಭ್ಯುದಯಗೊಂಡ ಹೊಯ್ಸಳ ಮತ್ತು ಕೆಳದಿ ಸಾಮ್ರಾಜ್ಯಗಳನ್ನು ಇಲ್ಲಿ ಕೈ ಬಿಡಲಾಗಿದೆ. ಅವುಗಳ ಕುರಿತು ಸಾಕಷ್ಟು ಪ್ರಕಟಣೆಗಳು ಆಗಿರುವುದರಿಂದ ಒಂದು ಪ್ರಬಂಧದಲ್ಲಿ ಅವುಗಳ ಕುರಿತು ಒಟ್ಟಾರೆಯಾಗಿ ಬರೆಯುವುದು ಅರ್ಥಹೀನ ಎಂಬುದು ಒಂದು ಕಾರಣವಾದರೆ, ಈ ಸಂಕಲನದ ಉದ್ದೇಶಕ್ಕೆ ಅವು ಹೊಂದಲಾರವು ಎಂಬುದು ಮತ್ತೊಂದು ಕಾರಣವಾಗಿದೆ. ಇಲ್ಲಿನ ನಮ್ಮ ಉದ್ದೇಶ ಕಿರು ಅರಸು ಮನೆತನಗಳಾಗಿವೆ ಹಾಗೂ ಆ ಮೂಲಕ ಮಧ್ಯಕಾಲೀನ ರಾಜ ಪ್ರಭುತ್ವದ ಕೆಳಸ್ತರಗಳ ರಚನೆ ಹಾಗೂ ಮಹತ್ವದ ಕುರಿತು ಪರಿಶೀಲಿಸುವುದು. ಈ ಕಾರಣದಿಂದಾಗಿ ಅರಗದಲ್ಲಿ ವಿಜಯನಗರದ ಅಧಿಕಾರಿಗಳಾಗಿಯೇ ಆಳಿದ ಪ್ರಭುಗಳನ್ನು ಪರಿಗಣಿಸಲಾಗಿದೆ.

ಶಾಂತರರಂಥ ಮಹಾಮಂಡಳೇಶ್ವರ ಮನೆತನಗಳಿಂದ ಹಿಡಿದು ಉದ್ರಿ ಅರಸರಂಥ 'ನಾಡಪ್ರಭು' ಮನೆತನಗಳವರೆಗಾಗಲೀ, ವಿಜಯನಗರೋತ್ತರ ನಾಯಕ ಮನೆತನಗಳಾಗಲೀ, ಎಲ್ಲರನ್ನೂ ಸ್ಥಾನಿಕ ಅರಸರೆಂದು ಗ್ರಹಿಸುವ ರೂಢಿ ಇದೆ. ಇವರನ್ನೆಲ್ಲ ಇಂದಿನ ಪರಿಭಾಷೆಯಲ್ಲಿ ರಾಜ್ಯಾಧಿಕಾರಿಗಳು ಎಂದು ಗ್ರಹಿಸುವುದು ತಪ್ಪಾಗುತ್ತದೆ ಎಂಬುದಂತೂ ಸ್ಪಷ್ಟ. ಹಾಗೆಂದು ಅವರು ಸ್ವತಂತ್ರ ಅರಸರೂ ಆಗಿರಲಿಲ್ಲ. ಮಹಾಮಂಡಲೇಶ್ವರ, ಮಾಂಡಲಿಕ, ಸಾಮಂತ, ನಾಯಕ ಮುಂತಾದ ಸ್ಥಾನ ವಿಶೇಷಗಳನ್ನು ಸಾಮ್ರಾಜ್ಯಗಳಲ್ಲಿ ಅವರು ಹೊಂದಿದ್ದರು. ಆದರೆ ತಮ್ಮ ನಿರ್ದಿಷ್ಟ ಸೀಮೆಯಲ್ಲಿ ಅವರು ರಾಜರಂತೇ ಆಳ್ವಿಕೆ ನಡೆಸಿದರು. ಹಾಗಾಗಿ ಒಂದು ನಿರ್ದಿಷ್ಟವಾದ ಪ್ರದೇಶದ ಆಳ್ವಿಕೆ ಹಾಗೂ ಅಭಿವೃದ್ಧಿಯ ಇತಿಹಾಸಕ್ಕೆ ಈ ಮನೆತನಗಳೇ ಸಾಮ್ರಾಟ ಮನೆತನಗಳಿಗಿಂತ ಹೆಚ್ಚು ನಿರ್ಣಾಯಕವಾಗಿವೆ. ಸಾಮ್ರಾಜ್ಯಗಳು ಇಂಥ ಸ್ಥಾನಿಕ ಆಳುವ ಮನೆತನಗಳ ಮೂಲಕ ಸ್ಥಾನಿಕ ಸಂದರ್ಭದಲ್ಲಿ ಪ್ರವೃತ್ತಿಸಿದವು. ಈ ಕ್ರಿಯೆ ಮಧ್ಯಕಾಲದ ರಾಜ್ಯ ನಿರ್ಮಾಣದ ಇತಿಹಾಸದ ಒಂದು ಭಾಗವಾಗಿದ್ದು ಆ ಕುರಿತಾದ ವಿವರವಾದ ಚರ್ಚೆಯನ್ನು ನಾವು ಈ ಗ್ರಂಥದ ಮೊದಲ ಲೇಖನದಲ್ಲಿ ಮಾಡಿದ್ದೇವೆ. ಏಕೆಂದರೆ ಈ ಪ್ರಕ್ರಿಯೆಯ ಸ್ವರೂಪದ ಕುರಿತು ಈಗಾಗಲೇ ಅನೇಕ ಸಿದ್ಧಾಂತಗಳು, ವಾದ-ವಿವಾದಗಳೂ ಇವೆ. ಅವನ್ನೂ ಪ್ರಸ್ತುತ ಪ್ರಬಂಧಗಳ ಬೆಳಕಿನಲ್ಲಿ ಪರಾಮರ್ಶಿಸುವ ಪ್ರಯತ್ನವನ್ನು ಆ ಲೇಖನದಲ್ಲಿ ಮಾಡಿದ್ದೇವೆ.

ಸಕಾಲದಲ್ಲಿ ನಮ್ಮ ಕೋರಿಕೆಯಂತೇ ಬೇರೆ ಬೇರೆ ಮನೆತನಗಳ ಕುರಿತು ಅಧ್ಯಯನ ನಡೆಸಿ ಪ್ರಬಂಧಗಳನ್ನು ತಯಾರಿಸಿ ಮಂಡಿಸಿದ ಈ ಗ್ರಂಥದ ಎಲ್ಲ ಲೇಖಕರ ಸಹಕಾರವನ್ನೂ ನಾವು ನೆನೆಯುತ್ತೇವೆ. ಈ ಲೇಖಕರಲ್ಲಿ ಒಬ್ಬರಾದ ಡಾ. ಕೋಟೆ ಮಲ್ಲಿಕಾರ್ಜುನ ಇವರು ಅನಿರೀಕ್ಷಿತವಾಗಿ ನಮ್ಮನ್ನಗಲಿದ್ದಾರೆ. ಅವರು ಈ ವಿಚಾರ ಸಂಕಿರಣದಲ್ಲಿ ಸಕ್ರಿಯವಾಗಿ ಪಾಲುಗೊಂಡ ಇತಿಹಾಸ ವೇದಿಕೆಯ ಸದಸ್ಯರಾಗಿದ್ದರು. ಈ ಸಂದರ್ಭದಲ್ಲಿ ದುಃಖದಿಂದ ಅವರನ್ನೂ ನೆನೆಯುತ್ತೇವೆ.

'ಮಲೆನಾಡು ಕರ್ನಾಟಕದ ಅರಸು ಮನೆತನಗಳು' ವಿಚಾರ ಸಂಕಿರಣವನ್ನು ಸಂಘಟಿಸುವಲ್ಲಿ ಧನಸಹಾಯ ನೀಡಿ ಪ್ರಧಾನ ಪಾತ್ರವನ್ನು ವಹಿಸಿದ ಅಂದಿನ ಕುಲಪತಿಗಳಾದ ಡಾ. ಎಂ.ಎಂ. ಕಲಬುರ್ಗಿಯವರಿಗೂ, ಪ್ರೊ. ಎ.ವಿ.ನಾವಡ ಅವರಿಗೂ ನಮ್ಮ ಕೃತಜ್ಞತೆಗಳು ಹಾಗೂ ಈ ಗ್ರಂಥವು ಹೊರಬರುವುದಕ್ಕೆ ಕಾರಣರಾದ ಇಂದಿನ ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಚ್.ಜೆ. ಲಕ್ಕಪ್ಪಗೌಡರು, ಪ್ರಸಾರಾಂಗದ ಪ್ರಕಟಣ ವಿಭಾಗದ ಸಹಾಯಕ ನಿರ್ದೇಶಕರಾದ ಶ್ರೀ ಸುಜ್ಞಾನ ಮೂರ್ತಿ ಇವರಿಗೂ ನಾವು ಆಭಾರಿಗಳಾಗಿದ್ದೇವೆ. ಶಿವಮೊಗ್ಗದಲ್ಲಿ ಈ ವಿಚಾರ ಸಂಕಿರಣವನ್ನು ನಡೆಸುವಾಗ ಉದಾರ ಹಸ್ತದಿಂದ ಧನಸಹಾಯ ಮಾಡಿದ ಕುವೆಂಪು ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಎಸ್.ಪಿ. ಹಿರೇಮಠ ಅವರಿಗೆ ಹಾಗೂ ಶಿವಮೊಗ್ಗದ ರಾಷ್ಟ್ರೀಯ ಶಿಕ್ಷಣ ಸಂಸ್ಥೆಗೆ ನಾವು ವಿಶೇಷವಾಗಿ ಋಣಿಗಳಾಗಿದ್ದೇವೆ. ವಿಚಾರ ಸಂಕಿರಣವನ್ನು ಸಂಘಟಿಸಿದ ಶಿವಮೊಗ್ಗದ ಇತಿಹಾಸ ವೇದಿಕೆಯ ಸದಸ್ಯರಿಗೂ ವಂದನೆಗಳು.

ಈ ಗ್ರಂಥದ ವಿನ್ಯಾಸಕ್ಕಾಗಿ ವಿಶೇಷ ಮುತುವರ್ಜಿ ವಹಿಸಿದ ಪ್ರಸಾರಾಂಗದ ಶ್ರೀ ಕೆ.ಎಲ್. ರಾಜಶೇಖರ್, ಹಾಗೂ ಅಂದವಾದ ಮುಖಪುಟವನ್ನು ರಚಿಸಿದ ಶ್ರೀ ಕೆ.ಕೆ.ಮಕಾಳಿ, ಇವರಿಗೂ ಅಕ್ಷರ ಜೋಡಣೆ ಮಾಡಿದ ಯಾಜಿ ದಂಪತಿಗಳಿಗೂ ಮತ್ತು ಸುಂದರವಾಗಿ ಮುದ್ರಿಸಿದ ಬೆಂಗಳೂರಿನ ಸತ್ಯಶ್ರೀ ಪ್ರಿಂಟರ್ಸ್‌ನ ಸಿಬ್ಬಂದಿ ವರ್ಗಕ್ಕೂ ನಮ್ಮ ವಂದನೆಗಳು ಸಲ್ಲುತ್ತವೆ.

ರಾಜಾರಾಮ ಹೆಗಡೆ
ಅಶೋಕ ಶೆಟ್ಟರ್

ಮಲೆಕರ್ನಾಟಕದ ಅರಸು ಮನೆತನಗಳು: ಕನ್ನಡ ಪ್ರಜ್ಞೆಯನ್ನು ವಿಶ್ವಪ್ರಜ್ಞೆಯಾಗಿಸುವತ್ತ

ಸಾವಿರಾರು ವರ್ಷಗಳ ಸುದೀರ್ಘ ಮತ್ತು ಉಜ್ವಲ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿರುವ ಕರ್ನಾಟಕದ ಆಧುನಿಕ ಇತಿಹಾಸದಲ್ಲಿ ಕರ್ನಾಟಕದ ಏಕೀಕರಣ ಒಂದು ಐತಿಹಾಸಿಕವೂ ಮತ್ತು ಮಹತ್ವಪೂರ್ಣವೂ ಆದ ವಿಶಿಷ್ಟ ಘಟನೆ. ಹಾಗೆಯೇ ಕನ್ನಡ ವಿಶ್ವವಿದ್ಯಾಲಯದ ಸ್ಥಾಪನೆ ಮತ್ತೊಂದು ಮಹತ್ವದ ಐತಿಹಾಸಿಕ ಘಟನೆ. ಕರ್ನಾಟಕದ ಇತರೆ ವಿಶ್ವವಿದ್ಯಾಲಯಗಳು ಕೇವಲ ಕೆಲವು ಜಿಲ್ಲೆಗಳಿಗೆ ಮಾತ್ರ ಪರಿಮಿತಗೊಂಡಿದ್ದರೆ ಕನ್ನಡ ವಿಶ್ವವಿದ್ಯಾಲಯದ ವ್ಯಾಪ್ತಿ ಅಖಂಡ ಕರ್ನಾಟಕ ಮಾತ್ರವಲ್ಲದೆ ಕನ್ನಡಿಗ ಮತ್ತು ಕನ್ನಡ ಸಂಸ್ಕೃತಿ ನೆಲೆಸಿರುವ ಎಲ್ಲ ದೇಶ ಮತ್ತು ವಿದೇಶಗಳನ್ನೂ ಒಳಗೊಂಡಿದೆ. ಈ ಕಾರಣದಿಂದ ನಮ್ಮ ವಿಶ್ವವಿದ್ಯಾಲಯದ ದಾರಿ ಮತ್ತು ಗುರಿ ಎರಡೂ ವಿಭಿನ್ನವೂ ಮತ್ತು ವೈಶಿಷ್ಟ್ಯಪೂರ್ಣವೂ ಆಗಿವೆ.

ಕನ್ನಡ ವಿಶ್ವವಿದ್ಯಾಲಯ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಜನಜೀವನದ ಸರ್ವಮುಖಗಳ ವಿಶಿಷ್ಟವಾದ ಅಂತರಂಗ ಮತ್ತು ಬಹಿರಂಗ ಸಂಪತ್ತನ್ನು ಕುರಿತು ಅಧ್ಯಯನ ಮಾಡುವ, ಸಂಶೋಧಿಸುವ ಮತ್ತು ಅದರ ಅಧ್ಯಯನದ ಫಲಿತಗಳನ್ನು ಜಗತ್ತಿನಾದ್ಯಂತ ಪ್ರಸಾರ ಮಾಡಿ ಕರ್ನಾಟಕದ ಬಗೆಗಿನ ಅರಿವನ್ನು ಜನಸಮುದಾಯದಲ್ಲಿ ವಿಸ್ತರಿಸುವ ಹಾಗೂ ಅನಂತಮುಖಿಯಾದ ವಿಶ್ವಜ್ಞಾನವನ್ನು ಕನ್ನಡಜ್ಞಾನವನ್ನಾಗಿ ಪರಿವರ್ತಿಸಿ ಅದು ಕನ್ನಡಿಗರೆಲ್ಲರಿಗೆ ದಕ್ಕುವಂತೆ ಮಾಡುವ ಮೂಲಭೂತ ಆಶಯದ ಪ್ರತಿನಿಧಿಯಾಗಿ ಸ್ಥಾಪಿತಗೊಂಡಿದೆ. ಬೋಧನೆಗಿಂತ ಸಂಶೋಧನೆ, ಸೃಷ್ಟಿಗಿಂತ ವಿಶ್ವಂಭರ ದೃಷ್ಟಿ, ಶಿಥಿಲ ವಿವರಣೆಗಿಂತ ಅತುಳ ಸಾಧ್ಯತೆಗಳನ್ನೊಳಗೊಂಡ ಅನನ್ಯ ಅಭಿವ್ಯಕ್ತಿ. ನಾಡಿನ ಕೋಟಿ ಕೋಟಿ ಶ್ರೀಮಾನ್ಯರ ವಿವಿಧ ಪ್ರತಿಭಾಶಕ್ತಿ ಮತ್ತು ಸಾಮರ್ಥ್ಯಗಳ ಸದ್ಬಳಕೆಯ ಮೂಲಕ ಅವರ ಅಂತಃಪ್ರಜ್ಞೆಯನ್ನು ಎಚ್ಚರಿಸುವ, ವಿಕಸಿಸುವ ಶ್ರದ್ಧಾನ್ವಿತ ಕಾಯಕ ಇದರ ದಾರಿಯಾಗಿದೆ.

ಕನ್ನಡ ನಾಡನ್ನು ಕನ್ನಡ ವಿಶ್ವವಿದ್ಯಾಲಯದಲ್ಲಿ ನೋಡು, ಕನ್ನಡ ವಿಶ್ವವಿದ್ಯಾಲಯವನ್ನು ನೋಡಿದಲ್ಲದೆ ಕನ್ನಡ ನಾಡಿನ ಯಾತ್ರೆ ಸಂಪೂರ್ಣವಾಗದು, ಸಾರ್ಥಕವಾಗದು ಎಂಬಂತೆ ರೂಪುಗೊಳ್ಳುತ್ತಿರುವ ಮತ್ತು ರೂಪುಗೊಳ್ಳಬೇಕಾದ ಮಹಾ ಸಂಸ್ಥೆ ಇದು. ಕನ್ನಡಪ್ರಜ್ಞೆ ತನ್ನ ಸತ್ವ ಮತ್ತು ಸತ್ವದೊಡನೆ ವಿಶ್ವಪ್ರಜ್ಞೆಯಾಗಿ ಅರಳಿ ನಳನಳಿಸಬೇಕು; ವಿಶ್ವಪ್ರಜ್ಞೆ ಕನ್ನಡ ದೇಶೀ ಪ್ರಜ್ಞೆಯೊಳಗೆ ಪ್ರವೇಶಿಸಿ, ಪ್ರವಹಿಸಿ, ಸಮನ್ವಯಗೊಂಡು, ಸಂಲಗ್ನಗೊಂಡು, ಸಮರಸಗೊಂಡು ಸಾಕ್ಷಾತ್ಕಾರಗೊಳ್ಳಬೇಕು ಎಂಬುದೇ ಇದರ ಗುರಿ. ಈ ಗುರಿಯ ಮೂಲಕ ಕನ್ನಡ ಕರ್ನಾಟಕತ್ವದ ಉಸಿರಾಗಿ, ವಿಶ್ವಪ್ರಜ್ಞೆಯ ಹಸಿರಾಗಿ, ಕನ್ನಡ ಮಾನವ ವಿಶ್ವಮಾನವನಾಗಿ ಬೆಳೆಯಲು ಸಾಧನವಾಗಬೇಕು. ಕನ್ನಡಿಗರೆಲ್ಲರ ಸಾಮೂಹಿಕ ಶ್ರಮ ಮತ್ತು ಪ್ರತಿಭೆಗಳ ಸಮಷ್ಟಿ ಪ್ರಕ್ರಿಯೆಯಿಂದ ಬೆಳಕಿನ ಈ ಮಹಾಪಥವನ್ನು ಕ್ರಮಿಸುವುದು ನಮ್ಮ ವಿಶ್ವವಿದ್ಯಾಲಯದ ಮಹತ್ತರ ಆಶಯ.

ನಾಗಾಲೋಟದಿಂದ ಕ್ರಮಿಸುತ್ತಿರುವ ಜಗತ್ತಿನ ವ್ಯಾಪಕ ಜ್ಞಾನ, ತಂತ್ರಜ್ಞಾನ ಮತ್ತು ವಿಜ್ಞಾನಗಳ ಶೋಧನೆ ಮತ್ತು ಚಿಂತನೆಗಳನ್ನು ಕನ್ನಡದಲ್ಲಿ ಸತ್ವಪೂರ್ಣವಾಗಿ ದಾಖಲಿಸಿ ಕನ್ನಡ ಓದುಗರ ಜ್ಞಾನವನ್ನು ವಿಸ್ತರಿಸಿ ಅವರಲ್ಲಿ ಪುಸ್ತಕ ಸಂಸ್ಕೃತಿಯನ್ನು ಪ್ರಸರಿಸುವ ವಿಶೇಷ ಹೊಣೆಯನ್ನು ಹೊತ್ತು ನಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗ ಅಸ್ತಿತ್ವಕ್ಕೆ ಬಂದಿದೆ.

ಶ್ರವ್ಯ, ದೃಶ್ಯ ಮತ್ತು ವಾಚನ ಸಾಮಗ್ರಿಗಳ ಸಮರ್ಪಕ ಉತ್ಪಾದನೆ ಮತ್ತು ವಿತರಣಾ ಪ್ರಕ್ರಿಯೆಗಳ ಮೂಲಕ ಇದು ಈ ಗುರಿಯನ್ನು ತಲುಪಲು ಶಕ್ತಿಮೀರಿ ಪ್ರಯತ್ನಿಸುತ್ತಿದೆ. ಈಗಾಗಲೇ ೬೦೦ಕ್ಕೂ ಹೆಚ್ಚು ವೈವಿಧ್ಯಮಯ ಮತ್ತು ವೈಶಿಷ್ಟ್ಯಮಯ ಕೃತಿಗಳ ಮೂಲಕ ಕನ್ನಡ ಗ್ರಂಥಲೋಕದ ಅಂತರಂಗ ಮತ್ತು ಬಹಿರಂಗ ಸೌಂದರ್ಯಗಳನ್ನು ಉಜ್ವಲಿಸಿರುವ ಇದು ತನ್ನ ಮುಂದಿನ ಗುರಿಯ ಕಡೆಗೆ ಆಶಾದಾಯಕವಾಗಿ ಚಲಿಸುತ್ತಿದೆ.

ಕನ್ನಡ ವಿಶ್ವವಿದ್ಯಾಲಯ ಇದುವರಗೆ ಸಂಶೋಧನೆ ಕಣ್ಣು ತೆಗೆಯದ ಮೆದುಳು ಬಹುಮಟ್ಟಿಗೆ ತನ್ನ ಚೌಕಟ್ಟಿನಲ್ಲಿ ಚಿಂತಿಸದ ಕೆಲವು ವಿಶಿಷ್ಟ ವಿಷಯಗಳನ್ನು ಆಯ್ದು, ಆ ಬಗ್ಗೆ ನಾಡಿನ ಹಲವು ಭಾಗಗಳಲ್ಲಿ ವಿಚಾರ ಸಂಕಿರಣಗಳನ್ನು ನಡೆಸುವ ಪದ್ಧತಿಯನ್ನು ಆರಂಭಿಸಿದೆ. ಇಂತಹ ವಿಚಾರ ಸಂಕಿರಣಗಳಲ್ಲಿ ಸಂಬಂಧಿಸಿದ ವಿಷಯತಜ್ಞರು ಭಾಗವಹಿಸಿ ತಮ್ಮ ಹರಿತವಾದ ವಿಚಾರ ಧಾರೆಯಿಂದ, ಸಂಶೋಧನಾಧಾರಿತವಾದ ವಿಷಯ ಮಂಡನೆಯಿಂದ, ಅವುಗಳ ವಿವಿಧ ಮುಖಗಳನ್ನು ಕುರಿತ ಸೂಕ್ಷ್ಮ ಚರ್ಚೆಯಿಂದ ವಿಷಯದ ಹಲವು ಹೊಸ ಮಗ್ಗಲುಗಳನ್ನು ಅನಾವರಣ ಮಾಡುತ್ತಾರೆ, ಹೊಸ ಚರ್ಚೆಗೆ ಗ್ರಾಸ ಒದಗಿಸುತ್ತಾರೆ. ಇಂತಹ ಉಪನ್ಯಾಸಗಳು, ಚರ್ಚೆಗಳು, ಆವಿಯಾಗಿ ಹೋಗಬಾರದೆಂಬ ಉದ್ದೇಶದಿಂದ ಅವುಗಳನ್ನು ಸಂಗ್ರಹಿಸಿ, ಸಂಕಲಿಸಿ, ಸಂಪಾದಿಸಿ ಪ್ರಕಟಿಸುವ ಉದ್ದೇಶವನ್ನು ವಿಶ್ವವಿದ್ಯಾಲಯ ಹೊಂದಿದೆ. ಈ ದಿಶೆಯಲ್ಲಿ ಇದೊಂದು ಮುಖ್ಯ ಪ್ರಯತ್ನ.

ಕರ್ನಾಟಕದ ಸುದೀರ್ಘವಾದ ಮತ್ತು ವೈವಿಧ್ಯಮಯವಾದ ಇತಿಹಾಸದ ಬಗ್ಗೆ ಸಾಕಷ್ಟು ಅಧ್ಯಯನಗಳು, ಸಂಶೋಧನೆಗಳು ನಡೆದಿವೆ, ಪುಸ್ತಕಗಳು ಪ್ರಕಟವಾಗಿವೆ. ಆದರೆ ಧಾಡಸಿ ಇತಿಹಾಸ ಚಿಂತನೆ ಮತ್ತು ಧಾಟು ವಿಚಾರಗಳ ಫಲವಾಗಿ ಎಷ್ಟೋ ಅರಸು ಮನೆತನಗಳು ಚರ್ಚೆಯ ಹಾಗೂ ಅಧ್ಯಯನದ ಕಣ್ಣಿಗೆ ಬೀಳದೆ ಸುಪ್ತವಾಗಿಯೇ ಉಳಿದುಬಿಟ್ಟಿವೆ. ಹೀಗೆ ವಿದ್ವಾಂಸರ ಅವಜ್ಞೆಗೆ ಗುರಿಯಾಗಿ ನಿಜವಾದ ನೆಲೆಯನ್ನು ಮತ್ತು ಪ್ರಚಾರವನ್ನು ಕಾಣದ ಕೆಲವು ಅರಸು ಮನೆತನಗಳ ಬಗ್ಗೆ ಕೂಲಂಕಷವಾಗಿ, ಆಳವಾಗಿ ಸಂಶೋಧನೆಯನ್ನು ಕೈಗೊಂಡು ಅವುಗಳ ಫಲಿತಗಳನ್ನು ಸೂಕ್ಷ್ಮವಾಗಿ ಚಿಂತನೆಗೆ ಮತ್ತು ವಿಶ್ಲೇಷಣೆಗೆ ಒಳಗು ಮಾಡುವುದರ ಮೂಲಕ ಅವುಗಳ ಮುಸುಕನ್ನು ತೆಗೆದು ಬೆಳಕಿಗೆ ಒಡ್ಡಿ ಕರ್ನಾಟಕದ ಇತಿಹಾಸ ಜಗತ್ತಿನಲ್ಲಿ ಅವುಗಳಿಗೆ ನಿರ್ದಿಷ್ಟವಾದ ಒಂದು ಚೌಕಟ್ಟನ್ನು ಮತ್ತು ಸ್ಥಾನವನ್ನು ನಿರ್ಮಿಸಿಕೊಡುವ ಪ್ರಯತ್ನವನ್ನು ವಿಶ್ವವಿದ್ಯಾಲಯ ಮಾಡುತ್ತಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ಮಲೆನಾಡಿನ ಅರಸು ಮನೆತನಗಳ ಬಗ್ಗೆ ಕಳೆದ ವರ್ಷ ಶಿವಮೊಗ್ಗದಲ್ಲಿ ನಮ್ಮ ವಿಶ್ವವಿದ್ಯಾಲಯ ಮತ್ತು ಇತಿಹಾಸ ವೇದಿಕೆಯ ಸಂಯುಕ್ತ ಆಶ್ರಯದಲ್ಲಿ ಎರಡು ದಿನಗಳ ಕಾಲ ನಡೆದ ವಿಚಾರಸಂಕಿರಣದಲ್ಲಿ ಮಂಡಿಸಲಾರದ ಪ್ರಬಂಧಗಳನ್ನು ಈ ಮೂಲಕ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಇತಿಹಾಸ ಸಂಶೋಧನೆಯಲ್ಲಿ ವಿಶಿಷ್ಟವಾದ ಸತ್ಯನಿಷ್ಠೆ, ಅಧ್ಯಯನಶೀಲತೆ, ವಿಶ್ಲೇಷಣಾ ಸಾಮರ್ಥ್ಯಗಳನ್ನು ಪಡೆದಿರುವ ೧೭ ಜನ ವಿದ್ವಾಂಸರು ಬಹುಮಟ್ಟಿಗೆ ಇತಿಹಾಸದ ಪುಟಗಳಲ್ಲಿ ಮಿನುಗದ ೧೫ ಅರಸು ಮನೆತನಗಳನ್ನು ಕುರಿತು ಸಂಗ್ರಹಿಸಿದ ಮಾಹಿತಿ ಮತ್ತು ನಡೆಸಿದ ಚಿಂತನೆ ಈ ಪುಟಗಳಲ್ಲಿ ಬಿಚ್ಚಿಕೊಂಡಿವೆ. ಇವುಗಳಲ್ಲದೇ ರಾಜ್ಯ ಸಂಸ್ಕೃತಿಯ ನಿರ್ಮಾಣ ಮತ್ತು ಪ್ರಾದೇಶಿಕ ಕಿರು ಅರಸು ಮನೆತನಗಳ ಅಧ್ಯಯನದ ಪ್ರಸ್ತುತತೆ ಎಂಬ ಮೊದಲನೇ ಮತ್ತು ಕೊನೆಯ ಪ್ರಬಂಧಗಳು ಇಡೀ ವಿಚಾರಸಂಕಿರಣಕ್ಕೆ ಅಚ್ಚುಕಟ್ಟಾದ ತಾತ್ವಿಕ ಚೌಕಟ್ಟೊಂದನ್ನು ನಿರ್ಮಿಸಿವೆ. ಈ ಎಲ್ಲಾ ಲೇಖನಗಳು ಅಭ್ಯಾಸಪೂರ್ಣವಾಗಿದ್ದು, ಪ್ರಾದೇಶಿಕ ಇತಿಹಾಸದ ಸ್ವರೂಪ ಮತ್ತು ವೈಶಿಷ್ಟ್ಯಗಳನ್ನು ಸೂಕ್ಷ್ಮವಾಗಿ ಬಿಚ್ಚಿಡುವ ಮೂಲಕ ಪ್ರಸಿದ್ಧ ಆಳರಸರ ಚರಿತ್ರೆಯ ಕಣ್ಣು ಕೋರೈಸುವ ಬೆಳಕಿನಲ್ಲಿ ಇತಿಹಾಸಪ್ರಿಯರ ಕಣ್ಮರೆಯಾಗಿರುವ ಕಿರು ಅರಸುಗಳ ವೈಶಿಷ್ಟ್ಯ ಮತ್ತು ಪಾತ್ರವನ್ನು ಓದುಗರ ಮುಂದಿಟ್ಟು ಹೊಸ ಚಿಂತನೆಗೆ ದಾರಿ ಮಾಡಿಕೊಡುತ್ತವೆ ಎಂದು ನಾನು ನಂಬಿದ್ದೇನೆ. ಇಂತಹದೊಂದು ಅಪರೂಪದ ವಿಚಾರ ಸಂಕಿರಣವನ್ನು ನಡೆಸಿದ ಮತ್ತು

ಈ ಸಂಕಿರಣದ ಸಂಪ್ರಬಂಧಗಳನ್ನು ಅಚ್ಚುಕಟ್ಟಾಗಿ ಸಂಪಾದಿಸಿಕೊಟ್ಟ ಡಾ. ರಾಜಾರಾಮ ಹೆಗಡೆ ಹಾಗೂ ಪ್ರೊ. ಅಶೋಕ ಶೆಟ್ಟರ್ ಅವರನ್ನು ನಾನು ಅಭಿನಂದಿಸುತ್ತೇನೆ.

ಡಾ. ಎಚ್.ಜೆ. ಲಕ್ಕಪ್ಪಗೌಡ
ಕುಲಪತಿಗಳು

ಮಲೆಕರ್ನಾಟಕದ ಅರಸು ಮನೆತನಗಳು: ೧. ರಾಜ್ಯ ಸಂಸ್ಕೃತಿಯ ನಿರ್ಮಾಣ: ಸಾಂಸ್ಕೃತಿಕ ಹಾಗೂ ರಾಜಕೀಯ ಆಯಾಮಗಳು (೧)

೧

ಮಧ್ಯಕಾಲೀನ ಮಲೆನಾಡಿನ ಭಾಗಗಳಲ್ಲಿ ಸ್ಥಾನಿಕ ಆಳುವ ಮನೆತನಗಳು ರೂಪುಗೊಂಡ ಹಾಗೇ ಆ ಕಾಲದ ರಾಜ್ಯ ವ್ಯವಸ್ಥೆಗೇ ವಿಶಿಷ್ಟವಾಗಿದ್ದ ಸಾಂಸ್ಕೃತಿಕ ಅಂಶಗಳೂ ಈ ಪ್ರದೇಶದಲ್ಲಿ ಕಾಣಿಸಿಕೊಳ್ಳುತ್ತವೆ. ಅಂದರೆ ರಾಜ್ಯ ಎನ್ನುವುದು ಕೇವಲ ರಾಜಕೀಯ ವ್ಯವಸ್ಥೆಯಾಗಿರದೇ ಒಂದು ಸಾಂಸ್ಕೃತಿಕ ನಿರ್ಮಾಣವೂ ಆಗಿತ್ತು. ರಾಜ್ಯವನ್ನು ಪ್ರತಿನಿಧಿಸುತ್ತಿದ್ದ ಇಂಥ ಸಾಂಸ್ಕೃತಿಕ ಅಂಶಗಳನ್ನು ಪ್ರಾದೇಶಿಕ ಮಟ್ಟದ ಆಳ್ವಿಕೆಯಲ್ಲೂ ಅಂತರ್ಗತ ಮಾಡಿಕೊಳ್ಳುತ್ತ, ಪುನರುತ್ಪಾದಿಸುತ್ತ ಸ್ಥಾನಿಕ ಮನೆತನಗಳು ತಮ್ಮ ಪ್ರಭುತ್ವದ ಕಲ್ಪನೆಯನ್ನು ರೂಪಿಸಿಕೊಂಡವು. ಇಂಥ ಸಾಂಸ್ಕೃತಿಕ ಅಂಶಗಳಲ್ಲಿ ಕೆಲ ಸಾಮಾನ್ಯ ಅಂಶಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧. ವಂಶಾವಳಿಯ ರಚನೆ

೨. ಶಾಸನ ಲೇಖನ

೩. ಪ್ರಾದೇಶಿಕ ಭೂಗೋಲವನ್ನು ಒಂದು ವ್ಯಾಪಕವಾದ ಸಾಂಸ್ಕೃತಿಕ ಭೂಗೋಲದಲ್ಲಿ ಗುರುತಿಸುವುದು.

೪. ಪ್ರಾದೇಶಿಕ ಸಮಾಜವನ್ನು ವರ್ಣ ಮತ್ತು ಜಾತಿ ಸಮಾಜ ಕಲ್ಪನೆಯಲ್ಲಿ ಗ್ರಹಿಸುವುದು.

೫. ಪ್ರಾದೇಶಿಕ ಪೂಜಾ ಸಂಪ್ರದಾಯಗಳ ಹಾಗೂ ದೇವತೆಗಳ ಸಂಸ್ಕೃತೀಕರಣ ಹಾಗೂ ಮತ ಧರ್ಮಗಳ ಸಂಘಟನೆಯೊಳಗೆ ಅವುಗಳನ್ನು ವ್ಯವಸ್ಥೆಗೊಳಿಸುವುದು.

೬. ಒಂದು ಶಾಸ್ತ್ರೀಯ ಕಲೆ ಮತ್ತು ವಾಸ್ತುಶಿಲ್ಪವನ್ನು ಆಯಾ ಪ್ರದೇಶದಲ್ಲಿ ಅಳವಡಿಸುವುದು.

ಈ ಮೇಲಿನ ಸಾಂಸ್ಕೃತಿಕ ಪ್ರಕ್ರಿಯೆ ಈ ಭಾಗದ ಎಲ್ಲಾ ಸ್ಥಾನಿಕ ಆಳ್ವಿಕೆಗಳಲ್ಲೂ ಒಂದೇ ರೀತಿ ಕಂಡುಬರುವುದಿಲ್ಲ. ಆಯಾ ಪ್ರದೇಶದ ಸಾಮಾಜಿಕ ವೈಶಿಷ್ಟ್ಯ ಹಾಗೂ ರಾಜ್ಯ ನಿರ್ಮಾಣದ ಸ್ವರೂಪವನ್ನು ಅನುಸರಿಸಿ ಈ ಮೇಲಿನ ಅಂಶಗಳು ವ್ಯತ್ಯಾಸವಾಗುತ್ತವೆ. ಹಾಗಾಗಿ ಈ ಮೇಲಿನ ಅಂಶಗಳನ್ನು ರಾಜ್ಯ ಸಂಸ್ಕೃತಿಯ 'ಮಾದರಿಗಳು' ಎಂದು ಗುರುತಿಸಿ ಈ ಮಾದರಿಯನ್ನು

ನಿರ್ದಿಷ್ಟವಾಗಿ ಒಂದು ಆಳ್ವಿಕೆಯಲ್ಲಿ ಹೇಗೆ ಪುನರುತ್ಪಾದಿಸಲಾಯಿತು ಹಾಗೂ ಅದನ್ನು ಪ್ರಭಾವಿಸಿದ ಸ್ಥಾನಿಕ ವೈಶಿಷ್ಟ್ಯಗಳೇನು ಎಂದು ಗುರುತಿಸುತ್ತ ಅಧ್ಯಯನ ನಡೆಸಬೇಕಾಗುತ್ತದೆ.

ಈ ಮೇಲಿನ ಸಾಂಸ್ಕೃತಿಕ ಮಾದರಿಗಳು ಈ ಪ್ರದೇಶದ ಪ್ರಾರಂಭಿಕ ಮಧ್ಯಕಾಲದ ಅರಸೊತ್ತಿಗೆಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಕಾಣಿಸಿಕೊಳ್ಳುತ್ತವೆ. ಅಂದರೆ ಈ ಮಾದರಿಗಳನ್ನು ತೀರ ವ್ಯವಸ್ಥಿತವಾಗಿ ತಮ್ಮ ಸಂದರ್ಭದಲ್ಲಿ ರಚಿಸಿಕೊಳ್ಳುವ ಪ್ರಕ್ರಿಯೆಯನ್ನು ಈ ಪ್ರಾರಂಭಿಕ ಮಧ್ಯಕಾಲದ ಸ್ಥಾನಿಕ ಆಳ್ವಿಕೆಗಳಲ್ಲಿ ಕಾಣುತ್ತೇವೆ. ವಿಜಯನಗರ ಪೂರ್ವದ ಸ್ಥಾನಿಕ ಪ್ರಭುತ್ವದ ನಿರ್ಮಾಣಕ್ಕೂ, ವಿಜಯನಗರೋತ್ತರ ಕಾಲದ ನಿರ್ಮಾಣಕ್ಕೂ ಮಧ್ಯೆ ಇರಬಹುದಾದ ರಾಜಕೀಯ ವ್ಯತ್ಯಾಸಗಳೂ ಇಲ್ಲಿ ಪ್ರಧಾನ ಪಾತ್ರ ವಹಿಸಿವೆ. ಹಾಗಾಗಿ ವಿಜಯನಗರೋತ್ತರದ ಪ್ರಭುತ್ವಗಳಲ್ಲಿ ಅಷ್ಟು ವ್ಯವಸ್ಥಿತವಾಗಿ ಈ ಮೇಲಿನ ಸಾಂಸ್ಕೃತಿಕ ಮಾದರಿಗಳ ನಿರ್ಮಾಣ ಕಂಡುಬರುವುದಿಲ್ಲ. ಉದಾಹರಣೆಗೆ ವಂಶಾವಳಿಯ ರಚನೆ, ಶಾಸನ ಲೇಖನ, ಸಾಂಸ್ಕೃತಿಕ ಭೂಗೋಲದ ಕಲ್ಪನೆ ಮುಂತಾದವುಗಳನ್ನು ನಾವು ವಿಜಯನಗರೋತ್ತರ ಪ್ರಭುತ್ವಗಳಲ್ಲಿ ವ್ಯವಸ್ಥಿತವಾಗಿ ಕಾಣುವುದಿಲ್ಲ. ಆದರೆ ಉಳಿದ ಸಾಂಸ್ಕೃತಿಕ ಅಂಶಗಳು ಇಡೀ ಮಧ್ಯಕಾಲದಲ್ಲೂ ರಾಜ್ಯ ಸಂಸ್ಕೃತಿಯ ಭಾಗಗಳಾಗಿ ಇದ್ದವು.

೧. ವಂಶಾವಳಿಯ ರಚನೆ

ಈ ಸ್ಥಾನಿಕ ವಂಶಗಳ ಮೊದಲಿನ ರಾಜರ ಹೆಸರುಗಳು ಅಚ್ಚ ಪ್ರಾದೇಶಿಕ ಹಿನ್ನೆಲೆಯವಾಗಿವೆ. ಕೆಲವೊಮ್ಮೆ ಕೊನೆಯವರೆಗೂ ಕೆಲ ಹೆಸರುಗಳು ಮುಂದುವರೆದುಕೊಂಡು ಬರುತ್ತವೆ. ಮಾಟೂರು ವಂಶದವರು ತಮ್ಮನ್ನು ಬ್ರಹ್ಮಕ್ಷತ್ರಿಯರೆಂದು ಗುರುತಿಸಿಕೊಂಡರೂ ದೋಶಿ, ಮಾಚಿ, ಅಲಯ್ಯ ಮುಂತಾದ ಹೆಸರುಗಳ ಜೊತೆಗೇ ಜಯಸಿಂಹ, ಸತ್ಯಾಶ್ರಯ ಮುಂತಾದವುಗಳ ಪ್ರಯೋಗವೂ ಕಂಡುಬರುತ್ತದೆ. ಅದರಂತೇ ಆಸಂದಿ ಅರಸರ ವೈಜರಸ, ನಾಕ, ಬರ್ಮ ಮುಂತಾದ ಹೆಸರುಗಳು, ಹಾರುವ ಬೆಲುಹೂರು ಕದಂಬರ ಜೂಜ, ದುದ್ದ ಎಂಬ ಹೆಸರುಗಳು, ಉದ್ರಿಯ ಅರಸರ ಎಕ್ಕಲ ಎಂಬ ಹೆಸರುಗಳ ಪ್ರಾಧಾನ್ಯತೆ ಮರೆಯಾಗುವುದಿಲ್ಲ. ಇದರ ಜೊತೆಗೇ ಈ ವಂಶಗಳು ತಮ್ಮ ಮೂಲವನ್ನು ಕರ್ನಾಟಕದ ಈ ಭಾಗದ ಸುಪ್ರಸಿದ್ಧ ಮನೆತನಗಳೊಂದಿಗೆ ಗುರುತಿಸಿಕೊಳ್ಳುತ್ತವೆ. ಉದ್ರಿಯ ಅರಸರು, ಆಸಂದಿಯ ಅರಸರು ಗಂಗರ ಮೂಲವನ್ನು ಗುರುತಿಸಿದರೆ, ಹಾರುವ ಬೆಲುಹೂರು, ಬಂದಳಿಕೆ ಮುಂತಾದ ಮನೆತನಗಳು ಕದಂಬರವರೆಗೆ ತಮ್ಮ ಮೂಲವನ್ನು ಗುರುತಿಸುತ್ತವೆ. ಈ ಮೂಲಕ ಸೂರ್ಯ, ಚಂದ್ರವಂಶಗಳಿಗೆ ತಮ್ಮ ಮೂಲವನ್ನು ಸೇರಿಸುತ್ತಾರೆ. ಮಲೆನಾಡಿನ ಮೂಲೆಯಲ್ಲಿ ತಲೆಯೆತ್ತಿದ ಸಾಂತರರು ತಮ್ಮ ವಂಶಾವಳಿಯನ್ನು ಜೈನ ಪುರಾಣ ಪುರುಷ ಜಿನಸೇನನಿಂದ ಪ್ರಾರಂಭಿಸುತ್ತಾರೆ. ಆದರೆ ಈ 'ಸಾಂತರ' ಎಂಬ ಶಬ್ದ ಹಾಗೂ ವೀರ, ಬ್ರಹ್ಮ ಮುಂತಾದ ಹೆಸರುಗಳ ಕನ್ನಡ ರೂಪಗಳಾದ ಬೀರ, ಬೊಮ್ಮ ಮುಂತಾದವು ಈ ಮನೆತನದ ಪ್ರಾದೇಶಿಕ ರೂಪವನ್ನು ಪ್ರಕಟಪಡಿಸುತ್ತವೆ. ಹೊಸಗುಂದದ ಅರಸರು ತಮ್ಮದೇ ಆದ ಬೀರ, ಬೊಮ್ಮ ಎಂಬ ಹೆಸರುಗಳನ್ನು ತಮ್ಮ ಆಳ್ವಿಕೆಯ ಅಂತ್ಯಭಾಗದಲ್ಲಿ ಒಂದು ವಂಶಾವಳಿಯಲ್ಲಿ ಸಂಸ್ಕೃತೀಕರಿಸಿ ಇಡುವ ಪ್ರಯತ್ನವನ್ನು ಮಾಡಿದರೂ ಅದು ಫಲಿಸಲಿಲ್ಲ.

ಈ ರಾಜರು ತಾವು 'ಕ್ಷತ್ರಿಯರು' ಎಂದು ಗುರುತಿಸಿಕೊಳ್ಳುವುದನ್ನು ಕೆಲ ಸಂದರ್ಭಗಳಲ್ಲಿ ಗಮನಿಸಬಹುದು. ಸುಪ್ರಸಿದ್ಧ ಆಳುವ ವಂಶಗಳ ಜೊತೆ ವಂಶಾವಳಿಯನ್ನು ಜೋಡಿಸಿಕೊಳ್ಳಲಿಕ್ಕೆ ಆಗದ ಮಾಟೂರು ವಂಶದವರು ತಮ್ಮನ್ನು 'ಬ್ರಹ್ಮಕ್ಷತ್ರಿಯರು' ಹಾಗೂ ಅಹಿಚ್ಛತ್ರದಿಂದ ಬಂದವರು ಎಂದು ಕರೆದುಕೊಳ್ಳುತ್ತಾರೆ. ಅದೇ ರೀತಿ ಕೊಂಗಾಳ್ವರು ಕೂಡ 'ಕ್ಷತ್ರಿಯ ಶಿಖಾಮಣಿ'ಗಳೆಂಬ ಬಿರುದು ಧರಿಸುತ್ತಾರೆ.

ವಿಜಯನಗರೋತ್ತರ ಆಳ್ವಿಕೆಗಳಲ್ಲಿ ಗುತ್ತಿ, ಅರಗ ಮುಂತಾದವು ಆಡಳಿತ ಕೇಂದ್ರಗಳಾಗಿದ್ದು ಅವು ಅರಸು ಮನೆತನದ ಆಳ್ವಿಕೆಗಳಾಗಿರಲಿಲ್ಲ. ಆದರೆ ತರೀಕೆರೆ ನಾಯಕರು ಆಳುವ ವಂಶವಾಗಿದ್ದು 'ಅಮರ ಮಾಗಣಿ' ವ್ಯವಸ್ಥೆಯಿಂದ ಗುರುತಿಸಲ್ಪಟ್ಟವರಾಗಿದ್ದರು. ಆ ಕಾಲದ ಅರಸು ವಂಶಗಳಿಗೆ ಸಂಸ್ಕೃತ ಪುರಾಣ ಮೂಲಗಳಿಗಿಂತ, ಕೆಲ ಪ್ರಾದೇಶಿಕ ಜಾನಪದ ಮಾದರಿಗಳು ಪ್ರಧಾನವಾಗುತ್ತವೆ. ವಿಜಯನಗರ ರಾಜರ ಮಾನ್ಯತೆ ಇವರ ವಂಶ ಕಥನದಲ್ಲಿ ತೀರ ನಿರ್ಣಾಯಕವಾಗಿದ್ದು, ಈ ಕಾಲದ ನಾಯಕ ವಂಶಾವಳಿಗಳಲ್ಲಿ ಈ ಮೇಲಿನ ಅಂಶಗಳು ಪ್ರಾಧಾನ್ಯತೆ ವಹಿಸುವುದನ್ನು ಸಾಮಾನ್ಯವಾಗಿ ಕಾಣಬಹುದು.

೨. ಶಾಸನ ಲೇಖನ

ಶಾಸನಗಳು ದಾನ, ವೀರತ್ವ ಮುಂತಾದ ವಿಷಯಗಳ ದಾಖಲೆಗಳಾದರೂ, ಅವುಗಳು ಒಂದು ಪ್ರಭುತ್ವ ಕಲ್ಪನೆಯನ್ನು ನಿರ್ಮಿಸಿಕೊಡುವಲ್ಲಿ ಮಹತ್ವದ ಪಾತ್ರವಹಿಸಿದ್ದವು. ಒಂದು ವಿಶ್ವಾತ್ಮಕವಾದ ಪ್ರಭುತ್ವ ಕಲ್ಪನೆಯನ್ನು ಪ್ರಾದೇಶಿಕ ಸಂದರ್ಭಕ್ಕೆ ಅವು ನೀಡುತ್ತವೆ. ಅವುಗಳಲ್ಲಿ ಚಕ್ರವರ್ತಿಯಿಂದ, ಈ ಸ್ಥಾನಿಕ ಆಳರಸರ ಮನೆತನದವರೆಗಿನ ಶ್ರೇಣೀಕರಣ, ಬಿರುದು ಬಾವಲಿಗಳು, ಲಾಂಛನಗಳು, ಆಳುವ ಸೀಮೆ, ರಾಜರ ಶ್ರೇಷ್ಟ ಗುಣಗಳು ಮುಂತಾದ ವಿವರಗಳು ಮಾರ್ಗ ಸಂಪ್ರದಾಯದ ಕಲ್ಪನೆಯ ಪ್ರಕಾರ ಇರುತ್ತವೆ. ಈ ರೀತಿ ಈ ಶಾಸನಗಳು ಆಯಾ ರಾಜ ಮನೆತನಗಳನ್ನು ಪ್ರಭುತ್ವದ ಸಂದರ್ಭದಲ್ಲಿ ಇಟ್ಟು ಅವುಗಳ ಮಾನ್ಯತೆಯನ್ನು ಸಾರುತ್ತವೆ. ಈ ಶಾಸನಗಳನ್ನು ಆ ಕಾಲದ ಮಾರ್ಗ ಕಾವ್ಯದಲ್ಲಿ ಪರಿಣತರಾದ ಕವಿಗಳು, ಪಂಡಿತರು ರಚಿಸುತ್ತಿದ್ದರು.

೩. ಸಾಂಸ್ಕೃತಿಕ ಭೂಗೋಲದ ರಚನೆ

ಮಧ್ಯಕಾಲೀನ ಭಾರತದಲ್ಲಿ ವಿವಿಧ ಪುರಾಣಗಳು ಹಾಗೂ ಕಾವ್ಯಗಳು ಪುರಾಣ ಪುರುಷರನ್ನೂ, ಘಟನೆಗಳನ್ನೂ ಭೂಗೋಲದ ಜೊತೆಗೆ ಹೆಣೆದು ಒಂದು ಸಾಂಸ್ಕೃತಿಕ ಭೂಗೋಲವನ್ನು ರಚಿಸಿದವು. ಅದೇ ರೀತಿ ಈ ಪ್ರಾದೇಶಿಕ ಆಳುವ ಮನೆತನಗಳೂ ತಾವು ಆಳುವ ಭಾಗಗಳನ್ನು ಪುರಾಣ ಕಲ್ಪನೆಗಳ ಜೊತೆಗೆ ಹೊಂದಿಸಿಕೊಂಡರು. ಸಾಂತರರು ಹೊಂಬುಚವನ್ನು 'ಉತ್ತರ ಮಧುರೆ' ಎಂದು ಗುರುತಿಸಿದ್ದರೆ, ಹಾರುವ ಬೆಲುಹೂರ ಕದಂಬರು 'ಬನವಾಸಿ' ಎಂಬ ಸ್ಥಳ ನಾಮವನ್ನು ನಮ್ಮ ಸ್ಥಳಕ್ಕೆ ಹೊಂದಿಸಿಕೊಂಡರು. ಇನ್ನೂ ಹಲವು ಸಂದರ್ಭಗಳಲ್ಲಿ ಸ್ಥಾನಿಕ ಸ್ಥಳನಾಮವನ್ನು ಸಂಸ್ಕೃತೀಕರಿಸಿ ಬಾಂಧವಪುರ (ಬಂದಳಿಕೆ), ಉದ್ದರೆ (ಉದ್ರಿ) ಪೊಂಬುರ್ಚ (ಹೊಂಬುಚ) ಬೆಳಗುವರ್ತಿ (ಬೆಳಗುತ್ತಿ) ಮುಂತಾಗಿ ಪರಿವರ್ತಿಸಿದ್ದನ್ನು ನೋಡಬಹುದು. ಉದ್ರಿ, ಬಂದಳಿಕೆ ಮುಂತಾದ ಮನೆತನಗಳ ಶಾಸನಗಳಲ್ಲಿ ಆಯಾ ಪ್ರದೇಶಗಳನ್ನು ಕುಂತಳ ಹಾಗೂ ಬನವಾಸಿ ದೇಶಗಳಲ್ಲಿ ಗುರುತಿಸಿ, ತೀರ ಕಾವ್ಯಮಯವಾದ ಉತ್ಪ್ರೇಕ್ಷೆಯಿಂದ ಭೌಗೋಲಿಕ ವರ್ಣನೆಯನ್ನು ನೀಡಿರುವುದನ್ನು ಕಾಣಬಹುದು.

೪. ವರ್ಣ ಸಮಾಜದ ಕಲ್ಪನೆ

ಪ್ರಾರಂಭಿಕ ಮಧ್ಯಕಾಲದ ಶಾಸನಗಳಲ್ಲಿ ಈ ಪ್ರದೇಶದ ವಿವಿಧ ನಗರ ಮತ್ತು ಕೃಷಿ ಸಮಾಜಗಳ ಜಾತಿ ವ್ಯವಸ್ಥೆಯ ರಚನೆಯ ಕುರಿತು ಅಷ್ಟಾಗಿ ತಿಳಿದು ಬರುವುದಿಲ್ಲ. ಆದರೆ ಈ ಕಾಲದಲ್ಲಿ ವ್ಯಾಪಕವಾದ ಅಗ್ರಹಾರ ದಾನಗಳು ಕಂಡುಬರುತ್ತವೆ. ಈ ದಾನಗಳನ್ನು ಸ್ಥಾನಿಕ ಅರಸು ಮನೆತನಗಳು ನೀಡಿದ ಉದಾಹರಣೆಗಳಿವೆ. ಬಹುಶಃ ಈ ಸ್ಥಾನಿಕ ಮನೆತನಗಳ ಉಗಮಕ್ಕೂ ಪೂರ್ವಭಾವಿಯಾಗಿ ಈ ಪ್ರದೇಶದಲ್ಲಿ ಬ್ರಾಹ್ಮಣರನ್ನು ನೆಲೆಗೊಳಿಸುವ ಪ್ರಕ್ರಿಯೆಯ ಶಾತವಾಹನ ಕಾಲದಿಂದಲೂ ನಡೆದುಬಂದಿದೆ. ೧೦-೧೧ನೇ ಶತಮಾನದ ನಂತರ ಈ ಪ್ರದೇಶದಲ್ಲಿ ಮೂರ್ತಿಪೂಜೆಯನ್ನಾಧರಿಸಿದ ಆಗಮಿಕ ಬ್ರಾಹ್ಮಣ ಸಂಸ್ಕೃತಿಯ ಪೋಷಣೆ ವ್ಯಾಪಕವಾಗಿ ನಡೆಯಿತು. ಬಂದಳಿಕೆ, ಉದ್ರಿ, ಹೆಚ್ಚೆ, ಸಾಂತರ, ಹಾರುವ ಬೆಲುಹೂರು

ಕದಂಬರು ಮುಂತಾದ ಅರಸು ಮನೆತನಗಳು ಅಗ್ರಹಾರಗಳ ದಾನ ಹಾಗೂ ಪೋಷಣೆಯನ್ನು ನಡೆಸಿಕೊಂಡು ಬಂದವು.

ಈ ಕಾಲದಲ್ಲಿ ಬ್ರಾಹ್ಮಣ ವರ್ಣದ ನಿರ್ಮಾಣ ಅಗ್ರಹಾರಗಳ ಸೀಮೆಯನ್ನು ದಾಟಿ ವ್ಯಾಪಿಸಿತು. ಉದಾಹರಣೆಗೆ ಈ ಕಾಲದ ದೇವಾಲಯ ಸಂಸ್ಕೃತಿಯಲ್ಲಿ ಈ ಬ್ರಾಹ್ಮಣಿಕೆ ಬೇರೂರಿತು. ಹಾಗಾಗಿ ಮೂಲತಃ ಕಾಳಾಮುಖ ಶೈವರಿಂದ ಪೂಜೆಗೊಳಪಟ್ಟ ಶೈವ ದೇವಾಲಯಗಳು ಬ್ರಾಹ್ಮಣ ಆಗಮಿಕ ಪೂಜೆ ಹಾಗೂ ಶಿಕ್ಷಣವನ್ನು ಪೋಷಿಸಿದವು. ಈ ಕಾಲದ ಜೈನರಲ್ಲೂ ಬ್ರಾಹ್ಮಣ ವರ್ಣ ಬೆಳೆದು ಬಂದಿತು. ಕುಪ್ಪಟೂರಿನಲ್ಲಿ 'ಬ್ರಹ್ಮ ಜಿನಾಲಯ' ಅಸ್ತಿತ್ವದಲ್ಲಿ ಬಂದಿತು ಹಾಗೂ ಬಂದಳಿಕೆಯ ಜೈನ ಶಾಸನಗಳಲ್ಲಿ 'ಚಾತುರ್ವರ್ಣ ಶ್ರಮಣ ಸಂಘ'ಗಳ ಉಲ್ಲೇಖ ಬರುತ್ತದೆ. ಹಾಗಾಗಿ ಒಂದು ಹೊಸ ರೀತಿಯ 'ಬ್ರಾಹ್ಮಣ' ವರ್ಣ ಇಲ್ಲಿ ಆಕಾರ ತಳೆದ ಸೂಚನೆಗಳು ಶಾಸನಗಳಲ್ಲಿ ವ್ಯಕ್ತವಾಗುತ್ತವೆ.

ಅದೇ ರೀತಿ ಈ ಸ್ಥಾನಿಕ ಆಳುವ ಮನೆತನಗಳು ತಮ್ಮ ವಂಶಾವಳಿಯನ್ನು ಕಟ್ಟಿಕೊಳ್ಳುತ್ತ ತಮ್ಮನ್ನು ಕ್ಷತ್ರಿಯರೆಂದು ಗುರುತಿಸಿಕೊಳ್ಳುವುದನ್ನೂ ಮಾಟೂರು, ಕೊಂಗಾಳ್ವ ಮುಂತಾದ ಅರಸರಿಗೆ ಸಂಬಂಧಿಸಿದಂತೆ ಕಾಣಬಹುದು. ಮಾಟೂರು ವಂಶದ ಅರಸರು 'ಬ್ರಹ್ಮಕ್ಷತ್ರಿಯ'ರೆಂದು ಕರೆದುಕೊಳ್ಳುವುದರ ಮೂಲಕ ತಾವು ಮೂಲತಃ ಬ್ರಾಹ್ಮಣರಾಗಿದ್ದು 'ಕ್ಷತ್ರಿಯ' ವೃತ್ತಿಯನ್ನು ಆಧರಿಸಿದ ವಿಷಯವನ್ನು ಸಾರಿಕೊಳ್ಳುತ್ತಾರೆ.

ಈ ಕಾಲದ ವ್ಯಾಪಾರವನ್ನು ಆಧರಿಸಿದ ವಣಿಕ ಸಮಾಜದವರೂ 'ವೈಶ್ಯ' ಎಂಬ ಚೌಕಟ್ಟಿನೊಳಗೆ ಕೆಲವೊಮ್ಮೆ ಗುರುತಿಸಿಕೊಳ್ಳುತ್ತಾರೆ. ಈ ಕುರಿತು ಆಳವಾದ ಅಧ್ಯಯನ ನಡೆದಾಗ ಇನ್ನೂ ಸ್ಪಷ್ಟ ಗ್ರಹಿಕೆ ಸಾಧ್ಯವಾಗಬಹುದಾದರೂ ದೇವಾಲಯದ 'ಆಗಮಿಕ ಬ್ರಾಹ್ಮಣ' ಸಂಸ್ಕೃತಿಯ ಜೊತೆಗೇ ವರ್ಣಕಲ್ಪನೆ ರಾಜ್ಯ ಸಂಸ್ಕೃತಿಯ ಒಂದು ಲಕ್ಷಣವಾಗಿ ಬೆಳೆದು ಬಂದಿರುವುದರಲ್ಲಿ ಸಂಶಯವಿಲ್ಲ.

ಆದರೆ ವರ್ಣಕಲ್ಪನೆಯನ್ನು ತೀರ ಸರಳವಾಗಿ ನಾವು ಈ ಪ್ರಾದೇಶಿಕ ಸಮಾಜಗಳಿಗೆ ಹೊಂದಿಸುವಂತೆಯೂ ಇಲ್ಲ. ಉದಾಹರಣೆಗೆ ಈ ಕಾಲದಲ್ಲಿ ನಿರ್ಮಾಣವಾದ ವಿಭಿನ್ನ ಜಾತಿಗಳೆಲ್ಲವನ್ನೂ ಕಡ್ಡಾಯವಾಗಿ ನಾಲ್ಕು ವರ್ಣಗಳ ವ್ಯವಸ್ಥೆಯಲ್ಲಿ ಗುರುತಿಸಲಾಗಿತ್ತೆ ಎಂಬುದು ಸಂಶಯಾಸ್ಪದ. ಜೊತೆಗೇ ಆಳ್ವಿಕೆಯ ಮಾನ್ಯತೆಗೆ 'ವರ್ಣ ಕಲ್ಪನೆ' ಎಷ್ಟು ಅನಿವಾರ್ಯವಾಗಿತ್ತು ಎಂಬುದೂ ತಿಳಿದು ಬರುವುದಿಲ್ಲ. ಹೊಸಗುಂದದ ಅರಸರು ಅಗ್ರಹಾರಗಳ ದಾನಗಳನ್ನು ಮಾಡಲಿಲ್ಲ ಮಾತ್ರವಲ್ಲ, ಒಂದು ಅಗ್ರಹಾರದ ಮೇಲೆ ದಾಳಿ ನಡೆಸಿದ್ದ ಉಲ್ಲೇಖವೂ ಇದೆ. ಅದೇ ರೀತಿ ಈ ಕಾಲದ ಸ್ಥಾನಿಕ ಅರಸರು ಅಗ್ರಹಾರಗಳ ಮೇಲೆ ದಾಳಿ ನಡೆಸಿದ ಇನ್ನೂ ಕೆಲ ಉದಾಹರಣೆಗಳೂ ಇವೆ.

ಈ ಕಾಲದಲ್ಲಿ ಪ್ರಾಬಲ್ಯ ಹಾಗೂ ಪ್ರತಿಷ್ಠೆಯನ್ನು ಗಳಿಸುತ್ತಿದ್ದ ಅನೇಕ ಪ್ರಾದೇಶಿಕ ಜಾತಿಗಳು ಸಂಸ್ಕೃತದ ಪುರಾಣ ಹಾಗೂ ಧರ್ಮಶಾಸ್ತ್ರಗಳ ಸುಪ್ರಸಿದ್ಧ ಜಾತಿಗಳ ಜೊತೆ ತಮ್ಮನ್ನು ಗುರುತಿಸಿಕೊಳ್ಳುವ ಪ್ರಕ್ರಿಯೆ ಶಾಸನಗಳಲ್ಲಿ ಸ್ಪಷ್ಟವಾಗೇ ಕಾಣಿಸುತ್ತದೆ. ಉದಾಹರಣೆಗೆ ಇಲ್ಲಿನ ಭಿಲ್ಲರು ತಾವು 'ಕಿರಾತಾನ್ವಯರು', 'ದ್ರೋಣನ ಶಿಷ್ಯರು' (ಏಕಲವ್ಯನ ಕುಲದವರು) ಎಂದು ಸಾರಿಕೊಳ್ಳುತ್ತಾರೆ. ಅದೇ ರೀತಿ ಸಂತೆಬೆನ್ನೂರಿನ ನಾಯಕರು 'ವಾಲ್ಮೀಕಿ ವರ್ಣಾಶ್ರಮ ಭಾಸ್ಕರ' ಎಂದು ತಮ್ಮ 'ಬೇಡ' ಕುಲವನ್ನು 'ವಾಲ್ಮೀಕಿ ವರ್ಣ'ಕ್ಕೆ ಗುರುತಿಸಿಕೊಂಡಿದ್ದರು. ಈ ಉದಾಹರಣೆಗಳು ಸೂಚಿಸುವಂತೆ ಪ್ರಾದೇಶಿಕ ಜಾತಿಯೊಂದು ಈ ಪೌರಾಣಿಕ ವರ್ಣ/ಜಾತಿಗಳ ಜೊತೆ ಗುರುತಿಸಿಕೊಳ್ಳುವುದನ್ನು ತಮ್ಮ ಹೆಗ್ಗಳಿಕೆಯನ್ನಾಗಿ ಭಾವಿಸಿದ್ದವು. ಹಾಗೂ ತಮ್ಮ ಶೂದ್ರತ್ವವನ್ನು ಮೀರಿ ಸುಪ್ರಸಿದ್ಧರಾದ ಪೌರಾಣಿಕ ವ್ಯಕ್ತಿಗಳನ್ನು ಇವರು ಆಯ್ಕೆ ಮಾಡಿಕೊಂಡದ್ದೂ ಗಮನಾರ್ಹ.

೫. ಪೂಜಾ ಸಂಪ್ರದಾಯಗಳ ಸಂಸ್ಕೃತೀಕರಣ ಹಾಗೂ ಮತ ಧರ್ಮಗಳ ಪೋಷಣೆ

ಈಗಾಗಲೇ ಉಲ್ಲೇಖಿಸಿದಂತೆ ಮಧ್ಯಕಾಲದಲ್ಲಿ ಪೂಜಾ ಸಂಪ್ರದಾಯಗಳು ಹಾಗೂ ಅವುಗಳನ್ನು ಅಳವಡಿಸಿಕೊಂಡ ವಿಭಿನ್ನ ಮತಪಂಥಗಳು ರಾಜ್ಯ ಸಂಸ್ಕೃತಿಯಲ್ಲಿ ತೀರ ನಿರ್ಣಾಯಕ ಪಾತ್ರವನ್ನು ವಹಿಸಿದವು. ಪ್ರಾರಂಭಿಕ ಮಧ್ಯಕಾಲದಲ್ಲಿ ಶೈವ ಸಂಪ್ರದಾಯ ಹಾಗೂ ಜೈನ ಮತಗಳು ಪ್ರಧಾನವಾಗಿದ್ದವು. ಕೊಂಗಾಳ್ವರು, ಹಾಗೂ ಸಾಂತರರು ಜೈನ ಮತಕ್ಕೇ ಹೆಚ್ಚಿನ ಪೋಷಣೆ ನೀಡಿದ್ದರೂ ಬಂದಳಿಕೆ, ಉದ್ರಿ, ಹೆಚ್ಚೆ ಮುಂತಾದ ಅರಸರು ಶೈವ ಕಾಳಾಮುಖ ಸಂಪ್ರದಾಯದ ದೇವಾಲಯಗಳಿಗೆ ಆಶ್ರಯ ನೀಡಿದರು. ಈ ಅರಸರಲ್ಲದೇ ಇದಕ್ಕೂ ಹೊರತಾಗಿ ಆಳುವ ವರ್ಗದವರು ಹಾಗೂ ಪ್ರತಿಷ್ಠಿತರು ತಮ್ಮ ಸಂಸ್ಕೃತಿಯ ಒಂದು ಅಂಗವಾಗಿ ಇಂಥ ಆಶ್ರಯಗಳನ್ನು ನೀಡಿದರು. ಉದ್ರಿಯ ಅರಸು ಮನೆತನದ ಸ್ತ್ರೀಯರು, ಬಂದಳಿಕೆ ಅರಸರ ಸಾಮಂತ ವಂಶದವರು ಜೈನ ಮತವನ್ನು ಪೋಷಿಸಿದ್ದರು. ಹೀಗೆ ಶೈವ-ಶೈವ ದೇವಾಲಯಗಳ ಪೋಷಣೆಯನ್ನು ಸಾಮಾನ್ಯವಾಗಿ ಈ ಕಾಲದ ಆಳುವ ವರ್ಗದವರು ಮಾಡಿದ್ದು ಕಂಡುಬರುತ್ತದೆ.

ಈ ಎರಡೂ ಮತಗಳೂ ಭಕ್ತಿ ಮತ್ತು ಪೂಜೆಯ ಸಂಪ್ರದಾಯಗಳಾಗಿಯೇ ಮಹತ್ವ ಗಳಿಸಿದ್ದವು. ಜೈನರು ಪೂಜಾ ಸಂಸ್ಕೃತಿಯಲ್ಲಿ ಶ್ರದ್ಧೆ ಹೊಂದಿದ ಜನರನ್ನು ತಮ್ಮ ಯಕ್ಷ – ಯಕ್ಷಿಣಿ ಕಲ್ಪನೆಯಿಂದ ಒಳಗೊಂಡರು. ಜೊತೆಗೇ ಈ ಕಾಲದ ಜೈನ ಮುನಿಗಳು ಮಂತ್ರ, ತಂತ್ರ, ಯಂತ್ರ ಹಾಗೂ ಬೇರು-ನಾರುಗಳ ಮೂಲಕ ರೋಗಗಳಿಗೆ, ಮನೋವಿಕಾರಗಳಿಗೆ ಚಿಕಿತ್ಸೆ ನಡೆಸಿ ಭೂತ-ಪ್ರೇತ ಮುಂತಾದ ಶಕ್ತಿಗಳನ್ನು ಉಚ್ಚಾಟಿಸುವವರಾಗಿ ಜನಸಾಮಾನ್ಯರಲ್ಲಿ ಮಹತ್ವಗಳಿಸಿದ್ದುದು ಶಾಸನಗಳಿಂದ ತಿಳಿದು ಬರುತ್ತದೆ. ಪ್ರಾದೇಶಿಕ ಮಾತೃದೇವತಾರಾಧನೆಯನ್ನು ಜೈನರು 'ಯಕ್ಷಿಣಿ' ಪೂಜೆಯಿಂದ ಒಳಗೊಂಡಿದ್ದು ಬಹುಶಃ ನಿರ್ಣಾಯಕವಾಯಿತು. ಹೊಂಬುಚದ ಹಾಗೂ ಅಂಗಡಿಯ ಜೈನ ನೆಲೆಗಳು 'ಪದ್ಮಾವತಿ' ದೇವಿಯಿಂದಾಗಿ ಮಹತ್ವ ಗಳಿಸಿದ್ದವು.

ಈ ಕಾಲದ ಶೈವ ಸಂಪ್ರದಾಯವು ಈ ಕಾಲದ ರಾಜ್ಯದಲ್ಲಿ ಹಾಗೂ ೧೧-೧೨ನೇ ಶತಮಾನದ ನಗರೀಕರಣ ಪ್ರಕ್ರಿಯೆಯಲ್ಲಿ ಪ್ರತಿಷ್ಠಿತ ವರ್ಗವಾಗಿ ತಲೆ ಎತ್ತುತ್ತಿದ್ದ ಅನೇಕ ಪ್ರಾದೇಶಿಕ ಜಾತಿಗಳಿಗೆ ಒಂದು ಧಾರ್ಮಿಕ ಪ್ರತಿಷ್ಠೆಯನ್ನೂ ಒದಗಿಸಿತು. ಬೇರೆ ಬೇರೆ ವೃತ್ತಿ ಸಮೂಹಗಳು, ವ್ಯಕ್ತಿಗಳು ತಮ್ಮ ದೇವತೆಗಳನ್ನು ಶಿವನೊಂದಿಗೆ ಗುರುತಿಸಿ, ತಮ್ಮ ಜಾತಿಯ ಅಥವಾ ವ್ಯಕ್ತಿಗತ ಹೆಸರುಗಳನ್ನು ಶಿವನಿಗೆ ನೀಡಿ ದೇವಾಲಯಗಳನ್ನು ಕಟ್ಟಿಸುವ ಪ್ರಕ್ರಿಯೆಯನ್ನು ನಾವು ಸಾಮಾನ್ಯವಾಗಿ ನೋಡುತ್ತೇವೆ. ಈ ಪ್ರಕ್ರಿಯೆಯಲ್ಲಿ ಸ್ಥಾನಿಕ ಸಮಾಜದ ದೇವತೆಗಳು ಸಂಸ್ಕೃತೀಕೃತವಾಗಿ, ಶಿವರೂಪವನ್ನು ಧರಿಸಿ, ಆಗಮಶಾಸ್ತ್ರೀಯ ಸಂಸ್ಕೃತಿಯ ತೆಕ್ಕೆಯೊಳಗೆ ಬಂದವು. ಹೀಗೆ ನಾವು ಬಿಲ್ಲೇಶ್ವರ, ಕಮ್ಮಟೇಶ್ವರ, ತೆಲ್ಲಿಗೇಶ್ವರ, ನಖರೇಶ್ವರ, ಗವರೇಶ್ವರ, ಬಂಟೇಶ್ವರ ಮುಂತಾದ ವೃತ್ತಿ ಹಿನ್ನೆಲೆಯ ದೇವತೆಗಳನ್ನು ಕಾಣುತ್ತೇವೆ. ಬೊಜ್ಜ, ಬೊಮ್ಮ, ಆಲ, ಗುಂಡ, ಮಂಜ, ಕೇತ, ಮಾಚ ಮುಂತಾದ ಪ್ರಾದೇಶಿಕ ಕನ್ನಡ ಹೆಸರುಗಳ ಈಶ್ವರ ದೇವತೆಗಳೂ ಪ್ರಸಿದ್ಧಿಗೆ ಬಂದವು. ಇಂಥ ದೇವಾಲಯಗಳು ಕಾಳಾಮುಖ ಶೈವ ಪಂಥದ ಮಠದ ಸಂಘಟನೆಯೊಳಗಡೆ ತರಲ್ಪಟ್ಟವು. ಒಂದು ವ್ಯಾಪಕವಾದ ಶೈವ ಸಿದ್ಧಾಂತ ಮತ್ತು ಶೈವಾಗಮ ಸಂಪ್ರದಾಯವು ಕಾಳಾಮುಖರು ಹಾಗೂ ಶೈವ ಬ್ರಾಹ್ಮಣರ ಮೂಲಕ ಈ ಪ್ರದೇಶದಲ್ಲಿಯೂ ರೂಢವಾಯಿತು.

ದೇವಾಲಯಗಳು ಈ ಕಾಲದ ವಸತಿನೆಲೆಗಳಲ್ಲಿ ತೀರ ಅತ್ಯಗತ್ಯವಾದ ಸಾಂಸ್ಕೃತಿಕ ಅಂಶಗಳಾಗಿದ್ದವು. ಅದರಲ್ಲೂ ಈ ಪ್ರಾದೇಶಿಕ ಅರಸು ಮನೆತನಗಳು ನೆಲೆಯೂರಿದ ರಾಜಧಾನಿಗಳಲ್ಲಿ ಕಲ್ಲಿನಲ್ಲಿ ಕಟ್ಟಿಸಿದ ದೇವಾಲಯಗಳು ಹಾಗೂ ಅವುಗಳ ದಾನ ಶಾಸನಗಳು ಪ್ರಭುತ್ವದ ಒಂದು ಲಕ್ಷಣವೊ ಎಂಬಂತೇ ಕಾಣಿಸಿಕೊಳ್ಳುತ್ತವೆ. ಅವುಗಳನ್ನು ರಾಜರೇ

ಕಟ್ಟಿಸಬೇಕೆಂದಿಲ್ಲ. ಆದರೆ ಈ ಆಳುವ ಮನೆತನಗಳು ನೆಲೆಯೂರಿದ ಸ್ಥಲದಲ್ಲಿ ಇವರಿಂದಲೇ ಅವುಗಳಿಗೆ ದಾನ ಹಾಗೂ ಪೋಷಣೆ ಸಿಗುತ್ತಿದ್ದವು. ಇಂಥ ದೇವಾಲಯಗಳ ಶಾಸನಗಳಲ್ಲಿಯೇ ಈ ಸ್ಥಾನಿಕ ಆಳುವ ಮನೆತನಗಳ ಕುರಿತಾದ ಐತಿಹಾಸಿಕ ವಿವರಗಳು ಸಿಗುತ್ತವೆ ಎಂಬುದು ಇಲ್ಲಿ ಮಹತ್ವದ ವಿಷಯ. ಬಂದಳಿಕೆಯಲ್ಲಿ ಒಂದು ಜೈನ ದೇವಾಲಯ ಮೂರು ತ್ರಿಕೂಟ ದೇವಾಲಯಗಳು ನಾಲ್ಕು ಇತರ ಶೈವ ಹಾಗೂ ಶಾಕ್ತ ದೇವಾಲಯಗಳು ಇದ್ದವು. ಉದ್ರಿಯಲ್ಲಿ ಮೂರು ಶಿವಾಲಯಗಳು, ಎರಡು ಜಿನಾಲಯಗಳು ಒಂದು ವೈಷ್ಣವ ಆಲಯ ನಿರ್ಮಾಣವಾದವು. ಹುಂಚದಲ್ಲಿ ನಾಲ್ಕು ಬಸದಿಗಳು ನಿರ್ಮಾಣವಾದವು. ಇವೆಲ್ಲಕ್ಕಿಂತ ಅಸಂದಿಯ ಒಂದು ಶಾಸನದ ಪ್ರಕಾರ ಇಲ್ಲಿ ೧೩ ದೇವಾಲಯಗಳು ಇದ್ದವು. ಈ ದೇವಾಲಯದ ದಾನದ ಕಾರ್ಯದಲ್ಲಿ ಸ್ಥಾನಿಕ ಆಳುವ ವರ್ಗದವರು ಹಾಗೂ ಈ ದೇವಾಲಯಗಳನ್ನು ಪ್ರತಿನಿಧಿಸುವ ಕಾಳಾಮುಖರು ಅಥವಾ ಜೈನ ಮುನಿಗಳು ಒಂದೆಡೆ ಸೇರುವ ಅವಕಾಶ ನಿರ್ಮಾಣವಾಗುತ್ತಿತ್ತು.

ವಿಜಯನಗರೋತ್ತರ ರಾಜ್ಯಗಳಲ್ಲಿ ಆಗಮ ಸಂಪ್ರದಾಯದ ಪ್ರಭಾವ ಇಷ್ಟು ಸ್ಪಷ್ಟವಾಗಿ ಕಾಣಿಸಿಕೊಳ್ಳುವುದಿಲ್ಲ. ಜೊತೆಗೇ ಪೂಜಾರಾಧನೆಯ ಸಂಪ್ರದಾಯಗಳಲ್ಲೂ ಸಾಕಷ್ಟು ಏಳುಬೀಳುಗಳು ಉಂಟಾಗಿದ್ದವು. ೧೪ನೇ ಶತಮಾನದ ನಂತರ ಶೈವ ಮತ್ತು ಜೈನ ಸಂಪ್ರದಾಯಗಳ ಸ್ಥಾನವನ್ನು ವೈಷ್ಣವ ಸಂಪ್ರದಾಯ ಆಕ್ರಮಿಸತೊಡಗಿತು. ಅದರಲ್ಲೂ ಶ್ರೀ ವೈಷ್ಣವ ಸಂಪ್ರದಾಯವು ವೆಂಕಟೇಶ್ವರ ಮತ್ತು ರಂಗನಾಥ ಎಂಬ ವಿಷ್ಣುವಿನ ಎರಡು ರೂಪಗಳ ಮೂಲಕ ಕರ್ನಾಟಕದ ಒಳನಾಡಿನಲ್ಲಿ ಪ್ರಚಲಿತದಲ್ಲಿ ಬಂದಿತು. ವಿಜಯನಗರ ಕಾಲದಲ್ಲಿ ಗುಡ್ಡಗಾಡಿನ ಬುಡಕಟ್ಟುಗಳ ಹಿನ್ನೆಲೆಯನ್ನು ಹೊಂದಿದ ನಾಯಕ ಮನೆತನಗಳು ಈ ಮೇಲಿನ ದೇವತೆಗಳನ್ನು ಪೂಜಿಸಿದ್ದು ಕಂಡುಬರುತ್ತದೆ. ಜೊತೆಗೇ ಹನುಮಂತನೂ ಒಂದು ಮಹತ್ವದ ದೇವತೆಯಾಗಿ ಮಾಧ್ವ ಸಂಪ್ರದಾಯದಿಂದ ಪ್ರಸಿದ್ಧಿಗಳಿಸಿದನು. ತರೀಕೆರೆ ನಾಯಕರು ಇಂಥ ದೇವತೆಗಳನ್ನು ಕುಲದೈವಗಳನ್ನಾಗಿ ಪೂಜಿಸಿದ್ದು ಕಂಡುಬರುತ್ತದೆ. ಶೈವ ಸಂಪ್ರದಾಯವು ಈ ಕಾಲದಲ್ಲೂ ಮಲೆನಾಡಿನ ಭಾಗಗಳಲ್ಲಿ ಮುಂದುವರೆದುಕೊಂಡು ಬಂದಿದ್ದು ಕಂಡುಬರುತ್ತದೆ. ಆದರೆ ಆ ಕಾಲದಲ್ಲಿ ಪೂಜೆಗೊಳಪಟ್ಟ ಶೈವ ದೇವತೆಗಳು ಬೇರೆಯೇ ಆಗಿದ್ದವು. ಅವೆಂದರೆ ವೀರಭದ್ರ, ಮೈಲಾರ, ಮಲ್ಲಿಕಾರ್ಜುನ ಮುಂತಾದವು. ಮಲೆನಾಡಿನ ಭಾಗದಲ್ಲಿ ರಾಮೇಶ್ವರ ದೇವತೆ ತನ್ನ ಜನಪ್ರಿಯತೆಯನ್ನು ಉಳಿಸಿಕೊಂಡಿತ್ತು. ಜೈನ ಮತವು ದಟ್ಟ ಮಲೆನಾಡಿನ ಭಾಗದಲ್ಲಿನ ಆಳುವ ಮನೆತನಗಳಲ್ಲಿ ಈ ಕಾಲದಲ್ಲೂ ಪ್ರಾಮುಖ್ಯತೆ ಉಳಿಸಿಕೊಂಡಿತ್ತು.

ಸುಮಾರು ೧೩ನೇ ಶತಮಾನದಿಂದ ಈ ಪ್ರದೇಶದಲ್ಲಿ ವೀರಶೈವ ಸಂಪ್ರದಾಯವು ಪ್ರಸಾರವಾಯಿತು. ಹೊಸಗುಂದದ ಕೋಟಿನಾಯ್ಕನನ್ನು ಮಾಹೇಶ್ವರ ಗಣಾವತಾರ ಎಂದು ೧೩ನೇ ಶತಮಾನದ ಅಂತ್ಯಭಾಗದಲ್ಲಿನ ಶಾಸನವೊಂದರಲ್ಲಿ ಕರೆಯಲಾಗಿದೆ. ಅದಕ್ಕೂ ಸ್ವಲ್ಪ ಮೊದಲೇ ಕಲಿಸೆಯ ಅಳಿಯ ಬೀರರಸನು ಸೊನ್ನಲಿಗೆಯ ಅಭಿನವ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ದಾನ ನೀಡಿದ ಉಲ್ಲೇಖವಿದೆ. ೧೬ನೇ ಶತಮಾನದ ನಂತರ ಕೆಳದಿ ಅರಸರು ಈ ವೀರಶೈವ ಸಂಪ್ರದಾಯವನ್ನು ವಿಶೇಷವಾಗಿ ಪೋಷಿಸಿದ್ದು ಕಂಡುಬರುತ್ತದೆ. ೧೫-೧೬ ನೇ ಶತಮಾನದ ನಂತರ ಈ ಬದಲಾವಣೆಯ ಜೊತೆಗೇ ವೀರಭದ್ರ ದೇವತೆಯೂ ಜನಪ್ರಿಯವಾಯಿತು. ಕೊಡಗಿನ ಹಾಲೇರಿ ವಂಶಸ್ಥರೂ ಕೂಡ ಈ ಸಂಪ್ರದಾಯದ ಹಿನ್ನೆಲೆಯವರಾಗಿದ್ದರು.

ಈ ಕಾಲದ ಹರಿದಾಸ ಸಂಪ್ರದಾಯವು ಮಲೆನಾಡಿನ ಮೂಲೆಯಾದ ಆರಗದಲ್ಲಿ ಪೋಷಣೆಗೊಳಪಟ್ಟಿದ್ದು ಮತ್ತೊಂದು ವಿಶೇಷವಾಗಿದೆ. ಈ ಸಂಬಂಧಿಸಿ ವಿಠಲ ಎಂಬ ದೇವತೆ ವೆಂಕಟೇಶ್ವರ ಹಾಗೂ ರಂಗನಾಥರೊಂದಿಗೆ ಮಹತ್ವಗಳಿಸಿತು. ವಿಠಲನಿಗೆ ಸಂಬಂಧಿಸಿ ಈ ಪ್ರದೇಶದಲ್ಲಿ ತೀರ ಪ್ರಾಚೀನ ಉಲ್ಲೇಖವು ತಾರೆ ಗ್ರಾಮದ ಹೊಸಗುಂದದ ಕೋಟಿನಾಯ್ಕನ

ಶಾಸನದಲ್ಲಿ ಕಾಣಿಸಿಕೊಳ್ಳುತ್ತದೆ. ೧೬ನೇ ಶತಮಾನದ ಸುಮಾರಿಗೆ ಕರ್ನಾಟಕದ ಈ ಭಾಗಕ್ಕೂ ಆಂಧ್ರ ಹಾಗೂ ಮಹಾರಾಷ್ಟ್ರದ ಭಾಗಗಳಿಗೂ ಇದ್ದ ಸಾಂಸ್ಕೃತಿಕ ಸಂಬಂಧ ಆರಗದ ಹರಿದಾಸ ಪರಂಪರೆಯಲ್ಲಿ ವ್ಯಕ್ತವಾಗಿದೆ. ಪುರಂದರದಾಸರ ಊರಿಗೆ ಸಂಬಂಧಿಸಿ ಮಂಡಿಸಲಾಗುವ ವಾದ ವಿವಾದಗಳು ಏನೇ ಇರಲಿ, ಆರಗ ರಾಜ್ಯದಲ್ಲಿ ಹರಿದಾಸ ಪರಂಪರೆಗೆ ವಿಶೇಷ ಪೋಷಣೆ ಸಿಕ್ಕಿದ್ದಂತೂ ಹೌದು.

ಈ ರೀತಿ ಭಾರತದ ಉಪಖಂಡದ ಬೇರೆ ಬೇರೆ ಭಾಗಗಳ ಜೊತೆಗೆ ಈ ಪ್ರದೇಶವನ್ನು ಸಾಂಸ್ಕೃತಿಕವಾಗಿ ಜೋಡಿಸಿ ರಾಜ್ಯದ ಸಾಂಸ್ಕೃತಿಕ ಮಾದರಿಗಳನ್ನು ಪ್ರಾದೇಶಿಕ ಸಂದರ್ಭದಲ್ಲಿ ಪುನರುತ್ಪಾದಿಸುವಲ್ಲಿ ಮತಧರ್ಮಗಳು ಪ್ರಧಾನ ಪಾತ್ರವಹಿಸಿದ್ದು ಕಂಡುಬರುತ್ತದೆ.

೬. ದೇವಾಲಯ ವಾಸ್ತು ಮತ್ತು ಶಿಲ್ಪಕಲೆ

ಬಹುಶಃ ಈ ಮೇಲೆ ಚರ್ಚಿಸಲಾದ ಸಾಂಸ್ಕೃತಿಕ ಅಂಶಗಳ ಮೂರ್ತ ಅಭಿವ್ಯಕ್ತಿಗಳೆಂದರೆ ದೇವಾಲಯ ವಾಸ್ತು ಮತ್ತು ಶಿಲ್ಪಕಲೆಗಳು. ದೇವಾಲಯ ನಿರ್ಮಾಣ ಹಾಗೂ ಮೂರ್ತಿಗಳನ್ನು ರಚಿಸುವುದು ಆಗಮ ಪೂಜಾ ಸಂಪ್ರದಾಯದ ಒಂದು ಅಂಗವಾಗಿದೆ. ಈ ಕೆಲಸಗಳನ್ನು ಕಲ್ಲುಕುಟಿಕರು, ಶಿಲ್ಪಿಗಳು, ರೂವಾರಿಗಳು ಮುಂತಾದ ವೃತ್ತಿಪರರೇ ನಡೆಸಿದರೂ, ಆಯಾ ಮತಪಂಥಗಳ ಆಗಮ ನಿರ್ದೇಶನ ಹಾಗೂ ಪರಿಕಲ್ಪನೆಯೂ ಅಷ್ಟೇ ನಿರ್ಣಾಯಕವಾಗಿ ವಾಸ್ತುಶಿಲ್ಪ ಹಾಗೂ ಮೂರ್ತಿಶಿಲ್ಪಗಳನ್ನು ಪ್ರಭಾವಿಸಿದೆ. ಅದರಲ್ಲೂ ಪ್ರಾರಂಭಿಕ ಮಧ್ಯಕಾಲದಲ್ಲಿ ೧೧-೧೨ನೇ ಶತಮಾನದವರೆಗೆ ಈ ಆಗಮ ನಿರ್ದೇಶನ ತೀರ ಗಾಢವಾಗಿ ಕಾಣಿಸಿಕೊಳ್ಳುತ್ತದೆ. ಕಾಳಾಮುಖ ಹಾಗೂ ಜೈನ ಮುನಿಗಳು ಇಂಥ ವಾಸ್ತುಶಾಸ್ತ್ರ, ಮೂರ್ತಿಶಾಸ್ತ್ರಗಳ ಜ್ಞಾನವನ್ನು ಹೊಂದಿದ್ದು ಶಿಲ್ಪಿಗಳಿಗೆ ನಿರ್ದೇಶನವನ್ನು ನೀಡುತ್ತಿದ್ದರು. ಕ್ರಮೇಣವಾಗಿ ಶಿಲ್ಪಿಗಳು ಈ ಆಗಮಶಾಸ್ತ್ರವನ್ನು ಅಂತರ್ಗತ ಮಾಡಿಕೊಂಡು ಕರ್ನಾಟಕದ ವಾಸ್ತುಶೈಲಿಯೊಂದನ್ನು ರೂಪಿಸಿದರು. ಅದನ್ನು ಸ್ಥೂಲವಾಗಿ ಚಾಲುಕ್ಯ ಶೈಲಿ ೭ನೇ ಶತಮಾನದಿಂದ ೧೩ನೇ ಶತಮಾನದವರೆಗೂ ಕರ್ನಾಟಕದಲ್ಲಿ ಪ್ರಚಲಿತದಲ್ಲಿ ಇತ್ತು. ಈ ಶೈಲಿಯಲ್ಲೇ ೧೧-೧೨ನೇ ಶತಮಾನದಲ್ಲಿ ವಿಭಿನ್ನ ಪ್ರಾದೇಶಿಕ ರೂಪಗಳು ಆವಿಷ್ಕಾರವಾದವು. ಹೊಯ್ಸಳರ ಪ್ರದೇಶದಲ್ಲಿ ಇಂಥ ಒಂದು ವಿಶಿಷ್ಟ ಶೈಲಿಯನ್ನು ಕಾಣುತ್ತೇವೆ.

ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪ ಕಲೆಯು ಮಧ್ಯಕಾಲೀನ ರಾಜ್ಯ ನಿರ್ಮಾಣ ಹಾಗೂ ವಿಸ್ತರಣೆಯ ಒಂದು ಸೂಚಿಯಾಗಿದೆ ಎಂದರೆ ಅತಿಶಯೋಕ್ತಿಯಲ್ಲ. ಬಾದಾಮಿ ಚಾಲುಕ್ಯರ ಕಾಲದ ನಂತರ ಈ ಶೈಲಿಯಲ್ಲಿ ಆದ ಬೆಳವಣಿಗೆಗಳನ್ನೆಲ್ಲ ಮಲೆನಾಡಿನ ಭಾಗದಲ್ಲೂ ನೋಡಬಹುದು. ಕ್ರಿ.ಶ. ೮ನೇ ಶತಮಾನದ ಸುಮಾರಿಗೇ ಮಲೆನಾಡಿನ ಮೂಲೆಯಾದ ಹೊಂಬುಚದಲ್ಲಿ ಚಾಲುಕ್ಯ ಶೈಲಿ ಕಾಣಿಸಿಕೊಳ್ಳುತ್ತದೆ. ಕ್ರಿ.ಶ. ೧೦ನೇ ಶತಮಾನದ ಪ್ರಾರಂಭದಿಂದ ಈ ಶೈಲಿಯ ರಾಷ್ಟ್ರಕೂಟರ ಕಾಲದ ಬೆಳವಣಿಗೆಯನ್ನು ಅಂತರ್ಗತಮಾಡಿಕೊಂಡ ಸ್ಮಾರಕಗಳು ನಮಗೆ ಹೊಂಬುಚದಲ್ಲಿ ಸಿಗುತ್ತವೆ. ೧೧ನೇ ಶತಮಾನದ ನಂತರ ಎಷ್ಟು ವ್ಯಾಪಕವಾಗಿ ಕಲ್ಲಿನ ದೇವಾಲಯಗಳ ನಿರ್ಮಾಣ ಈ ಪ್ರದೇಶದಲ್ಲಿ ನಡೆಯಿತೆಂದರೆ ಪ್ರತೀ ಪ್ರಮುಖ ವಸತಿ ನೆಲೆಗಳಲ್ಲೂ ಅವು ತಲೆ ಎತ್ತಿದವು. ಸ್ಥಾನಿಕ ಅರಸು ಮನೆತನಗಳಿಗೆ ಇಂಥ ದೇವಾಲಯಗಳ ನಿರ್ಮಾಣ ಹಾಗೂ ಮತ ಪಂಥಗಳ ಪೋಷಣೆ ರಾಜತ್ವದ ಒಂದು ಲಕ್ಷಣವಾಗಿ ಮಹತ್ವಗಳಿಸಿತ್ತು ಎಂಬುದು ಈ ಸಂಗ್ರಹದಲ್ಲಿನ ಅಧ್ಯಯನಗಳಿಂದ ವ್ಯಕ್ತವಾಗುತ್ತದೆ.

ಆಯಾ ಸ್ಥಾನಿಕ ಆಳ್ವಿಕೆಗಳಲ್ಲಿ ಒಂದು ಸಾಮ್ರಾಜ್ಯದ ಮಾದರಿಗಳನ್ನು ಪುನರುತ್ಪಾದಿಸುವ ಜೊತೆಗೇ ತಮ್ಮದೇ ಆದ ಸಂದರ್ಭಕ್ಕೆ ಅದನ್ನು ಅಳವಡಿಸಿಕೊಳ್ಳುವ ಕ್ರಿಯೆಯನ್ನು

ವಾಸ್ತುಶಿಲ್ಪ ಮೂರ್ತಿಶಿಲ್ಪಗಳಲ್ಲಿ ನೋಡಬಹುದು. ದೇವಾಲಯಗಳಲ್ಲೂ ವಿಭಿನ್ನ ಕಲಾವಂತಿಕೆಯ ಶ್ರೇಣಿಗಳಿದ್ದವು. ಈ ಶ್ರೇಣೀಕರಣ ಮಧ್ಯಕಾಲೀನ ರಾಜ್ಯಗಳ ಅಧಿಕಾರ ಶ್ರೇಣೀಕರಣಕ್ಕೆ ಹೋಲುತ್ತದೆ. ದೇವಾಲಯಗಳಲ್ಲಿ ಈ ಶ್ರೇಣೀಕರಣ ಆಯಾ ಸಂಸ್ಥೆಗಳ ಅಧಿಕಾರ ಭೌತಿಕ ಸಾಮರ್ಥ್ಯ, ಪ್ರತಿಷ್ಠೆ, ದೇವಾಲಯಗಳ ಶಾಸ್ತ್ರ ಬದ್ಧತೆ ಹಾಗೂ ಕಲಾತ್ಮಕತೆಗಳಲ್ಲಿ ವ್ಯಕ್ತವಾಗಿದೆ. ತೀರ ಉನ್ನತ ಶ್ರೇಣಿಯ ದೇವಾಲಯಗಳು ಒಂದು ವ್ಯಾಪಕವಾದ ಹಾಗೂ ಶಾಸ್ತ್ರೀಯವಾದ ಮಾರ್ಗ ಕಲಾಶೈಲಿಯಲ್ಲಿ ನಿರ್ಮಾಣವಾದವು. ಈ ಮಾರ್ಗಕಲಾಶೈಲಿ ವಿಮಾನ ಹಾಗೂ ಮಂಟಪಗಳ ರಚನೆಯಲ್ಲಿ ವ್ಯಕ್ತವಾಗುತ್ತದೆ. ಇಂಥ ನಿರ್ಮಿತಿಗಳು ಸ್ಥಾನಿಕ ಆಳುವ ಅಂಶಗಳ ರಾಜಧಾನಿಗಳಲ್ಲಿ ಕೂಡ ತಲೆ ಎತ್ತಿದ್ದರೂ, ಇವುಗಳ ಅತೀ ಉತ್ಕೃಷ್ಟ ಮಾದರಿಗಳು ಈ ಆಳುವ ವಂಶಗಳಿಗಿಂತಲೂ ಉನ್ನತ ಹಂತದ ರಾಜ್ಯಾಧಿಕಾರಿಗಳಿಂದ ಇಂಥ ಸ್ಥಳಗಳ ಹೊರಗೇ ನಿರ್ಮಾಣವಾದುದೂ ಆಸಕ್ತಿಯ ವಿಷಯವಾಗಿದೆ. ಉದಾಹರಣೆಗೆ ಈ ಪ್ರದೇಶದಲ್ಲಿ ಇಂಥ ಅತ್ಯುತ್ಕೃಷ್ಟ ಮಾದರಿಗಳು ಬಳ್ಳಿಗಾಮೆ, ಕುಪ್ಪಟೂರು, ಬೇಳೂರು ಹಳೆಬೀಡು ಮುಂತಾದ ಸ್ಥಳಗಳಲ್ಲಿ ಇದೆಯೇ ಹೊರತೂ ಸ್ಥಾನಿಕ ಆಳರಸರ ರಾಜಧಾನಿಗಳಲ್ಲಿಲ್ಲ. ಸ್ಥಾನಿಕ ಆಳ್ವಿಕೆಯ ಕೇಂದ್ರಗಳಾದ ಬಂದಳಿಕೆ, ಉದ್ರಿ, ನಾಡಕಳಸಿ, ಹೊಸಗುಂದ, ಹೊಂಬುಚ, ಆಸಂದಿ ಮುಂತಾದ ಸ್ಥಳಗಳಲ್ಲಿ ಈ ಉತ್ಕೃಷ್ಟ ಮಾದರಿಗಳ ವಿಭಿನ್ನ ಕೆಳಹಂತದ ನಿರ್ಮಿತಿಗಳು ಇವೆ. ಈ ರೀತಿ ಈ ಸ್ಥಾನಿಕ ಆಳುವ ವಂಶಗಳ ಪ್ರತಿಷ್ಠೆಯು ದೇವಾಲಯ ವಾಸ್ತುವಿನ ಸಂದರ್ಭದಲ್ಲಿ ಒಂದು ಸಾಮ್ರಾಜ್ಯದ ಪ್ರತಿಷ್ಠೆಯ ಅಧೀನತೆಯಲ್ಲಿ ವ್ಯಕ್ತವಾಗುವುದು ಮಧ್ಯಕಾಲೀನ ರಾಜ್ಯಗಳ ಭೌತಿಕ ಅಧಿಕಾರಕ್ಕೆ ಪೂರಕವಾಗಿಯೇ ಇದೆ.

ಸ್ಥಾನಿಕ ಆಳುವ ಮನೆತನಗಳು ವಿಭಿನ್ನ ಮಟ್ಟದಲ್ಲಿ ಸಾಮ್ರಾಜ್ಯದ ಮಾದರಿಗಳನ್ನು ಸಾಧಿಸಿದವು. ಬಂದಳಿಕೆಯ ತ್ರಿಮೂರ್ತಿ ದೇವಾಲಯ, ಹುಂಚದ ಬಸದಿಗಳು ಬಹುಶಃ ಇವುಗಳಲ್ಲಿ ಅತೀ ಮೇಲ್ಮಟ್ಟದ ಸಾಧನೆಗಳಾಗಿವೆ. ಇವಕ್ಕೂ ಕೆಳ ಹಂತದಲ್ಲಿ ವ್ಯಕ್ತವಾಗುವ ವಾಸ್ತು ನಿರ್ಮಿತಿಗಳನ್ನು ನಾಡ ಕಳಸಿ, ಹೊಸಗುಂದ, ಉದ್ರಿ, ಆಸಂದಿ ಮುಂತಾದೆಡೆಗಳಲ್ಲಿ ನೋಡ ಬಹುದು. ಇಲ್ಲಿನ ದೇವಾಲಯಗಳಿಗೆ ಅಲಂಕಾರರಹಿತವಾದ ಗೋಡೆಗಳು, ಪಿರಾಮಿಡ್ ಆಕೃತಿಯ ಶಿಖರಗಳು, ಗೂಢ ಮಂಟಪಗಳು ಅಥವಾ ಕಕ್ಷಾಸನಗಳನ್ನು ಒಳಗೊಂಡ ಸಣ್ಣ ಪ್ರಮಾಣದ ಸಭಾ ಮಂಟಪಗಳು ಇರುತ್ತವೆ. ಇವುಗಳಿಗೆ ಕುಸುರಿ ಕೆಲಸದ ಅಲಂಕರಣಗಳು ಇರುವುದಿಲ್ಲ. ಆದರೆ ಕೆಲ ದೇವಾಲಯಗಳಲ್ಲಿ ನುಣುಪಾಗಿ ಮಾಡಿದ ಘಂಟಾಕೃತಿಯ ಕಂಭಗಳು ಇರುತ್ತವೆ. ಇವು ಚಾಲುಕ್ಯ ವಾಸ್ತು ಕಲೆಯಲ್ಲಿ ಸ್ಥಾನಿಕ ಆಶ್ರಯದಾತರ ರಚನೆಗಳಲ್ಲೇ ಉತ್ತಮ ಮಟ್ಟದವು ಎಂಬುದಂತೂ ಸ್ಪಷ್ಟ.

ವಿಜಯನಗರ ಕಾಲದ ಪ್ರಾರಂಭದಲ್ಲಿ ಈ ಮೇಲಿನ ಶಾಸ್ತ್ರೀಯ ಶೈಲಿ ಬಹುತೇಕ ಕಣ್ಮರೆಯಾಯಿತು. ಬಹುಶಃ ಮಲೆನಾಡಿನ ಭಾಗದಲ್ಲಿ ಮಾತ್ರ ಅದು ಮುಂದೆ ಕೆಳದಿ ಆಳ್ವಿಕೆಯ ಅಂತ್ಯದವರೆಗೂ ವಿಜಯನಗರ ಶೈಲಿಯಿಂದ ಪ್ರಭಾವಿತವಾಗಿ ಸಾಕಷ್ಟು ಬದಲಾಗಿ ಮುಂದುವರಿಯಿತು. ಆದರೂ ವಿಜಯನಗರ ಕಾಲದ ನಂತರ ಸ್ಥಾನಿಕ ಆಳುವ ಮನೆತನಗಳು ಹಾಗೂ ಪ್ರತಿಷ್ಠಿತ ವರ್ಗ ಶಾಸ್ತ್ರಬದ್ಧ ಶೈಲಿಯ ವಾಸ್ತುಗಳನ್ನು ಈ ಪ್ರದೇಶದಲ್ಲಿ ನಿರ್ಮಾಣ ಮಾಡಿದ್ದು ತೀರ ಕಡಿಮೆ. ನಿರ್ಮಾಣವಾದ ವಾಸ್ತುಗಳಲ್ಲೂ ವಿಜಯನಗರ ಶೈಲಿಯ ತೀರ ಕೆಳಮಟ್ಟದ ಅನುಕರಣೆಗಳು ಮಾತ್ರ ಕಂಡುಬರುತ್ತವೆ. ಈ ದೃಷ್ಟಿಯಿಂದ ಆರಗದ ಸ್ಮಾರಕಗಳು ಕುತೂಹಲಕಾರಿಯಾಗಿವೆ. ಆರಗದಲ್ಲಿ ೧೪ನೇ ಶತಮಾನದಿಂದ ದೇವಾಲಯಗಳ ನಿರ್ಮಾಣ ಪ್ರಾರಂಭವಾಯಿತು. ಇಲ್ಲಿನ ಕಲಾನಾಥ ದೇವಾಲಯದ ಇಳಿಜಾರಾದ ಕಲ್ಲಿನ ಮಾಡುಗಳು, ಮಲೆನಾಡಿನ ವಾತಾವರಣವನ್ನು ಗಮನದಲ್ಲಿಟ್ಟುಕೊಂಡು ಚಾಲುಕ್ಯ ಶೈಲಿಯನ್ನು ಪರಿಷ್ಕರಿಸಿ ಮಾಡಿಕೊಂಡ ಬದಲಾವಣೆಗಳಾಗಿವೆ.

ಒಂದು ಸಾಮ್ರಾಜ್ಯದ ವಾಸ್ತುಶೈಲಿ ಆ ಸಾಮ್ರಾಜ್ಯದ ಅಧೀನತೆಗೆ ಒಳಪಟ್ಟ ಸ್ಥಾನಿಕ ಆಳ್ವಿಕೆಗಳಲ್ಲೂ ಪ್ರಚಲಿತದಲ್ಲಿ ಬರುವ ಸಂಗತಿ ಮಲೆನಾಡಿನ ಭಾಗದ ವಾಸ್ತುಶಿಲ್ಪದಲ್ಲಿ ವ್ಯಕ್ತವಾಗುತ್ತದೆ. ದಕ್ಷಿಣ ಕರ್ನಾಟಕದ ಮಲೆನಾಡಿನ ಚೆಂಗಾಳ್ವ, ಕೊಂಗಾಳ್ವ ಮುಂತಾದ ಮನೆತನಗಳ ವಾಸ್ತುಗಳ ದ್ರಾವಿಡ ಶೈಲಿಯವಾಗಿದ್ದು ಹೊಯ್ಸಳರು ಚಾಲುಕ್ಯರ ಸಾಮಂತರಾಗಿ ಬೆಳೆದಂತೆಲ್ಲ ಚಾಲುಕ್ಯ ಶೈಲಿ ಈ ಪ್ರದೇಶದಲ್ಲೆಲ್ಲ ಪ್ರಚಲಿತದಲ್ಲಿ ಬಂದಿತು. ವಿಜಯನಗರ ಕಾಲದಲ್ಲಿ ವಿಜಯನಗರದ ರಾಯರು ಪಾಂಡ್ಯನಾಡಿನ ದ್ರಾವಿಡ ಶೈಲಿಯನ್ನು ವಿಜಯನಗರದಲ್ಲಿ ಪೋಷಿಸಿದರು. ೧೬-೧೭ನೇ ಶತಮಾನದ ನಂತರ ವಿಜಯನಗರದ ಅಧೀನತೆಯಲ್ಲಿ ಆಳ್ವಿಕೆ ನಡೆಸಿದ ಸ್ಥಾನಿಕ ಪಾಳೆಯ ಪಟ್ಟುಗಳಲ್ಲಿ ವಿಜಯನಗರದ ಶೈಲಿಯೇ ಪ್ರಚಲಿತದಲ್ಲಿ ಬರುವುದು ಕಂಡುಬರುತ್ತದೆ. ಆದರೆ ದಟ್ಟ ಮಲೆನಾಡಿನ ಪ್ರದೇಶದಲ್ಲಿ ಇಂಥ ಸಂಪ್ರದಾಯಗಳನ್ನೆಲ್ಲ ಉಳಿಸಿಕೊಂಡು ಸಂಮಿಶ್ರಣ ಮಾಡುತ್ತ ಬಳಸುವ ರೂಢಿ ಕಂಡು ಬರುತ್ತದೆ. ನಾಯಕರ ಕಾಲದಲ್ಲಿ ಇಂಡೋಇಸ್ಲಾಮಿಕ್ ಶೈಲಿಯ ಸಂಮಿಶ್ರಣ ಕೂಡ ಈ ಕಾರಣದಿಂದ ಮಲೆನಾಡಿನ ಭಾಗದ ದೇವಾಲಯಗಳಲ್ಲಿ ಪ್ರಸ್ತುತತೆ ಪಡೆಯುತ್ತದೆ.

ಇಲ್ಲಿಯವರೆಗೆ ಚರ್ಚಿಸಲಾದ ಒಂದು ಸಾಮ್ರಾಜ್ಯದ ಸಾಂಸ್ಕೃತಿಕ ಮಾದರಿಗಳು. ಪ್ರಾದೇಶಿಕವಾರಿ ಪುನರುತ್ಪಾದಿತವಾಗುವಾಗ ಸ್ಥಾನಿಕ ಆಳುವ ಮನೆತನಗಳನ್ನೇ ಕೇಂದ್ರದಲ್ಲಿರಿಸಿ ನೋಡುವುದು ತಪ್ಪಾಗುತ್ತದೆ. ಏಕೆಂದರೆ ಈ ಸ್ಥಾನಿಕ ಆಳ್ವಿಕೆಗಳೂ ಈ ಮೇಲಿನ ಸಾಂಸ್ಕೃತಿಕ ಪ್ರಕ್ರಿಯೆಯ ಒಂದು ಭಾಗವಾಗಿ ಅದರ ಒಂದು ರಾಜಕೀಯ ಮುಖವಾಗಿ ಅಭಿವ್ಯಕ್ತವಾಗುತ್ತವೆ. ಇಂಥ ಸ್ಥಾನಿಕ ರಾಜಕೀಯ ಒಂದು ಸಾಂಸ್ಕೃತಿಕ ಅಭಿವ್ಯಕ್ತಿಯೂ ಆಗಿ ಪ್ರಾದೇಶಿಕ ಸಮಾಜದಲ್ಲಿ ಪ್ರಸ್ತುತತೆ ಪಡೆಯುತ್ತದೆ. ವಂಶಾವಳಿ, ಶಾಸನ ಲೇಖನ ಮುಂತಾದವು ಇಂಥ ಆಳುವ ಮನೆತನಗಳಿಗೇ ವಿಶಿಷ್ಟವಾದ ಅಭಿವ್ಯಕ್ತಗಳಾಗಿದ್ದರೆ, ಮತಧರ್ಮಗಳ ಪೋಷಣೆ, ಕಲೆ ವಾಸ್ತು ಶಿಲ್ಪ ನಿರ್ಮಾಣ ಇವು ಒಂದು ಸಾಮ್ರಾಜ್ಯದ ಪ್ರತಿಷ್ಠಿತ ಸಮಾಜದ ಅಭಿವ್ಯಕ್ತಿಯಾಗಿದ್ದು ಸ್ಥಾನಿಕ ಮನೆತನಗಳೂ ಅದನ್ನು ತಮ್ಮ ಪ್ರತಿಷ್ಠೆಯ ಸಂಕೇತಗಳನ್ನಾಗಿ ಅಭಿವ್ಯಕ್ತಿಸಿದ್ದು ಕಂಡುಬರುತ್ತದೆ. ಅಂದರೆ ಒಂದು ವ್ಯಾಪಕವಾದ ಸಾಮಾಜಿಕ ಸಾಂಸ್ಕೃತಿಕ ಪ್ರಕ್ರಿಯೆಯೊಳಗೆ ಇಟ್ಟು ಮಧ್ಯಕಾಲದ ರಾಜ್ಯ ನಿರ್ಮಾಣ ಹಾಗೂ ವಿಸ್ತರಣೆಯನ್ನು ನೋಡಿದಾಗ ಮಾತ್ರ ಈ ಮೇಲಿನ ಮಾದರಿಗಳ ಮಹತ್ವವನ್ನು ಗುರುತಿಸಬಹುದು.

ಮಲೆಕರ್ನಾಟಕದ ಅರಸು ಮನೆತನಗಳು: ೧. ರಾಜ್ಯ ಸಂಸ್ಕೃತಿಯ ನಿರ್ಮಾಣ: ಸಾಂಸ್ಕೃತಿಕ ಹಾಗೂ ರಾಜಕೀಯ ಆಯಾಮಗಳು (೨)

೨

ಇದುವರೆಗೆ ರಾಜಕೀಯ ರಚನೆಗಳನ್ನು ಕೇಂದ್ರೀಕರಣ ಮತ್ತು ವಿಕೇಂದ್ರೀಕರಣದ ಶಕ್ತಿಗಳ ನಡುವೆ ಅನವರತ ಹೊಯ್ದಾಡುವಂಥವುಗಳೆಂಬ ನೆಲೆಯಲ್ಲಿ ಮೌಲ್ಯೀಕರಿಸಲಾಗಿದೆ. ಪ್ರಾರಂಭಿಕ ಮಧ್ಯಕಾಲೀನ ಭಾರತದ ರಾಜಕೀಯ ರಚನೆಯ ಪ್ರಕ್ರಿಯೆಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಸ್ಥಳೀಯ ರಾಜಕೀಯ ವ್ಯವಸ್ಥೆಗಳು ಮತ್ತು ಸ್ಥಳೀಯತೆಯನ್ನು ದಾಟಿದ ರಾಜ್ಯ ವ್ಯವಸ್ಥೆಗಳು ರೂಪುಗೊಳ್ಳುವ ಪ್ರಕ್ರಿಯೆಗಳು ಮತ್ತು ಸ್ಥಳೀಯತೆಯನ್ನು ದಾಟಿದ ರಾಜ್ಯವ್ಯವಸ್ಥೆಗಳು ರೂಪುಗೊಳ್ಳುವ ಪ್ರಕ್ರಿಯೆಗಳನ್ನು ಮುಖಾಮುಖಿಯಾಗಿಸಿ ನೋಡುವದು ಹೆಚ್ಚು ಪ್ರಯೋಜನಕಾರಿ ಎನ್ನುತ್ತಾರೆ ಡಾ. ಬಿ.ಡಿ.ಚಟ್ಟೋಪಾಧ್ಯಾಯ.
(‘Political Processes and Structure of Polity in Early Medieval India: Problems of Perspective’

Presidential Address ot the Ancient India Section, 44th session of Indian History Congress, Burdwan, 1984)

ಸಮಕಾಲೀನ ಆರ್ಥಿಕ, ಸಾಮಾಜಿಕ ಹಾಗೂ ಧಾರ್ಮಿಕ ಪ್ರಕ್ರಿಯೆಗಳಿಗೆ ಸಮಾನಾಂತರಗಳಾಗಿ ರಾಜಕೀಯ ಪ್ರಕ್ರಿಯೆಗಳನ್ನು ನೋಡುವುದು ಸಾಧ್ಯ. ರಾಜಕೀಯ ಪ್ರಕ್ರಿಯೆಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಮೂರು ಸ್ತರಗಳಲ್ಲಿ ಈ ಸಾದೃಶ್ಯಗಳನ್ನು ಗಮನಿಸಬಹುದು.

೧. ರಾಜ್ಯ ಸಮಾಜದ ಸಿದ್ಧ ಉಪಕ್ರಮಗಳು ಹಾಗೂ ಮೂಲ ಕೇಂದ್ರವೊಂದರ ಉಪಸ್ಥಿತಿ.

೨. ರಾಜ್ಯಪೂರ್ವ ರಾಜಕೀಯ ವ್ಯವಸ್ಥೆಗಳು ರಾಜ್ಯ ವ್ಯವಸ್ಥೆಗಳಾಗಿ ಬದಲಾಗುವುದನ್ನು ಸೂಚಿಸುವ ರಾಜ್ಯ ಸಮಾಜದ ಸಮತಲ **(horizontal)** ವಿಸ್ತರಣೆ.

೩. ಸ್ಥಳೀಯ ರಾಜ್ಯಾಧಿಕಾರದ ಪರಿಮಿತಿಯನ್ನು ದಾಟಿ ಬೆಳೆದ ರಾಜಕೀಯ ರಚನೆಗಳಲ್ಲಿ ಸ್ಥಳೀಯ ರಾಜಕೀಯ ವ್ಯವಸ್ಥೆಗಳ ಅನುಕಲನ.

ಸ್ಥಳೀಯ ರಾಜಕೀಯ ವ್ಯವಸ್ಥೆಗಳಂಥ ಚದುರಿದಂತಿದ್ದ ಅಧಿಕಾರ ಕೇಂದ್ರಗಳು ನಮ್ಮ ಪಾರಂಪರಿಕ ಇತಿಹಾಸ ರಚನೆಯಲ್ಲಿ, ವಿಶೇಷವಾಗಿ ಊಳಿಗಮಾನ್ಯ ಪ್ರವೃತ್ತಿಗಳ ಕುರಿತ ಸೂತ್ರೀಕರಣಗಳಲ್ಲಿ ಇದ್ದೇ ಇವೆ. ಅಖಿಲ ಭಾರತ ವ್ಯಾಪ್ತಿಯ ಸಾಮ್ರಾಜ್ಯಗಳಿಗೆ ಹೋಲಿಸಿದಾಗ ಅಷ್ಟು ವಿಶಾಲವಲ್ಲದ ಆದ್ದರಿಂದ ಕೇಂದ್ರೀಕೃತವೆಂದು ಪರಿಗಣಿಸಲು ಸಾಧ್ಯವಿಲ್ಲದ ರಾಜ್ಯವ್ಯವಸ್ಥೆಯ ಮಾದರಿಗಳಿಗೆ ಈ ಸೂತ್ರೀಕರಣವನ್ನು ಅನ್ವಯಿಸಲಾಗುತ್ತಿತ್ತು. ಮಧ್ಯಕಾಲೀನ ಭಾರತದ ರಾಜಕೀಯ ಇತಿಹಾಸ ಹಾಗೂ ಸಂಸ್ಥೆಗಳ ಕುರಿತ ಹಲವಾರು ಕೃತಿಗಳು ವಿರೋಧಾಭಾಸದಿಂದ ಕೂಡಿದ ಸಾಮಾನ್ಯೀಕರಣಗಳನ್ನೊಗೊಂಡಿವೆಯಷ್ಟೆ. ಅರಸೊತ್ತಿಗೆಯನ್ನು ಆಧರಿಸಿದ ರಾಜ್ಯಗಳಲ್ಲೆಲ್ಲ ಅಧಿಕಾರಶಾಹಿಯ ಮೂಲಕ ನಿಯಂತ್ರಣ ಹೊಂದಿದ ರಾಜನೇ ಪರಮಾಧಿಕಾರದ ಮೂಲ ಎಂದು ಹೇಳುತ್ತಲೇ ಅದೇ ಕಾಲಕ್ಕೆ ರಾಜ್ಯಾಡಳಿತ ವ್ಯವಸ್ಥೆ ವ್ಯಾಧಿಗ್ರಸ್ತವಾಗುವುದು ಊಳಿಗಮಾನ್ಯ ಪ್ರವೃತ್ತಿಗಳಿಂದ ಎಂದು ನಿರೂಪಿಸುವುದು ಇಂಥ ವಿರೋಧಾಭಾಸಗಳ ಒಂದು ಉದಾಹರಣೆ.

ರಾಜ್ಯ ವ್ಯವಸ್ಥೆಯಲ್ಲಿಯ ಬದಲಾವಣೆಗಳು ಹಾಗೂ ಊಳಿಗಮಾನ್ಯ ಪ್ರವೃತ್ತಿಗಳು ಇವೆರಡರ ನಡುವೆ ಒಂದು ಸಂವಾದಿ ಸಂಬಂಧ ಇದ್ದ ಕುರಿತ ಗ್ರಹಿಕೆಗಳು ನಮ್ಮ ಇತಿಹಾಸ ಲೇಖನದಲ್ಲಿ ಇದ್ದೇ ಇವೆ. ಊಳಿಗಮಾನ್ಯವಾದ ಇತಿಹಾಸ ಲೇಖನದ ಹೊಸ ಉಪಕ್ರಮವಾಗಿರದೆ, ರಾಜಕೀಯ ಸ್ತರಕ್ಕೆ ಸೀಮಿತವಾಗಿ, ರಾಜಕೀಯ ವಿಘಟನೆಯ ಸಮಾನಾರ್ಥಕವಾಗಿ ಮೊದಲಿನಿಂದಲೂ ಬಳಕೆಗೊಳ್ಳುತ್ತಲೇ ಬಂದಿದೆ. ರಾಜಕೀಯ ದಿಗಂತದಲ್ಲಿ ಏಕತ್ರಿತ ಸಾಮ್ರಾಜ್ಯವೆಂಬುದು ಕಂಡುಬಾರದ ಯಾವುದೇ ಅವಧಿಗೆ ಹೊಂದುವಂತೆ **feudal** ಶಬ್ದವನ್ನು ಪ್ರಾಚೀನ ಭಾರತ ಇತಿಹಾಸದಲ್ಲಿ ಹಿಂದೆ ಮುಂದೆ ತಳ್ಳಲಾಗಿದೆ.

ಭಾರತೀಯ ಸಂದರ್ಭಕ್ಕೆ ಈ ಶಬ್ದವನ್ನು ಅನ್ವಯಿಸುವಲ್ಲಿ ಮಹತ್ವಪೂರ್ಣ ಮುನ್ನಡೆ ಉಂಟಾದದ್ದು ೫೦ರ ದಶಕದಿಂದ ಹೊರಬಂದ ತಲಸ್ಪರ್ಶಿ ಅಧ್ಯಯನಗಳ ಒಂದು ಸರಣಿಯಲ್ಲಿ. ಭಾರತೀಯ ಊಳಿಗಮಾನ್ಯವಾದ ಎಂಬ ಈ ಪ್ರತಿಪಾದನೆಯಲ್ಲಿ ಮೊದಲ ಬಾರಿಗೆ ಊಳಿಗಮಾನ್ಯ ರಾಜ್ಯವ್ಯವಸ್ಥೆ ತನ್ನಷ್ಟಕ್ಕೆ ತಾನೇ ಒಂದು ಇರುವಿಕೆಯಾಗಿರದೆ ಭಾರತದ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯಲ್ಲಿ ರಾಚನಿಕ ಬದಲಾವಣೆಯನ್ನು ಪ್ರತಿನಿಧಿಸುವ ಒಂದು ಹಂತವೆಂದು ವಾದಿಸಲಾಯಿತು. ರಾಜ್ಯ ಮತ್ತು ರೈತಾಪಿ ಎಂಬ ಮುಖಾಮುಖಿ ದ್ವಿಭಜನೆಯ ಸ್ಥಾನದಲ್ಲಿ ಸಮಾಜದ ಶ್ರೇಣೀಕೃತ ರಚನೆಯ ಉಗಮವನ್ನದು ಲಕ್ಷಿಸಿತು. ಮಧ್ಯವರ್ತಿಗಳ ವಿವಿಧ ಸ್ತರಗಳನ್ನೊಳಗೊಂಡ ಈ ಶ್ರೇಣೀಕೃತ ರಚನೆಯ

ಪರಿಕಲ್ಪನೆಯಿಂದಲೇ ರಾಜ್ಯದ ಶೋಷಕ ಹಾಗೂ ಬಲ ಪ್ರಯೋಗ ಸಂಬಂಧಿ ಕಾರ್ಯ ತಂತ್ರವನ್ನು ವಿವರಿಸಲೆತ್ನಿಸಿತು.

ಅದೇ ಕಾಲಕ್ಕೆ ಇತಿಹಾಸ ಲೇಖನ ಪರಂಪರೆಯ ಗತಪ್ರವೃತ್ತಿಗಳ ಗ್ರಹಿಕೆಗಳ ಮುಂದುವರಿಕೆಯನ್ನು ಭಾರತೀಯ ಊಳಿಗಮಾನ್ಯವಾದದಲ್ಲಿ ಕಾಣಬಹುದು. ಉದಾ: ಊಳಿಗಮಾನ್ಯ ರಾಜ್ಯಾಡಳಿತಕ್ರಮ = ರಾಜಕೀಯ ವಿಚ್ಛಿದ್ರೀಕರಣ -= ಕೇಂದ್ರೀಕೃತ ರಾಜ್ಯದ ವಿಘಟನೆ ಎಂಬ ಸಮೀಕರಣ. ಭಾರತೀಯ ಊಳಿಗಮಾನ್ಯ ಸಿದ್ಧಾಂತದ ಪ್ರಕಾರ ಮೌರ್ಯ ರಾಜ್ಯ ವ್ಯವಸ್ಥೆ ಪ್ರತಿನಿಧಿಸಿದ ಕೇಂದ್ರೀಕೃತ ಅಧಿಕಾರಶಾಹಿ ವ್ಯವಸ್ಥೆ ಕ್ರಮೇಣ ಮುರಿದು ಬಿದ್ದು ಅದರಿಂದ ಊಳಿಗಮಾನ್ಯ ರಾಜ್ಯವ್ಯವಸ್ಥೆ ಉದಿಸಿತು. ಬಹುಶಃ ಮೌರ್ಯರ ಕಾಲದಲ್ಲಿ ಸೇವೆಗೆ ಪ್ರತಿಯಾಗಿ ಧನರೂಪದ ಸಂಭಾವನೆ ಕೊಡುವ ಪದ್ಧತಿಯಿಂದಾಗಿ ಭೂಜಾಗೀರು ಕೊಡುವ ವ್ಯವಸ್ಥೆ ಇರಲಿಲ್ಲ. ನಂತರದ ಅವಧಿಯಲ್ಲಿ ಈ ಭೂ ಕೊಡುಗೆ ಪ್ರವೃತ್ತಿ ವ್ಯಾಪಕವಾಗಿ ಬೆಳೆಯಿತು. ಆಡಳಿತಾತ್ಮಕ ಹಕ್ಕುಗಳೊಂದಿಗೆ ಬೆರೆತು ರಾಜ್ಯಾಧಿಕಾರವನ್ನು ಶಿಥಿಲಗೊಳಿಸಿ ಸಾರ್ವಭೌಮಾಧಿಕಾರದ ವಿಘಟನೆಗೆ ಕಾರಣವಾಯಿತು.

ಊಳಿಗಮಾನ್ಯ ರಚನೆ ಎಂದು ಕರೆಯಲಾಗುವ ಒಟ್ಟು ರಾಜಕೀಯ ವಿನ್ಯಾಸವನ್ನು ಭಾರತೀಯ ಊಳಿಗಮಾನ್ಯವಾದದ ಪ್ರತಿಪಾದನೆಗಳು ತಕ್ಕ ಪ್ರಮಾಣದಲ್ಲಿ ವಿವರಿಸುತ್ತವೆಯೇ ಎಂಬ ಪ್ರಶ್ನೆಯನ್ನು ಪ್ರೊ. ಚಟ್ಟೋಪಾಧ್ಯಾಯ ಕೇಳುವುದು ಗಮನಾರ್ಹವಾಗಿದೆ. ಅವರ ಪ್ರಕಾರ ಆ ವಿವರಣೆ ನಿರ್ದಿಷ್ಟ ರಾಜಸತ್ತೆಗಳ ರಚನೆಗಷ್ಟೇ ಅಲ್ಲ ಯಾವುದೇ ಅವಧಿಯಲ್ಲಿ ಉಪಖಂಡದಲ್ಲಿದ್ದ ರಾಜಕೀಯ ಭೂಗೋಲಕ್ಕೂ ಪ್ರಸ್ತುತವಾಗಿರಬೇಕು. ಏಕೆಂದರೆ ಅಧಿಕಾರ ಕೇಂದ್ರಗಳು ಆಗಾಗ ಸ್ಥಳಾಂತರಗೊಳ್ಳುತ್ತಿದ್ದವು. ರಾಜ್ಯಪೂರ್ವ ಸಮಾಜಗಳು ರಾಜ್ಯ ಸಮಾಜಗಳಾಗಿ ಬದಲಾಗುವ ಪ್ರಕ್ರಿಯೆ ನಡೆಯುತ್ತಿತ್ತು, ಹೊಸ ರಾಜ್ಯ ವ್ಯವಸ್ಥೆಗಳು ರೂಪುಗೊಳ್ಳುತ್ತಲೇ ಇದ್ದವು. ಈ ಹಿನ್ನೆಲೆಯಲ್ಲಿ ಸಾರ್ವಭೌಮ ರಾಜ್ಯವಾಗಿರುವ ಒಂದು ಕೇಂದ್ರ ಮತ್ತು ಹಲವು ವಿಧದ ಇತರ ರಾಜ್ಯವ್ಯವಸ್ಥೆಗಳ ನಡುವಿನ ಸಂಬಂಧಗಳನ್ನು ಪ್ರತಿನಿಧಿಸುವ ಮೌರ್ಯ ರಾಜ್ಯದ ಕುರಿತು ಗಮನಾರ್ಹ ಪುನರಾಲೋಚನೆ ನಡೆದಿದೆ. ಸಾರ್ವಭೌಮ ಮೌರ್ಯ ರಾಜ್ಯದ ಕಣ್ಮರೆಯಿಂದಾಗಿ ರಾಜ್ಯ ರಾಜಕೀಯ ವ್ಯವಸ್ಥೆ ಅಸ್ತಿತ್ವದಲ್ಲಿದ್ದ ಪ್ರದೇಶಗಳಲ್ಲಾಗಲಿ ಅಥವಾ ಮೌರ್ಯ ಸಮ್ರಾಜ್ಯ ತನ್ನೊಳಗೆ ಅಡಕಗೊಳಿಸುವ ರಾಜ್ಯಪೂರ್ವ ರಾಜಕೀಯ ವ್ಯವಸ್ಥೆಯ ಪ್ರದೇಶಗಳಲ್ಲಾಗಲಿ ರಾಜಕೀಯ ಆರ್ಥಿಕ ಬಿಕ್ಕಟ್ಟು ಉಂಟಾಗಲಿಲ್ಲ. ವಾಸ್ತವವಾಗಿ ಮೌರ್ಯದ ಪ್ರಾದೇಶಿಕ ವಿಸ್ತರಣೆ ಹಾಗೂ ನಂತರದ ಅವಧಿಯಲ್ಲಿ ನಡೆದ ಅಂಥದ್ದೇ ವಿಸ್ತರಣೆಗಳು ರಾಜ್ಯಪೂರ್ವ ರಾಜಕೀಯ ವ್ಯವಸ್ಥೆಯ ಪ್ರದೇಶಗಳಲ್ಲಿ ಸ್ಥಳೀಯ ರಾಜ್ಯಗಳ ಉಗಮದ ಒಂದು ಹೊಸ ಉಬ್ಬರವನ್ನೇ ಸೃಷ್ಟಿಸಿದವು. ಈ ವಿದ್ಯಮಾನವನ್ನು ಕೇಂದ್ರೀಕೃತ ಆಡಳಿತವೊಂದು ವಿಕೇಂದ್ರೀಕರಣ ಹೊಂದಿದ ಪ್ರಕ್ರಿಯೆ ಎಂದು ತಪ್ಪು ತಿಳಿಯಬೇಕಾಗಿಲ್ಲ.

ಊಳಿಗಮಾನ್ಯವಾದದಲ್ಲಿ ಆಡಳಿತಾತ್ಮಕಕ್ರಮಗಳಾಗಿ ಭೂ ವರ್ಗಾವಣೆಗಳನ್ನು ರಾಜ್ಯಾಧಿಕಾರವನ್ನು ಶಿಥಿಲಗೊಳಿಸುವ ಮುದ್ದಾಂ ಕ್ರಮಗಳೆಂದೇ ಬಿಂಬಿಸಲಾಗಿದೆ. ಇದರರ್ಥ ಊಳಿಗಮಾನ್ಯ ರಾಜಕೀಯ ವ್ಯವಸ್ಥೆ ಏಕೆ ಹುಟ್ಟಿಕೊಳ್ಳುತ್ತದೆಂದರೆ ಊಳಿಗಮಾನ್ಯಪೂರ್ವದ ರಾಜಕೀಯ ವ್ಯವಸ್ಥೆಯ ತನ್ನದೇ ಅಧಿಕಾರ ವಿಘಟನೆಯ ಮೇಲೆ ಸುಖಾಸೀನವಾಗಿರಲು ನಿರ್ಧರಿಸುತ್ತದೆ. ಇದೊಂದು ವಿಲಕ್ಷಣ ನಿಲುವು. ಊಳಿಗಮಾನ್ಯ ಪೂರ್ವದ ರಾಜಕೀಯ ಇಲ್ಲವೆ ಆರ್ಥಿಕ ವ್ಯವಸ್ಥೆಯಲ್ಲಿ ಒಂದು ರಾಚನಿಕ ಮಹತ್ವದ ಬಿಕ್ಕಟ್ಟಿನ ಇರುವಿಕೆಯ ಹೊರತು ಅರ್ಥವಾಗದಂಥದು. ಮೌರ್ಯ ರಾಜ್ಯದ ಪತನ ಇಂಥದೊಂದು ಬಿಕ್ಕಟ್ಟಿಗೆ ಕಾರಣವಾದಂತೆ ತೋರುವುದಿಲ್ಲವೆಂಬುದನ್ನಾಗಲೇ ಗಮನಿಸಿದ್ದೇವೆ.

ಒಂದು ಪರ್ಯಾಯ ವಿವರಣೆಗಾಗಿ ಹುಡುಕುವುದು ಅನಿವಾರ್ಯ. ಪ್ರೊ. ಚಟ್ಟೋಪಾಧ್ಯಾಯ ಅವರು ಪರ್ಯಾಯ ಮಾದರಿ ಎಂಬ ಅರ್ಥದಲ್ಲಿ ಅಲ್ಲವಾದರೂ ಹಲವಾರು ವಿಶ್ಲೇಷಣಾ

ಕ್ರಮಗಳ ಸೂಚನೆಗಳನ್ನೊಳಗೊಂಡ **Integrative Polity** ಎಂಬ ಪರಿಪ್ರೇಕ್ಷ್ಯವೊಂದನ್ನು ಒದಗಿಸಿದ್ದಾರೆ. ಮಲೆನಾಡು ಕರ್ನಾಟಕದ ಅರಸು ಮನೆತನಗಳ ಕುರಿತ ರಾಜಕೀಯ ರಚನೆ, ಪ್ರಕ್ರಿಯೆಯ ಕೆಲ ಅಂಶಗಳನ್ನು ಅವರ ಸೂಚನೆಯ ಪರಿಪ್ರೇಕ್ಷ್ಯದಲ್ಲಿ ಪರಿಶೀಲಿಸಲು ಸಾಧ್ಯ.

ಅದೆಷ್ಟೇ ಕೇಂದ್ರೀಕೃತವಾದದ್ದೆಂದರೂ ಯಾವುದೇ ರಾಜ್ಯ ವ್ಯವಸ್ಥೆಯಲ್ಲಿ ಅಧಿಕಾರದ ಒಂದೇ ಸ್ತರ ಅಥವಾ ಕೇಂದ್ರವಿರುವುದಿಲ್ಲ. ಬಹುಶಃ ಪ್ರಾರಂಭಿಕ ಮಧ್ಯ ಕಾಲದ ರಾಜ್ಯ ವ್ಯವಸ್ಥೆಯಲ್ಲಿ ಅಧಿಕಾರ ಹಂಚಿಕೆಯ ವ್ಯತ್ಯಾಸಗಳ ನಿರ್ದಿಷ್ಟ ಗ್ರಹಿಕೆ ನಾವೀ ತನಕ ಭಾವಿಸಿಕೊಂಡಿದ್ದಕ್ಕಿಂತ ಸಂಕೀರ್ಣವಾಗಿದೆ.

ಒಂದು ನೆಲೆಯಲ್ಲಿ ಈ ಸಂಕೀರ್ಣತೆಯ ಮೂಲ ಎಲ್ಲ ರಾಜ್ಯ ವ್ಯವಸ್ಥೆಗಳಲ್ಲಿ ಇರುವ ರಾಜಕೀಯೋತ್ತರ ತತ್ವಪ್ರಣಾಲಿ. ಇದರ ಒಂದು ಆಯಾಮವೆಂದರೆ ಸತತವಾಗಿ ಅಧಿಕಾರವನ್ನು ನ್ಯಾಯ ಸಮ್ಮತಗೊಳಿಸಿಕೊಳ್ಳುತ್ತ ಇರಬೇಕಾದ ಅಗತ್ಯ. ಈ ಅಗತ್ಯದ ಬೇರಿದ್ದುದು ರಾಜಕೀಯ ಮತ್ತು ಧಾರ್ಮಿಕ ಪ್ರಭಾವಕ್ಷೇತ್ರಗಳ ಪ್ರತ್ಯೇಕತೆಯಲ್ಲಾದರೂ ವಾಸ್ತವದಲ್ಲಿ ಇವೆರಡೂ ಪರಸ್ಪರ ಅವಲಂಭಿತವಾಗಿದ್ದವು. ರಾಜಕೀಯ ಪ್ರಭುತ್ವದ ಸಮರ್ಥನೆ, ಪೋಷಣೆಯ ಅಗತ್ಯವಿತ್ತು.

ನವೋದಿತ ಸ್ಥಳೀಯ ರಾಜಕೀಯ ವ್ಯವಸ್ಥೆಗಳು ಗೌರವಾರ್ಹ ಕ್ಷತ್ರಿಯಾನ್ವಯಗಳೊಂದಿಗೆ ಸಂಬಂಧ ಜೋಡಿಸಿಕೊಳ್ಳುವ ಪ್ರಕ್ರಿಯೆಯನ್ನು ಹಲವು ಮನೆತನಗಳ ಸಂದರ್ಭದಲ್ಲಿ ಕಾಣಬಹುದು. ಕೊಂಗಾಳ್ವ ದೊರೆ ತನ್ನ ಒಂದು ಶಾಸನದಲ್ಲಿ ತನ್ನನ್ನು ಸೂರ್ಯವಂಶ ಶಿಖಾಮಣಿ ಎಂದು ಕರೆದುಕೊಂಡಿದ್ದರೆ ಚೆಂಗಾಳ್ವರು ತಾವು ಚಂದ್ರವಂಶದವರೆಂದೂ ಯಾದವಕುಲಕ್ಕೆ ಸೇರಿದವರೆಂದೂ ದ್ವಾರಾವತಿಯಿಂದ ಬಂದವರೆಂದೂ ಹೇಳಿಕೊಂಡಿದ್ದಾರೆ. ಹತ್ತನೆಯ ಶತಮಾನದಲ್ಲಿ ದ್ವಾರಕಾ ಪಟ್ಟಣದಿಂದ ದಕ್ಷಿಣದ ಕಡೆಗೆ ವಲಸೆ ಬಂದ ಜೈನಕ್ಷತ್ರಿಯ ವಿಕ್ರಮ ಚೆಂಗಾಳ್ವನು ತನ್ನೊಂದಿಗೆ ಬಂದ ಐದಾರುನೂರು ಕುಟುಂಬಗಳೊಂದಿಗೆ ತುಂಬಾ ಎಂಬಲ್ಲಿ ನೆಲೆಸಿದನೆನ್ನಲಾಗಿದೆ. ಈತನು ತೀರ್ಥಕರ ಬೆಟ್ಟದ ಬಳಿ ಬೀಡು ಬಿಟ್ಟಿದ್ದಾಗ ಮೊಲವೊಂದು ಬೇಟೆನಾಯಿಯನ್ನು ಅಟ್ಟಿಸಿಕೊಂಡು ಹೋಗುತ್ತಿದ್ದ ದೃಶ್ಯವನ್ನು ಕಂಡು ಈ ಭೂಮಿಯು ರಾಜ್ಯ ಸ್ಥಾಪನೆಗೆ ಯೋಗ್ಯವಾದ ಗಂಡುಭೂಮಿ ಎಂದು ತಿಳಿದು ಅಲ್ಲಿ ಕೋಟೆ ಸಮೇತ ಪಟ್ಟಣವನ್ನು ಕಟ್ಟಿಸಿ ಅದನ್ನು ಬೆಟ್ಟದಪುರವೆಂದು ಕರೆದನೆನ್ನಲಾಗಿದೆ. ಈ ಲೇಖನದ ಕರ್ತೃ ಕೆ. ರಾಜಶೇಖರ ಅವರು ಹೇಳುವ ಹಾಗೆ ಈ ಗಂಡು ಭೂಮಿಯ ಕಲ್ಪನೆ ಒಂದು ಸಂಚಾರಿ ಆಶಯವಾಗಿದೆ. ಈ ಮೊಲ ನಾಯಿಯ ರೂಪಕವನ್ನು ವಿಜಯನಗರ, ಕೆಳದಿ ಮೊದಲಾದ ರಾಜಮನೆತನಗಳ ಉಗಮದ ಕುರಿತ ಐತಿಹ್ಯಗಳಲ್ಲೂ ನಾವು ಕಾಣುತ್ತೇವೆ. ಇಲ್ಲಿ ಮುಖ್ಯವಾದುದೇನೆಂದರೆ ಹಾಗೆ ತುಂಗಾ ಎಂಬಲ್ಲಿ ನೆಲೆಸಿದ ವಿಕ್ರಮಚೆಂಗಾಳ್ವನು ಸುತ್ತಮುತ್ತಲ ಬೇಡರ ನಾಯಕರನ್ನು ಸೋಲಿಸಿ ರಾಜ್ಯವನ್ನು ವಿಸ್ತರಿಸಿದ ಎಂಬ ಅಂಶ.

ವಿಕ್ರಮಚೆಂಗಾಳ್ವನು ದ್ವಾರಾವತಿ ಅಥವಾ ದ್ವಾರಕಾ ಪಟ್ಟಣದಿಂದ ದಕ್ಷಿಣಕ್ಕೆ ವಲಸೆ ಬಂದವನೆಂದು ಹೇಳಿಕೊಂಡಿರುವಂತೆಯೇ ಶಾಂತರರ ಒಂದು ಶಾಸನ ಅವರ ದೊರೆ ಜಿನದತ್ತನು ದಕ್ಷಿಣಕ್ಕೆ ಬಂದನೆಂದು ಹೇಳುತ್ತದೆ. ಆತ ತನ್ನ ತಂದೆಯ ನರಭಕ್ಷಕ ಪ್ರವೃತ್ತಿಯಿಂದ ಬೇಸತ್ತಿದ್ದುದು ಹಾಗೆ ಆತ ವಲಸೆ ಬರಲು ಕಾರಣವೆಂದು ಶಾಸನ ಹೇಳುವುದು ಕುತೂಹಲಕಾರಿಯಾಗಿದೆ.

ಪ್ರಾರಂಭಿಕ ಮಧ್ಯಕಾಲದ ರಾಜಕೀಯ ವ್ಯವಸ್ಥೆಯಲ್ಲಿ ಅಧಿಕಾರ ಹಂಚಿಕೆಯ ವ್ಯತ್ಯಾಸಗಳ ಗ್ರಹಿಕೆಯ ಸಂಕೀರ್ಣತೆಯನ್ನು ಮೇಲೆ ಪ್ರಸ್ತಾಪಿಸಲಾಗಿದೆ. ಈ ಸಂಕೀರ್ಣತೆಯ ಇನ್ನೊಂದು ಮುಖ ರಾಜಕೀಯ ಅಧಿಕಾರ ಕ್ಷೇತ್ರದ ವ್ಯಾಪ್ತಿಯನ್ನು ಕುರಿತಾಗಿದೆ. ರಾಜಕೀಯ ಅಧಿಕಾರ ರಾಜನ ಅಧಿಕಾರ ಎಷ್ಟೆಂಬುದರಿಂದ ವ್ಯಾಖ್ಯಾನಿತವಾಗುತ್ತಿತ್ತು. ಆದರೆ ರಾಜ್ಯವು ನಿರ್ದಿಷ್ಟ

ಭೂಪ್ರಾದೇಶಿಕ ಅರ್ಥದಲ್ಲಿ ವ್ಯಾಖ್ಯಾನಿಸಲ್ಪಡುತ್ತಿರಲಿಲ್ಲ. ರಾಜ್ಯವೆಂಬುದು ಜಡವಾಗಿರದೆ ಸ್ವಾಭಾವಿಕವಾಗಿಯೇ ಕ್ರಿಯಾಶೀಲವಾದ ಘಟಕವಾಗಿತ್ತು.

ಆಳುವ ವಂಶಗಳ ಉಗಮ ಪ್ರತಿನಿಧಿಸುವ ರಾಜ್ಯ ಸಮಾಜವು ಗುಪ್ತರ ಆಳ್ವಿಕೆಯ ಅಂತ್ಯದ ಹೊತ್ತಿಗೆ ಪ್ರಧಾನಾಕರ್ಷಣೆಯ ಸಾರಭಾಗಗಳಲ್ಲೆಲ್ಲ ಹರಡಿ ಪರಿಘ ಭಾಗಗಳಲ್ಲೂ ಗಟ್ಟಿಯಾಗಿ ಬೇರುಬಿಡತೊಡಗಿತ್ತು. ಆದಾಗ್ಯೂ ಕ್ರಿ.ಶ. ಒನೇ ಶತಮಾನದಿಂದ ಭಾರತದ ವಿವಿಧ ಪರದೇಶಗಳ ಶಾಸನಗಳು ವಿವರವಾದ ವಂಶಾವಳಿಗಳನ್ನು ಒದಗಿಸಿಕೊಡುವುದು ಗಮನಾರ್ಹ. ಆಳುವ ವಂಶಗಳ ತಥಾಕಥಿತ ಸ್ಥಳೀಯತೆಯನ್ನು ಒಂದು ಪೌರಾಣಿಕ ಪರಂಪರೆಯೊಂದಿಗೆ ಜೋಡಿಸುವ ಅಥವ ಪೌರಾಣಿಕ ಕಲಿಗಳಿಂದ ತಮ್ಮ ವಂಶಾನ್ವಯಗಳನ್ನು ನಿಷ್ಪನ್ನಗೊಳಿಸುವ ಒಂದೆರಡು ಉದಾಹರಣೆಗಳನ್ನು ಆಗಲೇ ಗಮನಿಸಿದ್ದೇವೆ.

ಮಲೆನಾಡು ಕರ್ನಾಟಕ ಎಂದು ಗೊತ್ತಾದ ಸೀಮಿತ ಭೌಗೋಲಿಕ ವ್ಯಾಪ್ತಿಯಲ್ಲಿಯೇ ವಾಸ್ತವವಾಗಿ ಆಳ್ವಿಕೆ ಮಾಡುತ್ತಿದ್ದ ವಂಶಗಳ ಸಂಖ್ಯೆಯಲ್ಲಿ ಕಾಲದಿಂದ ಕಾಲಕ್ಕೆ ವೃದ್ಧಿಯಾದ ಸೂಚನೆಗಳು ಈ ಸಂಕಲನದ ಪ್ರಬಂಧಗಳಲ್ಲಿ ದೊರೆಯುತ್ತವೆ. ಗಮನಿಸಬೇಕಾದ ಅಂಶವೆಂದರೆ ಕೇಂದ್ರಪ್ರಾಧಾನ್ಯದ ಪ್ರದೇಶಗಳಲ್ಲೂ ರಾಜ್ಯ ಸಮಾಜಕ್ಕೆ ಒಂದು ಸ್ಥಿರ ನೆಲೆ ಇರಲಿಲ್ಲ. ಸೈನ್ಯ ಶಕ್ತಿಯ ಸಂಘಟನೆ ಒಂದು ಆಳುವ ವಂಶವನ್ನು ಸ್ಥಾನಚ್ಯುತಗೊಳಿಸುವುದು ಮಾತ್ರವಲ್ಲ ಒಂದು ಹೊಸ ನೆಲೆ ಹಾಗೂ ರಾಜಕೀಯ ಸಂಬಂಧಗಳ ಹೊಸದೇ ಆದ ಒಂದು ಜಾಲವನ್ನು ನಿರ್ಮಿಸಬಹುದಿತ್ತು. ಬದಾಮಿ ಚಾಲುಕ್ಯರಿಂದ ರಾಷ್ಟ್ರಕೂಟರಿಗೆ ಅಲ್ಲಿಂದ ಮತ್ತೆ ಕಲ್ಯಾಣ ಚಾಲುಕ್ಯರಿಗೆ ಹೀಗೆ ಉಂಟಾದ ಬದಲಾವಣೆಗಳು ಬರೀ ಆಳುವ ಕುಲಗಳ ಬದಲಾವಣೆಗಳಾಗಿರದೆ, ರಾಜ್ಯ ಸಮಾಜಗಳ ದೀರ್ಘ ಹಾಗೂ ಸತತ ಇತಿಹಾಸವನ್ನು ಕಂಡುಂಡ ಭೌಗೋಳಿಕ ಸಂದರ್ಭಗಳಲ್ಲಿ ಕೂಡ ರಾಜ್ಯದ ನೆಲೆಯನ್ನು ಪುನರ್‌ವ್ಯಾಖ್ಯಾನಿಸಿದ ಬೆಳವಣಿಗೆಗಳಾಗಿದ್ದವು ಎಂದು ಡಾ. ಚಟ್ಟೋಪಾಧ್ಯಾಯ ಅಭಿಪ್ರಾಯ ಪಡುತ್ತಾರೆ.

ಒಂದು ಆಳುವ ವಂಶ ಹಾಗೂ ನಿಶ್ಚಿತ ಪ್ರಾದೇಶಿಕ ಘಟಕಗಳ ಮಧ್ಯೆ ಸಂವಾದಿ ಸಂಬಂಧವೊಂದು ಸದಾಕಾಲ ಇತ್ತೇ? ಪ್ರಾರಂಭಿಕ ಮಧ್ಯಕಾಲೀನ ಪುರಾವೆ ಇದಕ್ಕೆ ವ್ಯತಿರಿಕ್ತವಾಗಿದೆ. ಕದಂಬರ ಪ್ರಭಾವಕ್ಷೇತ್ರಗಳು ಹಲವಾರು ಇದ್ದುದನ್ನು ಉದಾಹರಣೆಯಾಗಿ ನೋಡಬಹುದು. ಬನವಾಸಿ, ಗೋವಾ ಮೊದಲಾದವುಗಳಂತೆ ಹಾಲೆಬೇಲೂರಿನಲ್ಲೂ ಕದಂಬರ ಒಂದು ಶಾಖೆ ಇದ್ದ ಕುರಿತ ಲೇಖನ ಇಲ್ಲಿದೆ. ಹಾಗೆಯೇ ಸಿಂಧ ಆಳುವ ವಂಶಕ್ಕೆ ಸಂಬಂಧಿಸಿದಂತೆ ಬೆಳಗುತ್ತಿ, ಬಾಗಡಗೆ, ಯಲಬುರ್ಗಿ, ರಂಜೋಳ, ಮುಳಗುಂದ, ಕೋಗಳಿನಾಡು, ಗುತ್ತಿ ಹಾಗೂ ಕುರುಗೋಡ ಸಿಂಧಾನ್ವಯಗಳನ್ನು ನೋಡಬಹುದು. ಅಂದರೆ ಒಂದು ಆಳುವ ವಂಶ ಮೂಲನೆಲೆಯೊಂದರಿಂದ ಹೊರಟು ಶಾಖೋಪಶಾಖೆಗಳಾಗಿ ಬೇರೆ ಪ್ರಾದೇಶಿಕ ಘಟಕಗಳಲ್ಲಿ ಹರಡುತ್ತಿತ್ತು. ಉದಾಹರಣೆಗೆ ಬಸವಾಪಟ್ಟಣ, ಸಂತೆಬೆನ್ನೂರು, ತರೀಕೆರೆ ನಾಯಕರೆಂದು ಕರೆಯಲ್ಪಡುವ ಅನ್ವಯಗಳೆಲ್ಲ ತಮ್ಮನ್ನು ಸಂತೆಬೆನ್ನೂರು ನಾಯಕರೆಂದು ಕರೆದುಕೊಳ್ಳುವ ಒಂದೇ ವಂಶಕ್ಕೆ ಸೇರಿದವರು. ಅವರ ಮೂಲ ನೆಲೆ ಬಸವಾಪಟ್ಟಣ. ಇದರರ್ಥ ಆಳುವ ವಂಶಗಳು ನಿಶ್ಚಿತ ಪ್ರಾದೇಶಿಕ ಘಟಕಗಳೊಂದಿಗೆ ಗುರುತಿಸಿಕೊಂಡು ಜಡವಾಗಿ ನಿಲ್ಲಲಿಲ್ಲ. ಅವುಗಳ ಹರಡುವಿಕೆ ಪರಿವರ್ತನಶೀಲವಾಗಿತ್ತು. ಬೆಳಗುತ್ತಿಯ ಸಿಂಧರು ತಮ್ಮನ್ನು ಕರಹಾಟ ಪುರವರಾಧೀಶ್ವರರೆಂದು ಕರೆದುಕೊಂಡದ್ದನ್ನು ಗಮನಿಸಬಹುದು. ಮಹಾರಾಷ್ಟ್ರದ ಸಾತಾರಾ ಜಿಲ್ಲೆಯ ಕರಹಾಡ ಇವರ ಮೂಲವೆಂಬುದು ಇದರಿಂದ ಗೊತ್ತಾಗುತ್ತದೆ.

ಆಳುವ ವಂಶಗಳ ಅಧಿಕಾರ ಸ್ಥಾಪನೆ ಹಾಗೂ ಕ್ರೋಢೀಕರಣ ಏಕರೂಪವಾಗಿ ನಡೆಯಲಿಲ್ಲ. ರಾಜ್ಯ ಪೂರ್ವ ರಾಜಕೀಯ ವ್ಯವಸ್ಥೆಯ ಪ್ರದೇಶಗಳಲ್ಲಿ ನೆಲೆಸಿದ ಕುಲಗಳು ವಿಸ್ತೃತವಾಗಿ ಆ ಪ್ರದೇಶದ ಆರ್ಥಿಕ ವ್ಯವಸ್ಥೆಯನ್ನು ಮಾರ್ಪಡಿಸಬಹುದಿತ್ತು. ಕೆಲ ಸಂದರ್ಭಗಳಲ್ಲಿ ಆಳುವ

ವಂಶಗಳ ಉಗಮವು ಪ್ರಾಥಮಿಕ ರಾಜ್ಯ ರಚನೆ ಹಾಗೂ ಆಳ್ವಿಕೆಯ ಅರಸೊತ್ತಿಗೆ ಸಿದ್ಧಾಂತಕ್ಕೆ ಸಮನಾಗಿರಬಹುದಿತ್ತು. ಅಥವಾ ಸರಳವಾಗಿ ಒಂದು ಆಳುವ ವಂಶದ ಸ್ಥಾನದಲ್ಲಿ ಇನ್ನೊಂದು ಆಳುವ ವಂಶದ ಸ್ಥಾಪನೆಯಾಗಿರಬಹುದಿತ್ತು. ಈ ಎಲ್ಲ ಪ್ರಕ್ರಿಯೆಗಳು ಏಕಕಾಲಕ್ಕೆ ನಡೆಯಬಹುದಿತ್ತು. ಏಕೆಂದರೆ ರಾಜಕೀಯ ವ್ಯವಸ್ಥೆಗಳು ಒಂದರೊಡನೊಂದು ಬೆರೆತು ಅಂತರ್ ಕ್ರಿಯಾತ್ಮಕವಾಗಿದ್ದವು. ಬಹಳ ಸಲ ಈ ಪ್ರಕ್ರಿಯೆಗಳು ಹೊಸ ಅಧಿಕಾರ ಕೇಂದ್ರ ಮತ್ತು ಸಂಬಂಧಗಳ ರಚನೆಯಲ್ಲಿ ಪರಿಸಮಾಪ್ತಿಯಾಗಿ ಒಂದು ಕುಲದ ಮೂಲ ಗುರುತು ಅಳಿಸಿಹೋಗಬಹುದಿತ್ತು.

ಆಳುವ ವಂಶಗಳ ಹರಡುವಿಕೆ ಆಶ್ಚರ್ಯಕರವೆನ್ನಿಸುವಷ್ಟು ವ್ಯಾಪಕವಾಗಿದ್ದರೂ ಆಳುವ ವಂಶ ಹಾಗೂ ಪ್ರದೇಶಗಳ ನಡುವಿನ ಸಂಬಂಧಗಳನ್ನು ಪರಿಶೀಲಿಸಬಹುದಾದ ಕೆಲ ಸ್ತರಗಳಿವೆ. ಈ ಸಂಬಂಧ ಆಯಾ ವಂಶಗಳು ಪ್ರಬಲವಾಗಿದ್ದ ಸೀಮೆಯ ಹೆಸರುಗಳ ರೂಪದಲ್ಲಿ ವ್ಯಕ್ತಗೊಳಿಸಲ್ಪಟ್ಟಿದೆ. ಗಂಗವಾಡಿ, ನೊಳಂಬವಾಡಿ ಇವು ಸುಪರಿಚಿತ ಉದಾಹರಣೆಗಳು. ಕೊಂಗಾಳ್ವ ಎಂಬುದು ಆಳುವ ವಂಶವೊಂದನ್ನು ಕೊಂಗನಾಡು, ಕೊಂಗಲ್ನಾಡು, ಕೊಂಗವಿಷಯ ಇತ್ಯಾದಿಯಾಗಿ ಉಲ್ಲೇಖಿಸಲ್ಪಟ್ಟ ಒಂದು ಪ್ರದೇಶದೊಂದಿಗೆ ಗುರುತಿಸುವ ಶಬ್ದವಾಗಿದೆ. ಹಾಗೆಯೇ ಚಂಗಾಳ್ವರ ಮೂಲನೆಲೆಯಾಗಿದ್ದ ಹುಣಸೂರು ಮತ್ತು ಸುತ್ತಮುತ್ತಲ ಪ್ರದೇಶಗಳೇ ಚಂಗನಾಡು. ಅಂತೆಯೇ ಸಾಂತರರು ಆಳಿದ ಪ್ರದೇಶ ಸಾಂತಳಿಗೆ ಸಾಯಿರವಾಯಿತು.

ಒಂದು ವಂಶದ ಅಧಿಕಾರಕೇಂದ್ರ ಎರಡು ಅಥವಾ ಮೂರು ಜಿಲ್ಲೆಗಳಷ್ಟು ಪ್ರದೇಶವಾಗಿರಬಹುದಿತ್ತು. ಒಂದು ಆಳುವ ವಂಶದ ಅಧಿಕಾರ ಸ್ಥಳೀಯ ಅಥವಾ ಪ್ರಾದೇಶಿಕ ವ್ಯಾಪ್ತಿಯನ್ನು ಮೀರಿ ಬೆಳೆದಾಗ ಆಡಳಿತ ಘಟಕಗಳಾಗಿ ನಾಡು ಅಥವಾ ಇತರ ಘಟಕಗಳ ಪುನರ್ ಸಂಘಟನೆಯಾಗುತ್ತಿತ್ತು. ಇಂಥ ಆಡಳಿತ ಘಟಕಗಳು ಪೂರ್ವಸ್ಥಿತ ಆಳುವ ಕುಲ ಪ್ರದೇಶಗಳನ್ನು ಅಂತರ್ಗತವಾಗಿಸಿಕೊಂಡು ಉದಿಸುತ್ತಿದ್ದವು.

ಆಳುವ ವಂಶಗಳ ರಚನೆಯನ್ನು ಪ್ರಾರಂಭಿಕ ಮಧ್ಯಕಾಲೀನ ಭಾರತದಲ್ಲಿ ಸಾಮಾಜಿಕ ಚಲನೆ ಪ್ರಕ್ರಿಯೆಯ ಪರಿಪ್ರೇಕ್ಷ್ಯದಲ್ಲಿಯೂ ನೋಡಬಹುದು. ಕ್ಷತ್ರಿಯೀಕರಣಕ್ಕೆ ಅನುಕೂಲಕರವಾಗಿದ್ದ ವಾತಾವರಣ ಮತ್ತು ಮುಕ್ತ ರಾಜಕೀಯ ಸನ್ನಿವೇಶವೊಂದರಲ್ಲಿ ಯಾವುದೇ ವಂಶ ಅಥವಾ ಪ್ರಮುಖ ಜನವರ್ಗದ ಘಟಕವು ಸುಸಂಗತ ಬಲಸಂಘಟನೆಯ ಮೂಲಕ ರಾಜಕೀಯ ಅಧಿಕಾರ ಘೋಷಿಸಬಹುದಿತ್ತು. ದುರ್ಗಮವಾದ ಅಡವಿಗಳಲ್ಲಿ ಪಡೆಗಳನ್ನು ಕಟ್ಟಿಕೊಂಡು ಬದುಕುತ್ತಿದ್ದ, ಪಕ್ಕದ ಅರೆ ಬಯಲುನಾಡಿನ ವ್ಯವಸಾಯ ರಾಜ್ಯಗಳಲ್ಲಿನ ಹಳ್ಳಿಗಳಿಗೆ ನುಗ್ಗಿ ಕಿರುಕುಳ ನೀಡುತ್ತಿದ್ದ ಸಮಾಜವೊಂದು ಆಳುವ ವಂಶವಾಗಿ ಬೆಳೆದದ್ದನ್ನು ಹೊಸಗುಂದದ ಅರಸರು ಎಂಬ ಈ ಸಂಗ್ರಹದ ಲೇಖನದಲ್ಲಿ ನೋಡಬಹುದು. ಬಿಲ್ಲಾಳುಗಳಾಗಿದ್ದು ಅಡವಿಯನ್ನೇ ನೆಚ್ಚಿಕೊಂಡ ಬೇಟೆಗಾರ ಬಡಕಟ್ಟಿನವರಾಗಿದ್ದ ಈ ಭಿಲ್ಲರ ಜನಾಂಗೀಯ ವಿವರಗಳು ಶಾಸನವೊಂದರಲ್ಲಿರುವ ಬಿಸಿಲು ಪಡ್ಡೆಕಾರರು, ಕಾಡಾನೆ ಮಲ್ಲರು, ನೋಡಿ ತಪ್ಪದೆಸೆವ ಕಣ್ಣಂಬಿನವರು, ಅರಣ್ಯ ಭಂಡಾರರು ಮೊದಲಾದ ಶಬ್ದಗಳಲ್ಲಿ ವ್ಯಕ್ತವಾಗುತ್ತವೆ. ಇಂಥವರನ್ನು ಮಲೆಪರು, ಬೇಡರು, ಕಿರಾತರು ಎಂದೆಲ್ಲ ಅರೆ ಬಯಲುನಾಡಿನ ಶಾಸನಗಳಲ್ಲಿ ಕರೆಯಲಾಗಿದೆ. ಸುಮಾರು ಮೂರುವರೆ ಶತಮಾನಗಳ ಕಾಲ ಬಾಳಿದ ಹೊಯ್ಸಳ ರಾಜ್ಯದ ಉಗಮವು ಮಲೆನಾಡು ಪಡೆಗಳನ್ನು ಒಂದು ಹಂತದಲ್ಲಿ ತಮ್ಮ ಅಂಕೆಯಲ್ಲಿಟ್ಟುಕೊಂಡ ಮಲೆಪರು ಅಥವಾ ಸೊಸೆಯೂರು ಅರಣ್ಯದ ಗಿರಿನಾಯಕರಿಗೆ ಹೋಗುತ್ತದೆ. ಹೊಯ್ಸಳರು ತಮ್ಮನ್ನು ಎಲ್ಲಿಯೂ ಮಲೆಪರೆಂದು ಗುರುತಿಸಿಕೊಂಡಿಲ ಬದಲಿಗೆ ಮಲೆಪರ ಸಂಹಾರಕರು ತಾವೆಂಬ ಅರ್ಥದಲ್ಲಿ ಮಲೆಪರೊಳ್ಗಂಡ ಎಂಬ ಬಿರುದನ್ನು ಧರಿಸಿದ್ದಾರೆ. ಹೀಗಿರುವಾಗ ಮಲೆಪರು ಅಂದರೆ ಯಾರು ಎಂಬ ಪ್ರಶ್ನೆ ಬರುತ್ತಿದೆ ಎಂದು ಹಾರುವ ಬೆಲುಹೂರ ಕದಂಬರಿಗೆ ಸಂಬಂಧಿಸಿದ ಇಲ್ಲಿಯ ಲೇಖನದಲ್ಲಿ ಕೇಳಲಾಗಿದೆ. ಆದರೆ

ಹೊಯ್ಸಳರನ್ನು ಮಲೆಪರಿಗೆ ಹೊರತಾಗಿ ನೋಡಬೇಕೆನ್ನುವ ಸೂಚನೆಯೇನೂ ಆ ಪುರಾವಣೆಗಳಲ್ಲಿ ಕಾಣುವುದಿಲ್ಲ.

ಆಳುವ ವಂಶವೊಂದು ರೂಪುಗೊಳ್ಳುವ ಕ್ರಮ ಹಾಗೂ ಅದು ತಲುಪಬಹುದಾದ ಅಧಿಕಾರದ ಹಂತ ಎಲ್ಲ ಪ್ರದೇಶಗಳಲ್ಲಿ ಒಂದೇ ಆಗಿರಲಿಲ್ಲ. ಸಾಮಾನ್ಯವಾಗಿ ಮೇಲ್ಮುಖ ಚಲನೆ ಕೃಷಿಕ ಎಂದು ಸ್ಥೂಲವಾಗಿ ಲಕ್ಷಿಸಬಹುದಾದ ಮೂಲದಿಂದಾಗಿರುತ್ತಿತ್ತು. ಉದಾಹರಣೆಗೆ ಚೆಂಗಾಳ್ವರು ಮೂಲತಃ ಒಕ್ಕಲಿಗರು. ನಾಗಮಂಗಲ ತಾಲೂಕಿನ ಲಾಳನಕೆರೆಯಿಂದ ಹಿಡಿದು ಕೊಡಗಿನ ಸೋಮವಾರಪೇಟೆಯವರೆಗೂ ಈ ಒಕ್ಕಲಿಗರು ಹಬ್ಬಿಕೊಂಡಿದ್ದಾರೆ. ತಮ್ಮನ್ನು ಚೆಂಗಾಳ್ವರೆಂದು ಹೇಳಿಕೊಳ್ಳುವ ಲಾಳನಕೆರೆ ಮೂಲದ ಒಕ್ಕಲಿಗರು ಹುಣಸೂರು, ಪೆರಿಯಾಪಟ್ಲ, ಕೆ.ಆರ್. ಪೇಟೆ, ಸೋಮವಾರಪೇಟೆ ತಾಲೂಕುಗಳಲ್ಲಿ ಹರಡಿಕೊಂಡಿರುವುದನ್ನು ಚೆಂಗಾಳ್ವರ ಕುರಿತ ಇಲ್ಲಿಯ ಪ್ರಬಂಧ ಉಲ್ಲೇಖಿಸಿದೆ.

ಒಂದು ಹಂತದವರೆಗೆ ಸ್ವಾಯತ್ತವಾಗಿದ್ದ ಪ್ರಭುತ್ವಗಳ ಈ ಚದುರಿದಂತಿದ್ದ ಕೇಂದ್ರಗಳನ್ನು ಸಾಮಂತ ವ್ಯವಸ್ಥೆಯೆಂದು ಸ್ಥೂಲವಾಗಿ ಗುರುತಿಸಲ್ಪಡುವ ವ್ಯವಸ್ಥೆ ಪ್ರತಿನಿಧಿಸುತ್ತದೆ. ಎಲ್ಲ ಪ್ರಧಾನ ರಾಜಕೀಯ ವ್ಯವಸ್ಥೆಗಳಲ್ಲಿಯೂ ಇವು ಒಂದಿಲ್ಲೊಂದು ರೂಪದಲ್ಲಿ ಇದ್ದವು.

ಸಾಮಂತ ಎಂಬುದು ಪ್ರಾರಂಭಿಕ ಮಧ್ಯಕಾಲದಲ್ಲಿ ಬಳಕೆಯಲ್ಲಿದ್ದು ದಿನೇ ದಿನೇ ವೃದ್ಧಿಸುತ್ತಿದ್ದ ವಿವಿಧ ಉಪಾಧಿಗಳನ್ನು ಹೊಂದಿದ ವಿಶಾಲ ಹರಹು ಉಳ್ಳ ಒಂದು ವರ್ಗವಾಗಿತ್ತು. ಎಲ್ಲ ಉಪಾಧಿಗಳೂ ಏಕಕಾಲಕ್ಕೆ ಹುಟ್ಟಿಕೊಳ್ಳಲಿಲ್ಲ. ಆದರೆ ೧೨-೧೩ನೇ ಶತಮಾನದ ಹೊತ್ತಿಗೆ ಮಹಾಸಾಮಂತ, ಸಾಮಂತ, ಮಹಾ ಮಂಡಳೇಶ್ವರ, ಮಂಡಳೇಶ್ವರ ಮೊದಲಾದವುಗಳು ರಾಜಕೀಯ ವ್ಯವಸ್ಥೆಯೊಂದರ ಸೂಚಕಗಳಾಗಿ ಬೆಳೆದವು. ಅಧಿಕಾರಶಾಹಿಗೆ ತುಂಬ ಸೀಮಿತ ಪಾತ್ರವಿರುತ್ತಿದ್ದ ಈ ವ್ಯವಸ್ಥೆ ಶ್ರೇಣೀಕೃತ ರಚನೆಯೊಂದರ ಲಕ್ಷಣಗಳನ್ನು ಮೈಗೂಡಿಸಿಕೊಂಡಿತು. ರಾಜಕೀಯದಿಂದ ಹೊರತಾದ ಮಾತುಗಳಲ್ಲಿ ಸಾಮಂತರು ಭೂ ಸ್ವಾಮ್ಯ ಹೊಂದಿದ ಶ್ರೀಮಂತವರ್ಗವಾಗಿದ್ದರು.

ಸಾಮಂತ ವ್ಯವಸ್ಥೆ ಪ್ರಾರಂಭಿಕ ಮಧ್ಯಕಾಲೀನ ರಾಜಕೀಯ ಪದ್ಧತಿಯ ಮುಖ್ಯ ಲಕ್ಷಣವಾಗಿತ್ತು. ಕ್ರಮೇಣ ಸಾಮಂತರು ರಾಜ್ಯ ವ್ಯವಸ್ಥೆಯ ರಚನೆಯೊಳಗೆ ಅಂತರ್ಗತಗೊಳಿಸಲ್ಪಟ್ಟರು. ರಾಜಕೀಯ ರಚನೆಯಲ್ಲಿ ಇತರ ಎಲ್ಲ ಹಂತಗಳ ಸಂಬಂಧಗಳಿಗಿಂತ ಅಧಿಪತಿ ಆಧೀನ ಸಂಬಂಧ ಪ್ರಬಲವಾಯಿತು.

ಗುಪ್ತರ ಕಾಲಾವಧಿಯಿಂದ ವಿಸೇಷವಾಗಿ ಬೆಳೆದು ಬಂದ ಈ ವ್ಯವಸ್ಥೆಯನ್ನು **Indian Feudalish** ಮಾದರಿಯು ವಿಕೇಂದ್ರೀಕೃತ ರಾಜ್ಯಾಡಳಿತ ಕ್ರಮದ ಸೂಚನೆಯಾಗಿ ನೋಡುತ್ತದೆ. ಈ ಪರಿಕಲ್ಪನೆಗೆ ಪರ್ಯಾಯವಾಗಿ ಡಾ. ಚಟ್ಟೋಪಾಧ್ಯಾಯ ಅವರು ರಾಜಕೀಯ ಅನುಕಲನ **(Political Integration)** ಎಂಬ ಪ್ರಮೇಯವನ್ನು ಪ್ರತಿಪಾದಿಸುತ್ತಾರೆ. ಸಮತಲ ವಿಸ್ತಾರಗೊಳ್ಳುತ್ತಿದ್ದ ರಾಜ್ಯ ವ್ಯವಸ್ಥೆಯು ವಿವಿಧ ಸ್ಥಳೀಯ ನೆಲೆಗಳಲ್ಲಿ ಆಳುವ ವಂಶಗಳು ಪ್ರತಿನಿಧಿಸುತ್ತಿದ್ದ ರಾಜ್ಯಾಡಳಿತ ವ್ಯವಸ್ಥೆಗಳೊಂದಿಗೆ ಅಂತಸ್ಸಂಬಂಧವನ್ನು ಏರ್ಪಡಿಸಿಕೊಳ್ಳಬೇಕಾಗಿತ್ತು. ಆ ರಾಜಕೀಯ ಅನುಕಲನದ ತುರ್ತು ಇದ್ದುದು ಹಾಗೆ ಏರ್ಪಡಿಸಿಕೊಳ್ಳಬೇಕಿದ್ದ ಸಂಬಂಧದಲ್ಲಿ. ಏಕೆಂದರೆ ರಾಜ್ಯಾಡಳಿತ ವ್ಯವಸ್ಥೆಗಳ ರಚನೆ ಪೂರ್ಣತಃ ಪೂರ್ವಸ್ಥಿತ ಅಧಿಕಾರಕೇಂದ್ರಗಳ ಉಚ್ಚಾಟನೆಯನ್ನು ಆಧರಿಸಿರಲಿಲ್ಲ. ಅಸ್ತಿತ್ವದಲ್ಲಿರುವ ಅಧಿಕಾರ ಕೇಂದ್ರಗಳನ್ನು ಒಳಗೊಳ್ಳುವುದು ಈ ರಚನೆಯ ನಿರ್ಮಾಣದಲ್ಲಿ ಪ್ರಮುಖ ವಿಧಾನವಾಗಿತ್ತು. ರಾಜಕೀಯ ಸಂಬಂಧಗಳು ನಿಯಮಿತವಾಗಿ ಅಧಿಪತಿ ಮತ್ತು ಅಧೀನ ರಾಜರುಗಳ ನಡುವಿನ ಸಂಬಂಧಗಳೆಂಬಂತೆ ವ್ಯಕ್ತಗೊಂಡಿರುವುದು ಇದನ್ನೇ ಸೂಚಿಸುತ್ತದೆ.

ಅಧಿಪತಿಯ ಉಗಮದ ಮೂಲವೂ ಬಹುತೇಕವಾಗಿ ಸ್ಥಳೀಯ ಕುಲಾಧಿಕಾರದಲ್ಲಿದ್ದುದರಿಂದ ಒಂದು ಕುಲವು ಸೈನ್ಯಸಂಪನ್ಮೂಲಗಳನ್ನು ಕ್ರೋಢೀಕರಿಸುವ ಮೂಲಕ ಹಾಗೂ ಇತರ ಕುಲಗಳ ವಿವಿಧ ರೀತಿಯ ಬೆಂಬಲದ ಮುಲಕ ಸ್ಥಳೀಯತೆಯನ್ನು ಮೀರಿದ ಅಧಿಕಾರವಾಗಿ ವಿಸ್ತರಣೆ ಗೊಳ್ಳುತ್ತಿತ್ತು. ಅದಕ್ಕಿಂತ ಮುಖ್ಯವಾಗಿ ಈ ಕ್ರೋಢೀಕರಣ – ವಿಸ್ತರಣೆಯ ಪ್ರಕ್ರಿಯೆಯಲ್ಲಿ ಹಸ್ತಗತವಾದ ಸಂಪನ್ಮೂಲಗಳ ಪುನರ್ವಿತರಣೆಯಷ್ಟೇ ಅಲ್ಲದೆ ಪದವಿ ಶ್ರೇಣೀಕರಣದ ಒಂದು ವ್ಯವಸ್ಥೆಯೂ ಅಗತ್ಯವಿತ್ತು.

ರಾಜಕೀಯ ರಚನೆಯಲ್ಲಿ ಒಂದು ಮುಖ್ಯ ಘಟಕವಾಗಿ 'ಸಾಮಂತ'ದ ರೂಪಾಂತರ ಸ್ವತಃ ಈ ಪದವಿಶ್ರೇಣೀಕರಣದ ಒಂದು ನಿದರ್ಶನವಾಗಿದೆ ಮತ್ತು ಅನುಕಲನದ **(Integration)** ರಾಜಕೀಯ ಅಡಿಪಾಯವನ್ನು ಸ್ಪಷ್ಟಗೊಳಿಸುತ್ತದೆ. ಈ ಪದವಿ ಅಥವ ಅಂತಸ್ತುಗಳ ಶ್ರೇಣೀಕರಣ ಪಾತ್ರ ಮತ್ತು ಸೇವೆಗಳಿಗೆ ಸಂಬಂಧಿಸಿತ್ತು. ಸಂಧಿವಿಗ್ರಹಿ, ದಂಡನಾಯಕದಂಥ ಉಪಾಧಿಗಳು ಮತ್ತು ಸಾಮಂತ ವ್ಯವಸ್ಥೆಯಲ್ಲಿಯ ಅಂತಸ್ತುಗಳ ಶ್ರೇಣಿಕರಣದ ನಡುವೆ ಒಂದು ಪಾರಸ್ಪರಿಕ ಸಂಬಂಧವೂ ರೂಪಗೊಂಡಿತ್ತು.

ತಂತ್ರಪಾಳ ಹೆಮ್ಮಾಡಿದೇವನು 'ಪ್ರಧಾನ' ಪದವಿ ಪಡೆದ ಕುರಿತು ಕ್ರಿ.ಶ. ೧೧೭೭-೭೮ರ ೨ನೇ ಬಲ್ಲಾಳನ ಕೂಡಲೂರು ಶಾಸನ ದಾಖಲಿಸುವ ವಿವರಗಳು ಆಸಕ್ತಿದಾಯಕವಾಗಿವೆ. ತಂತ್ರಪಾಲ ಹೆಮ್ಮಾಡಿಯಂಣ ಅಯ್ಯಾವೊಳೆ (ಐಹೊಳೆ)ಯಿಂದ ವಲಸೆ ಬಂದು ಕೊಡಗು ನಾಡಿನಲ್ಲಿ ನೆಲೆಸಿದ್ದ ಬಳೆಗಾರ ಕುಲದ ವ್ಯಕ್ತಿ. ಸಿಂಹಾಸನಕ್ಕಾಗಿ ತಂದೆಯ ವಿರುದ್ಧ ದಂಗೆಯೆದ್ದು ಹೊಯ್ಸಳ ೨ನೇ ಬಲ್ಲಾಳನು ಮಲೆನಾಡಿನ ಕಡೆ ಹೋದಾಗ ತಂತ್ರಪಾಳ ಹೆಮ್ಮಾಡಿಯು ಆತನ ಪರವಾಗಿ ನಿಂತು ಕೊಂಗಾಳ್ವ ಚೆಂಗಾಳ್ವರೂ ಸೇರಿದಂತೆ ಮಲೆಯ ಮಂಡಳಿಕರು ಮತ್ತು ಪ್ರಜೆಗವುಂಡುಗಳು ರಾಜಕುಮಾರನನ್ನು ಕಂಡು ನೆರವು ನೀಡುವಂತೆ ಪ್ರೇರೇಪಿಸಿರಬೇಕು. ಆತನು ಬಲ್ಲಾಳನಿಗೆ ಪಟ್ಟಗಟ್ಟಿಸಿ ತಾನೂ ಪ್ರಧಾನ ಪದವಿ ಪಡೆದನೆಂದು ಶಾಸನ ತಿಳಿಸುತ್ತದೆ.

ಅಂತಸ್ತುಗಳ ಶ್ರೇಣೀಕರಣ ಪದ್ಧತಿ ಕ್ರಮೇಣ ಗಟ್ಟಿಗೊಂಡು ಪ್ರಾರಂಭಿಕ ಮಧ್ಯಕಾಲೀನ ಸಮಾಜವನ್ನು ಎಷ್ಟು ಪ್ರಭಾವಿಸಿತೆಂದರೆ ಪ್ರತಿಯೊಂದು ಆಳುವ ವಂಶಗಳಲ್ಲಿರುವವರ ಅಂತಸ್ತುಗಳು ಉಪಾಧಿಗಳ ಪರಿಭಾಷೆಯಲ್ಲೇ ವ್ಯಕ್ತಗೊಳ್ಳುವಂತಾಯಿತು. ಅದಿಯರ ಕುಲಕ್ಕೆ ಸೇರಿದ ಬಿಲ್ಲೇಶ್ವರನನ್ನು ಕುಲದೇವತೆಯಾಗಿ ಹೊಂದಿದ ಕೆಲ ಅರಸು ಮನೆತನಗಳಲ್ಲಿ ಹೊಸಗುಂದದ ಅರಸರು, ಅವರೊಂದಿಗೆ ಪೈಪೋಟಿ ನಡೆಸಿದ ನಾಡಕಳಸಿ ಹಾಗೂ ಜೋಗದ ಬಳಿಯ ಬಿದಿರೂರಿನ ಅರಸರು ಅಲ್ಲದೆ ಪಟ್ಟುಗುಪ್ಪೆ, ಸೇತು, ಹಾಲುಗುಡ್ಡೆ, ಕೋಡೂರು ಮುಂತಾದೆಡೆಗಳಲ್ಲಿ ಪ್ರಭುಗಳಾಗಿದ್ದ ಈ ಕುಲದವರು ಅರಸ, ಹೆಗ್ಗಡೆ, ಸಾವಂತ ಹಾಗೂ ಪಡೆವಳ ಎಂಬ ಸ್ಥಾನಗಳಿಂದ ಗುರುತಿಸಲ್ಪಟ್ಟದ್ದನ್ನು ಹೊಸಗುಂದ ಅರಸರ ಕುರಿತ ಇಲ್ಲಿಯ ಪ್ರಬಂಧ ಗುರುತಿಸಿದೆ.

ಕಾಲಾಂತರದಲ್ಲಿ ರಾಜಕೀಯವಾಗಿ ನೆಲೆಗೊಂಡ ಚಿಕ್ಕ ಪುಟ್ಟ ಮನೆತನಗಳು ತಮ್ಮ ಉಗಮವನ್ನು ಆ ಮುಂಚಿನ ರಾಜಕೀಯ ಪ್ರಭುತ್ವಗಳ ಕೊಡುಗೆಯ ಪರಿಣಾಮಗಳಾಗಿ ದಾಖಲಿಸಿಕೊಂಡಿವೆ. ಉದಾ: ದಾನಿವಾಸದ ಒಡೆಯರ ಶಿಲಾಶಾಸನ ದಾನಿವಾಸವನ್ನು ಶ್ರೀ ವೀರ ಹೊಯಿಸಳ ಬಲ್ಲಾಳ ಮಹಾರಾಯರು ತಮಗೆ ವಂಶಾನ್ವಯವಾಗಿ ನಾಯಕತನಕೆ ಪಾಲಿಸಿದ ಸೀಮೆ ಎಂಬುದಾಗಿ ಘೋಷಿಸಿದೆ. ಆ ಲೇಖನದ ಕರ್ತೃ ಊಹಿಸಿದಂತೆ ಒಡೆಯರ ಪೂರ್ವಜರು ಹೊಯ್ಸಳರ ರಾಜ್ಯಾಡಳಿತದಲ್ಲಿ ಅಧಿಕಾರಿಗಳಾಗಿಯೊ, ದಂಡನಾಯಕರಾಗಿಯೊ ಸೇವೆಯನ್ನು ಸಲ್ಲಿಸಿರಬೇಕು. ಚೋಳರ ದಂಡನಾಯಕ ಪಂಚವಾನ್ಮಹಾರಾಯನಿಗೆ ಕೊಂಗಾಳ್ವ ಅರಸ ಮನಿಜನು ಚೆಂಗಾಳ್ವರ ವಿರುದ್ಧ ನೆರವು ನೀಡಿದ ಕಾರಣ ಚೆಂಗಾಳ್ವರಿಗೆ ಸೋಲಾಯಿತು. ರಾಜೇಂದ್ರ ಚೋಳನು ತನ್ನ ನೆರವಿಗೆ ಬಂದ

ಕೊಂಗಾಳ್ವ ಮನಿಜನಿಗೆ ಮಾಳಂಬಿ ಮತ್ತು ಅರಕಲಗೂಡು ಏಳುಸಾವಿರ ಸೀಮೆಯನ್ನು ಕೊಟ್ಟುದಲ್ಲದೆ 'ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ' ಎಂಬ ಬಿರುದನ್ನು ನೀಡಿದನು. (ಇತರ ಲಾಂಛನ ಮತ್ತು ಉಪಾದಿಗಳ ವಿವರಗಳಿಗೆ ನೋಡಿ, *ಎಪಿಗ್ರಾಫಿಯಾ ಕರ್ನಾಟಿಕಾ* (ಪರಿಷ್ಕೃತ) ಸಂ.೧, ನಂ. ೬೫.)

ಸಾಮಂತರು ಸೈನಿಕ ಹಿನ್ನೆಲೆಯಿಂದಲೇ ಬಂದವರಾಗಿರಬೇಕೆಂದಿರಲಿಲ್ಲ. ಆನೆಗೊಂದಿ ಸಂಸ್ಥಾನದ ಆಳ್ವಿಕೆಯಲ್ಲಿ ವಿಕ್ರಮರಾಯನೆಂಬ ಕ್ಷತ್ರಿಯನಡಿ ಅಮರ ಮಾಗಣಿಯಾಗಿದ್ದ ಬೇಲೂರು ಸೀಮೆಯನ್ನು ಅವನ ಮರಣಾನಂತರ ಸಂತಾನವಿಲ್ಲದ್ದರಿಂದ ಆನೆಗೊಂದಿಯವರು ಜಪ್ತಿ ಮಾಡಿಕೊಂಡು ಕಾಲಾಂತರದಲ್ಲಿ ಅದರ ಒಂದು ಭಾಗವನ್ನು ಅಮರ ಮಾಗಣಿಯಾಗಿ ಭಿಕ್ಷಾರಿ ರಾಮಪ್ಪಯ್ಯನಿಗೆ ಕೊಟ್ಟರೆಂದು ಮೆಕೆಂಝಿ ಸಂಗ್ರಹದ ಒಂದು ಕೈಫಿಯತ್ತು ತಿಳಿಸುತ್ತದೆ. ಇದು ಅವನಿಗೆ "ವಿದ್ಯದಲ್ಲಿ ಅರಸಗಳಿಗೆ ಮೆಚಿಸಿದ್ದರಿಂದಾ" ಸಿಕ್ಕ ಮಾಗಣಿ. ಲಿಂಗಣ್ಣ ಕವಿಯ *ಕೆಳದಿನೃಪ ವಿಜಯ*ದಲ್ಲಿ ಬೇಲೂರು ನಾಯಕರ ಪಾಳೆಯಪಟ್ಟಿನ ಮೂಲ ಸಂಸ್ಥಾಪಕನೆಂದು ಉಲ್ಲೇಖಿತನಾದ ಕೃಷ್ಣಪ್ಪನಾಯಕನ ತಂದೆಯನ್ನು ಅಡಪ (ಹಡಪ) ಬಯ್ಯಪ್ಪನೆಂಬುದಾಗಿ ಗುರುತಿಸಿರುವುದೂ ಗಮನಾರ್ಹ.

ರಾಜಕೀಯ ಘಟನೆಯ ತಳಹದಿಯಾಗಿ ಉಪಾಧಿಯು ಕೇಂದ್ರದೊಂದಿಗೆ ಸಾಮೀಪ್ಯ ಅಥವಾ ಪ್ರದೇಶಕ್ಕೆ ಸಂಬಂಧಿಸಿದಂತೆ ತಾರತಮ್ಯವನ್ನು ಮತ್ತು ಉಪಾದಿ ಪದ್ದತಿಯೊಳಗೇ ಬದಲಾವಣೆ ಗಳನ್ನು ಸೂಚಿಸುತ್ತದೆ. ಪ್ರಾದೇಶಿಕ ಮತ್ತು ರಾಜಕೀಯ ಹಿಡಿತ ಜಡವಾದುದಾಗಿರಲಿಲ್ಲವಾಗಿ ಉಪಾದಿಯೂ ಬದಲಾವಣೆ ರಹಿತವಾಗಿರಲಿಲ್ಲ. ಪ್ರತ್ಯೇಕ ಕುಟುಂಬಗಳು ಹೊಂದಿದ್ದ ಉಪಾಧಿಗಳು ಬದಲಾಗುತ್ತಿದ್ದವು. ಉದ್ರಿಯ ಅರಸರನ್ನು ಕೋಳಾಲಪುರವರಾಧೀಶ್ವರರೆಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ. ಇವರು ಮೂಲತಃ ಗಂಗ ವಂಶೀಯರೇ ಆಗಿದ್ದು ಕಲ್ಯಾಣಿ ಚಾಲುಕ್ಯರ ಮಾಂಡಲೀಕರಾಗಿ ನಂತರ ಮಹಾಮಂಡಳೇಶ್ವರರಾಗಿ ಪ್ರಸಿದ್ಧರಾದದ್ದನ್ನು ಅವರ ಕುರಿತಾಗಿ ಆ ಸಂಕಲನದಲ್ಲಿರುವ ಲೇಖನ ಉಲ್ಲೇಖಿಸಿದೆ. ಹೆಚ್ಚೆಯ ಅರಸ ಸತ್ಯಾಶ್ರಯ ಮಹಾಮಂಡಳೇಶ್ವರನ ಸ್ಥಾನಕ್ಕೆ ಏರಿದ್ದು ೧೦೫೭ರ ಚೀಲನೂರಿನ ಶಾಸನದಿಂದ ಗೊತ್ತಾಗುತ್ತದೆ. ಹೆಚ್ಚೆಯ ಕೊನೆಯ ಇಬ್ಬರು ದೊರೆಗಳು ಬರಿದೇ ಮಂಡಳಿಕರ ಸ್ಥಾನವನ್ನು ಹೊಂದಿದ್ದರು. ಕೊಂಗಾಳ್ವರ ಕುರಿತ ಲೇಖನದಲ್ಲಿ ಎಚ್.ಎಂ. ನಾಗರಾಜರಾವ್ ಅವರು ಗಮನಿಸಿರುವಂತೆ ಎಷ್ಟೋ ಸಲ ಒಂದು ಸಾಮಂತ ಮನೆತನ ಪ್ರಧಾನ ರಾಜವಂಶವಾಗಿ ಬೆಳೆಯುವದಕ್ಕೂ ಮತ್ತು ಒಂದು ರಾಜವಂಶವು ಸಾಮಂತ ಮನೆತನವಾಗಿ ಪರಿವರ್ತನೆಗೊಳ್ಳುವದಕ್ಕೂ ಕಾಲಧರ್ಮ ಆಸ್ಪದವಿತ್ತುದನ್ನು ನಾವು ಕಾಣುತ್ತೇವೆ. ಇಂಥ ಪರಿವರ್ತನೆಗಳ ಕಾರಣಗಳನ್ನು ಮಾತ್ರ ನಾವು ಮಧ್ಯಕಾಲೀನ ರಾಜಕೀಯ ರಚನೆ ಮತ್ತು ಪ್ರಕ್ರಿಯೆಯ ಸ್ವರೂಪದಲ್ಲೇ ಶೋಧಿಸಬೇಕು.

ವಾಸ್ತವವಾಗಿ ಸ್ಥಾನಿಕ ಮತ್ತು ಪ್ರಾದೇಶಿಕ ನೆಲೆಗಳಲ್ಲಿ ಪರಿಣಾಮಕಾರಿಯಾಗಿ ಕ್ರಿಯಾ ಶೀಲವಾಗಿದ್ದ ಘಟಕಗಳು ಈ ಸಣ್ಣ ಪುಟ್ಟ ಅರಸು ಮನೆತನಗಳೇ. ಕೆಲವಂತೂ ಎಷ್ಟು ಚಿಕ್ಕವೆಂದರೆ ಅವುಗಳನ್ನು ಅರಸು ಮನೆತನಗಳೆಂದು ಕರೆಯುವುದೂ ಚರ್ಚಾರ್ಹ. ಅದೇನೇ ಇದ್ದರೂ ಇತಿಹಾಸ ಅಧ್ಯಯನದ ಮುಂಚೂಣಿಗೆ ಈ ಘಟಕಗಳನ್ನು ತರಬೇಕು. ಇಲ್ಲಿಯವರೆಗೆ ಇಂಥ ಮನೆತನಗಳನ್ನು, ಅವರ ಆಳ್ವಿಕೆಯ ಪ್ರದೇಶಗಳನ್ನು, ಅಲ್ಲಿಯ ಸಾಮಾಜಿಕ, ಧಾರ್ಮಿಕ, ಆಡಳಿತಾತ್ಮಕ ರೀತಿ ರಿವಾಜುಗಳನ್ನು ಅವರ ಕೊಡುಗೆಗಳನ್ನು ಅವಗಣಿಸಿ ಹೊಯ್ಸಳರ, ಚಾಲುಕ್ಯರ ಅಥವಾ ವಿಜಯನಗರದ ವಿಶಾಲ ರಚನೆಗಳ ಅಪ್ರಧಾನ ಆಯಾಮಗಳೆಂಬಂತೆ ಅವುಗಳನ್ನು ನೋಡಲಾಗಿದೆ. ಈ ಸಂಕಲನದಲ್ಲಿ ಹೊಯ್ಸಳರ ಕುರಿತಾದ ಪ್ರಬಂಧ ಇಲ್ಲದೇ ಇರುವುದಕ್ಕೆ ಅವರ ಕುರಿತ ಪೂರ್ಣ ಪ್ರಮಾಣದ ಅಧ್ಯಯನಗಳು ಲಭ್ಯವಿದ್ದು, ಅವರ ಇತಿಹಾಸ ಸುಪರಿಚಿತವಾಗಿದೆ ಯೆಂಬುದು ಒಂದು ಕಾರಣವಾದರೆ, ಅವರ ರಾಜ್ಯವ್ಯವಸ್ಥೆಯ ಅವಿಭಾಜ್ಯ ಘಟಕಗಳಾಗಿದ್ದ ಸಣ್ಣ ರಾಜಕೀಯ ವ್ಯವಸ್ಥೆಗಳನ್ನು ಪ್ರಧಾನವಾಗಿ

ಅಭ್ಯಸಿಸಬೇಕೆಂಬ ಆಶಯ ಇನ್ನೊಂದು ಮುಖ್ಯ ಕಾರಣವಾಗಿದೆ. ಸ್ಥಳೀಯತೆ ಅಥವಾ ಪ್ರಾದೇಶಿಕತೆಯನ್ನು ದಾಟಿ ಬೆಳೆದ ವ್ಯಾಪಕ ರಾಜ್ಯ ಅಥವ ಪ್ರಭುತ್ವ ವ್ಯವಸ್ಥೆಗಳ ರಚನೆಯನ್ನು ಗ್ರಹಿಸಬೇಕಾದರೆ, ಕೆಳಸ್ತರದ ಘಟಕಗಳ ವಿವರಗಳು ಎಷ್ಟು ಮುಖ್ಯ ಎಂಬುದನ್ನು ಇಲ್ಲಿಯ ಹಲವಾರು ಲೇಖನಗಳು ಮನವರಿಕೆ ಮಾಡಿಕೊಡುತ್ತವೆ.

ಇಲ್ಲಿಯ ಲೇಖನಗಳು ಸ್ವಾಭಾವಿಕವಾಗಿಯೇ ಸಿದ್ಧ ಉಪಕ್ರಮದಲ್ಲಿ, ಪ್ರಧಾನವಾಗಿ ರಾಜಕೀಯ ವಿವರಗಳು, ವಂಶಾವಳಿಗಳನ್ನು ಕಟ್ಟಿಕೊಡುವದರತ್ತ ಗಮನ ಕೇಂದ್ರೀಕರಿಸಿವೆ. ಇದರಲ್ಲಿ ಕೆಲವು ಆಳುವ ಕುಲಗಳ ಹಾಗೂ ಅವುಗಳ ಆಳ್ವಿಕೆಯ ಪ್ರದೇಶಗಳ ಇತಿಹಾಸ ಮೊದಲ ಬಾರಿಕೆ ಪ್ರತ್ಯೇಕ ಅಧ್ಯಯನಕ್ಕೊಳಗಾಗಿರುವದರಿಂದ ಅಂಥ ಲೇಖನಗಳನ್ನು ವಿವರವಾಗಿಯೇ ಉಳಿಸಿಕೊಂಡು ಸಂಕಲಿಸಲಾಗಿದೆ.

ಮಲೆಕರ್ನಾಟಕದ ಅರಸು ಮನೆತನಗಳು: ೨. ಹೆಚ್ಚೆಯ ಅರಸರು (೧)

ಇಲ್ಲಿ ಪ್ರಸ್ತಾವಿಸಲ್ಪಡುತ್ತಿರುವ ಹೆಚ್ಚೆ ಅರಸರದು ಮೂಲತಃ ಸಾಮಂತ ಮನೆತನ. ಶಾಸನಗಳು ಇವರನ್ನು ಸಾಮಂತಾಧಿಪತಿಗಳೆಂದೇ ಕರೆದಿವೆ. ಇವರು ಮಾಟೂರ ವಂಶಕ್ಕೆ ಸೇರಿದವರು. ಕೆಲವು ಸಂಶೋಧನಾ ಗ್ರಂಥಗಳು ಇವರನ್ನು ಹೆಸರಿಸಿವೇ ಹೊರತು, ಇವರ ಕುರಿತು ಪೂರ್ಣ ಪ್ರಮಾಣದ ಅಧ್ಯಯನಗಳು ಆಗಿಲ್ಲ. ಹಾಗಾಗಿ ಪ್ರಸ್ತುತ ಅಧ್ಯಯನವನ್ನು ಶಾಸನಗಳ ವಿವರಗಳನ್ನಾಧರಿಸಿಯೇ ಮಾಡಲಾಗಿದೆ.

ಶಾಸನ ಅಧ್ಯಯನದ ನಂತರ ಶಾಸನಗಳಲ್ಲಿ ಸೂಚಿಸಿದ ಹಲವಾರು ಪ್ರದೇಶಗಳ ಪರಿವೀಕ್ಷಣೆ ನಡೆಸಿ, ಕಂಡಂತಹ ಅವಶೇಷಗಳನ್ನು ಕೂಲಂಕಷವಾಗಿ ಅಭ್ಯಸಿಸಲಾಗಿದೆ. ಸ್ಥೂಲವಾಗಿ ಈ ಸಾಮಂತ ಮನೆತನವನ್ನು ರಾಜಕೀಯ, ಧಾರ್ಮಿಕ, ಸಾಮಾಜಿಕ ಸಂದರ್ಭಾನುಸಾರ ಚರ್ಚಿಸಲಾಗಿದೆ. ಅರಸರುಗಳನ್ನು ಅವರ ವಂಶಾವಳಿಯ ಹಿನ್ನೆಲೆಯಲ್ಲಿ ಪ್ರತ್ಯೇಕವಾಗಿ ಗುರುತಿಸಿ ಅವರ ಪ್ರಮುಖ ಶಾಸನಗಳನ್ನು ಉಲ್ಲೇಖಿಸಲಾಗಿದೆ.

ವಂಶ, ವಂಶಾವಳಿ, ಬಿರುದು ಇತ್ಯಾದಿ

ಈಗಾಗಲೇ ಹೇಳಿದಂತೆ ಇವರದು ಮಾಟೂರ ವಂಶ. ‘ಮಾಟೂರ’ ಎಂಬುದು ಒಂದು ಊರಿನ ಹೆಸರಾದರೂ ಅದು ಯಾವ ಊರು ಎಂಬುದು ಸ್ಪಷ್ಟವಾಗಿಲ್ಲ. ಎಡೆನಾಡಿನಲ್ಲಿ ‘ಓಟೂರು’ ಎಂಬ ಹೆಸರಿ ಊರು ಇದೆ. ಮಾಟೂರಿಗೂ ಓಟೂರಿಗೂ ಯಾವುದೇ ರೀತಿಯ ಸಂಬಂಧವಿದ್ದಂತೆ ತೋರುವುದಿಲ್ಲ. ಅದೇ ರೀತಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲ್ಲೂಕಿನಲ್ಲಿ ‘ಮಾಂಟೂರು’ ಎಂಬ ಊರಿದೆ. ಇವ್ಯಾವ್ಯೂ ಈ ಮಾಟೂರಿಗೆ ಸಂಬಂಧಿಸಿದಂತೆ ತೋರುವುದಿಲ್ಲ. ಇವರ ಶಾಸನಗಳು ಇವನ್ನು ಸೂಚಿಸುವ ಮುನ್ನ ‘...... ಸಮಧಿಗತ, ಪಂಚ ಮಹಾಶಬ್ದ ಮಹಾ ಸಾಮಂತಾಧಿಪತಿ ತ್ರಿಕುಂದ ಪುರವರೇಶ್ವರ, ಬ್ರಹ್ಮಕ್ಷತ್ರಿಯ, ಮಾಟೂರ ವಂಶೋದ್ಭವ, ನಂದನವನಚ್ಯುತ್ರಾವತಾರ, ಹಯ ಲಾಂಛನ, ದರ್ಪಣಧ್ವಜ ವಿರಾಜಮಾನ....’ ಎಂದು ನಂತರ ವೈಯಕ್ತಿಕ ಬಿರುದು, ಅರಸನ ಹೆಸರು ಉಕ್ತವಾಗಿರುತ್ತದೆ.

ಇವರ ಆರಾಧ್ಯದೈವ ‘ತ್ರಿಕುಂದ’ದ ಪುರವರೇಶ್ವರ. ಈ ತ್ರಿಕುಂದವನ್ನು ನಾವಿಲ್ಲಿ ‘ಮುಗುಂದ’ ಎಂದು ಭಾವಿಸಲು ಕೆಲ ಆಧಾರಗಳಿವೆ. ಈ ಮುಗುಂದವನ್ನು ಶಾಸನಗಳು ‘ಮೂರ್ಕುಂದ’ ಎಂದಿವೆ. ‘ಉಕ್ಕುಂದ’ವನ್ನು ‘ಒರ್ಕುಂದ’ವೆಂದಿದೆ. ಇಲ್ಲಿ ತ್ರಿ=ಮೂರು, ಮು, ಮೂ>ಮನ್,

ಮುಪ್, ಮುಮ್, ಮುಯ್, ಮೂರು ಎಂಬ ನಾಮಪದಕ್ಕೆ ಬರುವ ಆದೇಶ ರೂಪ, ಕುಂದ, ಗುಂದ=ಬೆಟ್ಟಗುಡ್ಡ ಎಂದಾಗುತ್ತದೆ. ಹೀಗೆ ಮೂ+ಗುನ್ದ, ಮೂರು ಕುಂದ, ತ್ರಿ+ಕುಂದ ಇವೆಲ್ಲವೂ ಮುಗುನ್ದವಾಗುವ ಸಾಧ್ಯತೆಯಿದೆ. ಹಾಗಾಗಿ ನಾವು ಇವರ ಆರಾಧ್ಯ ದೈವ ಈ ಮುಗುಂದದ ಈಶ್ವರನೆಂತಲೂ, ಇವರು ಶೈವಾರಾಧಕರು ಎಂತಲೂ ಗುರುತಿಸಬಹುದು. ಇಂದಿನ ಚಿನ್ನಮುಳುಗುಂದವೇ ಅಂದಿನ ಮುಗುನ್ದ.

ಶಾಸನಗಳು ಇವರನ್ನು 'ಬ್ರಹ್ಮಕ್ಷತ್ರಿಯ'ರೆಂದೇ ಉಲ್ಲೇಖಿಸಿವೆ. ಡಾ. ಭಂಡಾರ್ಕರರು ಈ ಮಾಟೂರ ವಂಶದವರು ಬ್ರಾಹ್ಮಣ ಮತ್ತು ಕ್ಷತ್ರಿಯ ಮೂಲದಿಂದ ಬಂದವರು ಎನ್ನುತ್ತಾರೆ.

[1] ಉಕ್ಕುಂದದ ಶಾಸನ**[2]**, ಕುಪ್ಪಗಡ್ಡೆ ಶಾಸನ**[3]**, ಹಾಗೂ ಚೀಲನೂರು**[4]** ಶಾಸನಗಳು ಇವರನ್ನು 'ಅಹಿಚ್ಛತ್ರಾವತಾರ' ಎಂದು ಕರೆದಿವೆ. ಅಂದರೆ ಇವರು ಅಹಿಚ್ಛತ್ರದ ಕಡೆಯಿಂದ ಬಂದವರೆ? ಕದಂಬರು ಈ ಭಾಗಕ್ಕೆ ಅಹಿಚ್ಛತ್ರದ ಕಡೆಯಿಂದ ಬ್ರಾಹ್ಮಣರನ್ನು ಕರೆತಂದ ಶಾಸನೋಲ್ಲೇಖವನ್ನು ಇಲ್ಲಿ ಗಮನಿಸಬಹುದು. ಇವರದು ನಂದನವನಚ್ಛತ್ರ, ಹಯಲಾಂಛನ, ದರ್ಪಣಧ್ವಜ, ರಾಜ ಚಿಹ್ನೆಗಳು. ಕುಪ್ಪಗಡ್ಡೆಯ ಶಾಸನವೊಂದರಲ್ಲಿ 'ದರ್ಪಣ ಧ್ವಜ'ದ ಚಿಹ್ನೆಯೂ ಮೂಡಿ ಬಂದಿದೆ. '*ಎಪಿಗ್ರಾಫಿಯ ಇಂಡಿಕಾ*'ದ ಸಂಪಾದಕರು ಮಾಟೂರ ವಂಶದ ಬಗ್ಗೆ ಪ್ರಸ್ತಾಪಿಸುತ್ತಾ ಈ ದರ್ಪಣ ಧ್ವಜದ ಚಿಹ್ನೆ ಪಲ್ಲವಮಲ್ಲ ನಂದಿವರ್ಮ'ನು ನವಿಲು ಗರಿಗಳಿಂದ ರಚಿಸಿದ ದರ್ಪಣ ಧ್ವಜವನ್ನು 'ಸಾಬಾರ' ದೊರೆ ಉದಯನಿಗೆ ಕೊಟ್ಟಿದ್ದನ್ನ 'ಉದಯೆಂದಿರಂ ಶಾಸನ'ದಲ್ಲಿ ಗುರಿತಿಸಿದ್ದಾರೆ.**[5]** ಈ 'ಸಾಬಾರ' ಮಾಟೂರ ಅರಸರ ಪ್ರಾದೇಶಿಕ ವ್ಯಾಪ್ತಿಯಲ್ಲಿ ಬರುವ ಒಂದು ಹಳ್ಳಿಯೇ ಎಂಬುದನ್ನೂ ಸಂಶೋಧಿಸಬೇಕಾಗಿದೆ. ಪ್ರಸ್ತುತ ಈ ಊರು ಸೊರಬ ತಾಲ್ಲೂಕಿನಲ್ಲಿದೆ.
ಸುಮಾರು ೨೪ ಶಾಸನಗಳು ಇವರಿಗೆ ಸಂಬಂಧಿಸಿವೆ. ಅದರಲ್ಲಿ ಕ್ರಿ.ಶ. ೧೧೧೭ರ ಕನವಳ್ಳಿ ಶಾಸನ**[6]** ಈ ವಂಶದ ಅಸ್ಪಷ್ಟ ವಂಶಾವಳಿಯನ್ನು ನೀಡಿದೆ. ಈ ಶಾಸನ ಮೊದಲನೆಯದಾಗಿ 'ದೋಸಿ' ಎಂಬಾತನ್ನು ಉಲ್ಲೇಖಿಸಿದೆ. ಇವರ ನಂತರ 'ಸಿನ್ದ'ನನ್ನು ಸಿನ್ದನ ನಂತರ ಶಾಂತಿವರ್ಮನನ್ನು ಮುಂದೆ ಪಯ್ವರ, ಸಿರಿಯಾಗರನನ್ನು ಉಲ್ಲೇಖಿಸಿದೆ. ಇಲ್ಲಿ ಪಯ್ವರ ಮತ್ತು ಚಾರಕಬ್ಬೆ ಪುತ್ರ ಸಿರಿಯಾಗರ ಎಂಬುದನ್ನು ಬಿಟ್ಟರೆ ಇನ್ನುಳಿದವರ ನಡುವಿನ ಸಂಬಂಧ ಯಾವ ಸ್ವರೂಪದ್ದು ಎಂಬುದು ಅಸ್ಪಷ್ಟವಾಗಿದೆ. ಆದರೆ ಇಲ್ಲಿ ದೋಸಿ, ಸಿನ್ದರನ್ನು ಮೂಲ ಪುರುಷರೆಂದು ಭಾವಿಸಿ, ವಂಶಾವಳಿಯಲ್ಲಿ ಅವರಿಬ್ಬರನ್ನು ಕ್ರಮವಾಗಿ ಗುರುತಿಸಲಾಗಿದೆ. ಈ ವಂಶದ ಮೂಲಿಗ ಈ 'ದೋಸಿ'ಯೆಂದು ಸದ್ಯಕ್ಕೆ ಗುರುತಿಸಿಕೊಳ್ಳುವುದು ಸೂಕ್ತವೂ ಆಗಿದೆ. ಕ್ರಿ.ಶ. ೮ನೇ ಶತಮಾನದ ಶಾಸನವೊಂದರಲ್ಲಿ**[7]** ದೋಸಿ ಎಂಬಾತ ಬಾದಾಮಿ ಚಾಲುಕ್ಯ ಕಾಲದಲ್ಲಿ ಮಾಂಡಳೀಕನಾಗಿದ್ದು, ಮುಗುನ್ದ ಮಾಟೂರ ಅರಸರ ಆಡಳಿತ ವ್ಯಾಪ್ತಿಯಲ್ಲಿದ್ದುದನ್ನು ಗಮನಿಸಬೇಕು. ಆದರೆ ಈ ದೋಸಿಯನ್ನು ನೇಗಿನಹಾಳರವರು ಸೇನಾವರರ ಅರಸ ಎಂದು ಗುರುತಿಸಿದ್ದಾರೆ.**[8]** ದೋಸಿಯ ನಂತರ ಬರುವ ಸಿನ್ದನ ಕುರಿತು ಶಾಸನಗಳು ದೊರೆತಿಲ್ಲ. ಆದರೆ ನಂತರ ಬರುವ ಶಾಂತಿವರ್ಮನನ್ನು ಕ್ರಿ.ಶ. ೯೫೮ರ ದೇವಗೆರೆ ಶಾಸನ ಮೊದಲ ಬಾರಿಗೆ ಗುರುತಿಸಿದೆ. ದೇವಗೆರೆ ಶಾಸನದ ನಂತರ ಈತನ ಕುರಿತು ಕ್ರಿ.ಶ. ೯೯೧ರ ತನಕ ಕೆಲವು ಶಾಸನಗಳು ದೊರೆತಿವೆ. ಕನವಳ್ಳಿ ಶಾಸನದಲ್ಲಿ ಗುರುತಿಸಲಾದ ಪಯ್ವರನ ಕುರಿತು ಶಾಸನಗಳು ಲಭಿಸಿಲ್ಲ. ಬಿ.ಆರ್. ಗೋಪಾಲರು ಈತನನ್ನು ಹೆಸರಿಸಿದ್ದಾರಷ್ಟೆ.**[9]**ಶಾಸನಕಾರರು ಈತನನ್ನು ಪಯ್ವರಸ ಎಂದು ಕರೆದಿದ್ದಾರೆ, ಆದರೆ ಶಾಸನಗಳು ಸ್ಪಷ್ಟವಾಗಿ 'ಪಯ್ವರ' ಎಂದೇ ಕರೆದಿವೆ. ಇನ್ನೊಬ್ಬ ಪಯ್ವರಸನ ಉಲ್ಲೇಖ ಕ್ರಿ.ಶ. ೧೦೬೮ರ ಶಾಸನದಲ್ಲಿ ದೊರೆಯುತ್ತದಾದರೂ ಆತ ಈ ವಂಶದವನಲ್ಲ.**[10]** ಸಿರಿಯಾಗರನು ಕನವಳ್ಳಿ ಶಾಸನದಲ್ಲಿ ಅಲ್ಲದೆ ಕ್ರಿ.ಶ. ೧೦೮೮ರ ಉಕ್ಕುಂದದ ಶಾಸನದಲ್ಲಿಯೂ ಹೆಸರಿಲ್ಪಟ್ಟಿದ್ದಾನೆ.**[11]**ಹೀಗಾಗಿ ಸಿರಿಯಾಗರನ ಕಾಲವನ್ನು ಕ್ರಿ.ಶ. ೧೧೧೭ ರಿಂದ ಕ್ರಿ.ಶ. ೧೦೮೮ರವರೆಗೆ ಎಂದಿಟ್ಟುಕೊಳ್ಳಬಹುದು. ಕ್ರಿ.ಶ. ೧೦೮೮ರ ಅದೇ ಶಾಸನ ಈ ವಂಶದ ವಿಜಯಾದಿತ್ಯನನ್ನು ಮಾಂಡಳೀಕ ಪದವಿಗೇರಿಸಿದೆ. ಇವಿಷ್ಟು ಉಲ್ಲೇಖ ಬೆಳ್ವುಗೆ ಭಾಗದ

ಶಾಸನಗಳಲ್ಲಿ ಲಭ್ಯವಾದುದು. ಇತ್ತ ಬನವಾಸಿ ೧೨೦೦೦ದ ಉಪ ವಿಭಾಗವಾದ ಎಡೆನಾಡು ಎಪ್ಪತ್ತು ಪ್ರದೇಶದಲ್ಲಿ ನಮಗೆ ಮೊದಲನೆಯದಾಗಿ ಕ್ರಿ.ಶ. ೯೦೩ರ ಕೆರೆಹಳ್ಳಿ ಶಾಸನ 'ಪ್ರಿಯಗಾರ'ನನ್ನು ಹೆಸರಿಸಿದ್ದನ್ನು ನೋಡಬಹುದು.[12]ನಂತರ ಕ್ರಿ.ಶ. ೯೩೮ರ ಶಾಸನವೊಂದರಲ್ಲಿ ಇದೇ ವಂಶದ 'ಮಾಚಿ'ಯ ಉಲ್ಲೇಖ ದೊರೆಯುತ್ತದೆ.[13] ಇದಕ್ಕೂ ಮುನ್ನ ಈತ ಹಿರೇಕೆರೂರ ಭಾಗದ ಅರಳೀಕಟ್ಟೆ ಗ್ರಾಮದ ಕ್ರಿ.ಶ. ೯೩೧ರ ಶಾಸನದಲ್ಲಿ ಕಂಡುಬರುತ್ತಾನೆ.[14] ಈತನ ಕುರಿತು ಕ್ರಿ.ಶ. ೯೫೮ರ ತನಕ ಉಲ್ಲೇಖವಿದೆ.[15] ಕ್ರಿ.ಶ. ೯೫೮ರ ದೇವಗೆರೆ ಶಾಸನದಲ್ಲಿ ಕಂಡು ಬಂದ ಶಾಂತಿವರ್ಮ ಈ ಎಡೆನಾಡ ಭಾಗದ ಕ್ರಿ.ಶ. ೯೭೨ರ ಒಂದು ಶಾಸನದಲ್ಲಿ ಕಂಡು ಬರುತ್ತಾನೆ.[16] ಈತ ಕ್ರಿ.ಶ. ೯೯೧ರ ತನಕ ಆಳ್ವಿಕೆ ನಡೆಸಿದಂತೆ ಕಂಡು ಬರುತ್ತಿದೆ.[17] ಮುಂದೆ ಎಡೆನಾಡ ಭಾಗದಲ್ಲಿ ಕ್ರಿ.ಶ. ೯೯೨ ರಿಂದ ಕ್ರಿ.ಶ. ೧೦೩೧ರವರೆಗೆ ಇವರ ಕುರಿತು ಉಲ್ಲೇಖಗಳು ದೊರೆಯುತ್ತಿಲ್ಲವಾದರೂ, ಬೆಳ್ಳುಗೆ ಪ್ರದೇಶದ ಕನವಳ್ಳಿ ಶಾಸನ ಈ ನಡುವಿನ ಅವಧಿಯಲ್ಲಿಯೂ ಅವರ ಅಸ್ತಿತ್ವವನ್ನು ಸ್ಪಷ್ಟಪಡಿಸಿದೆ.[18]ಕ್ರಿ.ಶ. ೧೦೩೨ರ ಶಾಸನಗಳು ಈ ವಂಶದ ಮದೇವೂರ ಸಾಂತಯ್ಯನನ್ನು ಉಲ್ಲೇಖಿಸಿದೆ.[19] ಇಲ್ಲಿ ಈತನಿಗೆ 'ಮದೇವೂರು' ಹೇಗೆ ಸೇರಿಕೊಂಡಿದೆ ಸ್ಪಷ್ಟವಾಗುವುದಿಲ್ಲವಾದರೂ ಬಹುಶಃ ಈ ವಂಶದ ಎರಡು ಕವಲುಗಳು ಆಡಳಿತಾತ್ಮಕ ಅಥವಾ ಕೌಟುಂಬಿಕ ಸ್ಥಾನಮಾನದ ಜವಾಬ್ದಾರಿ ಹಂಚಿಕೆ ದೃಷ್ಟಿಯಿಂದ ಬೆಳ್ಳುಗೆ ಹಾಗೂ ಎಡೆನಾಡನ್ನು ಆಳಿದಂತೆ ಕಂಡು ಬರುತ್ತದೆ. ಸೊರಬ ತಾಲ್ಲೂಕಿನ ಕ್ರಿ.ಶ. ೯೭೯ರ ಶಾಸನವೊಂದು ಮಾದೆಯೂರ ಶಾಂತಿವರ್ಮನನ್ನು ಉಲ್ಲೇಖಿಸಿದೆ.[20]ಧಾರವಾಡ ಜಿಲ್ಲೆಯ ಕ್ರಿ.ಶ. ೮ನೇ ಶತಮಾನದ ಶಾಸನವೊಂದು ಮಾದೆಯೂರು ಮಾರನನ್ನೂ ಉಲ್ಲೇಖಿಸಿದೆ.[21] ಆದರೆ ಇವರಾರೂ ಮಾಟೂರ ವಂಶಸ್ಥರಲ್ಲ. ಕ್ರಿ.ಶ. ೧೦೩೨ರ ಒಂದು ತ್ರುಟಿತ ಶಾಸನ ಆಲಯ್ಯನನ್ನು ಉಲ್ಲೇಖಿಸಿದೆ.[22] ಬಿ.ಎಲ್.ರೈಸ್‌ರು ಈ ಶಾಸನವನ್ನು ಆಲಯ್ಯನದ್ದೆಂದು ಗುರುತಿಸಿದ್ದಾರೆ.[23] ಸೊರಬ ತಾಲ್ಲೂಕು – ಕುಪ್ಪಗಡ್ಡೆಯ ಶಾಸನದ ಕಾಲಮಾನದಲ್ಲಿ ಸ್ವಲ್ಪ ವ್ಯತ್ಯಯ ವಿರುವಂತಿದೆ.[24] ಇಲ್ಲಿ ಆಲಯ್ಯ ಹಾಗೂ ಆತನ ಮಗ ಜಯಸಿಂಘನ ಉಲ್ಲೇಖವಿದೆ. ಮುಂದೆ ಕ್ರಿ.ಶ. ೧೦೫೭ರ ಚೀಲನೂರು ಶಾಸನ ಈ ವಂಶದ ಸತ್ಯಾಶ್ರಯನನ್ನು ಮಹಾ ಮಾಂಡಳೀಕ ಎಂದಿದೆ.[25] ಹೀಗೆ ಈ ಎಲ್ಲ ಶಾಸನಗಳ ಆಧಾರಗಳಿಂದ ಈವರೆಗೆ ಒಟ್ಟು ೧೨ ಜನ ಮಹಾ ಸಾಮಂತಾಧಿಕಾರಿಗಳನ್ನೂ, ಇಬ್ಬರು ಮಹಾ ಮಾಂಡಳಿಕರನ್ನು ಗುರುತಿಸಲಾಗಿದ್ದು, ಸಿರಿಯಾಗರನು ಪಯ್ವರನ ಮಗ ಹಾಗೂ ಜಯಸಿಂಘನು ಆಲಯ್ಯನ ಮಗ ಎಂಬುದಷ್ಟೇ ಸ್ಪಷ್ಟವಾಗಿದೆ. ಬೆಳ್ಳುಗೆ ಭಾಗದ ಕ್ರಿ.ಶ. ೧೨ನೇ ಶತಮಾನದ ಶಾಸನಗಳು ಈ ವಂಶದ ಮಾಂಡಳೀಕರನ್ನು ಉಲ್ಲೇಖಿಸಿವೆಯಾದರೂ ಹೆಸರು ತ್ರುಟಿತಗೊಂಡಿದೆ.[26] ಒಟ್ಟಾರೆ ನಾವು ಈ ಆಧಾರದಿಂದ ಇವರ ಅಧಿಕಾರ ಕಾಲಾವಧಿಯನ್ನು ಕ್ರಿ.ಶ. ೯ನೇ ಶತಮಾನದಿಂದ ೧೨ನೇ ಶತಮಾನದವರೆಗೆ ಗುರುತಿಸಲು ಸಾಧ್ಯವಾಗಿದೆ. ಇವರು ರಾಷ್ಟ್ರಕೂಟ ಹಾಗೂ ಕಲ್ಯಾಣಿ ಚಾಲುಕ್ಯರ ಮುಖ್ಯ ಅಧಿಕಾರಿಗಳು ಎಂಬುದು ಸ್ಪಷ್ಟವಾಗುತ್ತದೆ.

ಮಾಟೂರ ಅರಸರ ವಂಶಾವಳಿ ವಿವರ

ದೋಸಿ –> ಸಿನ್ದ –> ಪ್ರಿಯಾಗರ –> ಮಾಚಿ –> ಶಾಂತಿವರ್ಮ
|
ಪಯ್ವರ
|
ಸಿರಿಯಾಗರ
|
ಸಾಂತಯ್ಯ
|
ಆಲಯ್ಯ-
ಜಯಸಿಂಘ

|
ಸತ್ಯಾಶ್ರಯ
|
ವಿಜಯಾದಿತ್ಯ

ಹಲವಾರು ಮೂಲಗಳಿಂದ ಈ ವಂಶಾವಳಿಯನ್ನು ಗುರುತಿಸಲಾಗಿದ್ದು ಕ್ರಿ.ಶ. ೧೧೧೭ರ ಒಂದು ಶಾಸನ ಸೂಚಿಸಿದ ಈ ವಂಶದ ದೋಸಿ ಹಾಗೂ ಸಿನ್ನನನ್ನು ಶಾಸನಾಧಾರದ ಕೊರತೆಯಿಂದ ಇಲ್ಲಿ ಪ್ರಸ್ತಾಪಿಸುತ್ತಿಲ್ಲ. ಕ್ರಿ.ಶ. ೯೦೩ರ ಕೆರೆಹಳ್ಳಿ ಶಾಸನವೇ ಮೊದಲಿಗೆ ಈ ವಂಶದ ಪ್ರಿಯಾಗರನನ್ನು ಹೆಸರಿಸಿದೆ.

ಪ್ರಿಯಾಗರ : ಕ್ರಿ.ಶ. ೯೦೩ರ ಶಾಸನದನ್ವಯ ಈತ ಎಡೆನಾಡನ್ನಾಳುತ್ತಿದ್ದುದು ಸ್ಪಷ್ಟವಾಗಿದೆ. ಈ ಸಮಯದಲ್ಲಿ ಇದೇ ಗ್ರಾಮದ ಬೀರನೆಂಬುವವನು ಈ ಶಾಸನವನ್ನು ಇರಿಸಿದಂತಿದೆ. ಈತನ ತಂದೆ ಇಲ್ಲಿಯೇ ಒಂದು ಕೆರೆ ಹಾಗೂ ದೇಗುಲ ನಿರ್ಮಿಸಿದ್ದನ್ನು ಶಾಸನವೆಂದು ಪರಿಗಣಿಸಬೇಕಾಗಿದೆ. ಪ್ರಸ್ತುತ ಇದೊಂದು ವೀರಗಲ್ಲು. ತನ್ನ ತಂದೆ ಗುಲಗಣ್ಣನ ನೆನಪಿಗಾಗಿ ಮಗ ಬೀರ ಶಾಸನ ಬರೆಸಿದಂತಿದೆ. ಈ ಪ್ರಿಯಾಗರನ ಕುರಿತು ಮತ್ತೆಲ್ಲೂ ಉಲ್ಲೇಖ ದೊರೆಯುತ್ತಿಲ್ಲ. ಹಾಗೆಯೇ ಕ್ರಿ.ಶ. ೯೩೮ರ ತನಕ ಎಡೆನಾಡ ಭಾಗದಲ್ಲಿ ರಾಷ್ಟ್ರಕೂಟ ಕಾಲದ ಶಾಸನಗಳು ದೊರೆಯುತ್ತಿಲ್ಲ. ಕ್ರಿ.ಶ. ೯೦೩ಕ್ಕೂ ಮೊದಲೂ ಕೂಡ ಈ ಭಾಗದಲ್ಲಿ ರಾಷ್ಟ್ರಕೂಟರ ಶಾಸನಗಳು ಕಂಡುಬರುತ್ತಿಲ್ಲ.

ಮಾಚಿ ಅರಸ : ಕ್ರಿ.ಶ. ೯೦೪ ರಿಂದ ೯೩೦ ರವರೆಗೆ ಮಾಟೂರ ಅರಸರ ಕುರಿತು ಯಾವುದೇ ಶಾಸನಗಳು ಕಂಡು ಬರುವುದಿಲ್ಲ. ಕ್ರಿ.ಶ. ೯೩೧ರಲ್ಲಿ ಅರಳೀಕಟ್ಟೆಯ ತೃಟಿತ, ರಾಷ್ಟ್ರಕೂಟ ನಾಲ್ಕನೆಯ ಗೋವಿಂದನ ಕಾಲದ ಶಾಸನವೊಂದು ಈ ವಂಶದ ಮಾಚಿಯನ್ನು, ಹೆಸರಿಸಿದೆ.[27] ಇಲ್ಲಿನದೇ ಇನ್ನೂ ಒಂದು ಇದೇ ಕಾಲದ ಶಾಸನ ಮಾಟೂರ ಹೆಸರನ್ನಷ್ಟೇ ಹೊಂದಿದೆ.[28]ಈ ಶಾಸನ ಕೂಡ ಇವನಿಗೇ ಸಂಬಂಧಿಸಿದ್ದು ಎಂದು ಊಹಿಸಬಹುದು. ತರುವಾಯ ಆರು ವರುಷಗಳ ನಂತರ ಎಡೆನಾಡು-೭೦ರ ಭಾಗದ ಶಾಸನಗಳಲ್ಲಿ ಈತ ಉಲ್ಲೇಖಗೊಳ್ಳುತ್ತಾನೆ. ಓಟೂರಿನ ಒಂದು ಶಾಸನ ರಾಷ್ಟ್ರಕೂಟ ಕನ್ನರ ದೇವನ ಕಾಲದ್ದು. ಚಿಕ್ಕಯ್ಯ ಬನವಾಸಿಯನ್ನು, ಈ ಮಾಚಿಯರಸ ಎಡೆನಾಡನ್ನು ಆಳುತ್ತಿದ್ದುದು ಇಲ್ಲಿ ಸ್ಪಷ್ಟವಾಗಿದೆ.[29]ಇಲ್ಲಿ ಈತನನ್ನು 'ಅಕಳಂಕನೀಳ, ಕಾರ್ಯದಿಲೀಪ, ವಿಜಯಲಕ್ಷ್ಮೀ ವಲ್ಲಭ' ಎಂದೆಲ್ಲ ಬಿರದನ್ನಿತ್ತು ಸ್ತುತಿಸಿದೆ. ಈ ಶಾಸನವು ಊರ್ಗಾವುಂಡ ನಾಕಿಮಯ್ಯ ಹಾಗೂ ಆತನ ಕುಟುಂಬದವರು ದೇಗುಲ, ಬಾವಿ, ಮಂಟಪ ನಿರ್ಮಿಸಿದ್ದನ್ನೂ, ಇವರೇ ಶೈವಗುರು ಈಶ್ವರಯ್ಯನ ಕಾಲು ತೊಳೆದು ಭೂದಾನ ಬಿಟ್ಟಂತೆ ಹೇಳಲಾಗಿದೆ. ಕ್ರಿ.ಶ. ೯೩೯ರ ಹೆಚ್ಚೆ ಶಾಸನದಲ್ಲಿ ಮತ್ತೆ ಮಾಚಿ ಅರಸ ಕಾಣಿಸಿಕೊಳ್ಳುತ್ತಾನೆ. ಇಲ್ಲಿ '....... ಮಾಚಿಗಂ ಪೊxxxಸಿಯೊಳ್ ಸುಖ ಸಂಕಥಾ ವಿನೋದಂ......' ಎಂದಿದೆ. ಇದನ್ನು 'ಪೊನವಾಸಿ' ಎಂದು ಪೂರ್ಣಗೊಳಿಸಬೇಕು ಎನಿಸುತ್ತದೆ. ಶಾಸನ ವಿಷಯ ಇಲ್ಲಿನ ಶ್ರೀಕಂಠ ದೇವರ ನೈವೇದ್ಯಕ್ಕಾಗಿ ಸಜ್ಜೆಗದ್ದೆ ಬಿಟ್ಟದ್ದು, ದೇವರ ಅಂಗಭೋಗ, ರಂಗಭೋಗ, ಚೈತ್ರ ಪವಿತ್ರಾದಿ, ತಪೋಧನರ ಆಹಾರ, ದೇಗುಲದ ಜೀರ್ಣೋದ್ಧಾರಕ್ಕಾಗಿ ಎಡೆನಾಡಿನ ಕುಳುಗ ಗ್ರಾಮವನ್ನು ಮಾಚಿಗ ಮತ್ತು ಬನವಾಗಿ ಮಂಡಲೇಶ್ವರ ಚಟ್ಟಯ್ಯನು ಇದ್ದು ರುದ್ರಶಕ್ತಿ-ಮುನಿಗಳ ಸನ್ನಿಧಿಯಲ್ಲಿ ದಾನ ನೀಡಿದ ಉಲ್ಲೇಖವಿದೆ.[30] ಕ್ರಿ.ಶ. ೯೪೦ರ ಎರಡು ಶಾಸನಗಳನ್ನು ಬಿ.ಎಲ್. ರೈಸರೂ ಮಾಚಿಯದು ಎಂದಿದ್ದಾರೆ. ಈ ಶಾಸನದಲ್ಲಿ ಬಹುಷಃ ಮಾಚಿಗಂ ಬದಲಿಗೆ ಮಲ್ಲಿಗಂ ಎಂದು ಅಚ್ಚಾದಂತೆ ಕಾಣುತ್ತದೆ.[31] ರೈಸರು ಮಾಚಿಗನನ್ನು ಪೆಲ್ದಸೆಯಲ್ಲಿದ್ದು ಬನವಾಸಿ ೧೨೦೦೦ ಆಳುತ್ತಿದ್ದ ಎಂದಿದ್ದಾರೆ. ಈ ಪೆಲ್ದಸೆ, ಹೆದ್ದಸೆ ಈಗಿನ ಹೆಚ್ಚೆ. ಇವು ರಾಷ್ಟ್ರಕೂಟರ ಕನ್ನರ ದೇವನ ಕಾಲದ ಶಾಸನಗಳು. ಇಲ್ಲಿ ಬಿಂಕೆಯ ನಾಡನ್ನಾಳುತ್ತಿದ್ದುದು, ಚಟ್ಟಯ್ಯ ನಾಳ್ಗಾವುಂಡನಾಗಿದ್ದನ್ನೂ ಸೂಚಿಸಿದೆ. ಕ್ರಿ.ಶ. ೯೫೪ರ ಶಾಸನ ಕೂಡ ಕನ್ನರ ದೇವನ ಕಾಲದ್ದು-ಇಲ್ಲಿ ಮಾಚಿಗ ಎಡೆನಾಡಿನಲ್ಲಿದ್ದು ಬನವಾಸಿ ಪ್ರಾಂತ್ಯದ ಅರಸುಗೈಯ್ಯುತ್ತಿರೆ ಎಂದಿದೆ.[32] ಕಕ್ಕರಶಿ ಗ್ರಾಮದ ವೋಜಿಗ ನೆಂಬಾತ ಇಲ್ಲಿನ ಶೈವ ದೇಗುಲವೊಂದಕ್ಕೆ ತನ್ನ ವಂಶದವರು

ಕಟ್ಟಿಸಿದ ಕೆರೆಯ ಕೆಳಗಿನ ಜಮೀನನ್ನು ಬಿಟ್ಟಂತೆಯೂ, ಮಹಾಜನರಿಗಾಗಿ ಮುಟ್ಟಗುಪ್ಪೆ ಗ್ರಾಮವನ್ನು ಬಿಟ್ಟಂತೆಯೂ ಉಲ್ಲೇಖವಿದೆ. ನಂತರ ಕ್ರಿ.ಶ. ೯೫೮ರ ಕಿರುಗುಣಿಸೆ ಗ್ರಾಮದ ಶಾಸನದಲ್ಲಿ ಮಾಚಿಗ ಎಡೆನಾಡು – ೭೦ಕ್ಕೆ ಅರಸುಗೆಯ್ಯೆ ಎಂದಿದೆ. ಇಲ್ಲಿ ಈತನ ಕುಟುಂಬ, ವಂಶದ ಹೆಸರನ್ನೂ ಪ್ರಸ್ತಾಪಿಸಿಲ್ಲ. ಈ ಹೊತ್ತಿಗೆ ಎಡೆನಾಡು ಭಾಗದ ಅಧಿಕಾರಿ ಇವನೇ ಆಗಿದ್ದರಿಂದ ಈ ಶಾಸನವನ್ನು ಮಾಟೂರ ಮಾಚಿಗನದೆಂದೇ ಭಾವಿಸಲಾಗಿದೆ. ಈ ಶಾಸನದಲ್ಲಿ ಬಿಯಳಮ್ಮನ ಮಗ 'ಪಡೆವಳ' ಅಂಗನನ್ನು ಹೆಸರಿಸಿ ಆತ 'ಎಲಸೆ'ಯನ್ನು ಗೋಸಹಸ್ರವಿರಿಸಿ ಕೊಟ್ಟಂತೆ ದಾಖಲಿಸಿದೆ. ಎಲಸಿ ಈ ಹೊತ್ತಿಗೆ ದೊಡ್ಡ ಅಗ್ರಹಾರವಾಗಿದ್ದ ದಾಖಲೆಯಿದೆ. ಈ ಕುರುಗುಣಿಸೆ ಭಾಗದಲ್ಲಿ ಇನ್ನೂ ಕೆಲ 'ಪಡೆವಳ'ರಿದ್ದ ಬಗ್ಗೆ ಕ್ರಿ.ಶ. ೧೦೫೭ರ ಶಾಸನವೊಂದು ಉಲ್ಲೇಖಿಸಿದೆ.[33] *ಎಪಿಗ್ರಾಫಿಯಾ ಇಂಡಿಕಾ*ದಲ್ಲಿ ಕೂಡ ಈ ಮಾಚಿಯನ್ನು ಹೆಸರಿಸಲಾಗಿದೆ.[34]ಎಡೆನಾಡಿನ ಕೆಲವು ಮಾಟೂರ ವಂಶೀಯರ ಶಾಸನಗಳನ್ನು ಗಮನಿಸಿ ಈ ಮಾಚಿ ಕೆಲ ಸಮಯ ಹೆದ್ದಸೆಯಲ್ಲಿದ್ದ ಎಂದಿದ್ದಾರೆ. '......the sphere of this government is not Stated....' ಎಂತಲೂ ಹೇಳಲಾಗಿದೆ. ಇವನ ನಂತರ ಬರುವ ಶಾಂತಿವರ್ಮನ ಆಡಳಿತದಲ್ಲಿ ಕೆಲ ಕಾಲ ಎಡೆನಾಡಿಗೆ ಈ ಮಾಚಿಗ ಅಧಿಕಾರಿಯಾಗಿರಬಹುದೆಂದು ಹೇಳಲಾಗಿದೆ. ಇದಕ್ಕೆ ಕಾರಣ ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್VIII ನಂ.೩೦೫ರ ಶಾಸನದ ತಪ್ಪಾದ ಕಾಲ ನಿರ್ಧಾರವನ್ನು ಕ್ರಿ.ಶ. ೯೫೮ ಎಂದು ತಿದ್ದಿಕೊಂಡಿದ್ದು. ಇಲ್ಲಿಯೇ ಈತನನ್ನು ರಾಷ್ಟ್ರಕೂಟರ ಜವಾಬ್ದಾರಿಯುತ ಅಧಿಕಾರಿಯೆಂದು ಗುರುತಿಸಲಾಗಿದೆ.[35] ಮೋರೇಸರು ಇದೇ ಮಾಚಿಗನನ್ನು ನಾರಕ್ಕಿ ಅರಸ ಎಂದಿದ್ದಾರೆ.[36] ಆದರೆ ಇದಕ್ಕೆ ಏನು ಮೂಲ ಎಂಬುದು ಸ್ಪಷ್ಟವಾಗಿಲ್ಲ. ಇಲ್ಲಿ ಈ ಮಾಚಿಗ ಆರು ವರ್ಷಗಳಷ್ಟು ಕಾಲ ಈ ಬನವಾಸಿ ಭಾಗದಲ್ಲಿ ಅಧಿಕಾರಿಯಾಗಿದ್ದ ಎಂದಿದ್ದಾರೆ. ಶಾಸನಗಳು ಕ್ರಿ.ಶ. ೯೩೧ರಿಂದ ಕ್ರಿ.ಶ. ೯೫೮ರ ತನಕ ಮಾಚಿಗನನ್ನು ಉಲ್ಲೇಖಿಸಿವೆ.

ಶಾಂತಿವರ್ಮ : ಮಾಚಿಗನ ನಂತರ ಅಥವಾ ಮಾಚಿಗನ ಕಾಲಕ್ಕೇ ಈತ ಎಡೆನಾಡ ಭಾಗದ ಮುಖ್ಯ ಆಡಳಿತಗಾರನಾಗಿ ಅಧಿಕಾರ ವಹಿಸಿಕೊಂಡಂತೆ ಕಂಡು ಬರುತ್ತದೆ. ಈತ ರಾಷ್ಟ್ರಕೂಟ ಹಾಗೂ ಕಲ್ಯಾಣಿ ಚಾಲುಕ್ಯರ ಅಧಿಕಾರಿಯಾಗಿದ್ದಕ್ಕೆ ಶಾಸನಗಳು ಆಧಾರವಾಗಿವೆ. ಇವನ ಕುರಿತು ಮೊದಲ ಶಾಸನ ದೇವಗೇರಿ ಗ್ರಾಮದ್ದು.[37] ಈ ದೇವಗೇರಿ ಶಾಸನದ ಕಾಲಮಾನದಲ್ಲಿ ತಪ್ಪಾಗಿದ್ದುದನ್ನೂ ಶಾಸನ ತಜ್ಞರು ಗುರುತಿಸಿದ್ದಾರೆ. ಇದು 'ಸಕ ೫೨೨ ಕಾಳಯುಕ್ತ, ಮಾರ್ಗಶಿರ ಶು. ೭ ಸೋಮವಾರ ಎಂದು ಉಲ್ಲೇಖವಾಗಿದೆ. ಡಾ. ಫ್ಲೀಟ್‌ಕ್ರಿ.ಶ. ೬೦೦ ನವೆಂಬರ್ ೧೩, ಭಾನುವಾರ ಬರುತ್ತದೆ, ಸೋಮವಾರ ಅಲ್ಲ ಎಂದಿದ್ದನ್ನು, *ಸೌತ್ ಇಂಡಿಯನ್‌ಇನ್ಸ್‌ಕ್ರಿಪ್ಷನ್*‌ನಲ್ಲೂ ಉಲ್ಲೇಖಿಸಿದ್ದಾರೆ.[38] ಇದರ ಪಠ್ಯ ಎಪಿಗ್ರಾಫಿಯಾ ಇಂಡಿಕಾ XIದಲ್ಲಿ ಪ್ರಕಟವಾಗಿದ್ದು, ಇದರ ನಿರ್ದಿಷ್ಟ ಕಾಲಮಾನದ ಬಗ್ಗೆ ಚರ್ಚಿಸಲಾಗಿದೆ. ಇಲ್ಲಿ ಇದರ ಕಾಲಮಾನ ಕ್ರಿ.ಶ. ೯೫೮ ನವೆಂಬರ್ ೧೫, ಸೋಮವಾರ ಎಂದಿದೆ.[39] ಈ ಆಧಾರದನ್ವಯ ಶಾಂತಿವರ್ಮನು ಕ್ರಿ.ಶ. ೯೫೮ ರಲ್ಲಿ ಆಳ್ವಿಕೆ ನಡೆಸುತ್ತಿದ್ದುದು ಸ್ಪಷ್ಟವಾಗಿದೆ. ಇದು ಶಾಂತಿವರ್ಮನ ಮೊದಲ ಶಾಸನ. ಇಲ್ಲಿ ಈತ ಬನವಾಸಿ ಪನ್ನಿಚ್ಛಾಸಿರದ ಆಳ್ವಿಕೆ ನಡೆಸುತ್ತಿದ್ದುದರ ಉಲ್ಲೇಖವಿದೆ. ಈ ಶಾಸನದಲ್ಲಿ ಭೂತವೊಂದಕ್ಕೆ ಎಡೆ ನೀಡಿದ ಪ್ರಸಂಗ ಚಿತ್ರಿತವಾಗಿದೆ. ಶಾಂತಿವರ್ಮನು ಸಂಚಾರದಲ್ಲಿದ್ದ ಸಮಯದಲ್ಲಿ 'ಪಲರೂರು' ಎಂಬ ಗ್ರಾಮದಲ್ಲಿ ಬೀಡುಬಿಟ್ಟಿರುತ್ತಾನೆ. ಆಗ ತನ್ನ ಸೈನ್ಯದ ಆನೆ ಕುದುರೆಗಳಿಗಾಗಿ ಮೇವನ್ನು ಆ ಊರಿನ ಮಹಾಜನರಲ್ಲಿ ಕೇಳುತ್ತಾನೆ. ಆಗ ಮಹಾಜನರು ಮೇವು ತರಲು 'ಅಲ್ಲಗುಂದ' ನೆಂಬಾತನಿಗೆ ತಿಳಿಸುತ್ತಾರೆ. ಆಗ ಆತ ಮೇವಿನ ಚಾಗೆಯಲ್ಲಿರುವ ಒಂದು ಭೂತಕ್ಕೆ ಬೇಯಿಸಿದ ಅಕ್ಕಿಯನ್ನು ನೀಡಿದರೆ ತಾನು ಹುಲ್ಲು ತರಲು ಸಾಧ್ಯವೆಂದಾಗ, ಶಾಂತಿವರ್ಮನು ಒಪ್ಪಿ ಬೇಯಿಸಿದ ಅಕ್ಕಿಯನ್ನು ಒದಗಿಸುತ್ತಾನೆ.

ಶಾಂತಿವರ್ಮನ ಕುರಿತು ಎಪಿಗ್ರಾಫಿ ಇಂಡಿಕಾದಲ್ಲಿ ಚರ್ಚಿಸಲಾಗಿದೆ. ಇಲ್ಲಿ ಎಡೆನಾಡಿನ ಶಾಂತಿವರ್ಮ ಹಾಗೂ ಮಾಚಿಗನ ಶಾಸನ ಗಮನಿಸಿ (೯೫೮-೫೯A.D.) **"Tells us that a certain Machiga was then governing the edenadu seventy. He may have been some junior member of the family, perhaps holding office under Santivarma. But there is nothing in the record to mark him as**

such" ಎನ್ನಲಾಗಿದೆ. ಇಲ್ಲೇ ಶ್ರವಣಬೆಳಗೊಳದ ಗಂಗ ಮಾರಸಿಂಹ (ಕ್ರಿ.ಶ. ೯೬೩-೯೭೪) ಬನವಾಸಿಯನ್ನು ಆಕ್ರಮಿಸಿದಾಗ ಇಲ್ಲಿಯ ಮಾಟೂರ ವಂಶದವನೊಬ್ಬನಿಗೆ, ತನಗೆ ವಿಧೇಯನಾಗಿರುವಂತೆ ಒತ್ತಡ ತಂದಿದ್ದನ್ನು ಉಲ್ಲೇಖಿಸಿ, ಆತ ಶಾಂತಿವರ್ಮನಿರಬಹುದೇ ಎಂಬುದಾಗಿ ಚರ್ಚಿಸಲಾಗಿದೆ.**[40]**

ಡಾ. ಬಿ.ಆರ್. ಗೋಪಾಲರು ಶಾಂತಿವರ್ಮ ಕಲ್ಯಾಣಿ ಚಾಲುಕ್ಯ ಎರಡನೆಯ ತೈಲನಿಗೆ ಅಧಿಕಾರಿಯಾಗಿದ್ದ ಎಂದಿದ್ದಾರೆ.**[41]** *ಸೌತ್ಇಂಡಿಯನ್ ಇನ್ಸ್‌ಕ್ರಿಪ್ಷನ್*ಸಂಪಾದಕರು, ಮಾಜಿ ಹಾಗೂ ಶಾಂತಿವರ್ಮ ರಾಷ್ಟ್ರಕೂಟರ ಅವಧಿಯಲ್ಲಿ ಜವಾಬ್ದಾರಿಯುತ ಅಧಿಕಾರಿಗಳೆಂದು ಹೇಳಿದ್ದಾರೆ.**[42]** ಇಲ್ಲಿಯೇ ಶಾಂತಿವರ್ಮನ ಕಾಲವನ್ನು ಕ್ರಿ.ಶ. ೯೭೨-೯೯೨ ಎನ್ನಲಾಗಿದೆ. ಆದರೆ ದೇವಗೇರಿ ಶಾಸನದ ಕಾಲವನ್ನು *ಎಪಿಗ್ರಾಫಿಯಾ ಇಂಡಿಕಾ*ದ ಸಂಪಾದಕರು ಕ್ರಿ.ಶ. ೯೫೮ ಎಂದಿರುವುದರಿಂದ ಈತನ ಕಾಲವನ್ನು ಕ್ರಿ.ಶ. ೯೫೮-೯೯೨ ಎಂದು ತಿದ್ದಿಕೊಳ್ಳಬಹುದು.**[43]**

ಎಡೆನಾಡ ಭಾಗದ ಹೆಚ್ಚೆಯ ಕ್ರಿ.ಶ. ೯೭೨ರ ಶಾಸನವೊಂದು ದೇವಗಿರಿ ಶಾಸನದಂತೆ ವಿಶಿಷ್ಟ ವಿಷಯವನ್ನು ಉಲ್ಲೇಖಿಸಿದೆ.**[44]** ಇದು ರಾಷ್ಟ್ರಕೂಟ ಕಾಲದ ಕೊನೆಯ ಅರಸನಾದ ಕರ್ಕನ-ಕೊನೆಕಾಲದ ಶಾಸನ. ಇಲ್ಲಿ 'ಆಕಟೆ' ಎಂಬಾತ ಶಾಂತಿವರ್ಮನಿಗೆ ಪುತ್ರ ಸಂತಾನವಾದರೆ ತನ್ನ ಶಿರವನ್ನು ಕುಂದದಬ್ಬೆಯ ಎದುರಲ್ಲಿ ಒಪ್ಪಿಸುತ್ತೇನೆಂದು, ನಂತರ ಶಾಂತಿವರ್ಮನಿಗೆ ಪುತ್ರ ಸಂತಾನವಾಗಿ ಅದೇ ರೀತಿ ವರ್ತಿಸುತ್ತಾನೆ. ಅದಕ್ಕೆ ಮೆಚ್ಚಿದ ಶಾಂತಿವರ್ಮ ಎಲಸಿಯ ಮಹಾಜನರ ಸಮ್ಮುಖದಲ್ಲಿ ಆತನ ವಂಶಕ್ಕೆ ಭೂದಾನ ನೀಡುತ್ತಾನೆ.

ಶಾಂತಿವರ್ಮ ಕ್ರಿ.ಶ. ೯೯೧ ರಲ್ಲಿ ಎಡೆನಾಡೆಪ್ಪತ್ತು, ಬೆಳ್ವುಗೆ ಎಪ್ಪತ್ತು, ತಂದವೂರ ಹನ್ನೆರಡು, ಗೆದೆಯ ಹನ್ನೆರಡು, ಮುಗುನ್ದ ಹನ್ನೆರಡು, ಪುಲಿವಟ್ಟ ಹನ್ನೆರಡು, ಕಲ್ಪತ್ತಿ ಏಳು, ಸಾಂತಳಿಗೆ ಸಾವಿರದ ಸ್ವಾಮ್ಯ ಪಡೆದುದರ ಉಲ್ಲೇಖ ಹೆಚ್ಚೆಯ ಶಾಸನದಲ್ಲಿದೆ.**[45]** ಇದೇ ಶಾಸನ ಸಾಂತಳಿಗೆಯ ಬೀರ ಸಾಂತರ ಗೆದೆಯವನ್ನು ಆಕ್ರಮಿಸಿದಂತೆ, ಅದನ್ನು ಶಾಂತಿವರ್ಮ ಪುನಃ ಗೆದ್ದು ಅಲ್ಲಿನ ಗಾವುಂಡ ಜೋಗಯ್ಯನಿಗೆ ಗೈದು ಕೊಟ್ಟಂತೆ ದಾಖಲಿಸಿದೆ. ಈ ಜೋಗಯ್ಯನೂ ಬೀರಸಾನ್ತರ, ಶಾಂತಿವರ್ಮನ ಕದನದಲ್ಲಿ ಭಾಗಿಯಾಗಿದ್ದಂತೆ ಕಂಡುಬರುತ್ತದೆ. ಈತ ಹೆದ್ದಸೆಯಲ್ಲಿದ್ದುದನ್ನು ಈ ಶಾಸನ ಉಲ್ಲೇಖಿಸಿದೆ.

ಈ ಅರಸರು ಕ್ರಿ.ಶ. ೧೦೧೭ರ ಕನವಳ್ಳಿ ಶಾಸನದನ್ವಯ ಶಾಂತಿವರ್ಮನ ಕಾಲಕ್ಕೆ ಬೆಳ್ವುಗೆ ಪ್ರದೇಶವನ್ನು ಆಳಿದಂತಿದೆ.**[46]** ಈ ಮೊದಲು ಮಾಚಿ ಸತ್ಯಳ್ಗೆ ಭಾಗದಲ್ಲಿದ್ದುದನ್ನು ಕ್ರಿ.ಶ. ೯೩೧ರ ಶಾಸನ ಸ್ಪಷ್ಟಪಡಿಸಿದೆ.**[47]** ಶಾಂತಿವರ್ಮ ಕ್ರಿ.ಶ. ೯೫೮ರ ಹೊತ್ತಿಗೆ ಈ ಬೆಳ್ವುಗೆ ಭಾಗಕ್ಕೆ ಪ್ರವೇಶಿಸಿದ್ದ,**[48]** ಆದಾಗ್ಯೂ ಈ ಹೊತ್ತಿಗೆ ಅವನ ಆಳ್ವಿಕೆ ಆ ಭಾಗದಲ್ಲಿ ಇದ್ದುದಕ್ಕೆ ಆಧಾರವಿಲ್ಲ. ಕ್ರಿ.ಶ. ೯೯೧ರ ಹೆಚ್ಚೆ ಶಾಸನ ಇವನ ಆಳ್ವಿಕೆಯ ಪ್ರದೇಶವನ್ನು ದಾಖಲಿಸಿದೆ.**[49]** ಕನವಳ್ಳಿ ಬೆಳ್ವುಗೆ ಭಾಗದ ಮುಖ್ಯ ಗ್ರಾಮ. ಇಲ್ಲಿನ ಶಾಸನವೊಂದು ಮಾಟೂರ ವಂಶದ ಐದು ಮಂದಿ ಅರಸರನ್ನು ಹೆಸರಿಸಿದೆ. ಈ ಶಾಸನ ಸಿರಿಯಾಗರನ ಕಾಲದ್ದು.**[50]** ಇಲ್ಲಿ ಶಾಂತಿವರ್ಮನನ್ನು ಉಲ್ಲೇಖಿಸುವ ಮೊದಲು '**..........** ಸಿನ್ದನಖಿಳೋರ್ವಿ ತಳದೊಳ್ ಶಾಂತಿವರ್ಮನಾತನ ತನಯಂ ಖ್ಯಾತಿ **xxxx..........**' ಎಂದು, ಮುಂದೆ ಪಯ್ವರನ ಉಲ್ಲೇಖ ಬರುತ್ತದೆ. ಈ ತೃಟಿತ ಸಾಲ ಸಿಂಧನ ಮಗ ಶಾಂತಿವರ್ಮನೆಂದೋ, ಶಾಂತಿವರ್ಮನ ಮಗ ಪಯ್ವರನೆಂದೋ ಹೇಳಲು ಹೊರಟಂತಿದೆ ಅಥವಾ ಸಿಂಧನ ನಂತರ ಈ ವಂಶದ ಶಾಂತಿವರ್ಮ ತನ್ನ ಮೂಲಿಗರ ಆಳ್ವಿಕೆಯ ಪ್ರದೇಶವನ್ನು ಆಳಿಕೊಂಡು ಬಂದಂತೆಯೂ ಉಲ್ಲೇಖವಿರಬಹುದು.

ಈ ಎಲ್ಲ ಶಾಸನಗಳನ್ವಯ ಶಾಂತಿವರ್ಮ ಮಾಟೂರ ಅರಸರುಗಳಲ್ಲಿಯೇ ಬಲಿಷ್ಠ ನೆನಿಸುತ್ತಾನೆ. ಈತ ಸುದೀರ್ಘ ೨೬ ವರ್ಷಗಳಷ್ಟು ಕಾಲ ರಾಜ್ಯಭಾರ ಮಾಡಿದಂತೆ

ಕಂಡುಬರುತ್ತದೆ. ಶಾಸನಗಳು ಈತನನ್ನು ‘ವೈರಿ ಮಾರ್ತಾಂಡ, ವಿಕ್ರಮ ಸಿಂಘ, ಸುಭಟ ಚೂಡಾಮಣಿ, ತೇಜಾಗರ, ಸತ್ಯರತ್ನಾಗರ ಎಂದೆಲ್ಲ ಹೊಗಳಿವೆ. ಈತ ತನ್ನ ಎಡೆನಾಡ ವ್ಯಾಪ್ತಿಯ ಆಳ್ವಿಕೆಯ ಕೇಂದ್ರವನ್ನು ಹೆಚ್ಚಾಗಿ ಈ ಹೆದ್ದಸೆಯಲ್ಲೇ ಮಾಡಿಕೊಂಡಿದ್ದ ಎನಿಸುತ್ತದೆ.

[1]ಡಿ.ಆರ್. ಭಂಡಾರ್ಕರ್ – ಇಂಡಿಯನ್ ಎಂಟಿಕ್ವರಿ, ೧೯೧೧ ಪು. ೩೫.
[2]*ಸೌ. ಇಂ. ಇ.*ನಂ.೧೮, ಶಾಸನ ಸಂಖ್ಯೆ-೯೩ ಉಕ್ಕುಂದ, ರಾಣೇಬೆನ್ನೂರು, ಧಾರವಾಡ-೧೦೮೮
[3]ಎ.ಕ. **VIII** ನಂ. ೧೮೪, ಕುಪ್ಪಗಡ್ಡೆ, ಸೊರಬ, ಶಿವಮೊಗ್ಗ, ಕ್ರಿ.ಶ. ೧೦೩೩.
[4]ಅದೇ. ನಂ. ೫೦೦, ಚೀಲನೂರು, ಸೊರಬ, ಶಿವಮೊಗ್ಗ ಕ್ರಿ.ಶ. ೧೦೫೭
[5]*ಎ. ಇಂ.* **XI.** ಪು.ಸಂ. ೪ ರಿಂದ
[6]*ಸೌ. ಇಂ. ಇ.*-೧೮, ಶಾಸನ ನಂ, ೪೩, ಕನವಳ್ಳಿ, ಹಾವೇರಿ, ಧಾರವಾಡ, ಕ್ರಿ.ಶ. ೧೦೧೭.
[7]*ಧಾ.ಜಿ.ಶಾ.ಸೂ.*ನಂ. ೪೦, ಚಿಕ್ಕನಂದಿಹಳ್ಳಿ, ಬ್ಯಾಡಗಿ, ಧಾರವಾಡ, ೮ನೇ ಶತಮಾನ.
[8]*ನೇಗಿನಹಾಳ ಪ್ರಬಂಧಗಳು*– ಹಂಪಿ ವಿಶ್ವವಿದ್ಯಾಲಯ – ಪು.ಸಂ. ೪೮೭
[9]*ಡಾ. ಬಿ.ಆರ್. ಗೋಪಾಲ್. ದಿ ಚಾಲುಕ್ಯಾಸ್ ಆಫ್ ಕಲ್ಯಾಣ ಆಂಡ್ ಕಳಚೂರೀಸ್*, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ಪು. ೨೩೮
[10]*ಸೌ. ಇಂ. ಇ.* ನಂ. ೨೦ ಶಾಸನ ಸಂಖ್ಯೆ – ೪೪.
[11]*ಸೌ. ಇಂ. ಇ.* ನಂ. ೧೮, ಶಾಸನ ಸಂಖ್ಯೆ – ೯೩, ಉಕ್ಕುಂದ, ರಾಣೇಬೆನ್ನೂರು, ಧಾರವಾಡ ಕ್ರಿ.ಶ. ೧೦೮೮.
[12]*ಎ. ಕ.***VIII** ನಂ. ೨೧೬, ಕೆರೆಹಳ್ಳಿ, ಸೊರಬ, ಶಿವಮೊಗ್ಗ, ಕ್ರಿ.ಶ. ೯೦೩.
[13]*ಅದೇ*ನಂ. ೭೦, ಓಟೂರು, ಸೊರಬ, ಶಿವಮೊಗ್ಗ, ಕ್ರಿ.ಶ. ೯೩೮.
[14]*ಧಾಜಿ.ಶಾ.ಸೂ.*ನಂ.೨೫ ೧೯೭೦-೭೧) ಕ್ರಿ.ಶ.೯೩೧.
[15]*ಎ. ಕ. VIII*ನಂ. ೫೦೧, ಕಿರುಗುಣಿಸೆ, ಸೊರಬ, ಶಿವಮೊಗ್ಗ, ಕ್ರಿಶ. ೯೫೮.
[16]*ಅದೇ.* ನಂ. ೪೭೯ ಹೆಚ್ಚೆ, ಸೊರಬ, ಶಿವಮೊಗ್ಗ, ಕ್ರಿಶ. ೯೭೨.
[17]*ಅದೇ.*ನಂ. ೪೭೭ ಹೆಚ್ಚೆ, ಸೊರಬ, ಶಿವಮೊಗ್ಗ, ಕ್ರಿಶ. ೯೯೧.
[18]*ಸೌ. ಇಂ. ಇ.* ನಂ. ೧೮ ಶಾಸನ ಸಂಖ್ಯೆ – ೪೩, ಕನವಳ್ಳಿ, ಹಾವೇರಿ, ಧಾರವಾಡ ಕ್ರಿ.ಶ. ೧೦೧೭
[19]*ಎ. ಕ.***VIII** ನಂ.೬೦ ರಿಂದ ೬೪, ಗುಡವಿ, ಸೊರಬ, ಶಿವಮೊಗ್ಗ, ಕ್ರಿಶ. ೧೦೩೨.
[20]*ಅದೇ.*ನಂ.೫೩೦ – ಹುಣವಳ್ಳಿ, ಸೊರಬ, ಶಿವಮೊಗ್ಗ, ಕ್ರಿಶ. ೯೭೯.
[21]*ಕ.ರಿ. ಇ.ಪಿ.ಆರ್.*೧೯೫೩-೫೭ ಕಥವಿ, ಹಿರೇಕೆರೂರು, ಧಾರವಾಡ ಪು. ೬೫, ಕ್ರಿಶ.೮.
[22]ಎ.ಕ.**VIII** ನಂ. ೧೯೧, ಸಾರೇಕೊಪ್ಪ, ಸೊರಬ, ಶಿವಮೊಗ್ಗ, ಕ್ರಿಶ. ೧೦೩೨.
[23]ಎ.ಕ.**VI-VIII** ಟ್ರಾನ್ಸ್‌ಲೇಶನ್ ವಿಭಾಗ, ಪು.೧೧.
[24]*ಎ. ಕ.***VIII**, ನಂ.೧೮೪, ಕುಪ್ಪಗಡ್ಡೆ, ಸೊರಬ, ಶಿವಮೊಗ್ಗ, ಕ್ರಿಶ. ೧೦೩೩.
[25]ಅದೇ. ನಂ. ೫೦೦, ಚೀಲನೂರು –,, – ಕ್ರಿಶ. ೧೦೫೭.
[26]ಎ.ಕ. **VIII** ನಂ. ೨೨೦, ತಾಳಗುಪ್ಪೆ, ಸೊರಬ, ಶಿವಮೊಗ್ಗ, ಕ್ರಿಶ. ೧೧೨೭.
[27]*ಧಾ.ಜಿ.ಶಾ.ಸೂ.*ನಂ.೨೫(೧೯೭೦-೭೧) ಅರಳಿಕಟ್ಟೆ, ಹಿರೇಕೆರೂರು, ಧಾರವಾಡ, ಕ್ರಿ.ಶ. ೯೩೧.
[28]ಅದೇ – ನಂ. ೨೮ –, –, – (?)
[29]ಎ.ಕ. **VIII** ನಂ. ಓಟೂರು, ಸೊರಬ, ಶಿವಮೊಗ್ಗ, ಕ್ರಿಶ. ೯೩೮.
[30]ಅದೇ, –, – ನಂ. ೪೭೬, ಹೆಚ್ಚೆ –,, – ಕ್ರಿ.ಶ. ೯೩೯.
[31]ಎ.ಕ. **V-VIII** ಟ್ರಾನ್ಸಲೇಷನ್‌ವಿಭಾಗ ಪು.ಸಂ.೧೨.
[32]*ಎ. ಕ.***VIII** ನಂ. ೪೭೪, ಕಕ್ಕರಸಿ, ಸೊರಬ, ಶಿವಮೊಗ್ಗ, ಕ್ರಿಶ. ೯೫೪.
[33]ಅದೇ- ನಂ, ೫೦೦ ಚೀಲನೂರು –,,- ಕ್ರಿ.ಶ. ೧೦೫೭

[34]ಎ.ಇಂ **XI** ಪು, ೫ ರಿಂದ
[35]ಅದೇ –,,– ಪು.ಸಂ. ೪, ೫ ರಿಂದ
[36]ಜಾರ್ಜ್ಎಂ. ಮೋರೇಸ್ –*ದಿ ಕದಂಬ ಕುಲ ಬಾಂಬೆ*೧೯೩೧, ಪು.ಸಂ. ೮೭.
[37]*ಸೌ. ಇಂ. ಇ.* ನಂ. ೧೮ ಶಾಸನ ಸಂಖ್ಯೆ – ೩೦೫, ದೇವಗೇರಿ, ಹಾವೇರಿ, ಧಾರವಾಡ ಕ್ರಿ.ಶ. **(?)**
[38]*ಅದೇ.*
[39]ಎ.ಇಂ.**XI** ಪು.ಸಂ. ೪ ರಿಂದ
[40]*ಅದೇ*
[41]ಬಿ.ಆರ್. ಗೋಪಾಲ್-*ಹಿಂದೆ ಉಲ್ಲೇಖಿಸಿದ್ದು*, ಪು.ಸಂ.೮೧
[42]*ಸೌ. ಇಂ. ಇ.* ನಂ. ೧೮ ಪು.ಸಂ. **VII** ರಿಂದ
[43]ಎ.ಇಂ. **XI** ಪು.ಸಂ. ೫ ರಿಂದ
[44]*ಎ.ಕ.***VIII** ನಂ. ೪೭೯, ಹೆಚ್ಚೆ,ಸೊರಬ ಶಿವಮೊಗ್ಗ ಕ್ರಿ.ಶ.೯೭೨
[45]ಅದೇ ನಂ. ೪೭೭, ಕ್ರಿ.ಶ.೯೯೧.
[46]*ಸೌ. ಇಂ. ಇ.* ನಂ. ೧೮ ಶಾಸನ ಸಂಖ್ಯೆ – ೪೩, ಕನವಳ್ಳಿ, ಹಾವೇರಿ ಧಾರವಾಡ ಕ್ರಿ.ಶ. ೧೦೧೭.
[47]*ಧಾ. ಜಿ. ಶಾ. ಸೂ.*ನಂ.೨೫, ೨೮ (೧೯೭೦-೭೧) ಅರಳಿಕಟ್ಟೆ, ಹಿರೇಕೆರೂರು, ಧಾರವಾಡ, ಕ್ರಿ.ಶ. ೯೩೧.
[48]*ಸೌ. ಇಂ. ಇ.* ನಂ. ೧೮ ಶಾಸನ ಸಂಖ್ಯೆ – ೩೦೫, ದೇವಗೇರಿ, ಹಾವೇರಿ, ಧಾರವಾಡ ಕ್ರಿ.ಶ.**?.**
[49]ಸೊರಬ, ಶಿವಮೊಗ್ಗ, ಕ್ರಿಶ.
[50]*ಸೌ. ಇಂ. ಇ.* ನಂ. ೧೮ ಶಾಸನ ಸಂಖ್ಯೆ – ೪೩, ಕನವಳ್ಳಿ, ಹಾವೇರಿ ಧಾರವಾಡ ಕ್ರಿ.ಶ. ೧೦೧೭.

ಮಲೆಕರ್ನಾಟಕದ ಅರಸು ಮನೆತನಗಳು: ೨. ಹೆಚ್ಚೆಯ ಅರಸರು (೨)

ಪಯ್ವರ : ಪಯ್ವರನ ಉಲ್ಲೇಖ ದೊರೆತಿರುವುದು ಒಂದೇ ಒಂದು ಶಾಸನದಲ್ಲಿ, ಅದು ಕ್ರಿ.ಶ. ೧೦೧೭ರ ಕನವಳ್ಳಿ ಸಿರಿಯಾಗರನ ಶಾಸನದಲ್ಲಿ.**[1]** ತ್ರುಟಿತ ಶಾಸನವಾದಾಗ್ಯೂ ಇಲ್ಲಿ ಈತ ಸಿರಿಯಾಗರನ ತಂದೆ ಎಂಬುದು ಸ್ಪಷ್ಟವಾಗುತ್ತದೆ. ಇಲ್ಲೇ ಈತನ ಪತ್ನಿ ಚಾರಕಬ್ಬೆಯ ಉಲ್ಲೇಖವೂ ಇದೆ. ಆದರೆ ಈತ ರಾಜ್ಯಭಾರ ಮಾಡಿದ ಕಾಲ ಯಾವುದು ಎಂಬುದು ಸ್ಪಷ್ಟವಿಲ್ಲ. ಬಹುಶಃ ಶಾಂತಿವರ್ಮನ ನಂತರ ಕೆಲಕಾಲ ಈತ ಬೆಳ್ವುಗೆ ಭಾಗದಲ್ಲಿ ಆಳ್ವಿಕೆ ನಡೆಸಿರಬಹುದಾದ ಸಾಧ್ಯತೆಯಿದೆ. ಕ್ರಿ.ಶ. ೧೦೬೮-೬೯ರ ಶಾಸನದಲ್ಲಿ**[2]** ಹಾಗೂ ಕ್ರಿ.ಶ. ೧೦೭೧ರ ಶಾಸನದಲ್ಲಿ**[3]** ಪಯ್ವರ ಬರುತ್ತಾನಾದರೂ ಆತನಿಗೂ ಈ ವಂಶದ ಪಯ್ವರನಿಗೂ ಸಂಬಂಧವಿರುವ ಸಾಧ್ಯತೆಯಿಲ್ಲ. ಈ ಕಾಲದ ಶಾಸನಗಳು ಮಾಟೂರ ವಂಶದ ಸತ್ಯಾಶ್ರಯ, ವಿಜಯಾದಿತ್ಯನನ್ನು ಉಲ್ಲೇಖಿಸಿದೆ.

ಸಿರಿಯಾಗರ: ಈ ಹಿಂದೆ ಈತ ಪಯ್ವರನ ಮಗ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಕ್ರಿ.ಶ. ೧೦೧೭ರ ಕನವಳ್ಳಿ ಶಾಸನವು ಸಿರಿಯಾಗರ ಎರಡೆಪ್ಪತ್ತರ ಮನ್ನೆಯ ಹಾಗೂ ಐದು ಹನ್ನೆರಡರ ಆಳ್ವಿಕೆ ನಡೆಸುತ್ತಿದ್ದುದನ್ನು ಉಲ್ಲೇಖಿಸಿದೆ.**[4]** ಇದೇ ಶಾಸನ ಇವನನ್ನು 'ಮಲೆಗೆ ಮಾರ್ತ್ತಂಡ, ಸಮರ ಪ್ರಚಂಡ, ನುಡಿದಂತೆ ಗಂಡ' ಎಂದೆಲ್ಲ ಹೊಗಳಿವೆ. ಮುಂದಿನ ಸಾಲು ಅಪೂರ್ಣವಾಗಿದ್ದು ಶಾಸನದ ವಿಷಯೋದ್ದೇಶ ತಿಳಿಯುವುದಿಲ್ಲ. ಅಂತೆಯೇ ಈ ಸಿರಿಯಾಗರನ ಆಳ್ವಿಕೆಯ ಕಾಲ ಕೂಡ ಸ್ಪಷ್ಟವಾಗಿಲ್ಲ. ಕ್ರಿ.ಶ. ೧೦೮೮ರ ಇನ್ನೊಂದು ಶಾಸನ ಈ ಸಿರಿಯಾಗರನನ್ನು ಹೆಸರಿಸಿದೆ.**[5]** ಆದರೆ ಈ ಹೊತ್ತಿಗೆ ಈತ ರಾಜ್ಯಾಡಳಿತದ ಚುಕ್ಕಾಣಿ ಹಿಡಿದಿರಲಿಲ್ಲ. ಬದಲಿಗೆ ಮಾಟೂರ ವಿಜಯಾದಿತ್ಯನ ಆಡಳಿತದಲ್ಲಿ ಅವನಿಗಿಂತಲೂ ಹಿರಿಯನಾಗಿದ್ದಾನಷ್ಟೆ. ಆದರೆ ಈ ಕನವಳ್ಳಿ ಶಾಸನಕ್ಕೂ (ಕ್ರಿ.ಶ. ೧೦೧೭) ಕ್ರಿ.ಶ. ೧೦೮೮ರ ನಡುವಿನ ಅಂತರದಲ್ಲಿ ಈ ವಂಶದ ಇನ್ನೂ ನಾಲ್ಕು ಜನ ಅರಸರು ಎಡೆನಾಡ ಭಾಗದಲ್ಲಿ

ಆಳ್ವಿಕೆ ನಡೆಸಿದುದರ ಉಲ್ಲೇಖವಿದೆ. ಆದರೆ ಅವರು ಯಾರೂ ಬೆಳ್ವುಗೆ ಭಾಗವನ್ನಾಗಲೀ, ಐದು-ಹನ್ನೆರಡರ ಮನ್ನೆಯಗಳನ್ನಾಗಲೀ ಆಳಿದಂತೆ ಉಲ್ಲೇಖವಿಲ್ಲ. ಬಹುಶಃ ಸಿರಿಯಾಗರ ಪಯ್ಯರನ ನಂತರ ಕೆಲಕಾಲ ಬೆಳ್ವುಗೆಯಷ್ಟನ್ನೇ ಆಳಿರಬಹುದು.

ಮದೇವೂರ ಸಾಂತಯ್ಯ : ಕ್ರಿ.ಶ. ೧೦೧೭ರಿಂದ ಕ್ರಿ.ಶ. ೧೦೩೧ ರ ವರೆಗೂ ಸಿರಿಯಾಗರ ಎಡೆನಾಡನ್ನು ಪ್ರತಿನಿಧಿಸುತ್ತಿದ್ದು, ತದನಂತರ ಇದೇ ವಂಶದ ಸಾಂತಯ್ಯನಿಗೆ ಬಿಟ್ಟುಕೊಟ್ಟಂತೆ ಕಾಣುತ್ತದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮಾಟೂರ ವಂಶೀಯ ಅರಸನೊಬ್ಬನಿಗೆ 'ಮದೇವೂರ' ಸೇರಿಕೊಂಡಿದ್ದು. ಕ್ರಿ.ಶ. ೧೦೩೨ರ ಎಡೆನಾಡಿನ ಕೆಲವು ಶಾಸನಗಳು ಸಾಂತಯ್ಯನನ್ನು ಮದೇವೂರ ಸಾಂತಯ್ಯ ಎಂದೇ ಕರೆದಿವೆ.**[6]** ಸಾಂತಯ್ಯ ಮಾಟೂರು ವಂಶಕ್ಕೆ ಹೇಗೆ ಸಂಬಂಧಿ ಎಂಬುದು ಅಸ್ಪಷ್ಟವಾಗಿದೆ.

ಬಿ.ಆರ್. ಗೋಪಾಲರು ಕ್ರಿ.ಶ. ೧೦೩೨ರ ಶಾಸನಗಳನ್ನು ಗಮನಿಸಿ ಕ್ರಿ.ಶ. ೧೦೩೩ರಲ್ಲಿ ಬರುವ ಆಲಯ್ಯನ ತನಕ ಈ ಸಾಂತಯ್ಯ ಆಳ್ವಿಕೆ ನಡೆಸಿರಬಹುದು ಎಂದಿದ್ದಾರೆ.**[7]**ಕ್ರಿ.ಶ. ೧೦೩೨ರ ಒಟ್ಟು ಐದು ಶಾಸನಗಳು ಒಂದೇ ಕಡೆ ದೊರೆತಿವೆ. ಅವು ವೀರಗಲ್ಲುಗಳಾಗಿದ್ದು ತುರು ಸಂಬಂಧಿ ಕಾಳಗಗಳನ್ನು ಚಿತ್ರಿಸಿವೆ. ಈ ಕದನದಲ್ಲಿ ಮಡಿದವರ ನೆನಪಿಗಾಗಿ ನಿಲ್ಲಿಸಿದ ಸ್ಮಾರಕಗಳು ಇವು. ಇಲ್ಲಿ ಶಾಸನಗಳ ವಿಷಯ ಒಂದೇ ಆದರೂ ಮಡಿದ ವ್ಯಕ್ತಿಗಳು ಬೇರೆ ಬೇರೆ. ಇಲ್ಲಿ ಪೆರ್ಗಡೆ ಮಾದಿಣಯ್ಯನಿಗೂ, ಕದಂಬ ನಾರಾಯಣನಿಗೂ ಘರ್ಷಣೆ ನಡೆದಂತೆ ದಾಖಲಿಸಿದ್ದು, ಕದಂಬರ ಸಾಂತಯ್ಯನೂ ಯುದ್ಧದಲ್ಲಿ ಪಾಲ್ಗೊಂಡಂತೆ ಉಲ್ಲೇಖವಿದೆ. ಇಲ್ಲಿ ಮಾಟೂರು ಸಾಂತಯ್ಯನು ನೇರವಾಗಿ ಈ ಘರ್ಷಣೆಯಲ್ಲಿ ಭಾಗಿಯಾಗಿಲ್ಲ. ಶಾಸನಗಳು ಈತನಿಗೆ ವಿಶೇಷ ಬಿರುದನ್ನೇನೂ ನೀಡಿದಲ್ಲ ಆದರೆ ಈತ ಮಾಟೂರ ವಂಶಸ್ಥ ಎಂಬುದು ಸ್ಪಷ್ಟವಾಗಿದೆ.

ಆಲಯ್ಯ : ಕ್ರಿ.ಶ. ೧೦೩೨ರ ಒಂದು ಶಾಸನವನ್ನು ಬಿ.ಎಲ್.ರೈಸರು ಆಲಯ್ಯನ ಶಾಸನ ಎಂದಿದ್ದಾರೆ.**[8]** ಈ ಶಾಸನದಲ್ಲಿ**[9]**'ಮಾಟೂರ ವಂಶೋದ್ಭವ **xxx** ಜೋಳವಂಸ, ನಂದನವನಚ್ಛತ್ರ ಸರಾಕಾಗತತನುತ್ರಂ ಹ**xxx** ನಾಶ್ರಿತ ಜನಕಾಂಚನ ದರ್ಪಣಧ್ವಜ ಸುರತಮ**xxx** ಬ್ರಹ್ಮಕ್ಷತ್ರಿಯ ಸೂತ್ರಧಾರ ಸಾಮಂತ ಗೋಪಾ**xxx** ಲಬ್ಧವರ ಪ್ರಸಾದ ನಾಮಾದಿ ಸಮಸ್ತ ಪ್ರಸಸ್ತಿ ಸಹಿತ**xxx**ಯ್ಯ ದೇವನು....' ಎಂದಿದೆ. ಹೆಸರು ಸ್ಪಷ್ಟವಾಗಿಲ್ಲವಾದಾಗ್ಯೂ ಇದು ಆಲಯ್ಯನ ಶಾಸನವೆಂದು ಊಹಿಸಬಹುದು. ಅಸ್ಪಷ್ಟವಾಗಿರುವ ಈ ಶಾಸನದ ವಿಷಯ ಸಾರೆಗ್ರಾಮದ ಬ್ರಾಹ್ಮಣರ ಕುರಿತಾಗಿದೆ. ಸಾಂತಯ್ಯ ಹಾಗೂ ಆಲಯ್ಯ ಒಂದೇ ಕಾಲದಲ್ಲಿ ಇದ್ದಂತೆ ಕಂಡು ಬರುತ್ತಿದೆ. ಅಥವಾ ತೀರಾ ಕಿರಿದಾದ ಅವಧಿಯಲ್ಲಿ ಸಾಂತಯ್ಯ, ನಂತರ ಆಲಯ್ಯ ಅಧಿಕಾರಕ್ಕೆ ಬಂದಿರಬೇಕು. ಈ ಆಲಯ್ಯನ ಕುರಿತಾದ ಎರಡನೇ ಶಾಸನದ ಕಾಲಮಾನದಲ್ಲಿಯೂ ಅಸ್ಪಷ್ಟತೆ ಇದೆ.**[10]** ಇಲ್ಲಿ 'ಶಕನೃಪಕಾಳಾತೀತ ಸಂವತ್ಸರ ಶತಂಗಳ್‌೯೫೪ನೆ ಅಂಗೀರಸ ಸಂವತ್ಸರದ ಪುಷ್ಯ ಹುಣ್ಣಿಮಿ ವಡ್ಡವಾರದ ಉತ್ತರಾಯಣ ಸಂಕ್ರಾಂತಿ' ಎಂದಿದೆ. ಈ ಶಕ ೯೫೪ ಅಂಗೀರಸ ಸಂವತ್ಸರವಲ್ಲ, ಆಂಗೀರಸ ಸಂವತ್ಸರ ಶಕ ೯೫೪ ಪುಷ್ಯ ತಿಂಗಳು ಬಂದಿದ್ದರಿಂದ ಕ್ರಿ.ಶ. ೧೦೩೩ ಆಗುತ್ತದೆ. ಇಲ್ಲಿ ಸಂವತ್ಸರವನ್ನು ಗಮನಿಸಿ ವರುಷವನ್ನು ಗುರುತಿಸಿಕೊಂಡಾಗ, ಆಲಯ್ಯ ಕ್ರಿ.ಶ. ೧೦೩೩ ರಲ್ಲಿ ಕದಂಬ ಕುಂದಮನೊಂದಿಗೆ ಕಾದು ಮರಣ ಹೊಂದಿದ ಎಂದು ತಿಳಿಯಬೇಕು. ಅಂದಾಗ ಈತನೂ ಸಾಂತಯ್ಯನಂತೆ ತೀರಾ ಕಡಿಮೆ ಅವಧಿಯಲ್ಲಿ ಆಳ್ವಿಕೆ ನಡೆಸಿ ಮಡಿದಂತಿದೆ. ಅಥವಾ ಈತ ಎಡೆನಾಡ ಭಾಗದಿಂದ ಇನ್ನೂ ಹಿಂದಿನಿಂದಲೂ ಅಧಿಕಾರಿಯಾಗಿದ್ದು ಶಾಸನಗಳು ದಾಖಲಿಸಿಲ್ಲದಿರಬಹುದು. ಆಲಯ್ಯ ಬನವಾಸಿ ಹಾಗೂ ಸಾಂತಳಿಗೆಯನ್ನು ಅನೇಕ ಚ್ಛತ್ರಚ್ಛಾಯೆಯಿಂದಾಳುತ್ತಿದ್ದ ಎಂದು ಕ್ರಿ.ಶ. ೧೦೩೩ರ ಅದೇ ಶಾಸನ ದಾಖಲಿಸಿದೆ. ಈ ಅಂಶವನ್ನು ಗಮನಿಸಿದಾಗ ಆಡಳಿತಾನುಕೂಲದ ದೃಷ್ಟಿಯಿಂದ ಸಾಂತಯ್ಯ, ಆಲಯ್ಯ ಬೇರೆ ಬೇರೆ ವಿಭಾಗಗಳನ್ನು ನಿರ್ದೇಶಿಸುತ್ತಿರುವ ಸಾಧ್ಯತೆಯಿದೆ. ಇಲ್ಲಿ ಉಲ್ಲೇಖವಾದ ಶಕ ೯೫೪ ಬಹುಶಃ ಶಾಸನ ಕಾಲವೆನ್ನಿಸುತ್ತದೆ. ಈ ಶಾಸನದ ವಿಷಯ ಆಲಯ್ಯನ ಮಗ ಜಯಸಿಂಘನನ್ನು

ಕೇಂದ್ರೀಕರಿಸಿದೆ. ಇಲ್ಲಿ ಆಲಯ್ಯನನ್ನು ಪರಸೈನ್ಯಭೈರವ, ರಿಪುಬಳಮಲ್ಲ, ಸಮರೈಕವೀರ, ಪರಾಕ್ರಮಸಿಂಗ, ತೊಲಗದಗಂಡ, ಶೌರ್ಯಾಗಾರ ಎಂದೆಲ್ಲ ಹೊಗಳಿದೆ. ಆತ ಎಡೆನಾಡಿನ ಕುಪ್ಪಗಡ್ಡೆ ಬಯಲಲ್ಲಿ ಕುಂದಮನೊಡನೆ ಹೋರಾಡದ ಘೋರ ಚಿತ್ರಣವನ್ನು ಕೂಡ ಶಾಸನ ಕವಿ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ. ಇದೇ ಶಾಸನವನ್ನು ಬಿ.ಆರ್. ಗೋಪಾಲರು ಕ್ರಿ.ಶ. ೧೦೩೭ ಡಿಸೆಂಬರ್೨೪ ಎಂದು ಗುರುತಿಸಿದ್ದಾರೆ.[11]

ಜಯಸಿಂಘದೇವ : ಆಲಯ್ಯನ ಕುರಿತಾದ ಶಾಸನದಲ್ಲಿಯೇ ಆತನ ಮಗ ಜಯಸಿಂಘನ ಉಲ್ಲೇಖವಿದೆ.[12] ಈ ಶಾಸನ ಸಮಸ್ತಶಾಸ್ತ್ರ ಪಾರಾವರ, ಗಣಿಕಾಮನೋಜ, ಅಶ್ವವಿದ್ಯಾದಿತ, ಪಾಕಶಾಸನ, ಗೀತಕಂಜಾಸನ, ವಿವಿಧ ಬುಧ ಮಾಗಧ ಚಿಂತಾಮಣಿ ಇನ್ನೂ ಮುಂತಾಗಿ, ತದನಂತರ ಈತನ ಶೌರ್ಯವನ್ನು ಹೊಗಳುತ್ತ ಅನೇಕ ಮನ್ನೆಯ ಅರಸರನ್ನು ಸಾಮಂತ, ಮಾಂಡಳೀಕರನ್ನು, ಮಲೆ ಅರಸರನ್ನು, ಬೇಡ, ಕುರುಬರನ್ನು ಹತ್ತಿಕ್ಕಿದ್ದ ಎಂದಿದೆ. ಮುಂದೆ ತನ್ನ ತಂದೆ ಆಲಯ್ಯನ ನೆನಪಿಗಾಗಿ ಕುಪ್ಪಗಡ್ಡೆಯಲ್ಲಿ ಆಲೇಶ್ವರ ನಿರ್ಮಿಸಿ ಎಡೆನಾಡ ಬಳಿಯ 'ಗೆದೆಯ' ಗ್ರಾಮವನ್ನು ದೇವರ ನಿತ್ಯ ನೈಮಿತ್ಯಗಳಿಗಾಗಿ ದಾನಬಿಟ್ಟ ಉಲ್ಲೇಖ ಬರುತ್ತದೆ. ಆಲಯ್ಯನ ನಂತರ ಜಯಸಿಂಘದೇವನೂ ತೀರಾ ಕಡಿಮೆ ಅವಧಿ ಆಡಳಿತ ನಡೆಸಿದಂತೆ ಕಂಡುಬರುತ್ತದೆ. ಕ್ರಿ.ಶ. ೧೦೪೦ರ ಹೊತ್ತಿಗೆ ಮತ್ತೆ ಕದಂಬರು ಈ ಭಾಗವನ್ನು ಆಕ್ರಮಿಸಿಕೊಂಡಿರುವ ದಾಖಲೆಯಿದೆ.[13]

ಸತ್ಯಾಶ್ರಯ : ಕ್ರಿ.ಶ. ೧೦೩೭ರಲ್ಲಿ ಕಾಣಿಸಿಕೊಂಡ ಜಯಸಿಂಘದೇವನ ನಂತರ ಸುಮಾರು ಇಪ್ಪತ್ನಾಲ್ಕು ವರ್ಷಗಳನಂತರ ಅಂದರೆ ಕ್ರಿ.ಶ. ೧೦೬೭ರ[14]ಶಾಸನವೊಂದರಲ್ಲಿ ಈ ವಂಶದ ಸತ್ಯಾಶ್ರಯನ ಉಲ್ಲೇಖ ಸಿಗುತ್ತದೆ. ಈ ಶಾಸನ "....ಸಮಧಿಗತ ಪಂ(ಚ) ಮಹಾಸಬ್ದ(ಮ)ಹಾ ಮಣ್ಡಳೇಸ್ವರಂ ಬ್ರಹ್ಮಕ್ಷತ್ರಿಯ ಸೂತ್ರಧಾರಿ ನನ್ದನ ವನಚ್ಚತ್ರ ಹಯಲಾಂಚನ ದರ್ಪ್ಪಣಧ್ವಜ ವಿರಾಜಮಾನ ಕಾಲೀನ ಹಿವ್ವತ್ರಾವತಾರಂ ನೇಕಾಂಗ ವೀರಂ ಮಾಟೂರ ವಂಶೋದ್ಭವಂ ಪರಿವಾರ ಸಮುದ್ಭಘನದಿದನ್ತೆಗಣ್ಣ ಕೀರ್ತ್ತಿಯ ದಡ್ಡೆನಾಮಾದಿ ಸಮಸ್ತ ಪ್ರಸಸ್ತಿ ಸಹಿತಂ ಶ್ರೀ ಮ್ಮನ್ಮ ಹಾ ಮಣ್ಡಳೇಶ್ವರಂ ಸತ್ಯಾಶ್ರಯ ದೇವಮ್ ||" ಎಂದಿದೆ. ಈ ಶಾಸನ ಕಲ್ಯಾಣಿ ಚಾಲುಕ್ಯ ತ್ರೈಲೋಕ್ಯ ಮಲ್ಲದೇವನ ಕಾಲದ್ದು. ಶಾಸನದಲ್ಲಿ ಎಡೆನಾಡಿನ ಚೀಲನೂರು ಬಮ್ಮ ಗಾವುಂಡನಿಗೆ ಸತ್ಯಾಶ್ರಯ ಕಾರುಣ್ಯಗೈದು ಮೂರು ಊರಿನ ಗಾವುಂಡಿಕೆಯನ್ನು ವಹಿಸಿಕೊಟ್ಟಂತೆ ದಾಖಲಿಸಿದೆ. ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಎಡೆನಾಡಿನ ಅನೇಕ ಗಾವುಂಡರನ್ನು ಪಡೆವಳರನ್ನು ಶಾಸನ ಹೆಸರಿಸಿದೆ. ಸತ್ಯಾಶ್ರಯನ ಕುರಿತು ದೊರೆತ ಶಾಸನ ಕೂಡ ಇದೊಂದೆ. ಈತ – ಕೂಡ ಈ ವಂಶಕ್ಕೆ ಹೇಗೆ ಸಂಬಂಧಿಸಿದ್ದಾನೆಂಬುದು ಸ್ಪಷ್ಟವಾಗಿಲ್ಲ.

ವಿಜಯಾದಿತ್ಯದೇವ : ಕ್ರಿ.ಶ. ೧೦೧೭ ರಿಂದ ಕ್ರಿ.ಶ. ೧೦೮೮ರ ನಡುವಿನ ಅವಧಿಯಲ್ಲಿ ಬೆಳ್ಳುಗೆ ಭಾಗದಲ್ಲಿ ಮಾಟೂರ ವಂಶೀಯರ ಶಾಸನಗಳು ದೊರೆಯುವುದಿಲ್ಲ. ಕ್ರಿ.ಶ. ೧೦೮೮ರ ಉಕ್ಕುಂದ ಶಾಸನ ಈ ವಂಶದ ವಿಜಯಾದಿತ್ಯ ದೇವನನ್ನು ಹೆಸರಿಸಿದೆ.[15] ಇಲ್ಲಿ ಈತನನ್ನು "....ಸ್ವಸ್ತಿ ಸಮಧಿಗತ ಪಂಚ ಮಹಾಸಬ್ದ ಮಹಾಮಣ್ಡಳೇಸ್ವರಂ ತ್ರಿಕುನ್ದಪುರವರಾದೀಸ್ವರಂ ಬ್ರಹ್ಮಕ್ಷತ್ರಿಯ ಸಿಖಾಮಣಿ ಸುಭಟಸಿರೋಮಣಿ ಮಾಟೂರ ವಂಸೋದ್ಭವಂ ಯುವತೀ ಜನ ಚಿತ್ತೋದ್ಭವಂ ನನ್ದನವನಚ್ಚತ್ರ ಹಯಲಾಂಚನಂ ದತ್ತಾರ್ತ್ಥಿ ಕಾಂಚನ ದರ್ಪಣ ಧ್ವಜ ವಿರಾಜಮಾನಂ ದಾನಕಾನೀನ ನಹಿಚ್ಚತ್ರಾವತಾರನೇಕಾಂಗ ವೀರಂ ಸಾಹಸೋತ್ತುಂಗ ನಯ್ಯನ ಸಿಂಗ ನಾಮಾದಿ ಸಮಸ್ತ ಪ್ರಸಸ್ತಿ ಸಹಿತಂ ಶ್ರೀ ಮನ್ಮಹಾ ಮಣ್ಡಳೇಸ್ವರಂ ವಿಜೆಯಾದಿತ್ಯ ದೇವ....." ಎಂದೆಲ್ಲ ಹೇಳಿದೆ. ಶಾಸನೋಲ್ಲೇಖದ ಅನ್ವಯ ಈತ ಬೆಳ್ಳುಗೆ ಪ್ರದೇಶದ ಮಂಡಳೇಶ್ವರ ಎಂಬುದು ಸ್ಪಷ್ಟವಾಗಿದೆ. ಹಾಗೆಯೇ ಈ ಹೊತ್ತಿಗೆ ಅಧಿಕಾರದಲ್ಲಿರಲಿಲ್ಲ. ಈ ಶಾಸನದ ಕಾಲದಲ್ಲಿ ಆರನೆಯ ವಿಕ್ರಮಾದಿತ್ಯನ ಆಳ್ವಿಕೆ ಇತ್ತು. ಜೆ.ಎಂ.ನಾಗಯ್ಯನವರು ವಿಜಯಾದಿತ್ಯನನ್ನು ಕಲ್ಯಾಣಿ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಮುಖ್ಯ ಮಾಂಡಳೀಕ ಎಂದು ಹೆಸರಿಸಿದ್ದಾರೆ.[16] ಈ ಉಕ್ಕುಂದ ಶಾಸನದನ್ವಯ

ವಿಜಯಾದಿತ್ಯ ಬೆಳ್ವುಗೆ ಎಪ್ಪತ್ತು, ಎಡೆನಾಡೆಪ್ಪತ್ತು, ಮೂಗುನ್ದ ಹನ್ನೆರಡು, ತಡೆಯೂರು ಹನ್ನೆರಡು, ಕಲ್ವತ್ತಿ ಏಳು, ಸೀವಟ್ಟಿದೂರು, ಹೆದ್ದಸೆ, ಕನ್ನವಳ್ಳಿ ಇನ್ನಿತರ ಮನ್ನೆಯಗಳನ್ನಾಳುತ್ತಿದ್ದ ಎಂಬುದು ಸ್ಪಷ್ಟವಾಗಿದೆ. ಈ ಶಾಸನದ ವಿಷಯ ಉಕ್ಕುಂದದ ದಾಸಗಾವುಂಡ ಶಿವಾಲಯ ನಿರ್ಮಿಸಿದ್ದು. ಈ ಗಾವುಂಡನಿಗೆ ಮಾಟೂರ ಸಿರಿಯಾಗರ ಕೆಲವು ತೆರಿಗೆ ಬಿಟ್ಟು ಕೊಟ್ಟನ್ನು ಹೇಳಿದೆ. ಇಲ್ಲಿ ಆರನೆಯ ವಿಕ್ರಮಾದಿತ್ಯನ ಮಹಾ ದಂಡನಾಯಕ ಸೋಮೇಶ್ವರ ಭಟ್ಟ ಎರಡಾರುನೂರು ಹಾಗೂ ಬನವಾಸಿ ಪ್ರಾಂತ್ಯಗಳನ್ನಾಳುತ್ತಿದ್ದುದನ್ನು ಉಲ್ಲೇಖಿಸಿದೆ. ಈ ವಿಜಯಾದಿತ್ಯ ಕೂಡ ಮಾಟೂರ ವಂಶಕ್ಕೆ ಹೇಗೆ ಸಂಬಂಧಿ ಎಂಬುದು ಅಸ್ಪಷ್ಟವಾಗಿದೆ.

ಇವರ ಕಡೆಯ ಶಾಸನ ಬೆಳ್ವುಗೆ ಭಾಗದ ಉಕ್ಕುಂದದಲ್ಲಿ ದೊರೆತಿದ್ದು, ಅಲ್ಲಿ ಕಾಲ ಮತ್ತು ಅರಸನ ಹೆಸರು ಎರಡೂ ಅಸ್ಪಷ್ಟವಾಗಿದೆ. ಶಾಸನ ಸಂಪಾದಕರು ಲಿಪಿಯಾಧಾರದಿಂದ ಇದು ಹನ್ನೆರಡನೆ ಶತಮಾನದ ಶಾಸನ ಎಂದಿದ್ದಾರೆ.**[17]** ಎಡೆನಾಡ ಭಾಗದ ತಾಳಗುಪ್ಪೆ ಗ್ರಾಮದ ಒಂದು ಶಾಸನ**[18]** ಕ್ರಿ.ಶ. ೧೧೨೭ಕ್ಕೆ ಸೇರಿದ್ದು ಇಲ್ಲೂ ಮಾಟೂರ ಮಾಂಡಳೀಕನ ಹೆಸರು ಅಲಭ್ಯವಾಗಿದೆ.

ಒಟ್ಟಾರೆ ಈ ಎಲ್ಲ ಶಾಸನಗಳನ್ವಯ ಹೆಚ್ಚೆಯ ಅರಸರು ಕ್ರಿ.ಶ. ೯೦೩ ರಿಂದ ಕ್ರಿ.ಶ. ೧೧೨೭ರ ವರೆಗೆ ಸ್ಪಷ್ಟವಾಗಿ ಎಡೆನಾಡು ಹಾಗೂ ಬೆಳ್ವುಗೆ ಪ್ರದೇಶವನ್ನೂ, ಕೆಲವು ಮನ್ನೆಯಗಳನ್ನು ನಿರಂತರವಾಗಿ ಆಳಿದ್ದು ತಿಳಿದುಬರುತ್ತದೆ. ಬೆಳ್ವುಗೆಯ ಕನವಳ್ಳಿ, ಎಡೆನಾಡನ ಹೆದ್ದಸೆ ಇವರ ತಾತ್ಕಾಲಿಕ ಆಡಳಿತ ಕೇಂದ್ರಗಳಾಗಿರುವ ಸಾಧ್ಯತೆ ಇದೆ.

ಮಾಟೂರ ವಂಶೀಯರ ಆಡಳಿತ ವ್ಯಾಪ್ತಿಗೊಳಪಟ್ಟ ಪ್ರದೇಶ

ಶಾಸನಗಳು ಸ್ಪಷ್ಟವಾಗಿ ಈ ಅರಸರು ಇಂತಿಂತಹ ಪ್ರದೇಶಗಳ ಆಡಳಿತ ಹೊಂದಿದ್ದರು ಎಂದು ಸೂಚಿಸಿವೆ. ಮುಖ್ಯವಾಗಿ ಇವರು ಧಾರವಾಡ ಜಿಲ್ಲೆಯ ಹಾವೇರಿ, ರಾಣೇಬೆನ್ನೂರು ಹಾಗೂ ಹಿರೇಕೆರೂರು ತಾಲ್ಲೂಕಿನ ವ್ಯಾಪ್ತಿಲ್ಲಿಯೂ, ಶಿವಮೊಗ್ಗ ಜಿಲ್ಲೆಯ ಸೊರಬ, ಸಾಗರ, ಶಿಕಾರಪುರ, ತೀರ್ಥಹಳ್ಳಿ, ಹೊಸನಗರದ ಕೆಲಭಾಗಗಳನ್ನೂ ಆಳುತ್ತಿದ್ದರು.

ಎಡೆನಾಡು-೭೦: ಬನವಾಸಿ ೧೨೦೦೦ ಪ್ರಾಂತ್ಯದಲ್ಲಿ ಬರುವ ಮುಖ್ಯ ಉಪವಿಭಾಗ ಈ ಎಡೆನಾಡು-೭೦ ಈ ಭಾಗವನ್ನು ಸ್ಪಷ್ಟವಾಗಿ ಇದುವರೆಗೆ ಗುರುತಿಸಿದಂತೆ ಕಂಡು ಬರುತ್ತಿಲ್ಲ. ಮೈಸೂರು ಜಿಲ್ಲೆಯ ನಂಜನಗೂಡು, ಚಾಮರಾಜನಗರ, ತೀ. ನರಸೀಪುರ, ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕ್ ಶಾಸನಗಳು ಎಡೆನಾಡು, ಎಡತೊರೆನಾಡು ಎಂದಿವೆ.**[19]** ಎಡೆನಾಡಿನ ಮೊದಲ ಉಲ್ಲೇಖ ೭-ಆನೇ ಶತಮಾನದ ಬಸವನಪುರದ ಶಾಸನದಲ್ಲಿ ಕಂಡು ಬರುತ್ತದೆ.**[20]** ಎಡೆನಾಡು, ಎಡತೊರೆನಾಡು ಒಂದೇ ಆಗಿದ್ದು ಎರಡು ರೀತಿಯಲ್ಲಿ ಕಾಣಿಸಿಕೊಳ್ಳುತ್ತಿದೆ. ಆದರೆ ಈ ಎಡೆನಾಡೆಪ್ಪತ್ತು, ಮೇಲೆ ಉಲ್ಲೇಖಿಸಲಾದ ಎಡೆನಾಡು, ಎಡತೊರೆನಾಡು ಪ್ರಾದೇಶಿಕವಾಗಿ ಬೇಏ ಬೇರೆ. ಎಡೆನಾಡು, ಎಡತೊರೆನಾಡು ಪದದ ನಿಷ್ಪತ್ತಿ ಹೀಗಿದೆ. ಎಡ(ಡೆ)+ತೊ (ದೊ)ರೆ+ನಾಡು. ಎಡ ಎಂದೆ ಎಡೆಯಲ್ಲಿ ಇರುವ ಸ್ಥಳಗಳೆಂದೂ, ಎಡತೊರೆ, ಎಡ ದೊರೆ ಎಂದರೆ ಎರಡು ನದಿಗಳ ನಡುವಿನ ಪ್ರದೇಶ ಎಂದೂ, ರಾಜ್ಯದ ಎಡಕ್ಕೆ ಇರುವ ನಾಡು ಎಂದೂ ತಿಳಿಯಬಹುದು.**[21]** ಎಡೆನಾಡು ಎಂಬುದು ಆಡಳಿತಾಂಗ ವಿಭಾಗವಲ್ಲದೇ ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶವನ್ನು ಸಹ ಸೂಚಿಸುತ್ತದೆ.**[22]** ಈ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು, ಶಾಸನಾಧಾರ ಬಳಸಿಕೊಂಡು ಬನವಾಸಿ ೧೨೦೦೦ದ ವ್ಯಾಪ್ತಿಯಲ್ಲಿ ಬರುವ ಎಡೆನಾಡು-೭೦ನ್ನು ಗುರುತಿಸಲಾಗಿದೆ. (ನಕಾಶೆ ನೋಡಿ)

ಈ ಎಡೆನಾಡೆಪ್ಪತ್ತನ್ನು ಶಿವಮೊಗ್ಗ ಜಿಲ್ಲಾ ಶಾಸನಗಳು ಸೂಚಿಸಿರುವ ಪ್ರದೇಶಗಳನ್ನು ಗಮನದಲ್ಲಿಟ್ಟುಕೊಂಡು ನಕಾಶೆಯ ಮೂಲಕ ಹೀಗೆ ಗುರುತಿಸಬಹುದು. ಪಶ್ಚಿಮಕ್ಕೆ

ವರದಾನದಿ, ದಕ್ಷಿಣಕ್ಕೆ ಮಾವಿನ ಹೊಳೆ ಹಾಗೂ ಸಾಂತಳಿಗೆ ನಾಡು. ಪುರ್ವಕ್ಕೆ ದಂಡಾವತಿ ನದಿ, ಜಿಡ್ಡುಳಿಗೆ ನಾಡು ಹಾಗೂ ನಾಗರ ಖಂಡ ಎಪ್ಪತ್ತು. ಉತ್ತರಕ್ಕೆ ಬನವಾಸಿ, ಹಾನಗಲ್ಲು-ಐನೂರು. ಈ ಪ್ರದೇಶಗಳ ನಡುವಿನ ಅಥವಾ ವರದಾ, ದಂಡಾವತಿ, ಮಾವಿನ ಹೊಳೆ ನಡುವಿನ ಸೊರಬ ಮತ್ತು ಸಿರಸಿ ತಾಲ್ಲೂಕಿನ ಹಳ್ಳಿಗಳೇ ಎಡೆನಾಡು ಪ್ರದೇಶ. ಹಾಗಾಗಿ ಈ ಎಡದೊರೆ-೭೦ ಹಾಗೂ ಈ ಎಡೆನಾಡು-೭೦ ಪ್ರಾದೇಶಿಕವಾಗಿ ಬೇರೆ, ಬೇರೆ ಎಂದು ಸ್ಪಷ್ಟವಾಗಿದೆ. ಎಡದೊರೆ-೭೦ರ ಉಲ್ಲೇಖ ಶಿಕಾರಿಪುರ, ಹೊನ್ನಾಳಿ, ಶಿವಮೊಗ್ಗ ತಲ್ಲೂಕಿನ ಶಾಸನಗಳಲ್ಲಿ ಕಂಡುಬರುತ್ತದೆ.

ಬೆಳ್ವುಗೆ-೭೦ : ಎರಡಾರು ನೂರರಲ್ಲಿ ಬರುವ ಪುಲಿಗೆರೆ ಮುನ್ನೂರರ ಉಪವಿಭಾಗವಿದು. ಧಾರವಾಡ ಜಿಲ್ಲೆಯ ಹಾವೇರಿ ತಾಲ್ಲೂಕಿನ ಕೆಲಗ್ರಾಮಗಳನ್ನು ಹೊಂದಿತ್ತು. ಹಿಂದಿನ ಬೆಳ್ವುಗೆ ಗ್ರಾಮವೇ ಇಂದು 'ಬೆಳ್ವಾಗಿ' ಹೆಸರಿನಿಂದ ಕರೆಯಲ್ಪಡುತ್ತಿದೆ. ಇದು ಎಪ್ಪತ್ತು ಗ್ರಾಮಗಳಿಗೆ ಮುಖ್ಯಗ್ರಾಮ. ನೇರಲಿಗೆ, ಕನ್ನವಳ್ಳಿ, ಗಳಗನಾಥ, ನೆಗಳೂರು, ಹೊನ್ನತ್ತಿ ಇವೂ ಮುಖ್ಯ ಗ್ರಾಮಗಳು.[23] ಬೆಳ್ವುಗೆ, ಬೆಳ್ವಹೆ-೭೦ರಲ್ಲಿ ಗುತ್ತವೊಳಲ್ (ಗುತ್ತಲ) ಕೂಡ ಇತ್ತು. ಕ್ರಿ.ಶ. ೯೯೧ರ ಶಾಸನವೊಂದು[24] ಬಲ್ಲುಗ ಎಂಬ ಹೆಸರನ್ನು ಸೂಚಿಸಿದೆ. ಈ ಬಲ್ಲುಗ ಬೆಳ್ವುಗೆಯಾಗಿರವ ಸಾಧ್ಯತೆಯಿದೆ.

ಮೂಗುನ್ದ-೧೨ : ಬನವಾಸಿ ೧೨೦೦೦ದ ಉಪವಿಭಾಗವಾಗಿದೆ. ಇಂದಿನ ಹಿರೇಕೆರೂರು (ಧಾರವಾಡ .ಜಿ.) ತಾಲ್ಲೂಕಿನ ಚಿನ್ನಮುಳಗುಂದವೇ ಅಂದಿನ ಮೂಗುನ್ದ ಎನ್ನಲಾಗಿದೆ.[25]

ತಡೆಯೂರು-೧೨: ಧಾರವಾಡ ಜಿಲ್ಲಾ ರಾಣೇಬೆನ್ನೂರು ತಾಲ್ಲೂಕಿನ ಉಕ್ಕುಂದ ಶಾಸನದಲ್ಲಿ ಇದರ ಉಲ್ಲೇಖ 'ತಡೆಯೂರು ಪನ್ನೆರಡುಂ' ಎಂದು ಬರುತ್ತದೆ. ಇದೂ ಬನವಾಸಿ ೧೨೦೦೦ ದೊಳಗೆ ಇತ್ತು.[26]

ಪುಲಿವಟ್ಟ-೧೨: ಈ ಭಾಗಕೂಡ ಎರಡಾರುನೂರರಲ್ಲಿ ಒಂದಾಗಿರಬೇಕು. ಇದರ ವ್ಯಾಪ್ತಿ ಬಗ್ಗೆ ಸ್ಪಷ್ಟವಿಲ್ಲ.

ತಂದವೂರು-೧೨: ಇದನ್ನು ಗುರುತಿಸಲಾಗಿಲ್ಲ.

ಗೆದೆಯ-೧೨: ಈ ವಿಭಾಗದ ಬಗ್ಗೆಯೂ ಹಿಂದೆ ಎಲ್ಲೂ ಸ್ಪಷ್ಟವಾದಂತಿಲ್ಲ. ಆದರೆ ಕ್ರಿ.ಶ. ೧೦೩೩ರ ಶಾಸನವೊಂದು[27]ಎಡೆನಾಡೆಪ್ಪತ್ತರ ಬಳಿಯ 'ಗೆದೆಯ' ಎಂದಿದೆ. ಎಡೆನಾಡಿಗೆ ತಾಗಿದಂತಿರುವ 'ಜಡೆ'ಗ್ರಾಮಕ್ಕೆ 'ಜದೆಯ' ಎಂಬ ಉಲ್ಲೇಖವಿದೆ. ಜೆಡೆಯ>ಗೆದೆಯ ಒಂದೇ ಆಗಿರುವ ಸಾಧ್ಯತೆಯಿದೆ. ಇದರ ಸುತ್ತ ಎಡೆನಾಡು ನಾಗರಖಂಡ, ಪಾನುಗಲ್ಲು ಮುಂತಾದ ಉಪವಿಭಾಗಗಳಿವೆ.

ಸಾಂತಳಿಗೆ-೧೦೦೦: ಕೆಲವರು ಈ ಸಾಂತಳಿಗೆ ಸಾವಿರವನ್ನು ಸತ್ತಳಿಗೆ ಸಾವಿರ ಎಂದು ಗುರುತಿಸಿದ್ದಾರೆ.[28]ಆದರೆ ಹಲವಾರು ಶಾಸನಗಳನ್ವಯ ಇವೆರಡೂ ಬೇರೆ ಬೇಎ. ಸಾಂತರರು ನೆಲೆನಿಂತ ಪ್ರದೇಶಕ್ಕೆ ಸಾಂತಳಿಗೆ ನಾಡು ಎನ್ನಲಾಗುತ್ತಿದೆ. ಇದು ಶಿವಮೊಗ್ಗ ಜಿಲ್ಲೆಯ ಸಾಗರ, ಹೊಸನಗರ, ತೀರ್ಥಹಳ್ಳಿ, ಶಿಕಾರಿಪುರದ ಕೆಲಭಾಗಗಳನ್ನೊಳಗೊಂಡಿತ್ತು.[29]

ಸತ್ತಳಿಗೆ-೭೦: ಕ್ರಿ.ಶ. ೧೧೮೮ರ ಉಕ್ಕುಂದದ ಶಾಸನ ಸತ್ಯಳ್ಗೆ ಎಪ್ಪತ್ತರ ಬಳಿಯ ಬಾಡ ಒರ್ಕುಂದ ಎಂದಿದೆ.[30] ಈ ಸತ್ತಳಿಗೆ ಎಪ್ಪತ್ತು ಬನವಾಸಿ ೧೨೦೦೦ದ ಉಪವಿಭಾಗ. ಸತ್ತಳಿಗೆ ಎಂಬುದು ಈಗಿನ ಧಾರವಾಡ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಸಾತೇನಹಳ್ಳಿ ಇರಬೇಕೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಈ ವಿಭಾಗವು ರಾಣೇಬೆನ್ನೂರು ತಾಲ್ಲೂಕಿನ ಕೆಲ ಭಾಗಗಳ ನ್ನೊಳಗೊಂಡಿತ್ತು.[31]

ಇಷ್ಟಲ್ಲದೆ ಮಾಟೂರ ಅರಸರು ಕಲ್ವತ್ತಿ ಏಳು, ಸೀವಟ್ಟಿದೂರು, ಹೆರ್ದೆಸೆ, ಕನ್ನವಳ್ಳಿ ಮನ್ನೆಯಗಳನ್ನಾಗಳುತ್ತಿದ್ದುದು ಶಾಸನಗಳಲ್ಲಿ ಉಕ್ತವಾಗಿದೆ. ಈ ಕಲ್ಪತ್ತಿ ಹಾಗೂ ಸೀವಟ್ಟಿದೂರು ಯಾವುದೆಂದು ಸ್ಪಷ್ಟವಾಗಿಲ್ಲ. ಅದೇ ಹೆರ್ದೆಸೆ ಈಗಿನ ಹೆಚ್ಚೆ ಸೊರಬ ತಾಲ್ಲೂಕಿನ ಒಂದು ಗ್ರಾಮ. ಇವರ ಒಂದು ಶಾಸನ ಎರಡೆಪ್ಪತ್ತು ಹಾಗೂ ಐದು ಹನ್ನೆರಡು ಎಂದು ಕರೆದಿವೆ. ಈ ಎರಡೆಪ್ಪತ್ತನ್ನು ಎಡೆನಾಡೆಪ್ಪತ್ತು + ಬೆಳ್ಳುಗೆ ಎಪ್ಪತ್ತು ಎಂದು ಗುರುತಿಸಿಕೊಳ್ಳಬೇಕಾಗಿದೆ. ಅದೇ ರೀತಿ ಐದು ಹನ್ನೆರಡನ್ನು ಮುಗುನ್ದ ಹನ್ನೆರಡು +ತಡೆಯೂರು ಹನ್ನೆರಡು + ತಂದವೂರು ಹನ್ನೆರಡು+ಪುಲಿವಟ್ಟು ಹನ್ನೆರಡು ಹಾಗೂ ಗೆದೆಯ ಹನ್ನೆರಡು ಎಂದು ತಿಳಿಯಬಹುದು. ಇದಕ್ಕೆ ಆಧಾರ ಈ ಮಾಟೂರ ಅರಸರ ಶಾಸನಗಳಲ್ಲಿ ಇವು ಉಲ್ಲೇಖಗೊಂಡಿವೆ. ಈ ತಡೆಯೂರು,**[32]** ತಲೆಯೂರು,**[33]** ತಲೆವೂರು**[34]** ಈಗ ತಲ್ಲೂರು ಆಗಿದೆ. ಪರಿವೀಕ್ಷಣಾ ಸಮಯದಲ್ಲಿ ಈ ಗ್ರಾಮ ಮಾಟೂರು ಅರಸರಷ್ಟು ಹಳೆಯ ಊರು ಎಂಬುದಕ್ಕೆ ಅಲ್ಲಿನ ಕೆಲ ಅವಶೇಷಗಳು ಆಧಾರವಾಗಿವೆ. ಹಾಗಾಗಿ ಈ ತಡೆಯೂರು ಹನ್ನೆರಡೆಂದರೆ ಇದೇ ತಲ್ಲೂರೆ? ಆದರೆ ಇದು ನಾಗರಖಂಡದ ವ್ಯಾಪ್ತಿಯಲ್ಲಿದೆ. ಅಥವಾ ಆ ಸೀಮೆಯಲ್ಲಿನ ಇನ್ನೊಂದು ಕಿರುವಿಭಾಗವೂ ಆಗಿರಬಹುದು. ಇದು ಸೊರಬ ತಾಲ್ಲೂಕಿಗೆ ಸೇರಿದ ಒಂದು ಗ್ರಾಮ.

ಮಾಟೂರ ಅರಸರುಗಳ ಶಾಸನದನ್ವಯ ಮಾಚಿದೇವ, ಶಾಂತಿವರ್ಮ, ಸಿರಿಯಾಗರ, ಆಲಯ್ಯ ಹಾಗೂ ವಿಜಯಾದಿತ್ಯ ಈ ಎಡೆನಾಡು ಹಾಗೂ ಬೆಳ್ಳುಗೆಯನ್ನಲ್ಲದೆ ಸತ್ಯಳ್ಗೆ, ಸಾಂತಳಿಗೆ ಪ್ರದೇಶವನ್ನು ಕೆಲಕಾಲ ಸ್ವಾಮ್ಯಕ್ಕೆ ತೆಗೆದುಕೊಂಡಿದ್ದು ಸ್ಪಷ್ಟವಾಗಿದೆ. ಆದರೆ ಈ ಎಲ್ಲ ಅರಸರುಗಳು ನಿರಂತರವಾಗಿ ಎಡೆನಾಡಿನ ಸ್ವಾಮ್ಯವನ್ನು ಉಳಿಸಿಕೊಂಡಿದ್ದರು. ಕ್ರಿ.ಶ. ೯೩೮ರ ಶಾಸನದ ಪ್ರಕಾರ ಮಾಚಿ ಎಡೆನಾಡಿನಿಂದ ಬನವಾಸಿಯನ್ನು ಪ್ರತಿನಿಧಿಸುತ್ತಿದ್ದುದು,**[35]** ನಂತರ ಆತ ಈ ಭಾಗದಲ್ಲಿ ಕ್ರಿ.ಶ. ೯೫೮ರ ವರೆಗೂ ಕಂಡು ಬರುತ್ತಾನೆ.**[36]** ಆದರೆ ಈ ನಡುವೆ ಕ್ರಿ.ಶ. ೯೫೧ ರಲ್ಲಿ ಕುರುವರನ ಮಗ ಚಿಕ್ಕಶಂಭು ಎಂಬ ವ್ಯಕ್ತಿ ಎಡೆನಾಡನ್ನು ಪ್ರತಿನಿಧಿಸುತ್ತಿದ್ದುದು ಕಂಡು ಬರುತ್ತದೆ**[37],**ಆದರೆ ಎಷ್ಟುಕಾಲ ಇತ್ಯಾದಿ ಸ್ಪಷ್ಟವಾಗಿಲ್ಲ. ಕ್ರಿ.ಶ. ೯೩೧ರ ಹೊತ್ತಿಗೆ ಇದೇ ಮಾಚಿದೇವನ ಕುರಿತಾದ ಶಾಸನ ಸತ್ಯಳ್ಗೆ ಭಾಗದಲ್ಲಿ ದೊರೆತಿದೆ. ಆದರೆ ಈತನ ವ್ಯಾಪ್ತಿ, ಅಧಿಕಾರದ ಕುರಿತು ಸ್ಪಷ್ಟತೆ ದೊರೆತಿಲ್ಲ.**[38]** ಕ್ರಿ.ಶ. ೯೫೮ರ ಹೊತ್ತಿಗೆ ಈ ವಂಶದ ಶಾಂತಿವರ್ಮ ಬೆಳ್ಳುಗೆ ಭಾಗದ ಶಾಸನದಲ್ಲಿ ಕಂಡು ಬರುತ್ತಾನೆ.**[39]** ಅಲ್ಲಿ ಶಾಂತಿವರ್ಮ ವರದಾ ನದಿಯ ಸೀಮೆಯನ್ನಿಟ್ಟುಕೊಂಡು ಬನವಾಸಿ ಪ್ರಾಂತ್ಯಕ್ಕೆ ಅಧಿಕಾರಿಯಾಗಿದ್ದ ಸುಳಿವು ಸಿಗುತ್ತದೆ. ಈ ವರದಾನದಿ ಶಿವಮೊಗ್ಗ ಜಿಲ್ಲೆಯ ಸಾಗರ, ಸೊರಬ ಪ್ರದೇಶವಲ್ಲದೇ ಧಾರವಾಡ ಜಿಲ್ಲಾ ಹಿರೇಕೆರೂರು, ಹಾನಗಲ್ ತಾಲ್ಲೂಕಿನಲ್ಲಿಯೂ ಹರಿಯುತ್ತದೆ. ಹಾಗಾಗಿ ಇವನ ಅಧಿಕಾರ ವ್ಯಾಪ್ತಿ ಮೇಲೆ ಸೂಚಿಸಿದ ಹಲವು ಪ್ರದೇಶಗಳಿಗೂ ವ್ಯಾಪಿಸಿತ್ತು. ನಂತರ ಈತನ ಕುರಿತಾದ ಕ್ರಿ.ಶ. ೯೯೧ರ ಶಾಸನದನ್ವಯ ಇವನು ಎಡೆನಾಡು, ಸಾಂತಳಿಗೆ ಪ್ರದೇಶವನ್ನಾಳುತ್ತಿದ್ದುದು ಸ್ಪಷ್ಟವಾಗಿದೆ.**[40]** ಈ ಹೊತ್ತಿಗಾಗಲೇ ಬನವಾಸಿ ಪ್ರಾಂತ್ಯದ ಮಾಂಡಳೀಕತ್ವ ಕದಂಬರ ಹಿಡಿತದಲ್ಲಿದ್ದುದಕ್ಕೆ ಅನೇಕ ಶಾಸನಗಳು ಆಧಾರವಾಗಿವೆ. ಬಿ.ಆರ್.ಗೋಪಾಲರು-ಕುಂದಮನ ನಂತರ ಸಾಂತಳಿಗೆ ಭಾಗ ಮಾಟೂರು ಆಲಯ್ಯನಿಗೆ ಸೇರಿರಬೇಕು ಎನ್ನುತ್ತಾರೆ.**[41]** ಆಲಯ್ಯ ಕ್ರಿ.ಶ. ೧೦೩೩ರ ಹೊತ್ತಿಗೆ ಈ ಸಾಂತಳಿಗೆ ಹಾಗೂ ಬನವಾಗಿ ಎರಡೂ ಪ್ರದೇಶಗಳನ್ನು ಆಳುತ್ತಿದ್ದ ಸೂಚನೆ ಇದೆ. ಅದೇ ಸಮಯದಲ್ಲಿ ಆತ ಕದಂಬ ಕುಂದಮನೊಡನೆ ಹೋರಾಡಿ ಮಡಿದ ಉಲ್ಲೇಖವಿದೆ.**[42]** ತದನಂತರ ಮಾಟೂರ ಅರಸರಿಗೆ ಕೆಲಕಾಲ ಬನವಾಸಿ, ಸಾಂತಳಿಗೆ ಪ್ರಾಂತ್ಯ ಕೈ ತಪ್ಪಿರಬೇಕು. ಆ ಸಮಯದಲ್ಲಿ ಇವರು ನಮಗೆ ಬೆಳ್ಳುಗೆ ಭಾಗದಲ್ಲಿ ಕಂಡುಬರುತ್ತಾರೆ. ಕ್ರಿ.ಶ. ೧೦೫೦ರ ತನಕವೂ ಎಡೆನಾಡ ಭಾಗದಲ್ಲಿ ಈ ಅರಸರು ಗೋಚರಿಸುವುದಿಲ್ಲ. ಮುಂದೆ ಸತ್ಯಾಶ್ರಯ ಮತ್ತೆ ಈ ಭಾಗದ ಸ್ವಾಮ್ಯತೆ ಪಡೆಯುತ್ತಾನೆ.**[43]** ಮುಂದೆ ಕ್ರಿ.ಶ. ೧೦೮೮ರ ತನಕ ಇವರು ಬೆಳ್ಳುಗೆ, ಎಡೆನಾಡಿನಲ್ಲಿದ್ದುದಕ್ಕೆ ಶಾಸನಾಧಾರಗಳಿವೆ.**[44]** ಎಡೆನಾಡಿನ ಸ್ವಾಮ್ಯ ಕ್ರಿ.ಶ. ೧೧೨೦ರ ತನಕ ದೊರೆಯುತ್ತದೆ.**[45]**

[1] *ಅದೇ*

[2] *ಸೌ. ಇಂ. ಇ.* ನಂ. ೭ ಶಾಸನ ಸಂಖ್ಯೆ – ೪೪, ೪೫ ಕ್ರಿ.ಶ. ೧೦೬೮-೬೯.

[3] ಇಂ.ಎಂ. – XIPP ೧೮೩ ಋಈಮಧ

[4] *ಸೌ. ಇಂ. ಇ.* ನಂ. ೧೮ ಶಾಸನ ಸಂಖ್ಯೆ – ೪೩, ಕನವಳ್ಳಿ, ಹಾವೇರಿ ಧಾರವಾಡ ಕ್ರಿ.ಶ. ೧೦೧೭.

[5] ಅದೇ ಶಾಸನ ಸಂಖ್ಯೆ ೯೩, ಉಕ್ಕುಂದ, ರಾಣೇಬೆನ್ನೂರು, ಧಾರವಾಡ ಕ್ರಿ.ಶ. ೧೦೮೮.

[6] ಎ.ಕ.VIII ನಂ.೬೬ ರಿಂದ ೬೪, ಗುಡವಿ, ಸೊರಬ, ಶಿವಮೊಗ್ಗ, ಕ್ರಿಶ. ೧೦೩೨.

[7] ಬಿ.ಆರ್.ಗೋಪಾಲ್- ಹಿಂದೆ ಉಲ್ಲೇಖಿಸಿರುವುದು, ಪು. ೧೪೪.

[8] ಎ.ಕ.VI-VIII ಟ್ರಾನ್ಸ್‌ಲೇಷನ್‌ವಿಭಾಗ ಪು.ಸಂ. ೩೧

[9] *ಎ. ಕ.*VIII ನಂ. ೧೯೧, ಸಾರೇಕೊಪ್ಪ, ಸೊರಬ, ಶಿವಮೊಗ್ಗ, ಕ್ರಿಶ. ೧೦೩೨.

[10] ಅದೇ.ನಂ. ೧೮೪, ಕುಪ್ಪಗಡ್ಡೆ, ಕ್ರಿ.ಶ.೧೦೩೩.

[11] ಬಿ.ಆರ್.ಗೋಪಾಲ್ – ಹಿಂದೆ ಉಲ್ಲೇಖಿಸಿದ್ದು, ಪು.ಸಂ. ೧೪೨

[12] *ಎ. ಕ.*VIII ನಂ-೧೮೪ ಕುಪ್ಪಗಡ್ಡೆ, ಸೊರಬ, ಶಿವಮೊಗ್ಗ, ಕ್ರಿಶ. ೧೦೩೩.

[13] ಬಿ.ಆರ್.ಗೋಪಾಲ್ – ಹಿಂದೆ ಉಲ್ಲೇಖಿಸಿದ್ದು, ಪು.ಸಂ. ೧೪೨

[14] *ಎ. ಕ.*VIII ನಂ.-೫೦೦, ಚೀಲನೂರು, ಸೊರಬ, ಶಿವಮೊಗ್ಗ, ಕ್ರಿಶ.

[15] *ಸೌ. ಇಂ. ಇ.* ನಂ. ೧೮ ಶಾಸನ ಸಂಖ್ಯೆ – ೯೩, ಉಕ್ಕುಂದ, ರಾಣೆಬೆನ್ನೂರು, ಧಾರವಾಡ. ಕ್ರಿ.ಶ. ಸಂ. ೨೨೭.

[16] ಜೆ.ಎಂ. ನಾಗಯ್ಯ – *ಆರನೆಯ ವಿಕ್ರಮಾದಿತ್ಯನ ಶಾಸನಗಳು*, ಬೆಳಗಾವಿ, ೧೯೯೧, ಪು.ಸಂ. ೨೨೭.

[17] *ಸೌ. ಇಂ. ಇ.* ನಂ. ೧೮ ಶಾಸನ ಸಂಖ್ಯೆ – ೩೪೬, ಉಕ್ಕುಂದ, ರಾಣೆಬೆನ್ನೂರು, ಧಾರವಾಡ. ಕ್ರಿ.ಶ. ಸಂ. ೧೨.

[18] *ಎ. ಕ.*VIII ನಂ. ೨೨೦, ತಾಳಗುಪ್ಪೆ, ಸೊರಬ, ಶಿವಮೊಗ್ಗ, ಕ್ರಿಶ. ೧೧೨೭.

[19] *ಇತಿಹಾಸ ದರ್ಶನ* ಸಂ-೧೨ (೧೯೯೭) ಪು.ಸಂ.೧೫೭.

[20] *ಅದೇ.*

[21]*ಅದೇ.*

[22]*ಅದೇ.*

[23]ಜೆ.ಎಂ.ನಾಗಯ್ಯ – ಹಿಂದೆ ಉಲ್ಲೇಖಿಸಿದ್ದು, ಪು. ೧೦೭.

[24]*ಎ.ಕ.*VIII ನಂ. ೪೭ ಹೆಚ್ಚೆ, ಸೊರಬ ಶಿವಮೊಗ್ಗ – ಕ್ರಿ.ಶ. ೯೯೧.

[25]ಜೆ.ಎಂ.ನಾಗಯ್ಯ – ಹಿಂದೆ ಉಲ್ಲೇಖಿಸಿದ್ದು, ಪು-೧೧೪.

[26]ಅದೇ, ಪು.೧೧೨.

[27]*ಎ.ಕ.* VIII ನಂ. ೧೮೪, ಕುಪ್ಪಗಡ್ಡೆ, ಸೊರಬ, ಕ್ರಿ.ಶ. ೧೦೩೩

[28]ಸೌ.ಇಂ.ಇ. ೧೮. ಜಿಯಾಗ್ರಾಫಿಕಲ್ ಡಿವಿಜನ್, ಪು.ಸಂ. XXVII.

[29]ಜೆ.ಎಂ.ನಾಗಯ್ಯ – ಹಿಂದೆ ಉಲ್ಲೇಖಿಸಿದ್ದು, ಪು-೧೧೧.

[30]*ಸೌ.ಇಂ.ಇ.* ನಂ. ೧೮ ಶಾಸನ ಸಂಖ್ಯೆ – ೯೩, ಉಕ್ಕುಂದ, ರಾಣೆಬೆನ್ನೂರು, ಧಾರವಾಡ. ಕ್ರಿ.ಶ. ಸಂ. ೧೦೮೮.

[31]ಅದೇ, ಜಿಯಾಗ್ರಾಫಿಕಲ್ಪು.ಸಂ. XXIV

[32]*ಎ.ಕ.* VIII ನಂ. ೨೮೯ ತಲ್ಲುಕು, ತೊರಬ, ಶಿವಮೊಗ್ಗ, ಕ್ರಿ.ಶ. ೧೧೩೮.

[33]*ಅದೇ*, ನಂ. ೨೮೮, ಕ್ರಿ.ಶ?

[34]*ಅದೇ*, ನಂ. ೨೮೭, ಕ್ರಿ.ಶ. ೧೧೬೩

[35]*ಅದೇ*, ನಂ. ೭೦, ಓಟೂರು, ಕ್ರಿ.ಶ. ೯೩೮

[36]*ಅದೇ*, ನಂ. ೫೦೧, ಕಿ

[37]*ಅದೇ*, ನಂ. ೫೭೦. ಕೈಸೋಡಿ, ಕ್ರಿ.ಶ. ೯೫೧.

[38]ಧಾ.ಜಿ.ಶಾ.ಸೂ. (೧೯೭೦-೭೧) ನಂ.೨೮ ಅರಳೀಕಟ್ಟೆ, ಹಿರೇಕೆರೂರು, ಧಾರವಾಡ, ಕ್ರಿ.ಶ. ೯೩೧

[39]*ಸೌ.ಇಂ.ಇ.* ನಂ. ೧೮, ಶಾಸನ ಸಂಖ್ಯೆ – ೩೦೫, ದೇವಗೇರಿ, ಹಾವೇರಿ, ಧಾರವಾಡ, ಕ್ರಿ.ಶ.?

[40]*ಎ.ಕ.* VIII ನಂ. ನಂ.೪೭೭ ಹೆಚ್ಚೆ, ಸೊರಬ ಶಿವಮೊಗ್ಗ ಕ್ರಿ.ಶ.೯೯೧.

[41]ಬಿ.ಆರ್.ಗೋಪಾಲ – ಹಿಂದೆ ಉಲ್ಲೇಖಿಸಿರುವುದು, ಪು. ೧೪೨.

[42] *ಎ.ಕ.* VIII ನಂ. ೧೮೪. ಕುಪ್ಪಗಡ್ಡೆ, ಸೊರಬ ಶಿವಮೊಗ್ಗ ಕ್ರಿ.ಶ ೧೦೩೩.

[43] *ಅದೇ*, ನಂ.೫೦೦, ಚೀಲನೂರು, ಕ್ರಿ.ಶ. ೧೦೫೭.

[44] *ಸೌ.ಇಂ.ಇ.* ನಂ. ೧೮, ಶಾಸನ ಸಂಖ್ಯೆ – ೯೩, ಉಕ್ಕುಂದ, ರಾಣೆಬೆನ್ನೂರು, ಧಾರವಾಡ. ಕ್ರಿ.ಶ. ೧೦೮೮.

[45] *ಎ.ಕ.* VIII ನಂ. ೨೨೦. ತಾಳಗುಪ್ಪ, ಸೊರಬ, ಶಿವಮೊಗ್ಗ ಕ್ರಿ.ಶ.೧೧೨೭.

ಮಲೆಕರ್ನಾಟಕದ ಅರಸು ಮನೆತನಗಳು: ೨. ಹೆಚ್ಚೆಯ ಅರಸರು (೩)

ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಹಾಗೂ ಸಾಮಾಜಿಕ ಪರಿಸ್ಥಿತಿ

ವಿವಿಧ ಅಂಗಗಳಲ್ಲಿ ಇವರ ಕಾರ್ಯವೈಖರಿಯನ್ನು ಗುರುತಿಸುವ ಮುನ್ನ, ಇವರಿಗೆ ಸಂಬಂಧಿಸಿದ ಶಾಸನ ಸ್ವರೂಪವನ್ನು ಪರಿಚಯಿಸಿ ಕೊಳ್ಳುವುದು ಅವಶ್ಯ. ಈವರೆಗೆ ಒಟ್ಟು ಇಪ್ಪತ್ನಾಲ್ಕು ಶಾಸನಗಳು ದೊರೆತಿದ್ದು, ಅವು ಶಿವಮೊಗ್ಗ ಜಿಲ್ಲೆ, ಧಾರವಾಡ ಜಿಲ್ಲೆಗೆ ಸಂಬಂಧಿಸಿವೆ. ಇವುಗಳಲ್ಲಿ ಕೆಲವು ಶಾಸನಗಳು *ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್*ಸಂಖ್ಯೆ-೧೮ರಲ್ಲಿಯೂ, *ಧಾರವಾಡ ಜಿಲ್ಲಾ ಶಾಸನಸೂಚಿಯಲ್ಲೂ, ಎಪಿಗ್ರಾಫಿಯಾ ಕರ್ನಾಟಕ*-ಸಂಖ್ಯೆ : VIII ರಲ್ಲಿಯ ದೊರೆತಿವೆ. ಸ್ಪಷ್ಟವಾಗಿ ಇವು ಬೆಳ್ಳುಗೆ-೭೦, ಎಡೆನಾಡು-೭೦ರ ಭಾಗಕ್ಕೆ ಸೇರಿವೆ. ಇಲ್ಲಿ ಮೂರು ಶಾಸನಗಳು ಮಾತ್ರ ಹಿರೇಕೆರೂರು ಭಾಗಕ್ಕೆ ಸೇರಿವೆ. ಈ ಭಾಗ ಬಹುತೇಕ ಸತ್ತಳಿಗೆ-೭೦ಕ್ಕೆ ಸೇರಿತ್ತೆನಿಸಿದೆ. ಇಲ್ಲಿ ಒಂಬತ್ತು ಶಾಸನಗಳು ರಾಷ್ಟ್ರಕೂಟರ ಕಾಲಕ್ಕೆ ಸೇರಿದ್ದು ಉಳಿದವು ಕಲ್ಯಾಣಿ ಚಾಲುಕ್ಯರ ಕಾಲದವು. ಶೈವ ಸ್ತುತಿಯನ್ನೊಳಗೊಂಡು ಎಲ್ಲವೂ ಕನ್ನಡ ಲಿಪಿಯಲ್ಲಿವೆ. ಮೂರು ಪ್ರತ್ಯೇಕ ಪ್ರಕಾರಗಳಲ್ಲಿ ಗೋಸಹಸ್ರ ಶಾಸನಗಳೂ ಇವೆ. ಹಾಗೆಯೇ ಇವರ ಶಾಸನಗಳಲ್ಲಿ ಕೆಲವು ಅಪೂರ್ಣ ಹಾಗೂ ತ್ರುಟಿತಗೊಂಡಿವೆ.

ಕ್ರಿ.ಶ. ೯೫೮ರ ದೇವಗೆರಿ ಶಾಸನ 'ಭೂತಗೊಳ್‌ದಾನ'ವನ್ನು ಉಲ್ಲೇಖಿಸಿದೆ.[1] ಇದೊಂದು ಅಪರೂಪದ ಸಂಗತಿ. ಹತ್ತನೇ ಶತಮಾನದ ಸಮಾಜದಲ್ಲಿ ಈ ಭೂತ, ಪ್ರೇತಗಳ ಕುರಿತು ಜನಸಾಮಾನ್ಯನ ಕಲ್ಪನೆ, ಅದಕ್ಕೆ ಅರಸನ ಪ್ರತಿಕ್ರಿಯೆ ಹೇಗಿತ್ತು ಎಂಬುದಕ್ಕೆ ಈ ಶಾಸನ ಅತ್ಯುತ್ತಮ ನಿದರ್ಶನ. ಕ್ರಿ.ಶ. ೯೭೭ರ ಇನ್ನೊಂದು ಶಾಸನ ಮತ್ತೊಂದು ವಿಶಿಷ್ಟ ಸಂಗತಿಯನ್ನು ಚಿತ್ರಿಸಿದೆ. ಇಲ್ಲಿ ಒಬ್ಬ ಸಾಮಾನ್ಯ ಪ್ರಜೆಯ ಸ್ವಾಮಿನಿಷ್ಠೆ ಹಾಗೂ ಅರಸನ ಮೇಲಿನ ಆದಮ್ಯ ನಂಬುಗೆ, ವಿಶ್ವಾಸದ ಪರಿ ಯಾವ ರೀತಿ ಇತ್ತು ಎಂಬುದಕ್ಕೆ ಉತ್ತಮ ನಿದರ್ಶನವಾಗಿದೆ.[2] ಈ ಶಾಸನವನ್ನು 'ವೇಳೆವಾಳಿ' ಪ್ರಸಂಗ ವೆಂದು ಕರೆಯಬಹುದು. ಈ ಶಾಸನದ ಕಂಡರಿಕೆ ಕೂಡ ಅತ್ಯಂತ ನೈಜವಾಗಿದ್ದು, ಆ ಕಾಲದ ಶಿಲ್ಪಿಗಳ ಕಲಾ ನೈಪುಣ್ಯಕ್ಕೆ ಹಿಡಿದ ಕನ್ನಡಿಯಂತಿವೆ. ಕ್ರಿ.ಶ. ೧೦೩೩ರ ಕುಪ್ಪಗಡ್ಡೆ ಶಾಸನ[3] ಈ ದೃಷ್ಟಿಯಿಂದ ಅತ್ಯಂತ ಗಮನಸೆಳೆಯುವಂತಾದ್ದು. ಇಲ್ಲಿ ಮಾಟೂರ ಆಲಯ್ಯ ಹಾಗೂ ಜಯಸಿಂಘದೇವನ ಸಾಹಸ ಚಿತ್ರಣವನ್ನು ಚಂಪಕ, ಮತ್ತೇಭವಿಕ್ರೀಡಿತ ವೃತ್ತ ಬಳಸಿ ಶ್ರೀಮಂತಗೊಳಿಸಲಾಗಿದೆ. ಆಲಯ್ಯನ ಸಾವನ್ನು ಉಲ್ಲೇಖಿಸಿರುವ ಈ ಶಾಸನದ ಕರ್ತೃ ಕವಿರಾಜ ಕಪ್ಪಣಭಟ್ಟ.

ರಾಷ್ಟ್ರಕೂಟ ಹಾಗೂ ಕಲ್ಯಾಣಿ ಚಾಲುಕ್ಯಕಾಲದ ಶಾಸನಗಳ ರಚನೆಯೇ ವಿಶೇಷವಾದದ್ದು. ಇಲ್ಲಿ ಶಿಲ್ಪಿಗಳು ಒಂದು ದೇಗುಲಕ್ಕೆ ನೀಡುವ ಪ್ರಾಮುಖ್ಯತೆಯನ್ನೇ ಶಾಸನಫಲಕಗಳನ್ನು

ರಚಿಸುವುದರಲ್ಲೂ ತೋರಿದ್ದಾರೆ. ಅದರಲ್ಲೂ ವೀರಗಲ್ಲುಗಳು ಹಾಗೂ ಗೋಸಾಸಗಳ ರಚನೆ ಅತ್ಯಂತ ಗಮನ ಸೆಳೆವಂತಿರುತ್ತವೆ. ಒಟೂರು, ಕೆರೆಹಳ್ಳಿ, ಹೆಚ್ಚೆ ಶಾಸನಗಳನ್ನು ಇಲ್ಲಿ ಉದಾಹರಿಸಬಹುದು. ಇವರ ಶಾಸನಗಳನ್ನು ಕಂಡರಿಸಿದ ಶಿಲ್ಪಿಗಳು ಕಟುಕೋಜ,[4] ಚಾಮುಂಡೋಜ,[5] ಮಾಚೋಜ[6] ಬಿಯಳ[7] ಈ ನಾಲ್ವರು ಶಾಸನ ರೂವಾರಿಗಳು. ಕಪ್ಪಣಭಟ್ಟ[8], ಭರತಯ್ಯ[9],ಪಿಟ್ಟಪ್ಪಯ್ಯ,[10] ಮಾರಯ್ಯ,[11] ಬೀಚ,[12] ನಾಕಯ್ಯ,[13] ಇವರುಗಳು ಶಾಸನಪಾಠದ ರಚನಾಕಾರರು.

ಶಾಸನಗಳು ಆಯಾಕಾಲದ ಅಧಿಕಾರ ವರ್ಗ, ಅವರ ಬಿರುದು ಸ್ಥಾನಮಾನದ ಪ್ರಸ್ತಾಪ, ಗ್ರಾಮೀಣ ರಾಜಕೀಯ ಸ್ವರೂಪ, ಧಾರ್ಮಿಕ ಸಂಗತಿ ಇತ್ಯಾದಿ ಹಲವಾರು ಐತಿಹಾಸಿಕ ಸಂಗತಿಗಳನ್ನು ದಾಖಲಿಸುತ್ತವೆ. ಉದಾಹರಣೆಗೆ ಅಧಿಕಾರ ವರ್ಗ: ಕ್ರಿಶ.೯೩೯ರಲ್ಲಿನ ಹೆಚ್ಚೆ ಶಾಸನದನ್ವಯ, ಆ ಹೊತ್ತಿಗೆ ಬನವಾಸಿ ಪ್ರಾಂತ್ಯದ ಮಾಂಡಳೀಕ ಕದಂಬ ಚಟ್ಟಯ್ಯನೆಂದು ದಾಖಲಿಸಿದೆ. [14] ಕ್ರಿ.ಶ. ೯-೧೦ರ ಕದರ ಮಂಡಲಗಿ ಶಾಸನದನ್ವಯ ಬನವಾಸಿ ಪ್ರಾಂತ್ಯಕ್ಕೆ ಬೆಳ್ವುಗೆ ಪ್ರದೇಶದಿಂದ ಆಯಿಚವರ್ಮ ಮಾಂಡಳೀಕ[15]. ಕ್ರಿ.ಶ. ೧೦೩೨ರ ಗುಡವಿ ಶಾಸನದಲ್ಲಿ ಕದಂಬಯ್ಯದೇವ ಬನವಾಸಿ ಆಳುತ್ತಿದ್ದುದು, ಪೆರ್ಗಡೆ ಮಾದಿಣಯ್ಯ ಇವನ ಮೇಲೆ ಯುದ್ಧಕ್ಕೆ ಬಂದದ್ದು ದಾಖಲಾಗಿದೆ[16] ಕ್ರಿ.ಶ. ೧೦೮೮ರ ಉಕ್ಕುಂದದ ಶಾಸನ ಎರಡಾರುನೂರರ ಹಾಗೂ ಬನವಾಸಿ ಪ್ರಾಂತ್ಯದ ದಂಡನಾಯಕನಾಗಿದ್ದ ಸೋಮೇಶ್ವರ ಭಟ್ಟನನ್ನು ಉಲ್ಲೇಖಿಸಿದೆ. [17] ಹೀಗೆ ಈ ಶಾಸನಗಳು ಅಂದಿನ ಗಾವುಂಡರು, ಪೆರ್ಗಡೆಗಳು, ಮಹಾಜನರು ಮುಂತಾದವರನ್ನು ದಾಖಲಿಸಿವೆ.

ಕ್ರಿ.ಶ. ೯೩೮ರ ಒಟೂರು ಶಾಸನ ಶೈವಗುರು ಈಶ್ವರಯ್ಯನನ್ನೂ,[18] ಕ್ರಿ.ಶ. ೯೩೯ರ ಹೆಚ್ಚೆ ಶಾಸನ ರುದ್ರಶಕ್ತಿ ಪಂಡಿತರನ್ನು,[19] ಕ್ರಿ.ಶ. ೧೦೮೮ರ ಉಕ್ಕುಂದ ಶಾಸನ ಗಂಗರಸಿ ಪಂಡಿತರ ಶಿಷ್ಯ ಸಿಂಘ ಪಂಡಿಗರನ್ನೂ,[20] ೯-೧೦ನೇ ಶತಮಾನದ ಕದರಮಂಡಲಗಿ ಶಾಸನ ಜಿನಮುನಿ ವೃಷಭ ನಂದಿ ಗೊರವರು ಹಾಗೂ ತಿರಳನಂದಿ ಗೊರವರನ್ನು ಉಲ್ಲೇಖಿಸುತ್ತಿವೆ. [21] ಆಯಾ ಕಾಲದ ಗುರು ಪರಂಪರೆಯ ಚಿತ್ರಣಕ್ಕೆ ಈ ಶಾಸನಗಳು ಉದಾಹರಣೆಯಾಗಿವೆ.

ಇವರ ಶಾಸನಗಳಲ್ಲಿ ‘ಪಡೆವಳ’ರ ಬಗ್ಗೆ ಉಲ್ಲೇಖಗಳಿರುವುದು ಗಮನಾರ್ಹವಾಗಿದೆ. ಕ್ರಿ.ಶ. ೯೫೮ರ ಕಿರುಗುಣಿಸೆ ಗ್ರಾಮದ ಶಾಸನದಲ್ಲಿ. ಪಡೆವಳರ ‘ಅರಿಗ’ ಎಂಬಾತ ‘ಎಲಸಿ’ ಗ್ರಾಮವನ್ನು ಗೋಸಹಸ್ರುವಿರಿಸಿಕೊಟ್ಟಂತೆ ಉಲ್ಲೇಖಿಸಿದೆ.[22] ಇಲ್ಲಿ ಶಾಸನದ ವಿಷಯ ಅಸ್ಪಷ್ಟವಾದಾಗ್ಯೂ ‘ಪಡೆವಳ’ರು ಇದ್ದ ಉಲ್ಲೇಖ ಮುಖ್ಯವಾಗಿದೆ. ಬಹುಶಃ ಖಾಸಗಿ ಪಡೆವಳರು ಯುದ್ಧ ಸಮಯದಲ್ಲಿ ಸೈನ್ಯ ಒದಗಿಸುತ್ತಿದ್ದರೆಂದು ಕಾಣುತ್ತದೆ. ಇದೇ ಗ್ರಾಮದ ಸಮೀಪ ಇನ್ನೊಂದು ಗ್ರಾಮದ ಕ್ರಿ.ಶ. ೧೦೫೭ರ ಶಾಸನ ಕೂಡ ಕೆಲವು ಪಡೆವಳರನ್ನು ಉಲ್ಲೇಖಿಸಿದೆ.[23]

ಪ್ರಾಚೀನ ದಿನಗಳಲ್ಲಿನ ಸಾರ್ವತ್ರಿಕ ಹಾಗೂ ಸಾಮಾನ್ಯ ಸಂಗತಿ ಎಂದರೆ ಬಹುಶಃ ಧಾರ್ಮಿಕ ಸಂಗತಿ ಎನ್ನಿಸುತ್ತದೆ. ಹೆಚ್ಚಿನ ಶಾಸನಗಳು ಅನೇಕ ಧಾರ್ಮಿಕ ಸಂಗತಿಗಳನ್ನು ಉಲ್ಲೇಖಿಸಿವೆ. ಉದಾಹರಣೆಗಾಗಿ, ಕ್ರಿ.ಶ. ೯-೧೦ನೇ ಶತಮಾನದ ಕದರಮಂಡಲಗಿ ಶಾಸನ- ಅಲ್ಲಿನ ಬಸದಿಯೊಂದಕ್ಕೆ ಕೆಲವು ದಾನ ನೀಡಿದ್ದನ್ನು ಹೇಳಿದೆ.[24] ಕ್ರಿ.ಶ. ೧೦೮೮ರ ಉಕ್ಕುಂದದ ಶಾಸನವು ಶಿವಾಲಯ ನಿರ್ಮಿಸಿದ ಇಲ್ಲಿನ ಗಾವುಂಡರಿಗೆ ಇವರು ಭೂದಾನ ನೀಡಿದ್ದನ್ನು ಉಲ್ಲೇಖಿಸಿದೆ.[25] ಕ್ರಿ.ಶ. ೯೩೮ರ ಒಟೂರು ಗ್ರಾಮದ ಶಾಸನ ಇಲ್ಲಿ ನಿರ್ಮಾಣವಾದ ಶಿವಾಲಯ ಹಾಗೂ ಕೆಲವು ಮೂರ್ತಿಗಳ ಸ್ಥಾಪನೆ ಕುರಿತು ಉಲ್ಲೇಖಿಸಿದೆ.[26] ಇಲ್ಲಿ ಈ ಅರಸರು ದೇವರಿಗಾಗಿ ಭೂದಾನ ನೀಡಿದ್ದಾರೆ. ಕ್ರಿ.ಶ. ೯೩೯ರ ಹೆಚ್ಚೆ ಶಾಸನ ಒಂದು ಶಿವಾಲಯದ ನಿರ್ಮಾಣವನ್ನು ಕುರಿತು ಪ್ರಸ್ತಾಪಿಸುತ್ತ, ಆ ದೇವರ ಅಂಗಭೋಗ, ರಂಗಭೋಗ, ಚೈತ್ರ, ಪವಿತ್ರಾದಿ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ, ತಪೋಧನರ ಆಹಾರಕ್ಕಾಗಿ ‘ಕುಳುಗ’ ಗ್ರಾಮವನ್ನು ಬಿಟ್ಟಂತೆ ಉಲ್ಲೇಖಿಸಿದೆ.[27] ಕ್ರಿ.ಶ. ೧೦೩೩ರ ಕುಪ್ಪಗಡ್ಡೆ ಶಾಸನದಲ್ಲಿ

ಜಯಸಿಂಘದೇವ ತನ್ನ ತಂದೆ ಆಲಯ್ಯನ ನೆನಪಿಗಾಗಿ ‘ಆಲೇಶ್ವರ’ ನಿರ್ಮಿಸಿದ್ದು, ದೇಗುಲದ ಪೂಜಾ ನೈಮಿತ್ಯಕ್ಕಾಗಿ ಭೂದಾನ ನೀಡಿದ್ದನ್ನು ಉಲ್ಲೇಖಿಸಿದೆ.**[28]** ಹೀಗೆ ಇವರ ಶಾಸನಗಳಲ್ಲಿ ಇನ್ನೂ ಅನೇಕ ದೇಗುಲಗಳ ನಿರ್ಮಾಣದ ಕುರಿತು ಉಲ್ಲೇಖಗಳು ದೊರೆಯುತ್ತವೆ.

ಇವರ ಸಾಮಾಜಿಕ ಕಾರ್ಯಗಳಲ್ಲಿ ಉದಾಹರಿಸಬಹುದಾದ ಸಂಗತಿಗಳೆಂದರೆ, ಕ್ರಿ.ಶ. ೯೫೪ರಲ್ಲಿ ಮುಟ್ಟುಗುಪ್ಪೆ ಗ್ರಾಮವನ್ನು ಮಹಾಜನರಿಗಾಗಿ ಬಿಟ್ಟುಕೊಟ್ಟಿದ್ದು.**[29]** ಕ್ರಿ.ಶ. ೯೬೮ರಲ್ಲಿ ಓಟೂರು ಗ್ರಾಮದಲ್ಲಿ ಒಂದು ಭಾವಿ ತೆಗೆಸಿದ ಉಲ್ಲೇಖ.**[30]**ಕ್ರಿ.ಶ. ೯೦೬ರಲ್ಲಿ ಕೆರೆಹಳ್ಳಿ ಗ್ರಾಮದಲ್ಲಿ ಒಂದು ಕೆರೆ ತೋಡಿಸಿದ ಸಂಗತಿ.**[31]** ಕ್ರಿ.ಶ. ೯೫೪ರಲ್ಲಿ ಕಕ್ಕರಶಿಯ ಒಂದು ಕೆರೆಯ ಜೀರ್ಣೋದ್ಧಾರ.**[32]** ಕ್ರಿ.ಶ. ೯೭೨ ರಲ್ಲಿ ಒಡೆಯನಿಗೆ ಪುತ್ರ ಪ್ರಾಪ್ತಿಯನ್ನು ಬಯಸಿ ಪ್ರಾಣಾರ್ಪಣ ಮಾಡಿದ ಹೆಚ್ಚೆಯ ‘ಆಕಟೆ’ ವಂಶದವರಿಗಾಗಿ ಭೂದಾನ ನೀಡಿದ್ದು.**[33]** ಹೀಗೆ ಇನ್ನೂ ಅನೇಕ ಸಾಮಾಜಿಕ ಸಂಗತಿಗಳು ಇವರ ಶಾಸನಗಳಲ್ಲಿ ದಾಖಲಾಗಿವೆ.

ಆ ಕಾಲದಲ್ಲಿದ್ದ ಅಗ್ರಹಾರಗಳು, ಮಠಗಳು, ಮಹಾಜನರ ಪಾತ್ರ, ಅವರ ಹಾಗೂ ಜನ ಸಾಮಾನ್ಯರ ಸ್ಥಿತಿ ಇತ್ಯಾದಿ ವಿಚಾರಗಳೆಲ್ಲವೂ ಇವರ ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಹೀಗೆ ನಿರಂತರವಾಗಿ ಸುಮಾರು ಇನ್ನೂರು ವರುಷಗಳಷ್ಟು ಕಾಲ ತಮ್ಮ ಆಡಳಿತ ಕಷೇತ್ರಗಳಿಗೆ ವಿವಿಧ ರೀತಿಯ ಸೇವೆ ಸಲ್ಲಿಸಿದ ಮಾಟೂರ ಅರಸರಿಗೆ, ಕಲ್ಯಾಣಿ ಚಾಲುಕ್ಯ ಹಾಗೂ ಕದಂಬರ ವೈವಾಹಿಕ ಸಂಬಂಧದ ಕಾರಣವಾಗಿ ಬಹುಶಃ ಈ ಭಾಗಗಳ ಒಡೆತನಕ್ಕೆ ಕೈ ಬಿಟ್ಟಿರಬೇಕು. ಅಲ್ಲದೆ ಬನವಾಸಿ ಪ್ರದೇಶ ಕ್ರಿ.ಶ. ೪ನೇ ಶತಮಾನದಿಂದಲೇ ಕದಂಬರ ಒಡೆತನದಲ್ಲಿದ್ದು, ನಂತರದಲ್ಲಿ ಕೈತಪ್ಪಿದ್ದರೂ ಕೂಡ ಮತ್ತೆ ಮತ್ತೆ ಹಕ್ಕು ಸ್ಥಾಪನೆಗಾಗಿ ಹೋರಾಟ, ಪ್ರಯತ್ನ ನಡೆಸುತ್ತಿದ್ದುದು ಶಾಸನಗಳಿಂದ ತಿಳಿಯುತ್ತದೆ. ನಡುನಡುವೆ ಅವರು ಇದರಲ್ಲಿ ಯಶಸ್ಸನ್ನೂ ಕಂಡಿದ್ದರು. ಇಷ್ಟಾಗಿ ಮಾಟೂರ ಅರಸರು ಮಾಂಡಳೀಕ ಪದವಿಗೇರಿದ್ದರು. ಆದರೆ ಆಗಲೂ ಮೂಲ ಪ್ರದೇಶದ ಸ್ವಾಮ್ಯವನ್ನಷ್ಟೇ ಅವರಿಗೆ ಉಳಿಸಿಕೊಳ್ಳಲು ಸಾಧ್ಯವಾಯಿತು. ಕ್ರಿ.ಶ. ೧೧೯೮ರ ಹೊತ್ತಿಗಾಗಲೇ ಇವರ ಮುಖ್ಯ ನೆಲೆಯಾದ ಹೆದ್ದಸೆಯನ್ನು ನೇಮಯ್ಯ ನೆಂಬುವನು ಆಕ್ರಮಿಸಿಕೊಂಡ ಉಲ್ಲೇಖ ಶಾಶನದಲ್ಲಿದೆ.**[34]** ಆ ಹೊತ್ತಿಗೆ ಮಲ್ಲಯ್ಯ ಎಂಬುವನು ಎಡೆನಾಡ ಅಧಿಕಾರಿಯಾಗಿದ್ದ. ಇದು ಕದಂಬ ಕಾಮದೇವನ ಕಾಲದ ಶಾಸನ.

ಹೆಚ್ಚೆ ಅರಸರ ಶಾಸನಗಳಲ್ಲಿನ ಕೆಲಪ್ರದೇಶಗಳ ಅಧ್ಯಯನ

ಇವರ ಶಾಸನಗಳು ದೊರೆತ ಪ್ರದೇಶ ಹಾಗೂ ಶಾಸನೋಲ್ಲೇಖದ ಕೆಲ ಪ್ರದೇಶಗಳಿಗೆ ಭೇಟಿ ನೀಡಿ ಸ್ಥಳ ಅಧ್ಯಯನ ಮಾಡಲಾಗಿದೆ. ಮುಖ್ಯವಾಗಿ ಇಲ್ಲಿ ಎಡೆನಾಡ ಭಾಗದ ಪ್ರದೇಶಗಳನ್ನು ಗಮನಿಸಲಾಗಿದೆ.

ಹೆಚ್ಚೆ : ಮಾಟೂರ ವಂಶೀಯರ ಮಹತ್ವಪೂರ್ಣ ಶಾಸನ ದೊರೆತ ಸ್ಥಳ ಹಾಗೂ ಇವರ ಎಡೆನಾಡಿನ ಪ್ರಮುಖ ಕೇಂದ್ರ. ಕ್ರಿ.ಶ. ೪೦೦ರ ಹೊತ್ತಿಗೆ ಅಸ್ತಿತ್ವದಲ್ಲಿದ್ದ ಗ್ರಾಮ. ಪೆರ್ದಸೆ, ಹೆದ್ದಸೆ ಮುಂತಾದ ಹೆಸರಿನಿಂದ ಕರೆಯಲ್ಪಟ್ಟ ಇದು ಪ್ರಸ್ತುತ ಹೆಚ್ಚೆ ಎನಿಸಿಕೊಳ್ಳುತ್ತಿದೆ.

ಇಲ್ಲಿ ಈ ಅರಸರ ಒಟ್ಟು ಮೂರು ಶಾಸನಗಳು ದೊರೆತಿವೆ. ಕ್ರಿ.ಶ. ೯೬೯ರ ಶಾಸನದನ್ವಯ ಇಲ್ಲಿನ ಶ್ರೀಕಂಠದೇಗುಲದ ಪೂಜಾ ನೈಮಿತ್ಯಕ್ಕಾಗಿ ಭೂದಾನ ಹಾಗೂ ಗ್ರಾಮದಾನ ಬಿಟ್ಟಿದ್ದನ್ನು ಉಲ್ಲೇಖಿಸಿದೆ.**[35]** ಈ ದೇಗುಲ ಪ್ರಸ್ತುತ ನೀಲಕಂಠದೇಗುಲ ಎನಿಸಿಕೊಳ್ಳುತ್ತಿದ್ದು, ಮೂಲಗರ್ಭಗೃಹ ಉಳಿದಿದೆ. ೧೧೯” **x** ೧೧೯” **x** ೯೨” ಅಳತೆಯಲ್ಲಿರುವ ಈ ಗರ್ಭಗೃಹದ ಇದೇ ಕಾಲದ ಬೃಹತ್ ಶಿವಲಿಂಗ ಹಾಗೂ ಜೀರ್ಣೋದ್ಧಾರಗೊಂಡ ಮುಂಭಾಗದಲ್ಲಿನ ಎರಡು ಕಂಬ (೭೬” ಎತ್ತರ)ಗಳಲ್ಲದೆ, ದೇವಳಕ್ಕೆ ಸಂಬಂಧಿಸಿದ ಇನ್ನೂ ಅನೇಕ ಅವಶೇಷಗಳು ಇದೇ ಆವರಣದಲ್ಲಿವೆ. ಹಲವಾರು ಮೂರ್ತಿಶಿಲ್ಪಗಳು ಇಲ್ಲಿದ್ದು, ಹೆಚ್ಚಿನವು ವಿಜಯನಗರ ಕಾಲಕ್ಕೆ ಸೇರಿವೆ. ಈ ಗ್ರಾಮದಲ್ಲಿನ ಇನ್ನೂ ಕೆಲವು ಪಾಳು ದೇಗುಲಗಳಲ್ಲಿನ ಅವಶೇಷಗಳು ಕೂಡ

ರಾಷ್ಟ್ರಕೂಟರ ಕಾಲಕ್ಕೆ ಸೇರುವಂತಾದ್ದು. ಊರಸುತ್ತ ಕೋಟೆಯ ಅವಶೇಷವಿದ್ದು, ಅದು ಮಣ್ಣಿನಿಂದ ನಿರ್ಮಾಣವಾಗಿದೆ. ಈ ಕೋಟೆಯ ಸಮೀಪ ದಪ್ಪ ಇಟ್ಟಿಗೆಯ ತುಂಡುಗಳು ಸಿಗುತ್ತಿವೆ. ಈ ಊರಿನ ಪ್ರಾಚೀನ ಕೆರೆ ಬೃಹದತ್ತಾಗಿದ್ದು, ಹನ್ನೆರಡು ಊರಿನ ಕೆರೆಯ ಹೆಚ್ಚಾದ ನೀರು ಕಾಲುವೆ ಮುಖಾಂತರ ಈ ಕೆರೆಗೆ ಸೇರುವಂತೆ ಯೋಜಿಸಿದ್ದು ಗಮನಾರ್ಹ.

ಕುಪ್ಪಗಡ್ಡೆ : ಶಾಸನಗಳು ಈ ಗ್ರಾಮವನ್ನು ಶ್ರೀಮದನಾದಿ ಅಗ್ರಹಾರ ಎಂದಿವೆ. ಪುಷ್ಪಗಡ್ಡೆ, ಪುಷ್ಪರಕಾಟ**[36]** ಇವು ಇದರ ಪ್ರಾಚೀನ ಹೆಸರು. ಮಾಟೂರ ಅರಸರಿಗೆ ಸಂಬಂಧಿಸಿದ ಇಲ್ಲಿನ ನೃಸಿಂಹ ದೇಗುಲದ ಆವರಣದಲ್ಲಿದೆ. ಕ್ರಿ.ಶ. ೧೦೩೩ರ ಜಯಸಿಂಘದೇವ ನಿರ್ಮಿಸಿದ ಆಲೇಶ್ವರ ದೇಗುಲವೂ ಇಲ್ಲೇ ಇದೆ. ಪೂರ್ಣ ಅವನತಿ ಹೊಂದಿರುವ ಈ ಗುಡಿಯ ಗರ್ಭಗೃಹದ ಅಳತೆ ೧೧೩” **x** ೧೧೩” **x** ೧೧೩”. ಇಲ್ಲಿನ ಶಿವಲಿಂಗ ಕೂಡ ಹೆಜ್ಜೆಯ ಶಿವಲಿಂಗದ ಅಳತೆಯಲ್ಲಿದೆ. ಈ ಗುಡಿ ವಿಸ್ತಾರದಲ್ಲಿ ಹಿರಿದಾಗಿತ್ತೆನ್ನಲು ಅಡಿಪಾಯದ ಅವಶೇಷಗಳಿವೆ. ಇದೇ ಆವರಣದಲ್ಲಿ ಆಲೇಶ್ವರ ಗುಡಿಗೆ ಸೇರಿದ ಮೂಲ ಬಸವ ವಿಗ್ರಹವಿದೆ. ನರಸಿಂಹ ಗುಡಿಯೊಳಗಿನ ವಿಗ್ರಹವು ಕ್ರಿ.ಶ. ೫ನೇ ಶತಮಾನಕ್ಕೆ ಸೇರಿದ್ದೆಂದು ಅ.ಸುಂದರರು ಉಲ್ಲೇಖಿಸಿದ್ದಾರೆ.**[37]** ಇಲ್ಲಿನ ಅನಂತಶಯನ ಮೂರ್ತಿ ಹಾಗೂ ರಾಮೇಶ್ವರ ಗುಡಿಯ ಬಳಿ ಇರುವ ಗಜಲಕ್ಷ್ಮಿ ಫಲಕ ಕೂಡ ೫-೭ನೇ ಶತಮಾನದ್ದೆಂದು ಸುಂದರರು ತಿಳಿಸಿದ್ದಾರೆ.**[38]** ಇದೇ ಆವರಣದಲ್ಲಿ ಸುಮಾರು ೨.೫” **x** ೩” ದಪ್ಪದ, ೭” **x** ೮” ಅಗಲದ ಇಟ್ಟಿಗೆ ತುಂಡುಗಳು ದೊರೆಯುತ್ತಿವೆ. ಈ ಅವಶೇಷಗಳೊಂದಿಗೆ ಇನ್ನೂ ಅನೇಕ ಮೂರ್ತಿಶಿಲ್ಪಗಳೂ ಇದ್ದು ಅವು ಕಲ್ಯಾಣಿ ಚಾಲುಕ್ಯ ಹಾಗೂ ವಿಜಯನಗರ ಕಾಲದ ಶಿಲ್ಪಗಳು. ಪೂರ್ಣಪ್ರಮಾಣದ ಚಾಲುಕ್ಯ ಶೈಲಿಯ ರಾಮೇಶ್ವರ ಗುಡಿ ಇಲ್ಲಿನ ಬೃಹತ್ ಕೆರೆಯ ಸಮೀಪವಿದೆ. ಕೆರೆಯಲ್ಲಿನ ತೂಬುಸ್ತಂಭದ ಗಜಲಕ್ಷ್ಮಿ ಫಲಕ ಕೂಡ ೭-೮ನೇ ಶತಮಾನಕ್ಕೆ ಸೇರುವಂತಾದ್ದು. ಊರ ಹೊರಗಿನ ಬಸವ ದೇಗುಲದ ಗರ್ಭಗೃಹ ಗಜಪೃಷ್ಠಾಕಾರದಲ್ಲಿದೆ. ಇಲ್ಲಿನ ದ್ವಾರ ಶಾಖೆ ರಾಷ್ಟ್ರಕೂಟ ಕಾಲದ ವಿನ್ಯಾಸವನ್ನು ಹೊಂದಿದೆ. ಇಲ್ಲಿಯೇ ಹನ್ನೊಂದು ಗೋಸಾಸ ಕಲ್ಲುಗಳಿವೆ.

ಓಟೂರು : ಕ್ರಿ.ಶ. ೯೩೮ರ ಮಾಚಿ ಅರಸನ ಶಾಸನ**[39]** ದೊರೆತ ಗ್ರಾಮ. ಈ ಶಾಸನ ಅಲ್ಲಿ ಒಂದು ಶಿವಾಲಯ, ಮಾಧವ, ಆದಿತ್ಯ ವಿಗ್ರಹಗಳ ಸ್ಥಾಪನೆ ಕುರಿತು ಉಲ್ಲೇಖಿಸಿದೆ. ಪ್ರಸ್ತುತ ಆ ಶಿವಾಲಯ ಜೀರ್ಣೋದ್ಧಾರ ಗೊಂಡಿದ್ದು, ಮಾಧವನ ಮೂರ್ತಿಕಾಣುತ್ತಿಲ್ಲ. ಆದಿತ್ಯ ವಿಗ್ರಹವಿದ್ದು ಅದರ ಕಾಲಮಾನದಲ್ಲಿ ಜಿಜ್ಞಾಸೆ ಇದೆ. ಬಹುತೇಕ ಅದು ವಿಜಯನಗರ ಕಾಲದ ಶಿಲ್ಪವೆನಿಸುತ್ತದೆ. ಇದೇ ದೇಗುಲದ ಎದುರು ಹಾಗೂ ಆವರಣದಲ್ಲಿ ರಾಷ್ಟ್ರಕೂಟ ಕಾಲದ ಕೆಲ ಅವಶೇಷಗಳು ಇವೆ. ಒಂದೇ ಕಡೆ ಹತ್ತು ಗೋಸಾಸ ಕಲ್ಲುಗಳೂ ಇವೆ. ಊರೊಳಗಿನ ಭೂತಪ್ಪನ ಬನದೊಳಗೆ ರಾಷ್ಟ್ರಕೂಟ ಕಾಲಕ್ಕಿಂತ ತುಸು ಮುಂಚಿನದೆನ್ನಬಹುದಾದ ಸ್ತಂಭ (೪೬” ಎತ್ತರ, ೨೭” ಸುತ್ತಳತೆ) ಮಹಿಷ ಮರ್ದಿನಿ ತೋರಣ ಫಲಕ, ಕೋಣನ ತಲೆ ಶಿಲ್ಪ ಕಂಡು ಬರುತ್ತಿದೆ. ಇಲ್ಲಿಯ ಮಣ್ಣಿನಲ್ಲಿ ೩’ ದಪ್ಪ ಹಾಗೂ ೮’ ಅಗಲದ ಇಟ್ಟಿಗೆ ತುಂಡುಗಳು ಇವೆ.

ಕೆರೆಹಳ್ಳಿ : ಹೆಚ್ಚೆ ಅರಸರ ಮೊದಲ ಶಾಸನವಿರುವ ಗ್ರಾಮ.ಕ್ರಿ.ಶ. ೯೦೩ರ ಇಲ್ಲಿನ ಶಾಸನ ಒಂದು ಶಿವಾಲಯ ಹಾಗೂ ಕೆರೆ ನಿರ್ಮಾಣದ ಕುರಿತು ಉಲ್ಲೇಖಿಸಿದೆ.**[40]** ಅಂತೆಯೇ ಇಲ್ಲಿ ಒಂದು ಬೃಹತ್‌ಕೆರೆಯ ಬಳಿ ಮೂಲ ಅಳತೆ ಕಳೆದುಕೊಂಡ ಶಿವಾಲಯವಿದೆ. ಈ ದೇಗುಲದ ಆವರಣ ಹಾಗೂ ಸಮೀಪದ ಹೊನ್ನಗುಡ್ಡದಲ್ಲಿ ೮” ಅಗಲ, ೩” ದಪ್ಪದ ಇಟ್ಟಿಗೆ ತುಂಡುಗಳಿವೆ.

ಕುಳುಗ : ಕ್ರಿ.ಸ.೯೩೯ರ ಹೆಚ್ಚೆಶಾಸನದಲ್ಲಿ**[41]** ಈ ಗ್ರಾಮದ ಉಲ್ಲೇಖವಿದೆ. ಈ ಗ್ರಾಮವನ್ನು ಹೆಚ್ಚೆಯ ಶ್ರೀಕಂಠ ದೇಗುಲದ ಪೂಜಾ ನೈಮಿತ್ಯಕ್ಕಾಗಿ ದಾನಬಿಟ್ಟಿದೆ. ಇಲ್ಲಿಯೂ ಸಾಕಷ್ಟು ಪ್ರಾಚೀನ ಅವಶೇಷಗಳಿದ್ದು ರಾಷ್ಟ್ರಕೂಟ ಕಾಲದ ಎರಡು ಗಜಲಕ್ಷ್ಮಿ ಫಲಕ ಗಮನ ಸೆಳೆಯುವಂತಿದೆ. ಇನ್ನೂ ಕೆಲವು ಕಲ್ಯಾಣಿ ಚಾಲುಕ್ಯರ ಅವಧಿಗೆ ಸೇರಿದ ದೇಗುಲ,

ಮೂರ್ತಿಶಿಲ್ಪಗಳು ಅವನತಿ ಗೊಂಡಿವೆ. ಕಾಡಂಚಿನ ಒಂದೆಡೆ ದಪ್ಪ ಇಟ್ಟಿಗೆಗಳ ಅವಶೇಷ ಕೂಡ ಸಾಮಾನ್ಯವಾಗಿದೆ.

ಕಕ್ಕರಸಿ : ಕ್ರಿ.ಶ. ೯೫೪ರ ಮಾಚಿ ಅರಸನ ಶಾಸನ[42] ದೊರೆತ ಸ್ಥಳ. ಈ ಶಾಸನ ಇಲ್ಲಿ ಒಂದು ಕೆರೆಯನ್ನು ಜೀರ್ಣೋದ್ಧಾರ ಮಾಡಿದ ಬಗ್ಗೆ ಹಾಗೂ ಒಂದು ಶಿವಾಲಯವನ್ನು ಉಲ್ಲೇಖಿಸಿದೆ. ಪ್ರಸ್ತುತ ಶಿವಾಲಯ ಜೀರ್ಣೋದ್ಧಾರಗೊಂಡಿದ್ದು. ಅಲ್ಲಿನ ಬಸವ ವಿಗ್ರಹ ಮೂಲದ್ದಾಗಿದೆ. ಇದೇ ದೇಗುಲದ ಸಮೀಪ ಮೂರು ಗೋಸಾಸಗಳಿವೆ.

ಮುಟಗುಪ್ಪೆ : ಕ್ರಿ.ಶ. ೯೫೪ರ ಕಕ್ಕರಸಿ ಶಾಸನ[43]ದಲ್ಲಿ ಈ ಮುಟ್ಟಗುಪ್ಪೆಯ ಉಲ್ಲೇಖವಿದೆ. ಈ ಗ್ರಾಮದ ಪರಿವೀಕ್ಷಣೆಯ ಸಮಯದಲ್ಲಿ ಸುಮಾರು ೪ ಅಡಿ ಎತ್ತರದ ರಾಷ್ಟ್ರಕೂಟ ಅವಧಿಗೆ ಸೇರಬಹುದಾದ ಒಂದು ಮಹಿಷ ಮರ್ದಿನಿ ವಿಗ್ರಹ, ಓಟೂರಿನಲ್ಲಿದ್ದಂತಹ ಒಂದು ಕಿರು ಸ್ಮಾರಕ ಸ್ತಂಭ ಕೆರೆಯ ಸಮೀಪ ಹಾಗೂ ಮಠದ ಜಾಗೆಯಲ್ಲಿ ಕೆಲ ಶಿವಲಿಂಗ, ಪಾಳುಗುಡಿಗಳೂ ಇವೆ. ಇಲ್ಲೆ ರಾಷ್ಟ್ರಕೂಟ ಕಾಲದ ದ್ವಾರಶಾಖೆಯೊಂದನ್ನು ನಂತರದ ಕಾಲದಲ್ಲಿ ಲಿಂಗಮುದ್ರೆಕಲ್ಲಾಗಿ ಮಾರ್ಪಡಿಸಲಾಗಿದೆ.

ಗುಡವಿ : ಕ್ರಿ.ಶ. ೧೦೩೨ರ ಒಟ್ಟು ಐದು ಶಾಸನಗಳು ಇರುವ ಸ್ಥಳ.[44] ಇಲ್ಲಿಯೂ ಕೆಲ ಶಿವಾಲಯಗಳಿದ್ದು, ಜೀರ್ಣೋದ್ಧಾರಗೊಂಡಿವೆ. ಈ ಗ್ರಾಮದಲ್ಲಿ ವೀರಗಲ್ಲುಗಳ ಸಂಖ್ಯೆ, ಅದರಲ್ಲೂ ತುರುಕಾಳಗದ ಚಿತ್ರಣ ಹೊತ್ತ ವೀರಗಲ್ಲುಗಳು ಹೆಚ್ಚಿವೆ. ಇದನ್ನು ಗಮನಿಸಿದಾಗ ಈ ಗ್ರಾಮದಲ್ಲಿ ಅತಿಹೆಚ್ಚು ಘರ್ಷಣೆಗಳು ಘಟಿಸಿದ್ದು ಸ್ಪಷ್ಟ. ಅದರಲ್ಲೂ ಈ ಗ್ರಾಮ ಬನವಾಸಿಗೆ ಹತ್ತಿರದಲ್ಲಿದೆ ಎಂಬುದನ್ನು ಗಮನದಲ್ಲಿಡಬೇಕು.

ಚೀಲನೂರು : ಕ್ರಿ.ಶ. ೧೦೫೭ರ ಶಾಸನ[45]ವಿರುವ ಗ್ರಾಮ. ಇಲ್ಲಿನ ಶಿವದೇಗುಲವೊಂದರಲ್ಲಿ ಈ ಶಾಸನವಿದೆ. ಶಿವದೇಗುಲ ಇತ್ತೀನದಾಗಿದ್ದು, ಊರ ಹೊರಗೆ ಒಂದು ರಾಷ್ಟ್ರಕೂಟರ ಕಾಲದ ಗಜಲಕ್ಷ್ಮಿ ಫಲಕ ಹಾಗೂ ದಪ್ಪ ಇಟ್ಟಿಗೆ ತುಂಡುಗಳು ಕಂಡಿವೆ.

ಇಷ್ಟಲ್ಲದೇ ಇವರ ಶಾಸನ ಸೂಚಿಸಿರುವ ಇನ್ನೂ ಅನೇಕ ಪ್ರದೇಶಗಳಲ್ಲಿ ರಾಷ್ಟ್ರಕೂಟ ಹಾಗೂ ಅದಕ್ಕಿಂತ ಪ್ರಾಚೀನವಾದ ಅವಶೇಷಗಳು ದೊರೆತಿವೆ. ಈ ಎಡೆನಾಡ ಭಾಗದ ಹೆಚ್ಚಿನ ಗ್ರಾಮಗಳಲ್ಲಿ ದಪ್ಪ ಇಟ್ಟಿಗೆ, ಚಪ್ಪಟೆ ಹೆಂಚಿನ ಅವಶೇಷ ಸಾಮಾನ್ಯ ಎನಿಸಿದೆ. ಮುಖ್ಯವಾಗಿ ಮಾಟೂರು ಅರಸರ ಸಂಬಂಧಿ ದೇಗುಲಗಳು ಯಾವುವೂ ಪೂರ್ಣ ಪ್ರಮಾಣದಲ್ಲಿಲ್ಲ. ಹೆಚ್ಚಾಗಿ ಅವು ಅವನತಿ ಹಂತದಲ್ಲಿವೆ. ಇವರ ಕಾಲದ ಶಾಸನಗಳ ಶೈಲಿ ವಿಶಿಷ್ಟವಾಗಿದ್ದು ಪೂರ್ಣಕುಂಭ, ದ್ರಾವಿಡ ಶೈಲಿಯ ಗೋಪುರದ ಉಬ್ಬು ಚಿತ್ರಣಗಳನ್ನು ಕೆಲವೊಮ್ಮೆ ಇವರ ಲಾಂಛನದ ಚಿಹ್ನೆಯನ್ನೂ ಹೊಂದಿದೆ. ಹೆಚ್ಚೆ, ಕೆರೆಹಳ್ಳಿ, ಓಟೂರು ವೀರಗಲ್ಲುಗಳಂತೂ ಅತ್ಯಂತ ನೈಜ ಯುದ್ಧ ಸನ್ನಿವೇಶದ ಚಿತ್ರಣಗಳನ್ನೊಳಗೊಂಡಿವೆ. ಹೆಚ್ಚಿನ ಅವಶೇಷಗಳು ರಾಷ್ಟ್ರಕೂಟಕಾಲದ ಶೈಲಿಯನ್ನೇ ಹೊಂದಿವೆ.

ಸಂಕ್ಷಿಪ್ತ ಪ್ರಯೋಗಗಳ ವಿಸ್ತೃತ ರೂಪ

ಎ.ಇಂ – ಎಪಿಗ್ರಾಯಾ ಇಂಡಿಯಾ
ಸೌ.ಇಂ.ಇ – ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಷನ್ಸ್
ಎ.ಕ. – ಎಪಿಗ್ರಾಫಿಯಾ ಕರ್ನಾಟಿಕಾ (ರೈಸ್ ಬಿ.ಎಲ್.ಸಂಪಾದಿತ)
ಕ.ಇಂ. – ಕರ್ನಾಟಕ ಇನ್ಸ್‌ಕ್ರಿಪ್ಷನ್ಸ್, ಧಾರವಾಡ.
ಧಾ.ಜಿ.ಶಾ.ಸೂ – ಧಾರವಾಡ ಜಿಲ್ಲಾ ಶಾಸನ ಸೂಚಿ (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ)
ಕ ರಿ ಇ ಪಿ ಆರ್ ಕನ್ನಡ ರಿಸರ್ಚ್ ಇನ್‌ಸ್ಟಿಟ್ಯೂಟ್ ಪ್ರೊಗ್ರೆಸ್ ರಿಪೋರ್ಟ್ಸ್

ಕೃತಜ್ಞತೆಗಳು: ಡಾ. ರಾಜಾರಾಂ ಹೆಗಡೆ, ಡಾ. ರಘುನಾಥ ಭಟ್ಟ, ಡಾ. ಸುಂದರ, ಕೆಳದಿ ಸಂಶೋಧನಾ ಕೇಂದ್ರದ ಸ್ನೇಹಿತರು ಹಾಗೂ ಗುಂಡಾಜೋಯ್ಸರು, ಧಾರವಾಡ ಕನ್ನಡ ಸಂಶೋಧನಾ ಸಂಸ್ಥೆಯ ಗ್ರಂಥಾಲಯ ಸಿಬ್ಬಂದಿ. ಸ್ಥಳ ಅಧ್ಯಯನದಲ್ಲಿ ಸಹಕರಿಸಿದ ಹೆಚ್.ಎಂ., ಶಾಸನ ವ್ಯಾಸಂಗಕ್ಕೆ ನೆರವಾದ ಶ್ರೀಮತಿ ನಂದಾ ಹಾಗೂ ಸ್ನೇಹಿತ ವರ್ಗದವರಿಗೆ.

—-
(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)

[1]ಎ.ಇಂ. **XI**. ದೇವಗೇರಿ ಶಾಸನ, ಪು.ಸಂ.೭ ರಿಂದ ಕ್ರಿ.ಶ.೯೫೮.

[2]*ಎ.ಕ.* **VIII** ನಂ. ೪೭೯. ಹೆಚ್ಚೆ, ಸೊರಬ, ಶಿವಮೊಗ್ಗ ಕ್ರಿ.ಶ.೯೭೦.

[3]ಅದೇ ನಂ.೧೮೪, ಕುಪ್ಪೆಗಡ್ಡೆ, ಕ್ರಿ.ಶ. ೧೦೩೩.

[4]*ಅದೇ*, ನಂ.೬೧. ಗುಡವಿ, ಕ್ರಿ.ಶ. ೧೦೩೨.

[5]*ಅದೇ*, ನಂ.೧೮೪. ಕುಪ್ಪಗಡ್ಡೆ, ಕ್ರಿ.ಶ.೧೦೩೩

[6]*ಸೌ. ಇಂ. ಇ.* ನಂ. ೧೮ ಶಾಸನ ಸಂಖ್ಯೆ – ೯೩, ಉಕ್ಕುಂದ, ರಾಣೆಬೆನ್ನೂರು, ಧಾರವಾಡ. ಕ್ರಿ.ಶ. ೧೦೮೮.

[7]*ಎ.ಕ.* **VII** ನಂ. ೭೧. ಓಟೂರು, ಸೊರಬ, ಶಿವಮೊಗ್ಗ, ಕ್ರಿ.ಶ.೯೩೮.

[8]*ಅದೇ*, ನಂ.೧೮೪, ಕುಪ್ಪಗಡ್ಡೆ, ಕ್ರಿ.ಶ. ೧೦೩೩.

[9]*ಅದೇ*, ನಂ.೨೧೬ ಕೆರೆಹಳ್ಳಿ, ಕ್ರಿ.ಶ. ೯೦೩.

[10]*ಅದೇ*, ನಂ.೫೦೦. ಬೇಲನೂರು, ಕ್ರಿ.ಶ. ೧೦೫೭.

[11]ಅದೇ, ನಂ.೧೮೪. ಕಪ್ಪಗಡ್ಡೆ, ಕ್ರಿ.ಶ. ೧೦೩೩.

[12]*ಸೌ. ಇಂ. ಇ.* ನಂ.-೧೮ ಶಾಸನ ಸಂಖ್ಯೆ – ೯೩, ಉಕ್ಕುಂದ, ರಾಣೆಬೆನ್ನೂರು, ಧಾರವಾಡ. ಕ್ರಿ.ಶ. ಸಂ. ೧೦೮೮.

[13]*ಎ.ಕ.* **VIII** ನಂ. ೭೧. ಓಟೂರು, ಸೊರಬ ಶಿವಮೊಗ್ಗ. ಕ್ರಿ.ಶ. ೯೩೯.

[14]ಅದೇ ನಂ. ೪೭೬. ಹೆಚ್ಚೆ, ಸೊರಬ, ಶಿವಮೊಗ್ಗ, ಕ್ರಿ.ಶ. ೯೩೯.

[15]*ಸೌ. ಇಂ. ಇ.* ನಂ. ೧೮ ಶಾಸನ ಸಂಖ್ಯೆ – ೩೮, ಕದರ ಮಂಡಲಗಿ, ರಾಣೆಬೆನ್ನೂರು, ಧಾರವಾಡ.೯-೧೦ ಕ್ರಿ.ಶ.

[16] *ಎ.ಕ.* VIII ನಂ. ೬೦ ರಿಂದ ೬೪, ಗುಡವಿ, ಸೊರಬ, ಶಿವಮೊಗ್ಗ. ಕ್ರಿಶ.೧೦೩೨.

[17] *ಸೌ.ಇಂ.ಇ.* ನಂ. ೧೮ ಶಾಸನ ಸಂಖ್ಯೆ – ೯೩, ಉಕ್ಕುಂದ, ರಾಣೆಬೆನ್ನೂರು, ಧಾರವಾಡ. ಕ್ರಿ.ಶ. ೧೦೮೮.

[18] *ಎ.ಕ.* VIII ನಂ. ೭೦. ಓಟೂರು ಸೊರಬ, ಶಿವಮೊಗ್ಗ, ಕ್ರಿ.ಶ. ೯೩೮.

[19] *ಅದೇ* ನಂ.೪೭೬, ಹೆಚ್ಚೆ, ಕ್ರಿ.ಶ. ೯೩೯.

[20] *ಸೌ.ಇಂ.ಇ.* ನಂ. ೧೮ ಶಾಸನ ಸಂಖ್ಯೆ – ೯೩, ಉಕ್ಕುಂದ, ರಾಣೆಬೆನ್ನೂರು, ಧಾರವಾಡ. ಕ್ರಿ.ಶ. ೧೦೮೮.

[21] *ಅದೇ* ಶಾ.ಸಂ.೩೮. ಕದರ ಮಂಡಲಗಿ, ಕ್ರಿ.ಶ. ೯-೧೦.

[22] *ಎ.ಕ.* VIII ನಂ. ೫೦೧. ಕಿರುಗುಣಿಸೆ, ಸೊರಬ, ಶಿವಮೊಗ್ಗ ಕ್ರಿ.ಶ. ೯೫೮.

[23] *ಅದೇ*, ನಂ. ೫೦೦, ಚೀಲನೂರು, ಕ್ರಿ.ಶ. ೧೦೫೭.

[24] *ಸೌ.ಇಂ.ಇ.* ನಂ. ೧೮ ಶಾಸನ ಸಂಖ್ಯೆ – ೩೮, ಕದರಮಂಡಲಗಿ, ರಾಣೇಬೇನ್ನೂರು, ಧಾರವಾಡ. ಕ್ರಿ.ಶ.೯-೧೦.

[25] ಅದೇ ಶಾ.ಸಂ.೯೩. ಉಕ್ಕುಂದ, ಕ್ರಿ.ಶ. ೧೦೮೮.

[26] *ಎ.ಕ.*VIII ನಂ. ೭೦, ಓಟೂರು ಸೊರಬ, ಶಿವಮೊಗ್ಗ ಕ್ರಿ.ಶ. ೯೩೮.

[27] *ಅದೇ*, ನಂ. ೪೭೬. ಹೆಚ್ಚೆ, ಕ್ರಿ.ಶ. ೯೩೯.

[28] *ಅದೇ*, ನಂ. ೧೮೪. ಕುಪ್ಪಗಡ್ಡೆ, ಕ್ರಿ.ಶ. ೧೦೩೩.

[29] *ಅದೇ*, ನಂ. ೪೭೪. ಕಕ್ಕರಸಿ, ಕ್ರಿ.ಶ. ೯೫೪.

[30] *ಅದೇ*, ನಂ.

[31] *ಎ.ಕ.* VIII ನಂ. ೨೧೬. ಕೆರೆಹಳ್ಳಿ, ಸೊರಬ, ಶಿವಮೊಗ್ಗ, ಕ್ರಿ.ಶ. ೯೦೩.

[32] *ಅದೇ* ನಂ. ೪೭೪. ಕಕ್ಕರ, ಕ್ರಿ.ಶ. ೯೫೪.

[33] *ಅದೇ* ನಂ. ೪೭೯. ಹೆಚ್ಚೆ, ಕ್ರಿ.ಶ. ೯೭೨.

[34] *ಅದೇ* ನಂ. ೮೭೮. ಕ್ರಿ.ಶ. ೧೧೯೮.

[35] *ಅದೇ* ನಂ. ೪೭೬. ಕ್ರಿ.ಶ. ೧೧೯೮.

[36] *ಅದೇ* ನಂ. ೧೮೪ ಕುಪ್ಪಗಡ್ಡೆ, ಕ್ರಿ.ಶ. ೧೦೩೩.

[37]ಅ ಸುಂದರ – *ಶಿವಮೊಗ್ಗ ಜಿಲ್ಲಾ ದರ್ಶನ*ಪು.ಸಂ. ೫೬.

[38]ಅದೇ ಪು.ಸಂ. ೫೭.

[39]*ಎ.ಕ.* **VIII** ನಂ. ೭೦. ಒಟೂರು, ಸೊರಬ, ಶಿವಮೊಗ್ಗ. ಕ್ರಿ.ಶ.೯೩೮

[40]*ಅದೇ*ನಂ.೨೧೬. ಕೆರೆಹಳ್ಳಿ, ಕ್ರಿ.ಶ. ೯೦೩.

[41]*ಅದೇ*ನಂ.೪೭೬ ಹೆಚ್ಚೆ, ಕ್ರಿ.ಶ. ೯೩೯.

[42]*ಅದೇ*ನಂ. ೪೭೪. ಕಕ್ಕರಸಿ, ಕ್ರಿ.ಶ.೯೫೪.

[43]*ಅದೇ*ನಂ.೪೭೪. ಕಕ್ಕರಸಿ, ಕ್ರಿ.ಶ. ೯೫೪.

[44]*ಅದೇ*ನಂ. ೬೦ ರಿಂದ ೬೪. ಗುಡವಿ, ಕ್ರಿ.ಶ. ೧೦೩೨.

[45]*ಅದೇ*ನಂ. ೫೦೦, ಬೇಲನೂರು, ಕ್ರಿ.ಶ. ೧೦೫೭.

ಮಲೆಕರ್ನಾಟಕದ ಅರಸು ಮನೆತನಗಳು: ೩. ಹೊಂಬುಜದ ಸಾಂತರರು (೧)

ಭಾರತದ ಇತಿಹಾಸದಲ್ಲಿ ಅನೇಕ ದೊಡ್ಡ ರಾಜ್ಯ ಸಾಮ್ರಾಜ್ಯಗಳು ಆಳ್ವಿಕೆ ನಡೆಸಿ ನಂತರ ಪತನ ಹೊಂದಿರುವವು. ಹಾಗೆಯೇ ಅನೇಕ ಸಾಮಂತರು, ಪಾಳೇಗಾರರು, ರಾಜರು, ಮಾಂಡಲೀಕರು, ಮಹಾಮಂಡಳೇಶ್ವರರು ಈ ದೊಡ್ಡರಾಜ ಮನೆತನಗಳಿಗೆ ಆಧೀನವಾಗಿ ತಮ್ಮ ತಮ್ಮ ಪ್ರದೇಶಗಳಲ್ಲಿ ಆಳ್ವಿಕೆ ಮಾಡಿದ್ದಾರೆ. ಇಂತಹ ಸಣ್ಣ ಪುಟ್ಟ ಪ್ರಭುತ್ವಗಳ ಬಗ್ಗೆ ಬಹಳ ಮುತುವರ್ಜಿಯಿಂದ ಅಭ್ಯಾಸ ಮಾಡಬೇಕಾಗಿದೆ. ಏಕೆಂದರೆ ಈ ಮಾಂಡಲೀಕರು, ಸಾಮಂತರು, ಪಾಳೇಗಾರರು ತಮ್ಮದೇ ಪಾತ್ರವನ್ನು ರಾಜಕೀಯ ಕ್ಷೇತ್ರದಲ್ಲಿ ನಿರ್ವಹಿಸುವುದರೊಂದಿಗೆ ಆಯಾ ಪ್ರದೇಶ ಧಾರ್ಮಿಕ, ಸಾಂಸ್ಕೃತಿಕ, ಆರ್ಥಿಕ ಹಾಗೂ ವಾಸ್ತುಶಿಲ್ಪಗಳ ಕ್ಷೇತ್ರದಲ್ಲಿಯೂ ತಮ್ಮ ಪ್ರಭಾವವನ್ನು ಬೀರಿದ್ದಾರೆ. ಇತಿಹಾಸದ ಸರಿಯಾದ ಅಭ್ಯಾಸಕ್ಕೆ ಈ ಹಿನ್ನೆಲೆಯ ಅರಿವು ಅಗತ್ಯ. ಈ ಸಣ್ಣ ಪುಟ್ಟ ರಾಜರು ಸರಿಯಾದ ಅವಕಾಶ ಸಿಕ್ಕದಂಥ ಪಕ್ಷದಲ್ಲಿ, ಅಂದರೆ ತಮ್ಮನ್ನು ಆಳುವ ಅರಸರ ಪ್ರಾಬಲ್ಯ ಕಡಿಮೆಯಾದರೆ ಸ್ವತಃ ತಾವು ಸ್ವತಂತ್ರರಾಗುವ ಪ್ರಯತ್ನ ಮಾಡಬಹುದಿತ್ತು. ಇಲ್ಲವೆಂದರೆ ತಮ್ಮ ನಿಷ್ಠೆಯನ್ನು ಪ್ರಬಲರಾದ ಬೇರೆ ರಾಜಮನೆತನಕ್ಕೆ ವ್ಯಕ್ತಪಡಿಸಿ ಇರಬೇಕಿತ್ತು. ಸಂಪನ್ಮೂಲಗಳ ಮಿತಿಗಳು ಹಾಗೂ ಅಕ್ಕಪಕ್ಕದಲ್ಲಿರುತ್ತಿದ್ದ ಅನೇಕ ಪಾಳೇಗಾರರು ಹಾಗೂ ರಾಜರುಗಳ ಮಧ್ಯ ಇರುತ್ತಿದ್ದ ವೈರತ್ವದಿಂದ ಹೆಚ್ಚಿನ ಸಣ್ಣ ರಾಜರುಗಳಿಗೆ ಸ್ವತಂತ್ರ ರಾಜಮನೆತನಗಳಾಗಿ ಆಳ್ವಿಕೆ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಇಂತಹ ಅನೇಕ ಅರಸುಮನೆತನಗಳು ನಮಗೆ ಎಲ್ಲಾ ಪ್ರದೇಶಗಳಲ್ಲೂ ಕಂಡುಬರುತ್ತಿದ್ದು ಅದು ಮಲೆನಾಡಿನ ಪ್ರಾಂತ್ಯದಲ್ಲೂ ಕಾಲದಿಂದ ಕಾಲಕ್ಕೆ ಕಂಡುಬರುತ್ತದೆ.

ಇಂತಹ ಸಣ್ಣ ಪುಟ್ಟ ರಾಜರು ಭೌಗೋಳಿಕವಾಗಿ ತಮ್ಮ ಎಲ್ಲೆಗಳನ್ನು ಹೆಚ್ಚು ವಿಸ್ತರಿಸಲು ಆಗದೇ ಹೆಚ್ಚಿನ ಸಂದರ್ಭದಲ್ಲಿ ಆಧೀನವಾಗೆ ಉಳಿದುದರಿಂದ ಅವರನ್ನು ಸ್ಥಾನಿಕ ಅರಸರು ಎಂದು ಗುರುತಿಸಲಾಗುತ್ತದೆ.

ಸ್ಥಾನಿಕ ಅರಸರ ಇತಿಹಾಸವನ್ನು ಸೂಕ್ಷ್ಮವಾಗಿ ಅಭ್ಯಾಸ ಮಾಡಿದರೆ ಅವರು ಹೇಗೆ ತಮ್ಮ ಅಳರಸರ ಅಭ್ಯುದಯಕ್ಕೆ ಅಥವಾ ಅವನತಿಗೆ ಕಾರಣರಾಗುತ್ತಿದ್ದರೆಂದು ತಿಳಿಯುತ್ತದೆ. ತಮ್ಮ ನಿರ್ದಿಷ್ಟ ಭೌಗೋಳಿಕ ವಲಯದ ಒಡನಾಟ ಈ ಸ್ಥಾನಿಕರಿಗೆ ನಿಕಟವಾಗಿ ಇದ್ದುದರಿಂದ ಯುದ್ಧದ ಸಂದರ್ಭದಲ್ಲಿ ಆಯಕಟ್ಟಿನ ಪ್ರದೇಶಗಳ ಬಳಿಯಲ್ಲಿ ತಮ್ಮ ಸಾಮ್ರಾಟರಿಗೆ ನೆರವಾಗುತ್ತಿದ್ದರು. ಆರ್ಥಿಕ ಅಭಿವೃದ್ಧಿ, ಸಾಂಸ್ಕೃತಿಕ ಉತ್ಕರ್ಷ, ಸ್ಥಾನಿಕ ಪ್ರಾಂತ್ಯದ ಮುಖ್ಯ ಅಂಶವಾಗಿದ್ದಾಗ ಅದು ಸಾಮ್ರಾಟರ ಸ್ಥಿತಿಯನ್ನು ಉತ್ತಮಪಡಿಸುತ್ತಿತ್ತು. ಈ ನಿಟ್ಟಿನಲ್ಲಿ ಹೊಂಬುಜದ ಸಾಂತರರ ಇತಿಹಾಸ ಅಧ್ಯಯನ ಸ್ವಾಗತಾರ್ಹ.

ಸಾಂತರರ ಆಡಳಿತದ ಪ್ರದೇಶದ ವ್ಯಾಪ್ತಿ

ಇಂದು ಸಣ್ಣ ಗ್ರಾಮವಾಗಿರುವ ಹುಂಚ ಅಥವಾ ಹೊಂಬುಜ ಶಿವಮೊಗ್ಗ ನಗರದಿಂದ ಆಗ್ನೇಯ ದಿಕ್ಕಿಗೆ ಸುಮಾರು ೬೦ ಕಿ.ಮಿ. ಮತ್ತು ಹೊಸನಗರದಿಂದ ಪೂರ್ವಕ್ಕೆ ಸುಮಾರು ೨೧ ಕಿ.ಮೀ. ದೂರದಲ್ಲಿದೆ.**[1]** ಇದೊಂದು ಪ್ರಮುಖ ಜೈನ ಕೇಂದ್ರವಾಗಿದ್ದು ದಿಗಂಬರ ಪಂಥಕ್ಕೆ ಸೇರಿದುದಾಗಿದೆ. ಪದ್ಮಾವತೀ ಅಮ್ಮನವರು ಇಲ್ಲಿಯ ಪ್ರಮುಖ ದೇವತೆ. ನವರಾತ್ರಿ ಹಬ್ಬ ಹಾಗೂ ಶ್ರುತ ಪಂಚಮಿಯನ್ನು ಬಹಳ ವೈಭವದಿಂದ ಇಲ್ಲಿ ಆಚರಿಸುತ್ತಾರೆ.

ಸುಮಾರು ೮ನೇ ಶತಮಾನದಲ್ಲಿ ಹುಂಚವು ಮಲೆನಾಡಿನ ಒಂದು ಮಾಂಡಲೀಕರ ವಂಶದ ರಾಜಧಾನಿಯಾಗಿತ್ತು. ಅವರನ್ನೇ ಇತಿಹಾಸದಲ್ಲಿ ನಾವು ಸಾಂತರರು ಎಂದು ಗುರುತಿಸುತ್ತೇವೆ. ಹಾಗೆಯೇ ಅವರು ಆಳ್ವಿಕೆ ಮಾಡಿದ ಪ್ರದೇಶ ಘಟಕ ಸಾಂತಳಿಗೆ ಸಾಯಿರ ಎಂದು ಗುರುತಿಸಲ್ಪಟ್ಟಿದೆ. ಈ ಸಾಂತರರು ಸುಮಾರು ೪೦೦ ವರ್ಷಗಳ ದೀರ್ಘ ಆಳ್ವಿಕೆಯನ್ನು ಈ ಪ್ರದೇಶದಲ್ಲಿ ನಡೆಸಿದರೂ ಅವರ ಇತಿಹಾಸವನ್ನು ಅರಿಯಲು ನಮಗೆ ಇರುವ ಮಾಹಿತಿಗಳು ಬಹಳ ಕಡಿಮೆ ಎಂದೇ ಹೇಳಬೇಕಾಗುತ್ತದೆ. ಅವರ ರಾಜ್ಯದ ಗಡಿ ಇಂದಿನ ಶಿವಮೊಗ್ಗ ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಗಳಿಷ್ಟೇ ಸೀಮಿತವಾದ ಮನೆತನ ಇದಾಗಿತ್ತು. ಹಾಗೂ ಅವರ ದೀರ್ಘ ಆಳ್ವಿಕೆಯ ಕಾಲದಲ್ಲಿ ಅವರು ಅನೇಕ ಸಲ ತಮ್ಮ ರಾಜಧಾನಿಯನ್ನು ಬದಲಾಯಿಸಬೇಕಾಗಿ ಬಂದುದು ಶಾಸನಗಳ ಅಧ್ಯಯನದಿಂದ ನಮಗೆ ತಿಳಿದು ಬರುತ್ತದೆ. ಆದರೆ ನಾನು ಇಲ್ಲಿ ಹುಂಚದ ಸಾಂತರರನ್ನು ಮಾತ್ರ ವಿಶ್ಲೇಷಿಸಲು ಪ್ರಯತ್ನಿಸಿದ್ದೇನೆ. ತಮ್ಮ ದೀರ್ಘ ಆಳ್ವಿಕೆಯ ಕಾಲದಲ್ಲಿ ಸಾಂತರರು ಬರೀ ಮಹಾಮಂಡೇಳ್ವರ ಸ್ಥಾನಕ್ಕೆ ಮಾತ್ರ ಏರಲು ಸಾಧ್ಯವಾಯಿತು. ಸುಮಾರು ೮ನೇ ಶತಮಾನದಿಂದ ರಾಷ್ಟ್ರಕೂಟರ, ಕಲ್ಯಾಣಿ ಚಾಲುಕ್ಯರ ಹಾಗೂ ನಂತರ ಹೊಯ್ಸಳರ ಆಧೀನದಲ್ಲಿ ಇವರು ಆಳ್ವಿಕೆ ಮಾಡಿದುದು ಶಾಸನಗಳಿಂದ ತಿಳಿದುಬರುತ್ತದೆ. ಆದರೆ ಸಾಂತರರು ಇಲ್ಲಿ ತಮ್ಮ ರಾಜ್ಯವನ್ನು ಸ್ಥಾಪಿಸುವ ಪೂರ್ವದಲ್ಲಿ ಈ ಮಲೆನಾಡಿನ ಬಹಳ ಭಾಗವು ಅಳುಪರ ಅಧೀನದಲ್ಲಿದ್ದಂತೆ ಕಂಡುಬರುತ್ತದೆ. ಈ ಸಾಂತರರು ಮೂಲತಃ ಜೈನಧರ್ಮಕ್ಕೆ ಸೇರಿದವರಾಗಿದ್ದು ಜೈನಧರ್ಮದ ಬೆಳವಣಿಗೆಗೆ ಸಾಕಷ್ಟು ಪ್ರೋತ್ಸಾಹ ನೀಡಿದವರಾಗಿದ್ದಾರೆ.

ಹೊಂಬುಜದ ಸಾಂತರರನ್ನು ಕುರಿತು ಇಲ್ಲಿಯವರಿಗೆ ನಡೆದಿರುವ ಅಧ್ಯಯನ

ಸಾಂತರರನ್ನು ಕುರಿತು ಮೊಟ್ಟಮೊದಲು ಕೆಲಸ ಮಾಡಿರುವವರು ಶ್ರೀ ಬೆಂಜಮಿನ್ ಲೂಯಿಸ ರೈಸರವರು. ಇವರು ಪ್ರಕಟಿಸಿರುವ ಎಫಿಗ್ರಾಫಿಯ ಕರ್ನಾಟಕ ಸಂಪುಟಗಳಲ್ಲಿ ೬.೭.೮ನೇಯ ಸಂಪುಟಗಳಲ್ಲಿ ಸಾಂತರರ ಶಾಸನಗಳು ಪ್ರಕಟವಾಗಿದ್ದು ಈ ಸಂಪುಟಗಳ ಪ್ರಾಸ್ತಾವಿಕ ಅಧ್ಯಾಯದಲ್ಲಿ ಸಾಂತರ ವಂಶ ಹಾಗೂ ರಾಜರ ಬಗ್ಗೆ ದೀರ್ಘವಾದ ವಿವರಣೆಯನ್ನು ನಾವು ಕಾಣುತ್ತೇವೆ.

ನಂತರ ಬಿ.ಎ. ಸಾಲೆತ್ತೊರೆ ತಮ್ಮ ಗ್ರಂಥಗಳಾವ ಮಿಡಿವೇಲ್ ಜೈನಿಸಮ್ (೧೯೩೮) ಕನ್ನಡ ನಾಡಿನ ಚರಿತ್ರೆ ಸಂಪುಟ ೧ (೧೯೪೧) ಹಾಗೂ ಎನ್ಶಿಯಂಟ್ ಕರ್ನಾಟಕದ ಸಂಪುಟ-೨. ಇವುಗಳಲ್ಲಿ ಸಾಂತರರನ್ನು ಕುರಿತು ಸಾಕಷ್ಟು ಮಾಹಿತಿಯನ್ನು ನೀಡಿದ್ದಾರೆ.

ತದನಂತರ ನಮಗೆ ಸಾಂತರರ ಕುರಿತು ತಿಳಿದು ಬರುವುದು ಮೈಸೂರು ಪ್ರಾಕ್ತನ ಇಲಾಖೆಯ ೧೯೨೯, ೧೯೩೦, ೧೯೩೧ನೇ ಇಸ್ವಿಯ ವಾರ್ಷಿಕ ವರದಿಗಳಲ್ಲಿ. ಇದರಲ್ಲಿ ಬಿ.ಎಲ್. ರೈಸ್ ರವರ ನಂತರ ಬೆಳಕಿಗೆ ಬಂದ ಅನೇಕ ಹೊಸ ಶಾಸನಗಳು ಪ್ರಕಟವಾಗಿದೆ.

ಕರ್ನಾಟಕದ ಚರಿತ್ರೆಯನ್ನು ಕುರಿತು ಸಾಕಷ್ಟು ಅಧ್ಯಯನಗಳನ್ನು ನಡೆಸಿರುವ ಎಂ.ಹೆಚ್. ಕೃಷ್ಣ, ಬಿ.ಆರ್. ಗೋಪಾಲ್, ಕೆ.ವಿ. ರಮೇಶ, ಎಂ.ವಿ. ಕೃಷ್ಣರಾವ್ ಮೊದಲಾದವರ ಕೆಲ ಲೇಖನಗಳು ಸಾಂತರರನ್ನು ಕುರಿತು ಅಧ್ಯಯನ ನಡೆಸಲು ಪೂರಕ ಸಾಮಗ್ರಿಗಳಾಗಿವೆ.

ನಂತರ ಜಗನ್ನಾಥ ಶಾಸ್ತ್ರಿಗಳ ಕೆಲವೊಂದು ಲೇಖನಗಳು ಪ್ರಕಟಗೊಂಡಿವೆ. ಎಂ.ಎ. ಢಾಕಿ ಅವರು ಸಾಂತರರ ಕಾಲದ ಕಲೆ ಹಾಗೂ ವಾಸ್ತುಶಿಲ್ಪಗಳ ಕುರಿತು ಲೇಖನಗಳನ್ನು ಪ್ರಕಟಿಸಿದ್ದಾರೆ. *ಸೌತ್ ಇಂಡಿಯನ್ ಇನ್ಸ್ಕ್ರಿಪಶನ್* ಸಂಪುಟಗಳಲ್ಲೂ ಸಾಂತರರ ಕೆಲವೊಂದು ಶಾಸನಗಳು ಪ್ರಕಟವಾಗಿವೆ.

ಇತ್ತೀಚಿನ ವರ್ಷಗಳಲ್ಲಿ ಡಾ. ಹಂ.ಪ.ನಾಗರಾಜಯ್ಯ ಅವರು ಬರೆದಿರುವ ಸಾಂತರರು ಒಂದು ಅಧ್ಯಯನ, ಹೊಂಬುಜ ಶಾಸನಗಳು ಹಾಗೂ ಸಚಿತ್ರ ಹೊಂಬುಜ, ಈ ಪುಸ್ತಕಗಳು ಸಾಂತರರ ಇತಿಹಾಸದ ಮೇಲೆ ಬೆಳಕು ಬೀರುವಂತಹ ಪ್ರಮುಖ ಪುಸ್ತಕಗಳಾಗಿವೆ.

ಸಾಂತರರ ಅಧ್ಯಯನದ ಆಕರಗಳು

ಈ ಸಾಂತರರ ಹಾಗೂ ಅವರ ಕಾಲ ಮತ್ತು ಪ್ರದೇಶದ ಇತಿಹಾಸ ತಿಳಿಯಲು ನಮಗಿರುವ ಮೂಲ ಆಕರಗಳಲ್ಲಿ ಪ್ರಾಕ್ತನ ಶಾಸ್ತ್ರಾಧಾರಗಳು ಪ್ರಮುಖವಾಗಿವೆ. ಸಾಂತರರು ತಮ್ಮ ಆಳ್ವಿಕೆಯ ಕಾಲದಲ್ಲಿ ಅನೇಕ ಶಿಲಾ ಹಾಗೂ ತಾಮ್ರ ಶಾಸನಗಳನ್ನು ಹೊರಡಿಸಿದ್ದು ಈ ಶಾಸನಗಳು ಹೆಚ್ಚಾಗಿ ಕನ್ನಡ ಲಿಪಿಯಲ್ಲಿದ್ದು ಸಂಸ್ಕೃತ ಮತ್ತು ಕನ್ನಡ ಭಾಷೆಯಲ್ಲಿವೆ. ಇದರೊಂದಿಗೆ ಅವರ ಕಾಲದಲ್ಲಿ ಕಟ್ಟಲ್ಪಟ್ಟಿರುವ ಅನೇಕ ಜೈನ ಹಾಗೂ ಜೈನೇತರ ವಾಸ್ತುಶಿಲ್ಪವು ನಮಗೆ ಅವರ ಇತಿಹಾಸವನ್ನು ತಿಳಿಯಲು ಸಹಾಯಕವಾಗಿದೆ.

ಇವರ ಕಾಲದ ಸಾಹಿತ್ಯಾಧಾರಗಳು ನಮಗೆ ಇಲ್ಲಿಯವರೆಗೂ ಕಂಡು ಬಂದಿಲ್ಲವಾದರೂ ೧೭ನೇ ಶತಮಾನದ ಒಬ್ಬ ಕವಿಯಾದ ಪದ್ಮನಾಭ ಕವಿಯ ಜಿನದತ್ತರಾಯ ಚರಿತೆ ಎಂಬ ಸಾಂಗತ್ಯ ಕಾವ್ಯವು ಪ್ರಮುಖ ಆಕರವಾಗಿದೆ. ಈ ಕಾವ್ಯ ಗ್ರಂಥವು ಅಲ್ಲಿಯ ಸ್ಥಳ ಪುರಾಣ, ಜಿನದತ್ತರ ಪೂರ್ವ ಚರಿತೆ ಹಾಗೂ ಹೊಂಬುಜದ ಪ್ರಮುಖ ದೇವತೆಯಾದ ಪದ್ಮಾವತಿ ದೇವಿಯನ್ನು ಕುರಿತು ಸಾಕಷ್ಟು ವಿಷಯಗಳನ್ನು ತಿಳಿಸುತ್ತದೆ. ಏನಿದ್ದರೂ ಸಾಂತರರನ್ನು ಕುರಿತು ಅರಿಯಲು ಇಂದಿಗೂ ನಾವು ಶಾಸನಗಳ ಮೊರೆ ಹೋಗಬೇಕಾಗಿದೆ.

ಸಾಂತರರ ಮೂಲ

ಸಾಂತರರ ಇತಿಹಾಸದ ಆರಂಭ ಸುಮಾರು ೮ನೇ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ. ಸಾಂತರರು ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ ನಂತರ ಸಾಂತಳಿಗೆ ಸಾಯಿರ ಎಂಬ ಆಡಳಿತ ಘಟಕವಾಗಿ ನಿರೂಪಿಸಲ್ಪಟ್ಟ ಪ್ರದೇಶ ೧೨ನೇ ಶತಮಾನದವರೆಗೂ ಸಾಂತಳಿಗೆ ಸಾಯಿರ ಎಂದೇ ಪ್ರಚಲಿತದಲ್ಲಿತ್ತು.[2]

ಈ ಸಾಂತರರ ವಂಶದ ಕುರಿತು ಹೆಚ್ಚಿನ ಮಾಹಿತಿಯನ್ನು ನಾವು ಜೈನ ಪುರಾಣಗಳಿಂದಲೂ ಜೈನ ಮಹಾಭಾರತದಿಂದಲೂ ಅರಿಯಬಹುದಾಗಿದೆ. ಅದರಂತೆ ೨೩ನೇ ತೀರ್ಥಂಕರರಾದ ಪಾರ್ಶ್ವನಾಥರು ಉಗ್ರವಂಶದವರಾಗಿದ್ದು, ಹುಂಚದ ಸಾಂತರರು ತಮ್ಮನ್ನು ಸಹ ಇದೇ ಉಗ್ರವಂಶದವರೆಂದು ಗುರುತಿಸಿಕೊಳ್ಳುತ್ತಾರೆ. ಇದನ್ನು ದೃಢಪಡಿಸಲು ಇಂದಿಗೂ ಸಹ ಹುಂಚ ಹಾಗೂ ಸುತ್ತ ಮುತ್ತಲಿನ ಪ್ರದೇಶದಲ್ಲಿ ಪಾರ್ಶ್ವನಾಥ ಬಸದಿಗಳು ಹೆಚ್ಚಾಗಿ ಕಂಡು ಬರುತ್ತಿದ್ದು, ಇದು ಅವರ ವಂಶದ ಮೂಲದ ಮೇಲೆ ಹೆಚ್ಚಿನ ಬೆಳಕನ್ನು ಚೆಲ್ಲುವಂತಹದಾಗಿದೆ. ಇಂದಿನವರೆಗೂ ಪಾರ್ಶ್ವನಾಥರ ಯಕ್ಷಿಯಾದ ಪದ್ಮಾವತಿ ದೇವಿಯು ಈ ಹುಂಚದ ಪ್ರಮುಖ ದೇವತೆಯಾಗಿ ಪೂಜಿಸಲ್ಪಡುತ್ತಿದ್ದಾಳೆ.

ಈ ಸಾಂತರರು ತಮ್ಮ ಮೂಲ ಸ್ಥಾನವನ್ನು ಹಾಗೂ ತಮ್ಮ ವಂಶದ ಮೂಲ ಪುರುಷನನ್ನು ಉತ್ತರ ಮಧುರದಿಂದ ಬಂದವರೆಂದು ಕರೆದುಕೊಂಡಿದ್ದಾರೆ. ಉದಾ: ೧೦೭೭ರ ಹುಂಚದ ಶಾಸನದಲ್ಲಿ ಕೆಲವೊಂದು ಪ್ರಾರಂಭಿಕ ಸಾಲುಗಳು ಈ ರೀತಿಯಲ್ಲಿವೆ: 'ಸಮಧಿಗತ ಪಂಚಮಹಾಸಬ್ದ ಮಹಾಮಂಡಳೇಶ್ವರನುತ್ತರ ಮಧುರಾದೀಶ್ವರಂ ಪಟ್ಟಿ ಪೊಂಬುಚ್ಚ ಪುರವರೇಶ್ವರಂ, ಮಹೋಗ್ರ ವಂಸಲಲಾಮಂ ಪದ್ಮಾವತೀ ಲಬ್ದವರ ಪ್ರಸಾದಾಸಾದಿತ.**[3]**'

ಈ ಉತ್ತರ ಮಧುರಾದೀಶ್ವರರಾದ ಹಾಗೂ ಮಹೋಗ್ರವಂಶದಲ್ಲಿ ಜನಿಸಿದ ರಾಹ ಅಥವಾ ರಾಳನೆಂಬವನು ಇವರ ಮೂಲ ಪುರುಷನೆಂದು ಅವರ ಶಾಸನಗಳು ಗುರುತಿಸುತ್ತವೆ. ಅಂತೆಯೇ ಅವರ ಶಾಸನಗಳಲ್ಲಿ ಈ ರಾಹನು ಕುರುಕ್ಷೇತ್ರ ಯುದ್ದದಲ್ಲಿ ಹೋರಾಡಿದಾಗ ಅವನ ಶೌರ್ಯವನ್ನು ಮೆಚ್ಚಿ ನಾರಾಯಣನು ಅವನಿಗೆ ಏಕಶಂಖವನ್ನು ವಾನರ ಧ್ವಜವನ್ನು ಕೊಟ್ಟನೆಂದು ಶಾಸನಗಳು ಉಲ್ಲೇಖಿಸುತ್ತವೆ.**[4]** ನಂತರ ಅವರ ಶಾಸನದಲ್ಲಿ ಕಂಡುಬರುವ ಪ್ರಮುಖ ರಾಜ ಜಿನದತ್ತ. ಈ ಜಿನದತ್ತನೇ ಉತ್ತರದಿಂದ ದಕ್ಷಿಣಕ್ಕೆ ಬಂದು ಇಲ್ಲಿದ್ದ ಕೆಲವು ರಾಕ್ಷಸರನ್ನು ಸಂಹಾರ ಮಾಡಿದುದರಿಂದ ಅದನ್ನು ಮೆಚ್ಚಿ ಲೊಕ್ಕಿಯಬ್ಬೆ ಅಥವ ಪದ್ಮಾವತೀ ದೇವಿಯೂ ಅವನಿಗೆ ಸಿಂಹ ಲಾಂಛನವನ್ನು ಕೊಟ್ಟಳೆಂದು ಶಾಸನಗಳು ಉಲ್ಲೇಖಿಸುತ್ತವೆ.

ಧ್ವಜ ಹಾಗೂ ಲಾಂಛನ : ಸಾಂತರರ ಧ್ವಜ ಹಾಗೂ ಲಾಂಛನವನ್ನು ಒಳಗೊಂಡ ಯಾವುದೇ ನಾಣ್ಯ, ವಾಸ್ತುಶಿಲ್ಪ, ಇಲ್ಲಿಯವರೆಗೂ ಕಂಡುಬಂದಿಲ್ಲ. ಅಂದರೆ ಅವರ ಧ್ವಜ ಹಾಗೂ ಲಾಂಛನಗಳನ್ನು ತಿಳಿಯಲು ನಮಗೆ ಶಾಸನಾಧಾರಗಳೇ ಮುಖ್ಯವಾಗಿವೆ. ಆ ಶಾಸನಗಳ ಆಧಾರದ ಮೇಲೆ ಅವರ ಧ್ವಜವು ವಾನರ ಧ್ವಜವಾಗಿತ್ತು ಹಾಗೂ ಮೃಗಲಾಂಛನವನ್ನು ಹೊಂದಿದ್ದರೆಂದು ತಿಳಿದು ಬರುತ್ತದೆ.

ಸಾಂತರರ ನೆಲೆ ವೀಡುಗಳು

ಶಾಸನಗಳ ಆಧಾರದ ಮೇಲೆ ನಮಗೆ ತಿಳಿದು ಬರುವ ಪ್ರಮುಖ ಅಂಶವೇನೆಂದರೆ ಪಟ್ಟಿಪೊಂಬುರ್ಚವು ಅವರ ಮೊದಲ ರಾಜಧಾನಿಯಾಗಿದ್ದು ಅದು ಅವರ ಮೂಲ ಪುರುಷನಾದ ಜಿನದತ್ತನಿಗೆ ಲೊಕ್ಕಿಯೊಬ್ಬೆ ಕರುಣಿಸಿದ ಸ್ಥಳವಾಗಿತ್ತು. ಅವರ ರಾಜಧಾನಿಯಾದ ಪೊಂಬುಜವನ್ನ ಶಾಸನಗಳು ಹೊಂಬುಜ, ಪೊಂಬುಚ, ಪಟ್ಟಿಪೊಂಬುರ್ಚ್ಚ ಇತ್ಯಾದಿಯಾಗಿ ಕರೆದಿವೆ.

ನಂತರ ಅವರ ನೆಲೆವೀಡು ಸೇತು ಎಂಬಲ್ಲಿಗೆ ಸ್ಥಳಾಂತರಗೊಂಡು, ಆನಂತರ ಅವಧಿಯಲ್ಲಿ ಅವರು ಮಲೆನಾಡನ್ನು ಬಿಟ್ಟು ಸುಮಾರು ೧೨ನೇ ಶತಮಾನದ ಹೊತ್ತಿಗೆ ಕಳಸ ಹಾಗೂ ಕಾರ್ಕಳಕ್ಕೆ ಹೋದ ವಿವರಗಳು ಅವರ ಶಾಸನಗಳಿಂದ ತಿಳಿಯುತ್ತದೆ.

ವಂಶಾವಳಿ

ಸಾಂತರರ ವಂಶಾವಳಿಯನ್ನು ಅರಿಯಲು ನಮಗಿರುವ ಒಂದೇ ಒಂದು ಪ್ರಮುಖ ಆಕರವೆಂದರೆ ಅವರ ಕಾಲದ ಶಾಸನಗಳು. ಅದರಂತೆ ಸುಮಾರು ಕ್ರಿ.ಶ. ೭ನೇ ಶತಮಾನದಲ್ಲಿ ಪೊಂಬುರ್ಚವನ್ನು ಚಿತ್ರವಾಹನ ಎಂಬ ಅರಸನು ಆಳುತ್ತಿದ್ದನೆಂದು ತಿಳಿದು ಬರುತ್ತದೆ. ಅವನ ಆಳ್ವಿಕೆಯ ಕಾಲದಲ್ಲಿ ಈ ಪ್ರದೇಶವು ಆಳುಪರ ವಶದಲ್ಲಿದ್ದಿರಬೇಕು.[5]ಸುಮಾರು ೮ನೇ ಶತಮಾನದ ಹೊತ್ತಿಗೆ ಪೊಂಬುಚ್ಚವು ಒಂದು ಪಟ್ಟಣ ಪ್ರದೇಶವಾಗಿ ರೂಪಗೊಂಡಿದ್ದು, ಸುಮಾರು ೯ನೇ ಶತಮಾನಕ್ಕೆ ಕಾಲಿಡುವ ಹೊತ್ತಿಗೆ ನಮಗೆ ಸಾಂತರ ಅರಸರ ವಂಶಾವಳಿಯನ್ನು ತಿಳಿಸುವ ಅನೇಕ ಶಾಸನಗಳು ಕಂಡುಬರುತ್ತವೆ. ಹಾಗೆಯೇ ಶಾಸನಗಳಲ್ಲಿ ಅವರು ಈಗಾಗಲೇ ಮೇಲೆ ತಿಳಿಸಿರುವಂತೆ ಪೊಂಬುರ್ಚ ಪುರವರಾಧೀಶ್ವರ ಎಂದು ಕರೆದುಕೊಂಡಿದ್ದಾರೆ.[6]

ಆದರೆ ಸಾಂತರರು ಅವರ ಆರಂಭಿಕ ವಂಶಾವಳಿಯನ್ನು ರೂಪಿಸುವಾಗ ಐತಿಹಾಸಿಕ ಅಂಶಗಳೊಂದಿಗೆ ಬಹಳಷ್ಟು ಪುರಾಣ ದಂತಕಥೆಗಳು ತಳಕು ಹಾಕಿಕೊಂಡಿರುವುದು ಕಂಡುಬರುತ್ತದೆ. ಈ ಶಾಸನಗಳ ಆಧಾರದ ಮೇಲೆ ಜಿನದತ್ತನು ಸಾಂತರರ ವಂಶದ ಸ್ಥಾಪಕನೆಂದು ತಿಳಿದುಬರುತ್ತದೆ. ಹಾಗೆಯೇ ಜಿನದತ್ತನ ಪೂರ್ವಜರ ಬಗ್ಗೆ ತಿಳಿಸುತ್ತ ಶಾಸನಗಳು ರಾಹ, ಸಹಕಾರ ಇವರನ್ನು ಹೆಸರಿಸುತ್ತವೆ. ಸಹಕಾರ ಹಾಗೂ ಅವನ ಪತ್ನಿಯಾದ ಕೇಯಾಲ ದೇವಿಯ ಸುತನೇ ಜಿನದತ್ತನೆಂದು ಹಾಗೆಯೇ ಈ ಜಿನದತ್ತನೇ ದಕ್ಷಿಣಾಭಿಮುಖವಾಗಿ ಬಂದವನೆಂದು ಶಾಸನಗಳಿಂದ ತಿಳಿಯಬಹುದಾಗಿದೆ.

ಜಿನದತ್ತನು ದಕ್ಷಿಣಾಭಿಮುಖವಾಗಿ ಬರಲು ಕಾರಣವೂ ಕುತೂಹಲಕಾರಿಯಾಗಿದೆ. ಅವನ ತಂದೆಯಾದ ಸಹಕಾರನು ಮನುಷ್ಯ ಮಾಂಸ ಭಕ್ಷಿಸುವ ಕಾರ್ಯದಲ್ಲಿ ತೊಡಗಿದುದರಿಂದ ಅವರ ನಡತೆಗೆ ಬೇಸತ್ತು ಜಿನದತ್ತನು ತನ್ನ ರಾಜ್ಯವನ್ನು ತ್ಯಜಿಸಿ ದಕ್ಷಿಣಾಭಿಮುಖವಾಗಿ ಬರುವಾಗ ಸಿಂಹರಥನೆಂಬ ರಾಕ್ಷಸನನ್ನು ಕೊಂದುದರಿಂದ ಅದನ್ನು ಮೆಚ್ಚಿದ ಲೊಕ್ಕಿಯಬ್ಬೆ ಅವನಿಗೆ ಸಿಂಹಲಾಂಛನವನ್ನು ನೀಡಿದಳು ಎಂದು ಶಾಸನಗಳು ತಿಳಿಸುತ್ತವೆ. ನಂತರ ಅವನು ಅಂದಾಸುರನೆಂಬ ರಾಕ್ಷಸನನನ್ನು ಸೋಲಿಸಿ ಕುಂದದ ಕೋಟೆಯಲ್ಲಿದ್ದ ಕರ ಹಾಗೂ ಕರದೂಷಣವನ್ನು ವಿಮುಕ್ತಿಗೊಳಿಸಿದಾಗ ಅದನ್ನು ಮೆಚ್ಚಿದ ಪದ್ಮಾವತೀ ದೇವಿಯು ಈ ಭಾಗವನ್ನು ರಾಜಧಾನಿಯನ್ನಾಗಿ ಮಾಡುವಂತೆ ಹರಸಿ ತಾನು ಅಲ್ಲಿರುವ ಲೊಕ್ಕಿ ಮರಕದಲ್ಲಿ ನೆಲೆ ನಿಂತಳೆಂದು ಹಾಗೆಯೇ ಲೊಕ್ಕಿಯಬ್ಬೆ ಎಂಬ ಎರಡನೇ ಹೆಸರನ್ನು ಪಡೆದಳೆಂದು ಶಾಸನಗಳು ತಿಳಿಸುತ್ತವೆ.[7]

ಹೀಗೆ ಈ ಅಧ್ಯಯನದಿಂದ ಪೊಂಬುರ್ಚ ಪ್ರದೇಶವು ಅತ್ಯಂತ ದುರ್ಗಮವಾಗಿದ್ದು, ಈ ಪ್ರದೇಶದಲ್ಲಿ ಮೊಟ್ಟ ಮೊದಲನೇ ಬಾರಿಗೆ ರಾಜಕೀಯ ವ್ಯವಸ್ಥೆಯ ನಿರ್ಮಾಣ ಆದಂತಹ ಐತಿಹಾಸಿಕ ಘಟನೆಯನ್ನು ಊಹಿಸಬಹುದು. ಆದರೆ ಇಲ್ಲಿಯವರೆಗೂ ಜಿನದತ್ತನ ಐತಿಹಾಸಿಕ ಘಟನೆಯನ್ನು ಊಹಿಸಬಹುದು. ಆದರೆ ಇಲ್ಲಿಯವರೆಗು ಜಿನದತ್ತನ ಐತಿಹಾಸಿಕತೆಯನ್ನು ರುಜುವಾತು ಪಡಿಸಲಾಗಿಲ್ಲ.

ದಾನಶಾಲೆ ಶಾಸನಗಳಲ್ಲಿ ತಿಳಿಸಿರುವಂತೆ ಜಿನದತ್ತನು ಪೊಂಬುಚ್ಚದಲ್ಲಿ ರಾಜ್ಯವನ್ನು ಸ್ಥಾಪಿಸಿದ ನಂತರ ಸಾನ್ತರನೆಂದು ಎರಡನೇ ಹೆಸರನ್ನು ಪಡೆದುದರಿಂದ ಅವನ ವಂಶಕ್ಕೆ ಸಾಂತರ ವಂಶವೆಂದು ಅಥವಾ ಸಾಂತರನ್ವಯ ಎಂದು ಹೆಸರಾಯಿತು.[8]

ಜಿನದತ್ತನ ನಂತರ ಹಲವು ಅರಸರು ಆಳಿದ ನಂತರ ಆಳ್ವಿಕೆಗೆ ಬಂದವರು ಶ್ರೀಕೇಸಿ ಹಾಗೂ ಜಯಕೇಶಿ. ನಂತರ ರಣಕೇಸಿಯ ಆಳ್ವಿಕೆಯ ನಂತರ ಹಲವರು ಆಳಿದ ಮೇಲೆ ಆಳ್ವಿಕೆಗೆ ಬಂದವನು ಜಗೇಸಿ. ಇವನು ರಾಷ್ಟ್ರಕೂಟ ಅಮೋಘ ವರ್ಷನ ಕಾಲದವನು.[9]ಇವನ ನಂತರ ಆಳ್ವಿಕೆಗೆ ಬಂದವನು ಸಾಂತರರ ಒಬ್ಬ ಪ್ರಮುಖ ರಾಜನಾದ ತೊಲಾಪುರುಷ ವಿಕ್ರಮ ಸಾನ್ತರ.

ಇವನ ಕಾಲ ಸುಮಾರು ಕ್ರಿ.ಶ. ೮೫೫-೯೩೫, ಇವನ ಪತ್ನಿ ಲಕ್ಷ್ಮೀದೇವಿ, ಅವಲು ಬನವಾಸಿಯ ಕಾಮದೇವನ ಮಗಳು. ಇವರ ಮಗ ಚಾಗಿ ಸಾನ್ತರ.

ಚಾಗಿಸಾನ್ತರ ಹಾಗೂ ಏಂಜಲದೇವಿಯ ಮಗನು ಒಂದನೆಯ ವೀರಶಾಂತರ, ಇವನ ಪತ್ನಿ ಜಾಕಲದೇವಿ, ಇವಳು ಅದೆಯೂರ ಶಾಂತಿವರ್ಮನ ಮಗಳು. ಇವರ ಮಕ್ಕಳು ಕನ್ನಡ ಶಾನ್ತರ ಹಾಗೂ ಕಾಮದೇವ. ಕಾಮದೇವ ಹಾಗೂ ಚಂದಲದೇವಿಯ ಮಗನೇ ತ್ಯಾಗಿಶಾನ್ತರ. ತ್ಯಾಗಿಶಾನ್ತರನ ಪತ್ನಿ ನಾಗಲಾದೇವಿ. ಇವಳು ಕದಂಬ ಹರಿವರ್ಮನ ಮಗಳು. ನಂತರ ಆಳ್ವಿಕೆ ನಡೆಸಿದವನು ಒಂದನೇಯ ನನ್ನಿಶಾನ್ತರ. ಇವನ ಕಾಲ ಸುಮಾರು ೯ನೇ ಶತಮಾನ. ಇವನ ಹೆಂಡತಿ ಸಿರಿಯಾದೇವಿ, ಪಲಸಿಗೆ ನಾಡಿನ ಅರಿಕೇಸರಿಯ ಮಗಳು. ಇವರ ಪುತ್ರ ರಾಯಶಾನ್ತರ. ಇವನ ಪತ್ನಿ ಅಕ್ಕಾದೇವಿ. ಇವರ ಮಗ ಚಿಕ್ಕವೀರ ಶಾನ್ತರ ಹಾಗೂ ಇವನ ಪತ್ನಿ ಬಿಜ್ಜಲದೇವಿ. ಇವರ ಪುತ್ರ ಅಮ್ಮಣ್ಣದೇವ ಹಾಗೂ ಇವನ ಪತ್ನಿ ಹೋಚಲದೇವಿ. ಇವರ ಮಕ್ಕಳು ಬೀರಬ್ಬರಸಿ ಮತ್ತು ತೈಲಪದೇವ. ತೈಲಪನಿಗೆ ಇಬ್ಬರು ಪತ್ನಿಯರು. ಕೇಳೆಯಬ್ಬರಸಿ ಹಾಗೂ ಮಾಂಕಬ್ಬರಸಿ. ಇವರ ಮಗ ಬೀರದೇವ ಹಾಗೂ ಇವನ ಪತ್ನಿ ಬೀರಲ ಮಹಾದೇವಿ. ಈ ಬೀರದೇವನ ಇನ್ನೊಂದು ಹೆಸರು ತ್ರೈಳೋಕ್ಯಮಲ್ಲ ವೀರ ಶಾನ್ತರ ಅಥವಾ ರಾಯಶಾನ್ತರ. ಈ ವೀರ ಶಾನ್ತರನ ಕಾಲದಿಂದ ಇವರು ರಾಷ್ಟ್ರಕೂಟರ ಆಧೀನದಿಂದ ಹೊರಬಂದು, ಚಾಳುಕ್ಯ ಸಾಮ್ರಾಜ್ಯದ ಸಾಮ್ರಾಟನಾದ ತೈಲಪದೇವನ ಮಾಂಡಲಿಕರಾದರೆಂದು ತಿಳಿದು ಬರುತ್ತದೆ.

ರಾಜ್ಯದ ಗಡಿಗಳು

ಅವರ ಶಾಸನಗಳ ಆಧಾರದ ಮೇಲೆ ನಾವು ಸಾಂತರ ರಾಜ್ಯದ ಮೇರೆಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ಅಂದರೆ ಸಾಂತಳಿಗೆ ಅಥವಾ ಸಾಂತರ ನಾಡು ತೀರ್ಥಹಳ್ಳಿ ತಾಲ್ಲೂಕು ಆಗುಂಬೆ ಕುಂದಾದ್ರಿಯವರೆಗೂ, ತೆಂಕಣಕ್ಕೆ ಮೂಡಿಗೆರೆ ತಾಲ್ಲೂಕು ಕಳಸದವರೆಗೂ, ಪಡುವಣದತ್ತ ಸಾಗರ ತಾಲ್ಲೂಕು ಗೋವರ್ಧನಗಿರಿಯವರೆಗೂ ಹಬ್ಬಿತ್ತು.**[10]**

ಸಾಂತರರ ಕೆಲವು ಪ್ರಮುಖ ಅರಸರು

ಮೊದಲನೆಯ ವಿಕ್ರಮ ಸಾಂತರ : ಕ್ರಿ.ಶ. ೮೫೫-೯೩೫ ಸಾಂತರರ ಸರಿಯಾದ ಅಥವಾ ಕ್ರಮಬದ್ಧವಾದ ವಂಶಾವಳಿಯು ಪ್ರಾರಂಭವಾಗುವುದೇ ಮೊದಲನೆಯ ವಿಕ್ರಮ ಸಾಂತರನಿಂದ. ಇವನ ಕಾಲದಲ್ಲಿ ಹೊರಡಿಸಿರುವ ಅನೇಕ ಶಾಸನಗಳು ಅವನು ಹಿರಣ್ಯಗರ್ಭ ಮಹಾದಾನಗಳನ್ನು ಮಾಡಿದವನೆಂದು, ಅನೇಕ ಶತ್ರು ಅರಸರನ್ನು ಕೊಂದು ಸಾಂತಳಿಗೆ ಸಾಯಿರದ ಮೇರೆಗಳನ್ನು ಬಲಪಡಿಸಿ ಅದನ್ನು ಏಕಛತ್ರವನ್ನಾಗಿ ಮಾಡಿದನೆಂದು ತಿಳಿಸುತ್ತದೆ.**[11]**ಹಾಗೆಯೇ ಶಾಸನಗಳು ಕಂದುಕಾಚಾರ್ಯ, ದಾನ ವಿನೋದ, ಛಲದಂಕರಾಮ ಮುಂತಾದ ಬಿರುದುಗಳಿಂದ ಅವನನ್ನು ಗುರುತಿಸುತ್ತವೆ. ಶಾಸನದಲ್ಲಿ ಇರುವಂತೆ ಅವನ ಕಾಲದಲ್ಲಿ ಸಾಂತರರ ರಾಜ್ಯದ ಮೇರೆ ಈ ರೀತಿಯಾಗಿತ್ತು. ತೆಂಕಣದಲ್ಲಿ ಸೂಲದ ಹೊಳೆ, ಪಡುವಣದತ್ತ ತವನಸಿ (ತವನಂದಿ) ಮತ್ತು ಬಡಗಣಕ್ಕೆ ಬಂದಗೆ (ಬಂದಗದ್ದೆ) ಹಾಗೂ ಶಾಸನಗಳು ಪೂರ್ವದ ಮೇರೆಯನ್ನು ತಿಳಿಸಿಲ್ಲ.**[12]**

ಅವನ ಪತ್ನಿಯಾದ ಲಕ್ಷ್ಮೀದೇವಿಯು ಬನವಾಸಿಯ ಅರಸನಾದ ಕಾಮದೇವನ ಮಗಳು. ಶಿಕಾರಿಪುರದ ಹಾಗೂ ಹುಂಚದ ಶಾಸನಗಳಿಂದ ಈ ವಿಕ್ರಮ ಸಾಂತರನು ಉಗ್ರವಂಶದ ಶ್ರೇಷ್ಠನೂ, ತೊಲಾಪುರುಷ ವಿಕ್ರಮ ಸಾಂತರನು ಆದ ಇವನು ಕ್ರಿ.ಶ. ೮೯೮ ರಲ್ಲಿ ಒಂದುಕಲ್ಲು ಬಸದಿಯನ್ನು ಮಾಡಿಸಿದನೆಂದು ತಿಳಿದು ಬರುತ್ತದೆ.**[13]** ಹಾಗೆಯೇ ಮುಂದುವರೆದು ಅವನು ಆ ಬಸದಿಗಾಗಿ ಬಿಟ್ಟ ದಾನದ ವಿವರಗಳನ್ನು ಶಾಸನವು ತಿಳಿಸುತ್ತದೆ. ಈ ವಿಕ್ರಮ ಸಾನ್ತರನು ತನ್ನ ತೂಕದ ಚಿನ್ನವನ್ನು ತೂಗಿ ದಾನ ಮಾಡಿದುದರಿಂದ ಆತನಿಗೆ ತೊಲಾಪುರುಷ ವಿಕ್ರಮ

ಶಾನ್ತರ ಎಂದು ಹೆಸರು ಬಂದಿತು. ಹಾಗೆಯೇ ಶಾಸನದಲ್ಲಿ ಅವನಿಗೆ ಪರ ಚಕ್ರಗಣ್ಯಂ, ಕಾರ್ಮುಕರಾಮ ಎಂಬಿತರ ಬಿರುದುಗಳು ಕಂಡು ಬರುತ್ತವೆ.

ಶಿಕಾರಿಪುರದ ೨೮೪ನೇ ಶಾಸನದ ಪ್ರಕಾರ ಈ ವಿಕ್ರಮ ಸಾಂತನು ರಾಷ್ಟ್ರಕೂಟ ಇಮ್ಮಡಿ ಕೃಷ್ಣವಲ್ಲಭನ (ಕ್ರಿ.ಶ. ೮೭೮-೯೧೪) ಸಾಮಂತನಾಗಿದ್ದನೆಂದು ತಿಳಿದು ಬರುತ್ತದೆ. ಕ್ರಿ.ಶ. ೯ನೇ ಶತನಾಮದ ಕೊನೆಯ ಹೊತ್ತಿಗೆ ಈತನು ಸಾಂತರ ನಾಡಿಗೆ ಸ್ಪಷ್ಟ ಮೇರೆಗಳನ್ನು ಕೊಟ್ಟನಲ್ಲದೆ, ಬನವಾಸಿಯ ರಾಜನೊಡನೆ ವೈವಾಹಿಕ ಸಂಬಂಧಗಳ ಮೂಲಕ ಸಖ್ಯ ಬೆಳೆಸಿಕೊಂಡಿದ್ದನು. ಒಟ್ಟಿನಲ್ಲಿ ಸಾಂತಳಿಗೆ ಸಾಯಿರವನ್ನು ಏಕಛತ್ರದಿಂದ ಸಾಂತರ ನಾಡನ್ನಾಗಿ ಮಾಡಿ ಆಳ್ವಿಕೆ ಮಾಡಿದವರಲ್ಲಿ ವಿಕ್ರಮ ಸಾಂತರನು ಮೊದಲನೆಯವನಾಗಿದ್ದಾನೆ.

ಕ್ರಿ.ಶ. ಸುಮಾರು ೮೫೭ರ ಕಾಲದ ಹೊನ್ನಾಳಿ ಶಾಸನದಲ್ಲಿ ಛಲದಂಕ ರಾಮ ಶಾನ್ತರನ ವಿಚಾರ ತಿಳಿದು ಬಂದಿದ್ದು ಆ ಶಾಸನದಲ್ಲಿ ಅವನು ಸಾಂತಳಿಗೆ ಸಾಯಿರದ ಜೊತೆಗೆ ಬನವಾಸಿ ನಾಡನ್ನು ಆಳ್ವಿಕೆ ಮಾಡುತ್ತಿದ್ದಂತೆ ಕಂಡುಬರುತ್ತದೆ.**[14]**ಆಗ ಅಲ್ಲಿ ನಡೆದ ಒಂದು ಕಾಳಗದಲ್ಲಿ ರಟ್ಟಪಳ್ಳಿಯ ಪೊಲಗನು ಧೈರ್ಯದಿಂದ ಹೋರಾಟಿ ಮಡಿದನೆಂದು ತಿಳಿದುಬರುತ್ತದೆ. ಆದರೆ ಈ ಹೋರಾಟದ ಬಗ್ಗೆ ಹೆಚ್ಚಿನ ಮಾಹಿತಿಗಳು ದೊರೆಯುವುದಿಲ್ಲ.

ಮೊದಲನೆಯ ವಿಕ್ರಮ ಸಾಂತರನ ನಂತರ ಮತ್ತೊಮ್ಮೆ ಸಾಂತರರ ಆಳ್ವಿಕೆಯ ಬಗ್ಗೆ ಬೆಳಕು ಚೆಲ್ಲುವಂತಹ ಯಾವುದೇ ಮಾಹಿತಿಗಳು ಲಭ್ಯವಿಲ್ಲ. ಅವರ ನಂತರದ ಶಾಸನಗಳಲ್ಲಿ ಚಾಗಿ ಸಾಂತರ, ವೀರ ಶಾನ್ತರ, ಕನ್ನರ, ಕಾಮದೇವ, ತ್ಯಾಗಿಶಾನ್ತರ, ನನ್ನಿಶಾನ್ತರ ರಾಯಶಾನ್ತರ, ಚಕ್ರವೀರಶಾನ್ತರ ಎಂಬ ಹೆಸರುಗಳು ಕಂಡು ಬಂದಿದ್ದರೂ ಅವರ ಆಳ್ವಿಕೆಯ ಅಥವಾ ಇತರೇ ವಿವರಗಳು ನಮಗೆ ಏನೂ ದೊರೆಯುವುದಿಲ್ಲ.

ಎರಡನೆಯ ವಿಕ್ರಮಶಾನ್ತರ : ಇವನ ಆಳ್ವಿಕೆಯ ಕಾಲದಲ್ಲಿ ಸಾಂತರರು ತಮ್ಮ ವಿಧೇಯತೆಯನ್ನು ರಾಷ್ಟ್ರಕೂಟರಿಂದ ಚಾಳುಕ್ಯರ ಕಡೆಗೆ ವಾಲಿಸಿದ್ದುದು ಕಂಡುಬರುತ್ತದೆ. ಆದರೆ ಈ ಎರಡನೆಯ ವಿಕ್ರಮ ಸಾಂತರನ ಆಳ್ವಿಕೆಯ ಕಾಲ ಬಹಳ ಕಡಿಮೆ ಅವಧಿಯದಾಗಿದೆ.

ನನ್ನಿಶಾನ್ತರ : ಇವನ ಇನ್ನೊಂದು ಹೆಸರು ಅಣ್ಣಲದೇವ. ಇವನು ಚಾಳುಕ್ಯ ಜಗದೇಕಮಲ್ಲ ಜಯಸಿಂಹ ದೇವನ ಕಾಲಕ್ಕೆ ಸೇರಿದವನಾಗಿದ್ದು ಅವನ ಮಾಂಡಲೀಕನಾಗಿದ್ದನು. ಇವನನ್ನು ಕುರಿತು ಖಚಿತ ಮಾಹಿತಿ ನಮಗೆ ಶಿಕಾರಿಪುರದ ಶಾಸನದಿಂದ ತಿಳಿದು ಬರುತ್ತದೆ.**[15]**ಈ ಶಾಸನದಲ್ಲಿ ಅಣ್ಣಲ ದೇವನನ್ನು ಪಟ್ಟಿ ಪೊಂಬುಚ್ಚ ಪುರವರೇಶ್ವರಂ, ವಿಪುಲ ತುಲಾ ಪುರುಷ ಹಿರಣ್ಯ ಗರ್ಭತ್ರಯೊದ್ಯಾಧಿಕದಾನ ಮಾಡಿದವನೆಂದು, ಮೃಗಲಾಂಛನವನ್ನು ಹೊಂದಿದವನೆಂದೂ ಉಲ್ಲೇಖಿಸಲಾಗಿದೆ. ಹಾಗೆಯೇ ಅವನು ತ್ಯಾಗರ್ತಿಯ ಹಿರಿಯ ಬ್ರಾಹ್ಮಣ ಮಾಧವಯ್ಯನ ದೇಗುಲದ ನಾರಾಯಣದೇವರ ದೇವಭೋಗಕ್ಕೆ ಧಾರಾಪೂರ್ವಕವಾಗಿ ಬಿಟ್ಟ ದಾನದ ವಿವರಗಳು ಸಹ ಕಂಡು ಬರುತ್ತವೆ.

ಆದರೆ ಗಮನಿಸಬೇಕಾದ ಒಂದು ಅಂಶವೇನೆಂದರೆ ಈ ನನ್ನಿ ಶಾನ್ತರ ಹಾಗೂ ಅವನಿಗಿಂತ ಮೊದಲೇ ಆಳ್ವಿಕೆ ನಡೆಸಿದ ಎರಡನೆಯ ವಿಕ್ರಮ ಶಾನ್ತರ ಇಬ್ಬರೂ ಚಾಳುಕ್ಯ ಕಾಲದವರಾಗಿದ್ದು ಅವರಿಬ್ಬರೂ ಯಾವುದೇ ಚಾಳುಕ್ಯ ಬಿರುದುಗಳನ್ನು ಪಡೆದಿಲ್ಲದಿರುವುದು ಕುತೂಹಲಕಾರಿಯಾಗಿದೆ.**[16]**ಈ ನನ್ನಿ ಶಾನ್ತರನ ಪತ್ನಿ ಹೊಚಲದೇವಿ. ಅವರಿಗೆ ಒಬ್ಬ ಮಗ ಹಾಗೂ ಒಬ್ಬ ಮಗಳು, ಅವರ ಮಗ ತೈಲಪದೇವ. ಈ ತೈಲಪದೇವನು ಅಳುಪ ಹಾಗೂ ಗಂಗರ ವಂಶದೊಡನೆ ವೈವಾಹಿಕ ನೆಂಟಸ್ತಿಕೆ ಬೆಳೆಸಿದನು.

ಈ ತೈಲಪದೇವ ಹಾಗೂ ಕೆಳೆಯಬ್ಬರಸಿಗೆ ಜನಿಸಿದ ಮಗನೇ ಸಾಂತರರ ಅತ್ಯಂತ ಪ್ರಮುಖ ರಾಜನಾದ ಬೀರದೇವ.

ಬೀರದೇವ : ತ್ರೈಳೋಕ್ಯಮಲ್ಲವೀರಶಾನ್ತರ ಬೀರದೇವ : (ಸು.೧೦೫೦/೧೦೭೭) ಇವನನ್ನು ಶಾಸನದಲ್ಲಿ ಬೀರುಗ, ಬೀರದೇವ, ಬೀರಶಾನ್ತರ ಎಂಬ ವಿವಿಧ ಹೆಸರಿನಿಂದ ಕರೆಯಲಾಗಿದೆ. ಈತನ ಪತ್ನಿ ಬೀರಲದೇವಿ, ಬೀರದೇವನು ಚಾಳುಕ್ಯ ಚಕ್ರವರ್ತಿ ತ್ರೈಳೋಕ್ಯ ಮಲ್ಲದೇವನ ಮಹಾಮಂಡಳೇಶ್ವರನು. (೧೦೪೨-೧೦೬೮). ಈ ವೀರ ಶಾನ್ತರನನ್ನು ಶಾಸನಗಳು ಉತ್ತರ ಮಧುರಾಧೀಶ್ವರ, ಪಟ್ಟಿ ಪೊಂಬುರ್ಚ ಪುರವರೇಶ್ವರ, ಮಹೋಗ್ರ ವಂಡಲರಾಮ, ಪದ್ಮಾವತೀವರಲಬ್ಧ ಪ್ರಸಾದಿತ, ವಿಪುಳ ತುಲಾಪುರುಷ, ಮಹಾದಾನ, ಹಿರಣ್ಯ ಗರ್ಭತ್ರಯಾಧಿಕ ದಾನಂ......... ಇತ್ಯಾದಿಯಾಗಿ ವರ್ಣಿಸಿವೆ.[17]

ಹಾಗೆಯೇ ಈ ಶಾಸನದಲ್ಲಿ ತನ್ನ ರಾಜಧಾನಿಯಾದ ಹೊಂಬುಜದಲ್ಲಿ ಒಂದು ಭುಜಭಳ ಶಾನ್ತರ ಜಿನಾಲಯವನ್ನು ಕಟ್ಟಿಸಿದುದರ ಉಲ್ಲೇಖ ಹಾಗೂ ಈ ಜಿನಾಲಯವನ್ನು ತನ್ನ ಗುರುಗಳಾದ ಕನಕನಂದಿ ದೇವರಿಗೆ ಧಾರಾಪೂರ್ವಕವಾಗಿ ದಾನ ಮಾಡಿದ ವಿವರಗಳು ಸಹ ಕಂಡು ಬರುತ್ತವೆ. ಅಂತೆಯೇ ಶಾಸನಗಳು ವೀರಶಾಂತರನು ಯುದ್ಧ ರಂಗದಲ್ಲಿ ಆಡಳಿತ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಅತ್ಯಂತ ನೈಪುಣ್ಯ ಹೊಂದಿದವನೆಂದು ತಿಳಿಯಪಡಿಸುತ್ತವೆ. ಇವನು ತನ್ನ ಸಮಕಾಲೀನ ಮುಖ್ಯ ಅರಸರ ಜೊತೆ ವೈವಾಹಿಕ ಸಂಬಂಧಗಳನ್ನು ಬಲಪಡಿಸಿದನು. ಇವನ ಪತ್ನಿಯರಾದ ಬಿಜ್ಜಲದೇವಿ ನೊಳಂಬ ನರಸಿಂಗದೇವನ ಪುತ್ರಿ. ಹಾಗೆಯೇ ಅಚಲದೇವಿ, ವೀರ ಮಹಾದೇವಿ ಮತ್ತು ಚಾಗಲದೇವಿಯರು ಇವನ ಇತರ ಪತ್ನಿಯರು.

ಈ ವೀರಶಾನ್ತರ ಹಾಗೂ ವೀರ ಮಹಾದೇವಿಗೆ ಜನಿಸಿದವರು ನಾಲ್ಕು ಜನ ಮಕ್ಕಳು. ಅವರುಗಳು ಯಾರೆಂದರೆ ಭುಜಬಳ ಶಾನ್ತರ, ನನ್ನಿಶಾನ್ತರ, ಗೋವಿಂದದೇವ ಹಾಗೂ ವಿಕ್ರಮ ಶಾನ್ತರ.

ಭುಜಬಳಶಾನ್ತರ ಸು.ಕ್ರಿ.ಶ. ೧೦೭೦-೭೬ : ಇವನು ಸಹ ಸಾಂತಳಿಗೆಯನ್ನು ಏಕಛತ್ರವನ್ನಾಗಿ ಆಳಿದನೆಂದು ಶಾಸನಗಳು ತಿಳಿಸುತ್ತವೆ. ಹಾಗೆಯೇ ಇವನು ಚಾಳುಕ್ಯ ಚಕ್ರವರ್ತಿ ತ್ರೈಳೋಕ್ಯಮಲ್ಲನಿಗೆ ವಿಧೇಯತೆಯ ಸಂಕೇತವಾಗಿ ತನ್ನನ್ನು ತ್ರೈಳೋಕ್ಯಮಲ್ಲ, ಭುಜಬಳ ಶಾನ್ತರ ಎಂದು ಕರೆದುಕೊಂಡನು. ಇವನು ತನ್ನ ತಮ್ಮಂದಿರೊಂದಿಗೆ ಸೇರಿ ತಮ್ಮ ದೊಡ್ಡಮ್ಮ ಚಟ್ಟಲದೆವಿ ಕಟ್ಟಿಸಿದ ಪಂಚಬಸದಿಗೆ ಮಾಡಿದ ಅನೇಕ ದಾನದ ವಿವರಗಳನ್ನು ಶಾಸನವು ನೀಡುತ್ತದೆ. ಅಂತೆಯೇ ಈ ಭುಜಭಲ ಶಾನ್ತರು ಸಾಂತಳಿಗೆಯನ್ನು ನಿರಂಕುಶವಾಗಿ ಆಳುತ್ತಿದ್ದನೆಂದು ಶಾಸನಗಳು ತಿಳಿಸುತ್ತವೆ.

[1]ಕನಾಟಕ ರಾಜ್ಯ ಗೆಝುಟಿಯರ್ ಶಿವಮೊಗ್ಗ ಜಿಲ್ಲೆ.

[2]ಅನೇಕ ಶಾಸನಗಳಲ್ಲಿ ಸಾಂತರರು ಆಳಿದ ಪ್ರದೇಶವನ್ನು ಸಾನ್ತಳಿಗೆ ಸಾಯಿರ ಎಂದು ಕರೆಯಲಾಗಿದೆ. ನೋಡಿ ಬಿ.ಎಲ್.ರೈಸ್ (ಸಂ) ಎಪಿಗ್ರಾಫಿಯಾ ಕರ್ನಾಟಕ (ವಿ.ಕ) ೧೯೦೪ ಸಂಪುಟ ೮ ರಲ್ಲಿನ ಶಾಸನಗಳು

[3]ಅದೇ ನಗರ ೩೫, ಕಾಲ ಕ್ರಿ.ಶ. ೧೦೭೭

[4]ಅದೇ ನಗರ ೩೫

[5]ಎ.ಕ.ಸಂ. ೬, ಕೊಪ್ಪ ೩೭, ಕ್ರಿ.ಶ. ಸುಮಾರು ೬೭೫

[6]ಎ.ಕ.ಸಂ. ೮, ನಗರ ೨೨ ಸು.ಕ್ರಿ.ಶ. ೯೦೦; ೩೫ ಕ್ರಿ.ಶ. ೧೦೭೭

[7]ಅದೇ ನಗರ ೩೫, ಕ್ರಿ.ಶ. ೧೦೭೭

[8]ಅದೇ ತೀರ್ಥಹಳ್ಳಿ (ದಾನಶಾಲೆ) ಸಂ. ೧೯೭ ಪು. ೬೮೬

[9]ಎ.ಕ.ಸಂ.೭, ಶಿಕಾರಿಪುರ ೨೮೩ ಸು.ಕ್ರಿ.ಶ. ೮೩೦

[10]ಎ.ಕ. ಸಂ. ೬ ಮುನ್ನುಡಿ ಪು. ೧೦

[11]ಅದೇ

[12]ಎ.ಕ. ಸಂ. ೮, ನಗರ ೩೫

[13]ಎ.ಕ. ಸಂ. ೭, ಶಿಕಾರಿಪುರ ೩೫ ಹಾಗೂ ಎ.ಕ. ಸಂ. ೮, ನಗರ ೬೦

[14]ಎ.ಕ. ಸಂ. ೭, ಹೊನ್ನಾಳಿ ೨೩, ಪು ೩೭೯

[15]ಅದೇ ಶಿಕಾರಿಪುರ ೫೩ ಕ್ರಿ.ಶ. ೧೦೨೭

[16]ಅಂದರೆ ಈ ಇಬ್ಬರೂ ರಾಷ್ಟ್ರಕೂಟರಿಂದ ಹೊರಬಂದು ಸ್ವತಂತ್ರವಗಿ ತಮ್ಮ ರಾಷ್ಟ್ರವನ್ನು ಆಳಿರಬಹುದೆಂಬ ಊಹೆಗೆ ಅವಕಾಶವಿದೆ.

[17]ಎ.ಕ. ೮ ನಗರ ೫೮ ಕ್ರಿ.ಶ. ೧೦೬೨

ಮಲೆಕರ್ನಾಟಕದ ಅರಸು ಮನೆತನಗಳು: ೩. ಹೊಂಬುಜದ ಸಾಂತರರು (೨)

ಗೊಗ್ಗಿಗ / ಗೋವಿಂದದೇವ / ನನ್ನಿಶಾನ್ತರ ೨. ಶಾಂತರಾದಿತ್ಯ : ಸಾಂತರರ ನಾಡು ಮತ್ತೊಂದು ಬಾರಿಗೆ ತನ್ನ ಆಳ್ವಿಕೆಯ ಉತ್ತುಂಗ ದಿನಗಳನ್ನು ಕಂಡಿದ್ದು ಈ ಎರಡನೆಯ ನನ್ನಿಶಾನ್ತರನ ಕಾಲದಲ್ಲಿ. ಇವನು ಸಾಂತಳಿಗೆ ನಾಡಿನ ಗಡಿಯನ್ನು ವಿಸ್ತರಿಸಿದಂತೆ ಕಂಡು ಬರುತ್ತದೆ. ಹಾಗೆಯೇ ಅವರ ಶಾಸನಗಳಲ್ಲಿ ಪರಾಯತ್ತವಾದ ಸಾಂತಳಿಗೆಯನ್ನು ಸ್ವಾಯತ್ತ ಮಾಡಿದನೆಂದು ತಿಳಿಸುತ್ತದೆ.[1]ಇವನ ಸಾಹಸವನ್ನು ಮೆಚ್ಚಿದ ಚಾಳುಕ್ಯ ಚಕ್ರವರ್ತಿಯಾದ ಆರನೆಯ ವಿಕ್ರಮಾದಿತ್ಯನು (ಕ್ರಿ.ಶ. ೧೦೭೬-೧೧೨೬) ತನ್ನ ಅರ್ಧಾಸನವಾದ ಲೋಹ ಸಿಂಹಾಸನದಲ್ಲಿ ಕೂಡಿಸಿಕೊಂಡನೆಂದು ಶಾನಸಗಳಿಂದ ತಿಳಿದು ಬರುತ್ತದೆ.[2]

ಮೂರನೆಯ ವಿಕ್ರಮಶಾನ್ತರ (ಸು.ಕ್ರಿ.ಶ. ೧೦೭೭-೮೭) : ಎರಡನೆಯ ನನ್ನಿಶಾನ್ತರನ ನಂತರ ಪಟ್ಟಕ್ಕೆ ಬಂದವನು ಒಡ್ಡುಗ ಅಥವಾ ಮೂರನೆಯ ವಿಕ್ರಮ ಶಾಂತರ.[3]ಅಧಿಕಾರಕ್ಕೆ ಬರುವ ಪೂರ್ವದಲ್ಲಿ ತನ್ನ ಅಣ್ಣಂದಿರಿಗೆ ವಿಧೇಯನಾಗಿದ್ದ ಇವನು ನಂತರ ತನ್ನ ಸಾಮ್ರಾಟನಾದ ವಿಕ್ರಮಾಂಕನ ನಾಮಾಂಕಿತವನ್ನು ತನ್ನ ಹೆಸರಿನೊಂದಿಗೆ ಸೇರಿಸಿಕೊಂಡು ವಿಕ್ರಮ ಶಾನ್ತರನಾದನು. ಇವನೂ ಸಹ ತನ್ನ ಆಳ್ವಿಕೆಯ ಕಾಲದಲ್ಲಿ ಪಂಚಬಸದಿ ಗಾಗಿ ಮಾಡಿದ ದಾನದ ವಿವರಗಳು ಹೊಂಬುಜದ ಶಾಸನಗಳಿಂದ ತಿಳಿದುಬರುತ್ತವೆ. ಹಾಗೆಯೇ ಈ ವಿಕ್ರಮ

ಶಾನ್ತರನು ಪಂಚಬಸದಿಯ ಮಾದರಿಯ ಇನ್ನೊಂದು ಬಸದಿಯನ್ನು ಆನಂದೂರಿನಲ್ಲಿ ಕಟ್ಟಿಸಿದ್ದಾಗಿ ತಿಳಿದು ಬರುತ್ತದೆ.

ತ್ರಿಭುವನಮಲ್ಲ ಶಾನ್ತರದೇವ : (ಸು.ಕ್ರಿ.ಶ. ೧೦೯೦-೧೧೩೦) ಇವನು ವಿಕ್ರಮ ಶಾನ್ತರನ ಮಗನು. ಇವನು ಚಾಳುಕ್ಯ ರಾಜ ಇಮ್ಮಡಿ ತ್ರಿಭುವನ ಮಲ್ಲದೇವ ಪೆರ್ಮಾಡಿ (ವಿಕ್ರಮಾದಿತ್ಯ ೧೦೭೬-೧೧೨೬) ಯ ಮಹಾಮಂಡಲೇಶ್ವರನಾಗಿದ್ದನು. ಹಾಗಾಗಿ ತನ್ನ ಹೆಸರನ್ನು ತ್ರಿಭುವಮಲ್ಲ ಶಾಂತರ ಎಂದು ಕರೆದುಕೊಂಡಿದ್ದಾನೆ. ದಾನಶಾಲೆಯ ಶಾಸನದ ಪ್ರಕಾರ ಕ್ರಿ.ಶ. ೧೧೦೩ ರಲ್ಲಿ ಸೋಮಗ್ರಹಣದಂದು ಜಿನಬಿಂಬ ಪ್ರತಿಷ್ಟೆಯನ್ನು ಮಾಡಿ ಒಂದು ಬಸದಿಯನ್ನು ಕಟ್ಟಿಸಿ ಅದಕ್ಕೆ ಬಿಟ್ಟ ದಾನದ ವಿವರಗಳು ಕಂಡು ಬರುತ್ತವೆ. ಅಂತೆಯೇ ಆ ಬಸದಿಯ ಖಂಡ ಸ್ಪುಟಿತ ನವಕರ್ಮ ಆಹಾರ ದಾನಕ್ಕೆ, ದೇವರ ಅಷ್ಟವಿಧಾರ್ಚನೆಗಾಗಿ ಊರೊಳು ಸೇಸೆ, ಬಿರ್ದು, ಬೀಯ, ದೇವಿದೆರೆ, ಅಡಿಗಚ್ಚು, ಕಾಣಿಕೆ, ಕಯ್ಯಾಣಿಕೆ, ಹಾಲಾವು, ಹಬ್ಬದ ಬಿಯ್ಯ, ಕುಮಾರ ಗದ್ಯಾಣಂ ಮೊದಲಾಗಿ ಧಾರಾ ಪೂರ್ವಕಂ ಸರ್ವಭಾದಾ ಪರಿಹಾರವಾಗಿ ಮಾಡಿಬಿಟ್ಟರು.**[4]** ಇವನಿಗೆ ಜಗದೇಕ ದಾನಿ ಎಂಬ ಬಿರುದು ಇದ್ದುದು ಕಂಡು ಬರುತ್ತದೆ. ಹಾಗೆಯೇ ಹೊಂಬುಜದ ಇನ್ನೊಂದು ಶಾಸನದಲ್ಲಿ ಅವನಿಗೆ ರಾಯ ಝುಳಪ್ಪ ಎಂಬ ಬಿರುದು ಕಂಡು ಬಂದಿದೆ. ಇದು ಚಾಳುಕ್ಯ ಚಕ್ರವರ್ತಿ ವಿಕ್ರಮಾಂಕನಿಗಿದ್ದ ಬಿರುದು.**[5]**

ವಿಕ್ರಮಶಾನ್ತರ : (೧೧೪೭-೫೬) ತ್ರಿಭುವನಮಲ್ಲಶಾನ್ತರ ಹಾಗೂ ಚಟ್ಟಲದೇವಿಯ ಮಗನೇ ಈ ನಾಲ್ಕನೇ ಶಾನ್ತರ. ಇವನು ಸಹ ಸಾಂತಳಿಗೆ ಸಾಯಿರ ನಾಡನ್ನು ಏಕಸ್ವಾಮ್ಯವನ್ನಾಗಿ ಮಾಡಿ ಆಳ್ವಿಕೆ ಮಾಡಿದಂತೆ ಶಾಸನಗಳಿಂದ ತಿಳಿದುಬರುತ್ತದೆ. ಇವನ ಅಕ್ಕನಾದ ಪಂಪಾದೇವಿಯು ಮಹಾ ಜಿನಭಕ್ತೆ ಯಾಗಿದ್ದು ಅವಳು ನೂತನ ಅತ್ತಿಮಬ್ಬೆ ಎಂದು ಕರೆಯಲ್ಪಟ್ಟಿದ್ದಾಳೆ. ವಿಕ್ರಮ ಸಾನ್ತರ ಪಂಪಾದೇವಿ ಹಾಗೂ ಅವಳ ಮಗಳಾದ ಬಾಚಲದೇವಿ ಸೇರಿ ಪಂಚ ಬಸದಿಗೆ ಬಡಗಣ ಪಟ್ಟಸಾಲೆಯನ್ನು ಮಾಡಿಸಿ ಅದರ ಪ್ರತಿಷ್ಠಾಪನೆಯನ್ನು ಮಾಡಿದರೆಂದು ತಿಳಿದು ಬರುತ್ತದೆ.

ಈ ವಿಕ್ರಮ ಶಾನ್ತರಿಗೆ ಮೂರು ಜನ ಮಕ್ಕಳು. ಅ) ತ್ರಿಭುವನಮಲ್ಲಸಾನ್ತರ ಅಥವಾ ವೀರ ಸಾನ್ತರ ಅಥವಾ ರಾಯತೈಲಪ. ಆ) ಗೋವಿಂದ ಅಥವಾ ಮೂರನೇಯ ರಾಯಸಾನ್ತರ, ಇ) ಬೊಪ್ಪುಗ.

ಎ.ಕ. ೮ನೇ ಸಂಪುಟ (ಸಾಗರ)ದ ೮ನೇ ಶಾಸನದ ಪ್ರಕಾರ ತ್ರಿಭುವನಮಲ್ಲ ಶಾನ್ತರದೇವ ಹಾಗೂ ಮೂರನೇ ರಾಯಶಾನ್ತರ ಇಬ್ಬರನ್ನು ಜಂಟಿಯಾಗಿಸಿ ಒಂದೇ ಪ್ರಶಸ್ತಿ ವಾಚನದಲ್ಲಿ ಸೇರಿಸಿದ್ದನ್ನು ನೋಡಿದರೆ (ಸಾಲು ೭-೧೨) ಇವರಿಬ್ಬರೂ ಮಹಾಮಂಡಳೇಶ್ವರರಾಗಿ ಒಟ್ಟಾಗಿ ಆಳ್ವಿಕೆ ಮಾಡಿದಂತೆ ಕಂಡುಬರುತ್ತದೆ.

ಇಮ್ಮಡಿ ತ್ರಿಭುವನಮಲ್ಲ ವೀರ ಶಾನ್ತರದೇವ : (ಸು.ಕ್ರಿ.ಶ. ೧೧೫೭-೧೧೯೪) ಇವನನ್ನು ಸಹ ಶಾಸನಗಳು ಮಹಾಮಂಡಳೇಶ್ವರ, ಉತ್ತರ ಮಧುರಾಧೀಶ್ವರ ಶಾನ್ತರಾದಿತ್ಯ ಎಂದು ಕರೆದಿವೆ. ಅವನ ಶಾಸನಗಳಿಂದ ನಮಗೆ ತಿಳಿದು ಬರುವ ಪ್ರಮುಖ ಅಂಶವೇನೆಂದರೆ ಅವನ ಕಾಲದಲ್ಲಿ ಹೊಸಗುಂದದ ಬೀರರಸನು ಒಬ್ಬ ಪ್ರಮುಖ ಸಾಮಂತನಾಗಿದ್ದನು.

ಅಂತೆಯೇ ಸಾಗರದ ಶಾಸನ ಸಂಖ್ಯೆ (ಎ.ಕ.೮) ೬೭ರಲ್ಲಿ ಈ ವೀರಶಾನ್ತರನಿಗೂ ಹಾಗೂ ಅವನ ಅಧೀನದಲ್ಲಿದ್ದ ಹೊಸಗುಂದದ ಬೀರರಸನಿಗೂ ನಡೆದ ಯುದ್ಧದ ಘಟನೆಯೊಂದು ತಿಳಿದುಬರುತ್ತದೆ. ಈ ಯುದ್ಧದಲ್ಲಿ ವೀರಶಾಂತರ ದೇವನಿಗೆ ಸಹಾಯಕರಾದವರು ಹಿರಿಯ ದಂಡನಾಯಕ ಬನವಾಸಿ ಪಿನ್ನಿಚ್ಚಾಸಿರದ ಅರಳಯ್ಯ ಹಾಗೂ ಪದ್ದಯ್ಯ, ಹೊಂಬುಜದ ಸಿಂಗಿದೇವ ಮುಂತಾದವರು. ಆದರೆ ಶಾಸನದಲ್ಲಿ ತಿಳಿದು ಬರುವ ಇನ್ನೊಂದು ಪ್ರಮುಖ ಅಂಶವೇನೆಂದರೆ ಕಳಚೂರಿಯ ರಾಜನಾದ ಬಿಜ್ಜಳದೇವನು ಕಲ್ಯಾಣಿಯನ್ನು ಆಳುತ್ತಿರಬೇಕಾದರೆ ಎಂದಿದೆ. ಆದರೆ ಶಾಸನದಲ್ಲಿ ಈ ಯುದ್ಧವು ನಡೆದ ಕಾಲವನ್ನು ತಿಳಿಸಿಲ್ಲವಾದ್ದರಿಂದ ಈ ಘಟನೆಯ ಕಾಲವನ್ನು ಅರ್ಥೈಸಲು ಕಷ್ಟಸಾಧ್ಯವಾಗಿದೆ.**[6]**

ಈ ವೀರಶಾಂತರನು ಮುಂದೆ ಉದ್ದ್ರೆಯ ಜಂಬೂರು ಠಾಣೆಯನ್ನು ಮುತ್ತಿ ಹೋರಾಡಿದಾಗ ಅವನ ಕಡೆಯವನಾದ ಅನ್ನದಾನಿ ಬೂವಣನು ಹೋರಾಡುತ್ತ ಮರಣ ಹೊಂದಿದ ವಿಷಯವನ್ನು ಶಾಸನಗಳು ತಿಳಿಸುತ್ತವೆ.

ಅಂತೆಯೇ ಶಾಸನ ನಂ.೬೬ ಸಾಗರ ತಾಲ್ಲೂಕಿನ ಶಾಸನದಲ್ಲಿ (ಎ.ಕ.೮) ಈ ವೀರ ಶಾಸ್ತರನು ಸಾಂತಳಿಗೆ ಸಾಯಿರವನ್ನು ಆಳುತ್ತಿದ್ದಾಗ. ಅವನ ಅಧೀನನಾದ ಬೀರರಸನ ಅಳಿಯನಾದ ತೈಲರಸನು ಹರತಾಳು-೧೨, ಕಾದವಳಿಗೆ-೧೨, ಕಟ್ಟಗೆಹಳ್ಳಿ, ನಾಡವಳ್ಳಿ ಮತ್ತು ನೆಲ್ಲವಾಡಿ ಇವನ್ನು ಆಳುತ್ತಿದ್ದಾಗ ನಡೆದ ಇನ್ನೊಂದು ಪ್ರಮುಖ ಘಟನೆಯ ಬಗ್ಗೆ ಬೆಳಕನ್ನು ಬೀರುತ್ತದೆ. ಈ ಶಾಸನದಲ್ಲಿ ಬೆಳೆಗೌಡ ಎಂಬ ವೀರನು ತನ್ನಹಿರಿಯ ಹರಕಲು ಹಳ್ಳಿಯ ದನಗಳನ್ನು ಶತ್ರುಗಳಿಂದ ರಕ್ಷಿಸುತ್ತಾ ಪ್ರಾಣವನ್ನು ನೀಗಿದ ವಿಷಯವನ್ನು ಇದು ತಿಳಿಸುತ್ತದೆ. ವೀರ ಶಾನ್ತರ ದೇವನ ಆಳ್ವಿಕೆಯನ್ನು ತಿಳಿಸುವ ಕಟ್ಟಕಡೆಯ ಶಾಸನವು ಇದಾಗಿದೆ.**[7]**

ಒಟ್ಟಿನಲ್ಲಿ ೧೨ನೇ ಶತಮಾನದ ಕೊನೆಯ ಭಾಗದಲ್ಲಿ ಹುಂಚದ ಸಾಂತರರ ಆಳ್ವಿಕೆಯು ಕುಸಿಯತೊಡಗಿತು. ಸಾಂತರ ರಾಜರು ದುರ್ಬಲರಾದ ಹಾಗೇ ಅವರ ಅಧಿಕಾರದಲ್ಲಿದ್ದ ಅನೇಕ ಪ್ರದೇಶಗಳನ್ನು ಬೇರೆ ಬೇರೆ ಸಾಮಂತರಾಜರು ವಶಮಾಡಿಕೊಳ್ಳುವ ಯತ್ನ ಮಾಡತೊಡಗಿದರು.**[8]** ಇದನ್ನು ತಡೆಯುವ ಯತ್ನವನ್ನು ಸಾಂತರರು ಮಾಡಿದರಾದರೂ ತಮ್ಮ ಪ್ರದೇಶದ ಗಡಿಗಳನ್ನು ರಕ್ಷಿಸಿಕೊಳ್ಳಲು ಹೊಂಬುಜದ ಸಾಂತರರಿಗೆ ಸಾಧ್ಯವಾಗದೇ ಹೋಯಿತು. ಕೊನೆಯ ಹಂತದಲ್ಲಿ ಹೊಯ್ಸಳ ವಿಷ್ಣುವರ್ಧನನು ಸಾಂತರರ ಅರಸ ಜಗದೇವನ ಪಡೆಯನ್ನು ಹೊಡೆದೋಡಿಸಿ ಸಾಂತಳಿಗೆಯ ಪೂರ್ವದ ಕಡೆ ಅನೇಕ ಪ್ರಾಂತ್ಯಗಳನ್ನು ತನ್ನ ರಾಜ್ಯಕ್ಕೆ ಸೇರಿಸಿ ಕೊಂಡನು.**[9]**

ಹಾನುಗಲ್ಲಿನ ಕದಂಬರು ಸು. (ಕ್ರಿ.ಶ. ೧೧೨೦-೧೧೩೦ ರವರೆಗೆ) ಸಾಂತಳಿಗೆಯ ಕೆಲವು ಭಾಗಗಳನ್ನು ವಶಪಡಿಸಿಕೊಂಡಂತೆ ಕಂಡುಬರುತ್ತದೆ. ನಂತರ ೧೧೨೪-೬೫ ರ ಸುಮಾರಿಗೆ ಕಳಚೂರಿನ ಬಿಜ್ಜಳನ ಮಹಾಮಂಡಳೇಶ್ವರನಾದ ಬೆಳಗುತ್ತಿ ಕುಲದ ಈಶ್ವರದೇವ ಸಿಂಧನು ಬನವಾಸಿ ಹಾಗೂ ಸಾಂತಳಿಗೆಯ ಉತ್ತರಕ್ಕಿದ್ದ ಕೆಲವು ಭಾಗಗಳನ್ನು ಆಳುತ್ತಿದ್ದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಹೊಂಬುಜದ ಜಗದೇವರಸನಿಗೂ ಹಾಗೂ ಈಶ್ವರ ದೇವನಿಗೂ ಕದನವಾಗಿ ಜಗದೇವರಸನು ತನ್ನ ಸಾಂತಳಿಗೆ ನಾಡಿನ ಅನೇಕ ಭಾಗಗಳನ್ನು ಕಳೆದುಕೊಂಡನು. ಹೀಗೆ ಕದಂಬ ಹಾಗೂ ಸಿಂದರೂ ಸಾಂತರರಿಗೆ ವೈರಿಗಳಾದಾಗ ಕೊನಿಗೆ ಸಾಂತರರು ಹೊಯ್ಸಳ ರಾಜರಿಗೆ ಶರಣು ಹೋದಂತೆ ಕಂಡುಬರುತ್ತದೆ. ಹೀಗಾಗಿ ಸಾಂತರರು ನಂತರದಲ್ಲಿ ತಮ್ಮನ್ನು ತಾವು ಹೊಯ್ಸಳರ ಬಿರುದುಗಳಿಂದ ಗುರುತಿಸಿಕೊಂಡಿದ್ದಾರೆ. ಉದಾ: ಸಾಂತರರ ಜಗದೇವರಸನು ತನ್ನನ್ನು ಜಗದೇಕ ಹೊಯ್ಸಳ ಸಾಂತರ ಮಾರದೇವ ಎಂದು ಕರೆದುಕೊಂಡನು.

ಒಟ್ಟಿನಲ್ಲಿ ಸಾಂತರರು ತಮ್ಮ ಸ್ವಾಯತ್ತತೆಯನ್ನು ಉಳಿಸಿಕೊಳ್ಳುವಲ್ಲಿ ವಿಫಲರಾದುದರಿಂದ ಅವರಿಗೆ ಸಾಂತಳೀಗೆ ಸಾಯಿರದ ಮೇಲೆ ಪ್ರಭುತ್ವವನ್ನು ಸಂಪಾದಿಸಲು ಆಗದೇ ಹೋದಾಗ, ಅವರು ತಮ್ಮ ರಾಜಧಾನಿಯನ್ನು ಮಲೆನಾಡಿನ ಹೊಂಬುಜದಿಂದ ಘಟ್ಟದ ಕೆಳಗಿನ ಕಳಸಕ್ಕೆ ಬದಲಾಯಿಸಿದಂತೆ ಕಂಡುಬರುತ್ತದೆ.

ಸೇತುವಿನಿಂದ ಆಳ್ವಿಕೆ ಮಾಡಿದ ಸಾಂತರರು

ಸುಮಾರು ಹನ್ನೆರಡನೆ ಶತಮಾನದ ಉತ್ತರಾರ್ಧದಿಂದ ನಮಗೆ ಸಾಂತರರನ್ನು ಕುರಿತು ಹೆಚ್ಚಿನ ಮಾಹಿತಿ ದೊರೆಯುವುದು ಅವರ ಮೊದಲ ರಾಜಧಾನಿಯಾದ ಹೊಂಬುಜದಿಂದಲ್ಲ. ಯಾಕೆಂದರೆ ಮೇಲೆ ವಿವರಿಸಿದ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಸಾಂತರರು ತಮ್ಮ ನೆಲೆವೀಡನ್ನು ಹೋಂಬುಜದಿಂದ ಸೇತುವಿಗೆ, ನಂತರ ಕಳಸಕ್ಕೆ ಬದಲಾವಣೆ ಮಾಡಿದಂತೆ ಶಾಸನಗಳಿಂದ

ಕಂಡುಬರುತ್ತದೆ. ಹಾಗೆಯೇ ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ಅಂಶವೇನೆಂದರೆ ಸೇತುವಿನಲ್ಲಿ ಶಾಸನಗಳು ಜಿನಸ್ತುತಿಯನ್ನು ಹೊರತುಪಡಿಸಿ ಶಿವಸ್ತುತಿಯಿಂದ ಪ್ರಾರಂಭವಾಗುತ್ತವೆ. ಆದರೆ ತಮ್ಮ ವಂಶದ ಬಗ್ಗೆ ಗುರುತಿಸುತ್ತ ಈ ರಾಜರೂ ಸಹ ತಮ್ಮನ್ನು ತಾವೇ ಉಗ್ರವಂಶದವರೆಂದೂ ಪಟ್ಟಿ ಪೊಂಬುಚ್ಚದ ಪುರವರೇಶ್ವರರು ಅಂತಲೂ ಕರೆದುಕೊಂಡಿದ್ದಾರೆ.

ಸೇತುವಿನಿಂದ ಕಂಡುಬರುವ ಸಾಂತರರ ಹೊಸ ಪರಂಪರೆಯನ್ನು ಸೂಚಿಸುವ ಪ್ರಮುಖ ಶಾಸನ ಬಳ್ಳಿಗಾವೆಯ ಶಾಸನ (ಶಿಕಾರಿಪುರ /೧೦೩/(ಎ.ಕ.) ಕ್ರಿ.ಶ. ೧೧೮೯ ರ ಸುಮಾರಿಗೆ). ಈ ಶಾಸನದಲ್ಲಿ ನಮಗೆ ಕಂಡುಬರುವ ಪ್ರಮುಖ ಹೆಸರು ಅಮ್ಮಣ ಎಂದು. ಅವನ ಇನ್ನೊಂದು ಹೆಸರು ಸಿಂಗಿದೇವ ಎಂದು ತಿಳಿದುಬರುತ್ತದೆ. ಸಿಂಗಿದೇವನ ಮಗನಾದ ಜಗದೇವರಸನ ಉಲ್ಲೇಖವು ಈ ಶಾಸನದಿಂದ ತಿಳಿದುಬರುತ್ತದೆ.

ಅಂದರೆ ಹೊಂಬುಜದ ರಾಜನಾದ ವಿಕ್ರಮ ಶಾನ್ತರಿಗೆ ಇಬ್ಬರು ಪತ್ನಿಯರಿದ್ದು ಅವರಲ್ಲಿ ಮೊದಲನೆಯವರು ಚಟ್ಟಲದೇವಿ. ಅವಳಿಗೆ ಈಗಾಗಲೇ ಹಿಂದೆ ತಿಳಿಸಿದಂತೆ ಮೂರು ಜನ ಗಂಡು ಮಕ್ಕಳು. ಅವರಲ್ಲಿ ತ್ರಿಭುವನಮಲ್ಲವೀರಶಾನ್ತರದೇವನು ಸಾಂತರರ ಕೊನೆಯ ಪ್ರಮುಖ ರಾಜನಾಗಿದ್ದು ಅವನ ಆಳ್ವಿಕೆಯವರೆಗೂ ಹೊಂಬುಜವು ಅವರ ರಾಜಧಾನಿಯಾಗಿತ್ತು. ಈ ವಿಕ್ರಮ ಶಾನ್ತರನ ಇನ್ನೊಬ್ಬ ಪತ್ನಿಯಾದ ತುಳವಳದೇವಿಯಿಂದ ಜನಿಸಿದ ಮಗನೇ ಸಿಂಗಿನೃಪಾಳ (ಸಿಂಗಿದೇವ). ಅಂದರೆ ವಿಕ್ರಮ ಶಾನ್ತರನ ಮಕ್ಕಳ ಆಳ್ವಿಕೆಯ ಕಾಲದಲ್ಲಿ ಅವನ ಎರಡನೆಯ ಹೆಂಡತಿಯ ಮಗನಾದ ಸಿಂಗಿದೇವನಿಂದ ಸೇತುವಿನಲ್ಲಿ ಸಾಂತರರ ವಂಶ ಮುಂದುವರೆದಂತೆ ಕಂಡುಬರುತ್ತದೆ.

ಸೇತು ಎಂಬುದು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲ್ಲೂಕಿನ ಕರೂರು ಹಾಗೂ ಪಟಗುಪ್ಪೆ ಗ್ರಾಮಗಳ ನಡುವೆ ಇದ್ದ ಊರು. ಇದು ಶರಾವತಿ ನದಿಯ ದಡದ ಮೇಲಿದ್ದು ಇದು ಇಂದು ಲಿಂಗನಮಕ್ಕಿ ಜಲಾಶಯದ ಹಿನ್ನೀರಿನಲ್ಲಿ ಮುಳಗಡೆ ಆಗಿರುವ ಪ್ರದೇಶವಾಗಿದೆ. ಹಾಗಾಗಿ ಈ ಸೇತುವಿನಿಂದ ಆಳ್ವಿಕೆ ಮಾಡಿದ ಅರಸರನ್ನು ಹಾಗೂ ಅವರ ಸಾಧನೆಗಳನ್ನು ಅರಿಯಲು ನಮಗೆ ಯಾವುದೇ ಪ್ರಾಕ್ತಾನಾಧಾರಗಳು ದೊರೆಯುವುದಿಲ್ಲ.

ಮೇಲೆ ತಿಳಿಸಿದಂತೆ ಸಿಂಗಿದೇವನ ಮಗನಾದ ಜಗದೇವರಸನ ಬಗ್ಗೆ ಕೆಲವೊಂದು ಶಾಸನಗಳು ಮಾಹಿತಿಯನ್ನು ನೀಡುತ್ತವೆ. ಈ ಜಗದೇವರಸನು ಬರೀ ಸಾಂತಳಿಗೆ ಸಾಯಿರ ಮಾತ್ರವಲ್ಲ ಬನವಾಸಿ ಪನ್ನಿಛ್ಛಾಸಿರವನ್ನು ಆಳುತ್ತಿದ್ದನೆಂದು ತಿಳಿಯುತ್ತದೆ. ಅಂದರೆ ಕದಂಬ ಹಾಗೂ ಸಾಂತರರ ನಡುವೆ ಯುದ್ಧಗಳಿಂದ ಈ ಜಗದೇವರಸನು ಬನವಾಸಿಯ ಅನೇಕ ಪ್ರಾಂತ್ಯಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿರಬಹುದು. ಉದಾ: ಸು.ಕ್ರಿ.ಶ. ೧೧೬೩ರ ಶಾಸನವೊಂದರಲ್ಲಿ (ಎ.ಕ.ಲ ಸೊರಬ ೧೭೭), ಕದಂಬ ಕೀರ್ತಿವರ್ಮ ಜಗದೇಕ ಅರಸನ ಮೇಲೆ ಧಾಳಿ ಮಾಡಿ ಅಂಧಾಸುರ ಕೋಟೆಯನ್ನು ಮುತ್ತಿದ ವಿಷಯ ತಿಳಿಯುತ್ತದೆ. ಈ ಜಗದೇಕನ ನಂತರ ಉಲ್ಲೇಖ ಕಂಡುಬರುವುದು ಅವನ ತಮ್ಮನಾದ ಸಿಂಗಿದೇವ ಎಂಬುವನ ಬಗ್ಗೆ. ಆದರೆ ಈ ಸಿಂಗಿದೇವನು ಯಾರು ಎಂದು ಗುರುತಿಸುವುದು ಬಹಳ ಕಷ್ಟಕರವಾಗಿದೆ. ಯಾಕೆಂದರೆ ಬೇರೆ ಬೇರೆ ಕಾಲ ಘಟ್ಟಗಳಲ್ಲಿ ಸಿಂಗಿದೇವ ಎಂಬ ಹೆಸರಿನ ರಾಜರು ಉಲ್ಲೇಖಿತರಾಗಿದ್ದಾರೆ. ಆದರೆ ಶಿಕಾರಿಪುರ ಹಾಗೂ ಬಳ್ಳಿಗಾವೆಯ ಶಾಸನದಲ್ಲಿ ಬರುವ ಸಿಂಗಿದೇವನೇ ಜಗದೇವರಸನ ತಮ್ಮನಾಗಿರಬೇಕೆಂದು ಹಾಗೂ ಈ ಎರಡೂ ಶಾಸನಗಳಲ್ಲಿ ಅವನನ್ನು ಸಾಂತಳಿಗೆಯ ರಾಜ ಎಂದು ಕರೆದಿರುವುದರಿಂದ ಅವನ ಕಾಲವನ್ನು ಸುಮಾರು ಕ್ರಿ.ಶ. ೧೧೮೯-೯೦ ಎಂದು ಗುರುತಿಸಲಾಗಿದೆ.

ಒಟ್ಟಿನಲ್ಲಿ ತೈಲಪನಿಂದ ಪ್ರಾರಂಭವಾಗಿ, ಬೊಮ್ಮರಸನವರೆಗೂ ಕೆಲವೊಂದು ರಾಜರುಗಳ ಬಗ್ಗೆ ಮಾತ್ರ ನಮಗೆ ಮಾಹಿತಿ ದೊರೆಯುತ್ತದೆ. ಆ ನಂತರ ಸೇತುವಿನಿಂದ ಬೇರೆ ಯಾವುದೇ ಮಾಹಿತಿಗಳು ನಮಗೆ ಲಭ್ಯವಿಲ್ಲ.

ಸಾಂತಳಿಗೆ ಸಾಯಿರದ ಆಡಳಿತ ಪದ್ಧತಿ

ಸಾಂತರರು ತಮ್ಮ ಆಳ್ವಿಕೆಯ ಪೂರ್ವಕಾಲದಲ್ಲಿ ಪ್ರಮುಖ ಸಾಮ್ರಾಜ್ಯಗಳ ಅಧೀನದಲ್ಲಿ ಮಹಾಮಂಡಳೇಶ್ವರರಾಗಿ ಮಾತ್ರ ಆಳ್ವಿಕೆ ಮಾಡಿರುವುದು ಕಂಡುಬರುತ್ತದೆ. ಉದಾ: ಪ್ರಾರಂಭದಲ್ಲಿ ಇವರು ರಾಷ್ಟ್ರಕೂಟ ಮಾಂಡಲೀಕರಾಗಿದ್ದು ನಂತರದ ಕಾಲದಲ್ಲಿ ಅವರು ಕಲ್ಯಾಣಿ ಚಾಳುಕ್ಯರ ಮಹಾಮಂಡಳೇಶ್ವರರಾಗಿ ಸಾಂತಳಿಗೆ ಸಾಯಿರದ ಭಾಗವನ್ನು ಆಳಿರುವುದು ಶಾಸನಗಳಲ್ಲಿ ತಿಳಿದುಬರುವ ವಿಷಯವಾಗಿದೆ. ಇವರ ಆಡಳಿತ ಪದ್ಧತಿಯು ಪ್ರಾಯಶಃ ತಮ್ಮ ಸಾಮ್ರಾಟರ ಆಡಳಿತ ಪದ್ಧತಿಯ ಸ್ವರೂಪದ್ದೇ ಆಗಿರಬಹುದೆಂದು ಊಹಿಸಲು ಅವಕಾಶವಿದೆ. ಹಾಗೆಯೇ ಅವರ ಕಾಲದ ಶಾಸನಗಳು ಅವರ ಆಡಳಿತ ಪದ್ಧತಿಯನ್ನು ಕುರಿತು ಯಾವುದೇ ನೇರವಾದ ಬೆಳಕನ್ನು ಬೀರಿಲ್ಲದಿರುವ ಕಾರಣ ಅವರ ಶಾಸನಗಳಲ್ಲಿ ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಅವರ ಆಡಳಿತ ಪದ್ಧತಿ ಇದ್ದಿರಬಹುದೆಂದು ತಿಳಿಯಲಾಗಿದೆ.

ಸಾಂತಳಿಗೆ ಸಾಯಿರವು ಒಂದು ಸಾವಿರ ಹಳ್ಳಿಗಳುಳ್ಳ ಆಡಳಿತ ಘಟಕವಾಗಿದ್ದು ಸುಮಾರು ೮ ರಿಂದ ೧೨ನೇ ಶತಮಾನದವರೆಗೂ ಸಾಂತರರ ಆಳ್ವಿಕೆಗೊಳಪಟ್ಟ ಪ್ರದೇಶವಾಗಿತ್ತು. ಈ ಸಾಂತಳಿಗೆ ಸಾಯಿರಕ್ಕೆ ಹೊಂಬುಜವು ರಾಜಧಾನಿಯಾಗಿತ್ತು. ಇಲ್ಲಿಂದಲೇ ಈ ಸಾಂತರ ರಾಜರು ಅದರ ರಾಜ್ಯದ ಆಡಳಿತವನ್ನು ನಿರ್ವಹಿಸುತ್ತಿದ್ದರು. ಈ ಸಾಂತಳಿಗೆ ಪ್ರದೇಶವನ್ನು ತಮ್ಮ ಸೀಮಿತ ಭೌಗೋಳಿಕ ವ್ಯಾಪ್ತಿಯಲ್ಲಿ ಅನೇಕ ನಾಡುಗಳನ್ನಾಗಿ ಆಡಳಿತ ದೃಷ್ಟಿಯಿಂದ ವಿಂಗಡಿಸಲಾಗಿತ್ತು. ಉದಾ: ರಾವನದೊಳಗಣ ನಾಡು, ಹೊಂಬುಜ ನಾಡು, ಕಲ್ಲೂರು ನಾಡು, ಕುಕ್ಕಸ ನಾಡು, ಬಲಕ ನಾಡು, ಎಡೆನಾಡು, ಜಂಬೂರು, ಜಿಡವಳ್ಳಿ ಮುಂತಾದವು. ಈ ಆಡಳಿತಕ್ಕೆ ನಾಗವುಂಡರನ್ನು ನೇಮಕ ಮಾಡಿರುವಂತೆ ತಿಳಿದು ಬರುತ್ತದೆ.

ನಾಡಿನ ನಂತರದಲ್ಲಿ ಬರುವ ಘಟಕಗಳನ್ನು ಊರು ಎಂದು ಕರೆಯುತ್ತಿದ್ದರು. ಈ ಪ್ರದೇಶದ ಸಾಮಾನ್ಯ ಆಡಳಿತವನ್ನು ಊರು ಗೌಡ ಅಥವಾ ಪೆರ್ಗಡೆಗಳು ನೋಡಿಕೊಳ್ಳುತ್ತಿದ್ದರು.

ಗ್ರಾಮ ಅಥವಾ ಹಳ್ಳಿಗಳು ಅವರ ಆಡಳಿತ ವ್ಯವಸ್ಥೆಯ ಅತ್ಯಂತ ಸಣ್ಣ ಘಟಕಗಳಾಗಿದ್ದವು. ಹಳ್ಳಿಯ ಆಡಳಿತವು ಹಳ್ಳಿಯ ಮಹಾಜನರು ಅಥವಾ ಗಾವುಂಡರ ಅಧೀನದಲ್ಲಿ ಇರುತ್ತಿತ್ತು.

ಒಟ್ಟಿನಲ್ಲಿ ಸಾಂತರರ ಕಾಲದ ಶಾಸನಗಳನ್ನು ಅಭ್ಯಸಿಸಿದಾಗ ಅನೇಕ ಅಧಿಕಾರಿ ವರ್ಗದವರ ಉಲ್ಲೇಖಗಳು ಕಂಡುಬರುತ್ತವೆ. ಅವು ಯಾವುವೆಂದರೆ ಸಂಧಿ ವಿಗ್ರಹಿ, ಸೇನಭೋವ, ದಂಡಾಧಿಪತಿ, ಸಚಿವಾಧಿಕಾರಿ, ಪಟ್ಟಸಾಹಣಿ, ಪೆರ್ಗಡೆ ಮುಂತಾದವು. ಅಂತೆಯೇ ಆಡಳಿತದ ಹಾಗೂ ಭೌಗೋಳಿಕ ನೆಲೆಗಳನ್ನು ಸುಭದ್ರವಾಗಿರಿಸಲು, ಸೈನ್ಯವು ಅತ್ಯಗತ್ಯವಾಗಿದ್ದು ಸಾಂತರರು ಸಹ ಕಾಲಾಳು, ಕುದುರೆ, ಆನೆಗಳಿಂದ ಕೂಡಿದ ಸೈನ್ಯವನ್ನು ಹೊಂದಿದ್ದರು.

ಆರ್ಥಿಕ ಪರಿಸ್ಥಿತಿ : ವ್ಯವಸಾಯ ಹಾಗೂ ವಾಣಿಜ್ಯ

ಸಾಂತರರು ಆಳ್ವಿಕೆ ಮಾಡಿದ ಸಾಂತಳಿಗೆ ಸಾಯಿರವು ಅತ್ಯಂತ ದಟ್ಟವಾದ ಮಲೆನಾಡು ಅರಣ್ಯ ಪ್ರದೇಶದ ಭಾಗವಾಗಿತ್ತು. ಈ ಪ್ರದೇಶದ ನೆಲ, ಜಲ, ಹಾಗೂ ಪರಿಸರದ ಮೇಲೆ ಬೆಳಕು ಬೀರುವಂತಹ ಒಂದು ಶಾಸನವು ದೊರೆತಿದೆ. ಇದು ಸಾಂತರರ ಕಾಲಕ್ಕೆ ಅಥವಾ ಅವರ

ಆಳ್ವಿಕೆಯ ಕಾಲದಲ್ಲಿ ಹೊರಡಿಸಿದ ಶಾಸನವಲ್ಲ. ಇದು ಸಾಗರ ೧೫೫ನೇ ಶಾಸನ. ಇದರ ಕಾಲ ಸುಮಾರು ೧೧೫೫. ಹಾಗೆಯೇ ಸಾಗರ ೧೮೯ (ಇವರೆಡು ಎ.ಕ. ೮ ರಲ್ಲಿವೆ).

ಬಿಜ್ಜರಸ ಮಹಾಮಂಡಳೇಶ್ವರನ ತಮ್ಮನಾದ ಮಹಾಮಂಡಳೇಶ್ವರ ಗೋನರಸನು ಸಾಂತಳಿಗೆ ನಾಡನ್ನು ಅಂಧಾಸುರ ಪನ್ನೆರಡು ಕೋಟೆಯ ಬೀಡಿನಿಂದ ಆಳುತ್ತಿದ್ದ ಸಂದರ್ಭದಲ್ಲಿ ಈ ಶಾಸನಗಳು ರಚಿತವಾಗಿವೆ.

೧೧೫೫ರ ಶಾಸನದ ಮಧ್ಯಭಾಗದಲ್ಲಿ ಬರುವ ವಾಕ್ಯಗಳ ಸಾರಾಂಶ ಈ ರೀತಿಯಾಗಿದೆ. ಜಗತ್ತು ಎಂಬ ಹೆಂಗಸಿನ ನಗುಮುಖವೆಂಬ ಹಾಗೇ ಸಾಂತಳಿಗೆ ಸಾಸಿರ ನಾಡಿತ್ತು. ಕಿತ್ತಳೆ, ಬಾಳೆ, ತೆಂಗು ಫಲಗಳಿಂದ ಕೂಡಿದ ಈ ನಾಡನ್ನು (ಗೋನರಸ) ನೃಪನು ಪಡೆದನು. ಈ ನಾಡಿನ ಬೆಳೆಯನ್ನು ಹೇಳುವುದಾದಲ್ಲಿ ಕಬ್ಬು ಭತ್ತ, ವೀಳೆಯ, ಅಡಿಕೆ, ತೆಂಗು, ಮಾವು, ಮೆಣಸು, ಇವು ಮುಖ್ಯ ದೊಡ್ಡ ಬೆಳೆಗಳು. ಇದಲ್ಲದೆ ಕಾಡಿನಲ್ಲಿ ಕೂಡಿರುವ ಆನೆಗಳುಂಟು. ಅರಿಶಿನ, ಏಲಕ್ಕಿ, ಮುಡಿವಾಳ, ಲಾಮಂಚಾದಿ ಸುಗಂಧ ಬೀರುವ ಬೇರುಗಳು ಇಲ್ಲಿ ಬೆಳೆಯುತ್ತಿದ್ದು, ಈ ಪ್ರದೇಶದಲ್ಲಿ ಬರ ಎಂಬುದು ಸ್ವಲ್ಪವೂ ಇರಲಿಲ್ಲ. ಈ ನಾಡಿನಲ್ಲಿ ಮಳೆಗಾಲದಲ್ಲಿಯಲ್ಲದೇ ಉಳಿದ ಕಾಲದಲ್ಲಿ ಕೂಡ ಬೆಟ್ಟದ ಝರಿ ನೀರುಣಿಸುತ್ತದೆ ಎಂದ ಮೇಲೆ ಸಾಂತಳಿಗೆ ನಾಡಿನಲ್ಲಿ ಕ್ಷಾಮವಿಲ್ಲ. ಹಾಗೆಯೇ ಈ ಪ್ರದೇಶದಲ್ಲಿ ಕೇದಗೆ, ಸಂಪಿಗೆ, ಸುರಹೊನ್ನೆ, ಪಾದರಿ, ಬಕುಳ, ಲವಂಗ, ಜಾಜಿ, ಈ ಮೊದಲಾದ ಅನೇಕ ಬಗೆಯ ಹೂಗಳ ತೋಟಗಳು ಕಂಡುಬರುತ್ತದೆ.

ಹಾಗೆಯೇ ಸಾಂತಳಿಗೆ ನಾಡಿನಲ್ಲಿ ತಾಮರೆ ಕೊಳಗಳು ಕಂಡುಬರುತ್ತಿದ್ದವು. ಇಲ್ಲಿ ಪ್ರಣವ ಜೀಜಾಕ್ಷರ ಓಂಕಾರ ಪಠಣ, ವೇದಶಾಸ್ತ್ರ ಅಧ್ಯಯನಗಳಲ್ಲಿ ತೊಡಗಿಸಿಕೊಂಡ ಅನೇಕ ಬ್ರಾಹ್ಮಣರು ಇದ್ದರು. ಹೀಗೆ ಮುಂದುವರೆದು ಅನೇಕ ವಿಷಯಗಳನ್ನು ಚರ್ಚಿಸುತ್ತಾ ಈ ಶಾಸನವು ಸಾಂತಳಿಗೆ ನಾಡನ್ನು ಸುಂದರವಾಗಿ ವರ್ಣಿಸುತ್ತದೆ.

ಇಲ್ಲಿ ಹಬ್ಬಿಕೊಂಡು ಉದ್ದಕ್ಕೆ ಚಾಚಿಕೊಂಡ ಕಂಪು ತುಂಬಿದ ಭತ್ತದ ತೆನೆಗಳಿಗೆ ಹೆಚ್ಚಾಗಿ ಮುತ್ತಿ ಮುದ್ದಿಸುವ ದುಂಬಿಗಳ ತಂಡ, ತೆನೆಗಳನ್ನು ತಿನ್ನುತ್ತ ಕೂಗುವ ಕೋಗಿಲೆಗಳ ಗುಂಪು, ಹೂಬಿಟ್ಟ ಬಳ್ಳಿಗಳು, ಬಗೆಬಗೆಯ ಕಾಡು ಇವೆಲ್ಲ ಸೇರಿದ ಈ ಸಾಂತರ ನಾಡಿನೊಳಗೆ ಅನೇಕ ಅಗ್ರಹಾರ, ದೇವಾಲಯ, ಜಿನಗೇಹಗಳನ್ನು ಗೋನರಸನು ಕಟ್ಟಿಸಿದನು. ಹಾಗೂ ಇವನು ಇಟ್ಟಿಗೆಗಳನ್ನು ಬಳಸಿ ಕೆರೆಗಳನ್ನು ಕಟ್ಟಿಸಿದನೆಂದು ಸಹ ಶಾಸನಗಳು ತಿಳಿಸುತ್ತವೆ.

ಸಾಂತರರ ಕಾಲದಲ್ಲಿ ವ್ಯವಸಾಯದ ಹಾಗೂ ಇತರೆ ಅನುಕೂಲಗಳಿಗಾಗಿ ಆಗಿನ ಕಾಲದ ರಾಜರು, ಮಂತ್ರಿಗಳು, ವರ್ತಕರೂ, ಹಳ್ಳಿಯ ಮಹಾಜನಗಳು ಮುಂತಾದವರು ಅನೇಕ ಕೆರೆ ಕಾಲುವೆಗಳನ್ನು ತೋಡಿಸುತ್ತಿದ್ದುದರ ಅನೇಕ ಉಲ್ಲೇಖಗಳು ಶಾಸನಗಳಿಂದ ತಿಳಿದುಬರುತ್ತವೆ. ಉದಾ: ಚಾಗಿ ಸಾಂತರನು ಚಾಗಿ ಕೆರೆಯನ್ನು ಕಟ್ಟಿಸಿದನೆಂದು ಉಲ್ಲೇಖವಿದೆ.**[10]**ಈ ಸಾಂತರಸನ ಮಹಾಮಾತ್ಯನಾದ ಪೆರ್ಗಡೆ ಹುಳಿಯಮ್ಮನು ತಾಳಗುಂದದಲ್ಲಿ ಕೆರೆಯನ್ನು ಕಟ್ಟಿಸಿದ ಉಲ್ಲೇಖವಿದೆ.**[11]**

ಸಾಂತರರ ಕಾಲದಲ್ಲಿ ಪಂಚಬಸದಿಯ ನಿರ್ಮಾಣವನ್ನು ಕೈಗೊಂಡ ಚಟ್ಟಲದೇವಿಯು ಅನೇಕ ಕೆರೆ ಕಾಲುವೆಗಳನ್ನು ತೋಡಿಸಿದುದರ ಉಲ್ಲೇಖ ನಗರ-೩೫ನೇ ಶಾಸನದಲ್ಲಿ ಕಂಡುಬರುತ್ತದೆ.**[12]**

ಹಾಗೆಯೇ ವರ್ತಕರಲ್ಲಿ ಪ್ರಮುಖನಾದ ಪಟ್ಟಣ ಸ್ವಾಮಿ ನೊಕ್ಕಯ್ಯ ಶೆಟ್ಟಿ ಅನೇಕ ಕೆರೆಗಳನ್ನು ಕಟ್ಟಿಸಿ ಹಾಗೂ ಕೆಲವೊಂದು ಹಳೆಯ ಕೆರೆಗಳನ್ನು ದುರಸ್ತಿ ಮಾಡಿಸಿದುದರ ಉಲ್ಲೇಖ ಅನೇಕ ಶಾಸನಗಳಿಂದ ತಿಳಿದು ಬರುತ್ತದೆ. ಉದಾ: ಶಕ ವರುಷ ೯೭೮ರಲ್ಲಿ ಅವನು ತನ್ನ ರಾಜನಿಗೆ ನೂರು ಗದ್ಯಾಣ ಹೊನ್ನನ್ನು ಪಾದಪೂಜೆಯಾಗಿ ಸಲ್ಲಿಸಿ ವುಗುರೆ ಎಂಬ ಕೆರೆಯನ್ನು ಬಿಡಿಸಿ

ಅದನ್ನು ಸಾವಳಂಗದ ಪಾಗಿಮಾದ ಕೆರೆಗೆ ಸೇರಿಸಿದ. ಹಾಗೆಯೇ ಇದೇ ಶಾಸನದಲ್ಲಿ ಶಾಂತಗೆರೆ, ಮೊಳಕೆರೆ, ಪಟ್ಟಣಸ್ವಾಮಿ ಕೆರೆಗಳನ್ನು ಕಟ್ಟಿಸಿದ ಉಲ್ಲೇಖವು ಕಂಡು ಬರುತ್ತದೆ.**[13]**

ಒಟ್ಟಿನಲ್ಲಿ ಇವರ ಆರ್ಥಿ ಕ ವ್ಯವಸ್ಥೆಯು ಪ್ರಮುಖವಾಗಿ ವ್ಯವಸಾಯೋತ್ಪನ್ನವನ್ನು ಆಧರಿಸಿತ್ತು. ಅರಣ್ಯ ಪ್ರದೇಶವನ್ನು ಕತ್ತರಿಸಿ ಹೊಸ ಜಾಗವನ್ನು ವ್ಯವಸಾಯ ಯೋಗ್ಯವನ್ನಾಗಿ ಪರಿವರ್ತಿಸುವುದು ಸುಲಭದ ಕೆಲಸವೇನಾಗಿರಲಿಲ್ಲ. ಆದರೂ ವ್ಯವಸಾಯಕ್ಕೆ ಹೆಚ್ಚಿನ ಗಮನವನ್ನು ನೀಡಲು ಹಾಗೂ ಪ್ರೋತ್ಸಾಹಿಸಲು ಹೊಸ ವ್ಯವಸಾಯ ಭೂಮಿಗಳ ಮೇಲೆ ಕೆಲವೊಂದು ಕಂದಾಯಗಳನ್ನು ಮನ್ನಾ ಮಾಡುತ್ತಿದ್ದುದನ್ನು ಶಾಸನಗಳು ಉಲ್ಲೇಖಿಸುತ್ತವೆ.

ಶಾಸನಗಳ ಆಧಾರದ ಮೇಲೆ ಭೂಮಿಯ ಅನೇಕ ವಿಧಗಳನ್ನು ತಿಳಿಯಲು ಸಹಾಯಕವಾಗಿದೆ. ಉದಾ: ಗದ್ದೆ, ಹೊಲ, ಬೆದ್ದಲು, ಕಾನು, ತೋಟ ಮುಂತಾದವು. ಅದರಲ್ಲೂ ಈ ಪ್ರದೇಶದಲ್ಲಿ ಭತ್ತ ಬೆಳೆಯುವ ಗದ್ದೆ, ಕಬ್ಬಿನತೋಟ, ಹೂವಿನ ತೋಟದ ಅನೇಕ ಉಲ್ಲೇಖಗಳು ಇವೆ.

ಆದರೆ ಭೂ ಮಾಪನದ ಬಗ್ಗೆ ಬೆಳಕನ್ನು ಚೆಲ್ಲುವಂತಹ ಯಾವುದೇ ನಿಖರವಾದ ವಿಷಯ ತಿಳಿದು ಬರುವುದಿಲ್ಲ. ಶಾಸನಗಳ ಆಧಾರದ ಮೇಲೆ ಭತ್ತವನ್ನು ಖಂಡುಗದಲ್ಲಿ ಅಳೆಯುತ್ತಿದ್ದರು ಎಂದು ತಿಳಿದು ಬರುತ್ತದೆ. ಅದರಂತೆ ಭೂಮಿಯನ್ನು ಕಂಬ, ಹಾಗೂ ಗಳೆಗಳೆಂಬ ಮಾಪನಗಳಿಂದ ಅಳೆದು ನಿಗಧಿಗೊಳಿಸುತ್ತಿದ್ದರು. ಮತ್ತರು, ಗಣಿಗನ ಮತ್ತರು ಮೊದಲಾದ ಹೊಲ ತೋಟಗಳ ವ್ಯಾಪ್ತಿಯನ್ನು ಸೂಚಿಸುವ ಪದಗಳ ಬಳಕೆಯೂ ಶಾಸನದಲ್ಲಿ ಇದೆ.

ಕಂದಾಯ ವ್ಯವಸ್ಥೆ

ಇವರ ಕಾಲದ ಕಂದಾಯ ವ್ಯವಸ್ಥೆಯನ್ನು ಅರಿಯಲು ನಾವು ಶಾಸನಗಳ ಮೊರೆ ಹೋಗಬೇಕಾಗಿದೆ. ಅಂತೆಯೇ ಅವರ ಶಾಸನಗಳಲ್ಲಿ ಕಂಡು ಬರುವ ಕೆಲವೊಂದು ತೆರಿಗೆಗಳ ಉಲ್ಲೇಖ ಈ ರೀತಿಯದಾಗಿದೆ. ದೇವಿದೆರೆ, ಅಡಿಗರ್ಚು, ಕಾಣಿಕೆ, ಸೇಸೆ, ಬೀಯ, ಬಿರ್ದು, ಕುಮಾರ ಗದ್ಯಾಣ, ಕಿರುದೆರೆ, ಕಿರುಕುಳಾಯ, ಸಾಮ್ಯ, ಸೆಲ್ಲೆ ಮೊದಲಾದವು.

ಈ ತೆರಿಗೆಗಳ ವಿವರಗಳು ನಮಗೆ ಅವರು ದೇವಲಾಯ ಅಥವಾ ಜಿನಾಲಯಗಳನ್ನು ಕಟ್ಟಿಸಿ ಅದಕ್ಕೆ ಮಾಡಿದ ಭೂದಾನಗಳಲ್ಲಿ ಅಥವಾ ನಾಡಿನ ರಕ್ಷಣೆಗಾಗಿ ಹೋರಾಡುತ್ತ ಮಡಿದ ವೀರರ ಕುಟುಂಬದವರಿಗಾಗಲೀ, ಅಥವಾ ಗೋಗ್ರಹಣವನ್ನು ತಪ್ಪಿಸುತ್ತ ಮಡಿದ ಶೂರರಿಗಾಗಿ ನೀಡಿದ ಭೂದಾನ ವಿವರಗಳಲ್ಲಿ ಸಿಗುತ್ತವೆ. ಈ ಮೇಲೆ ಹೇಳಿರುವ ಎಲ್ಲಾ ಅಥವಾ ಕೆಲವೊಂದು ತೆರಿಗೆಗಳನ್ನು ಮನ್ನಾ ಮಾಡಿರುವ ಉಲ್ಲೇಖಗಳು ಇಲ್ಲಿ ಕಂಡು ಬರುತ್ತದೆ.

ಉದಾಹರಣೆಗೆ ಪಂಚ ಬಸದಿಗೆ ಕೆಸರುಕಲ್ಲನ್ನು ಇಡಿಸಿದ ಚಟ್ಟಲದೇವಿ ಹಾಗೂ ಅವಳು ಸಾಕಿದ ನಾಲ್ವರು ರಾಜಕುಮಾರರು ಜೊತೆಗೂಡಿ ತಮ್ಮ ಗುರುಗಳಾದ ಕಮಳಭದ್ರ ದೇವರ ಕಾಲು ತೊಳೆದು ಮಾಡಿದ ದಾನದ ವಿವರ ಇಂತಿದೆ.

“ರಾವಣನಾಡೊಳಗಣ ಅಗ್ರಹಾರ, ಆನಂದೂರು, ಕಲ್ಲೂರು ನಾಡೊಳಗಣ ಆನೆಗೋಡು ಸಮೀಪದ ಮಡಂಬಹಳ್ಳಿಯು, ಪೊಂಬುಚ್ಚ ನಾಡೊಳಗಣ ಹಾಲಂದೂರು ಮುಂತಾದವನ್ನು ಬಸದಿಗಾಗಿ ದಾನ ಮಾಡಿ ಅದಕ್ಕೆ ದೇವಿದೆರೆ, ಅಡಿಗರ್ಚು ಕಾಣಿಕೆ, ಸೇಸೆ, ಬಿರ್ದು, ಬೀಯ ಮೊದಲಾಗೆ ಕುಮಾರ ಗದ್ಯಾಣ, ಕಿರುತೆರೆ ಕಿರುಕಳಾಯಂ ಸಾಮ್ಯಂ ಸೆಲ್ಗೆ ಮೊದಲಾದ ತೆರಿಗೆಗಳ ಸರ್ವಭಾದಾ ಪರಿಹಾರವನ್ನು ಮಾಡಿದರು.”**[14]**

ಆದರೆ ಇವರ ಕಾಲದ ವ್ಯಾಪಾರ ಹಾಗೂ ವಾಣಿಜ್ಯ ವ್ಯವಸ್ಥೆಯ ಬಗ್ಗೆ ಯಾವುದೇ ಮಾಹಿತಿಗಳು ಲಭ್ಯವಿಲ್ಲ. ಸಾಂತಳಿಗೆ ಸಾಯಿರನಾಡು ಅತ್ಯಂತ ಪ್ರಮುಖ ವ್ಯಾಪಾರ ಕೇಂದ್ರವಾಗಿರಬಹುದೆಂದು ಊಹಿಸಲು ಅಡ್ಡಿಯಿಲ್ಲ. ಸಾಂತರರ ರಾಜಧಾನಿಯು ದಟ್ಟ ಮಲೆನಾಡಿನ ಪ್ರದೇಶದಲ್ಲಿ ಇದ್ದು, ಅದು ತನ್ನ ಸುತ್ತಮುತ್ತಲಿನ ಅನೇಕ ರಾಜಮನೆತನಗಳೊಂದಿಗೆ ಹಾಗೂ ಕರಾವಳಿಯ ರಾಜರುಗಳೊಂದಿಗೆ ವ್ಯಾಪಾರ ಮಾಡುತ್ತಿದ್ದಿರಬಹುದು. ಅಂತೆಯೇ ಅವರ ಶಾಸನಗಳಲ್ಲಿ ಕಂಡು ಬರುವ ಪ್ರಮುಖ ವರ್ತಕರ ಹಾಗೂ ಅವರು ಕಟ್ಟಿಸಿದ ಅನೇಕ ದೇವಾಲಯ, ಜಿನಗೇಹ, ಕೆರೆಗಳ ಉಲ್ಲೇಖವನ್ನು ಗಮನಿಸಿದಾಗ ಅವರುಗಳು ಶ್ರೀಮಂತ ವರ್ತಕರಾಗಿದ್ದರೆಂದು ತಿಳಿದು ಬರುತ್ತದೆ. ಉದಾ: ಪಟ್ಟಣ ಸ್ವಾಮಿ ನೊಕ್ಕಯ್ಯಶೆಟ್ಟಿ ಅವನ ಮಗನಾದ ಮಲ್ಲಿನಾಥ, ನಾಗಿಶೆಟ್ಟಿ, ಪಟ್ಟಣ ಸ್ವಾಮಿ ಹನುಮಂತಶೆಟ್ಟಿ ಮುಂತಾದವರು. ಆದರೆ ಸಾಂತರರ ಕಾಲದ ವ್ಯಾಪಾರ ಮಾರ್ಗಗಳನ್ನು ಕುರಿತು ಇನ್ನೂ ಹೆಚ್ಚಿನ ಸಂಶೋಧನೆಯನ್ನು ಮಾಡಬೇಕಾಗಿದೆ. ವ್ಯಾಪಾರಿ ಸರಕುಗಳಾಗಿ ಸಾಮಾನ್ಯವಾಗಿ ಅಲ್ಲಿ ಬೆಳೆಯುವ ಭತ್ತ, ಕಬ್ಬು, ಮೆಣಸು ಹಾಗೂ ಅರಣ್ಯದ ಉತ್ಪನ್ನಗಳು ಈ ಒಳನಾಡಿನಿಂದ ಹೊರನಾಡಿಗೆ ಹೋಗುತ್ತಿದ್ದವೆಂದು ಊಹಿಸಬೇಕಾಗಿದೆ. ಆದರೆ ಈಗಾಗಲೇ ತಿಳಿಸಿದಂತೆ ಈ ವಿಷಯಗಳ ಬಗ್ಗೆ ಯಾವುದೇ ಶಾಸನಗಳು ಹೆಚ್ಚಿನ ಬೆಳಕನ್ನು ಚೆಲ್ಲುವುದಿಲ್ಲ. ಅಂತೆಯೇ ಅವರ ಕಾಲದಲ್ಲಿ ಅವರದೇ ಆದ ಯಾವುದೇ ವಿಶೇಷ ನಾಣ್ಯ ಚಲಾವಣೆ ಕಂಡು ಬರುವುದಿಲ್ಲಿ. ಆದರೆ ಶಾಸನದಲ್ಲಿ ಪದೇ ಪದೇ ಗದ್ಯಾಣ, ಹೊನ್ನು ಎಂಬ ಉಲ್ಲೇಖಗಳು ಬರುತ್ತವೆ.

ಧರ್ಮ

ಸಾಂತರರು ತಮ್ಮ ಆಳ್ವಿಕೆಯ ಕಾಲದಲ್ಲಿ ಸಕಲ ಧರ್ಮಗಳಿಗೂ ಆಶ್ರಯದಾತರಾಗಿದ್ದುದು ಅವರ ಶಾಸನಗಳ ಅಧ್ಯಯನದಿಂದ ತಿಳಿದುಬರುತ್ತದೆ. ಅಂತೆಯೇ ತಮ್ಮ ಆಳ್ವಿಕೆಯ ಕಾಲದಲ್ಲಿ ರಾಜರು ಅನೇಕ ದೇವಾಲಯಗಳನ್ನು, ಬಸದಿಗಳನ್ನು ಕಟ್ಟಿಸಿರುವುದು ಹಾಗೂ ಈಗಾಗಲೇ ಇದ್ದ ದೇವಾಲಯಗಳ ಜೀರ್ಣೋದ್ಧಾರ ಮಾಡಿದುದರ ಉಲ್ಲೇಖಗಳು ನಮಗೆ ಸಿಗುತ್ತವೆ.

ಸಾಂತರರು ಮೂಲತಃ ಜೈನ ಮತಾವಲಂಬಿಗಳಾಗಿದ್ದರು. ನಂತರದಲ್ಲಿ ಅಂದರೆ ಸುಮಾರು ೧೨ನೇ ಶತಮಾನದಲ್ಲಿ ಶೈವ ಧರ್ಮಕ್ಕೆ ಮತಾಂತರ ಹೊಂದಿದ್ದರಂದು ಕೆಲವೊಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದರೂ ಸಹ ಇದರ ಬಗ್ಗೆ ಇನ್ನೂ ಚರ್ಚೆಗಳಿಗೆ ಅವಕಾಶಗಳಿವೆ.

ಸಾಂತರರು ಜೈನಧರ್ಮದ ಅಭ್ಯುದಯಕ್ಕೆ ಈ ಪ್ರಾಂತದಲ್ಲಿ ವಿಶೇಷವಾಗಿ ಶ್ರಮಿಸಿದ್ದು ಕಂಡುಬರುತ್ತದೆ. ಅವರ ಹೆಚ್ಚಿನ ಶಾಸನಗಳು 'ಶ್ರೀ ಮತ್ಪರಮ ಗಂಭೀರ ಸ್ಯಾದ್ವಾದಾಮೋಘ ಲಾಂಛನಂ ಜೀಯಾ ತ್ರೈಳೋಕ್ಯನಾಥಸ್ಯ ಶಾಸನಂ ಜಿನಶಾಸನಂ' ಎಂಬ ಜಿನಸ್ತುತಿಯ ಸಂಸ್ಕೃತ ಶ್ಲೋಕದಿಂದ ಆರಂಭವಾಗುವವು.

[1]ಅದೆ ನಗರ ೩೬

[2]ಅದೇ

[3]ಅದೇ ನಗರ ೩೫

[4]ಅದೇ ತೀರ್ಥಹಳ್ಳಿ ೧೯೨

[5]ನಾಗರಾಜಯ್ಯ ಹಂಪ ಸಾಂತರರು ಒಂದು ಅಧ್ಯಯನ, ಸಿದ್ಧಾಂತ ಕೀರ್ತಿ ಗ್ರಂಥ ಮಾಲೆ, ಹುಂಚಮಠ ಪು. ೭೭

[6]ಎ.ಕ. ಸಂ.೮ ಪು ೪೫

[7]ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್ ೧೯೩೦ ಶಾಸನ ಸಂಖ್ಯೆ ನಗರ ೬೩, ಪು. ೨೨೩

[8]ದೇಸಾಯಿ ದಿನಕರ ದಿ ಮಹಾಮಂಡಲೇಶ್ವರಾಸ್ ಆಫ್ ದಿ ಚಾಲುಕ್ಯಾಸ್ ಆಫ್ ಕಲ್ಯಾಣಿ ೧೯೫೧

[9]ಎ.ಕ. ಸಂ. ೮, ನಗರ ೬೬ ಕ್ರಿ.ಶ. ೧೧೨೫.

[10]ಅದೇ ಸಂ. ೮, ನಗರ ೩೫, ಪು ೨೪೯

[11]ಅದೆ ಸಂ. ೭ ಶಿಕಾರಿಪುರ ೧೯೪

[12]ಅದೇ ಸಂ. ೮ ನಗರ ೩೫

[13]ಅದೇ ಪು. ೩೭೮

[14]ಅದೇ ನಮರ ೩೫, ೩೬

ಮಲೆಕರ್ನಾಟಕದ ಅರಸು ಮನೆತನಗಳು: ೩. ಹೊಂಬುಜದ ಸಾಂತರರು (೩)

ಸಾಂತರರ ಕಾಲದ ಜೈನ ಧರ್ಮ

ಸಾಂತರರು ಮೂಲತಃ ಜೈನ ಧರ್ಮಿಯರಾಗಿದ್ದು ತಮ್ಮನ್ನು ಪಾರ್ಶ್ವನಾಥ ತೀರ್ಥಂಕರನ ಉಗ್ರವಂಶದವರೆಂದು, ಉತ್ತರ ಮಥುರದಿಂದ ಬಂದವರೆಂದು, ಪದ್ಮಾವತೀಲಬ್ಧ ವರಪ್ರಸಾದರೆಂದು ಕರೆದುಕೊಂಡಿದ್ದಾರೆ.

ಇಂದಿಗೂ ಸಹ ಹುಂಚವು ಒಂದು ಜೈನ ಮಠವನ್ನು ಹೊಂದಿದೆ. ಇಲ್ಲಿ ಇಂದಿಗೂ ಪದ್ಮಾವತಿ ದೇವಿ ಪೂಜಿಸಲ್ಪಡುತ್ತಿದ್ದು ಅನೇಕ ಪಾರ್ಶ್ವನಾಥ ಬಸದಿಗಳು ಇಲ್ಲಿವೆ.

ಅವರ ಶಾಸನಗಳು ಜೈನ ಆಚಾರ್ಯ ಪರಂಪರೆಯ ಬಗ್ಗೆ ತಿಳಿಸುತ್ತಾ ಕುಂದಕುಂದಾನ್ವಯ ಮೂಲಗಣ, ನಂದಿಗಣ, ದೇಸಿಗಣ, ಪುಸ್ತಕ ಗಚ್ಛ ಮೊದಲಾದವುಗಳನ್ನು ಉಲ್ಲೇಖಿಸುತ್ತವೆ. ಕೆಲವೊಮ್ಮೆ ದ್ರಮಿಳ ಸಂಘದ ಉಲ್ಲೇಖವು ಬರುತ್ತದೆ. ಅಂತೆಯೇ ಸಾಂತರ ರಾಜ ರಾಣಿಯರು, ಅವರ ಮಕ್ಕಳೂ ಕೆಲವೊಂದು ಅಧಿಕಾರಿ ವರ್ಗದವರೂ, ವರ್ತಕರು ಹಾಗೂ ಸಾಮಾನ್ಯ ಪ್ರಜೆಗಳು ಈ ಜೈನ ಧರ್ಮವನ್ನು ಪ್ರೋತ್ಸಾಹಿಸಿರುವುದು ಸಾಂತರರ ಶಾಸನಗಳ ಅಧ್ಯಯನದಿಂದ ತಿಳಿದು ಬರುತ್ತದೆ. ಅದರಲ್ಲೂ ಜೈನ ಧರ್ಮಕ್ಕೆ ರಾಜ ಪ್ರೋತ್ಸಾಹ ಬಹಳವಾಗಿ ದೊರಕಿರುವುದು ಎದ್ದು ಕಾಣುವ ಅಂಶವಾಗಿದೆ. ಉದಾಃ ತೊಲಾ ಪುರುಷ

ವಿಕ್ರಮಾದಿತ್ಯ ಸಾಂತರನು ಮೋನಿ ಭಟ್ಟಾರರ ಶಿಷ್ಯನಾಗಿ ಗುಡ್ಡದ ಮೇಲೆ ಬಾಹುಬಲಿಯ ಬಸದಿಯನ್ನು ಕಟ್ಟಿಸಿದುದರ ಉಲ್ಲೇಖ ಬರುತ್ತದೆ. ಹಾಗೆಯೇ ಈ ಬಸದಿಗಾಗಿ ಅವರು ಮಾಡಿದ ದಾನದ ವಿವರಗಳೂ ಇವೆ.**[1]**

ನಂತರ ಆಳ್ವಿಕೆ ಮಾಡಿದ ಭುಜಬಳ ಶಾನ್ತರನು ಜಿನಾಲಯವನ್ನು ಕ್ರಿ.ಶ. ೧೦೬೫ರಲ್ಲಿ ನಿರ್ಮಿಸಿ ತನ್ನ ರಾಜಗುರು ಕನಕನಂದಿ ದೇವರಿಗೆ ಭೂಮಿಯನ್ನು ಉಂಬಳಿಯಾಗಿ ಬಿಟ್ಟು ಕೊಡುವುದರೊಂದಿಗೆ ಅದನ್ನು ಒಪ್ಪಿಸಿದನು.**[2]**ವೀರ ಶಾನ್ತರನು ನೊಕ್ಕಿಯಬ್ಬೆ ಜಿನಗೇಹವನ್ನು ಮಾಡಿಸಿ ಅದಕ್ಕೆ ಕೆಲವೊಂದು ಭೂಮಿಗಳನ್ನು ತೆರಿಗೆ ರಹಿತವನ್ನಾಗಿ ದಾನ ಮಾಡಿದನು. ತ್ರಿಭುವನಮಲ್ಲ ಸಾಂತರನು ಆನಂದೂರಿನಲ್ಲಿ ಬಸದಿಯನ್ನು ನಿರ್ಮಿಸಿದ ಉಲ್ಲೇಖ ಬರುತ್ತದೆ.**[3]**ಒಟ್ಟಿನಲ್ಲಿ ಪುರಾಣ ಕಥೆಯಂತೇ ಜಿನದತ್ತನಿಂದ ರಾಜಧಾನಿಯಾಗಿ ಅಂಗೀಕರಿಸಲ್ಪಟ್ಟು ಹೊಂಬುಜದಲ್ಲಿ ಲೊಕ್ಕಯಬ್ಬೆಯು ನೆಲೆ ನಿಂತಿದ್ದಕ್ಕಾಗಿ ಜಿನದತ್ತನು ಲೊಕ್ಕಿಯಬ್ಬೆಗೆ ಅಲ್ಲಿ ಜಿನಗೇಹವನ್ನು ಕಟ್ಟಿಸಿದನೆಂದು ಅವರ ಶಾಸನಗಳಿಂದಲೂ ತಿಳಿದು ಬರುತ್ತದೆ. ಅಲ್ಲಿಂದ ಪ್ರಾರಂಭವಾಗುವ ಅವರ ಜೈನ ಧರ್ಮದ ಪರಿಪಾಲನೆ ಅವರ ಆಳ್ವಿಕೆಯ ಕಾಲದುದ್ದಕ್ಕೂ ಮುಂದುವರೆದುಕೊಂಡು ಹೋಗಿರುವುದು ಕಂಡು ಬರುತ್ತದೆ. ಚಟ್ಟಲದೇವಿ ತಾನು ಸಾಕಿದ ನಾಲ್ಕು ಜನ ರಾಜಕುಮಾರರೊಂದಿಗೆ ತಮ್ಮ ಹಿರಿಯರಿಗೆ ಪರೋಕ್ಷ ವಿನಯವನ್ನು ಮಾಡಲು ಪಂಚ ಬಸದಿಯನ್ನು ಕಟ್ಟಿಸಿ, ಆ ಬಸದಿಗಾಗಿ ಮಾಡಿದ ದಾನದ ವಿವರಗಳು ಪ್ರಮುಖವಾಗಿವೆ.

ನಂತರ ಇನ್ನೊಂದು ಶಾಸನದಲ್ಲಿ ತೊಲಾಪುರುಷ ವಿಕ್ರಮ ಶಾನ್ತರನ ಬಳೆಯಾಕೆ ಪಾಳಿಯಕ್ಕನು ಕಲ್ಲು ಬಸದಿಯನ್ನು ಹಾಗೂ ಇನ್ನೊಂದು ಬಸದಿಯನ್ನು ಕಟ್ಟಿಸಿದಾಗ ಆ ಬಸದಿಗಾಗಿ ರಾಜನು ಮಾಡಿದ ದಾನದ ವಿವರಗಳೂ ಶಾಸನಗಳಿಂದ ವಿದಿತವಾಗುತ್ತವೆ.**[4]**ಕ್ರಿ.ಶ. ೧೧೪೦ರಲ್ಲಿ ಇದ್ದ ತ್ರಿಭುವನಮಲ್ಲ ಸಾಂತರನ ಮಗಳಾದ ಪಂಪಾದೇವಿಯು ಎರಡನೇ ಅತ್ತಿಮಬ್ಬೆ ಎಂದೆನಿಸಿಕೊಂಡಿದ್ದಳು ಎಂದು ಶಾಸನಗಳು ತಿಳಿಸುತ್ತವೆ.**[5]**ಹಾಗೆಯೇ ಶಾಸನದಲ್ಲಿ ಉಲ್ಲೇಖಗೊಂಡಿರುವ ತೈಲಪನ ಪತ್ನಿ ಅಕ್ಕಾದೇವಿಯು ಅಂಧಾಸುರದಲ್ಲಿ ಒಂದು, ಸೇತುವಿನಲ್ಲಿ ಎರಡು ಬಸದಿಗಳನ್ನು ನಿರ್ಮಿಸಿ ಅಭಿನವ ಅತ್ತಿಮಬ್ಬೆ ಎಂದೆನಿಸಿಕೊಂಡಳೆಂದು ಶಾಸನಗಳು ತಿಳಿಸುತ್ತವೆ.**[6]**

ರಾಜವಂಶದವರಲ್ಲದೇ ಸಮಾಜದ ಇತರೆ ಕೆಲವು ವರ್ಗದ ಜನರೂ ಸಹ ಜೈನ ಮತಾವಲಂಬಿಗಳಾಗಿದ್ದು ಆ ಸಮಾಜದ ಜೈನಧರ್ಮದ ಬೆಳವಣಿಗೆಗೆ ಕಾರಣರಾಗಿದ್ದಾರೆ. ಉದಾ: ಅಮ್ಮಣ್ಣ ಶೆಟ್ಟಿಯ ಮಗನಾದ ಹೆಸರಾಂತ ಜೈನಾಚಾರ್ಯ ದಿವಾಕರ ನಂದಿ ಸಿದ್ಧಾಂತರ ಶಿಷ್ಯನಾದ ನೊಕ್ಕಯ್ಯ ಶೆಟ್ಟಿ, ಶಾಸನಗಳು ಇವನನ್ನು ಪಟ್ಟಣ ಸ್ವಾಮಿ ನೊಕ್ಕಯ್ಯಶೆಟ್ಟಿ ಎಂದೇ ಕರೆದಿವೆ. ಈ ನೊಕ್ಕಯ್ಯಸೆಟ್ಟಿಯು ಹೊಂಬುಜದಲ್ಲಿ ನಿರ್ಮಿಸಿದ ಪಟ್ಟಣಸ್ವಾಮಿ ಜಿನಾಲಯ, ಅನೇಕ ಕೆರೆಗಳ ನಿರ್ಮಾಣ ಹಾಗೂ ಅನೇಕ ಭೂದಾನಗಳ ವಿವರಗಳನ್ನು ಶಾಸನಗಳು ಒದಗಿಸುತ್ತವೆ.**[7]**

ಇದಲ್ಲದೆ ಇವರ ಕಾಲಕ್ಕೆ ಸಂಬಂಧಪಟ್ಟ ಅನೇಕ ನಿಷಿಧ ಕಲ್ಲುಗಳು ಈ ಪ್ರಾಂತ್ಯದಲ್ಲಿ ಲಭ್ಯವಿದ್ದು ಅವುಗಳು ಆ ಕಾಲದಲ್ಲಿ ಸಮಾಧಿ ಮರಣವನ್ನಪ್ಪಿದ ಜೈನಾಚಾರ್ಯರ ಅಥವಾ ಶ್ರಾವಿಕೆಯರ ವಿವರಗಳನ್ನು ನೀಡುತ್ತವೆ. ಈ ನಿಷಿಧಿ ಕಲ್ಲುಗಳನ್ನು ಸಾಮಾನ್ಯವಾಗಿ ಬಸದಿಗಳ ಪರಿಸರದಲ್ಲಿ ನಿಲ್ಲಿಸಿರುತ್ತಾರೆ. ಉದಾ: ಕ್ರಿ.ಶ. ಸು. ೧೨೪೪-೫೬ ರಲ್ಲಿ ಮಹಾಮಂಡಳಾಚಾರ್ಯರೂ ರಾಜಗುರುಗಳೂ ಆದ ಇಮ್ಮಡಿ ಪುಷ್ಪಸೇನದೇವ ಹಾಗೂ ಆಕಳಂಕದೇವ ಎಂಬ ಇಬ್ಬರು ಆಚಾರ್ಯರು ಸನ್ಯಾಸನ ವಿಧಿಯಿಂದ ಮುಡಿಪಿ ಮುಕ್ತಿಪಥವನ್ನು ಪಡೆದರು.**[8]**

ಅಂತೆಯೇ ಈ ಸಾಂತರ ಅರಸರ ರಾಜಗುರುಗಳಾದ ಜೈನ ಮುನಿಗಳ ಬಗ್ಗೆಯೂ ಶಾಸನಗಳು ಸಾಕಷ್ಟು ಉಲ್ಲೇಖಿಸಿದ್ದು, ಅವರಲ್ಲಿ ಪ್ರಮುಖರಾದ ಕೆಲವರು ಯಾರೆಂದರೆ, ನನ್ನಿ ಶಾನ್ತರನ ಗುರುಗಳಾದ ವಿಜಯಭಟ್ಟಾರಕರಶಿಷ್ಯರು ಆದಂತಹ ಅಜಿತ ಪಂಡಿತದೇವ. ಹಾಗೆಯೇ ಶಾಸನದಲ್ಲಿ ಕಂಡು ಬರುವ ಅನೇಕ ಜೈನ ಆಚಾರ್ಯರಲ್ಲಿ ವಾದಿಸೇನ ಕನಕಸೇನ ಭಟ್ಟಾರಕರು, ಸಿದ್ಧಾಂತ ದೇವ ಮೊದಲಾದವರು. ಹಾಗೆಯೇ ವಿಕ್ರಮ ಶಾನ್ತರನ ಕಾಲದಲ್ಲಿದ್ದ ಪ್ರಮುಖ ಆಚಾರ್ಯರು ಮೋನಿ ಸಿದ್ಧಾಂತ ಭಟ್ಟಾರ ಅಥವ ಮೌನಿದೇವ.[9]ಅಂತೆಯೇ ಒಡೆಯದೇವರು, ಕಮಳ ಭದ್ರ ಮುನಿ, ಕುಮಾರಸೇನ ದೇವರು, ಅಜಿತ ಸೇನ ದೇವರು, ವಾಸು ಪೂಜ್ಯ ಸಿದ್ಧಾಂತ ದೇವರು ಮುಂತಾದವರು, ಹೀಗೆ ಜೈನ ಆಚಾರ್ಯರ ಒಂದು ದೊಡ್ಡ ಪಟ್ಟಿಯೇ ನಮಗೆ ಅವರ ಶಾಸನಗಳಿಂದ ತಿಳಿದುಬರುತ್ತದೆ.

ಸಾಂತರರ ಪ್ರಮುಖ ಅರಸಿಯಾದ ಚಾಗಲದೇವಿಯು ನೊಕ್ಕಯಬ್ಬೆಯ ಬಸದಿಯ ಮುಂದೆ ಮಾಡಿಸಿರುವ ಮಕರ ತೋರಣದ ಉಲ್ಲೇಖವು ಶಾಸನಗಳಿಂದ ತಿಳಿದು ಬರುತ್ತದೆ.[10]ಇಲ್ಲಿ ನಾವು ಗಮನಿಸಬಹುದಾದ ಮುಖ್ಯ ವಿಷಯವೇನೆಂದರೆ ಪದ್ಮನಾಭಕವಿಯು ಬರೆದಿರುವ ಜಿನದತ್ತ ಚರಿತೆಯಲ್ಲಿ ಉಲ್ಲೇಖವಾಗಿರುವ ನೊಕ್ಕಯಬ್ಬೆ ಬಸದಿಯ ನಿರ್ಮಾಪಕ ಜಿನದತ್ತ. ಆದರೆ ಆ ಬಸದಿಯು ಹಳೆಯದಾಗಿ ಹೋದುದರಿಂದ ವೀರಶಾನ್ತರನು ಅಲ್ಲಿ ತಮ್ಮ ಕುಲದೇವತೆಯಾದ ಲೊಕ್ಕಯಬ್ಬೆಗೆ ಹೊಸ ಬಸದಿಯನ್ನು ಮಾಡಿಸಿದನೆಂದು ಕಂಡು ಬರುತ್ತದೆ. ಸಾಂತರರ ಕಾಲದ ಕೆಲವು ಬಸದಿಗಳು ಶಾಸನದಲ್ಲಿ ಉಲ್ಲೇಖಗೊಂಡಿದ್ದು ಅವು ಯಾವುವೆಂದರೆ ಗುಡ್ಡದ ಬಸದಿ, ಪಾಳಿಯಕ್ಕನ ಬಸದಿ, ಪಂಚ ಬಸದಿ ಮುಂತಾದವು. ಆ ಬಸದಿಗಳ ವಾಸ್ತು ಶಿಲ್ಪ ಶೈಲಿಯನ್ನು ನಂತರ ಪ್ರತ್ಯೇಕವಾಗಿ ಚರ್ಚಿಸಲಾಗುವುದು.

ಸಾಂತರರ ಕಾಲದ ಇತರ ಧರ್ಮಗಳು

ಈಗಾಗಲೇ ತಿಳಿಸಿದಂತೆ ಸಾಂತರರು ಮೂಲತಃ ಜೈನ ಧರ್ಮಿಯರಾಗಿದ್ದರೂ ಬೇರೆ ಧರ್ಮಗಳ ಬೆಳವಣಿಗೆಗೂ ಸಹಾಯಕರಾಗಿದ್ದರೆಂದು ಶಾಸನಗಳ ಮೂಲಕ ತಿಳಿಯುತ್ತದೆ. ಅವರ ರಾಜಧಾನಿಯಾಗಿದ್ದ ಹೊಂಬುಜದಲ್ಲಿ ಜೈನಬಸದಿಗಳ ಜೊತೆಗೆ ಕೆಲವೊಂದು ಶೈವ ದೇವಾಲಯಗಳೂ ಇರುವುದು ಕಂಡು ಬರುತ್ತದೆ. ಆದರೆ ಅವರ ರಾಜಧಾನಿಪಟ್ಟಣದಲ್ಲಿ ಯಾವುದೇ ವೈಷ್ಣವ ದೇವಾಲಯ ಕಂಡು ಬರುವುದಿಲ್ಲ.

ಆದರೂ ಅವರ ಶಾಸನಗಳ ಆಧಾರದ ಮೇಲೆ ಅವರು ಶೈವ ಹಾಗೂ ವೈಷ್ಣವ ಈ ಎರಡು ಪಂಥಗಳ ಬೆಳವಣಿಗೆಗೆ ಕಾರಣರಾಗಿದ್ದು, ಅವರ ಕಾಲದಲ್ಲಿ ಈ ರಾಜರು ಸ್ಥಾಪಿಸಿದ ಅನೇಕ ಅಗ್ರಹಾರಗಳು, ಹಾಗೂ ಅನೇಕ ದೇವಾಲಯಗಳಿಗೆ ಅವರು ಮಾಡಿದ ದಾನದ ವಿವರಗಳು ಶಾಸನಗಳಿಂದ ತಿಳಿದು ಬರುತ್ತವೆ.

ಹುಂಚದಲ್ಲಿರುವ ಕಮಠೇಶ್ವರ ದೇವಾಲಯವನ್ನೂ ಈ ಸಾಂತರರು ಪಾಲಿಸುತ್ತಿದ್ದುದು ಆ ದೇವಾಲಯದ ಬಾಗಿಲನ ಮೇಲ್ಭಾಗದಲ್ಲಿ ನಿಲ್ಲಿಸಿರುವ ಒಂದು ಶಾಸನದಲ್ಲಿ ಸ್ಪಷ್ಟವಾಗಿದೆ. ಸುಮಾರು ಕ್ರಿ.ಶ. ೮೦೦ರ ಸುಮಾರಿಗೆ ಮನ್ನೆಖೇಟದಿಂದ ತೆಂಕಣಕ್ಕೆ ಇರುವ ಪೊಂಬುರ್ಚದಲ್ಲಿ ಜಕ್ಕಯ್ಯ ಎಂಬುವನು ಕಮಠೇಶ್ವರ ದೇವಾಲಯವನ್ನು ಮಾಡಿಸಿದನು. ಆದರೆ ಆ ಕಾಲದಲ್ಲಿ ಅಲ್ಲಿ ಆಳ್ವಿಕೆ ಮಾಡುತ್ತಿದ್ದ ಸಾಂತರ ರಾಜ ಯಾರು ಎಂದು ಖಚಿತವಾಗಿ ತಿಳಿದುಬರುವುದಿಲ್ಲ.

ಈ ದೇವಾಲಯದ ಮುಂದೆ ನಿಲ್ಲಿಸಿರುವ ಸುಮಾರು ಕ್ರಿ.ಶ. ೧೨೮೭ರ ಇನ್ನೊಂದು ಶಾಸನದ ಪ್ರಕಾರ ಕುಮಾರಸೊಡ್ಡ ದೇವನು ಸಾನ್ತಳಿಗೆ ನಾಡನ್ನು ಏಕಚತ್ರದಿಂದ ಆಳುತ್ತಿರಬೇಕಾದರೆ ಈ ಕಮಠೇಶ್ವರ ದೇವಾಲಯವನ್ನು ಪುನಃ ಪ್ರತಿಷ್ಠಾಪನೆ ಮಾಡಿ ಅದಕ್ಕೆ ದಾನ ನೀಡಿದನು. ಅಂದರೆ ಜಕ್ಕಯ್ಯನ ಹಿಂದೆ ಕಟ್ಟಿಸಿದ ದೇವಾಲಯವು ಶಿಥಿಲವಾಗಿದ್ದು ಅದನ್ನು ಇವರು ಪುನಃ ಪ್ರತಿಷ್ಠಾಪಿಸಿರಬಹುದಾಗಿದೆ.

ಬಿಲ್ಲೇಶ್ವರ ದೇವಾಲಯದ ಆವರಣದಲ್ಲಿ ಕಂಡು ಬರುವ ಕಾಳ ಭೈರವನ ಗುಡಿಯ ಗೋಡೆಯ ಮೇಲೆ ಕಂಡು ಬರುವ ಶಾಸನದ ಪ್ರಕಾರ ಶ್ರೀತ್ರೈಳೋಕ್ಯಮಲ್ಲ ವೀರಶಾನ್ತರನು ಕಾಳಾಮುಖ ಶೈವಗುರುಗಳಿಗೆ ಗೊರವರ ಪಳ್ಳಿ ಎಂಬ ಹಳ್ಳಿಯನ್ನು ಸರ್ವನಮಸ್ಯವನ್ನಾಗಿ ದಾನ ಮಾಡಿದನು.[11]ನಂತರ ವೀರ ಸಾಂತರನು ತನ್ನ ಕಾಲದಲ್ಲಿ ಕಣ್ಣೂರು ಅಗ್ರಹಾರದ ಬ್ರಾಹ್ಮಣರಿಗೂ ಹಾಗೂ ಅಲ್ಲಿಯ ಗೌತಮೇಶ್ವರ ದೇವಾಲಯಕ್ಕೂ ಭೂದಾನ ನೀಡಿದ ವರದಿಗಳಿವೆ.[12]ನನ್ನಿ ಸಾನ್ತರನು ಕ್ರಿ.ಶ. ೧೦೨೭ ರಲ್ಲಿ ತ್ಯಾಗರ್ತಿಯಲ್ಲಿರುವ ಜನಾರ್ಧನ ಅಥವಾ ನಾರಾಯಣ ದೇಗುಲಕ್ಕೆ ಭೂದಾನವನ್ನು ಮಾಡಿದನು. ವೀರ ಶಾನ್ತರನ ರಾಣಿಯಾದ ಚಾಗಲದೇವಿಯೂ ಬಳ್ಳಿಗಾವೆಯಲ್ಲಿ ಚಾಗಲೇಶ್ವರವೆಂಬ ದೇಗುಲವನ್ನು ಮಾಡಿಸಿ ದಾನ ನೀಡಿರುವ ಉಲ್ಲೇಖವಿದೆ.[13]

ಹೀಗೆ ಸಾಂತರರು ತಮ್ಮ ಆಳ್ವಿಕೆಯ ಕಾಲದಲ್ಲಿ ಎಲ್ಲಾ ಧರ್ಮಗಳ ಪರಿಪಾಲನೆ ಮಾಡಿದ್ದು ಪರಧರ್ಮ ಸಹಿಷ್ಣುತೆ, ಸಮಾನತೆ ಹಾಗೂ ಸಮನ್ವಯ ದೃಷ್ಟಿಯನ್ನು ಕಾಪಾಡಿಕೊಂಡು ಅನೇಕ ದೇವಾಲಯ, ಬಸದಿ, ಕೆರೆ, ಭಾವಿ ಮಾಡಿಸಿ ತಮ್ಮ ಪ್ರಾಂತ್ಯದಲ್ಲಿ ಧರ್ಮ ಪರಿಪಾಲಕರಾಗಿ ಬಾಳಿದರು. ಅದಕ್ಕೆ ಸಾಕ್ಷಿಯಾಗಿ ಇಂದಿನವರೆಗೂ ಹೊಂಬುಜದಲ್ಲಿ ಅವರ ಕಾಲದ ಅನೇಕ ಬಸದಿ ಹಾಗೂ ದೇವಾಲಯಗಳು ಇರುವುದನ್ನು ಕಾಣಬಹುದು.

ಸಾಂತರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ

ಈಗಾಗಲೇ ಮೇಲೆ ತಿಳಿಸಿದಂತೆ ಸಾಂತರರ ಕಾಲದಲ್ಲಿ ಅನೇಕ ಜೈನ ಹಾಗೂ ಇತರೆ ದೇವಾಲಯಗಳು ನಿರ್ಮಾಣವಾಗಿದ್ದು ಅವುಗಳಲ್ಲಿ ಕೆಲವು ಇನ್ನೂ ಉಳಿದು ಬಂದಿವೆ. ಆದರೆ ಶಾಸನದಲ್ಲಿ ಉಲ್ಲೇಖಗೊಂಡ ಅನೇಕ ಬಸದಿ ಅಥವಾ ದೇವಾಲಯಗಳು ಇಂದು ಕಂಡು ಬರದಿದ್ದರೂ, ಇರುವ ಕೆಲವೇ ಕೆಲವು ಕಟ್ಟಡಗಳ ಆಧಾರದ ಮೇಲೆ ನಾವು ಈ ಪ್ರಾಂತ್ಯದಲ್ಲಿ ಬೆಳೆದು ಬಂದಂತಹ ಪ್ರಾದೇಶಿಕ ಶೈಲಿಯನ್ನು ಗುರುತಿಸಬಹುದು. ಸಾಂತರರ ವಾಸ್ತುಶಿಲ್ಪ ಶೈಲಿಯು ಚಾಳುಕ್ಯರ ಪ್ರಮುಖ ಶೈಲಿಯದೇ ಆಗಿದ್ದರೂ ಸಹ ಅವರ ಶೈಲಿಯಲ್ಲಿ ಕೆಲವೊಂದು ಮಾರ್ಪಾಟುಗಳು ಸಹ ಎದ್ದು ಕಾಣುತ್ತವೆ. ಅಂತೆಯೇ ಅವರ ಕಾಲದಲ್ಲಿ ಕಲೆ ಹಾಗೂ ವಾಸ್ತುಶಿಲ್ಪ ಶೈಲಿಯೂ ನೇರವಾಗಿ ರಾಜರ ಪ್ರೋತ್ಸಾಹದಲ್ಲಿ ಬೆಳದು ಬಂದುದ್ದಾಗಿದೆ.

ಅವರ ಕಾಲದ ವಾಸ್ತುಶಿಲ್ಪ ಶೈಲಿಯಲ್ಲಿ ಎದ್ದು ಕಾಣುವ ಕೆಲವು ಪ್ರಾದೇಶಿಕ ಶೈಲಿಯ ಲಕ್ಷಣಗಳು ಇಂತಿವೆ.

ಅ) ಅವರ ದೇವಾಲಯ ಅಥವಾ ಬಸದಿಗಳು ಸಾಮಾನ್ಯವಾಗಿ ಮಧ್ಯಮ ಗಾತ್ರದವಾಗಿವೆ.

ಆ) ಅವರ ಬಸದಿಗಳು ಚಚ್ಚೌಕಾಕಾರದ ಗರ್ಭಗೃಹವನ್ನು ಹೊಂದಿದ್ದು, ಅದಕ್ಕೆ ಹೊಂದಿಕೊಂಡಂತೆ ಆದರೆ ಅದಕ್ಕಿಂತ ದೊಡ್ಡ ಪ್ರಮಾಣದ ಮುಚ್ಚಿದ ಮಂಟಪವನ್ನು ಹೊಂದಿದ್ದವು.

ಇ) ಅವರ ಕಟ್ಟಡಗಳು ಸಣ್ಣ ಪ್ರಮಾಣದ ಸರಳವಾದ ಅಧಿಷ್ಠಾನವನ್ನು ಹಾಗೂ ಅಲಂಕಾರ ರಹಿತ ಗೋಡೆಗಳನ್ನು ಹೊಂದಿದ್ದವು.

ಈ) ಗೋಡೆಗಳ ಮಧ್ಯದಲ್ಲಿ ಅರ್ಧ ಕಂಬಗಳನ್ನು ಸಹ ನೋಡಬಹುದಾಗಿದೆ.

ಉ) ಗೋಡೆಯ ತುದಿಯಲ್ಲಿ ಕಪೋತದ ಕೆಳಭಾಗದಲ್ಲಿ ಕೆಲವು ಸಣ್ಣ ಸಣ್ಣ ಶಿಲ್ಪಗಳು ಕಂಡು ಬರುತ್ತವೆ. ಅದರ ಮೇಲೆ ಹಾರವಿದ್ದು ಹಾಗೆಯೇ ದೇವಾಲಯದ ಅಥವಾ ಶಿಖರದ ಭಾಗ ಕಂಡು

ಬರುತ್ತದೆ. ಈ ಶಿಖರಗಳು ವಿಶೇಷವಾಗಿದ್ದು, ಅತ್ಯಂತ ಹೆಚ್ಚು ಮಳೆ ಬೀಳುವ ಈ ಮಲೆನಾಡಿನ ಪ್ರದೇಶದಲ್ಲಿ ಈ ಮಳೆ ನೀರು ನಿಲ್ಲದೆ ಹರಿದು ಹೋಗುವ ಮಾದರಿಯಲ್ಲಿ ಕಟ್ಟಿಸಲಾಗಿದೆ.

ಊ) ದೇವಾಲಯದ ಮಂಟಪದ ಬಾಗಿಲುವಾಡ ಸಹ ಅತ್ಯಂತ ಸುಂದರ ಕೆತ್ತನೆಗಳಿಂದ ಕೂಡಿರುತ್ತದೆ.

ಎ) ಮಂಟಪದ ಒಳಗೆ ಸಾಮಾನ್ಯವಾಗಿ ಚಚ್ಚೌಕಾಕಾರದ ಕಂಬಗಳು ಕಂಡು ಬರುತ್ತಿದ್ದು ಅವುಗಳು ಸೂಕ್ಷ್ಮ ಕೆತ್ತನೆಯಿಂದ ಕೂಡಿವೆ.

ಏ) ಜೈನ ಬಸದಿಯ ಮುಂದೆ ಸ್ವತಂತ್ರವಾಗಿ ನಿಲ್ಲಿಸಿರುವ ಕಲ್ಲಿನ ಮಕರ ತೋರಣಗಳು ಸಾಮಾನ್ಯವಾಗಿದ್ದು, ಇಂದು ಬರೀ ಎರಡೇ ಎರಡು ಅಂತಹ ಮಕರ ತೋರಣಗಳು ನಮಗೆ ಅವರ ರಾಜಧಾನಿಯಾಗಿದ್ದ ಹುಂಚದಲ್ಲಿ ಕಂಡು ಬರುತ್ತವೆ.

ಐ) ಈ ಬಸದಿ ಅಥವಾ ದೇವಾಲಯಗಳ ರಚನೆಯನ್ನು ಅತ್ಯಂತ ಗಟ್ಟಿಯಾದ ಕಣಶಿಲೆಯನ್ನು ಬಳಸಿ ನಿರ್ಮಾಣ ಮಾಡಿದ್ದಾರೆ.

ಮೇಲೆ ಹೇಳಿರುವ ಲಕ್ಷಣಗಳ ಹಿನ್ನೆಲೆಯಲ್ಲಿ ಇಲ್ಲಿ ಕೆಲವೊಂದು ದೇವಾಲಯ ಅಥವಾ ಬಸದಿಗಳನ್ನು ಕುರಿತು ಚರ್ಚಿಸಲಾಗಿದೆ.

ಕಮಠೇಶ್ವರ ದೇವಾಲಯ

ಇದು ಇವತ್ತಿನ ಹೊಂಬುಜದ ಜೈನಮಠದಿಂದ ಅರ್ಧ ಕಿಲೋಮೀಟರ ದೂರದಲ್ಲಿ ಈಶಾನ್ಯ ದಿಕ್ಕಿನಲ್ಲಿ ಕಂಡು ಬರುತ್ತದೆ.

ದೇವಾಲಯವು ಶಿಥಿಲಾವಸ್ಥೆಯನ್ನು ತಲುಪಿದ್ದು ಸರಿಯಾದ ಸಂರಕ್ಷಣೆಗೆ ಕಾಯುತ್ತಿದೆ. ದೇವಾಲಯವು ಒಂದು ಸಣ್ಣ ಚಚ್ಚೌಕಾಕಾರದ ಗರ್ಭಗೃಹ ಹಾಗೂ ಚಚ್ಚೌಕಾಕಾರದ ಮಂಟಪವನ್ನು ಹೊಂದಿದೆ. ಅಲ್ಲಿ ನಾಲ್ಕು ಚಚ್ಚೌಕಾಕಾರದ ಕಂಭಗಳು ಕಂಡು ಬರುತ್ತಿದ್ದು, ಯಾವುದೇ ಅರ್ಧ ಕಂಬಗಳು ಕಂಡು ಬರುವುದಿಲ್ಲ. ಈ ನಾಲ್ಕು ಕಂಬಗಳು ತರಂಗ ಭೋದಿಗೆಗಳನ್ನು ಹೊಂದಿದ್ದು, ಇದು ಬಾದಾಮಿ ಚಾಳುಕ್ಯರ ಶೈಲಿಯ ಅನುಕರಣೆಯಾಗಿದೆ. ಮಂಟಪದ ಮಧ್ಯ ಭಾಗದಲ್ಲಿ ಒಂದು ಪುಟ್ಟ ನಂದಿ ವಿಗ್ರಹ ಸಹ ಇದೆ.

ಮಂಟಪದ ಅಂಕಣದಲ್ಲಿ ಅಷ್ಟದಿಕ್ಪಾಲಕರ ಪಟ್ಟಿಕೆ ಇದ್ದು ಮಧ್ಯದಲ್ಲಿ ನಟರಾಜ, ಕಾರ್ತೀಕೇಯ ಹಾಗೂ ಗಣೇಶನನ್ನು ನೋಡಬಹುದಾಗಿದೆ. ಈ ಪಟ್ಟಿಕೆಯ ಸುತ್ತ ಕಮಲದ ಹೂವಿನ ಅಲಂಕರಣವನ್ನು ಕಾಣಬಹುದು. ಈ ಪಟ್ಟಿಕೆಯನ್ನು ಹೊರತುಪಡಿಸಿ ಉಳಿದಂತೆ ಇದು ಅಲಂಕಾರ ರಹಿತ ಅಂಕಣವನ್ನು ಹೊಂದಿದೆ.

ಗರ್ಭಗೃಹದ ದ್ವಾರ ಶಾಖೆಯ ತ್ರಿಶಾಖವಾಗಿದ್ದು ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪ ಕಂಡು ಬರುತ್ತದೆ. ಆದರೆ ಅತ್ಯಂತ ಸುಂದರವಾದ ಚಿತ್ರ ಶಿಲ್ಪಕಲೆ ನಮಗೆ ದೇವಾಲಯದ ಗೋಡೆಯ ಮೇಲ್ಭಾಗದಲ್ಲಿ ಕಪೋತದ ಕೆಳಗೆ ಕಂಡು ಬರುವಂತಹದು. ಅಲ್ಲಿ ಅನೇಕ ವಾದ್ಯಗಳನ್ನು ನುಡಿಸುತ್ತಿರುವ ಶಿಲ್ಪಗಳು, ನೃತ್ಯ ಭಂಗಿಯಲ್ಲಿರುವ ಶಿಲ್ಪಗಳು ಕಂಡು ಬರುತ್ತವೆ. ಇದು ಸರಳವಾದ ಅಧಿಷ್ಠಾನ, ಸರಳವಾದ ಗೋಡೆಯನ್ನು ಹೊಂದಿದ್ದು ಚಜ್ಜದ ಕೆಳಭಾಗದಲ್ಲಿ ಅಡ್ಡಲಾಗಿ ಇರುವ ಪಟ್ಟಿಕೆಯ ಮೇಲೆ ಚಿತ್ರಣಗಳು ಕಂಡು ಬರುತ್ತವೆ. ಈ ರೀತಿಯ ಶೈಲಿಯು ಮರದ ವಾಸ್ತುಶಿಲ್ಪ ಶೈಲಿಯ ಅನುಕರಣೆಯಾಗಿದ್ದು, ಈ ಪ್ರಾಂತ್ಯದಲ್ಲಿ

ವಾಸ್ತುಶಿಲ್ಪದ ರಚನೆಗೆ ಕಲ್ಲನ್ನು ಉಪಯೋಗಿಸುವ ಮೊದಲು ಮರವನ್ನು ಕಚ್ಚಾಸಾಮಾಗ್ರಿಯನ್ನಾಗಿ ಬಳಸುತ್ತಿದ್ದರೆಂದು ಊಹಿಸಬಹುದು.

ಅಂತೆಯೇ ಗೋಡೆಗಳು ಸರಳವಾಗಿದ್ದು ಮಧ್ಯ ಮಧ್ಯದಲ್ಲಿ ಅರ್ಧ ಕಂಬಗಳು ಈ ಸರಳತೆಯನ್ನು ಮುರಿಯುತ್ತವೆ. ಆದರೆ ಈ ಅರ್ಧಕಂಬಗಳು ಮಂಟಪದ ಹೊರಗೋಡೆಗೆ ಮಾತ್ರ ಸೀಮಿತವಾಗಿವೆ. ಭಿತ್ತಿಯ ಮೇಲ್ಭಾಗದಲ್ಲಿ ಕಪೋತವನ್ನು ಸುಂದರವಾದ ಕೂಟಗಳಿಂದ ಕೆತ್ತಿದ್ದಾರೆ. ಈ ದೇವಾಲಯದ ಮೇಲ್ಚಾವಣಿ ಸಮತಟ್ಟಾಗಿದ್ದು ನಾಲ್ಕು ಭಾಗಗಳಲ್ಲಿ ಸ್ವಲ್ಪ ಬಾಗಿದಂತೆ ಕಂಡು ಬರುತ್ತದೆ. ಕಪೋತದ ಮೇಲೆ ಹಾರವು ಕಂಡು ಬಂದಿಲ್ಲ. ಆದರೆ ಗರ್ಭಗೃಹದ ಶಿಖರ ಭಾಗದಲ್ಲಿ ಫಲಕದ ಕೆಳಗೆ ಎರಡು ಮುಂಚಾಚಿರುವ ಕಲ್ಲಿನ ಸಾಲಿದ್ದು ಮರದ ವಾಸ್ತುಶಿಲ್ಪ ಶೈಲಿಯನ್ನು ನೆನಪಿಸುತ್ತದೆ. ಇದರ ಮೇಲೆ ಚಚ್ಚೌಕಾಕಾರದ ಭೂಮಿಯ ರಚನೆ ಕಂಡು ಬರುತ್ತದೆ.

ಒಟ್ಟಿನಲ್ಲಿ ಈ ದೇವಾಲಯವು ಏಕಕೂಟ ವಿಮಾನವೆನಿಸಿಕೊಳ್ಳುತ್ತದೆ. ಹಾಗೆಯೇ ಈ ದೇವಾಲಯದ ಬಾಗಿಲು ತ್ರಿಶಾಖಾ ದ್ವಾರಶಾಖೆಯನ್ನು ಹೊಂದಿದ್ದು ಬಾಗಿಲುವಾಡದ ಮೇಲ್ಭಾಗದಲ್ಲಿ ಪೂರ್ಣ ಕಳಶದ ರಚನೆ ಕಂಡು ಬರುತ್ತದೆ. ಇದೊಂದು ಅಪರೂಪದ ಲಕ್ಷಣವೆಂದೇ ಹೇಳಬಹುದು. ಈ ದೇವಾಲಯ ಭಿತ್ತಿಯ ಮೇಲ್ಭಾಗದಲ್ಲಿ ಚಜ್ಜದ ಕೆಳಗೆ ಒಂದು ಸಾಲು ಸುಂದರವಾದ ಅಲಂಕಾರಿಕ ಪಟ್ಟಿಕೆಯಿದ್ದು, ಅಲ್ಲಿ ಅನೇಕ ಮಾದರಿಯ ಶಿಲ್ಪರಚನೆ ಕಂಡು ಬರುತ್ತದೆ. ಆದರೆ ಅತ್ಯಂತ ಮನ ಸೆಳೆಯುವ ಚಿತ್ರಗಳೆಂದರೆ ಪಂಚತಂತ್ರಗಳ ನಿರೂಪಣೆಯದು.

ಸೂಳೆ ಬಸದಿ

ಇದನ್ನು ಈ ಪ್ರಾಂತ್ಯದ ಜನ ಸೂಳೆ ಬಸದಿ ಎಂದು ಕರೆಯುತ್ತಾರೆ. ಆದರೆ ಶಾಸನದ ಆಧಾರದ ಮೇಲೆ ಈ ಬಸದಿಯನ್ನು ವಿಕ್ರಮ ಶಾನ್ತರನ ಬಳೆಯಾಕೆ ಪಾಳಿಯಕ್ಕ ಕಟ್ಟಿಸಿದ್ದು, ಕಾಲಕ್ರಮೇಣ ಲೋಕರೂಢಿಯಾಗಿ ಸೂಳೆ ಬಸದಿ ಎಂದು ಹೆಸರು ಬಂದಿದೆ. ಎಂ.ಎ. ಧಾಕಿಯವರು ಈ ದೇವಾಲಯವನ್ನು ಈ ಪ್ರದೇಶದ ಅತ್ಯಂತ ಹಳೆಯ ಬಸದಿ ಎಂದು ಗುರುತಿಸುತ್ತಾರೆ.**[14]**ಆದರೆ ಇಂದು ಗರ್ಭಗೃಹವನ್ನು ಹೊರತುಪಡಿಸಿ ಬೇರೆ ಯಾವುದೇ ಅವಶೇಷಗಳು ಕಂಡುಬರುವುದಿಲ್ಲ.

ಬೋಗಾರ ಬಸದಿ

ಹುಂಚದ ಜೈನ ಮಠದ ದಕ್ಷಿಣ ಭಾಗದಲ್ಲಿ ಈ ಬಸದಿ ಕಂಡು ಬರುತ್ತದೆ. ಇಂದು ಈ ಮೂಲ ಬಸದಿಯ ಮೇಲ್ಭಾಗದಲ್ಲಿ ಕಟ್ಟಿದ ಒಂದು ಹೊಸ ಕಟ್ಟಡವು ಬಸದಿಯ ಸಹಜ ಸೌಂದರ್ಯವನ್ನು ಮರೆ ಮಾಡಿದೆ. ಆದರೆ ಈ ಬಸದಿಯ ಕೆಳಗಿನ ಭಾಗ ಇವತ್ತಿನವರೆಗೂ ಸುಸ್ಥಿತಿಯಲ್ಲಿಯೇ ಇದೆ. ಬಸದಿಯು ಮಧ್ಯಮ ಗಾತ್ರದ್ದಾಗಿದ್ದು ಗರ್ಭಗೃಹ, ಅಂತರಾಳ ಹಾಗೂ ಮಂಟಪವನ್ನು ಹೊಂದಿದೆ. ಹೊರಗಿನಿಂದ ನೋಡಿದಾಗ ಬಸದಿಯು ಒಂದು ಸರಳ ಅಧಿಷ್ಠಾನವನ್ನು ಹೊಂದಿದ್ದು, ಸರಳ ಭಿತ್ತಿ, ಕುಡ್ಯಸ್ತಂಭಗಳನ್ನು ಹೊಂದಿದ್ದು, ಅದರ ಮೇಲೆ ಒಂದು ಸಾಲು ಶಿಲ್ಪಗಳನ್ನು ನೋಡಬಹುದಾಗಿದೆ. ಬಸದಿಯ ಮೇಲಿನ ಭಾಗವು ಶಾಲಾ, ಕೂಟ, ಪಂಜರದಿಂದ ಕೂಡಿದ ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದ್ದು, ಶಿಖರದಲ್ಲಿ ಅನೇಕ ಸಣ್ಣ ನಾಸಿಗಳ ರಚನೆ ಹಾಗೂ ಆ ನಾಸಿಗಳ ಮಧ್ಯದಲ್ಲಿ ಕಿನ್ನರ ಶಿರ ಹಾಗೂ ವ್ಯಾಳದ ಸುಂದರ ಕೆತ್ತನೆಯನ್ನು ಹೊಂದಿದೆ.

ಬಸದಿಯ ಒಳಗಿನ ಮಂಟಪ ಭಾಗದಲ್ಲಿ ಕಂಭಗಳಿವೆ. ಇವು ದೊಡ್ಡಗಾತ್ರದ ಚಚ್ಚೌಕಾಕಾರದ ಕಂಭಗಳಾಗಿದ್ದು ಅವುಗಳ ಪಟ್ಟಿಕೆಯ ಮೇಲೆ ಅತ್ಯಂತ ಸೂಕ್ಷ್ಮವಾದ ಕೆತ್ತನೆಗಳು ಕಂಡು

ಬರುತ್ತವೆ. ಕಂಭಗಳಿಂದ ಹೊರಚಾಚಿರುವ ತರಂಗ ಬೋದಿಗೆಗಳು ಚಾಳುಕ್ಯರ ವಾಸ್ತುಶಿಲ್ಪ ಶೈಲಿಯನ್ನು ನೆನಪಿಸುತ್ತವೆ. ಈ ಕಂಭಗಳ ಮೇಲೆ ಬಳ್ಳಿ, ಸರಕುಚ್ಚು, ಕಲ್ಲಿನಾಕಾರದ ಪ್ರಭಾವಳಿಯೊಳಗೆ ಕೆತ್ತಿರುವ ಜಿನರ ಉಬ್ಬುಶಿಲ್ಪ ಆಕರ್ಷಕವಾಗಿದೆ. ಅಂತೆಯೇ ಇನ್ನೊಂದು ಕಂಭದಲ್ಲಿ ಕಂಡು ಬರುವ ಉಬ್ಬು ಶಿಲ್ಪದಲ್ಲಿ ಪಾರ್ಶ್ವನಾಥ ತೀರ್ಥಂಕರರ ಹಾಗೂ ಬಾಹುಬಲಿಯ ಕಾಯೋತ್ಸರ್ಗಭಂಗಿಯ ಶಿಲ್ಪಗಳು ಮನಸೆಳೆಯುವಂತಿದೆ.

ಆದರೆ ಗರ್ಭಗೃಹದೊಳಗೆ ಇರುವ ಜೈನ ಪ್ರತಿಮೆಯು ಯಾವ ತೀರ್ಥಂಕರನದೆಂದು ಗುರುತಿಸಲು ಸಾಧ್ಯವಾಗಿಲ್ಲ. ಈ ಪ್ರದೇಶದ ಜನರು ಇದನ್ನು ಚಂದ್ರನಾಥ ತೀರ್ಥಂಕರರದೆನ್ನುತ್ತಾರೆ. ಈ ಜಿನಮೂತಿರ್ಯಯು ಸಿಂಹ ಪೀಠದಲ್ಲಿ ಪದ್ಮಾಸನದಲ್ಲಿ ಕುಳಿತಿರುವ ಭಂಗಿಯಲ್ಲಿದೆ.

ಪಂಚ ಬಸದಿ

ಇದು ಈ ಪ್ರದೇಶದ ಅತ್ಯಂತ ಸುಂದರವಾದ ಬಸದಿಯಾಗಿದ್ದು, ಅತ್ಯಂತ ಪ್ರಸಿದ್ಧಿ ಪಡೆದುದಾಗಿದೆ. ಈ ದೇವಾಲಯವು ಬಂದು ದೊಡ್ಡ ಪ್ರಾಕಾರದಲ್ಲಿ ನಿರ್ಮಾಣವಾಗಿದ್ದು, ಅಲ್ಲಿ ಪಂದ ಬಸದಿಯ ಜೊತೆಗೆ ಇನ್ನೆರಡು ಸಣ್ಣ ದೇವಾಲಯಗಳು ಉತ್ತರ ಹಾಗೂ ದಕ್ಷಿಣ ದಿಕ್ಕಿನಲ್ಲಿ ಇವೆ. ಈ ಬಸದಿಯ ಮುಂದೆ ಅತ್ಯಂತ ಸುಂದರವಾದ ಒಂದು ಮಾನಸ್ತಂಭ ಹಾಗೂ ಬಲಿ ಪೀಠವಿದೆ. ಶಾಸನಗಳ ಆಧಾರದ ಮೇಲೆ ಪಂಚ ಬಸದಿಯ ನಿರ್ಮಾಣ ಕಾರ್ಯ ಸುಮಾರು ಕ್ರಿ.ಶ. ೧೦೭೭ ರಲ್ಲಿ ಪ್ರಾರಂಭವಾಯಿತೆಂದು ತಿಳಿದು ಬರುತ್ತದೆ. ಈ ಬಸದಿಯನ್ನು ಎರಡು ಹಂತಗಳಲ್ಲಿ ಕಟ್ಟಿಸಿದಂತೆ ಕಂಡು ಬರುತ್ತದೆ. ಬಸದಿಯ ನಿರ್ಮಾಣಕ್ಕೆ ಕಣಶಿಲೆ ಹಾಗೂ ಜಂಬಿಟ್ಟಿಗೆಯನ್ನು ಬಳಸಿದ್ದಾರೆ.

ದೇವಾಲಯದ ಮುಂಭಾಗದಲ್ಲಿ ಕಂಡು ಬರುವ ಕಂಭಗಳ ಸಾಲುಗಳ ತೆರೆದ ಮಂಟಪವನ್ನು ಜಂಬಿಟ್ಟಿಗೆಯ ವೇದಿಕೆಯ ಮೇಲೆ ನಿರ್ಮಿಸಲಾಗಿದ್ದು, ಈ ಕಂಭಗಳು ಹೊಯ್ಸಳರ ಕಾಲದ ಕಡೆದ **(Lathe Turned)** ಕಂಭಗಳಂತೆ ಸುಂದರವಾಗಿದೆ. ಈ ಮಂಟಪವನ್ನು ಬಸದಿಯ ನಿರ್ಮಾಣದ ಕಾರ್ಯ ಮುಗಿದ ಸ್ವಲ್ಪ ನಂತರದ ಕಾಲದಲ್ಲಿ ಕಟ್ಟಿಸಿದಂತೆ ತೋರುತ್ತದೆ. ಈ ಬಸದಿಯು ಉತ್ತರ ದಕ್ಷಿಣವಾಗಿ ಐದು ಗರ್ಭಗೃಹಗಳನ್ನು ಹೊಂದಿದ್ದು, ಈ ಐದು ಗರ್ಭಗೃಹಗಳಿಗೆ ಹೊಂದಿಕೊಂಡಂತೆ ಐದು ಕಂಭಗಳ ನಾಲ್ಕು ಸಾಲುಗಳಿಂದ ಕೂಡಿದ ಮಂಟಪವಿದೆ. ಬಸದಿಗೆ ಮೂರು ದ್ವಾರಗಳಿದ್ದು ಎಲ್ಲವೂ ಪೂರ್ವದ ಕಡೆ ಮುಖ ಮಾಡಿವೆ. ಮಂಪಟದ ಮುಂಭಾಗದಲ್ಲಿ ಸ್ವತಂತ್ರವಾಗಿ ನಿಂತಿರುವ ಕಂಭಗಳ ಮೇಲಿರುವ ಮಕರ ತೋರಣ ಅತ್ಯಂತ ಸುಂದರವಾಗಿದೆ. ಅಂತೆಯೇ ಬಸದಿಯ ದ್ವಾರಶಾಖೆಗಳನ್ನು ಬಹಳ ಅಂದವಾಗಿ ಕೆತ್ತಲಾಗಿದೆ. ಮಂಟಪದ ಪ್ರವೇಶದ್ವಾರದಲ್ಲಿ ಮೆಟ್ಟಿಲುಗಳ ಪಕ್ಕದಲ್ಲಿ ಕಂಡುಬರುವ ಹಸ್ತಿಹಸ್ತದಲ್ಲಿ **(Balustrade)** ಆನೆಯನ್ನು ಮಧಿಸುತ್ತಿರುವ ಸಿಂಹದ ಉಬ್ಬು ಚಿತ್ರವಿದೆ. ಗರ್ಭಗೃಹಗಳಲ್ಲಿ ಐದು ಜಿನ ತೀರ್ಥಂಕರರ ದೊಡ್ಡ ಪ್ರಮಾಣದ ಮೂರ್ತಿಗಳು ಇದ್ದು ಅವನ್ನು ಆದಿನಾಥ, ಅಜಿತನಾಥ, ಮಹಾವೀರ, ಪಾರ್ಶ್ವನಾಥ ಹಾಗೂ ಶಾಂತಿನಾಥ ಎಂದು ಗುರುತಿಸಲಾಗಿದೆ. ಈ ಐದು ಜಿನಮೂರ್ತಿಗಳು ಪದ್ಮಾಸನದ ಭಂಗಿಯಲ್ಲಿದ್ದು, ಅವರುಗಳು ಸಿಂಹ ಪೀಠದ ಮೇಲೆ ವಿರಾಜಮಾನರಾಗಿದ್ದಾರೆ. ಮಕರ ತೋರಣದಲ್ಲಿ ಇಬ್ಬರು ಚಾಮರಧಾರಿಗಳನ್ನು ಕೆತ್ತಲಾಗಿದೆ. ಆದಿನಾಥ, ಪಾರ್ಶ್ವನಾಥ, ಅಜಿತನಾಥರಿಗೆ ಮಾತ್ರ ತಲೆಯ ಮೇಲೆ ಮುಕ್ಕೊಡೆ, ಹಾಗೂ ಅಕ್ಕಪಕ್ಕದಲ್ಲಿ ಚಾಮರಧಾರಿಗಳು ಇದ್ದಾರೆ.

ಪಾರ್ಶ್ವನಾಥ ಬಸದಿ

ಇದೊಂದು ಅತ್ಯಂತ ಸುಂದರವಾದ ಸಣ್ಣ ಪ್ರಮಾಣದ ಬಸದಿಯಾಗಿದೆ. ಇದು ಪಂಚ ಬಸದಿಯ ದಕ್ಷಿಣದಲ್ಲಿ ಇದ್ದು ಅದರ ಪ್ರಾಕಾರದ ಒಳಗೆ ಕಂಡು ಬರುತ್ತದೆ. ಆದರೆ ಒಂದು

ಕಾಲದಲ್ಲಿ ಇದು ಸ್ವತಂತ್ರ ದೇವಾಲಯವಾಗಿದ್ದು ಇವತ್ತು ಅದು ಪಂಚಕೂಟ ಬಸದಿಯ ಒಂದು ಭಾಗವಾಗಿದೆ. ಬಸದಿಯು ಗರ್ಭಗೃಹ ಅಂತರಾಳ ಹಾಗೂ ಕಂಭಗಳನ್ನೊಳಗೊಂಡ ಮುಚ್ಚಿದ ಮಂಟಪವನ್ನು ಹೊಂದಿದೆ. ದೇವಾಲಯವನ್ನು ಸರಳವಾದ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದ್ದು ಭಿತ್ತಿಯ ಸರಳತೆಯನ್ನು ಮುರಿಯಲು ಮಧ್ಯ ಮಧ್ಯದಲ್ಲಿ ಅರ್ಧ ಕಂಭಗಳ ರಚನೆಯನ್ನು ಮಾಡಿದ್ದಾರೆ. ದೇವಾಲಯವು ಸುಮದರವಾದ ದ್ರಾವಿಡ ಶಿಖರವನ್ನು ಹೊಂದಿದೆ. ಮಂಟಪದ ಒಳಭಾಗದಲ್ಲಿ ಸುಂದರವಾದ ಚಚ್ಚೌಕಾಕಾರದ ಕಂಬಗಳಿಗೆ ಸುಂದರವಾದ ತರಂಗ ಬೋಧಿಗೆಗಳಿವೆ. ಇದರ ಮೇಲ್ಛಾವಣಿಯು ಅಷ್ಟದಿಕ್ಪಾಲರ ಪಟ್ಟಿಕೆಯನ್ನು ಹೊಂದಿದ್ದು ಮಧ್ಯದಲ್ಲಿ ಒಂದು ನೃತ್ಯ ಭಂಗಿಯಲ್ಲಿರುವ ಅನೇಕ ಕೈಗಳನ್ನು ಹೊಂದಿರುವ ನಟರಾಜ ಮೂರ್ತಿ ಕಂಡು ಬರುತ್ತದೆ. ದೇವಾಲಯದ ಬಾಗಿಲುವಾಡದ ಮೇಲೆ ಹಾಗೂ ಅಡ್ಡ ತೊಲೆಗಳಲ್ಲಿ **(Beams)** ವಾದ್ಯಗಳನ್ನು ನುಡಿಸುತ್ತಿರುವ ಗಣಗಳ ಸಾಲು ಕಂಡು ಬರುತ್ತದೆ. ದೇವಾಲಯದ ಮಾಡನ್ನು ಇಳಿಜಾರಾಗಿ ರಚಿಸಲಾಗಿದೆ.

ಮಾನಸ್ತಂಭ

ಮಾನಸ್ತಂಭ ಜೈನರ ವಾಸ್ತುಶಿಲ್ಪದ ಪ್ರಮುಖ ಲಕ್ಷಣವಾಗಿವೆ. ಇವು ಸಾಮಾನ್ಯವಾಗಿ ಬಸದಿಯ ಮುಂಭಾಗದಲ್ಲಿ ಹಿಂದೂ ದೇವಾಲಯದ ಧ್ವಜಸ್ತಂಭದ ಸ್ಥಾನದಲ್ಲಿ ಕಂಡು ಬರುತ್ತವೆ. ಹುಂಚದಲ್ಲಿ ಕಂಡು ಬರುವ ಈ ಮಾನಸ್ತಂಭವು ಪಂಚ ಬಸದಿಯ ಮುಂಭಾಗದಲ್ಲಿದೆ. ವಾಸ್ತುಶಿಲ್ಪ ಶೈಲಿಯ ದೃಷ್ಟಿಯಿಂದ ಇದು ಬಹಳ ಉನ್ನತವಾಗಿದೆ. ಇದರ ಎತ್ತರ ಸುಮಾರು ೫೦ ಅಡಿ. ಮಾನಸ್ತಂಭದ ಕೆಳಗಿನ ಶಿಲಾವೇದಿಕೆಯ ನಾಲ್ಕು ಮೂಲೆಗಳಲ್ಲಿ ಆನೆಗಳಿವೆ, ಮತ್ತು ಮಧ್ಯದಲ್ಲಿ ನಾಲ್ಕು ಆನೆಗಳನ್ನು ಕೆತ್ತಿದ್ದಾರೆ. ಆನೆಗಳ ನಡು ನಡುವೆ ಸಿಂಹಗಳನ್ನು ವಿವಿಧ ಭಂಗಿಗಳಲ್ಲಿ ಕೆತ್ತಲಾಗಿದೆ. ಇವುಗಳ ಮೇಲಿನ ಸಾಲಿನಲ್ಲಿ ಅಷ್ಟದಿಕ್ಪಾಲಕರನ್ನು ಅವರ ಪರಿವಾರ ಸಹಿತ ಹಾಗೂ ಸಂಗೀತವಾದ್ಯ ಗೋಷ್ಠಿಗಳೊಂದಿಗೆ ಸುಂದರವಾಗಿ ಕೆತ್ತಿದ್ದಾರೆ.

ಕಂಬದ ಕಾಂಡ ಭಾಗದಲ್ಲಿ ಶಾಸನವನ್ನು ಕೆತ್ತಿದ್ದಾರೆ. ಮಾನಸ್ತಂಭವು ತುದಿಯಲ್ಲಿ ಒಂದು ಕಲ್ಲಿನ ಮಂಟಪವನ್ನು ಹೊಂದಿದೆ. ಈ ಮಂಟಪದೊಳಗೆ ನಾಲ್ಕು ಕಡೆ ಮುಖ ಮಾಡಿದಂತೆ ನಾಲ್ಕು ಜಿನ ಬಿಂಬಗಳಿವೆ. ಅಂತೆಯೇ ಮಾನಸ್ತಂಭದ ಶಿಲಾವೇದಿಕೆಯಲ್ಲಿ ಮೂರು ಹಂತಗಳಲ್ಲಿ ಮಿಥುನ ಶಿಲ್ಪಗಳು ಬಹಳ ಸಣ್ಣ ಪ್ರಮಾಣದಲ್ಲಿ ಕೆತ್ತಲ್ಪಟ್ಟಿವೆ.

—-
(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)

[1]ಅದೇ ನಗರ ೩೬

[2]ಅದೇ ನಗರ ೨೫

[3]ಅದೇ ನಗರ ೨೬

[4]ಅದೇ ನಗರ ೪೬

[5]ಅದೇ ನಗರ ೩೮

[6]ಅದೇ ನಗರ ೧೫೯ ಕ್ರಿ.ಶ. ೧೦೭೭

[7]ಅದೇ ನಗರ ೩೮ ಮತ್ತು ೩೯ ಕ್ರಿ.ಶ. ೧೦೬೪

[8]ಅದೇ ನಗರ ೪೫ ಕ್ರಿ.ಶ. ೧೨೫೫-೫೬

[9]ಅದೇ ನಗರ ೪೬

[10]ಅದೇ ನಗರ ೪೮ ಕ್ರಿ.ಶ. ೧೦೬೨

[11]ಅದೇ ನಗರ ೬೪ ಕ್ರಿ.ಶ. ೧೦೬೨

[12]ಅದೇ ಸಂ. ೭ ಶಿಕಾರಿಪುರ ೧೩೬

[13]ಅದೇ ನಗರ ೪೮

[14]ಧಾಕೆ ಎಂ.ಎ. ಎನ್ಸೈಕ್ಲೋಪೀಡಿಯಾ ಆಫ್ ಇಂಡಿಯನ್ ಆರ್ಕಿಟೆಕ್ಚರ್ ಸೌಥ್ ಇಂಡಿಯಾ, ಅಪ್ಪರ್ ದ್ರಾವಿಡ ದೇಶ, ಅರ್ಲಿ ಫೇಸ್, ಅಮೇರಿಕನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್.

ಮಲೆಕರ್ನಾಟಕದ ಅರಸು ಮನೆತನಗಳು: ೪. ಬಂದಳಿಕೆ ಅರಸರು (೧)

ಇಂದಿನ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಒಂದು ಗ್ರಾಮವಾಗಿ ಭಗ್ನಾವಶೇಷಗಳಿಂದ ಕೂಡಿದ ಬಂದಳಿಕೆಯು ಹಿಂದಿನ ಬನವಾಸಿ ೧೨೦೦೦ದ ನಾಗರಖಂಡ ೭೦ರ ರಾಜಧಾನಿಯಾಗಿತ್ತು. ಇದನ್ನಾಳಿದ ಅರಸರನ್ನು ಬಂದಳಿಕೆ ಅರಸರು, ನಾಗರಖಂಡದ ಅರಸರು ಎಂದೆಲ್ಲ ಕರೆದಿದ್ದಾರೆ.

ಆಕರಗಳು

ಒಂದು ನಾಡಿನ ಇತಿಹಾಸ ರಚನೆಗೆ ಪ್ರಾಚ್ಯವಸ್ತುಗಳು ಹಾಗೂ ಸಾಹಿತ್ಯ ಬಹುದೊಡ್ಡ ಆಕರಗಳಾಗಿವೆ. ಶಾಸನಗಳು, ಸ್ಮಾರಕಗಳು, ದೇವಾಲಯಗಳು, ನಾಣ್ಯಗಳು ಪ್ರಾಚ್ಯವಸ್ತು ವಿಭಾಗದಲ್ಲಿಯೂ ಪುರಾಣ, ಕಾವ್ಯ, ಜನಪದ ಸಾಹಿತ್ಯ ಮುಂತಾದುವು ಸಾಹಿತ್ಯ ವಿಭಾಗದಲ್ಲಿಯೂ ಪ್ರಮುಖ ಆಕರಗಳಾಗಿ ನಿಂತಿವೆ. ಲೇಖಕರ ಮಹಾಪ್ರಬಂಧ ಈ ಎಲ್ಲದರ ನೆರವು ಪಡೆದಿದೆ.

[1]
ಶಾಸನಗಳು

ನಾಗರಖಂಡದ ಚರಿತ್ರೆಗೆ ಶಾಸನಗಳೇ ಪ್ರಮುಖ ಆಧಾರಗಳು. ಈ ನಾಡಿನ ವ್ಯಾಪ್ತಿಯಲ್ಲಿ ಉಪಲಬ್ಧ ಸುಮಾರು ೩೩೫ ಶಾಸನಗಳನ್ನು ಹಾಗೂ ಹೊರಗಿನ ಸುಮಾರು ೫೫ಕ್ಕೂ ಮಿಕ್ಕಿ ಶಾಸನಗಳನ್ನು ಈ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಈ ಕಂಪಣದ ಒಂದು ಗ್ರಾಮವಾದ

ಮಳವಳ್ಳಿಯಲ್ಲಿ ಈ ನಾಡಿನ ಅತ್ಯಂತ ಪ್ರಾಚೀನವಾದ ಸುಪ್ರಸಿದ್ಧ ಪ್ರಾಕೃತ ಶಾಸನವಿದೆ. ಇದರ ಕಾಲ ಕ್ರಿ.ಶ. ೧೫೦[2] ಈ ಮಹಾಪ್ರಬಂಧಕ್ಕೆ ಬಳಸಿಕೊಂಡ ಕೊನೆಯ ಶಾಸನ ಈ ಕಂಪಣದ ಒಂದು ಗ್ರಾಮವಾದ ಗಿಣಿವಾಲದ್ದು. ವಿಜಯನಗರ ಅರಸ ವೀರ ಸದಾಶಿವರಾಯನ ಈ ಶಾಸನದ ಕಾಲ ಕ್ರಿ.ಶ. ೧೫೫೨.[3]

ನಾಗರಖಂಡದ ಶಾಸನಗಳಲ್ಲಿ ಅರ್ಧಕ್ಕೂ ಹೆಚ್ಚಿನವು ದಾನಶಾಸನಗಳು. ಉಳಿದವು ವೀರ, ಆತ್ಮಬಲಿ, ಮಹಾಸತಿ, ನಿಷಧಿ, ಗೋಸಾಸ ಮುಂತಾದುವು. ಇವುಗಳಲ್ಲಿ ಅಲ್ಪ ಹಾಗೂ ಹೆಚ್ಚು ತೃಟಿತಗಳೂ ಎರಡು ಪಂಕ್ತಿಗಳ ಕಿರುಶಾಸನಗಳೂ ನೂರು ಪಂಕ್ತಿಗೂ ಮಿಕ್ಕಿದ ಸುದೀರ್ಘ ಶಾಸನಗಳೂ ಸೇರಿಕೊಂಡಿವೆ.

ಸ್ಮಾರಕಗಳು ಹಾಗೂ ದೇವಾಲಯಗಳು

ಇತಿಹಾಸ ರಚನೆಯಲ್ಲಿ ಸ್ಮಾರಕಗಳ ಕೊಡುಗೆ ಗಮನಾರ್ಹವಾದದ್ದು. ಶಾಸನ ಹಾಗೂ ಸಾಹಿತ್ಯಗಳಲ್ಲಿ ದೊರೆಯಲಾರದ ಎಷ್ಟೋ ವಿವರಗಳನ್ನು ಇವು ಒದಗಿಸಿ ಕೊಡಬಲ್ಲವು. ಸ್ಮಾರಕಗಳು ಅಲಿಖಿವಾದಾಗಲೂ ತಮ್ಮಲ್ಲಿಯ ಕಲಾಕೌಶಲ್ಯದಿಂದ ಹೆಚ್ಚಿನ ವಿವರಗಳನ್ನು ನೀಡಬಲ್ಲ ಸಾಮರ್ಥ್ಯ ಹೊಂದಿರುತ್ತವೆ. ಮಳವಳ್ಳಿ, ಚಿಕ್ಕೇರೂರುಗಳಲ್ಲಿರುವ ಮಹಾಸತಿ ಕಲ್ಲುಗಳು ಈ ಮಾಲೆಗೆ ನಿದರ್ಶನವಾಗಿವೆ. ಇವು ಒಂದು ನಟವರ ಇನ್ನೊಂದು ಕುಂಬಾರ ಮನೆತನಕ್ಕೆ ಸೇರಿದವು ಆಗಿವೆ.

ದೇವಾಲಯಗಳನ್ನು ಸ್ಮಾರಕಗಳಲ್ಲಿಯೇ ಪರಿಗಣಿಸಲಾಗುತ್ತದೆ. ನಾಗರಖಂಡದಲ್ಲಿ ಶಾಸನೋಕ್ತ ದೇವಾಲಯಗಳು ೮೩ ಇವೆ. ಅನುಕ್ತ ದೇವಾಲಯಗಳೂ ಸಾಕಷ್ಟು ಇವೆ. ದೇವಾಲಯಗಳಲ್ಲಿಯ ವಿಗ್ರಹಗಳಲ್ಲದೆ ಪ್ರತಿ ಊರುಗಳಲ್ಲಿ ಚದುರಿಕೊಂಡಿರುವ ವಿಗ್ರಹಗಳಿಗೆ ಲೆಕ್ಕವೇ ಇಲ್ಲ. ಇವುಗಳ ಅಧ್ಯಯನ ಆ ಕಾಲದ ಜನಜೀವನದ ರೀತಿ, ನೀತಿ, ಕಲಾಕೌಶಲ್ಯ ಮುಂತಾದ ವಿಷಯಗಳ ಪರಿಚಯ ಮಾಡಿಕೊಡುತ್ತವೆ.

ಸಾಹಿತ್ಯ

ನಾಗರು ಮತ್ತು ನಾಗರಖಂಡದ ಚರಿತ್ರೆಗೆ ವೇದ ಪುರಾಣ ಮುಂತಾದ ಆರ್ಷಸಾಹಿತ್ಯವಲ್ಲದೆ ಕಲ್ಹಣನ 'ರಾಜತರಂಗಿಣಿ'ಯಂಥ ಸಂಸ್ಕೃತ ಕಾವ್ಯಗಳೂ ಕೆಲವು ಕನ್ನಡ ಕಾವ್ಯಗ್ರಂಥಗಳೂ, ಇತಿಹಾಸ ಮತ್ತು ಧರ್ಮ ಕುರಿತಂತೆ ಇಂಗ್ಲೀಷ ಗ್ರಂಥಗಳೂ ಕೊಡುಗೆ ಇತ್ತಿವೆ. ಇಲ್ಲಿ ಅನೇಕ ಶಾಸನ ಕವಿಗಳೂ, ಏಕಾಂತ ರಾಮಯ್ಯನಂಥ ವಚನಕಾರ, ಸರ್ವಜ್ಞನಂಥ ಜನಪದ ಕವಿ ಆಗಿ ಹೋಗಿದ್ದಾರೆ. ಜನಪದ ಕಾವ್ಯವೊಂದು ಬಿಜ್ಜಮಹಾದೇವಿ ಚರಿತ್ರೆಗೆ ಆಧಾರ ಒದಗಿಸಿದೆ. ವಿದೇಶಿ ಪ್ರವಾಸಿಗರ ಬರಹಗಳೂ ಸಂದರ್ಭಾನುಸಾರ ಬಳಕೆಯಾಗಿವೆ.

ಬಂದಳಿಕೆ (ನಾಗರಖಂಡ) ಕುರಿತ ಅಧ್ಯಯನಗಳು

ಬಂದಳಿಕೆ ಅರಸರನ್ನೇ ವಿಷಯವಾಗಿಟ್ಟುಕೊಂಡು ಇದುವರೆಗೆ ಹೇಳಿಕೊಳ್ಳುವಂಥ ಯಾವುದೇ ಸ್ವತಂತ್ರ ಕೃತಿಗಳೂ ಪ್ರಕಟವಾಗಿರುವುದಿಲ್ಲ. ಶಿರಾಳಕೊಪ್ಪದ ಪ್ರಾಥಮಿಕ ಶಾಲಾ ಶಿಕ್ಷಕರಾಗಿದ್ದ ಎಸ್. ಭೀಮಪ್ಪನವರು 'ಪುಣ್ಯಕ್ಷೇತ್ರ ಬಂದಳಿಕೆ' ಎಂಬ ಪರಿಚಯಾತ್ಮಕ ಕಿರುಪುಸ್ತಕವನ್ನು ೧೯೭೩ರಲ್ಲಿ ಪ್ರಕಟಿಸಿದ್ದಾರೆ. ಇದು ಸಂಶೋಧನಾ ಕೃತಿಯಲ್ಲ.

ಬಿ.ಎಲ್. ರೈಸರ *'ಮೈಸೂರ ಎಂಡ ಕೂರ್ಗ ಪ್ರಾಮ ಇನ್‌ಸ್ಕ್ರಿಪ್ಷನ್ಸ'* ಹಾಗೂ ಜಿ.ಎಂ. ಮೊರೇಸ್ರವರ 'ಕದಂಬ ಕುಲ' ಕೃತಿಗಳಲ್ಲಿ ನಾಗರಖಂಡದ ಬಂದಳಿಕೆ ಅರಸರ ಪ್ರಸ್ತಾಪವಿದೆ. ಇವು ಸಂಶೋಧನಾತ್ಮಕ ಕೃತಿಗಳಾಗಿದ್ದರೂ ಇವುಗಳ ಮುಖ್ಯ ವಿಷಯ ಬಂದಳಿಕೆಯಲ್ಲ. ಆದ್ದರಿಂದ

ಸಮಗ್ರ ಕೃತಿಯಲ್ಲಿ ಕೇವಲ ೪, ೬ ಪುಟಗಳು ಬಂದಳಿಕೆಗೆ ಮೀಸಲಾಗಿವೆ. ಪರಿಮಿತ ಶಾಸನಗಳನ್ನು ಬಳಸಿಕೊಂಡು ಈ ಲೇಖನಗಳು ಸಿದ್ಧವಾಗಿರುವುದರಿಂದ ಅಲ್ಲಿಂದೀಚೆಗೆ ಹೊಸ ಶಾಸನಗಳನೇಕ ಬೆಳಕಿಗೆ ಬಂದಿರುವುದರಿಂದ ಹೊಸ ಹೊಸ ಸಂಶೋಧನೆಗಳು ಆಗಿರುವುದರಿಂದ ಅಂದಿನ ಇವರ ಹೇಳಿಕೆಗಳು ಪರಿಷ್ಕಾರಗೊಳ್ಳಬೇಕಾಗುತ್ತದೆ. ಆದರೆ ಈ ವಿಷಯ ಕುರಿತು ಪ್ರಾರಂಭದಲ್ಲಿ ಅಧಿಕೃತವಾಗಿ ಪ್ರಸ್ತಾಪ ಮಾಡಿದ ಶ್ರೇಯಸ್ಸು ಈ ಕೃತಿಗಳಿಗೆ ಸಲ್ಲುತ್ತದೆ.

ಹಯವದನರಾವ್ ಅವರ 'ಮೈಸೂರ ಗೆಝೆಟಿಯರ್' ದಲ್ಲಿ ಈ ವಿಷಯದ ಹಾಗೂ ಈ ಪ್ರದೇಶದ ಪ್ರೇಕ್ಷಣೀಯ ಸ್ಥಳಗಳ ಪರಿಚಯ ಮೂಡಿ ಬಂದಿದೆ.

ಒಬ್ಬಿಬ್ಬರು ವಿದ್ವಾಂಸರು ತಮ್ಮ ಕೃತಿಗಳಲ್ಲಿ ಸಾಂದರ್ಭಿಕವಾಗಿ ಮಾತ್ರ ನಾಗರಖಂಡ ಪ್ರದೇಶವನ್ನು ಅದರ ರಾಜಧಾನಿಯನ್ನು ಗುರುತಿಸುವ ಪ್ರಯತ್ನಗಳನ್ನು ಮಾಡಿರುತ್ತಾರೆ.**[4]** ಇವೂ ಸಹ ನಿರ್ದಿಷ್ಟವಾದುವು ಆಗಿರುವುದಿಲ್ಲ.

ಡಾ. ಭೋಜರಾಜ ಪಾಟೀಲರ 'ನಾಗರಖಂಡ ೭೦, ಒಂದು ಅಧ್ಯಯನ ಎಂಬ ಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧವೊಂದೇ ಈ ದಿಶೆಯಲ್ಲಿ ಮಾಡಲಾದ ಗಂಭೀರ ಅಧ್ಯಯನದ ಸಂಶೋಧನಾತ್ಮಕ ಗ್ರಂಥವಾಗಿದೆ. ಇದರಲ್ಲಿ ನಾಗರಖಂಡ ಹೆಸರಿನ ಬಗೆಗೂ ನಾಗಜನಾಂಗದ ಬಗೆಗೂ ವಿವರಗಳು ಇರುವುದಲ್ಲದೆ ಕ್ರಿಸ್ತಶಕ ಪ್ರಾರಂಭದಿಂದ ವಿಜಯನಗರ ಕಾಲದವರೆಗಿನ ನಾಗರಖಂಡ ಚರಿತ್ರೆ ಬೆಳಕಿಗೆ ಬಂದಿದೆ.

ನಾಗರಖಂಡದ ಕಿರುಪರಿಚಯ

ನಾಗರಖಂಡದ ರಾಜಕೀಯ ಚರಿತ್ರೆಗೆ ಹಿನ್ನೆಲೆಯಾಗಿ ಈ ಕಂಪಣದ ಕಿರುಪರಿಚಯ ಅವಶ್ಯವೆನ್ನಿಸುವುದರಿಂದ ಅದನ್ನಿಲ್ಲಿ ಮಾಡಲಾಗಿದೆ.

ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗದಲ್ಲಿ ಒಂದು ಕಂಪಣವು ನಾಗರಬಂಡ. ವಿಶಾಲ ಕುಂತಳದೇಶದ ಹಲವು ಮಂಡಲಗಳಲ್ಲಿ ವಿಖ್ಯಾತಿ ವೆತ್ತ ಬನವಾಸಿ ೧೨೦೦೦ ದಲ್ಲಿ ಪ್ರಸ್ತುತ ಕಂಪಣ ಸಮಾವೇಶವಾಗಿತ್ತು. (ನಕಾಶೆ ನೋಡಿ)

ವಿಜಯನಗರ ಸಾಮ್ರಾಜ್ಯ ಪ್ರಾರಂಭ ಪೂರ್ವದಲ್ಲಿ ಬನವಾಸಿ ಮಂಡಲದಲ್ಲಿಯ ೧೮ ಕಂಪಣಗಳನ್ನೊಳಗೊಂಡು ಗುತ್ತಿ (ಚಂದ್ರಗುತ್ತಿ)ಯು ಒಂದು ಪ್ರತ್ಯೇಕ ಆಡಳಿತ ವಿಭಾಗವಾಗಿ ರೂಪುಗೊಂಡಿತ್ತು. ಆಗ ನಾಗರಖಂಡ ಕಂಪಣ ಇದರಲ್ಲಿ ಒಂದಾಗಿದ್ದಿತ್ತು.

ಇಂದಿನ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ, ಸೊರಬ ಹಾಗೂ ಹಾವೇರಿ ಜಿಲ್ಲೆಯ ಹಿರೇಕೆರೂರು, ಹಾನಗಲ್ಲ ತಾಲ್ಲೂಕುಗಳು ಸಂಧಿಸುವಲ್ಲಿಯ ಪ್ರದೇಶದಲ್ಲಿ ನಾಗರಖಂಡ ಕಂಪಣವನ್ನು ಗುರುತಿಸಬಹುದು. ನಾಗರಖಂಡ ಕಂಪಣ ಪ್ರಾಚೀನ ಕಾವ್ಯ ಹಾಗೂ ಶಾಸನಗಳಲ್ಲಿ ಉಲ್ಲೇಖಗೊಂಡಿದೆ.

ಕುಪಟೂರಿನ ಒಂದು ಶಾಸನವು ನಾಗರಖಂಡವನ್ನು ಮೌರ್ಯ ಚಂದ್ರಗುಪ್ತನು ಪರಿಪಾಲಿಸುತ್ತಿದ್ದನೆಂದು ಹೇಳುತ್ತದೆ.**[5]**ಇದರಿಂದ ನಾಗರಖಂಡವು ಕ್ರಿ.ಪೂ. ೩ ಇಲ್ಲವೆ ೨ನೆಯ ಶತಮಾನದಲ್ಲಿಯೇ ಅಸ್ತಿತ್ವದಲ್ಲಿದಂತೆ ಕಂಡು ಬರುತ್ತದೆ. ಆದರೆ ಈ ಶಾಸನದ ಕಾಲ ಕ್ರಿ.ಶ. ೧೩೪೦.

ಈ ಕಂಪಣವನ್ನು ಖಚಿತವಾಗಿ ಉಲ್ಲೇಖಿಸುವ ಪ್ರಾಚೀನ ಶಾಸನ ಬಳ್ಳಿಗಾವೆಯದು.[6]ಇದರ ಕಾಲ ಕ್ರಿ.ಶ. ೬೮೫. ಈ ಶಾಸನೋಕ್ತ ಸೇಂದ್ರಕ ಅರಸನಾದ ಪೊಗಿಲ್ಲಿಯು 'ನಾಯರ್ಖಂಡ' ಮತ್ತು 'ಜಿಡಗೂರು' ಕಂಪಣಗಳನ್ನು ಏಕಕಾಲಕ್ಕೆ ಬಳ್ಳಿಗಾವೆಯಿಂದ ಆಳುತ್ತಿದ್ದನು. ಆದ್ದರಿಂದ ಬಾದಾಮಿ ಚಾಲುಕ್ಯರ ಕಾಲದಿಂದ ಈ ಕಂಪಣ ಅಸ್ತಿತ್ವದಲ್ಲಿದ್ದುದು ನಿರ್ವಿವಾದ. ಆದರೆ ಇದಕ್ಕೂ ಪೂರ್ವದಲ್ಲಿಯೇ ಈ ಕಂಪಣ ಊರ್ಜಿತವಾಗಿತ್ತೆಂದು ನಂಬಲರ್ಹ ಆಧಾರಗಳೂ ಇವೆ.

ಶಾತವಾಹನರು ೩ನೆಯ ಶತಮಾನದಲ್ಲಿ ಅಸ್ತಂಗತರಾದಾಗ ಕರ್ನಾಟಕದ ಪಶ್ಚಿಮ ಭಾಗದಲ್ಲಿ ಬನವಾಸಿಯನ್ನು ಅವರ ಸಾಮಂತರೇ ಆದ ಚುಟುಗಳು ಆಳಿದರೆ ಅವರ ಸೀಮೆಗೆ ಹೊಂದಿಕೊಂಡಿದ್ದ ಸೇಂದ್ರಕ ವಿಷಯವನ್ನು ಸೇಂದ್ರಕರು ಆಳುತ್ತಿದ್ದರು.[7]ಇದರಲ್ಲಿ ನಾಗರಖಂಡ, ಜಿಡುಗೂರುಗಳು ಸೇರ್ಪಡೆಯಾಗಿದ್ದುದನ್ನು ಬಳ್ಳಿಗಾವೆ ಶಾಸನ ಹೇಳಿದೆ. 'ಭುಜಗೇಂದ್ರಾನ್ವಯ' ರೆಂದು ನಿಚ್ಚಳವಾಗಿ ಹೇಳಿಕೊಳ್ಳುವ ಸೇಂದ್ರಕರು ನಾಗವಂಶಜರು. ಇವರು ೩ನೆಯ ಶತಮಾನದಿಂದ ಆಳುತ್ತಿದ್ದುದಾಗಿ ತಿಳಿದು ಬಂದಿರುವುದರಿಂದ ಇವರ ಕಾಲಕ್ಕೆ ನಾಗರಖಂಡ ಕಂಪಣ ಊರ್ಜಿತವಾಗಿರಬಹುದಾಗಿದೆ.

ನಾಗರಖಂಡದ ಉಲ್ಲೇಖಗಳು

ಕನ್ನಡ ಮತ್ತು ಸಂಸ್ಕೃತ ಗ್ರಂಥಗಳಲ್ಲಿ 'ನಾಗರಖಂಡ' ವಿರಳವಾಗಿ ಉಲ್ಲೇಖಗೊಂಡಿದೆ. ಅಲ್ಲಿ ಪ್ರದೇಶವಾಚಕವಾಗಿಯೂ ಇತರರ್ಥಗಳಲ್ಲಿಯೂ ಇದು ಬಳಕೆಯಾಗಿದೆ.

ನಾಗರಖಂಡ ಪ್ರದೇಶಕವಾಚಕವಾಗಿ ನಿರ್ದಿಷ್ಟ ಬಳಕೆಯಾಗಿರುವ ಪ್ರಕಟಿತ ಕಾವ್ಯವೆಂದರೆ 'ಅಬ್ಬಲೂರು ಚರಿತ್ರೆ'. ಕ್ರಿ.ಶ. ೧೬೫೦ರಲ್ಲಿ ಕವಿ ಶಾಂತ ನಿರಂಜನ ಈ ಕೃತಿ ರಚಿಸಿದ್ದಾನೆ. ಇದರ ಸಂಧಿ ೨, ಪದ್ಯ ೨೦ ರಲ್ಲಿ 'ನಾಗರಖಂಡ ದೇಶ' ವೆಂದು ಸ್ಪಷ್ಟ ಉಲ್ಲೇಖವಿದೆ. ಹಾಗೂ ಇದು ಪ್ರಸ್ತುತ ನಾಗರಖಂಡಕ್ಕೆ ಅನ್ವಯವಾಗುತ್ತದೆ.

ಕೊಡೆಕಲ್ ರಾಚಪ್ಪಯ್ಯ ಕವಿಯ ಅಪ್ರಕಟಿತ ಕೃತಿ 'ಮಾಯಾ ಸಾಂಗತ್ಯ' ದಲ್ಲಿಯೂ 'ನಾಗರಖಂಡ' ದೇಶವಾಚಕವಾಗಿಯೂ ಇದಕ್ಕೆ ಸಂಬಂಧಿಸಿದಂತೆಯೂ ಬಳಕೆಯಾಗಿದೆ.[8]

ಕರ್ನಾಟಕದಲ್ಲಿ ಕದಂಬ ಸಾಮ್ರಾಜ್ಯ ಸ್ಥಾಪನೆಯಾಗುವ ಪೂರ್ವದಲ್ಲಿ ಬನವಾಸಿ ಹಾಗೂ ಬಳ್ಳಿಗಾವೆ ಪ್ರದೇಶದಲ್ಲಿ ಅನೇಕ ಚಿಕ್ಕಪುಟ್ಟ ನಾಗಾರಾಜ್ಯಗಳು ಇದ್ದುದಾಗಿ ಕಂಡುಬರುತ್ತದೆ.[9]ಚುಟುಗಳು, ಸೇಂದ್ರಕರು, ಸೇನವಾರರು, ಸಿಂಧರು, ಜಿಮೂತವಾಹನರು ನಾಗವಂಶೀಯರೇ ಆಗಿದ್ದರು. ಇಂಥ ನಾಗವಂಶೀಯರ ಸ್ವತ್ತಿನಲ್ಲಿದ್ದ ಭೂಭಾಗವೆ 'ನಾಗರಖಂಡ'. ಇದನ್ನಾಳಿದ ಸೇಂದ್ರಕರು ನಿಶ್ಚಯಾರ್ಥದಲ್ಲಿ ನಾಗವಂಶೀಯರೆ ಆಗಿದ್ದರು.

ನಾಗರಖಂಡ ೭೦ ರ ಮೇರೆಗಳು

೧. ಉತ್ತರಕ್ಕೆ ಪಾನುಂಗಲ ೫೦೦, ಈಶಾನ್ಯಕ್ಕೆ, ಬಾಸೂರು ೧೪೦ (ಇವು ಕ್ರಮವಾಗಿ ಹಾನಗಲ್ಲ ಹಾಗೂ ಬ್ಯಾಡಗಿ ತಾಲೂಕುಗಳ ದಕ್ಷಿಣಕ್ಕಿವೆ.)

೨. ಪೂರ್ವಕ್ಕೆ ಮುಳಗುಂದ ೧೨, ಸತ್ತಳಿಗೆ ೭೦ (ಇವು ಹಿರೇಕೆರೂರು ತಾಲೂಕಿನ ಉತ್ತರಕ್ಕಿವೆ).

೩. ದಕ್ಷಿಣಕ್ಕೆ ಬಳ್ಳಿಗಾವೆ ಪ್ರದೇಶ, ನೈಋತ್ಯಕ್ಕೆ ಜಿಡ್ಡುಳಿಗೆ ೭೦ (ಇವು ಶಿಕಾರಿಪುರ ತಾಲೂಕಿನ ಉತ್ತರದಲ್ಲಿವೆ).

೪. ಪಶ್ಚಿಮಕ್ಕೆ ಎಡೆನಾಡು ೭೦, ವಾಯುವ್ಯಕ್ಕೆ ವರದಾನದಿ. (ಇದು ಸೊರಬ ತಾಲೂಕ ಉತ್ತರ, ಪಶ್ಚಿಮ ಮೇರೆಯಾಗಿದೆ).

ನಾಗರಖಂಡ ೭೦ ರ ಶಾಸನೋಕ್ತ ಪರಿಚಿತ ಗ್ರಾಮಗಳು

ಹಾನಗಲ್ಲ ತಾಲೂಕ	೧. ತಿಳುವಳ್ಳಿ. ೨. ಕಿರವಾಡಿ.
ಹಿರೇಕೆರೂರ ತಾಲೂಕ	೩. ಎಮ್ಮಿಗನೂರು. ೪. ಕಚವಿ. ೫. ಮಡಲೂರು. ೬. ಸಾತೇನಹಳ್ಳಿ ೭. ಚಿಕ್ಕ ಹಾಗೂ ಹಿರೇ ಕೊಣತಿಗಳು. ೮. ಮುದ್ದಿನ ಕೊಪ್ಪ, ೯. ಹಂಸಬಾವಿ ೧೦. ಮತ್ತೀಹಳ್ಳಿ. ೧೧. ಅಬಲೂರು. ೧೨. ಚಕ್ಕೇರೂರು. ೧೩. ಚಿಕ್ಕಮಾಗಡಿ ೧೪. ಗೊಡಚಿಕೊಂಡ
ಶಿಕಾರಿಪುರ ತಾಲೂಕ	೧೫. ಮಲ್ಲೇನಹಳ್ಳಿ ೧೬. ಮಳವಳ್ಳಿ ೧೭. ಕರ್ನೆಲ್ಲಿ ೧೮. ಮಾಯಿತಮ್ಮನ ಮಚಡಿ ೧೯. ಬಿಳಕಿ ೨೦. ಕಣಸೋಗೆ ೨೧. ಚಿಕ್ಕಮಾಗಡಿ ೨೨. ಅಗ್ರಹಾರ ಮಚಡಿ ೨೩. ಬಂದಳಿಕೆ ೨೪. ಸೀರಿಹಳ್ಳಿ ೨೫. ಮುತ್ತಳ್ಳಿ.
ಸೊರಬ ತಾಲೂಕ	೨೬. ಹಿರೇಮಾಗಡಿ ೨೭. ತೆವರತೆಪ್ಪ ೨೮. ಆನವಟ್ಟಿ ೨೯. ಕುಪಟೂರು ೩೦. ಕೋಟೆಕೊಪ್ಪ ೩೧. ಅಗಸನಹಳ್ಳಿ ೩೨. ತೊರೆವಂದ ೩೩. ದಡ್ಡೀಕೊಪ್ಪ ೩೪. ಮೂಡಿ ೩೫. ಬೆಣಗೇರಿ ೩೬. ಕುಣಿತೆಪ್ಪ ೪೦. ಬಾರಂಗಿ ೪೧. ದಂಡಗಿಹಳ್ಳಿ ೪೨. ತಳವೆ ೪೩. ಲಕ್ಕುವಳ್ಳಿ ೪೪. ಹುರಳಿ ೪೫. ನೇರಲಿಗೆ ೪೬. ಹಿರೇಚೌಟಿ ೪೭. ಚಿಕ್ಕಚೌಟಿ ೪೮. ಮಲ್ಲಾಪುರ ೪೯. ಗಂಗವಳ್ಳಿ
ಶಾಸನೋಕ್ತ ಅಪರಿಚಿತ ಗ್ರಾಮಗಳು	೫೦. ಮರುವಸೆ ೫೧. ಮುತಿಗನಹಳ್ಳಿ ೫೨. ಕುಂದಂಗಿ ೫೩. ಭಾತಿ ೫೪. ಹಾರುವದೆಪ್ಪ ೫೫. ಮೂರಿಗನಹಳ್ಳಿ ೫೬. ಎಕ್ಕಟೆ ೫೭. ಮದನಾಗಬಳಿ ೫೮. ಕೊಡಂಗೆಯೂರು

ರಾಜಕೀಯ ಚರಿತ್ರೆ

ಯಾವುದೊಂದು ಕಂಪಣದ ರಾಜಕೀಯ ಚರಿತ್ರೆ ಗಮನಿಸಿದರೆ ಅದರ ಉನ್ನತ ಸ್ಥರದಲ್ಲಿ ಚಕ್ರವರ್ತಿಗಳ, ಮಧ್ಯಮ ಸ್ಥರದಲ್ಲಿ ಮಹಾಮಂಡಳೇಶ್ವರರ ಪ್ರಥಮ ಸ್ಥರದಲ್ಲಿ ಕಂಪಣದ ಮಂಡಳೇಶ್ವರ (ನಾಳ್ಗಾವುಂಡುರ) ಆಡಳಿತ ನಡೆದಿರುವುದು ಸುಸ್ಪಷ್ಟವಾಗಿ ಕಂಡು ಬರುತ್ತದೆ. ಇದನ್ನೇ ಸಾಮ್ರಾಜ್ಯಮಟ್ಟ, ಮಂಡಲಮಟ್ಟ, ಕಂಪಣಮಟ್ಟ ಎಂದು ಹೆಸರಿಸಬಹುದು. ಇದರಲ್ಲಿ ಪ್ರಥಮಸ್ಥರದ ನಾಳ್ಗಾವುಂಡರೆ ಕಂಪಣ ಮಟ್ಟದ ಪ್ರತ್ಯಕ್ಷ ಆಡಳಿತಗಾರರು.

ನಾಗರಖಂಡವನ್ನು ಸಾಮ್ರಾಟರ ಮಟ್ಟದಲ್ಲಿ ಕರ್ನಾಟಕವನ್ನಾಳಿದ ಕದಂಬರಿಂದ ವಿಜಯನಗರದವರೆಗಿನ ಚಕ್ರವರ್ತಿಗಳು, ಮಂಡಲಮಟ್ಟದಲ್ಲಿ ಚುಟುಗಳು, ಸೇಂದ್ರಕರು, ಸೇನವಾರರು, ಮಾಟೂರು ಹಾಗೂ ಚಲ್ಲಕೇತನವಂಶೀಯರು ಮಹಾಮಂಡಳೇಶ್ವರರು ರಾಜಕೀಯ ಮಾಡಿದರು. ಇವರಲ್ಲಿ ಸೇಂದ್ರಕರು ಮಾತ್ರ ನಾಗರಖಂಡವನ್ನು ನೇರವಾಗಿಯೂ ಆಳಿದರು.

ನಾಗರಖಂಡ ಕಂಪಣದ ರಾಜಕೀಯ ಚರಿತ್ರೆಯನ್ನು ಎರಡು ಘಟ್ಟಗಳಲ್ಲಿ ನೋಡಬೇಕಿದೆ. ಕ್ರಿ.ಶ. ೬೮೫ ರಿಂದ ಕ್ರಿ.ಶ. ೯೮೬ ರವರೆಗೆ ಪ್ರಥಮ ಘಟ್ಟ. ಈ ಗಡುವಿನಲ್ಲಿ ವಿವಿಧ ಅರಸುಮನೆತನಗಳ ಆಡಳಿತಕ್ಕೆ ಈ ಕಂಪಣ ಒಳಗಾಗಿದೆ. ಇವರ ಚರಿತ್ರೆಯಾದರೊ ಒಂದು ಕ್ರಮದಲ್ಲಿ ನಿರಂತರವಾಗಿ ಪ್ರಾಪ್ತವಾಗಿರುವುದಿಲ್ಲ. ದ್ವಿತೀಯ ಘಟ್ಟದಲ್ಲಿ ಬಂದಳಿಕೆ ಕದಂಬ ವಂಶದ ಚರಿತ್ರೆ ೧೪೪೨ರವರೆಗೂ ಸಾಗಿ ಬರುತ್ತದೆ. ಇದರ ಮುಕ್ತಾಯದಲ್ಲಿ ಕದಂಬ ವಂಶದವರಲ್ಲದ ಒಬ್ಬಿಬ್ಬರು ಕಾಣಿಸಿಕೊಳ್ಳುತ್ತಾರೆ.

ಪ್ರಥಮ ಘಟ್ಟದ ಅರಸರು

ಪೊಗಿಲ್ಲಿ (ಕ್ರಿ.ಶ. ೬೮೫)
(ಅನಾಮಧೇಯ) (ಕ್ರಿ.ಶ. ೭೦೦)
ಮಾದೋರ ಅಲಮಾರ (ಕ್ರಿ.ಶ. ೭೬೦)
ಆದಿಗಾವುಂಡ (ಕ್ರಿ,ಶ.೭೬೦-೭೯೦ ರ ಮದ್ಯ)
ಪೀಗ (ಕ್ರಿ.ಶ. ೭೯೩-೮೧೪)
ನಾಗಾರ್ಜುನ (ಕ್ರಿ.ಶ. ೯೦೨)
ಜಕ್ಕಿಯಬ್ಬೆ (ಕ್ರಿ.ಶ. ೯೧೨-೯೧೮)
ಮಾರಸಿಂಗ (ಕ್ರಿ.ಶ. ೯೨೯)
ಎರಚಟ್ಟ (ಕ್ರಿ.ಶ. ೯೫೦)
ಎರೆಯ (ಕ್ರಿ.ಶ. ೯೫೭-೯೬೦)

ಮೇಲೆ ಕಾಣಿಸಿದ ೧೦ ಜನ ಅರಸರಲ್ಲಿ ಪೊಗಿಲ್ಲಿ, ನಾಗಾರ್ಜುನ, ಜಕ್ಕಿಯಬ್ಬೆ ಮಾತ್ರ ಉಲ್ಲೇಖಾರ್ಹರಾಗಿದ್ದಾರೆ.

ಪೊಗಿಲ್ಲಿ : ನಾಗರಖಂಡದ ಪ್ರಥಮ ಉಪಲಬ್ಧ ದೊರೆ.[10] ಇವನು ಸೇಂದ್ರಕ ಅರಸನಾಗಿರುವುದು ವಿಶೇಷ. ಇವರದೊಂದು ವಂಶ ನಾಗರಖಂಡವನ್ನು ನೇರವಾಗಿ ಆಳುತ್ತಿದ್ದಿತ್ತೆಂಬುದಕ್ಕೆ ಇವನೇ ಆಧಾರ. ಬಾದಾಮಿ ಚಾಳುಕ್ಯ ಚಕ್ರವರ್ತಿ ವಿನಯಾದಿತ್ಯನಿಗೆ ಮಾಂಡಲಿಕನಾಗಿ ಬಳ್ಳಿಗಾವೆಯಿಂದ ಇದನ್ನೂ ಜಿಡಗೂಡು ಕಂಪಣವನ್ನೂ ಪರಿಪಾಲಿಸಿದನು.

ನಾಗಾರ್ಜುನ : (ಕ್ರಿ.ಶ. ೯೦೨) ಪೀಗನ ಅನಂತರದಲ್ಲಿ ಒಂದು ಶತಮಾನ ಕಳೆದ ಮೇಲೆ ನಾಗಾರ್ಜುನ ಕಂಡುಬರುತ್ತಾನೆ.[11]ಈತ ಶಂತರ ವಂಶಕ್ಕೆ ಸೇರಿದವನೂ ಜೈನಧರ್ಮೀಯನೂ ಆಗಿದ್ದನು.

ರಾಷ್ಟ್ರಕೂಟ ಎರಡನೆಯ ಕೃಷ್ಣನ ಮಹಾಮಂಡಳೇಶ್ವರನಾದ ಚಲ್ಲಕೇತನ ವಂಶದ ಲೋಕಟೆಯರಸ ಈ ಕಾಲದಲ್ಲಿ ಬನವಾಸಿ ಮಂಡಲ ಆಳುತ್ತಿದ್ದ. ಇವನ ಪೆರ್ಗಡೆ ಬಿಟ್ಟಯ್ಯ ಬಂದಳಿಕೆಯಲ್ಲಿ ಬಸದಿಯೊಂದನ್ನು ನಿರ್ಮಿಸಿದ ಅದಕ್ಕೆ ಲೋಕಟೆಯರಸ ನಾಗರಖಂಡದ ದಂಡಪಳ್ಳಿ ಗ್ರಾಮವನ್ನು ದತ್ತಿಯಾಗಿಕೊಟ್ಟನು. ಚಲ್ಲಕೇತನವಂಶದ ಕಲಿವಿಟ್ಟರಸನ ಬೆಸನ ಪರಿಪಾಲಿಸುವಲ್ಲಿ ನಾಗಾರ್ಜುನ ವೀರಮರಣ ಹೊಂದಿದನು. ರಾಷ್ಟ್ರಕೂಟದ ೨ನೆಯ ಕೃಷ್ಣನಿಗೆ ಅನೇಕ ಯುದ್ಧಗಳಲ್ಲಿ ಈತ ನೆರವಾಗಿದ್ದನು.[12]

ಜಕ್ಕಿಯಬ್ಬೆ : (ಕ್ರಿ.ಶ. ೯೧೨-೯೧೮) ನಾಗರಖಂಡವನ್ನಾಳಿದ ಏಕೈಕ ಮಹಿಳೆ. ಇವಳು ನಾಗಾರ್ಜುನನ ರಾಣಿ. ಉತ್ತಮ ಪ್ರಭುಶಕ್ತಿಯುಳ್ಳವಳೂ ಜಿನಭಕ್ತಳೂ ಆದ ಜಕ್ಕಯಬ್ಬೆ ದೇಹಕ್ಕಾದ ವ್ಯಾಧಿಯನ್ನು ತಡೆಯಲಾಗದೆ ಬಂದಣಿಕೆಯ ತೀರ್ಥದಲ್ಲಿ ಸಮಾಧಿ ಮರಣದಿಂದ ಮುಕ್ತಿ ಹೊಂದಿದಳು.[13]

ಎರಡನೆಯ ಘಟ್ಟದಲ್ಲಿ ಬಂದಳಿಕೆ ಕದಂಬ ಅರಸರ ಆಡಳಿತ ಪ್ರಾರಂಭವಾಗುತ್ತದೆ. ಇಲ್ಲಿಯವರೆಗೆ ಕರ್ನಾಟಕದ ಒಳಗೂ ಹೊರಗೂ ಒಟ್ಟು ೧೩ ಕದಂಬ ಶಾಖೆಗಳು ಆಡಳಿತ ನಡೆಸಿದ್ದುದು ಬೆಳಕಿಗೆ ಬಂದಿದೆ. ಇವರಲ್ಲಿ ಬಂದಳಿಕೆ ಕದಂಬರದು ಸುದೀರ್ಘ ಶಾಖೆಯಾಗಿದೆ. ಇವರಿಗೆ ನಾಗರಖಂಡ ಕದಂಬರೆಂದೂ ಪರ್ಯಾಯ ನಾಮ. ಇವರ ವಂಶಾವಳಿ ನಿರೂಪಿಸುವಲ್ಲಿ ಬೆಣ್ಣೆಗೇರಿ.**[14]** ಬಂದಳಿಕೆ,**[15]**ಚಿಕ್ಕಮಾಗಡಿ**[16]** ಶಾಸನಗಳು ಪ್ರಮುಖವಾಗಿವೆ.

ಬಂದಳಿಕೆ ಕದಂಬ ವಂಶಾವಳಿಯಲ್ಲಿ ಎರಡು ಹಂತಗಳಿವೆ. ಪೌರಾಣಿಕ ಪುರುಷನಿಂದಾರಂಭಿಸಿ ಮೈಲನವರೆಗೆ ಒಂದು ಹಂತ. ಬೋಡಯ್ಯನಿಂದ ಮುಂದೆ ೨ನೆಯ ಹಂತ. ಮೊದಲ ಹಂತ ಬಂದಳಿಕೆಯ ಏಕೈಕ ಶಾಸನದಲ್ಲಿಯೂ ೨ನೆಯ ಹಂತ ಹಲವಾರು ಶಾಸನಗಳಲ್ಲಿಯೂ ಕಂಡುಬರುತ್ತದೆ. ಸೋಯಿದೇವನ ಪುತ್ರ ಬೊಪ್ಪದೇವನಿಂದ ಮುಂದಿನವರ ಹೆಸರುಗಳು ಬಿಡಿಬಿಡಿಯಾಗಿ ಕಂಡು ಬಂದಿವೆ. ಇವೆಲ್ಲವನ್ನೂ ಕ್ರೋಢೀಕರಿಸಿ ವಂಶಾವಳಿಯ ಒಂದು ಒಟ್ಟು ನೋಟ ಕೊಡಲು ಮೇಲೆ ಪ್ರಯತ್ನಿಸಲಾಗಿದೆ.

ಕೀತಿವರ್ಮ ಮತ್ತು ಆಯ್ತುವರ್ಮ: ರಾಜಮನೆತನಗಳು ತಮ್ಮ ವಂಶಾವಳಿ ಆರಂಭವನ್ನು ಪುರಾಣ ಪ್ರಸಿದ್ಧರಾದ ವ್ಯಕ್ತಿಗಳಿಂದ ಹೇಳಿಕೊಳ್ಳುವ ಒಂದು ಸಂಪ್ರದಾಯವಿದೆ. ಬಂದಳಿಕೆ ಕದಂಬರು ಈ ಸಂಪ್ರದಾಯಕ್ಕೆ ಸೇರಿಕೊಂಡಿದ್ದಾರೆ. ಮಹಾಭಾರತದ ಪ್ರಸಿದ್ಧ ನಾಯಕರಲ್ಲಿ ಓರ್ವನಾದ ಅಶ್ವತ್ಥಾಮನಿಗೆ ಸೋಮನೃಪನೆಂಬ ಓರ್ವಶಿಷ್ಯ. ಈತನಿಗೆ ಮೆಚ್ಚಿ ಅಶ್ವತ್ಥಾಮ ಸೋಮಾನ್ವಯಕ್ಕೆ 'ಕಳಚುರಿ' ಎಂಬ ಹೆಸರಿತ್ತನು. ಇದೇ ನೃಪನು ಸಂತಾನವನ್ನಪೇಕ್ಷಿಸಿ ಗುಡು

ಅಶ್ವತ್ಥಾಮನೊಂದಿಗೆ ಶಿವನನ್ನು ಪೂಜಿಸಿದನು. ಪರಶಿವನು ಸಂಪ್ರೀತನಾಗಿ ಸೋಮನೃಪನಿಗೆ ಕೀರ್ತಿವರ್ಮ ಅಯ್ಯುವರ್ಮರೆಂಬ ಈರ್ವರು ಪುತ್ರರನ್ನೂ ಸಕಲ ಸೌಭಾಗ್ಯಗಳೊಂದಿಗೆ ರಾಜ್ಯವನ್ನೂ ದಯಪಾಲಿಸಿದನು. ಸೋಮನೃಪನು ತಾನಾಗಿ ಉದುರಿದ ಕದಂಬ ಪುಷ್ಪಗಳಿಂದ ಶಿವನನ್ನು ಪೂಜಿಸಿದ ಕಾರಣ ಈ ವಂಶಕ್ಕೆ 'ಕದಂಬ'ಎಂದು ಹೆಸರಾಯಿತು. ಮುಂದೆ ಅಯ್ಯುವರ್ಮನಿಗೆ ಶಾಂತನೃಪ ಸುತನಾದನು. ಶಾಂತನ ಪುತ್ರ ಮೈಲಭೂಪ. ಇವನ ಪಶ್ಚಾತ್ ಹಲವರು ಅರಸರು ಆಗಿ ಹೋದರು ಎಂದು ಶಾಸನ ಹೇಳಿಬಿಡುತ್ತದೆ. **[17]**

ಬಂದಳಿಕೆ ಶಾಸನ ಕೊಡುವ ಈ ವಂಶಾವಳಿ ಬನವಾಸಿ ಮೂಲ ಕದಂಬ ವಂಶಾವಳಿಗಿಂತ ಸಂಪೂರ್ಣ ಭಿನ್ನವಾಗಿದೆ. ತ್ರಿಣೇತ್ರ ಕದಂಬ, ಮಯೂರವರ್ಮರ ಹೆಸರನ್ನೇ ಈ ಶಾಸನ ಎತ್ತುವುದಿಲ್ಲ. ಆದರೆ ನಾಮಾತ್ಯದಲ್ಲಿ 'ವರ್ಮ' ಎಂಬುದನ್ನು ಮಾತ್ರ ಉಳಿಸಿಕೊಂಡಿದೆ. ಇದೊಂದು ಆಶ್ಚರ್ಯಕರ ವಂಶಾವಳಿ. ಕಳಚೂರ್ಯರದೆ ಇನ್ನೊಂದು ಮನೆತನ ಕದಂಬರದೆಂದು ಹೇಳುವುದೆ ಈ ಶಾಸನದ ಮೂಲೋದ್ದೇಶ.

ಈ ಪೌರಾಣಿಕ ವಂಶಾವಳಿ ಒಂದು ಕಲ್ಪನೆಯಾಗಿರುವುದರಿಂದ ಅದು ಮನ್ನಣೆ ಕಳೆದುಕೊಳ್ಳುತ್ತದೆ. ಆದ್ದರಿಂದ ಬಂದಳಿಕೆ ಅರಸರ ನಿಜವಾದ ಇತಿಹಾಸ ಕ್ರಿ.ಶ. ೬೮೫ರಿಂದ ಸೇಂದ್ರಕ ಅರಸ ಪೊಗಿಲ್ಲಿಯಿಂದ ಪ್ರಾರಂಭವಾಗುತ್ತದೆ. ಇಲ್ಲಿಯ ಮೊದಲ ಘಟ್ಟದ ಅರಸರನ್ನು ಹೊರತುಪಡಿಸಿದರೆ ಕದಂಬ ಅರಸರ ಚರಿತ್ರೆ ಕ್ರಿ.ಶ. ೯೮೬ರಿಂದ ಪ್ರಾರಂಭವಾಗುತ್ತದೆ. ಹಾಗೂ ಕ್ರಿ.ಶ. ೧೪೪೨ರಲ್ಲಿ ಬರುವ ಬೈಚರಸನೊಂದಿಗೆ ಮುಕ್ತಾಯ ಹೊಂದುತ್ತದೆ.

ಬಂದಳಿಕೆ ಕದಂಬ ಅರಸರ ಬಿರುದಾವಳಿ

ಬಂದಳಿಕೆ ಕದಂಬರು ಬನವಾಸಿಯ ಆದಿ ಕದಂಬರ ವಂಶದವರೆ ಆದ್ದರಿಂದ 'ಜಯಂತಿ ಮಧುಕೇಶ್ವರದೇವ' ಎಂಬುದನ್ನು ಬಿರುದಾವಳಿಯಲ್ಲಿ ಸೇರಿಸಿಕೊಂಡಿದ್ದಾರೆ. ಶಾತವಾಹನರೂ ಆದಿ ಕದಂಬರೂ ಅರ್ಚಿಸಿದ ತಾಳಗುಂದ ಪ್ರಣವೇಶ್ರ್ವರ ದೇವರು ರಾಜಧಾನಿಗೆ ಹೊಂದಿಕೊಂಡೆ ಇದ್ದದ್ದರಿಂದ 'ಶ್ರೀ ಪ್ರಣವೇಶ್ವರ ದೇವರ ಲಬ್ದ ಪ್ರಸಾದ' ಎಂಬುದು ಮಳವಳ್ಳಿ ಹಾಗೂ ಮಾಯತಮ್ಮನ ಮುಂಚಡಿ ಶಾಸನಗಳ ಬಿರುದಾವಳಿಗಳಲ್ಲಿ ಕಂಡುಬರುತ್ತದೆ. ಹಾಗೆಯೇ 'ಚತುರ್ಭುಜದೇವಿ ಲಬ್ದವರ ಪ್ರಸಾಧಂ' ಎಂಬುದು ಮಾತ್ರ ಎಲ್ಲಾ ಬಿರುದಾವಳಿಗಳಲ್ಲಿ ಸಾಮಾನ್ಯವಾಗಿದೆ. ಈ ದೇವಿ ಬಂದಳಿಕೆಯಲ್ಲಿ ಈಗ ಬನಶಂಕರಿ ಎಂದು ಕರೆಯಲಾಗುತ್ತಿರುವ (ಬಳಾರಿ**?**) ಗ್ರಾಮ ದೇವತೆಯಾಗಿರಬಹುದಾಗಿದೆ. ಬಂದಳಿಕೆ ಅರಸರಿಗೆ ಇವಳು ಕುಲದೇವತೆಯಾಗಿರುವ ಸಂಭವವಿದೆ. ಕದಂಬರ ಲಾಂಛನ ಸಿಂಹ. ಬಿರುದಾವಳಿಗಳಲ್ಲಿ ಇದು ಸಹ ಉಕ್ತವಾಗುತ್ತದೆ.

ನಾಗರಖಂಡದ ಪ್ರಖ್ಯಾತ ದೊರೆ ಸೋಯಿದೇವನಿಗಿರುವ ಬಿರುದಾವಳಿಗಳನ್ನು ಇಲ್ಲಿ ನೋಡಬಹುದಾಗಿದೆ.

"ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮ................. ಪುರವರಾಧೀಶ್ವರ ಜಯಂತೀ ಮದುಕೇಶ್ವರದೇವ ಲಬ್ದ ವರಪ್ರಸಾದ, ಮ್ರಿಗಮದಾಮೋದ ತ್ರಿಯಕ್ಷ.............. ನಗರಾಧಿಷ್ಟಿತ ಲಲಾಟಲೋಚನ ಚತರ್ಭುಜ ಜಗದ್ವಿದಿತಾಷ್ಟಾದಶಾಶ್ವಮೇಧ ದೀಕ್ಷಿತ, ಹಿಮ............ ಖರ ಸಂಸ್ಥಾಪಿತ ಸ್ಫಟಿಕ ಶಿಲಾಸ್ತಂಭ ಬದ್ದ, ಮದಗಜೇಂದ್ರ, ಮಹಾಮಹಿಮಾಭಿರಾಮ, ಕಾದಂಬ ಮಯೂರವರ್ಮ ಮಹಾಮಹೀಪಾಳ ಕುಳಭೂಷಣ, ಪೆರ್ಮಡಿತೂರ್ಯ ನಿರ್ಘೋಷಣ ಶಾ..................ನ ಮಾನೋತ್ತುಂಗ, ಸಿಂಹಲಾಂಛನ ದತ್ತಾರ್ಥಿ ಕಾಂಚನ ಸಮರಜಯ ಕಾರಣ ಕಾದಂಬರಾಬಿ............ ಡ ಪ್ರತಾಪ ಮಾರ್ತಂಡ ಮಂಡಳಿಕ ಗಂಡ ಬಂಗಾಅ ನಿತ್ಯ ಖಿಳ ನಾಮಾವಳಿ ವಿರಾಜಿ.......... ಮಹಾಮಂಡಳೇಶ್ವರಂ ಸೋಯಿದೇವ ರಸರುಂ............ **[18]** ಮಳವಳ್ಳಿ ಶಾಸನದಿಂದ"**[19]**

"ಸ್ವಸ್ತಿ ಸಮಧಿಗತ ಪಂಚಮಹಾಶಬ್ದ ಮಹಾಮಂಡಳಿಕಂ ವಿಜೆಯಂ ಲಕ್ಷ್ಮೀಕಾಂತ ಚಂಡರಿಪುನೃಪತಿ ಮಾರ್ತಂಡ ಕದನಕ್ಕೊಳ್ಗಂಡಂ........ ಚತುರ್ಭುಜಾದೇವಿ ಲಬ್ದವರ ಪ್ರಸಾದಂ, ಭಗವತಿಯಂಕಕಾರಂ ಶ್ರೀ ಪ್ರಣಮೇರ್ಶವರ ದೇವ ಲಬ್ಧವರಪ್ರಸಾದ, ಬಂದಣಿಕೆಯ ಪುರವರಾಧೀಶ್ವರಂ......... "

ಮಾಯಿತಮ್ಮನ ಮುಚಡಿ ಶಾಸನದಲ್ಲಿ 'ಬಂದಣಿಕೆ' ಯ ಬದಲು ಅದರದೇ ಸಂಸ್ಕೃತ ರೂಪ 'ಬಾನ್ದವ ಪುರಾಧೀಶ್ವರ' ಎಂದು ಉಲ್ಲೇಖಿತವಾಗಿದೆ.[20]

ಬಂದಳಿಕೆ ಕದಂಬ ಅರಸರು

ನಾಗರಖಂಡದಲ್ಲಿ ಕದಂಬರ ಅರಸೊತ್ತಿಗೆ ಆರಂಭಿಸಿದವನು ಈಗ ತಿಳಿದುಬಂದಂತೆ ಬೋಡಯ್ಯ. ಈತನ ಕಾಲದ ರಾಜಕೀಯ ಸನ್ನಿವೇಶ ನೋಡಬೇಕು. ಕಲ್ಯಾಣ ಚಾಲುಕ್ಯ ಪ್ರಥಮ ದೊರೆ ತೈಲ (ಕ್ರಿ.ಶ. ೯೭೩-೯೯೭) ನು ಉತ್ತರದಲ್ಲಿ ಹಾನಗಲ್ಲು ಕದಂಬ ವಂಶದ ಮೂಲ ಪುರುಷ ಚಟ್ಟ (ಕ್ರಿ.ಶ. ೯೭೨-೧೦೧೫) ನು ಬನವಸೆಯಲ್ಲಿ ರಾಜ್ಯಭಾರ ಮಾಡುತ್ತಿದ್ದ ಕಾಲದಲ್ಲಿ ನಾಗರಖಂಡವನ್ನು ಬೋಡಯ್ಯ (ಕ್ರಿ.ಶ. ೯೮೯) ರಲ್ಲಿ ಆಳುತ್ತಿದ್ದನು.[21] ಬೋಡಯ್ಯನ ತಂದೆ ಅಯ್ಯಣಯ್ಯ, ಈತ ನಾಗರಖಂಡ............. ಆಳಿದ ಬಗೆಗೆ ದಾಖಲೆಗಳು ಲಭ್ಯವಾಗಿರುವುದಿಲ್ಲ.

ಕದಂಬರ ಆಳ್ವಿಕೆ ಆರಂಭದಲ್ಲಿಯೇ ಮುಗ್ಗರಿಸಿದಂತಿದೆ. ಬೋಡಯ್ಯನ ಅನಂತರ ಸತ್ತರರ ನಾಗಾರ್ಜುನ (ಕ್ರಿ.ಶ. ೯೯೫-೧೦೧೫) [22] ಸುಮಾರು ೨೦ ವರ್ಷ ಕಾಲ ನಾಗರಖಂಡವನ್ನು ಆಳಿದನು. ಪುನಃ ಬೋಡಯ್ಯನ ಮಗ ಅಯನಯ ಕಂಪಣವನ್ನು ವಶಪಡಿಸಿಕೊಂಡು (ಕ್ರಿ.ಶ. ೧೦೧೫) ಕದಂಬರ ಆಡಳಿತ ಮುಂದುವರರಿಸಿದನು. [23]

ಬ್ರಹ್ಮರಸ : (ಕ್ರಿ.ಶ. ೧೦೨೯-೧೦೭೯) ನಾಗರಖಂಡದ ೨-೩ ಶಾಸನಗಳ ಪ್ರಕಾರ ಈತನಿಂದಲೇ ಬಂದಳಿಕೆ ಕದಂಬವಂಶ ಪ್ರಾರಂಭವಾಯಿತು. ಈತನ ಕಾಲದಲ್ಲಿ ಕ.ಚ. ೬ನೆಯ ವಿಕ್ರಮಾದಿತ್ಯನ ತಂದೆ ೧ನೇ ಸೋಮೇಶ್ವರ ನಾಗರಖಂಡ ರಾಜಧಾನಿ ಬಂದಳಿಕೆಗೆ ಕ್ರಿ.ಶ. ೧೦೫೦ ರಲ್ಲಿ ಬಂದು ಹೋದದ್ದಾಗಿ ತಿಳಿದು ಬರುತ್ತದೆ.[24]ವಿಕ್ರಮಾದಿತ್ಯನು ಅಣ್ಣ ಸೋಮೇಶ್ವರನೊಂದಿಗೆ ಹೋರಾಡುವಾಗ ತಮ್ಮರಸನ ನೆರವು ಪಡೆದಿರುಲು ಸಾಕು. ಆದ್ದರಿಂದಲೇ ಎಂಬಂತೆ ಬಮ್ಮರಸನನ್ನು ಬನವಾಸಿ ಮಂಡಲಕ್ಕೆ ಮಹಾಸಾಮಂತಾಧಿಪತಿಯನ್ನಾಗಿ ನಿಯಮಿಸಿದ್ದಾನೆ.[25]ಬಮ್ಮರಸ ಸುಮಾರು ೫೦ ವರ್ಷಕಾಲ ನಾಗರಖಂಡವನ್ನು ಪರಿಪಾಲಿಸಿದನು. ಬಂದಳೀಕೆಯ ಈ ಬಮ್ಮರಸರನನ್ನು ಕೆಲವು ತಪ್ಪಾಗಿ ಕಳಚೂರ್ಯ ಬಿಜ್ಜಳನ ಅಳಿಯನೆಂದು ಭಾವಿಸಿದ್ದಾನೆ. ಬಿಜ್ಜಳನಿಗೂ ಇವನಿಗೂ ೧ ಶತಮಾನದ ಅಂತರವಿದೆ.

[1]ಡಾ.ಭೋಜರಾಜ ಪಾಟೀಲ. 'ನಾಗರಖಂಡ ೭೦, ಒಂದು ಅಧ್ಯಯನ' ಮಹಾಪ್ರಬಂಧ.
[2]ಎ.ಕ. (ಎಪಿಗ್ರಾಫಿಯಾ ಕರ್ನಾಟಿಕಾ, ರೈಸ ಸಂಪಾದಿತ(ಸಂ೭, ಶಿಕಾ ೨೬೩ ಮಳವಳ್ಳಿ ಕ್ರಿ.ಶ. ೧೫೦
[3]ಎ.ಕ. ಸಂ೮, ಸೊ ೪೮ ಗಿಣಿವಾಲ ಕ್ರಿ.ಶ. ೧೫೫೨.
[4]ಜೆ.ಎಂ.ನಾಗಯ್ಯ ಆರನೆಯ ವಿಕ್ರಮಾದಿತ್ಯನ ಶಾಸನಗಳು ೧೯೮೭.
[5]ಎ.ಕ. ಸಂ. ೮ ಸೊ ೨೬೩ ಕುಪಟೂರು ಕ್ರಿ.ಶ. ೧೩೪.
[6]ಎ.ಕ.ಸಂ. ೭ ಶಿಕಾ ೧೫೪ ಬಳ್ಳಿಗಾವೆ ಕ್ರಿ.ಶ. ೬೮೫.
[7]ಮೈ. ಆ.ರಿ. (ಮೈಸೂರು ಅರ್ಕಿಯಾಲಾಜಿಕಲ್ ರಿಪೋರ್ಟ್) ೧೯,೯, ಪುಟ ೫೦.
[8]ಕಲಬುರ್ಗಿ ಎಂ.ಎಂ. ಮಾರ್ಗ ಸಂ. ೧ ಪುಟ ೨೦೨ ೨೦೩

[9]ಮೈಗೆ, (ಮೈಸೂರು ಗೆಝೆಟಿಯರ್) ಸಂ ೨ ಪುಟ, ೪೯೭ ಮತ್ತು ನೋಡಿ ಇಂ ತ್ಸಿ. ೧೪ ೧೩ ೮*
[10]ಎ.ಕ.ಸಂ. ೭, ಶಿಕಾ ೧೫೪ ಬಳ್ಳಿಗಾವೆ ಕ್ರಿ.ಶ. ೬೮೫.
[11]ಅರ್ಕಿಯಾಲಾಜಿಕಲ್ ಸರ್ವೆ ಆಫ್ ಮೈಸೂರು ಎನ್ಯುವಲ್ ರಿಪೋರ್ಟ್ಸ್ ಸ.ಮೈ.ಎ.ರಿ.ಸಂ.೩ ೧೯೧೨. ಪುಟಗಳು ೧೪೫-೧೪೯.
[12]ಮಿರ್ಜಿ ಅಣ್ಣಾರಾಯರು 'ಜೈನಧರ್ಮ' ಪುಟ ೧೧೪.
[13]ಎ.ಕ.ಸಂ. ೭ ಶಿಕಾ ೨೧೯, ಬಂದಳಿಕೆ, ಕ್ರಿ.ಶ. ೯೧೮.
[14]ಎ.ಕ.ಸಂ. ೮ ಸೊ ೩೪೯ ಬೆಣ್ಣೇಗೆರೆ ಕ್ರಿ.ಶ. ೧೧೬೦.
[15]ಎ.ಕ.ಸಂ. ಶಿಕಾ ೨೪೨ ಬಂದಳಿಕೆ ಕ್ರಿ.ಶ. ೧೧೬೩.
[16]ಎ.ಕ.ಸಂ. ೭ ಶಿಕಾ ೧೯೭ ಚಿಕ್ಕ ಮಾಗಡಿ ಕ್ರಿ.ಶ. ೧೧೮೨.
[17]ಎ.ಕ.ಸಂ. ೭ ಶಿಕಾ.೨೩೬ ಬಂದಳಿಕೆ ಕ್ರಿ.ಶ. ೧೧೭೪.
[18]ಎ.ಕ.ಸುಲ ಸಂ. ೩೪೬. ಬೆಣ್ಣಿಗೇರಿ.
[19]ಎ.ಕ. ಸು ೮ ಸಂ-೨೪೭. ಮಳವಳ್ಳಿ ಕ್ರಿ.ಶ. ೧೧೪೭.
[20]ಎ.ಕ.ಸಂ.೭ ಶಿಕಾ ೨೭೭. ಮಾ.ಮುಚಡಿ ಕ್ರಿ.ಶ. ೧೧೬೫.
[21]ಎ.ಕ. ಸಂ.೮ ಸೊ-೪೧೩ ಹಿರೇಮಾಗಡಿ ಕ್ರಿ.ಶ. ೯೮೬.
[22]ಎಇಂ. (ಎಫಿಗ್ರಾಫಿಯಾ ಇಂಡಿಕಾ) ೩೩ ಪುಟ: ೧೩೧-೧೩೩ ಹಿರೇಕೆರೂರು (ತಾ) ಚಿಕ್ಕೇರೂರು ಕ್ರಿ.ಶ. ೯೯೫.
[23]ಎ.ಕ. ಸಂ. ೮ ಸೊ-೩೮೦ ಎಲೆವಾಳ, ಕ್ರಿ.ಶ. ೧೦೧೫.
[24]ಬಿ.ಎಲ್. ರೈಸ ಮೈಸೂರು ಎಂಡ ಕೂರ್ಗ ಪುಟ-೭೫.
[25]ಎ.ಕ.ಶಿಕಾ-೧೨೪ ಬಳ್ಳಿಗಾವಿ ಕ್ರಿ.ಶ. ೧೦೭೭.

ಮಲೆಕರ್ನಾಟಕದ ಅರಸು ಮನೆತನಗಳು: ೪. ಬಂದಳಿಕೆ ಅರಸರು (೨)

ಬೊಪ್ಪರಸ : (ಕ್ರಿ.ಶ. ೧೦೭೮-೧೧೩೮) ಬಮ್ಮರಸ-ಚಟ್ಟಲದೇವಿಯರ ಪುತ್ರನಾದ ಈತ ಸುಮಾರು ೬೦ ವರ್ಷಗಳಷ್ಟು ಸುದೀರ್ಘ ಕಾಲ ನಾಗರಖಂಡವನ್ನಾಳಿದನು. ಹಾನಗಲ್ಲ ಕದಂಬ ದೊರೆ ಶಾಂತಿವರ್ಮ ತನ್ನ ಪುತ್ರಿ ಶ್ರೀದೇವಿ (ಸಿರಿಯಾದೇವಿ) ಯನ್ನು ಇವನಿಗೆ ಕೊಟ್ಟು ಬಾಂಧವ್ಯ ಬೆಳೆಸಿದನು.[1]

ಇವನ ಕಾಲದಲ್ಲಿ ಹೊಯ್ಸಳರು ದಕ್ಷಿಣದಲ್ಲಿ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆಯತೊಡಗಿದ್ದರು. ಈ ಕಾರಣದಿಂದಾಗಿ ಹೊಯ್ಸಳರಿಗೂ ಚಾಲುಕ್ಯರಿಗೂ ಗಡಿಗಳಲ್ಲಿ ಆಗಾಗ ಕಾಳಗಗಳು ನಡೆಯುತ್ತಿದ್ದವು. ಹೊಯ್ಸಳರು ಬನವಾಸಿಯ ಮೇಲೆ ದೃಷ್ಟಿಯಿಟ್ಟಿದ್ದರು. ಬನವಾಸಿ ಹಾನಗಲ್ಲ ಕದಂಬರ ವಶದಲ್ಲಿತ್ತು. ಆದ್ದರಿಂದ ನಾಗರಖಂಡದ ಮೇಲೂ ಚಾಲುಕ್ಯರು ಸದಾ ಗಮನವಿಡುತ್ತಿದ್ದರು.

ಬೊಪ್ಪರಸನ ಕಾಲದಲ್ಲಿ ಅನೇಕ ಚಿಕ್ಕಪುಟ್ಟ ಕಾಳಗಗಳು ಕಂಪಣದಲ್ಲಿ ನಡೆದಿವೆ. ಬೊಪ್ಪರಸನ ಅಳಿಯಂದಿರೇ ಆದ ಹಾನಗಲ್ಲ ಕದಂಬರ ೨ನೆಯ ತೈಲಪ ೧೦೮೪ ರಲ್ಲಿ ಹಾಗೂ ಕೀರ್ತಿವರ್ಮ ೧೧೧೬ರಲ್ಲಿ ಈ ಕಂಪಣದ ಗ್ರಾಮಗಳ ಮೇಲೆ ದಾಳಿ ಮಾಡಿದರು.

ಸೋವಿದೇವ : (ಕ್ರಿ.ಶ. ೧೧೩೯-೧೧೭೭) ನಾಗರಖಂಡ ಕದಂಬವಂಶದ ದೊರೆಗಳಲ್ಲಿ ಅತ್ಯಂತ ಪ್ರಖ್ಯಾತನಾದವ ಸೋಯಿದೇವ. ಬೊಪ್ಪರಸ ಸಿರಿಯಾದೇವಿಯರ ಪುತ್ರನಾದ ಈತನು ಸು. ೩೮ ವರ್ಷ ಕಾಲದ ರಾಜಕೀಯ ಜೀವನದಲ್ಲಿ ಚಾಲುಕ್ಯ ಭೂಲೋಕಮಲ್ಲ ಸೋಮೇಶ್ವರ ಮತ್ತು ೨ನೆಯ ಜಗದೇಕಮಲ್ಲರಂಥ ಈರ್ವರು ಚಾಳುಕ್ಯ ಚಕ್ರವರ್ತಿಗಳನ್ನು, ಬಿಜ್ಜಳ ರಾಯಮುರಾರಿ

ಸೋವಿದೇವ, ಸಂಕಮರಂಥ ಮೂವರು ಕಳಚೂರ್ಯ ಚಕ್ರವರ್ತಿಗಳ ಆಡಳಿತವನ್ನು ಕಂಡ ಅಪರೂಪದ ಮಂಡಳೇಶ್ವರನು.

ರಾಜಕೀಯ ಸ್ಥಿತ್ಯಂತರಗಳ ಅತ್ಯಮತ ಮಹತ್ವದ ಕಾಲದಲ್ಲಿ ಸೋವಿದೇವ ರಾಜ್ಯವಾಳಿದನು. ಇವನ ಆಳ್ವಿಕೆಯ ಪ್ರಾರಂಭ ಕಾಲದಲ್ಲಿ ಹೊಯ್ಸಳರಿಗೂ ಚಾಲುಕ್ಯ ನಿಷ್ಠ ಹಾನಗಲ್ಲ ಕದಂಬರಿಗೂ ವೈರತ್ವ ಬೆಳೆದಿತ್ತು. ಇಂಥ ಹಿನ್ನೆಲೆಯಲ್ಲಿ ನಾಗರಖಂಡದ ಗ್ರಾಮಗಳಲ್ಲಿ ಹೊಯ್ಸಳರ ಸೈನಿಕರು ನುಗ್ಗಿ ತುರುಗಳನ್ನು ಅಪಹರಿಸುತ್ತಿದ್ದುದು ಸಾಮಾನ್ಯವಾಗಿತ್ತು. ಹೊಯ್ಸಳ ವಿಷ್ಣುವರ್ಧನನು ಗಂಗವಾಡಿ, ನೊಳಂಬವಾಡಿ, ತಲಕಾಡುಕೋಟೆ, ಉಚ್ಚಂಗಿ, ಬನವಾಸಿಕೋಟೆ, ಹಾನಗಲ್ಲುಗಳನ್ನು ಮುತ್ತಿ ವಿಜಯ ಸಾಧಿಸಿದ್ದನು.[2]ಬನವಾಸಿಯಲ್ಲಿ ಹೊಯ್ಸಳರ ರಾಜಪ್ರತಿನಿಧಿಯಾಗಿ ಮುಧುಕರಸನು ಆಡಳಿತ ನಡೆಸುತ್ತಿದ್ದನು.

ಇದೇ ಕಾಲದಲ್ಲಿ ಕಲ್ಯಾಣ ಚಾಳುಕ್ಯರ ಆಳ್ವಿಕೆ ಅಂತ್ಯವಾಗಿ, ಕಳಚೂರ್ಯರದು ಪ್ರಾರಂಭವಾದಾಗ ಹಾನಗಲ್ಲು ಕದಂಬರು ಈ ಬದಲಾವಣೆಯನ್ನು ಕೂಡಲೇ ಒಪ್ಪಿಕೊಂಡಂತೆ ಕಂಡು ಬರುವುದಿಲ್ಲ. ಆದ್ದರಿಂದ ಬಿಜ್ಜಳ ಬನವಾಸಿಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಕದಂಬರ ಮೇಲೆ ಯುದ್ಧ ಮಾಡಬೇಕಾಗಿ ಬಂದಿತು.[3]ಬಿಜ್ಜಳನಿಗೆ ಚಾಲುಕ್ಯ ಸಿಂಹಾಸನ ದೊರಕಿಸಿಕೊಡುವಲ್ಲಿ ಅಳಿಯ ಬಮ್ಮರಸನಂತೆ ದಂಡನಾಯಕ ರೇಚರಸನೂ ಕಾರಣನಾಗಿದ್ದನು.[4]ರೇಚರಸ ೧೪೨ರಲ್ಲಿಯೇ ಬನವಾಸಿಗೆ ರಾಜಪ್ರತಿನಿಧಿಯಾಗಿದ್ದನು. ಆದ್ದರಿಂದ ಬನವಾಸಿ ಮಂಡಲದ ಎಲ್ಲ ಸಾವಂತ ಅರಸರ ಬಲಾಬಲಗಳ ಪರಿಚಯ ಬಿಜ್ಜಳ ಹಾಗೂ ಅವನ ಈ ವಿಧೇಯ ದಂಡನಾಯಕರಿಗೆ ಚೆನ್ನಾಗಿದ್ದಿತು. ಹಾನಗಲ್ಲು ಕದಂಬರ ಮೇಲೆ ಹಿಡಿತ ಸಾಧಿಸಲು ಇವರು ಅದೇ ವಂಶದ ನಾಗರಖಂಡದ ಸೋಯಿದೇವನನ್ನು ಆರಿಸಿಗೊಂಡರು. ಹಾನಗಲ್ಲು ಕದಂಬರ ವಿರುದ್ಧ ಇವನನ್ನು ಎತ್ತಿಕಟ್ಟಿ ಸ್ವತಂತ್ರನಾಗಲು ಪ್ರಚೋದಿಸಿದುದಕ್ಕೆ ೧೧೪೪ರ ದಾಖಲೆಗಳು ಆಧಾರ ಒದಗಿಸುತ್ತವೆ.[5]

ಕಳಚೂರ್ಯ ಬಿಜ್ಜಳ-ಸೋವಿದೇವರ ಮಧ್ಯ ಮಧುರ ಬಾಂಧವ್ಯ ಬೆಳೆದು ಸೋಯಿದೇವನನ್ನು ಬನವಾಸಿಗೆ ಮಹಾಮಂಡಳೇಶ್ವರನನ್ನಾಗಿ ನಿಯಮಿಸಿದನು.[6] ರಾಯಮುರಾರಿ ಸೋವಿದೇವನ ಕಾಲದಲ್ಲಿ ಈ ಬಾಂಧವ್ಯ ಇನ್ನಷ್ಟು ಗಟ್ಟಿಗೊಂಡಿತು. ಕಳಚೂರ್ಯರು ನಾಗರಖಂಡ ಕದಂಬರನ್ನು ತಮ್ಮ ವಂಶದ ಒಂದು ಕುಡಿಯೆಂದೇ ಭಾವಿಸಿದರು. ಈ ಹಿಂದೆ ಪ್ರಸ್ತಾಪಿಸಲಾದ ಬಂದಳಿಕೆಯ ವಂಶಾವಳಿ ಕೊಡುವ ಶಾಸನ ಇದಕ್ಕೆ ಆಧಾರವಾಗಿದೆ.

ಸೋವಿದೇವನ ಕಾಲದಲ್ಲಿಯೇ ಬಿಜ್ಜಳ ಬಳ್ಳಿಗಾವೆಗೆ ಆಗಮಿಸಿದ್ದನು. ಆಗ ಉಪಸ್ಥಿತರಿದ್ದ ಮಂಡಳೇಶ್ವರರಲ್ಲಿ ಸೋವಿದೇವನೂ ಓರ್ವನು.[7]ಅಬಲೂರಿನಲ್ಲಿ ಏಕಾಂತರಾಮಯ್ಯನ ಶಿರಸ್ಯದಿವ್ಯ ಈ ಕಾಲದಲ್ಲಿಯೇ ಜರುಗಿತು. ಆದ್ದರಿಂದ ಬಿಜ್ಜಳ ಅಬಲೂರಿಗೆ ಭೇಟ್ಟಿಕೊಟ್ಟು ಬಳ್ಳಿಗಾವೆಗೆ ಬಂದಂತಿದೆ.

ಹೊಯ್ಸಳರ ಮಾಂಡಳಿಕರಾಗಿದ್ದ ಚಂಗಾಳ್ವರ ಮೇಲೆ ಸೋವಿದೇವ ದಾಳಿ ಮಾಡಿ ಚಂಗಾಳ್ವ ಅರಸನನ್ನು ಪರಾಭವಗೊಳಿಸಿ ಬಂಧಿಸಿದನು.[8]ಈ ಕಾಳಗದಲ್ಲಿ ತೋರಿದ ಪರಾಕ್ರಮ ಅವನಿಗೆ ಕದಂಬರುದ್ರ, ಮಂಡಳಿಕಬೈರವ ಮುಂತಾದ ಬಿರುದುಗಳನ್ನು ತಂದುಕೊಟ್ಟಿರಲು ಸಾಕು.

ಕ್ರಿ.ಶ. ೧೧೭೭ರ ಒಂದು ದಾಖಲೆ ಗುತ್ತಿ ಮಲ್ಲಿದೇವನ ರಾಣಿ ಪದುಮಲದೇವಿ ಸೋಯಿದೇವನನ್ನು ವಿರೋಧಿಸಿ ಕುಪಟೂರನ್ನು ಸೊರೆಗೈದು ದನಗಳನ್ನು ಒಯ್ದಳೆಂದು ತಿಳಿಸುತ್ತದೆ.[೩೩]

ಸೋಯಿದೇವನು ಬನವಾಸಿ ಮಂಡಲಕ್ಕೆ ಚಕ್ರವರ್ತಿ ಪ್ರತಿನಿಧಿಗಳಾಗಿ ಆಗಮಿಸಿದ ರೇಚರಸ, ಬರ್ಮರಸ, ಮಹದೇವರಸ, ಕಸಪಯ್ಯ, ಮಾಯಿದೇವ, ಪದ್ಮರಸರಂತಹ ಮಹಾನ್ ದಂಡನಾಯಕ ಸಹವಾಸ ಮಾಡಿದ್ದಾನೆ.

ಓರ್ವ ಸ್ವತಂತ್ರ ರಾಜನಿಗಿರಬೇಕಾದ ಅರ್ಹತೆಗಳೆಲ್ಲವೂ ಸೋಯಿದೇವನಲ್ಲಿದ್ದವು ಎಂದರೆ ಅತಿಶಯೋಕ್ತಿಯಾಗಲಾರದು.

ಬೊಪ್ಪದೇವ : (ಕ್ರಿ.ಶ. ೧೭೯-೧೧೮೯) ಈತನ ಕಾಲದಲ್ಲಿ ಕುತೂಹಲಕರ ಘಟನೆಯೊಂದು ಜರುಗಿತು.

ನಾಗರಖಂಡ-೭೦ ರ ಬಳಿಯ ಬಾಡ ಚಿಕ್ಕಮಾಗಡಿಯಲ್ಲಿ ಸಾಮಂತ ಶಂಕರ ಶಾಂತಿನಾಥ ಜಿನಾಲಯ ನಿರ್ಮಿಸಿದನು. ಅದರ ಪೂಜಾ ಸಮಾರಂಭಕ್ಕೆಂದು ಹೊಯ್ಸಳ ೨ನೆಯ ವೀರಬಲ್ಲಾಳ ಸ್ವತಃ ತನ್ನ ಪರಿವಾರ ಹಾಗೂ ಸೈನ್ಯದೊಂದಿಗೆ ಹೊರಟುಬಂದು ಸಮೀಪದ ತಾಳಗುಂದದಲ್ಲಿ ಬೀಡುಬಿಟ್ಟನು. ಅತ್ತ ಕಲ್ಯಾಣದಿಂದ ಕಳಚೂರ್ಯ ಆಹವಮಲ್ಲನೂ ಸೈನ್ಯಸಮೇತ ಆಗಮಿಸಿ ಈಗಿನ ರಾಣೆಬೆನ್ನೂರು ತಾಲೂಕ ಮುದೆನೂರಲ್ಲಿ ಬೀಡುಬಿಟ್ಟನು. ಆದರೆ ಪೂಜಾ ಸಮಾರಂಭಕ್ಕೆಂದು ಬಂದಳಿಕೆಯಲ್ಲಿಯೇ ಇದ್ದ ತನ್ನ ದಂಡನಾಯಕ ರೇಚಿದೇವರಸನನ್ನು ಕಳಿಸಿದನು. **[9]**

ಪರಸ್ಪರ ವೈರತ್ವವುಳ್ಳ ಎರಡು ರಾಜಮನೆತನಗಳು ಒಂದೇ ಕಾರ್ಯಕ್ರಮಕ್ಕೆಂದು ಆಗಮಿಸಿದ್ದು ಈರ್ವರ ಸೈನ್ಯಗಳೂ ಸಮೀಪದಲ್ಲಿ ಬೀಡು ಬಿಟ್ಟದ್ದೂ ಅಪೂರ್ವ ಐತಿಹಾಸಿಕ ಸಂಗತಿಯೆನಿಸದಿರಲಾರದು.

ಈ ಘಟನೆ ಕುರಿತು ಮೊರೇಸ್ರು ‘ಕದಂಬಕುಲ’ ದಲ್ಲಿ ತಪ್ಪಾಗಿ ಬರೆದಿದ್ದಾರೆ. **[10]**

ಬೊಪ್ಪದೇವನ ಕಾಲದಲ್ಲಿಯೇ ಕಲ್ಯಾಣದಲ್ಲಿ ಕಳಚೂರ್ಯ ಆಳ್ವಿಕೆ ಸಮಾಪ್ತವಾಗಿ ಚಾಳುಕ್ಯ ೪ನೆಯ ಸೋಮೇಶ್ವರ ಪಟ್ಟಕ್ಕೆ ಬಂದಿದ್ದಾನೆ. ಇದನ್ನು ತಿಳಿಸುವ ಮೊದಲ ಶಾಸನ ನಾಗರಖಂಡದ ಅಬಲೂರಲ್ಲಿದೆ. **[11]**

ಕಲ್ಯಾಣ ಚಾಲುಕ್ಯ ೪ನೆಯ ಸೋಮೇಶ್ವರ ಹಾಗೂ ಚಾಲುಕ್ಯ ರಾಜ್ಯ ಪ್ರತಿಷ್ಠಾಪಕನಾದ ದಂಡನಾಯಕ ಕುಮಾರ ಬಮ್ಮಿದೇವ ಕ್ರಿ.ಶ. ೧೧೮೬ರ ಅನಂತರ ವಿಷಮ ರಾಜಕೀಯ ಪರಿಸ್ಥಿತಿಯಿಂದಾಗಿ ಬನವಾಸಿಗೆ ಹೋದರೆಂದು ಹೇಳಲಾಗಿದೆ.**[12]** ಆದರೆ ಅವರು ಬಂದದ್ದು ಬನವಾಸಿ ಮಂಡಲದ ನಾಗರಖಂಡದ ಸಿಲೆಯಹಳ್ಳಿ ಕೊಪ್ಪಕ್ಕೆ. **[13]**

ಅಂಥ ವಿಷಮಸ್ಥಿತಿಯಲ್ಲಿಯೂ ಸೋಮೇಶ್ವರನು ತಾನಿದ್ದ ಗ್ರಾಮಕ್ಕೆ ಏಕಾಂತ ರಾಮಯ್ಯನನ್ನು ಬರಮಾಡಿಕೊಂಡು ತನ್ನ ನಿವಾಸದಲ್ಲಿ ಪೂಜಿಸಿ ಅಬಲೂರನ್ನು ದತ್ತಿಯಾಗಿ ಕೊಟ್ಟನು.

ಬ್ರಹ್ಮ ಭೂಪಾಲ : (ಕ್ರಿ.ಶ. ೧೨೦೨-೧೨೨೪) ಬೊಪ್ಪದೇವ ಮಾಳಲದೇವಿಯರ ಪುತ್ರನು. ಇವನ ಆಡಳಿತದ ಕೊನೆಯ ಕಾಲಕ್ಕೆ ಹೊಯ್ಸಳರು ರಾಜಧಾನಿ ಬಂದಳಿಕೆಯಲ್ಲಿಯೇ ತಮ್ಮ ಪ್ರತಿನಿಧಿಯಾಗಿ ಕಮ್ಮಟದ ಮಲ್ಲಿದೇವ ದಂಡನಾಯಕನನ್ನು ಪ್ರತಿಷ್ಠಾಪಿಸಿದರು. ಅಲ್ಲಿಮದ ಸು. ೨೦ ವರ್ಷ ಕಾಲ ಮಲ್ಲಿದೇವ ಕಂಪಣದ ಮೇಲೆ ಬಲವಾದ ಹಿಡಿತ ಸಾಧಿಸಿದನು. ಬ್ರಹ್ಮ ಭೂಪಾಲ ಹೆಸರಿಗೆ ಅರಸನಾಗಿ ಉಳಿದನು. ಹೊಯ್ಸಳರು ಬಂದಳಿಕೆ ಕೇಂದ್ರ ಮಾಡಿಕೊಂಡು ಸುತ್ತಲಿನ ಕಂಪಣಗಳ ಮೇಲೆ ಆಗಾಗ ಧಾಳಿ ಮಾಡುತ್ತಿದ್ದರು.

ಮಲ್ಲಣ ದಂಡನಾಯಕ ಕ್ರಿ.ಶ. ೧೨೦೭ ರವರೆಗೆ ಬಂದಳಿಕೆಯಲ್ಲಿಯೇ ವಾಸವಾಗಿದ್ದನು. ಇಲ್ಲಿಯ ಬ್ರಹ್ಮಪುರಿಗೆ ಮಲ್ಲಣ ದತ್ತಿಬಿಡುವ ಸಂದರ್ಭದಲ್ಲಿ ಹೊಯ್ಸಳ ವೀರಬಲ್ಲಾಳನ ಪರಿಯರಸಿ ಅಭಿನವ ಕೇತಲ ಮಹಾದೇವಿ ಬಂದಳಿಕೆಗೆ ಆಗಮಿಸಿ ತನ್ನ ಸೋದರ ಮಾಧವ ದಂಡನಾಯಕ ಬಿಟ್ಟ ದತ್ತಿಯನ್ನು ದೃಢೀಕರಿಸುತ್ತಳೆ.[14]ಬಂದಳಿಕೆಯ ಮಹತ್ವದ ಈ ಶಾಸನದಲ್ಲಿ ಅರಸ ಬ್ರಹ್ಮ ಭೂಪಾಲನ ಹೆಸರೇ ಇರದಿರುವುದು ಗಮನಾರ್ಹವಾಗಿದೆ.

ಕಳಚೂರ್ಯರ ಅನಂತರ ಉತ್ತರದಲ್ಲಿ ಪ್ರಬಲರಾದ ಸೇವುಣರಿಗೆ ದಕ್ಷಿಣದ ಹೊಯ್ಸಳರು ವೈರಿಗಳಾಗಿದ್ದರು. ಸೇವುಣರ ಸಿಂಘಣ ಕ್ರಿ.ಶ. ೧೨೧೨ರಲ್ಲಿ ಬಂದಳಿಕೆ ಮೇಲೆ ಧಾಳಿ ಮಾಡಿದನು.[15]ಸೇವುಣ ಸೈನಿಕರು ಬಂದಳಿಕೆ ಸಂಪತ್ತು ಲೂಟಿ ಮಾಡಿದ್ದಾಗಿ ದೋರವಳ್ಳಿ ಶಾಸನ ಹೇಳುತ್ತದೆ.

ಈ ಧಾಳಿಯಿಂದ ನಾಗರಖಂಡದ ಮೇಲೆ ಹೊಯ್ಸಳರ ಹಿಡಿತ ತಪ್ಪಿ ಸೇವುಣರ ಪ್ರಭುತ್ವ ಪ್ರಾರಂಭವಾಯಿತು. ಬ್ರಹ್ಮ ಭೂಪಾಲನಿಗೆ ಸಿಂಘಣನು ಸ್ವಾತಂತ್ರ್ಯವಿತ್ತನು. ಆದರೆ ಅವನನ್ನು ಹೊಯ್ಸಳರ ವಶದಲ್ಲಿರುವ ಜಿಡ್ಡುಳಿಗೆ ಮತ್ತು ಎಡೆವೆಟ್ಟ ಕಂಪಣಗಳನ್ನು ಬಿಡಿಸಿಕೊಳ್ಳಲು ಬಳಸಿಕೊಂಡನು. ಈ ಎರಡೂ ಯುದ್ಧಗಳಲ್ಲಿ ಬ್ರಹ್ಮ ಭೂಪಾಲ ವಿಜಯಿಯಾದನು.

ಇಲ್ಲಿಂದ ಮುಂದಿನ ಈರ್ವರು, ಬೋಕನಬೊಪ್ಪ ಹಾಗೂ ಇಮ್ಮಡಿ ಸೋಯಿದೇವರಸರು, ಸೇವುಣರ ಆಜ್ಞಾನುವರ್ತಿಗಳಾಗಿ ನಡೆದುಕೊಂಡರು. ಪದ್ಮಣನ ಮಗ ನೆಣಸಿದೇವನು ಕ್ರಿ.ಶ. ೧೨೪೮ರಲ್ಲಿ ಸೇವುಣರ ಪ್ರತಿನಿಧಿಯಾಗಿ ಬಂದಳಿಕೆಯಲ್ಲಿಯೇ ಇದ್ದನು.[16]ಕುಮಾರ ಬೊಮ್ಮಿ ದೇವರಸನೇ ಅದನ್ನು ನಡೆಸಿಕೊಟ್ಟನು.

ಕೊನೆಯದಾಗಿ ವಿಜಯನಗರ ಸಂಗಮ ವಂಶದ ದೊರೆ ಬುಕ್ಕರಾಯನ ಕಾಲದಲ್ಲಿ ನಾಗರಖಂಡದ ಮುಚಡಿ ಗ್ರಾಮವನ್ನು ಅಗ್ರಹಾರವಾಗಿ ಪರಿವರ್ತಿಸಲಾಯಿತು.

ವೀರಬುಕ್ಕರಾಯನ ಮಹಾಪ್ರಧಾನನೂ ಕಾಶಿವಿಲಾಸ ಕ್ರಿಯಾಶಕ್ತಿ ಗುರುಗಳ ಶಿಷ್ಯನೂ ಆದ ಮಾದರಸ ಒಡೆಯನು ಅರಸನ ಹಾಗೂ ಗುರುವಿನ ಅಭಿಪ್ರಾಯದ ಮೇರೆಗೆ ಈ ಅಗ್ರಹಾರ ಸ್ಥಾಪಿಸಿದ.[17]

ಇಲ್ಲಿ ಬರುವ ಮಾದರಸ ಬುಕ್ಕರಾಯನ ಸೋದರನು ಹಾಗೂ ಕಾಶಿವಿಲಾಸ ಕ್ರಿಯಾಶಕ್ತಿಯಾಚಾರ್ಯರು ಈ ವಂಶದ ಗುರುಗಳು. ಇವರಿಂದಲೇ ವಿಜಯನಗರ ಸ್ಥಾಪನೆಗೆ ಪ್ರೇರಣೆಯಾಯಿತೆಂಬ ವಾದಕ್ಕೆ ಇಲ್ಲಿಯ ಸಂಗತಿಯೂ ಶಾಸನವೂ ಪುಷ್ಟಿಕೊಡುತ್ತವೆ.

ಇಲ್ಲಿಗೆ ಬಂದಳಿಕೆ ಅರಸರ ರಾಜಕೀಯ ಚರಿತ್ರೆ ಸಮಾಪ್ತವಾದಂತೆ ಆಗುತ್ತದೆ.

ನಾಗರಖಂಡದ ಆರ್ಥಿಕ ವ್ಯವಸ್ಥೆ ಒಟ್ಟು ಕರ್ನಾಟಕದ ಆರ್ಥಿಕ ವ್ಯವಸ್ಥೆಗೆ ಹೊಂದಿಕೊಂಡೇ ಹೋಗಿದ್ದರೂ ಹೇಳಿಕೊಳ್ಳುವಂಥ ಒಂದೆರಡು ಸಂಗತಿಗಳು ಇಲ್ಲದೆ ಹೋಗಿಲ್ಲ. 'ಕಾರ್ಪಟೇಶ್ವರ ಮಾನ' ವೆಂಬ ಭೂಮಾಪನ ೬ನೆಯ ಶತಮಾನದಷ್ಟು ಪೂರ್ವದಲ್ಲಿಯೇ ಇಲ್ಲಿ ಬಳಕೆಯಾಗಿದೆ.[18] ನಿರ್ದಿಷ್ಟ ನಾಮಾಂಕಿತ ಅಳತೆಗೋಲಿನ ಮೊದಲ ಉಲ್ಲೇಖವಿದು. ಈ ಕಂಪಣದ ಒಂದು ಗ್ರಾಮವಾದ ಕಚ್ಚವಿಯ ಹೆಸರಿನಿಂದ ಹೊರಟ 'ಕಚ್ಚವಿಯಗಳೆ' ಸುತ್ತುವರಿದ ಎಲ್ಲ ಕಂಪಣಗಳಿಗೂ ಒಂದು ಕೊಡುಗೆಯಾಗಿದೆ.

ನಾಗರಖಂಡ ನಾಡಿಗೆ ಬಹಳ ದೂರದ ಪ್ರದೇಶದಿಂದ ವ್ಯಾಪಾರಿಗಳು ಬರುತ್ತಿದ್ದರು. ಕ್ರಿ.ಶ. ೧೧೫೯ರ ಚಿಕ್ಕೇರೂರಿನ ಒಂದು ಶಾಸನದಲ್ಲಿ ದೇವಿಸೆಟ್ಟಿ ಆಸವಿಯಿಂದ ಬನವಾಸಿ ದೇಶಕ್ಕೆ ಬಂದಿದ್ದನೆಂದು ಹೇಳಿದೆ. ಪ್ರಸ್ತುತ ಆಸವಿಗಂಗಾ-ಯಮುನಾ ನದಿಗಳ ನಡುವಿನ

ಪಟ್ಟಣವೆಂದು ಶಾಸನ ತಿಳಿಸುತ್ತದೆ. ಅದರಂತೆ ಮಿರಿಂಜಿ (ಮಿರಜ) ಯಿಂದಲೂ ಬಂದಳಿಕೆಗೆ ವ್ಯಾಪಾರಸ್ಥರು ಬಂದಿರುತ್ತಾರೆ.

ಸಾಂಸ್ಕೃತಿಕ ಚರಿತ್ರೆ

ಧರ್ಮಗಳು

ಭಾರತದಲ್ಲಿ ಸಾಮಾನ್ಯವಾಗಿದ್ದ ವರ್ಗ, ವರ್ಣ, ಜಾತಿಗಳು ನಾಗರಖಂಡದಲ್ಲಿ ಕಂಡುಬಂದರೂ ಅವುಗಳ ಆಚರಣೆ ಇಲ್ಲಿ ಬಿಗಿಯಾಗಿರಲಿಲ್ಲ. ಕುಪಟೂರು ಶಾಸನ ಈ ಮಾತನ್ನು ಎತ್ತಿ ಹೇಳಿದೆ.**[19]**ಜಾತಿ ವಿಜಾತಿಯೆಂದು ಹಿಡಿಹಿಡಿದು ಎಳೆಯತ್ತಿ ನುಡಿವವನು ಅಷ್ಟಾಂಗ ದ್ರೋಹನುಂ ನಾಲ್ಕು ನಾಡಿಗೆಯೂ ಹದಿನೆಂಟು ಸಮಯಕೆಯೂ ಕೂಡೆ ದ್ರೋಹಿ ನಾಡಾಳ ಕೈಯ ಸಾಯ ಸಾಯುವನು'. ಇಲ್ಲಿಯ ಉದಾರ ಧೋರಣೆ ಸರ್ವಕಾಲಕ್ಕು ಆದರ್ಶವಾಗಿ ನಿಂತಿದೆ.

ನಾಗರಖಂಡದಲ್ಲಿ ನಾಗಾರಾಧನೆ, ಸೂರ್ಯಾರಾಧನೆಯಂತಹ ಪ್ರಾಚೀನ ಧರ್ಮಗಳಿಂದ ಹಿಡಿದು ಶೈವ, ವೈಷ್ಣವ, ವೀರಶೈವ, ಜೈದಂತಹ ಸುಧಾರಿತ ಧರ್ಮಗಳೂ ನೆಲೆಗೊಂಡಿವೆ.

ಸೂರ್ಯಾರಾಧನೆ : ನಾಗಾರಾಧನೆಯಂತೆ ವ್ಯಾಪಕವಾಗಿಯಲ್ಲದಿದ್ದರೂ ಸೂರ್ಯಾರಾಧನೆ ಇಲ್ಲಿ ಪ್ರಚಲಿತವಾಗಿತ್ತು. ಅನೇಕ ಶೈವದೇವಾಲಯಗಳ ದೇವಕೋಷ್ಠಗಳಲ್ಲಿ ಸೂರ್ಯ ವಿಗ್ರಹಗಳು ಪ್ರತಿಷ್ಠಿತವಾಗಿವೆ. ಅಬಲೂರಿನ ಬ್ರಹ್ಮೇಶ್ವರ ದೇವಾಲಯದಲ್ಲಿ ನಂದಿಯ ಹಿಂದೆ ಪ್ರತ್ಯೇಕ ಗರ್ಭಗೃಹದಲ್ಲಿ ಬೃಹತ್ತಾದ ಸೂರ್ಯವಿಗ್ರಹ ನಿಂತಿದೆ. ಸೂರ್ಯಾರಾಧನೆ ನಿಮಿತ್ಯ ಕಿರಣ ಸ್ತಂಭಗಳನ್ನು ಮಾಯಿತಮ್ಮನ ಮುಚಡಿ, ಮಳವಳ್ಳಿ ಗ್ರಾಮಗಳಲ್ಲಿ ಪ್ರತಿಷ್ಠಿಸಲಾಗಿತ್ತು.**[20]** ಸೂರ್ಯಗ್ರಹಣದಂದು ಕಿಚ್ಚಿನಲ್ಲಿ ಹಾರಿಕೊಂಡು ಸೂರ್ಯಬಲಿಯಾದ ಎರಡು ಘಟನೆಗಳೂ ಇಲ್ಲಿ ಜರುಗಿವೆ.**[21]**

ಶೈವಧರ್ಮ : ಕರ್ನಾಟಕದಂತೆ ನಾಗರಖಂಡದ ಪ್ರಾಚೀನವೂ ವ್ಯಾಪಕವೂ ಆದ ಧರ್ಮ ಶೈವ ಧರ್ಮ. ಮಳವಳ್ಳಿಯ ಕ್ರಿ.ಶ. ೨ನೆಯ ಶತಮಾನದ ಚುಟು ಶಾಸನ, ೫ನೆಯ ಶತಮಾನದ ಕದಂಬ ಶಾಸನಗಳು ಕರ್ನಾಟಕದ ಶೈವ ಪರಂಪರೆ ದೃಷ್ಟಿಯಿಂದ ಅತ್ಯಂತ ಮಹತ್ವದ ದಾಖಲೆಗಳಾಗಿವೆ. ಮೊದಲ ಶಸನ ಮಹಾದೇವನಿಗೆ ದತ್ತಿ ಬಿಟ್ಟದ್ದನ್ನು ಉಲ್ಲೇಖಿಸುತ್ತದೆ. ಅದೇ ರೀತಿ ತಾಳಗುಂದದ ಪ್ರಣವೇಶ್ವರನನ್ನು ಚುಟುಗಳೂ ಕದಂಬರೂ ಪೂಜಿಸಿದ್ದಾರೆ.

ಶೈವಧರ್ಮದ ಪಂಗಡಗಳಾದ ಕಾಳಾಮುಖ, ನಾಥ, ಕೌಳ ಪಂಥಗಳೂ ನಾಗರಖಂಡದಲ್ಲಿಯೂ ಬೆಳೆದು ಬಂದಿವೆ. ಇಲ್ಲಿಯ ಶಾಸನಗಳಲ್ಲಿ ೨೭ ಕಾಳಾಮುಖ ತಪೋಧನರು ಉಲ್ಲೇಖಿತರಾಗಿದ್ದಾರೆ.

ವೀರಶೈವ : ನಾಗರಖಂಡದಲ್ಲಿ ವೀರಶೈವಧರ್ಮ ಕಲ್ಯಾಣದ ಕ್ರಾಂತಿಯೊಂದಿಗೇ ಹೆಜ್ಜೆ ಇಟ್ಟಿದೆ. ೧೨ನೆಯ ಶತಮಾನದ ಶರಣರಲ್ಲಿ ಅಗ್ರಗಣ್ಯರಾದ ಅಲ್ಲಮಪ್ರಭುದೇವರ ಜನ್ಮಸ್ಥಳವಾದ 'ಕರವೂರು' ಡಾ. ಎಂ.ಎಂ.ಕಲಬುರ್ಗಿಯವರು ಊಹಿಸಿದಂತೆ (ವಿಶಾಲ) ನಾಘರತಖಂಡದ ಒಂದು ಗ್ರಾಮ. ವೈರಾಗ್ಯ ನಿಧಿ ಅಕ್ಕಮಹಾದೇವಿ ನೆರೆಯ ಉಡುತಡಿಯವಳು. ಏಕಾಂತ ರಾಮಯ್ಯನ ಕಾರ್ಯಕ್ಷೇತ್ರ ಈ ನಾಡಿನ ಅಬಲೂರು. ಬಿಜ್ಜಳನೊಂದಿಗೆ ಬಸವಣ್ಣನವರೂ ಇಲ್ಲಿಗೆ ಬಂದಿದ್ದರೆಂದು ಹೇಳಲಾಗುತ್ತದೆ.**[22]**ಬಿಜ್ಜಮಹಾದೇವಿ, ಇಕ್ಕದಮಾರಯ್ಯ ಇಲ್ಲಿಯವರು.

ಬಸವಣ್ಣನವರು ಕಲ್ಯಾಣದಲ್ಲಿ ಕಾರ್ಯತತ್ಪರರಾಗಿದ್ದ ಕಾಲದಲ್ಲಿಯೇ ಬಮ್ಮಕೂರು ಹಿರಿಯಮಠದ ಆಚಾರ್ಯರಾದ ದೇವಶಕ್ತಿ ಯತಿಗಳು ಕ್ರಿ.ಶ. ೧೧೬೩ರಲ್ಲಿ ಮಾಚೆಯ ನಾಯಕನಿಗೆ ಅನುಗ್ರಹಿಸಿದರು. ('ಅನುಗ್ರಹ' ವೀರಶೈವರಲ್ಲಿ ಪಾರಿಭಾಷಿಕ ಪದ) ಕ್ರಿ.ಶ. ೧೨೦೪ರಲ್ಲಿ ಗೊಟ್ಟೆಯಹಳ್ಳಿಯ ಬಮ್ಮಗಾವುಂಡ ತೇಜೋನಿಧಿ ಮುನಿಗಳಿಂದ ಶಿವದೀಕ್ಷೆ ಹೊಂದಿದನು. ಈ ಘಟನೆಗಳು ಕಾಳಾಮುಖಿ ಆಚಾರ್ಯರಲ್ಲಿ ಪ್ರಗತಿಪರ ಧೋರಣೆಗಳು ಉದಿಸಿದುದಕ್ಕೆ ನಿರ್ದಶನಗಳಾಗಿವೆ. ಕಾಳಾಮುಖ ಮಠಗಳು ವೀರಶೈವ ಮಠಗಳಾಗಿ ಪರಿವರ್ತನೆಗೊಂಡುದಕ್ಕೂ ಇವು ನಿದರ್ಶನಗಳು.

ವೈಷ್ಣವ ಧರ್ಮ : ನಾಗರಖಂಡ ಕಂಪಣದಲ್ಲಿ ಈ ಮತ ಹೆಚ್ಚು ಪ್ರಚಲಿತವಿದ್ದಂತಿಲ್ಲ. ಹಲವು ದೇವಾಲಯಗಳ ದೇವಕೋಷ್ಠಗಳಲ್ಲಿ, ತ್ರೈಪುರುಷ ದೇವಾಲಯಗಳಲ್ಲಿ ವಿಷ್ಣು ವಿಗ್ರಹಗಳು ಶೋಭಿಸುತ್ತವೆ. ಆದರೂ ಇಲ್ಲಿ ಲ ವೈಷ್ಣವ ದೇವಾಲಯಗಳು ಇದ್ದ ಬಗೆಗೆ ಶಾಸನೋಲ್ಲೇಖಗಳಿವೆ. ಅಬಲೂರು ಬಸವೇಶ್ವರ ದೇವಾಲಯದ ಆವರಣದಲ್ಲಿ ಚಿಕ್ಕ ಏಕಗರ್ಭ ದೇವಾಲಯವಿದೆ. ಇಲ್ಲಿಯ ವಿಷ್ಣು ವಿಗ್ರಹ ಆದಿ ಕದಂಬರ ಕಾಲದ್ದೆಂದು ಗುರುತಿಸಲಾಗಿದೆ.**[23]**ಇದರಿಂದ ಪ್ರಾಚೀನ ಕಾಲದಿಂದಲೂ ವೈಷ್ಣವಧರ್ಮ ಇಲ್ಲಿ ಇದ್ದುದಾಗಿ ಸ್ಥಿತವಾಗುತ್ತದೆ.

ಜೈನಧರ್ಮ : ನಾಗರಖಂಡಕ್ಕೆ ಜೈನಧರ್ಮ ೬ನೆಯ ಶತಮಾನದಲ್ಲಿ ಪ್ರವೇಶಿಸಿದೆ. ಕ್ರಿ.ಶ. ೫೨೮ರ ಶಿವಳ್ಳಿ ತಾಮ್ರಶಾಸನದಲ್ಲಿ ಬಂದಳಿಕೆ ನಾಗರಕೆರೆಗೆ 'ಶಾಂತಿ ತಟಾಕ' ವೆಂದು ಶಾಂತಿನಾಥ ತೀರ್ಥಂಕರನ ಹೆಸರಿನಲ್ಲಿ ಕರೆಯಲಾಗಿದೆ. ಈ ಕೆರೆ ಏರಿಗೆ ಹೊಂದಿಕೊಂಡೇ ಪ್ರಾಚೀನ ಶಾಂತಿನಾಥ ಬಸದಿ ಇದೆ.

ಬಂದಳಿಕೆ ಸಮೀಪದ ಮುತ್ತಳ್ಳಿಯ ಕ್ರಿ.ಶ. ಸು. ೭೬೦ರ ಗೋಸಾಸನಗಳಲ್ಲಿ ಜಿನಮುನಿಗಳ ಹೆಸರುಗಳಿವೆ. ನಾಗರಖಂಡವನ್ನಾಳಿದ ಸಾಂತರ ಅರಸರು ಜೈನರಾಗಿದ್ದರು. ಚಿಕ್ಕಮಾಗಡಿ, ಬಾರಂಗಿ, ತೆವರತೆಪ್ಪ, ಎಲೆವಾಳ, ಅಬಲೂರು, ಕುಪಟೂರುಗಳಂಥ ಪ್ರಮುಖ ಕೇಂದ್ರಗಳಲ್ಲಿ ಜೈನ ಸಾಮಂತ ಮನೆತನಗಳು ಆಗಿಹೋಗಿವೆ. ಇವರ ಕಾಲದಲ್ಲಿ ಅನೇಕ ಜಿನಬಸದಿಗಳು ನಿರ್ಮಾಣಗೊಂಡಿವೆ. ದಾನದತ್ತಿ ಪಡೆದಿವೆ. ಸಮಾಧಿ ಮರಣದ ವಿಷಧಿ ಕಲ್ಲುಗಳು ಸಾಕಷ್ಟು ನಿಂತಿವೆ. ವಿದ್ವಾಂಸರೂ ತಪಸ್ವಿಗಳೂ ಮಾಂತ್ರಿಕರೂ ಆದ ಜಿನಮುನಿಗಳನೇಕರು ಇಲ್ಲಿ ಆಗಿಹೋಗಿದ್ದಾರೆ.

ಹಾನಗಲ್ಲ ಕದಂಬ ಕೀರ್ತಿದೇವನ ಪಟ್ಟಮಹಿಷಿ ಮಾಳಲದೇವಿ ಕ್ರಿ.ಶ. ೧೦೭೭ರಲ್ಲಿ ಕುಪಟೂರಲ್ಲಿ ಪಾರ್ಶ್ವನಾಥ ಚೈತ್ಯಾಲಯ ನಿರ್ಮಿಸಿ, ಅಗ್ರಹಾರದಲ್ಲಿ ಜೈನಧರ್ಮದ ಅಸ್ತಿಭಾರ ಹಾಕಿದಳು. ಅಗ್ರಹಾರದ ಮಹಾಜನರನ್ನು ಪೂಜಿಸಿ ಅವರಿಷ್ಟದಂತೆ ಆ ಬಸದಿಗೆ 'ಬ್ರಹ್ಮ ಜಿನಾಲಯ'ವೆಂದು ನಾಮಕರಣ ಮಾಡಿದಳು. ಈ ಬ್ರಹ್ಮ ಜಿನಾಲಯ ಈ ಭಾಗದ ಜಿನಕೇಂದ್ರವಾಗಿ ಪರಿಣಮಿಸಿತು.

ಅಬಲೂರಲ್ಲಿ ಏಕಾಂತರಾಮಯ್ಯನ ಕಾಲಕ್ಕೆ ನಡೆದ ಘಟನೆಯಿಂದಾಗಿ ಜೈನಧರ್ಮ ಹೆಮ್ಮೆಟ್ಟಿತು.

ದೇವಾಲಯಗಳು

ನಾಗರಖಂಡದದಲ್ಲಿ ೭೩ ದೇವಾಲಯಗಳು ಶಾಸನೋಕ್ತವಾಗಿವೆ. ಇವುಗಳಲ್ಲಿ ೬೯ ಶೈವ, ೭ ವೈಷ್ಣವ, ೭ ಜೈನದೇವಾಲಯಗಳಿವೆ. ಶಾಸನೋಕ್ತವಾಗದ ಅನೇಕ ದೇವಾಲಯಗಳೂ ಇವೆ.

ಕ್ರಿ.ಶ. ೧೫೦ ರಷ್ಟು ಪೂರ್ವದಲ್ಲಿಯೇ ಮಳವಳ್ಳಿಯ ಮಹಾದೇವ ದೇವಾಲಯ ಉಲ್ಲೇಖಗೊಂಡಿರುವುದು ಒಂದು ದಾಖಲೆ ಎನಿಸುತ್ತದೆ. ವಾಸ್ತುಶಿಲ್ಪ ಮೂರ್ತಿಶಿಲ್ಪ ಕಲೆಗಳ ಬೆಳವಣಿಗೆಯ ದೃಷ್ಟಿಯಿಂದ ಇಲ್ಲಿಯ ದೇವಾಲಯಗಳು ಗಮನಾರ್ಹವಾಗಿವೆ. ಕಲಾತ್ಮಕವಾಗಿಯೂ ಇವು ಪ್ರವಾಸಿಗರ ಕಣ್ಮನ ಸೆಳೆಯುತ್ತವೆ.

ಕೋಟಿಪುರದ ಕೈಟಭೇಶ್ವರ ದೇವಾಲಯ ನಾಗರಖಂಡದ ಅತ್ಯಂತ ಶ್ರೇಷ್ಠ ದೇವಾಲಯವಾಗಿದ್ದು ಪ್ರೇಕ್ಷಣೀಯವಾಗಿದೆ. ಇದರ ಸಭಾ ಮಂಟಪದಲ್ಲಿ ಸುಮಾರು ೧೧ ಅಡಿ ಎತ್ತರದ ಚಾಲುಕ್ಯ ಶೈಲಿಯ ನುಣುಪಾದ ವೃತ್ತಾಕಾರದ ಅಲಂಕೃತ ಕಂಭಗಳು ಇವೆ. ಕಕ್ಷಾಸನಗಳ ಮೇಲೆ ಇರುವ ೧೬ ಕಂಭಗಳೂ ೧೬ ಬದಿಗಳನ್ನು ಹೊಂದಿವೆ. ಮಂಟಪದ ಮಧ್ಯದ ಛತ್ತಿನಲ್ಲಿರುವ ಭುವನೇಶ್ವರಿ ಈ ದೇವಾಲಯದ ಅತ್ಯಂತ ಆಕರ್ಷಕ ಭಾಗವು, ಇದರ ಒಳಮುಖದ ಮೊದಲ ಸುತ್ತಿನಲ್ಲಿ ಅಷ್ಟದಿಕ್ಪಾಲಕರು, ಇದರ ಮೇಲಿನ ಎರಡು ಸುತ್ತುಗಳಲ್ಲಿ ಋಷಿ-ಮುನಿಗಳು ಕಂಡು ಬರುತ್ತಾರೆ. ಮಧ್ಯದಲ್ಲಿ ಇಳಿಬಿದ್ದಿರುವ ಎಸಳಿಗೆ ಮೂರು ಸುತ್ತು ದಳಗಳಿವೆ.

ಮುಖ ಮಂಟಪದ ಎದುರು ಭಾಗದಲ್ಲಿ ಸುತ್ತುವರಿದಿರುವ ಜಗತಿಯಲ್ಲಿ ಅನೇಕ ದೇವ ದೇವತೆಗಳನ್ನು ಹೊಂದಿದ ಕೀರ್ತಿಮುಖಗಳು ಸಾಲುಗಟ್ಟಿವೆ. ಪೂರ್ವಭಾಗದಲ್ಲಿ ತಾಂಡವೇಶ್ವರ, ಯಕ್ಷರು, ತಾಂಡವ ಗಣಪತಿ, ದಿಕ್ಪಾಲಕರು, ಭೈರವ, ಹರಿಹರ, ಬ್ರಹ್ಮ, ಪಾರ್ವತಿ, ಉತ್ತರದ ಜಗತಿಯಲ್ಲಿ ಉಗ್ರನರಸಿಂಹ, ವರಾಹ, ಗರುಡ, ಕೇಶವ, ಢಾಲು-ಭರ್ಚಿ ಹಿಡಿದ ಕುಮಾರ, ನರ್ತಿಸುವ ದುರ್ಗೆ, ಉಮಾಮಹೇಶ್ವರ, ಸೂರ್ಯ, ಮಹಿಷಾಸುರಮರ್ದಿನಿ ಕಂಡುಬರುತ್ತಾರೆ.

ಬಂದಳಿಕೆ ಸೋಮೇಶ್ಶವರ ದೇವಾಲಯ : ಈ ಮಂದಿರದ ದ್ವಾರ ಮಂಟಪಕ್ಕಿರುವ ಜಾಲಂದರದ ಎರಡು ಸಾಲುಗಳ ಮಧ್ಯದಲ್ಲಿ ವಿಸ್ತಾರವಾದ ಅಲಂಕೃತ ಪಟ್ಟಿ ಇದ್ದು ಇದರಲ್ಲಿ ರಾಮಾಯಣ, ಮಹಾಭಾರತದ ದೃಶ್ಯಗಳನ್ನು ಸುಂದರವಾಗಿ ಕಂಡರಿಸಲಾಗಿದೆ.

ಬಂದಳಿಕೆ ತ್ರಿಮೂರ್ತಿ ದೇವಾಲಯ

ಇದು ತ್ರೈಪುರುಷ ದೇವಾಲಯ, ಚಾಲುಕ್ಯ ಶೈಲಿಯ ಶಿಖರಗಳನ್ನು ಹೊಂದಿದ್ದು, ಪಶ್ಚಿಮ ಶಿಖರದ ಶುಕನಾಸಿಯ ಸಿಂಹಲಲಾಟ ಭಾರೀ ಭವ್ಯವಾಗಿದೆ. ಬಾಯ್ದೆರೆದ ಸಿಂಹದ ಉಗ್ರಮುಖ ವಿಶಾಲವಾಗಿ ತೆರೆದ ಕಣ್ಣುಗಳು, ಬಾಯಿಯಿಂದ ಹೊರಚಾಚಿದ ನಾಲಿಗೆ, ಎದ್ದು ಕಾಣುವ ಮೂರು ಹಲ್ಲುಗಳನ್ನು ನೋಡುತ್ತಿದ್ದರೆ ಸಿಂಹವೊಂದು ಮಲಗಿದಂತೆ ಭಾಸವಾಗುತ್ತದೆ. ಈ ದೇವಾಲಯದ ಗರ್ಭಗೃಹಗಳ ಬಾಗಿಲುವಾಡಗಳ ಮಕರತೋರಣಗಳೂ ಅಷ್ಟೇ ಆಕರ್ಷಕವಾಗಿವೆ.

ಅಬಲೂರು ಬ್ರಹ್ಮೇಶ್ವರ, ತಿಳಿವಳ್ಳಿಯ ಸಾವಂತೇಶ್ವರ ದೇವಾಲಯಗಳು ಕುಪಟೂರಿನ ರಾಮೇಶ್ವರ ದೇವಾಲಯ, ಪಾರ್ಶ್ವನಾಥ ಬಸದಿ, ಅಬಲೂರು ಸೋಮೇಶ್ವರ ದೇವಾಲಯದ ಶರಣರ ವಿಗ್ರಹಗಳು, ಏಕಾಂತರಾಮಯ್ಯ ಶಿರಸ್ ಪವಾಡ ಮೆರೆದ ಹಾಗೂ ಜೈನರೊಡನೆ ಹೋರಾಡಿದ ದೃಶ್ಯಗಳನ್ನುಳ್ಳ ಫಲಕಗಳು ಐತಿಹಾಸಿಕ ಮಹತ್ವದವಾಗಿವೆ. ಬಂದಳಿಕೆ ಹಾಗೂ ಅಬಲೂರುಗಳಲ್ಲಿ ಕಂಡುಬರುವ ಸಿಡಿತಲೆ ಮತ್ತು ಪೆಣ್ಣುಯ್ಯಲ್ ದೃಶ್ಯದ ಶಾಸನಗಳೂ ಆಕರ್ಷಕವಾಗಿವೆ.

ಶಿಕ್ಷಣ ಮತ್ತು ಸಾಹಿತ್ಯ

ಅಗ್ರಹಾರಗಳು, ಬ್ರಹ್ಮಪುರಿ, ಘಟಿಕಾಸ್ಥಾನಗಳೂ, ಶಿವಪುರಗಳು ಪ್ರಾಚೀನ ಕಾಲದ ಪ್ರಮುಖ ಶಿಕ್ಷಣ ಸಂಸ್ಥೆಗಳಾಗಿದ್ದವು. ನಾಗರಖಂಡದಲ್ಲಿ ಕುಪಟರೂರು, ತಿಳಿವಳ್ಳಿ, ಚಿಕ್ಕ ಕೆರೆಯೂರು, ಬೆಣ್ಣೇಗೇರಿ, ನೀರಲಗಿ, ಅಗ್ರಹಾರಮುಚಡಿ, ಕಚವಿ ಹೀಗೆ ಏಳು ಗ್ರಾಮಗಳಲ್ಲಿ ಅಗ್ರಹಾರಗಳು, ಬಂದಳಿಕೆ, ಕುಪಟೂರು, ತಿಳಿವಳ್ಳಿಗಳಲ್ಲಿ ಒಂದೊಂದು ಬ್ರಹ್ಮಪುರಿಯೂ ಕುಪಟೂರಲ್ಲಿ ಘಟಿಕಾಸ್ಥಾನವೂ, ಬಾರಂಗಿಯಲ್ಲಿ ಶಿವಪುರವೂ ಇದ್ದವು. ಇವೆಲ್ಲವಕ್ಕೆ ಉದಾರ ರಾಜಾಶ್ರಯವಿರುತ್ತಿತ್ತು.

ಸಾಹಿತ್ಯ : ನಾಗರಖಂಡದಲ್ಲಿ ಇದುವರೆಗೆ ೧೭ ಶಾಸನ ಕವಿಗಳನ್ನು ಗುರುತಿಸಲಾಗಿದೆ. ಇವರನ್ನು ಬಿಟ್ಟರೆ ಗ್ರಂಥ ಸಾಹಿತ್ಯ ರಚಿಸಿದ ಮೂವರು ಕವಿಗಳು ಕಂಡು ಬರುತ್ತಾರೆ. ಇವರಲ್ಲಿ ವಚನಕಾರ ಏಕಾಂತ ರಾಮಯ್ಯ, ಜನಪದ ಮಹಾಕವಿ ಸರ್ವಜ್ಞ ಸುಪರಿಚಿತರಾಗಿ ಇನ್ನುಳಿದ ಓರ್ವ ಕವಿ ಮಹಿಳೆಯಾಗಿದ್ದು ಸಾಹಿತ್ಯ ಲೋಕಕ್ಕೆ ಪ್ರಥಮವಾಗಿ ಪರಿಚಯವಾಗುತ್ತಿದ್ದಾಳೆ.

ಶ್ರೀಮತಿ ಜಕ್ಕಲಾಂಬಾ : (ಕ್ರಿ.ಶ. ೧೨೧೨ರ ಪೂರ್ವದಲ್ಲಿ) ಪ್ರಪ್ರಥಮ ಜೈನ ಕವಯಿತ್ರಿ ಇವಳು. ಚಿಕ್ಕಮಾಗಡಿ ಸಾಮಂತ ಮನೆತನಕ್ಕೆ ಸೇರಿದವಳು.**[24]**ಇವರದು ಅಂಡುವಂಶ. ಈ ವಂಶದ ಚರಿತ್ರೆ ಕ್ರಿ.ಶ. ೯೦೨ರಿಂದಲೇ ಪ್ರಾರಂಭವಾಗುತ್ತದೆ. ಜಕ್ಕಲಾಂಬೆಯ ಅಜ್ಜ ಶಂಕರ ಚಿಕ್ಕಮಾಗಡಿಯಲ್ಲಿ ಶಾಂತಿನಾಥ ಜಿನಾಲಯವನ್ನು ನಿರ್ಮಿಸಿದ. ಶಂಕರನ ಪತ್ನಿ ಜಕ್ಕವ್ವೆ ಪರಮ ಜಿನಭಕ್ತಳು. ಇವಳ ಹೆಸರನ್ನು ಮೊಮ್ಮಗಳಿಗೆ ಇಟ್ಟಂತಿದೆ. ಜಕ್ಕಲಾಂಬೆಯ ತಂದೆ ಸಾಮಂತ ಮುದ್ದಯ್ಯ, ತಾಯಿ ಲಚ್ಚಾಂಬಿಕೆ, ತಂಗಿ ಮಲ್ಲಗೌಡಿ, ಗುರುಗಳು ಅನಂತ ಕೀರ್ತಿಮುನಿಗಳು. ಜಕ್ಕವ್ವೆ ಕಿರಿ ವಯಸ್ಸಿನಲ್ಲಿಯೇ ವೈರಾಗ್ಯ ಭಾವ ಹೊಂದಿದಳು. ಅವಳು 'ಚರಿತ್ರ ಗುಣಾಂಕಮಾಲೆ' ಎಂಬ ಕೃತಿಯನ್ನು ರಚಿಸಿದ್ದಾಗಿ ಶಾಸನವು ಹೇಳುತ್ತದೆ. ಈ ಕೃತಿಯನ್ನು 'ಸುಪ್ರಬಂಧ' ವೆಂದು ಶಾಸನ ವರ್ಣಿಸಿದೆ. ಮಕ್ಕಲಾಂಬೆ ಕ್ರಿ.ಶ. ೧೨೧೨ ರಲ್ಲಿ ಸಮಾಧಿ ಮರಣ ಹೊಂದಿದಳು.

ಉಪಸಂಹಾರ

ನಾಗರಖಂಡ ಕಂಪಣ ರಾಜಕೀಯವಾಗಿಯೂ, ಸಾಮಾಜಿಕವಾಗಿಯೂ ಸಾಂಸ್ಕೃತಿಕವಾಗಿಯೂ ಅನೇಕ ವಿಶೇಷತೆಗಳನ್ನು ಮೆರೆದು ಬನವಾಸಿ ೧೨೦೦೦ ದ ಕಂಪಣಗಳಲ್ಲಿ ಒಂದು ವಿಶಿಷ್ಟ ಸ್ಥಾನಮಾನವನ್ನು ಪಡದಿದೆ.

—
(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)

[1]ಮೈಸೂರು ವಿಶ್ವವಿದ್ಯಾನಿಲಯ, ಕನ್ನಡ ಅಧ್ಯಯನ ಸಂಸ್ಥೆ, ಕನ್ನಡ ಸಾಹಿತ್ಯ ಚರಿತ್ರೆ, ಸಂ. ೧ ಪುಟ ೪೧೦.

[2]ಎ.ಕ.ಸಂ.೮ ಸೊ. ೪೧೪ ಮತ್ತು ೪೧೫ ಹಿರೇಮಾಗಡಿ ಕ್ರಿ.ಶ. ೧೧೩೯.

[3]ಸಿ.ಎಫ. ಆಯ್ಯಂಟಿ. ಪುಟ-೧೩೮.

[4]ಎ.ಕ.ಸಂ. ೭ ಶಿಕಾ – ೧೯೭ ಚಿಕ್ಕಮಾಗಡಿ ಕ್ರಿ.ಶ. ೧೧೩೯.

[5]ಜಿ.ಎಂ. ಮೊರೇಸ್ ‘ಕದಂಬ ಕುಲ’ ಪುಟ ೨೨೬.

[6]ಎ.ಕ. ಸಂ. ೮ ಸೊ-೩೪೬ ಬೆಣ್ಣಿಗೇರಿ ಕ್ರಿ.ಶ. ೧೧೬೦.

[7]ಎ.ಕ.ಸಂ.೭ ಶಿಕಾ ೧೦೨ ಬಳ್ಳಿಗಾವೆ ಕ್ರಿ.ಶ. ೧೧೬೨.

[8]ಎ.ಕ.ಸಂ. ೮, ಸೊ-೪೧೨ ಹಿರೇಮಾಗಡಿ ಕ್ರಿ.ಶ. ೧೧೭೭.

[9]ಎ.ಕ. ಸಂ. ೭ ಶಿಕಾ-೪೯೭ ಚಿಕ್ಕಮಾಗಡಿ ಕ್ರಿ.ಶ. ೧೧೮೨.

[10]ವಿವರಗಳಿಗೆ ನೋಡಿ ಮೂಲ ಪ್ರಬಂಧ ಪುಟ – ೫೮-೫೬.

[11]ಧಾ.ಶಾ.ಸೂ. (ಧಾರವಾಡ ಜಿಲ್ಲಾ ಶಾಸನ ಸೂಚಿ) ನಂ. ೧೬ ಹಿರೇಕೆರೂರು (ತಾ) ಅಬಲೂರು ಕ್ರಿ.ಶ. ೧೨೦೦.

[12]ಡಾ. ಕೊಪ್ಪ ಎಸ್.ಕೆ. ‘ತರ್ದವಾಡಿ ನಾಡು ಒಂದು ಅಧ್ಯಯನ ಸಂ. ಅ. ಪುಟ-೬೮.

[13]ಎ.ಇಂ. ಸಂ ೫ ಪುಟ-೨೩೭-೬೦ ಹಿರೇಕೆರೂರು (ತಾ) ಅಬಲೂರು ಕ್ರಿ.ಶ. ಸು. ೧೨೦೦?

[14]ಎ.ಕ. ಸಂ. ೭, ಶಿಕಾ-೨೩೫ ಬಂದಳಿಕೆ-ಕ್ರಿ.ಶ. ೧೨೦೭.

[15]ಎ.ವಿ.ನರಸಿಂಹಮೂರ್ತಿ * ‘ದ ಸೇವುಣಾಜ ಆಫ ದೇವಗಿರಿ’* ಪುಟ -೮೩ ಮತ್ತು ಎ,ಕ.ಸಂ. ೮ ಸೊ. ೩೭೬ ಹುರುಳಿ ಕ್ರಿ.ಶ. ೧೨೧೨.

[16]ಎ.ಕ. ಸಂ. ೮ ಸೊ-೪೨೬ ಗಿಣಿವಾಲ ಕ್ರಿ.ಶ. ೧೨೪೮.

[17]ಕ.ಇ. (ಕರ್ನಾಟಕ ಇನ್ಸ್ ಕ್ರಿಪ್ಷನ್ಸ್) ಸಂ. ೪ ೪೮ ಹಿರೇಕೆರೂರು (ತಾ) ಮಡಲೂರು ಕ್ರಿ.ಶ. ೧೨೬೪.

[18]ಶಿವಳ್ಳಿ ತಾಮ್ರಶಾಸನ, ಕ್ರಿ.ಶ. ೫೧೬-೫೪೦.

[19]ಎ.ಕ.ಸಂ. ೮ ಸೊ-೨೬೮ ಕುಪಟೂರು ಕ್ರಿ.ಶ. ೧೨೪೫.

[20]ಎ.ಕ.ಸಂ. ೭ ಶಿಕಾ-೨೭೯ ಮಾ. ಮುಚಡಿ. ಶಿರಾ-೨೬೬ ಮಳವಳ್ಳಿ. ಕ್ರಿ.ಶ. ೧೧೩೯.

[21]ಧಾ.ಶಾ.ಸೂ.ನಂ. ೧೧೪, ಹಾ.ನ.(ತಾ) ತಿಳಿವಳ್ಳೀ. ಕ್ರಿ.ಶ. ೧೧೩೦, ಕ.ಇ.ಸಂ ೫-೯೭ ತಿಳಿವಳ್ಳಿ.

[22]ಶಾಂತನಿರಂಜನ ಕವಿ ‘ಅಬಲೂರು ಚರಿತೆ’ ಸಂ-೬ ಮ ಪಟ್ಟೆ ೩೯-೪೪/ಕ್ರಿ.ಶ. ೧೧೪೧.

[23]ಡಾ.ರು.ಮ. ಷಡಕ್ಷರಯ್ಯ ‘ ಸಂಯುಕ್ತ ಕರ್ನಾಟಕ’ ದಿನ ಪತ್ರಿಕೆ ೨೦-೪-೧೯೯೨

[24]ಎ.ಕ. ಸಂ. ೭ ಶಿಕಾ-೨೦೨ ಚಿಕ್ಕ ಮಾಗಡಿ ಕ್ರಿ.ಶ. ೧೨೧೧.

ಮಲೆಕರ್ನಾಟಕದ ಅರಸು ಮನೆತನಗಳು: ೫. ಉದ್ರಿಯ ಅರಸರು

ಕ್ರಿ.ಶ. ಹನ್ನೆರಡು ಹದಿಮೂರನೇ ಶತಮಾನದಲ್ಲಿ ‘ಜಿಡ್ಡುಳಿಗೆ’ ನಾಡು ಒಂದು ಪ್ರಾದೇಶಿಕ ವಿಭಾಗವಾಗಿ ರೂಪುಗೊಂಡಿತ್ತು. ಈ ನಾಡಿನ ಕೇಂದ್ರ ಸ್ಥಳವಾದ ‘ಉದ್ರಿ’ ಇಂದಿಗೂ ಇದರ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಒಂದು ಪ್ರಸಿದ್ಧ ತೀರ್ಥ ಕ್ಷೇತ್ರವಾಗಿದೆ. ಈ ನಾಡಿನ ಚರಿತ್ರೆಯನ್ನು ಉಲ್ಲೇಖಿಸುವ ಬಹಳಷ್ಟು ಶಾಸನಗಳು ಉದ್ರಿಯಲ್ಲಿ ದೊರೆತಿದ್ದು, ಅದರ ಚಾರಿತ್ರಿಕ ಭೌಗೋಲಿಕ ವಿವರಗಳೊಂದಿಗೆ ರಾಜಕೀಯ, ಸಾಂಸ್ಕೃತಿಕ ವಿವರಗಳನ್ನು ದಾಖಲಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಉದ್ರಿಯ ಅರಸರನ್ನು ಕೋಳಲಾಪುರವರಾಧೀಶ್ವರರೆಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.

[1]ಹಾಗಾಗಿ ಇವರು ಮೂಲತಃ ಗಂಗ ವಂಶಿಯರೇ ಆಗಿದ್ದು ಕಲ್ಯಾಣಿ ಚಾಲುಕ್ಯರ ಮಾಂಡಲಿಕರಾಗಿ ನಂತರ ಹೊಯ್ಸಳ ಮತ್ತು ಸೇವುಣರ ಕಾಲದಲ್ಲಿ ಮಹಾಮಂಡಲೇಶ್ವರರಾಗಿ ಪ್ರಸಿದ್ಧರಾದರು.
ಜಿಡ್ಡುಗಳಿಗೆ ೭೦, ನಾಗರಖಂಡ ೭೦ ಮತ್ತು ಎಡವಟ್ಟೆ ೭೦ ಮುಂತಾದ ನಾಡುಗಳ ಆಡಳಿತದ ವಿಭಾಗಗಳನ್ನು ಹೊಂದಿರುವ ಬನವಾಸಿಯು ಮಧ್ಯಕಾಲೀನ ಸಾಮ್ರಾಜ್ಯಗಳಲ್ಲೇ ಅತ್ಯಂತ ಸಮೃದ್ಧ ಪ್ರದೇಶವಾಗಿತ್ತು. ಕುತೂಹಲದ ಅಂಶವೆಂದರೆ ಪ್ರತಿಯೊಂದು ನಾಡಿಗೆ ಅದರದ್ದೇ ಆದ ರಾಜಧಾನಿ ಇರುವುದು. ಬಂದಳಿಕೆ (ಬಾಂಧವಪುರ) ನಾಗರಖಂಡದ ರಾಜಧಾನಿ. ಸಾತೇನಹಳ್ಳಿ ಸತ್ತಳಿಗೆ ನಾಡಿನ ಕೇಂದ್ರ ಸ್ಥಾನವಾಗಿತ್ತು.**[2]**ಅಂತೆಯೇ ಜಿಡ್ಡುಗಳಿಗೆ ೭೦ಕ್ಕೆ ರಾಜಧಾನಿಯಾಗಿ ಪ್ರಸಿದ್ಧಿ ಪಡೆದಿದ್ದ ಉದ್ರಿಯು ಇಂದು ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕು ಕೇಂದ್ರದಿಂದ ಉತ್ತರ ಪೂರ್ವಕ್ಕೆ ಸುಮಾರು ೧೪ ಕಿ.ಮೀ. ದೂರದಲ್ಲಿರುವ ಒಂದು ಹೋಬಳಿ ಗ್ರಾಮವಾಗಿದೆ.**[3]**(ನಕಾಶೆ ನೋಡಿ) ಇದಕ್ಕೆ ಮೇರೆಯಾಗಿ ಉತ್ತರ ದಿಕ್ಕಿನಲ್ಲಿ ಬೆಟ್ಟದ ಕುರ್ಲಿ, ದಕ್ಷಿಣಕ್ಕೆ, ಚಿಕ್ಕವಳ್ಳಿ, ಪೂರ್ವದಲ್ಲಿ ತೊಗರ್ಸಿ ಮತ್ತು ಪಶ್ಚಿಮ ದಿಕ್ಕಿನಲ್ಲಿ ಎಡೆಕೊಪ್ಪ ಗ್ರಾಮಗಳಿವೆ.

ಅಧ್ಯಯನ ಆಕರಗಳು

ಅತ್ಯಮೂಲ್ಯವಾದ ಲಿಖಿತ ದಾಖಲೆಗಳೆಂದರೆ ಶಾಸನಗಳು. ಉದ್ರಿಯ ಅರಸರ ರಾಜಕೀಯ ಮತ್ತು ಸಾಂಸ್ಕೃತಿಕ ಅಧ್ಯಯನಕ್ಕೆ ಶಾಸನಗಳೇ ಮೂಲ ಆಕರಗಳಾಗಿವೆ. ಆದ್ದರಿಂದ ಈ ಲೇಖನಕ್ಕೆ ಆ ಶಾಸನಗಳನ್ನು ಮತ್ತು ಈವರೆಗಿನ ಅಧ್ಯಯನಗಳ ನೆರವನ್ನು ಪಡೆಯಲಾಗಿದೆ. ಸುಮಾರು ೨೧ ಶಾಸನಗಳನ್ನು ಅಧ್ಯಯನ ಮಾಡಿ ಈ ಲೇಖನವನ್ನು ಸಿದ್ಧಪಡಿಸಲಾಗಿದೆ.

ಉದ್ರಿಯ ಭೌಗೋಳಿಕ ಹಿನ್ನೆಲೆ, ಅರಸರ ವಂಶಾವಳಿ, ಸಾಮ್ರಾಜ್ಯಗಳ ಚೌಕಟ್ಟಿನಲ್ಲಿ ಅವರ ಸ್ಥಾನಮಾನ, ಅವರಿಗಿದ್ದ ಬಿರುದುಗಳು ಮತ್ತು ಅವರ ರಾಜಕೀಯ ಸಾಧನೆಗಳ ಬಗೆಗಿನ ಹೆಚ್ಚಿನ ಮಾಹಿತಿ ಸಂಗ್ರಹಕ್ಕಾಗಿ ಬಿ.ಎಲ್.ರೈಸ್ ಅವರ “ಎಪಿಗ್ರಾಫಿಯಾ ಕರ್ನಾಟಕಾ” ಶಿವಮೊಗ್ ಜಿಲ್ಲೆ ಸಂ. ೮ ಉದ್ರಿ ಶಾಸನಗಳು ಎಂಬ ಭಾಗವನ್ನು ಗಮನಿಸಲಾಗಿದೆ.**[4]**

ಧಾರ್ಮಿಕವಾಗಿ ಮಧ್ಯಯುಗವೆಂದರೆ ಸ್ಥಿತ್ಯಂತರದ ಕಾಲ. ಉದ್ರಿಯ ಅರಸರ ಆಳ್ವಿಕೆಯಲ್ಲಿ ನಿರ್ಮಿತವಾದ ದೇವಾಲಯಗಳು ಮತ್ತು ಅವುಗಳಿಗೆ ದೊರೆತ ದಾನ ದತ್ತಿಗಳಂತಹ ಸಾಂಸ್ಕೃತಿಕ ಮಹತ್ವವುಳ್ಳ ಅಂಶಗಳನ್ನು ಶಾಸನಗಳ ಆಧಾರದಿಂದ ವಿಶ್ಲೇಷಿಸಲಾಗಿದೆ. ಹಾಗೂ ಕ್ಷೇತ್ರಕಾರ್ಯದಿಂದ ಪೂರಕ ವಿವರಗಳನ್ನು ಸಂಗ್ರಹಿಸಲಾಗಿದೆ.


ಈವರೆಗಿನ ಅಧ್ಯಯನ

‘ಉದ್ರಿ’ಯ ಅರಸರ ರಾಜಕೀಯ ಸಾಧನೆಗಳ ಮತ್ತು ಅವರ ಸಾಂಸ್ಕೃತಿಕ ಕೊಡುಗೆಗಳ ಬಗೆಗೆ ವ್ಯಾಪಕವಾದ ಅಧ್ಯಯನ ನಡೆದಿಲ್ಲ. ಶಿವಮೊಗ್ಗ ಗೆಜಿಟೇಯರ ಪುಟ ಸಂಖ್ಯೆ ೬೭೦ ರಲ್ಲಿ ‘ಉದ್ರಿ’ ಯ ಕೆಲವು ದೇವಾಲಯಗಳ ಲಕ್ಷಣಗಳ ಬಗೆಗೆ ಸಂಕ್ಷಿಪ್ತವಾಗಿ ಉಲ್ಲೇಖಿಸಲಾಗಿದೆ. ರಾಜಾರಾಮ ಹೆಗಡೆ, ರಾಮಭಟ್ಟ ಮತ್ತು ಭೋಜರಾಜ ಪಾಟೀಲರು ಬನವಾಸಿ ನಾಡಿನಲ್ಲಿ ಚಾರಿತ್ರಿಕ ಸಂಶೋಧನೆ ಮಾಡಿರುತ್ತಾರೆ. ಆದರೆ ಅವರ ಬಿಡಿ ಲೇಖನಗಳಲ್ಲಿ ‘ಉದ್ರಿ’ಯ ಅರಸರ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳ ಬಗೆಗೆ ಆಳವಾದ ಅಧ್ಯಯನ ನಡೆದಿಲ್ಲ. ರಾಜಾರಮ ಹೆಗಡೆಯವರ ಅಧ್ಯಯನ ಆರ್ಟ ಆಂಡ್ ಪೇಟ್ರನೇಜ್ ಇನ್ ಮಿಡೀವಲ್ ಬನವಾಸಿ ೧೨೦೦೦ದಲ್ಲಿ ಉದ್ರಿಯ ಶಾಂತಿನಾಥ ಬಸದಿಯ ತಲ ವಿನ್ಯಾಸ, ಉದ್ರಿಯ ಇತರ ದೇವಾಲಯಗಳ ಕುರಿತು ಮತ್ತು ಕ್ರಿ.ಶ. ೧೧೪೫ ರ ಉದ್ರಿಯ ಶಾಸನದಲ್ಲಿ ಕುಂತಲನಾಡಿನ ವರ್ಣನೆ ಬಗೆಗೆ ಇರುವ ಮಾಹಿತಿ ವಿವರಿಸಿದ್ದಾರೆ.[5]ರಾಮಭಟ್ಟರವರು ಮಲೆನಾಡಿನ ಜೈನ ಅರಸೊತ್ತಿಗೆ ಒಂದು ಅಧ್ಯಯನದಲ್ಲಿ ಜಿಡ್ಡುಳಿಗೆಯ ಗಂಗರು ಎಂಬ ಲೇಖನದಲ್ಲಿ ಉದ್ರಿಯ ಅರಸರ ಸಂಕ್ಷಿಪ್ತ ರಾಜಕೀಯ ಚರಿತ್ರೆಯನ್ನು ವಿಶ್ಲೇಷಿಸಿದ್ದಾರೆ.[6]

ಉದ್ರಿಯ ಪರಿಸರದ ವರ್ಣನೆ

ಉದ್ರಿಯ ಶಾಸನವೊಂದು (ಕ್ರಿ.ಶ. ೧೧೩೯) ಉದ್ರಿಯ ಮತ್ತು ಅದರ ಪರಿಸರದ ಭೌಗೋಳಿಕ ಸಿರಿ ಸಂಪತ್ತಿನ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದೆ. ಅದರ ವರ್ಣನೆ ಕೆಳಗಿನಂತಿದೆ.[7]

ಕುಂತಳ ದೇಶದ ಬನವಾಸಿ ನಾಡಿನಲ್ಲಿ ಜಿಡ್ಡುಳಿಗೆ ನಾಡಿನ ರಾಜಧಾನಿ ಉದ್ದರೆಯು ಚಂದ್ರನಂತೆ ಕಂಗೊಳಿಸುತ್ತಿತ್ತು. ಸುತ್ತಲೂ ಬೆಳೆದಿರುವ ಶ್ರೀಗಂಧ, ಭತ್ತದ ಗದ್ದೆಗಳು, ತೆಂಗು, ಕಮಲದ ಸರೋವರಗಳಿಂದ ಉದ್ರಿಯು ಶೋಭಾಯಮಾನವಾಗಿತ್ತು. ಹಾಗೆಯೇ ಅಲ್ಲಿನ ದಟ್ಟವಾದ ನಿಸರ್ಗ ಸೌಂದರ್ಯಕ್ಕೆ ಕಾರಣವಾದ ಬಕುಲಾ, ತಿಲಕ, ಸಂಪಿಗೆ, ಅಶೋಕ, ನೇರಳ, ಜಂಜೀರ, ಅಡಿಕೆ ಮುಂತಾದ ವೃಕ್ಷಗಳಲ್ಲದೆ, ಕುರವಂತ, ವೀಳ್ಯದೆಲೆಯ ಬಳ್ಳಿಗಳ ವಿವರಗಳನ್ನು ಆ ಶಾಸನ ಕೊಡುತ್ತದೆ. ಅನೇಕ ಕೆರೆ ಕಾಲುವೆಗಳಿಂದಲೂ ದೊಡ್ಡ, ದೊಡ್ಡ ಮನೆಗಳಿಂದಲು ಕೂಡಿದ ಉದ್ದರೆಯ ವಿದ್ವಾಂಸರಿಗೆ, ಪಂಡಿತರಿಗೆ, ಭೋಗಿಗಳಿಗೆ, ಯೋಗಿಗಳಿಗೆ ಸಂಗಮ ಸ್ಥಾನವಾಗಿತ್ತೆಂದು ತಿಳಿದು ಬರುತ್ತದೆ. ಜಿಡ್ಡುಳಿಗೆ ನಾಡಿಗೆ ರಾಜಧಾನಿಯೆಂದು ತಿಳಿದು ಬರುವ ಇಂದಿನ ಉದ್ರಿಯು ಶಾಸನಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಗುರುತಿಸಲ್ಪಟ್ಟಿದೆ. ಅವುಗಳಲ್ಲಿ ಮುಖ್ಯವಾದ ಹೆಸರುಗಳೆಂದರೆ : ಉದ್ದರೆ,[8]ಉದರ್ರೆ,[9]ಯುದ್ದರೆ,[10]ಜದರ ದುರ್ಗಾ ಉದ್ದರೆ,[11]ಉದ್ದರಿಪೂರ[12] ಮತ್ತು ಉದ್ದರೆಯ ಪುರ[13]ಎಂಬುವುದು. ಕ್ರಿ.ಶ. ೧೧೪೫ರ ಶಾಸನವೊಂದು ಜಿಡ್ಡುಳಿಗೆ ನಾಡಿಗೆ ಉದ್ದರೆ ಎಂಬ ರಾಜಧಾನಿ ಇತ್ತು ಎಂದು ತಿಳಿಸುತ್ತದೆ.



ರಾಜಕೀಯ ಚರಿತ್ರೆ

ಬಿಟ್ಟಿಗ : ಉದ್ರಿಯ ಅರಸರ ಇತಿಹಾಸವು ಬಿಟ್ಟಿಗನಿಂದ ಪ್ರಾರಂಭವಾಗುತ್ತದೆ. ಕ್ರಿ.ಶ. ೧೧೯೮ರ ಶಾಸನದಲ್ಲಿ ಈತನ ಪ್ರಥಮ ಉಲ್ಲೇಖವಿದೆ. ಈತನು ೧೧ನೇ ಶತಮಾನದಲ್ಲಿ ಜೀವಿಸಿದ್ದಿರಬಹುದು. ಇದೇ ಶಾಸನದಲ್ಲಿ ಈತನನ್ನು 'ಕಲಿಜಟ್ಟಿಗ' ಎಂದು ಕರೆಯಲಾಗಿದೆ.[14]ಅಸಾಧಾರಣ ಶೌರ್ಯವುಳ್ಳವನು, ಛಲದ ಸ್ವಭಾವದವನು ಮತ್ತು ಅರಿಭಯಂಕರನು ಆದ ಬಿಟ್ಟಿಗನು ತನ್ನ ವೈರಿಗಳ ಪಟ್ಟಣವನ್ನು ಸುಟ್ಟು 'ಕಂಚಿಗನಾದ' ಎಂಬ ಬಿರುದನ್ನು ಪಡೆದು, ಉದ್ರಿಯಲ್ಲಿ ತನ್ನ ಆಳ್ವಿಕೆಯನ್ನು ಆರಂಭಿಸಿದನು.

ಈತನ ಮಗ ಮಾರಸಿಂಗ ಗಂಗಕುಲಕ್ಕೆ ಉತ್ತಮನೂ ಅಸಾಧಾರಣ ಪರಾಕ್ರಮಿಯೂ ಆಗಿದ್ದನು. ಇವನ ಮಗ ಕೀರ್ತಿದೇವ.

ಚಾಲುಕ್ಯ ಅಥವಾ ವಿಕ್ರಮಾದಿತ್ಯನ ರಾಜ್ಯೋದಯದ ಕಾಲದಲ್ಲಿ ಉದ್ರೆಯಲ್ಲಿ ಒಬ್ಬ ಯಕ್ಕಲರಸನು ಆಳುತ್ತಿದ್ದನು. ಅವನಿಗೆ ಸಂಬಂಧಿಸಿದ ೧೦೭೭, ೧೦೮೩ ರ ಶಾಸನಗಳು ಅಲ್ಲಿವೆ. ಆದರೆ ಈ ಯಕ್ಕಲನು ಮೊದಲನೇ ಯಕ್ಕಲನೇ ಎಂಬುದು ಸ್ಪಷ್ಟವಿಲ್ಲ.

ಮಾರಸಿಂಗ II :ಕೀರ್ತಿದೇವನ ಮಗನಾದ ಈತನು ಉದ್ರಿಯ ಅರಸರಲ್ಲಿ ಪರಾಕ್ರಮಿಯಾಗಿದ್ದನು. ಚಾಲುಕ್ಯ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಕಂಚಿಗೆ ದಾಳಿಯಿಟ್ಟು ಆ ನಾಡಿನ ಸಂಪತ್ತನ್ನು ಸೂರೆಗೊಂಡನು.[15]ಮಾರಸಿಂಗನು ತೇಜಸ್ವಿಯೂ, ಕೀರ್ತಿವಂತನೂ, ಯುದ್ಧ ಪ್ರಿಯನೂ ಆಗಿದ್ದನೆಂದು ಅವನ ಗುಣ ಮತ್ತು ಸಾಮರ್ಥ್ಯದ ಬಗ್ಗೆ ಕ್ರಿ.ಶ. ೧೧೩೯ರ ಶಾಸನ ಮಾಹಿತಿ ನೀಡುತ್ತದೆ.

ಯೆಕ್ಕಲದೇವ I :ಮಾರಸಿಂಗನ ಪತ್ನಿ ಅನಲದೇವಿ ಹಾಗೂ ಅವರ ಮಗ ಯೆಕ್ಕಲದೇವ. ಶಾಸನಗಳಲ್ಲಿ ಈತನನ್ನು ಯೆಕ್ಕಲದೇವ ಮತ್ತು ಯೆಕ್ಕಲಭೂಪನೆಂದು ಗುರುತಿಸಲಾಗಿದೆ. ಲಭ್ಯ

ಶಾಸನಗಳ ಆಧಾರದಿಂದ ತಿಳಿದು ಬರುವುದೆಂದರೆ ಜಿಡ್ಡುಳಿಗೆ ಗಂಗ ಅರಸರಲ್ಲಿ ಯೆಕ್ಕಲಭೂಪ ಪ್ರಖ್ಯಾತನಾಗಿದ್ದನು. ಈತನ ಆಳ್ವಿಕೆಯಲ್ಲಿ ಜಿಡ್ಡುಳಿಗೆ ನಾಡಿನ ಗೌರವಕೀರ್ತಿ ಮತ್ತು ವೈಭವಗಳು ದೇಶೀಯ ನಾಡುಗಳಲ್ಲಿ ಜನಜನಿತವಾದವು. ತನ್ನ ಶಕ್ತಿ, ಸಾಹಸ, ಧೈರ್ಯಗಳಿಂದ ಈತನು ಗಂಗರ ಕುಲವೆಂಬ ಕಮಲವನಕ್ಕೆ ಸೂರ್ಯನಂತಿದ್ದನು.[16]

"ಮನ್ಮಥನಂತೆ ಸುಂದರನೂ, ವೈರಿಗಳನ್ನು ಸದೆ ಬಡಿದವನು, ಭೂಲೋಕಕ್ಕೆ ಕಣ್ಮಣಿಯಂತಿರುವ ಯೆಕ್ಕಲಭೂಪನು ಅತ್ಯಂತ ಉದಾರಿಯೂ ಆಗಿದ್ದನು. ಪರ ಚಿಂತಕನೂ, ಮಹಾವೀರನೂ, ತರುಣಿಯರ ಕಣ್ಮನ ಸೆಳೆವ ಸ್ಫುರದ್ರೂಪಿಯೂ, ಸಜ್ಜನರ ರಕ್ಷಕನೂ, ದಕ್ಷ ಆಡಳಿತಗಾರನೂ ಮತ್ತು ಸ್ವಾರ್ಥರಹಿತನೂ ಆದ ಪುರುಷ ಶ್ರೇಷ್ಠನಾಗಿದ್ದನು. ಯೆಕ್ಕಲಭೂಪತಿಯು ಅಜಾನುಬಾಹುವಾಗಿದ್ದು ತನ್ನನ್ನು ಎದುರಿಸಿದ ರಾಜರುಗಳನ್ನು ಸದೆ ಬಡಿದು ಅವರ ಸೈನ್ಯವನ್ನೆಲ್ಲ ದಿಕ್ಕೆಟ್ಟು ಓಡಿಸಿ ಶತ್ರುಗಳ ಸೊಕ್ಕನ್ನು ಅಡಗಿಸಿ ಬಿಟ್ಟಿದ್ದನು. ಇಂತಹ ಯೆಕ್ಕಲ ರಾಜ ಗಂಗಮಾರ್ತಾಂಡದೇವನು ರಾಜ್ಯವನ್ನು ಆದರ್ಶಪ್ರಾಯವಾಗಿ ಆಳುತ್ತಿದ್ದನು. ಕ್ರೂರಿಗಳಾದ ಶತ್ರುರಾಜರ ಸೇವೆಯೆಂಬ ಮದಗಜಗಳನ್ನು ಸದರ ಬಡಿದದ್ದಲ್ಲದೆ, ಶತ್ರುರಾಜರ ಪತ್ನಿಯರು ಕಣ್ಣೀರು ಸುರಿಸುವಂತೆ ಮಾಡಿದನು. ಗಂಭೀರವಾದ ಮೋಡದಂತೆ ಇದ್ದ ಈತ, ಬಹುಶಃ ಎಣ್ಣೆಗೆಂಪು ಬಣ್ಣದಿಂದ ಶೋಭಿಸುತ್ತಿದ್ದನು."[17] ಅದೇ ಶಾಸನ ಯೆಕ್ಕಲ ಭೂಪನನ್ನು ಮಹಾನ್ ಉದಾರಿ ಎಂಬುದಾಗಿಯೂ ವರ್ಣಿಸಿದೆ. ಅವನು ವಿಶ್ವದ ಸಕಲವಿದ್ಯೆಗಳಿಂದ ಭೂಷಿತನಾದವನು.[18]ಈತನು ಕಲೆ ಮತ್ತು ಸಾಹಿತ್ಯಗಳಿಗೆ ಆಶ್ರಯದಾತನೂ ಆಗಿದ್ದನು. ಅಂಗ, ವಂಗ, ಕಳಿಂಗ, ಕುರುಜಾಂಗಳ, ಮಗದ, ಆಂಧ್ರ ಆವಂತಿ, ಮಧ್ಯದೇಶ, ತುರುಷ್ಕ, ಚೋಳ, ಮುಂತಾದ ಬೇರೆ ಬೇರೆ ರಾಜ್ಯಗಳ ಕವಿಗಳಿಗೂ ವಿದ್ವಾಂಸರಿಗೂ ಉತ್ತಮವಾದ ಧನ, ಕನಕ, ವಸ್ತ್ರಗಳಿಂದ ಸನ್ಮಾನಿಸಿದನು. ಹೀಗೆ ಮಹಾನ್ ಉದಾರಿಯಾದ ಯೆಕ್ಕಲಭೂಪನು ದಾನಶೂರ ಕರ್ಣನಿಗೆ ಸಮಾನವಾಗಿ ಶೋಭಿಸುತ್ತಿದ್ದನು."

ಬೊಪ್ಪಾದೇವಿ : ಇವಳು ಯೆಕ್ಕಲದೇವನ ಪಟ್ಟದ ರಾಣಿ, ಕ್ರಿಶ. ೧೨೭೨ ರ ಉದ್ರಿಯ ಶಾಸನದಲ್ಲಿ ಬೊಪ್ಪಾದೇವಿಯ ಗುಣ ಮತ್ತು ಅವಳ ಸೌಂದರ್ಯದ ಬಗ್ಗೆ ವಿವರಿಸಿದ್ದು ಅದು ಇಂತಿದೆ.

"ಅವಳು ಮಹಾಸುಂದರಿ. ಹೀಗೆ ನೋಡಿ ನಕ್ಕರೆ ಬೆಳದಿಂಗಳ ಮಳೆಯು ಸುರಿದಂತೆ. ಸೌಭಾಗ್ಯದಲ್ಲಿ ಉಮೆಯಂತೆ, ರೂಪದಲ್ಲಿ ರತಿಯಂತೆ, ಕಾಂತಿಯಲ್ಲಿ ಲಕ್ಷ್ಮೀಯಂತೆ, ಮಾತಿನಲ್ಲಿ ಸರಸ್ವತಿಯಂತೆಯೂ ಇದ್ದ ಯೆಕ್ಕಲದೇವನ ಪಟ್ಟದಮಹಿಶಿ ಬೊಪ್ಪಾದೇವಿ ಅವನನ್ನು ಅನುರಾಗದಿಂದ ನೋಡಿಕೊಳ್ಳುತ್ತಿದ್ದಳು."[19]

ಯೆಕ್ಕಲರಸನಿಗೆ ಗಂಡು ಮಕ್ಕಳಿರಲಿಲ್ಲವೆಂದು ತೋರುತ್ತದೆ. ಈತನ ತಂಗಿ ಚಟ್ಟಲದೇವಿ ದಸಮಮರಸನ ಪತ್ನಿ. ಅವಳಿಗೆ ಮೂರು ಜನ ಮಕ್ಕಳಿದ್ದರು. ಎರಗ, ನರಸಿಂಗ ಮತ್ತು ಕೇಶವ.

ಎರಗ : ಚಟ್ಟಲದೇವಿಯ ಮೂರು ಮಕ್ಕಳಲ್ಲಿ ಎರಗ ಹಿರಿಯವನು. ಯೆಕ್ಕಲನ ನಂತರ ಪಟ್ಟಾಭಿಷಿಕ್ತನಾದ ಇವನಿಗೆ ಮಹಾವಿಷ್ಣು ಕುಲ ದೇವತೆಯಾಗಿತ್ತು. ೧೧೮೭ರ ಒಂದು ಶಾಸನವೂ ಎರಗಸನು ಉದ್ದರೆಯನ್ನು ಆಳುತ್ತಿದ್ದುದಾಗಿ ತಿಳಿಸುತ್ತದೆ.[20]

ನರಸಿಂಗ : ಎರಗನ ತಮ್ಮನಾದ ನರಸಿಂಗನನ್ನು ಶಾಸನದಲ್ಲಿ ಸಿಂಗದೇವನೆಂದು ಸಹ ಕರೆಯಲಾಗಿದೆ. ಈತನು ಕವಿಯಾಗಿದ್ದು ಕೊಳಾಲಪುರವರಾಧೀಶ್ವರ ಎಂಬ ಬಿರುದನ್ನು ಪಡೆದಿದ್ದನು. ಲಕ್ಮ್ಮಾದೇವಿ ಈತನ ಪತ್ನಿ.

ಎರಡನೆಯ ಯೆಕ್ಕಲ ೧೧೯೩-೧೨೧೭ : ನರಸಿಂಗ ಮತ್ತು ಲಕ್ಮಾದೇವಿಯ ಮಗನಾದ ಎರಡನೇ ಯೆಕ್ಕಲ ಜಿಡ್ಡುಳಿಗೆ ಗಂಗರ ಕೊನೆಯ ಅರಸ. ಉದ್ರಿಯ ಶಾಸನ (ಕ್ರಿ.ಶ. ೧೧೯೮) ಯೆಕ್ಕಲದೇವನು ಅನೇಕ ಕವಿಗಳಿಗೂ, ಪಂಡಿತರಿಗೂ ಮತ್ತು ವಿವಿಧ ಕಲಾ ಮಂಡಿತರಿಗೂ

ಆಶ್ರಯದಾತನಾಗಿದ್ದನೆಂದು ಉಲ್ಲೇಖಿಸುತ್ತಿದೆ."[21] ಭೂದಾನ, ಅನ್ನದಾನ ಮತ್ತು ಕನ್ಯಾದಾನಗಳಿಂದ ಬ್ರಾಹ್ಮಣರನ್ನು ತೃಪ್ತಿಪಡಿಸುತ್ತಿದ್ದನು. ಪರಾಕ್ರಮಿಯೆಂದು ಹೆಸರು ಪಡೆದ ಈತನು ಹಲವಾರು ಯುದ್ಧಗಳ ಮಧ್ಯದಲ್ಲೂ ಧಾರ್ಮಿಕ ಕಾರ್ಯಗಳಲ್ಲಿ ತನ್ನನ್ನು ತೊಡಿಗಿಸಿಕೊಂಡಿದ್ದನು ಎಂದು ಪ್ರಶಂಸಿಸುತ್ತದೆ. ಕ್ರಿ.ಶ. ೧೨೧೭ರಲ್ಲಿ ಬಾದ್ರಪದ ಅಮವಾಸ್ಯೆ ಸೋಮವಾರ ಸೂರ್ಯಗ್ರಹಣ ಸಂಕ್ರಮಣದಂದು ಶ್ರೀ ಲಕ್ಷ್ಮೀನಾರಾಯಣ ದೇವರ ಬ್ರಹ್ಮಪುರಿಯ ಮಹಾಜನಗಳ ಮುಖಂಡರಾದ ವೈಜನಾಥ ಭಟ್ಟೋಪಾಧ್ಯಾಯರ ಪಾದ ತೊಳೆದು, ಮೂವತ್ತೈದು ಕಂಬದ ಗದ್ದೆ ಮತ್ತು ಎರಡು ಹಾಗವನ್ನು ಉದ್ರಿಯ ಅಗ್ರಹಾರಕ್ಕೆ ದಾನ ಮಾಡಿದನು.[22]

ಎರಡನೇ ಯಕ್ಕಲನನ್ನು ಶಾಸನದಲ್ಲಿ ಮಹಾಮಂಡಳೇಶ್ವರ ಕೋಳಾಪುರವದಾಧೀಶ್ವರ, ಶ್ರೀ ಮನು ಮಹಾಮಾಂಡಳಿಕ ಗಂಡಬೇರುಂಡ ಸತ್ಯತ್ಯಾಗ ಸಾಹಸಾಭಿನವ, ಧರ್ಮಪುತ್ರ, ಎಂದು ಕರೆಯಲಾಗಿದೆ.[23]

ಶೂರನಾದ ಮಹಾಮಂಡಳೇಶ್ವರ ಯೆಕ್ಕಲದೇವನು ಕತ್ತಿಯನ್ನು ಹಿಡಿದರೆ ವೈರಿಗಳ ರುಂಡ ಉರುಳುತ್ತಿದ್ದವು. ರಣರಂಗದಲ್ಲಿ ಅವನನ್ನು ಎದುರಿಸಿ ಗೆಲ್ಲುವುದು ಯಾರಿಂದಲೂ ಸಾಧ್ಯವಿರಲಿಲ್ಲ. ದಾರಿ ತಪ್ಪಿದವರನ್ನು ನೀತಿ ಬಿಟ್ಟವರನ್ನು ಸರಿ ದಾರಿಗೆ ತರುವಲ್ಲಿ ಅಸಾಧಾರಣನಾಗಿದ್ದನು ಎಂದು ಈತನ ವೀರ ಗುಣದ ಬಗ್ಗೆ ಶಾಸನದಲ್ಲಿ ವರ್ಣನಾತ್ಮಕವಾಗಿ ವಿವರಿಸಿದೆ.[24]

ಉದ್ರಿ ಅರಸರ ದಂಡನಾಯಕರು

ಉದ್ರಿ ಅರಸು ಮನೆತನದ ಅಭ್ಯುದಯಕ್ಕೆ ಮತ್ತು ಆ ನಾಡಿನ ಸಾಂಸ್ಕೃತಿಕ ಅಭಿವೃದ್ಧಿಗೆ ಅವರ ದಂಡನಾಯಕರ ಕೊಡುಗೆ ಗಣನೀಯವಾಗಿದೆ. ಸೈನ್ಯದ ದಂಡನಾಯಕರಾಗಿ ಯುದ್ಧ ಮಾಡುವುದಲ್ಲದೆ, ಅವರ ವ್ಯಾಪ್ತಿಗೆ ಒಳಪಟ್ಟಿರುವ ಪ್ರದೇಶಗಳಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಿ ಅರಸರ ಅನುಮತಿ ಪಡೆದು ಅವರ ಪ್ರೋತ್ಸಾಹಗಳಿಂದ ಒಳ್ಳೆಯ ಕೆಲಸಗಳನ್ನು ಹಮ್ಮಿಕೊಳ್ಳಲು ಸ್ವತಂತ್ರರಾಗಿದ್ದರು. ದೇವಾಲಯಗಳ ನಿರ್ಮಾಣ ಮತ್ತು ಅವುಗಳ ನಿರಂತರ ನಿರ್ವಹಣೆಗೆ ದಾನ ಮಾಡುವುದರ ಮೂಲಕ ಧಾರ್ಮಿಕ ಕಾರ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು. ಇವರು ಕೆಲವು ಸಂದರ್ಭದಲ್ಲಿ ಪ್ರಧಾನ ಮಂತ್ರಿಯ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು.

ಸಿಂಗಣ ದಂಡನಾಯಕ : ಯೆಕ್ಕಲರಸನ ದಂಡನಾಯಕರಲ್ಲಿ ಸಿಂಗಣ ಮೊದಲಿಗ. ಇವನ ಉಲ್ಲೇಖ ಕ್ರಿ.ಶ. ೧೦೭೭ರ ಶಾಸನದಲ್ಲಿ ಬರುತ್ತದೆ.[25]ಶಾಸನದಲ್ಲಿ ಈತನನ್ನು ಗುಣದ ಕಣಿ ಜೈನಚೂಡಾಮಣಿ ವೈರಿ ಬಲಕ್ಕೆ ಸಮರ ಮುಖದೊಳ ಸಿಂಗಣ ದಂಡಾಧಿಪತಿ ಎಂದು ಕರೆಯಲಾಗಿದೆ. ಮಹಾವೀರನಾದ ಸಿಂಗಣ ಜೈನಧರ್ಮೀಯನಾಗಿದ್ದನು. ಇವನು ಯುದ್ಧದಲ್ಲಿ ಹೋರಾಡುತ್ತಾ ವೀರಸ್ವರ್ಗ ಹೊಂದಿದ ಅಂಶವು ತಿಳಿದುಬರುತ್ತದೆ.

ಬೊಪ್ಪದೇವ : ಇವನು ಸಿಂಗಣ ದಂಡನಾಯಕ ಮತ್ತು ಆತನ ಪತ್ನಿ ಮಹಾದೇವಿಯರ (ಬೋಪದೇವ) ಮಗ, ಬೋಪದೇವನು ಯೆಕ್ಕಲದೇವನ ದಂಡಾಧಿಪತಿಯಾಗಿಯೂ ಪ್ರಧಾನ ಮಂತ್ರಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದನು.[26]ಇವನ ಪತ್ನಿ ಬೋಪಿಯಕ್ಕ ಜೈನ ಧರ್ಮೀಯಳು.

ಸೋಮ : ಬೋಪ ಮತ್ತು ಬೊಪ್ಪಾದೇವಿಯರ ಮಗ ಸೋಮ. ಇವನ ಗುಣವನ್ನು ಭೂಮಂಡಲವೇ ಕೊಂಡಾಡುತ್ತಿತ್ತು ಎಂದು ಕ್ರಿ.ಶ. ೧೧೯೮ ರ ಶಾಸನ ವರ್ಣಿಸುತ್ತದೆ.[27]ಈತನ ಪತ್ನಿ ಸೋಮಲದೇವಿ ಮಹದೇವ, ರಾಮ ಮತ್ತು ಕೇಶವ ಎಂಬ ಮೂವರು ಇವರ ಮಕ್ಕಳು.

ಇವರಲ್ಲಿ ಮಹದೇವ ಮತ್ತು ಕೇಶವರು ಸಚಿವರು ಮತ್ತು ದಂಡಾಧಿಪತಿಗಳಾಗಿದ್ದರೆಂದು ತಿಳಿಯುತ್ತದೆ. ಇವರಲ್ಲಿ ರಾಮ ಉತ್ತಮನು ಮತ್ತು ಧರ್ಮ ಕರ್ಮಗಳಲ್ಲಿ ಪ್ರೀತಿ ಇಟ್ಟುಕೊಂಡವನು ಆಗಿದ್ದನು.[28]

ಮಹಾದೇವ ದಂಡನಾಯಕ : ಇವನು ಸೋಮನ ಹಿರಿಯ ಮಗ. ಉದ್ರಿ ಅರಸರ ದಂಡನಾಯಕರಲ್ಲಿ ಅಪ್ರತಿಮ ವೀರ, ಶಾಸನಗಳಲ್ಲಿ ಈತನನ್ನು ಮಹಾ ಪ್ರಧಾನ ಮಹಾದೇವ ದಂಡನಾಯಕ ಎಂದು ಕರೆಯಲಾಗಿದೆ.[29]ಯುದ್ಧ ಪ್ರವೀಣಂ ಎಂಬ ಪ್ರಶಂಸೆಗೆ ಪಾತ್ರನಾದವನು. ಯೆಕ್ಕಲರಸನ ಕೋಟೆಯ ರಕ್ಷಣೆಯಲ್ಲಿ ತನ್ನ ತೋಳ್ಬಲವನ್ನು ತೋರಿಸಿ ಆತನ ರಾಜ್ಯ ಅಭ್ಯುದಯ ಹೊಂದಲು ಮುಖ್ಯ ಕಾರಣನಾದನು. ಈತನ ಸಾಹಸ ಶಕ್ತಿ ಮತ್ತು ಧೈರ್ಯ ಗುರುತಿಸಿ ಹೊಯ್ಸಳ ವೀರಬಲ್ಲಾಳ ಅವನನ್ನು ತನ್ನ ಸೇನಾಧಿಪತಿಯಾಗಿ ನೇಮಕ ಮಾಡಿಕೊಂಡಿರುವುದು ಮಹಾದೇವ ದಂಡನಾಯಕನ ವೀರ ಬದುಕಿಗೆ ಒಂದು ನಿದರ್ಶನವಾಗಿದೆ.[30]

ಸಕಲ ಕಲಾ ಪೋಷಕನು, ಮಹಾ ಬುದ್ಧಿವಂತ ಮತ್ತು ಸಕಲ ವಿದ್ಯೆಗಳಿಗೆ ಬ್ರಹ್ಮನಂತೆ ತೋರುವ ಒಬ್ಬ ವಿದ್ವಾಂಸ ದಂಡನಾಯಕನಾಗಿದ್ದನು ಎಂಬುವುದು ಅಲ್ಲಿಯ ಒಂದು ಶಾಸನ (ಕ್ರಿ.ಶ. ೧೧೯೮) ದಿಂದ ತಿಳಿಯುತ್ತದೆ.[31] ಈತನು ಜೈನಧರ್ಮದವನಾಗಿದ್ದು ಜೈನ ಸಾಹಿತ್ಯದಲ್ಲಿ ಪ್ರವೀಣನಾಗಿದ್ದನು. ಜೈನ ಧರ್ಮದ ವ್ರತಗಳನ್ನು ತಪ್ಪದೇ ಆಚರಿಸುತ್ತಿದ್ದನು. ಮಹದೇವನಿಗೆ ಗುರುವೆನಿಸಿದ ಜೈನ ಮುನಿ ಚಂದ್ರ ಭಟ್ಟಾರಕನು ಇಂದ್ರಿಯಗಳಿಗೆ ಸೋಲದೆ ತಪಸ್ಸು ಮಾಡುತ್ತಿದ್ದರು. ಅವನೊಬ್ಬ ಬ್ರಹ್ಮ ಚಾರಿಯಾಗಿದ್ದನೆಂದು ಎಲ್ಲಾ ಕಡೆ ಅವನ ಕೀರ್ತಿ ಹರಡಿತ್ತು.

ಮಹದೇವ ದಂಡನಾಯಕನು ಉದ್ರಿಯಲ್ಲಿ ಕ್ರಿ.ಶ. ೧೧೯೭ ರಲ್ಲಿ ಎರಗ ಜಿನಾಲಯ ಕಟ್ಟಿಸಿ ಅದರಲ್ಲಿ ಶಾಂತಿನಾಥ ಜಿನಬಿಂಬವನ್ನು ಪ್ರತಿಷ್ಠಾಪಿಸಿದನು. ಈ ಜಿನಾಲಯಕ್ಕೆ ಮಹಾಮಂಡಲೇಶ್ವರ ಯೆಕ್ಕಲ ತನ್ನ ಪರಿವಾರ ಸಮೇತ ಬಂದು ಬಸದಿಯ ಜೀರ್ಣೋದ್ಧಾರಕ್ಕೆ ಭಕ್ತರ ಅನ್ನದಾನಕ್ಕೆ ದಾನ ಮಾಡಿದ್ದಾನೆ. ಈತನು ಜೈನ ಮುನಿಚಂದ್ರ ಭಟ್ಟಾರಕರ ಕಾಲು ತೊಳೆದು ಮೂರು ಮತ್ತರು ಭೂಮಿ ಎರಡು ಮತ್ತರು, ಒಂದು ಅಂಗಡಿ ಇವುಗಳನ್ನು ದತ್ತಿ ಬಿಟ್ಟಿದ್ದನು ಎಂದು ಕ್ರಿ.ಶ. ೧೧೯೮ ರ ಶಾಸನ ಉಲ್ಲೇಖಿಸುತ್ತದೆ.

ಮಹದೇವ ದಂಡನಾಯಕನ ಪತ್ನಿ ಲೋಕಲದೇವಿ. ಇವಳನ್ನು ಶಾಸನದಲ್ಲಿ ಜಿನಶಾಸನ ದೇವತೆ ಎಂದು ಬಣ್ಣಿಸಲಾಗಿದೆ.[32]ಜೈನ ಧರ್ಮವನ್ನು ಉನ್ನತಿಗೆ ತರುವಲ್ಲಿ ಅವಳು ಅತ್ತಿಮಬ್ಬೆಗೆ ಸಮಾನಳಾಗಿದ್ದಳು ಎಂದು ಕ್ರಿ.ಶ. ೧೧೯೮ರ ಶಾಸನ ಮುಕ್ತ ಕಂಠದಿಂದ ಹೊಗಳಿದೆ.

ಆಡಳಿತ

'ಉದ್ರಿ'ಯ ಅರಸರು ರಾಜಕೀಯವಾಗಿ ಕಲ್ಯಾಣಿ ಚಾಲುಕ್ಯರ, ಹೊಯ್ಸಳರ ಮತ್ತು ಸೇವುಣರ ಸಾಮಂತರಾಗಿದ್ದರೂ, ಆಡಳಿತಾತ್ಮಕವಾಗಿ ಮಂಡಲೇಶ್ವರರಾಗಿದ್ದರು. ಯೆಕ್ಕಲ ದೇವನ ಆಜ್ಞೆಗಳನ್ನು ಆ ನಾಡಿನ ಎಲ್ಲಾ ಪ್ರಜೆಗಳು ನಿಷ್ಠೆಯಿಂದ ಪಾಲಿಸುತ್ತಿದ್ದರು ಎಂದು ಅಲ್ಲಿಯ ಕ್ರಿ.ಶ. ೧೧೯೮ರ ಶಾಸನ ತಿಳಿಸುತ್ತದೆ.[33]ವಾಸ್ತವಾಗಿ ಉದ್ರಿಯ ಅರಸರು ಸ್ವತಂತ್ರ ರಾಜರಂತೆ ಆಳಿರುತ್ತಾರೆ. ಮಾರಸಿಂಗ, ಯೆಕ್ಕಲದೇವ, ಮಹದೇವ ದಂಡನಾಯಕ ಮುಂತಾದವರ ಆಡಳಿತ ಈ ನಾಡಿನಲ್ಲಿ ನಡೆದಿದೆ. ಕ್ರಿ.ಶ. ೧೩ನೇ ಶತಮಾನದವರೆಗೂ ಜಿಡ್ಡುಳಿಗೆ ಒಂದು ಮುಖ್ಯ ಕಂಪಣವಾಗಿ ಆಡಳಿತ ವಿಭಾಗವಾಗಿತ್ತು. ಈ ನಾಡಿನ ರಾಜಧಾನಿ ಉದ್ರಿಯು ಒಂದು ಪ್ರಮುಖ ಪಟ್ಟಣವಾಗಿತ್ತು ಎಂಬುದು ಗಮನಾರ್ಹ ಅಂಶ. ಉದ್ರಿಯನ್ನು ನೆಲೆವೀಡು ಎಂದೂ ಕರೆಯಲಾಗಿದೆ.

ಬಿರುದಾವಳಿ

ಉದ್ರಿಯ ಕೆಲವು ಅರಸರನ್ನು ಶಾಸನಗಳಲ್ಲಿ ಕೋಳಾಲ ಪುರವರಾಧೀರ್ಶವರ, ಮಹಾ ಮಂಡಲೇರ್ಶವರ, ಗಂಡಭೇರುಂಡ, ಗಂಗಮಾರ್ತಾಂಡದೇವ ಹಾಗೂ ಧರ್ಮಪುತ್ರರೆಂದು ಕರೆಯಲಾಗಿದೆ.

ಉದ್ರಿಯ ಕೋಟೆ

ಉದ್ರಿಯ ಅರಸರ ದಂಡಾಧಿಪತಿಗಳು ಆ ನಾಡಿನ ಜನರ ರಕ್ಷಣೆಗಾಗಿ ಕೋಟೆಯನ್ನು ನಿರ್ಮಾಣ ಮಾಡಿದ್ದರು. ಮಹದೇವ ದಂಡನಾಯಕನು ತನ್ನ ಸಾಮರ್ಥ್ಯದಿಂದ ಯೆಕ್ಕಲದೇವನ ಕೋಟೆಯನ್ನು ರಕ್ಷಿಸಿ ಖ್ಯಾತನಾದನು.[34]ದಂಡನಾಯಕನ ಸ್ಥಾನ ಅನುವಂಶಿಕವಾಗಿತ್ತು. ಈಗ ಉದ್ರಿಯ ಗ್ರಾಮದ ಸುತ್ತು ಮಣ್ಣಿನ ಕೋಟೆಯ ಅಳಿದುಳಿದ ಭಾಗಗಳಿವೆ. ಬಹುಶಃ ಈ ಕೋಟೆಯನ್ನು ಯೆಕ್ಕಲದೇವನು ಕಟ್ಟಿಸಿರಬಹುದು. ಉದ್ರಿಯ ಕೋಟೆಯ ಬಗ್ಗೆ ಮೊದಲಿಗೆ ಕ್ರಿ.ಶ. ೧೧೯೪ರ ಶಾಸನಗಳಲ್ಲಿ ಯೆಕ್ಕಲದೇವನ ಉದ್ರಿ ಕೋಟೆ ಎಂಬ ಉಲ್ಲೇಖವಿದೆ.[35]

ಪೌರ ಸಮಿತಿ : ಉದ್ರಿ ಪಟ್ಟಣದ ಆಡಳಿತವನ್ನು ಪುರದ ಗಣ್ಯರು ನಡೆಸುತ್ತಿದ್ದರು. ಐದು ಸದಸ್ಯರನ್ನು ಹೊಂದಿರುವ ಪೌರ ಸಮಿತಿಯ ಮುಖ್ಯಸ್ಥ ಸಾಥಿಶೆಟ್ಟಿ. ಈತನ ಅನುಮತಿಯೊಂದಿಗೆ ಉದ್ರಿಯ ಪಟ್ಟಣದ ಕಾರ್ಯಕಲಾಪಗಳು ನಡೆಯುತ್ತಿದ್ದವು. ಜಸವಂತ ದಂಡನಾಯಕನು ಸಾಥಿಶೆಟ್ಟಿ ಮತ್ತು ನಗರದ ಐವರ ಅನುಮತಿ ಪಡೆದು ಬ್ರಹ್ಮಪುರಿಗೆ ದಾನ ಕೊಡಬೇಕಾದರೆ ಪೌರ ಸಮಿತಿಗೆ ಪರಮಾಧಿಕಾರ ಇತ್ತೆಂಬುದನ್ನು ಸೂಚಿಸುತ್ತದೆ.[36]ಮಹಾಮಂಡಳೇಶ್ವರ ಯೆಕ್ಕಲರಸನು ಸಹ ಲಕ್ಷ್ಮೀನಾರಾಯಣ ದೇವರ ಬ್ರಹ್ಮಪುರಿಗೆ ದಾನ ಕೊಡುವಾಗ ಸಾಥಿಶೆಟ್ಟಿಯ ಸಮ್ಮುಖದಲ್ಲಿ ನಗರದ ಗಣ್ಯರನ್ನು ಸೇರಿಸಿ ದಾನ ಕೊಟ್ಟಿರುವುದರಿಂದ ಸಾಥಿಶೆಟ್ಟಿಯ ಸ್ಥಾನ ಉನ್ನತವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.[37]ಸಾಥಿಶೆಟ್ಟಿಯನ್ನು ಪಟ್ಟಣ ಸ್ವಾಮಿ ಎಂಬುದಾಗಿಯೂ ಕರೆಯಲಾಗಿದೆ. ಕ್ರಿ.ಶ. ೧೧೯೪ ರಲ್ಲಿ ಮಹಾದೇವ ದಂಡನಾಯಕನು ಎರಗ ಜಿನಾಲಯಕ್ಕೆ ಉದ್ದರೆಯ ಪಟ್ಟಣ ಸ್ವಾಮಿ ಮತ್ತು ಅನೇಕ ನಾಗರೀಕ ಸಮ್ಮುಖದಲ್ಲಿ ಅಂಗ ಭೋಗ ಮತ್ತು ರಂಗಭೋಗಕ್ಕೆ ಮೂರು ಮತ್ತರು ಭೂದಾನ ಕೊಟ್ಟಿರುವುದು ತಿಳಿಯುತ್ತದೆ.

ಉದ್ರಿಯ ಒಂದು ಶಾಸನದ ಪ್ರಕಾರ (ಕ್ರಿ.ಶ. ೧೧೭೩) ಬನವಾಸಿ ನಾಡಿನ ತೆರಿಗೆ ವಸೂಲಿಗಾಗಿ ಕಲಚೂರ್ಯ ಚಕ್ರವರ್ತಿ ಸೊಯಿದೇವ ತನ್ನ ಇಬ್ಬರು ಸೇನಾಪತಿಗಳಾದ ಕಾವಣ ಮತ್ತು ಸೋವಣರನ್ನು ಕಳುಹಿಸಿದನು. ಇವರು ಸುಂಕ ವಸೂಲಿಗಾಗಿ ಉದ್ರೆಯಲ್ಲಿ ತಂಗಿದ್ದರು.[38]ಎಂಬ ಉಲ್ಲೇಖವಿರುವುದು ಕುತೂಹಲಕಾರಿಯಾಗಿದೆ.

ಸಾಂಸ್ಕೃತಿಕ ಕೊಡುಗೆಗಳು

ಸಾಮಾಜಿಕ ಮತ್ತು ಧಾರ್ಮಿಕ ಅಂಶಗಳು

ಉದ್ರಿಯ ಶಾಸನಗಳು, ದೇವಾಲಯಗಳು, ಮೂರ್ತಿ ಶಿಲ್ಪಗಳನ್ನು ಅವಲೋಕಿಸಿದಾಗ ಕ್ರಿ.ಶ. ೧೨-೧೩ನೇ ಶತಮಾನದಲ್ಲಿ ಉದ್ರಿಯು ಒಂದು ಅತ್ಯಂತ ಪ್ರಮುಖ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿತ್ತು ಎಂಬಂಶ ವ್ಯಕ್ತವಾಗುತ್ತದೆ. ಈ ಅವಧಿಯಲ್ಲಿ ಜೈನ, ಶೈವ ಮತ್ತು ವೈಷ್ಣವ ಧರ್ಮಗಳು ಇಲ್ಲಿ ಪ್ರಚಲಿತದಲ್ಲಿದ್ದವು. ವಿವಿಧ ಧರ್ಮಗಳಿಗೆ ಸೇರಿದ ಈ ನಾಡಿನ ಜನರು ಅವರು ನಂಬಿದ ಮತಗಳನ್ನು ಪರಸ್ಪರ ಗೌರವಿಸಿ ಒಟ್ಟಿಗೆ ಜೀವಿಸುತ್ತಿದ್ದರೆಂಬುದಕ್ಕೆ ಕೆಲವು ಕಾಲ ಈ ಪ್ರದೇಶದಲ್ಲಿ ಸಾಮಾಜಿಕ ಸಾಮರಸ್ಯ ನೆಲಸಿತ್ತೆಂಬುದಕ್ಕೆ ಇಲ್ಲಿಯ ವಿಭಿನ್ನ ಧರ್ಮದ ಸ್ಮಾರಕಗಳು ನಿದರ್ಶನವಾಗಿವೆ. ಸಾಮಾಜಿಕ

ವ್ಯವಸ್ಥೆಯಲ್ಲಿ ಬ್ರಾಹ್ಮಣರು ಉನ್ನತ ಸ್ಥಿತಿಯಲ್ಲಿದ್ದು, ಧಾರ್ಮಿಕವಾಗಿ ಜನರನ್ನು ತಮ್ಮ ಆಧೀನಕ್ಕೆ ಒಳಪಡಿಸಿದ್ದರು. ಅರಸರು ಕೂಡಾ ತಮ್ಮ ದೈನಂದಿನ ಕಾರ್ಯಗಳಲ್ಲಿ ಪುರೋಹಿತರ ಆಶೀರ್ವಾದ ಪಡೆಯುತ್ತಿದ್ದರು. ಶಾಸನಗಳ ಪ್ರಕಾರ ಯೆಕ್ಕಲರಸನು ತನ್ನ ಜೀವನದುದ್ದಕ್ಕೂ ಬ್ರಾಹ್ಮಣರ ಆಶೀರ್ವಾದ ಪಡೆದು ಅವರ ಮಂತ್ರಾಕ್ಷತೆಯನ್ನು ಸ್ವೀಕರಿಸುತ್ತಿದ್ದನು.**[39]**ಸಮಾಜದ ಕೆಳಸ್ತರದಲ್ಲಿರುವ ಶೂದ್ರರ ಬಗ್ಗೆ ಇಲ್ಲಿನ ಯಾವ ಶಾಸನದಲ್ಲೂ ಉಲ್ಲೇಖವಿಲ್ಲ. ಶಾಸನಗಳ ಮಾಹಿತಿ ಪ್ರಕಾರ ಜಿಡ್ಡುಳಿಗೆ ನಾಡಿನಲ್ಲಿ ಬ್ರಾಹ್ಮಣರು ಮತ್ತು ಜೈನರು ಪ್ರತಿಷ್ಠಿತ ವರ್ಗಕ್ಕೆ ಸೇರಿದವರಾಗಿದ್ದರು. ಉದ್ರಿಯ ಹೆಚ್ಚಿನ ಅರಸರು ಮತ್ತು ಅವರ ಪತ್ನಿಯರು ಜೈನ ಧರ್ಮೀಯರಾಗಿದ್ದರು. ಮಾರಸಿಂಗ, ಯಕ್ಕಲರಸ, ಮಹಾದೇವ ದಂಡನಾಯಕ ಮತ್ತು ಅವನ ಪತ್ನಿ ಲೋಕಲದೇವಿ ಜೈನಧರ್ಮವನ್ನು ಅನುಸರಿಸುತ್ತಿದ್ದು ಅವರ ಉನ್ನತಿಗಾಗಿ ಹಲವು ದಾನಗಳಾದ ಭೂದಾನ, ಅನ್ನದಾನ, ಗ್ರಾಮದಾನ, ಎಣ್ಣೆ ಗಾಣಗಳನ್ನು ನೀಡಿ ಆ ಧರ್ಮದ ಪೋಷಕರಾಗಿದ್ದರು.

ಉದ್ರಿ ಸ್ಮಾರಕಗಳಲ್ಲಿ ಇಂದಿಗೂ ಉತ್ತಮ ಸ್ಥಿತಿಯಲ್ಲಿರುವುದು ಅಲ್ಲಿಯ ಎರಗ ಜಿನಾಲಯ (ಶಾಂತಿನಾಥ ಬಸದಿ). ಜೈನ ಧರ್ಮದ ಇತರ ಕುರುಹುಗಳೂ ಗಮನಾರ್ಹವಾಗಿದೆ. ಆದರೆ ಈಗ ಉದ್ರಿಯ ೨೫೦ ಕುಟುಂಬಗಳಲ್ಲಿ ಒಂದೂ ಜೈನ ಕುಟುಂಬವಿಲ್ಲ.

ಜೈನ ಬಸದಿಯ ನವರಂಗ ದ್ವಾರದ ಮೇಲಿನ ಫಲಕ ಕಿತ್ತು ಶಿವನ ಮೂರ್ತಿ ಇರುವ ಮಕರತೋರಣ ಇಟ್ಟಿದ್ದಾರೆ. ಅಲ್ಲದೆ ಎರಡು ಭಗ್ನ ತೀರ್ಥಂಕರ ಶಿಲ್ಪಗಳು ಮತ್ತು ಒಂದು ಭಗ್ನ ವಿಷ್ಣುವಿನ ಶಿಲ್ಪ ಬಸದಿಯ ಆವರಣದಲ್ಲಿ ಬಿದ್ದಿವೆ.

ಬ್ರಹ್ಮಪುರಿ : ಉದ್ರಿಯ ಅರಸರು ಶ್ರೀ ಲಕ್ಷ್ಮೀನಾರಾಯಣ ದೇವರುಳ್ಳ ಬ್ರಹ್ಮಪುರಿಗೆ ವಿದ್ಯಾಭ್ಯಾಸಕ್ಕಾಗಿ ದಾನ, ದತ್ತಿಗಳನ್ನು ನೀಡಿದ್ದಾರೆ. ವೈಜನಾಥ ಭಟ್ಟೋಪಾಧ್ಯಾಯ ಬ್ರಹ್ಮ ಪುರಿಯ ಮುಖ್ಯಸ್ಥನಾಗಿದ್ದನು.

ಉದ್ರಿಯ ಒಂದು ಶಾಸನವು (ಕ್ರಿ.ಶ. ೧೨೧೭) ಅಲ್ಲಿಯ ಲಕ್ಷ್ಮೀನಾರಾಯಣ ದೇವರ ಬ್ರಹ್ಮಪುರಿ ಮಹಾಜನಗಳಿಗೆ ಯೆಕ್ಕಲರಸು ದಾನ ದತ್ತಿ ನೀಡಿರುವುದನ್ನು ಉಲ್ಲೇಖಿಸಿದೆ.**[40]** ಇದು ವಿದ್ಯಾ ದಾನದ ಬಗೆಗೆ ಲಭ್ಯವಿರುವ ಮೊದಲ ಮಾಹಿತಿಯಾಗಿದೆ. ಇದರಿಂದ ಜಿಡ್ಡುಳಿಗೆ ನಾಡಿನಲ್ಲಿ ಉದ್ರಿಯು ಒಂದು ಪ್ರಸಿದ್ಧ ಬ್ರಹ್ಮಪುರಿಯಾಗಿತ್ತೆಂಬುದು ಸ್ಪಷ್ಟವಾಗುತ್ತದೆ. ಬ್ರಹ್ಮಪುರಿಯ ಮುಖ್ಯಸ್ಥ ವೈಜನಾಥ ಭಟ್ಟೋಪಾಧ್ಯಾಯನನ್ನು "ವಿದ್ಯಾ ಚಕ್ರವರ್ತಿ" ಎಂದು ಅದೇ ಶಾಸನದಲ್ಲಿ ಬಣ್ಣಿಸಲಾಗಿದೆ. ಈ ಅಗ್ರಹಾರಕ್ಕೆ ವಿಷ್ಣುಭಟ್ಟ, ಗೋವಿಂದ ಕ್ರಮಿತ, ಕಾವದೇವ, ಚಂದ್ರಭಟ್ಟ, ಭಾಸ್ಕರ ಭಟ್ಟ, ವಾಸುದೇವಭಟ್ಟ ಮತ್ತು ದಾಮೋದರ ಉಪಾಧ್ಯಾಯರೆಂಬ ಏಳು ಜನ ಉಪಾಧ್ಯಾಯರಿದ್ದರು.

ವಿದ್ಯಾಭ್ಯಾಸದಲ್ಲಿ ಪುರಾಣ ಮತ್ತು ವೇದಗಳಿಗೆ ಹೆಚ್ಚು ಅವಕಾಶವನ್ನು ಕಲ್ಪಿಸಲಾಗಿತ್ತ. ಪುರಾಣದಲ್ಲಿ ವಾಸುದೇವ ಭಟ್ಟರು ಮತ್ತು ಸಾಮವೇದಶಾಸ್ತ್ರದಲ್ಲಿ, ದಾಮೋದರ ಉಪಾಧ್ಯಾಯರು ವಿದ್ವಾಂಸರಾಗಿದ್ದರು. ಅವರ ಪಾಂಡಿತ್ಯಕ್ಕೆ ಯೆಕ್ಕಲರಸನು ಭೂದಾನ ನೀಡಿ ಪ್ರೋತ್ಸಾಹಿಸಿದ್ದಾನೆ.**[41]**

ಆರ್ಥಿಕ ಅಂಶಗಳು

ಈ ಪ್ರದೇಶವು ಕಲೆ, ಕೆರೆನೀರಾವರಿ, ಹಾಗೂ ಕೃಷಿ ಅಭಿವೃದ್ಧಿಯಿಂದಾಗಿ ಉಚ್ಛ್ರಾಯ ಸ್ಥಿತಿ ತಲುಪಿತು. ಶಾಸನಗಳಲ್ಲಿ ಕೆರೆಗಳು, ಹಳ್ಳಿಗಳು, ವೃತ್ತಿಗಳು, ವರ್ತಕರು, ಉಲ್ಲೇಖಗೊಂಡಿದ್ದಾರೆ.

ಜನರ ಮೂಲಭೂತ ಸೌಕರ್ಯಗಳಲ್ಲಿ ನೀರು ಒದಗಿಸುವುದು ಒಂದು ಪ್ರಮುಖ ಕೆಲಸ. ಉತ್ತಮ ಕೃಷಿಗಾಗಿನೀರಿನ ಅಗತ್ಯವಿದೆ. ಅದಕ್ಕಾಗಿ ಉದ್ರಿಯ ಅರಸರು ಅನೇಕ ಕೆರೆ ನಿರ್ಮಾಣ ಮಾಡಿ ಆರ್ಥಿಕ ಪ್ರಗತಿಗೆ ಪ್ರೋತ್ಸಾಹ ನೀಡಿದ್ದಾರೆ. ಕ್ರಿ.ಶ. ೧೧೫೧ ರ ಶಾಸನ ಅವಲಿಯ ಕೆರೆ ಬಗ್ಗೆ ಉಲ್ಲೇಖಿಸುತ್ತದೆ. ಯೆಕ್ಕಲರಸನು ಅವಲಿಯ ಕೆರೆಯನ್ನು ನೋಡಿ ಆ ಊರಿನ ಮುಖಂಡರಾದ ತದ್ವಗೌಡ, ಕಾಳಗೌಡ, ಜಕಗೌಡ, ಹೆಮ್ಮಗೌಡ ಮೊದಲಾದವರ ಸಮ್ಮುಖದಲ್ಲಿ ಕೆರೆಯನ್ನು ದುರಸ್ತಿ ಮಾಡಿಸಿ ಅದರಲ್ಲಿ ನೀರು ತುಂಬಿಸಿದನು, ಮತ್ತು ಅದಕ್ಕೆ ಭೂದಾನ (ಮತ್ತರು ೧) ನೀಡಿದರು.[42] ಅದೆ ಸ್ಥಳದ ಇನ್ನೊಂದು ಶಾಸನದಲ್ಲಿ ಯೆಕ್ಕಲರಸನು ಉದ್ರಿಯಲ್ಲಿ ಕೆರೆಯನ್ನು ಕಟ್ಟಿಸಿದ ವಿವರವಿದೆ. ಈಗ ಉದ್ರಿಯಲ್ಲಿ ಮೂರು, ಕೆರೆಗಳು ಇವೆ. ಕಂಚನಾಗಳ ಕೆರೆ, ದೊಡ್ಡಕೆರೆ, ಮತ್ತು ಕಸಗುಂಡಿಕೆರೆ ಈ ನಾಡಿನಲ್ಲಿ, ರೈತರು ಭತ್ತ, ಅಡಿಕೆ, ತೆಂಗು, ಕಬ್ಬು ಮತ್ತು ವಿಳ್ಳೆದೆಲೆ ಬೇಸಾಯ ಮಾಡುತ್ತಿದ್ದರು.[43]

ಆರ್ಥಿಕ ಅಭಿವೃದ್ಧಿಯಲ್ಲಿ ವಾಣಿಜ್ಯ ಚಟುವಟಿಕೆಗಳು ಗಮನಾರ್ಹ ಪಾತ್ರವಹಿಸುತ್ತವೆ. ಸಾರಂಗದೇವ ಉದ್ರಿಯ ಪ್ರಖ್ಯಾತ ವರ್ತಕ, ಇವನೊಂದಿಗೆ ಇನ್ನೂ ಐದು ಜನ ವ್ಯಾಪಾರಿಗಳು ಸೇರಿ ಈಶ್ವರ ದೇವರ ನಂದಾ ದೀವಿಗೆಗೆ ಐದು ಹಣದಾನ ನೀಡಿರುತ್ತಾರೆ.[44] ಪಟ್ಟಣಸ್ವಾಮಿ, ರಾಮಶೆಟ್ಟಿ, ಯಂಥ ವರ್ತಕರ ಹೆಸರುಗಳು ಶಾಸನಗಳಲ್ಲಿ ಕಾಣಿಸಿಕೊಂಡಿರುವುದರಿಂದ ವ್ಯಾಪಾರ ವಾಣಿಜ್ಯ ನಡೆಯುತ್ತಿದ್ದ ಸೂಚನೆಗಳಿವೆ.

ಕಲೆ ಮತ್ತು ವಾಸ್ತುಶಿಲ್ಪ

೧) ಬನಶಂಕರಿ ದೇವಾಲಯ

ಉದ್ರಿ ಉಸ್ ನಿಲ್ದಾಣದಿಂದ ಗ್ರಾಮದ ಒಳಗೆ ಹೋಗುವಾಗ ರಸ್ತೆಯ ಬಲಬದಿಯಲ್ಲಿ ಒಂದು ಚಿಕ್ಕ ಬನಶಂಕರಿ ದೇವಸ್ಥಾನ ಇದೆ. ಇದರ ರಚನೆ ನೋಡಿದಾಗ ಇದು ತೀರ ಇತ್ತೀಚಿನದು ಎಂದು ಕಂಡು ಬರುತ್ತದೆ. ಈ ಗುಡಿಯನ್ನು ಬಹುಶಃ ೧೭-೧೮ನೇ ಶತಮಾನದಲ್ಲಿ ಕಟ್ಟಲಾಗಿದೆ. ಗರ್ಭಗೃಹದಲ್ಲಿ ಸುಮಾರು ನಾಲ್ಕು ಅಡಿ ಎತ್ತರದ ಬನಶಂಕರಿಮೂರ್ತಿ ಇದೆ. ಗರ್ಭಗೃಹ ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿ ಚಿತ್ರವಿದೆ. ಈ ದೇವಸ್ಥಾನದ ಬಗ್ಗೆ ಶಾಸನಗಳಲ್ಲಿ ಉಲ್ಲೇಖ ಬರುವುದಿಲ್ಲ. ಈಗ ಗ್ರಾಮದಲ್ಲಿ ನೆಲೆಸಿರುವ ಪಟೇಲ್ ಮನೆತನದ ಸಣ್ಣ ಬಸವಲಿಂಗಪ್ಪ ಗೌಡರು ಬನಶಂಕರಿ ಮೂರ್ತಿಯನ್ನು ಅವರ ಪೂರ್ವಿಕರು ಬಾದಾಮಿಯಿಂದ ತಂದು ಇಲ್ಲಿ ಪ್ರತಿಷ್ಠಾಪಿಸಿದ್ದಾರೆ ಎಂದು ಹೇಳುತ್ತಾರೆ. ಈಗ ಬನಶಂಕರಿ ಜನರಿಂದ ಆರಾಧಿಸಲ್ಪಡುವ ಪ್ರಸಿದ್ಧ ಗ್ರಾಮದೇವತೆ.

೨) ವೀರಭದ್ರ ದೇವಾಲಯ

ಉದ್ರಿ ಗ್ರಾಮದ ಮಧ್ಯೆ ವೀರಭದ್ರ ದೇವಸ್ಥಾನವಿದೆ. ಉತ್ತರ ದಿಕ್ಕಿಗೆ ಮುಖಮಾಡಿರುವ ಈ ದೇವಾಲಯಕ್ಕೆ ಗರ್ಭಗೃಹ ಮತ್ತು ನಾಲ್ಕು ಸ್ತಂಭಗಳಿರುವ ಮುಖ ಮಂಟಪವಿದೆ. ಗರ್ಭಗೃಹ ಉಳಿದುಕೊಂಡು, ದೇವಾಲಯದ ಮೂಲ ರಚನೆಯು ಸಂಪೂರ್ಣವಾಗಿ ಜೀರ್ಣವಾಗಿದೆ. ಗರ್ಭಗೃಹದಲ್ಲಿ ಈಗ ಪೂಜೆಗೊಳ್ಳುತ್ತಿರುವ ವೀರಭದ್ರನ ಶಿಲ್ಪವು ನಾಲ್ಕು ಅಡಿ ಎತ್ತರ ಮೂರು ಅಡಿ ಅಗಲ ಇದ್ದು ಅತ್ಯಂತ ಸುಂದರವಾಗಿದೆ. ನಾಲ್ಕು ಕೈಗಳ ಈ ಶಿಲ್ಪದ ಕೈಗಳಲ್ಲಿ ಖಡ್ಗ, ಬಾಣ, ಗುರಾಣಿ ಮತ್ತು ಬಿಲ್ಲು ಕೆತ್ತಲಾಗಿದೆ.

ಅಪರೂಪದ ನಂದಿ ವಿಗ್ರಹ : ವೀರಭದ್ರ ದೇವಾಲಯದ ಗರ್ಭಗೃಹದ ಬಲಭಾಗದಲ್ಲಿ ಒಂದು ನಂದಿ ಮಂಟಪದಲ್ಲಿ ಮೂರು ಅಡಿ ಎತ್ತರದ ಕಪ್ಪು ಶಿಲೆಯ ಅಪರೂಪದ ನಂದಿ ವಿಗ್ರಹವಿದ್ದು, ಅದು ಕಲಾ ನೈಪುಣ್ಯತೆಯಿಂದ ಎದ್ದು ಕಾಣುತ್ತದೆ. ಶಿಲ್ಪವು ಕುಳಿತುರವ ಭಂಗಿಯಲ್ಲಿ ಇದ್ದು ಕುತ್ತಿಗೆಗೆ ರುದ್ರಾಕ್ಷಿ ಸರವನ್ನು ಕಟ್ಟಲಾಗಿದೆ. ಕೊರಳಿನಿಂದ ಎದೆಯವರೆಗೆ

ಗೆಜ್ಜೆ ಸರ ಕೆತ್ತಲಾಗಿದ್ದು ಸುಂದರವಾಗಿ ಕಾಣುತ್ತದೆ. ನಂದಿ ಮಂಟಪದ ಮುಂಭಾಗದಲ್ಲಿ ಮೂರು ಅಡಿ ಎತ್ತರದ ವೀರಭದ್ರನ ಮೂರ್ತಿ ಇದೆ. ಶಿಲ್ಪದ ಎದೆಭಾಗ ಸೀಳಿ ಹೋಗಿದೆ. ನಾಲ್ಕು ಕೈಗಳ ಈ ಶಿಲ್ಪದ ಕೈಗಳಲ್ಲಿ ತ್ರಿಶೂಲ, ಡಮರು ಮತ್ತು ಇನ್ನೊಂದು ಕೈಯಲ್ಲಿ ರುಂಡ ಇದೆ. ವೀರಭದ್ರನ ಜಟೆಯಲ್ಲಿ ಸರ್ಪವನ್ನು ಕೆತ್ತಲಾಗಿದೆ. ರುಂಡಮಾಲೆ ಸ್ಪಷ್ಟವಾಗಿ ಕಾಣುತ್ತದೆ. (ಚಿತ್ರ ೨) ದೇವಾಲಯದ ಮುಂಭಾಗದಲ್ಲಿ ಆರು ಅಡಿ ಎತ್ತರದ ಎರಡು ದ್ವಾರಪಾಲಕರ ವಿಗ್ರಹಗಳಿವೆ. ಎರಡು ವಿಗ್ರಹಗಳ ಕೈಗಳು ಭಗ್ನಗೊಂಡಿವೆ. ಜಟೆಯನ್ನು ಕಲಾತ್ಮಕವಾಗಿ ಕೆತ್ತಲಾಗಿದೆ.

೩) ಈಶ್ವರ ದೇವಾಲಯ (ಸಿಂಗೇಶ್ವರ)

ಈ ದೇವಾಲಯ ಸಂಪೂರ್ಣವಾಗಿ ಹಾಳಾಗಿದೆ. ಶಿಥಿಲ ಸ್ಥಿತಿಯಲ್ಲಿರುವ ಗರ್ಭಗೃಹ ಮಾತ್ರ ಉಳಿದಿದೆ. ಪೂರ್ವದಿಕ್ಕಿಗೆ ಮುಖ ಮಾಡಿರುವ ಈ ದೇವಾಲಯವನ್ನು ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಗರ್ಭಗೃಹದಲ್ಲಿ ಎರಡು ಅಡಿ ಎತ್ತರದ ಶಿವ ಲಿಂಗವಿದ್ದು, ಗೋಡೆಯಲ್ಲಿ ನಾಲ್ಕು ಅರ್ಧಗಂಭಗಳಿವೆ. ದ್ವಾರ ಪಟ್ಟಿಯ ಫಲಕದ ಮೂರು ಶಾಖೆಗಳಲ್ಲಿ ಲತಾ, ಅರ್ಧಗಂಬ ಮತ್ತು ಸುರುಳಿ ಚಿತ್ರಗಳಿವೆ. ಲಲಾಟದಲ್ಲಿ ಮಧ್ಯೆ ಗಜ ಲಕ್ಷ್ಮೀಯನ್ನು ಕೆತ್ತಲಾಗಿದೆ. ಈ ಗುಡಿಯನ್ನು ಬಹುಶಃ ೧೧ನೇ ಶತಮಾನದ ಅಂತ್ಯದಲ್ಲಿ ಕಟ್ಟಲಾಗಿದೆ. (ಛಾಯಾ ಚಿತ್ರ ನೋಡಿ)

೪) ಲಕ್ಷ್ಮೀನಾರಾಯಣ ದೇವಸ್ಥಾನ

ಈ ದೇವಾಲಯ ಮೂರು ಅಡಿ ಎತ್ತರದ ಜಗಲಿಯ ಮೇಲೆ ನಿರ್ಮಾಣಗೊಂಡಿದ್ದು ಉತ್ತಾರಾಭಿಮುಖವಾಗಿದೆ. ಗರ್ಭಗೃಹದಲ್ಲಿ ಎರಡು ಅಡಿ ಎತ್ತರದ ಪೀಠದ ಮೇಲೆ ಸುಂದರವಾದ ಲಕ್ಷ್ಮೀನಾರಾಯಣ ವಿಗ್ರಹವಿದೆ. ಈ ದೇವಾಲಯದ ಮುಖ ಮಂಟಪ ಶಿಥಿಲಗೊಂಡಿದೆ. ಗರ್ಭಗೃಹ ಮತ್ತು ಅಂತರಾಳ ಉಳಿದುಕೊಂಡಿವೆ. ಗರ್ಭಗೃಹ ದ್ವಾರಕ್ಕೆ ಮೂರು ಶಾಖೆಗಳಿದ್ದು ಅವುಗಳಲ್ಲಿ ಲತಾ ಸುರುಳಿ, ಅರ್ಧಗಂಭ ಮತ್ತು ರತ್ನ ಪಟ್ಟಿಗಳಿವೆ. ಅಂತರಾಳ ದ್ವಾರ ಪಟ್ಟಿಗಳಲ್ಲಿ ಐದು ಶಾಖೆಗಳಿದ್ದು ಲಲಾಟದಲ್ಲಿ ಗಜಲಕ್ಷ್ಮೀಯ ಶಿಲ್ಪವಿದೆ. ಕ್ರಿ.ಶ. ೧೨೧೭ರ ಶಾಸನವೊಂದು ಲಕ್ಷ್ಮೀನಾರಾಯಣ ದೇವಸ್ಥಾನದ ವ್ಯಾಪ್ತಿಗೆ ಬರುವ ಬ್ರಹ್ಮಪುರಿ ಮಹಾಜನಗಳಿಗೆ ಯೆಕ್ಕಲರಸನು ಭೂದಾನ ಮಾಡಿರುವದನ್ನು ಉಲ್ಲೇಖಿಸುತ್ತದೆ.

೫) ಈಶ್ವರ ದೇವಾಲಯ (ಬೊಪ್ಪೇಶ್ವರ)

ಶಿಥಿಲ ಸ್ಥಿತಿಯಲ್ಲಿರುವ ಈ ದೇವಾಲಯದ ಗರ್ಭಗೃಹ ಮತ್ತು ಅಂತರಾಳ ಉಳಿದುಕೊಂಡಿವೆ. ನಾಲ್ಕು ಅಡಿ ಎತ್ತರದ ಜಗತಿ ಮೇಲೆ ನಿರ್ಮಾಣವಾದ ಈ ದೇವಾಲಯದ ಅಧಿಷ್ಠಾನ ಸಂಪೂರ್ಣ ಹಾಳಾಗಿದೆ. ಗರ್ಭಗೃಹದಲ್ಲಿ ನಾಲ್ಕು ಅರ್ಧಗಂಭಗಳಿದ್ದು ನಾಲ್ಕು ಅಡಿ ಎತ್ತರದ ಶಿವಲಿಂಗವಿದೆ.

ಗರ್ಭಗೃಹದ ದ್ವಾರದಲ್ಲಿ ಏಳು ಶಾಖೆಗಳಾದ ರತ್ನ, ಲತಾಸುರಳಿ, ಅರ್ಧ ಗಂಭಗಳಿವೆ, ಲಲಾಟದಲ್ಲಿ ಗಜಲಕ್ಷ್ಮಿ ಚಿತ್ರವಿದೆ. ಗರ್ಭಗೃಹದ ಹೊಸ್ತಿಲಿಗೆ ಹೊಂದಿಸಿರುವ ಚಂದ್ರ ಶಿಲೆ ಇಲ್ಲಿ ಗಮನಿಸಬೇಕಾದ ಅಂಶ. ಇದು ಸುಮಾರು ಐದು ಅಡಿ ಅಗಲವಿದ್ದು ಇದರಲ್ಲಿ ಕಮಲಗಳು ಇವೆ.

ತೆರೆದ ಅಂತರಾಳದ ಗೋಡೆಯಲ್ಲಿ ನಾಲ್ಕು ಅರ್ಧ ಕಂಭಗಳಿವೆ. ಇದರ ದ್ವಾರಕ್ಕೆ ಮೂರು ಶಾಖೆಗಳಿದ್ದು, ಎರಡು ಬದಿಗೆ ಜಾಲಂಧ್ರಗಳು ವೈಶಿಷ್ಟ್ಯ ಪೂರ್ಣವಾಗಿವೆ. ಇವುಗಳನ್ನು ದ್ವಾರಶಾಖೆ ಮತ್ತು ಅರ್ಧಗಂಭಗಳ ನಡುವೆ ಕೆತ್ತಲಾಗಿದೆ.

ಲಲಾಟ ಬಿಂಬದ ಫಲಕದ ಮೇಲೆ ಬ್ರಹ್ಮ, ಮಹೇಶ್ವರ ಮತ್ತು ವಿಷ್ಣು ಶಿಲ್ಪಗಳಿವೆ. ಬಲಭಾಗದಲ್ಲಿ ಬ್ರಹ್ಮನಿದ್ದು, ಮಧ್ಯದಲ್ಲಿ ಶಿವ ಕೊರೆದಿದ್ದಾರೆ. ನಂತರ ವಿಷ್ಣುವಿನ ವಿಗ್ರಹವಿದ್ದು ಸಮಭಂಗದಲ್ಲಿರುವ ಆತನ ನಾಲ್ಕು ಕೈಗಳಲ್ಲೊಂದು ಅಭಯ ಮುದ್ರೆಯಲ್ಲಿದ್ದರೆ ಶಂಖ, ಚಕ್ರ ಮತ್ತು ಗದೆಗಳಿವೆ. ಕೆಳಗಡೆ ಎರಡೂ ಕೈ ಜೋಡಿಸಿರುವ ಗರುಡನ ವಿಗ್ರಹವನ್ನು ಕೊರೆದಿದ್ದಾರೆ.

ಈ ದೇವಾಲಯದ ಗೋಡೆ ಅರ್ಧ ಕಂಭಗಳ ಮೇಲೆ ಶಿಖರಗಳಿಂದ ಅಲಂಕೃತಗೊಂಡಿದೆ. ಗರ್ಭಗೃಹದ ಮೂರು ಗೋಡೆಗಳಲ್ಲಿ ಕೋಷ್ಠವನ್ನು ಕಟ್ಟಲಾಗಿದ್ದು ಅವುಗಳಲ್ಲಿ ಯಾವುದೇ ದೇವತಾ ವಿಗ್ರಹಗಳಿಲ್ಲ. ಈ ಕೋಷ್ಠದ ಮೇಲ್ಭಾಗವನ್ನು ವಿಮಾನದ ಆಕಾರದಲ್ಲಿ ಅಲಂಕರಿಸಿದ್ದಾರೆ. ಈ ದೇವಾಲಯವನ್ನು ಬಹುಶಃ ಏಕ್ಕಲರಸ (ಮೊದಲನೆಯ) ಕಟ್ಟಸಿದ್ದಿರಬಹುದು. ೧೨೫೫ ರಲ್ಲಿ ಸಾರಂಗದೇವನ ಕಾಲದ ದಾನವನ್ನು ಆ ದೇವರ ನಂದಾದೀವಿಗೆಗ ನೀಡಲಾಗಿತ್ತು.[45] ಈ ಶಾಸನವು ದೇವಾಲಯದ ಕಂಭದ ಬುಡದಲ್ಲಿದ್ದು, ಈ ಕಂಭವನ್ನು ಶಿವಮೊಗ್ಗಾ ಜಿಲ್ಲಾ ಪೊಲೀಸ್ ಕಛೇರಿಯಲ್ಲಿ ಇಡಲಾಗಿದೆ.

ಜೈನ ಬಸದಿ (ಛಾಯಚಿತ್ರ ನೋಡಿ)

ಉದ್ರಿ ಗ್ರಾಮ ಪ್ರವೇಸಿಸುವ ಮೊದಲು ಎಡಕ್ಕೆ ಜೈನ ಬಸದಿ ಇದೆ. ಶಾಸನದಲ್ಲಿ ಇದನ್ನು ಎರಗ ದೇವಾಲಯ ಎಂದು ಕರೆಯಲಾಗಿದೆ. ಮಹಾದೇವ ದಂಡನಾಯಕನು ಕ್ರಿ.ಶ. ೧೧೮೭ ರಲ್ಲಿ ಈ ಬಸದಿ ಕಟ್ಟಿಸಿ ಶಾಂತಿನಾಥನ ಮೂರ್ತಿಯನ್ನು ಪ್ರತಿಷ್ಠಾಪಿಸಿದನು; ಇಡೀ ಬಸದಿಯನ್ನು ಈಗ ಶೈವ ದೇವಾಲಯವಾಗಿ ಪರಿವರ್ತಿಸಲಾಗಿದೆ. ಗರ್ಭಗೃಹದಲ್ಲಿ ಪ್ರತಿಷ್ಠಾಪಿಸಿದ ಸಮಭಾಗದಲ್ಲಿರುವ ಶಾಂತಿನಾಥನ ವಿಗ್ರಹದ ಐದು ಹೆಡೆಯುಳ್ಳ ಪ್ರಭಾವಳಿಯನ್ನು ನವರಂಗದಲ್ಲಿ ಇಟ್ಟಿದ್ದಾರೆ. ಈ ವಿಗ್ರಹದ ಕೆಳಭಾಗವನ್ನು ಪ್ರಾಚ್ಯವಸ್ತು ಸಂಗ್ರಹಾಲಯ ಶಿವಮೊಗ್ಗ ಜಿಲ್ಲಾ ಪೊಲೀಸ್ ಕಛೇರಿ ಆವರಣದಲ್ಲಿ ಇಡಲಾಗಿದೆ. ಈಗ ಗರ್ಭಗೃಹದಲ್ಲಿ ನಾಲ್ಕು ಅಡಿ ಎತ್ತರವಿರುವ ಲಿಂಗವನ್ನು ಪ್ರತಿಷ್ಠಾಪಿಸಿದ್ದಾರೆ. ಅಂತರಾಳದ ದ್ವಾರದ ಲಲಾಟಬಿಂಬದಲ್ಲಿ ತೀರ್ಥಂಕರನ ಶಿಲ್ಪವಿದೆ. ದ್ವಾರದ ಫಲಕದಲ್ಲಿ ಮೂರು ಶಾಖೆಗಳಿವೆ. ನವರಂಗದ ಮಧ್ಯದಲ್ಲಿ ನಾಲ್ಕು ಕಂಭಗಳಿದ್ದು ಆ ಭಾಗದ ನೆಲ ಸ್ವಲ್ಪ ಎತ್ತರವಾಗಿದೆ. ಭುವನೇಶ್ವರಿಯಲ್ಲಿ ನಕ್ಷತ್ರಾಕಾರದ ಕಮಲದ ಅಲಂಕರಣವಿದೆ. ನವರಂಗದ ದ್ವಾರಕ್ಕೆ ಐದು ಶಾಖೆಗಳಿವೆ. ದರಲ್ಲಿ ಲತಾಸುರುಳಿ, ಅರ್ಧಗಂಭ, ಸರಳಪಟ್ಟಿ, ಜಾಲಂಧ್ರ ಮತ್ತು ಅರ್ಧ ಗಂಭಗಳಿವೆ. ಅಂತರಾಳಕ್ಕೆ ಹೊಂದಿಕೊಂಡು ಎಡ ಮತ್ತು ಬಲ ಬದಿಯಲ್ಲಿ ತಲಾ ಒಂದೊಂದು ಗೂಡುಗಳು ಇವೆ. ಅವುಗಳಲ್ಲಿ ಗಣೇಶ ಮತ್ತು ಷಣ್ಮುಖನ ವಿಗ್ರಹ ಇಡಲಾಗಿದೆ. ನವರಂಗ ದ್ವಾರದ ಲಲಾಟದಲ್ಲಿ ಗಜಲಕ್ಷ್ಮಿ ವಿಗ್ರಹವಿದ್ದು ಅದರ ಮೇಲಿನ ಭಾಗದಲ್ಲಿ ಆರು ತೀರ್ಥಂಕರರ ಶಿಪಗಳ ಫಲಕ ಇದೆ. ಬಸದಿಯ ಆವರಣದಲ್ಲಿ ಸುಮಾರು ಹನ್ನೆರಡು ಅಡಿ ಎತ್ತರವಿರುವ ಶಿಲಾಶಾಸನ ಪ್ರತಿಷ್ಠಾಪಿಸಲಾಗಿದೆ.

ಮೂರ್ತಿಶಿಲ್ಪಗಳು

ಈ ಗ್ರಾಮದಲ್ಲಿ ಹನ್ನೊಂದು ಮಾಸ್ತಿಗಲ್ಲು, ಎಂಟು ನಾಗಶಿಲ್ಪ, ಒಂದು ಆಂಜನೇಯ ಶಿಲ್ಪ ಮೂರು ವೀರಗಲ್ಲುಗಳು ಮತ್ತು ಎರಡು ಗಣೇಶ ಶಿಲ್ಪಗಳು ಅಲ್ಲಲ್ಲಿ ಬಿದ್ದಿವೆ. ಅವುಗಳನ್ನು ಒಂದೆಡೆ ಸಂಗ್ರಹಿಸಿ ಸುರಕ್ಷಿತವಾಗಿಡುವ ಕಾರ್ಯ ಅಗತ್ಯವಾಗಿದೆ.

—-
(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)

[1]ಎ.ಕ. ೨ಶಿವಮೊಗ್ಗ, ಶಾಸನ ೧೩೨
[2]ಶ್ರೀನಿವಾರ ರಿತ್ತಿ,*ಸೌಥ್ ಇಂಡಿಯನ್ ಇನ್‌ಸ್ಕ್ರಿಪ್ಶನ್*‌ಸಂ. ೧೮, ಮುನ್ನುಡಿ.
[3]*ಶಿವಮೊಗ್ಗ ಗೆಜೆಟೀಯರ್*ಪು. ೬೭೦.
[4]ಎ.ಕ.೮ಬಿ.ಎಲ್.ರೈಸ್ ಎಫಿಗ್ರಾಫಿಯಾ ಕರ್ನಾಟಿಕಾ, ಪು. ೪-೯೯.
[5]ರಾಜರಾಮ ಹೆಗಡೆ *ಆರ್ಟ್ ಆಂಡ್ ಪೇಟ್ರನೇಜ್ ಇನ್ ಮೀಡಿವಲ್ ಬನವಾಸಿ*೧೨೦೦ ಪು.೮೫.
(ಐ.ಸಿ.ಎಚ್.ಆರ್. ಸಂಶೋಧನಾ ಯೋಜನೆ ಪ್ರಬಂಧ – ೧೯೯೯ – ಅಪ್ರಕಟಿತ)
[6]ರಾಮಭಟ್ಟ, “*ಮಲೆನಾಡಿನ ಜೈನ ಅರಸೊತ್ತಿಗೆ: ಒಂದು ಅಧ್ಯಯನ*’
[7]ಎ.ಕ.೮ಸೊರಬ ಶಾಸನ ೨೩೩.
[8]*ಅದೇ*ಸೊರಬ ೧೩೫.
[9]*ಅದೇ*ಸೊರಬ ೧೫೬.
[10]*ಅದೇ*ಸೊರಬ ೨೩೩.
[11]*ಅದೇ*ಸೊರಬ ೧೩೬.
[12]*ಶಿವಮೊಗ್ಗ ಗೆಜೆಟೀಯರ್*ಪುಟ ೬೭೦.
[13]ಎ.ಕ.ಶಾಸನ ೧೪೦, ೧೫೩; ಸಂ. ೧೪೭ ರಲ್ಲಿ ‘*ಉದ್ದರೆಯ ನೆಲೆವೀಡಿನೊಳ್*’ ಎಂದಿದೆ.
[14]ಎ.ಕ.ಶಾಸನ ೧೪೦, ೧೧೯೮, ೧೩೫, ೧೨೧೭
[15]*ಅದೇ*ಸೊರಬ ೨೩೩.
[16]*ಅದೇ*
[17]*ಅದೇ*
[18]*ಅದೇ*
[19]ಎ.ಕ.ಶಾಸನ ೧೪೦, ೧೩೭.
[20]*ಅದೇ*,ಸೊರಬ ೧೪೦
[21]*ಅದೇ*,ಸೊರಬ ೪೭
[22]*ಅದೇ*,ಸೊರಬ ೧೩೫
[23]*ಅದೇ*,ಸೊರಬ ೧೪೦
[24]*ಅದೇ*
[25]*ಅದೇ*,೧೪೯
[26]*ಅದೇ*,ಶಾಸನ ೧೪೦
[27]*ಅದೇ*
[28]*ಅದೇ*
[29]*ಅದೇ*
[30]*ಅದೇ*
[31]*ಅದೇ*
[32]*ಅದೇ*
[33]*ಅದೇ*
[34]*ಅದೇ*
[35]*ಅದೇ*
[36]ಎ.ಕ. ಶಾಸನ ೧೩೫, ೧೨೧೭
[37]*ಅದೇ*
[38]*ಅದೇ*ಸೊರಬ ೧೩೯
[39]*ಅದೇ*ಸೊರಬ ೧೪೦
[40]*ಅದೇ*ಸೊರಬ ೧೩೫

[41] *ಅದೇ*
[42] *ಅದೇಸೊರಬ ೧೩೨*
[43] *ಅದೇ*
[44] *ಅದೇಸೊರಬ ೧೩೬ ಉದ್ರಿ ೧೨೫೫*
[45] *ಅದೇಸೊರಬ ೧೩೮ ಉದ್ರಿ, ೧೧೪೫*

ಮಲೆಕರ್ನಾಟಕದ ಅರಸು ಮನೆತನಗಳು: ೬. ಬೆಳಗುತ್ತಿ ಸಿಂದರು

ಕರ್ನಾಟಕದಲ್ಲಿ ಅಲ್ಲಲ್ಲಿ ಅನೇಕ ಸಿಂದಮನೆತನಗಳು ಕಲ್ಯಾಣ ಚಾಲುಕ್ಯ, ಕಳಚೂರ್ಯ ಮತ್ತು ಸೇವುಣರ ಸಾಮಂತರಾಗಿ ಆಳಿದ್ದಾರೆ. ಇದಕ್ಕೂ ಹಿಂದೆ ಬಾದಾಮಿ ಚಲುಕ್ಯ ಮತ್ತು ಬನವಾಸಿ ಕದಂಬರ ಕಾಲದಲ್ಲಿ ಬರುವ ಸೇಂದ್ರಕರು ಹೆಚ್ಚಾಗಿ ಬನವಾಸಿ ಮತ್ತು ನಾಗರಖಂಡ-೭೦ ವಿಭಾಗದಲ್ಲಿ ಕಂಡು ಬರುತ್ತಾರೆ. ನಾಗರಖಂಡ – ೭೦ ವಿಭಾಗದಲ್ಲಿ ಹಿಂದೆ ನಾಗರ ಆಳ್ವಿಕೆ ಇದ್ದು ಇಲ್ಲಿನ ಸೇಂದ್ರಕರೇ ಮುಂದೆ ಸಿಂದಮನೆತನದವರಾದರು ಎಂಬ ಅಭಿಪ್ರಾಯವಿದೆ.

ಇದುವರೆಗೆ ಗುರ್ತಿಸಲ್ಪಟ್ಟ ಸಿಂದಮನೆತನಗಳು ಹೀಗಿವೆ : ಬೆಳಗುತ್ತಿ ಸಿಂದರು, ಬಾಗಡಗೆಯ ಸಿಂದರು, ಯಲಬುರ್ಗಿಯ ಸಿಂದರು, ರಂಜೋಲದ ಸಿಂದರು, ಮುಳುಗುಂದದ ಸಿಂದರು, ಕೋಗಳಿನಾಡ ಸಿಂದರು, ಗುತ್ತಿಯ ಸಿಂದರು, ಕುರುಗೋಡ ಸಿಂದರು, ಸಾಲಂದಗೆಯ ಸಿಂದರು, ಚಕ್ರಕೂಟದ ಸಿಂದರು ಮತ್ತು ಪ್ರತ್ಯಂಡ್ರಕದ ಸಿಂದರು.

ಹತ್ತನೆಯ ಶತಮಾನದಲ್ಲಿ ಕಂಡು ಬರುವ ಸಿಂದಮನೆತನಗಳು ತಮ್ಮ ಪೂರ್ವ ವೃತ್ತಾಂತವನ್ನು ನೀಡುತ್ತವೆ. ಬಾಗಡಗೆಯ ಸಿಂದರ ಮತ್ತು ರಂಜೋಲದ ಸಿಂದರ ಪೂರ್ವ ವೃತ್ತಾಂತ ಭೈರನಮಟ್ಟಿ ಮತ್ತು ರಂಜೋಲದ ಶಾಸನಗಳಲ್ಲಿ

[1]ದೊರೆಯುತ್ತದೆ. ಧರಣೀದೇವ ಮತ್ತು ಆತನ ಪತ್ನಿಯು ಅಹಿಚ್ಛತ್ರದಲ್ಲಿ ಬಂದು ನೆಲೆಸಿರಲು ಅವರಿಗೆ ಪುತ್ರ ಸಂತಾನವಾಗುತ್ತದೆ. ಭೂಮಿಯ ಮೇಲೆ ಉದಯಿಸಿದ ಈ ಪುತ್ರನನ್ನು ಇಲ್ಲಿಯೇ ಬಿಡುವುದೆಂದು ನಿರ್ಧರಿಸಿ ಒಂದು ಹುಲಿಯನ್ನು ಸೃಷ್ಟಿಸಿ ಈ ಪುತ್ರನ ರಕ್ಷಣೆಗಾಗಿ ನೇಮಿಸಿದರು. ಹುಲಿಯ ಮರಿಗಳೊಂದಿಗೆ ಹುಲಿಯ ಹಾಲನ್ನು ಕುಡಿದು ಇವನು ಬೆಳೆದನು.
ಹರಿಹರ ಮತ್ತು ಹಳ್ಳೂರು ಶಾಸನಗಳು**[2]** ಬೆಳಗುತ್ತಿಯ ಸಿಂದರ ಪೂರ್ವ ವೃತ್ತಾಂತವನ್ನು ನೀಡುತ್ತವೆ. ಶಿವ ಮತ್ತು ಸಿಂದುವಿನ ಸಂಯೋಗದಿಂದ ಸೈಂದವ ಜನ್ಮತಾಳಿದನು. ಉರಗಾದಿ ರಾಜನು ಶಿವನ ರಕ್ಷಕನಾದನು. ಶಿವನು ಈ ಪುತ್ರನು ಧೈರ್ಯವಂತನಾಗಬೇಕೆಂದು ಹುಲಿಯನ್ನು ಸೃಷ್ಠಿಸಿ, ಅದರ ಹಾಲನ್ನು ಕುಡಿದ ಈ ಕೂಸು ಮಾಲತಿದೇವಿಗೆ ಯುದ್ಧದಲ್ಲಿ ಸಹಕರಿಸಿ ನಿಡುದೋಳ ಸಿಂಧನೆಂದು ಹೆಸರಾದನು. ಎಲ್ಲಾ ಸಿಂಧ ಮನೆತನಗಳು ನಾಗವಂಶದವರೆಂದು ಒಂದಿಲ್ಲೊಂದು ರೀತಿಯಲ್ಲಿ ಹೇಳಿಕೊಳ್ಳುತ್ತವೆ. ಸೇಂದ್ರಕರೂ ನಾಗ ವಂಶಕ್ಕೇ ಸೇರಿದವರು, ಅದ್ದರಿಂದ ಇದೇ ಸೇಂದ್ರಕರು ಮುಂದೆ ಸಿಂಧ ಮನೆತನದವರಾದರೆಂದು ಅಭಿಪ್ರಾಯವಿದೆ. ಆದರೆ ಬಹುತೇಕ ಸಿಂಧ ಶಾಸನಗಳು ಸೇಂದ್ರಕರು ಇದ್ದ ವಿಭಾಗವನ್ನು ಸೂಚಿಸದೆ ತಮ್ಮ ಪೂರ್ವಜನಾದ ನಿಡುದೋಳ ಸಿಂಧನನ್ನು ಹೆಸರಿಸುತ್ತವೆ. ಈ ನಿಡುದೋಳ ಸಿಂಧನು ಕರಹಾಡ – ೪೦೦೦ ಪ್ರದೇಶವನ್ನು ಆಳುತ್ತಿದ್ದನು. ಕೆಲವು ಸಿಂಧ ಮನೆತನಗಳು ತಮ್ಮನ್ನು ಭೋಗವತಿ ಪುರದವರೆಂತಲೂ ಅಥವಾ ಅಹಿಚ್ಛತ್ರದವರೆಂತಲೂ ಹೇಳುತ್ತಾರೆ.

ಕರಹಾಡ – ೪೦೦೦ ಇಂದಿನ ಸತಾರಜಿಲ್ಲೆಯ ದಕ್ಷಿಣ ಭಾಗ ಮತ್ತು ವಿಜಾಪುರ ಜಿಲ್ಲೆಯ ಉತ್ತರ ಭಾಗವನ್ನೊಳಗೊಂಡ ಪ್ರದೇಶವಾಗಿತ್ತು.[3]

ಬೆಳಗುತ್ತಿಯ ಸಿಂದರು ತಮ್ಮನ್ನು ಕರಹಾಟಪುರವರಾಧೀಶ್ವರರೆಂದೂ ಮಾಲತೀ ದೇವಿಲಬ್ಧ ವರಪ್ರಸಾದವರೆಂದೂ, ನೀಳ ಧ್ವಜವುಳ್ಳವರೂ, ಫಣಿರಾಜ ವಂಶದವರೂ, ಹುಲಿಯನ್ನು ಲಾಂಛನವನ್ನಾಗಿಟ್ಟುಕೊಂಡು ಸಿಂಧಗೋವಿಂದ ಮತ್ತು ಪಾತಾಳ ಚಕ್ರವರ್ತಿಗಳೆಂದು ಗುರ್ತಿಸಲ್ಪಟ್ಟಿದ್ದಾರೆ. ಕರಹಾಡ ಇಂದಿನ ಮಹಾರಾಷ್ಟ್ರ ರಾಜ್ಯದ ಸತಾರ ಜಿಲ್ಲೆಯಲ್ಲಿದೆ. ಈ ನಿಡುದೋಳ ಸಿಂಧನ ನಂತರ ಅನೇಕ ಸಿಂಧರು ರಾಜ್ಯವಾಳಿದರು. ಒಮ್ಮೆ ಕರಹಾಡ-೪೦೦೦ ಆಳಿದ ನಿಡುದೋಳ ಸಿಂಧನ ವಂಶದವರು ಅಲ್ಲಲ್ಲಿ ಚದರಿಹೋಗಿ ಇತರ ವಿಭಾಗಗಳಲ್ಲಿ ಆಳಿದ ಮನೆತನಗಳಂತೆ ಕಾಣುತ್ತದೆ.

ದಿನಕರ ದೇಸಾಯಿಯವರು ಹೊಳಲ್ಕೆರೆ ತಾಲೂಕಿನ ಗುಂಡೇರಿಯ ಶಾಸನದಲ್ಲಿ ಬರುವ ಮೂರನೆಯ ಕೃಷ್ಣನ ಕಾಲದ ಕೆರಸಿಗ ನನ್ನಿಯ ಸಿಂಧ ಬೆಳಗುತ್ತಿಯ ಸಿಂಧರ ಮೂಲಪುರುಷ ನಿರಬಹುದೆಂದು ಅಭಿಪ್ರಾಯ ಪಟ್ಟಿದ್ದಾರೆ. ಶಿಕಾರಿಪುರ ತಾಲೂಕಿನ ಮುತ್ತಗೆಯ ಶಾಸನದಲ್ಲಿ ಬರುವ ಮಹಾಮಂಡಳೇಶ್ವರ ಕಾಯವೀರರಸ ಧರಣಿಯನ್ನು ಆಳುತ್ತಿದ್ದುದ್ದನ್ನು ತಿಳಿಸುತ್ತದೆ. ದಿನಕರ ದೇಸಾಯಿ ಮತ್ತು ಚನ್ನಬಸಪ್ಪ ಹಿರೇಮಠ ಇವರು ಮುತ್ತಗೆಯು ಬೆಳಗುತ್ತಿಯ ಸನಿಹ ಇರುವದರಿಂದ ಕಾಯವೀರರಸ ಬೆಳಗುತ್ತಿಯ ಸಿಂಧ ಮನೆತನಕ್ಕೆ ಸೇರಿದವನೆಂದು ಪರಿಗಣಿಸಿದ್ದಾರೆ. ಬಿ.ಆರ್. ಗೋಪಾಲರು ಇವನು ಸಿಂಧ ಮನೆತನಕ್ಕೆ ಸೇರಿದ್ದನೆಂದು ಹೇಳಲು ಆಧಾರ ಸಾಲದೆನ್ನುತ್ತಾರೆ.[4]

ಕ್ರಿ.ಶ. ೯೯೨ರ ಹರಿಹರ ತಾಲೂಕು ವಾಸನ ಶಾಸನದಲ್ಲಿ[5] ಬರುವ ಮುಳುಗುಂದ ಸಿಂದ ಜಾತರಸ ಕದಂಬಳಿಗೆ ಸಾವಿರದೊಳಗಣ ಮುಳುಗುಂದ – ೧೨ ಆಳುತ್ತಿದ್ದಾಗ ವಾಸನ ತೀರ್ಥಕ್ಕೆ* (ಇಂದಿನ..... ಒಸನ) *ಪುಲ್ಲುಣಿಯ (ಇಂದಿನ ಗಳಗನಾಥ ಹಾವೇರಿ ತಾಲ್ಲೂಕು)[6] ಮರಿಯಾದೆಯಾದ ಕೆಲವು ಗ್ರಾಮಗಳನ್ನು ನೀಡುತ್ತಾನೆ. ಗದಗ ತಾಲೂಕಿನಲ್ಲಿ ಅದೇ ಹೆಸರಿನೊಂದಿಗೆ ಇಂದಿಗೂ ಗುರ್ತಿಸಲ್ಪಡುವ ಮುಳುಗುಂದ ಎಂಬ ಪಟ್ಟಣದ ಅರಸನಾಗುತ್ತಾನೆ. ಗದಗ ತಾಲೂಕಿನ ಹೊಸೂರು ಕ್ರಿ.ಶ. ೯೯೪ ಮತ್ತು ೧೦೨೮[7] ಶಾಸನಗಳು ಸಿಂಧಕೊರಲಗಾವುಂಡ ಮುಳುಗುಂದ ಪ್ರದೇಶ ಆಳುತ್ತಿದ್ದುದ್ದಾಗಿ ತಿಳಿಸುತ್ತವೆ. ಈ ಮುಳುಗುಂದದ ಸಿಂಧರು ಪನ್ನಗ ಧ್ವಜರು ಹುಲಿಯನ್ನು ಲಾಂಛನವನ್ನಾಗಿಟ್ಟುಕೊಂಡು, ಕುನ್ನಲ ವಂಶ ಪ್ರದೀಪಕರೆಂದು ಕರೆಯಲ್ಪಟ್ಟಿದ್ದಾರೆ. ಆದ್ದರಿಂದ ಬೆಳಗುತ್ತಿಯ ಸಿಂಧರಿಗೂ ಈ ಮುಳುಗುಂದ ಸಿಂಧರಿಗೂ ಸಂಬಂಧ ಇದ್ದಂತೆ ತೋರುವುದಿಲ್ಲ.

ಎಲ್ಲಾ ಸಿಂಧರ ಶಾಸನಗಳು ನಿಡುದೋಳ ಸಿಂಧನನ್ನೇ ಉದಾಹರಿಸುವುದರಿಂದ ಐತಿಹಾಸಿಕವಾಗಿ ನಿಡುದೋಳ ಸಿಂಧನ ಕಾಲವನ್ನು ಗುರ್ತಿಸಲಾಗುವುದಿಲ್ಲ. ಬೆಳಗುತ್ತಿಯ ಶಾಸನಗಳು ನಿಡುದೋಳ ಸಿಂಧನನಂತರ ಅನೇಕರು ಆಳಿದುದಾಗಿ ಹೇಳುತ್ತವೆ. ಹಿರಿಯ ಚಟ್ಟರಸ ಶಾಸನೋಕ್ತವಾಗಿ ಬರುವ ಮೊದಲ ಬೆಳಗುತ್ತಿಯ ಸಿಂಧ ಅರಸ. ಇವನ ಹೆಂಡತಿ ದೋರಬರಸಿ; ಇವರ ಮಗ ಅಯ್ಯಣ ಜೋಗರಸ. ಅಯ್ಯಣ ಜೋಗರಸನ ಮೇದೂರಿನ ಶಾಸನ ಬಹಳ ತೃಟಿತವಾಗಿದ್ದು ಅಮವಾಸ್ಯೆ ತಿಥಿ ಮತ್ತು ವಾರದ ವಿವರ ಲಭ್ಯವಿದ್ದು ಕಾಲವನ್ನು ಸರ್ವಜಿತ ಎಂದು ಕ್ರಿ.ಶ. ೧೧೧೭ಕ್ಕೆ ನಿಗಧಿಪಡಿಸಿದ್ದಾರೆ. ಅಯ್ಯಣ ಜೋಗರಸನ ಸುಮಾರು ೭೦ ವರ್ಷಗಳ ಆಳ್ವಿಕೆಯ ನಂತರ ಎರಡನೆಯ ಚಟ್ಟರಸ ಬರುವುದರಿಂದ ಬಿ.ಆರ್.ಗೋಪಾಲರು ಮೆಕೆಂಝಿಯವರ ಸಂಗ್ರಹದ ಪ್ರತಿಯನ್ನು ನೋಡಿ ಸಂವತ್ಸರವನ್ನು ಸರ್ವಜಿತು ಎಂದು ಪರಿಗಣಿಸಿರುವುದಕ್ಕೆ ಬದಲಾಗಿ ಶುಭಕೃತ ಅಥವಾ ಶೋಭಕೃತ ಎಂದು ಪರಿಗಣಿಸಿ ಇದು ಕ್ರಿ.ಶ. ೧೦೬೩-೬೪ ಸರಿಹೊಂದುತ್ತದೆ. ಹಾಗಾಗಿ ಅಯ್ಯಣ ಜೋಗರಸ ಕ್ರಿ.ಶ. ೧೦೬೦-೯೦ ವರೆಗೆ ಆಳುತ್ತಿದ್ದಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ.[8]

ಶಿಕಾರಿಪುರ ತಾಲೂಕು ಗೊಗ್ಗ ಶಾಸನ[9] ಕ್ರಿ.ಶ. ೧೧೧೭ ರಲ್ಲಿ ಹೊರಡಿಸಲಾಗಿದ್ದು ಮಹಾಪ್ರಧಾನಿ ಗೋವಿಂದರಸನು ಬನವಾಸಿ ಆಳುತ್ತಿದ್ದಾಗ ಎರಡನೆಯ ಚಟ್ಟರಸನು ಎಡವಟ್ಟೆ – ೭೦ ಆಳುತ್ತಿದ್ದುದ್ದಾಗಿ ತಿಳಿಸುತ್ತದೆ. ಕ್ರಿ.ಶ. ೧೧೧೩ರ ಮೇದೂರಿನ ಆರನೆಯ ವಿಕ್ರಮಾದಿತ್ಯನಶಾಸನವು[10] ಅತಿತ್ರುಟಿತವಾಗಿದ್ದು ಎಡವಟ್ಟೆ – ೭೦, ಅರಕೆರೆ – ೧೨ ಮತ್ತು ಇತರ ವಿಭಾಗಗಳನ್ನು ಆಳುತ್ತಿದ್ದ ಅರಸನ ಹೆಸರು 'ಮ' ಎಂದು ಮಾತ್ರ ಇರುವುದನ್ನು ಗುರ್ತಿಸಿ ಇದು ಚಟ್ಟರಸನ ಮೊಮ್ಮಗನಾದ ಮಾಚರಸನದಿರಬೇಕೆಂದು ಬಿ.ಆರ್. ಗೋಪಾಲರು ಊಹಿಸಿದ್ದಾರೆ. ಕ್ರಿ.ಶ. ೧೧೧೭ ಗೊಗ್ಗ ಶಾಸನದಲ್ಲಿ ಮಾಚರಸನನ ಅಜ್ಜ ಚಟ್ಟರಸ ಇನ್ನೂ ಆಳುತ್ತಿರುವುದರಿಂದ ಈ ಸಮಯದಲ್ಲಿ ಮಾಚರಸ ತನ್ನ ಅಜ್ಜ ಎರಡನೆಯ ಚಟ್ಟರಸನೊಂದಿಗೆ ಆಡಳಿತದಲ್ಲಿ ಭಾಗಿಯಾಗಿದ್ದನೆಂದು ತೋರುತ್ತದೆ. ಕ್ರಿ.ಶ. ೧೧೨೮ ನಾಗವಂದ ಶಾಸನವು ಸಿಂಧಮಾಚರಸ ಎಡವಟ್ಟೆ – ೭೦, ಅರಕರೆ – ೧೨ ಮತ್ತು ೫೬ ಬಾಡ ಆಳುತ್ತಿದ್ದುದ್ದಾಗಿ ತಿಳಿಸುತ್ತದೆ.

ಶಾಸನಗಳು ಎರಡನೆಯ ಚಟ್ಟರಸನ ನಂತರ ಮಾಚರಸ ಆಡಳಿತಕ್ಕೆ ಬಂದಿರುವುದನ್ನು ಸೂಚಿಸುತ್ತಿರುವುದರಿಂದ, ಎರಡನೆಯ ಚಟ್ಟರಸನ ಮಗನ ಹೆಸರು ತಿಳಿಯುವುದಿಲ್ಲ. ಬೆಳುಗುತ್ತಿಯ ಕ್ರಿ.ಶ. ೧೧೭೫[11]ಮತ್ತು ಹಿರೇಕಬ್ಬಾರದ ಕ್ರಿ.ಶ. ೧೧೮೭[12]ಶಾಸನಗಳು ಮಾಚಿದೇವ ಮತ್ತು ಮಲ್ಲಿದೇವ ಇವರ ತಂದೆ ಈಶ್ವರದೇವನೆಂದು ತಿಳಿಸಿದರೆ, ಬೆಳಗುತ್ತಿಯ ಶಾಸನದಲ್ಲಿ ಮಲ್ಲಿದೇವ ಈಶ್ವರದೇವನ ಅಜ್ಜನಾಗುತ್ತಾನೆ. ಕ್ರಿ.ಶ. ೧೧೭೫ ಸುಮಾರಿನಲ್ಲಿರುವ ಈಶ್ವರದೇವನನ್ನು ಎರಡನೆಯ ಈಶ್ವರದೇವನೆಂದು ಗುರ್ತಿಸುವದಾದರೆ, ಮಾಚರಸನ ತಂದೆ ಒಂದನೆಯ ಈಶ್ವರದೇವ, ಆಗುತ್ತಾನೆ. ಒಂದನೆಯ ಈಶ್ವರದೇವ ಆಡಳಿತಕ್ಕೆ ಬರಲಿಲ್ಲವೆಂದು ತೋರುತ್ತದೆ. ಒಂದನೆಯ ಈಶ್ವರದೇವನಿಗೆ ಮೂರು ಮಕ್ಕಳಿದ್ದು ಮೊದಲನೆಯವನು ಮಾಚರಸ ಎರಡನೆಯವನು ಮಲ್ಲಿದೇವ ಮತ್ತು ಮುರನೆಯವನು ಅಹಿಯರಸ, ಅಹಿಯರಸ ಕ್ರಿ.ಶ. ೧೧೨೦-೪೦ ರವರೆಗೆ ಆಳುತ್ತಿದ್ದು ಅನಂತರ ಕ್ರಿ.ಶ. ೧೧೪೦-೪೫ ವರೆಗೆ ಮಲ್ಲಿದೇವ ಆಳುತ್ತಿದ್ದಿರಬೇಕು. ಮಲ್ಲಿದೇವನ ಬಗ್ಗೆ ಯಾವುದೇ ಅಧಿಕೃತ ಶಾಸನವಿಲ್ಲ, ಆದರೆ ಪರೋಕ್ಷವಾಗಿ ಎರಡನೆಯ ಈಶ್ವರದೇವನ ಕ್ರಿ.ಶ. ೧೧೭೧ರ ಹರಿಹರದ ಶಾಸನವು ಅವನನ್ನು ಉಲ್ಲೇಖಿಸುತ್ತದೆ.[13] ಈತನು ಹಿಂದೆ ದುಂದುಭಿ ಸಂವತ್ಸರದಲ್ಲಿ ಅಂದರೆ ಕ್ರಿ.ಶ. ೧೧೪೩ರಲ್ಲಿ ಹರಿಹರದ ಶ್ರೀ ಯೋಗೇಶ್ವರ ದೇವರಿಗೆ ತನ್ನ ಮನ್ನೆಯದೊಳಗಿನ ಬೆಳಗೆರೆಯಲ್ಲಿನ ಕಕ್ಕರಗೊಳ (ಇಂದಿನ ಕಕ್ಕರಗೊಳ)ದಲ್ಲಿ ಒಂದು ಮತ್ತರು ಭೂಮಿದಾನ ಬಿಟ್ಟಿದ್ದಾನೆ.

ಮಾಚರಸ ಮತ್ತು ಮಲ್ಲಿದೇವ ಇವರಿಗೆ ಸಂತತಿ ಇರಲಿಲ್ಲವೆಂದೂ ಅಹಿಯರಸನ ಮಗ ರಾಯರಸ ಪಟ್ಟಕ್ಕೆ ಬರಲಿಲ್ಲವೆಂದು ತೋರುತ್ತದೆ. ಕೋಡಮಗ್ಗಿಯ ಕ್ರಿ.ಶ. ೧೧೫೮[14] ಶಾಸನದಂತೆ ಕಲಚೂರಿ ಬಿಜ್ಜಳನ ಮಹಾಮಂಡಳೇಶ್ವರನಾಗಿ ಎರಡನೆಯ ಈಶ್ವರದೇವ ಎಡವಟ್ಟೆ-೭೦ ಆಳುತ್ತಿದ್ದನು. ಎರಡನೆಯ ಈಶ್ವರದೇವ ಬೆಳಗುತ್ತಿ ಸಿಂಧರ ಪ್ರಮುಖ ದೊರೆಯಾಗಿದ್ದು ಅಂಗುಷ್ಟಯಲ್ಲಿ ರತ್ನದ ಫಣಿಯ ಮುದ್ರೆ ಧರಿಸುತ್ತಿದ್ದುದ್ದಾಗಿ ಶಾಸನಗಳಲ್ಲಿ ಕೆಲವು ಬಾರಿ ಈಶ್ವರಭೂಪನೆಂದು ಕರೆಯಲ್ಪಟ್ಟಿದ್ದಾನೆ. ಈತನು ಆಡಳಿತಕ್ಕೆ ಬಂದ ಕೆಲವೇ ವರ್ಷಗಳಲ್ಲಿ ಅಂದರೆ ಕ್ರಿ.ಶ. ೧೧೬೫ ರಲ್ಲಿ ನಿಡನೇಗಿಲ[15] ಶಾಸನದಲ್ಲಿ ಐದು ನಾಡುಗಳಲ್ಲಿ ಹದಿನಾರು ಕಂಪಣಗಳನ್ನು ಆಳುತ್ತಿದ್ದುದನ್ನು ಕಾಣುತ್ತೇವೆ. ಕ್ರಿ.ಶ. ೧೧೮೦ರ ಸುಮಾರು ತನ್ನ ಮಕ್ಕಳಾದ ಪಾಂಡ್ಯದೇವ ಮತ್ತು ಎರಡನೆಯ ಮಲ್ಲಿದೇವ ಇವರ ಸಹಾಯದಿಂದ ಆಳುತ್ತದ್ದಾಗ ಎಳಂಬೇರು-೧೨ (ಇಂದಿನ ಎಲೆ ಬೆತೂರು, ದಾವಣಗೆರೆ ತಾಲೂಕು) ಹೊಸದಾಗಿ ಕಂಡು ಬರುವ ವಿಭಾಗವಾಗಿದೆ, ಎರಡನೆಯ ಈಶ್ವರದೇವನ ಹೆಂಡತಿ ಕಾದಂಬ ವಂಶದ ದೊರೆ ಮತ್ತು ಬೊಪ್ಪಾದೇವಿಯ ಮಗಳಾದ ಬಾಚಲದೇವಿ ಆಗಿದ್ದಳು.

ಎರಡನೆಯ ಮಲ್ಲಿದೇವ ಕ್ರಿ.ಶ. ೧೧೮೫ರ ಸುಮಾರಿಗೆ ಆಡಳಿತಕ್ಕೆ ಬಂದಿದ್ದು ಚಾಲುಕ್ಯ ಸೋಮೇಶ್ವರನ ಮಾಂಡಲೀಕನಾಗಿ ಕ್ರಿ.ಶ. ೧೧೮೯ ರಲ್ಲಿ ಆಳುತ್ತಿದ್ದನು.

ಎರಡನೆಯ ಮಲ್ಲಿದೇವನ ಮಗ ಮೂರನೆಯ ಈಶ್ವರದೇವ ಕ್ರಿ.ಶ. ೧೨೦೫ ರಲ್ಲಿ ಆಡಳಿತಕ್ಕೆ ಬಂದನು. ಮೂರನೆಯ ಈಶ್ವರದೇವ ಹೊಯ್ಸಳರ ವಿರುದ್ಧ ತಿರುಗಿ ಬೀಳುವುದಕ್ಕೆ ಸಮಯ ಕಾಯುತ್ತಿದ್ದು, ಇದಕ್ಕೆ ಸೇವುಣರು ಅನವು ಮಾಡಿಕೊಟ್ಟರು ನಂತರ ಮೂರನೆಯ ಈಶ್ವರದೇವ ಸೇವುಣರನ್ನೂ ಹೊರದೂಡಿ ಪ್ರತ್ಯೇಕ ಅಸ್ತಿತ್ವಕ್ಕೆ ಪ್ರಯತ್ನಿಸಿದನು. ಕ್ರಿ.ಶ. ೧೨೨೨ರ ಮಾಧನಭಾವಿ ಶಾಸನ[16] ಈಶ್ವರದೇವನ ಹೆಂಡತಿ ಚಟ್ಟಲೆಯನ್ನು ಮತ್ತು ಮಗ ಕೇಶವದೇವನನ್ನು ಉಲ್ಲೇಖಿಸಿದೆ. ಕೇಶವದೇವ ಕ್ರಿ.ಶ. ೧೨೨೯ ರ ಸುಮಾರಿಗೆ ಆಡಳಿತಕ್ಕೆ ಬಂದಿದ್ದು ಕ್ರಿ.ಶ. ೧೨೩೨ ರ ಶಾಸನವು[17] ಅವನು ಬೆಳಗುತ್ತಿಯಿಂದ ಆಳುತ್ತಿದ್ದುದ್ದನ್ನು ತಿಳಿಸುತ್ತದೆ.

ಕ್ರಿ.ಶ. ೧೨೪೦ ರ ಸುಮಾರಿಗೆ ಕೇಶವದೇವನೊಂದಿಗೆ ಬೆಳಗುತ್ತಿಯ ಸಿಂದರ ಆಳ್ವಿಕೆ ಕೊನೆಗೊಂಡಿದ್ದು ನಂತರ ಬೀರರಸ ಬೆಳಗುತ್ತಿ ಆಳುತ್ತಿರುವುದು ಕಂಡು ಬರುತ್ತದೆ. ಬಿ.ಆರ್. ಗೋಪಾಲರು ಬೀರರಸ ಅಥವಾ ಹರಬರದೇವರಸ ಕೇಶವದೇವನ ಮಗನಿರಬೇಕು, ಇವರಿಬ್ಬರ ಮಧ್ಯ ಯಾವ ಸಂಬಂಧ ಇತ್ತು? ಇವನು ಸಿಂಧ ಮನೆತನದವನೆ? ಎಂದು ಸಂದೇಹಿಸಿದ್ದಾರೆ.[18] ಅವರ ಈ ಸಂದೇಹವು ನಿಜವಾಗಿದ್ದು ಶಾಸನಗಳು ತಿಳಿಸುವಂತೆ ಬಿಲ್ಲೇಶ್ವರ ದೇವರ ಪಾದಪದ್ಮಾ ರಾಧಕನಾದ ಇವನು ಹೊಸಗುಂದದ ಬೀರರಸನೇ (ಕಲಿಸೆ) ಆಗಿದ್ದಾನೆ. ಇವನು ಕ್ರಿ.ಶ. ೧೨೫೭ ರವರೆಗೆ ಬೆಳಗುತ್ತಿಯಿಂದ ಆಳುತ್ತಿದ್ದಿರಬಹುದು.

ಬೆಳಗುತ್ತಿಯ ಸಿಂಧರ ಆಡಳಿತವನ್ನು ಮೂರು ಹಂತಗಳಲ್ಲಿ ಗುರ್ತಿಸಬಹುದು. ಅವುಗಳೆಂದರೆ,

(೧) ಚಾಳುಕ್ಯರಿಗೆ ಅಧೀನವಾಗಿ
(೨) ಕಳಚೂರ್ಯ, ಸೇವುಣ ಮತ್ತು ಹೊಯ್ಸಳರಿಗೆ ಪರ-ವಿರೋಧವಾಗಿ ಹಾಗೂ
(೩) ಪ್ರತ್ಯೇಕ ಅಸ್ತಿತ್ವದಲ್ಲಿ.

(೧) ಚಾಳುಕ್ಯರಿಗೆ ಅಧೀನವಾಗಿ

ಕಲ್ಯಾಣ ಚಾಲುಕ್ಯ ಒಂದನೆಯ ಸೋಮೇಶ್ವರ ಮೇದೂರಿನ ಶಾಸನದಲ್ಲಿ[19] ಮಹ ಮಂಡಳೇಶ್ವರ ಚಾವುಂಡರಾಯ ಮಹಾ ಪ್ರಧಾನಿಯಾಗಿದ್ದಾಗ ಭಾವ ಬಿಜ್ಜರಸ ಎಡವಟ್ಟೆ-೭೦, ಮೂಗುಂದ-೧೨ (ಮುಳಗುಂದ-೧೨?) ಆಳುತ್ತಿದ್ದಾಗ ಬೆಳಗುತ್ತಿಯ ಅಯ್ಯಣ ಜೋಗರಸ ಮಾಸೂರು-೧೨, ಕುಂದೂರು-೧೨, ಕೊಳ್ಳಿಗನೂರು-೭೦ ಮತ್ತು ಅರಕೆರೆ-೧೨ ಮುಂತಾದ ವಿಭಾಗಗಳನ್ನು ಆಳುತ್ತಿದ್ದನು. ಕ್ರಿ.ಶ. ೧೧೧೭ ರಲ್ಲಿ ಮಹಾಪ್ರಧಾನಿ ಗೋವಿಂದರಸ ಬನವಾಸಿ ಆಳುತ್ತಿದ್ದಾಗ ಎರಡನೆಯ ಚಟ್ಟರಸ ಎಡವಟ್ಟೆ-೭೦ ವಿಭಾಗ ಆಳುತ್ತಿದ್ದ.[20] ಈ ಸಮಯಕ್ಕಾಗಲೇ ರಟ್ಟಪಳ್ಳಿ ಮತ್ತು ಎಡವಟ್ಟೆ ವಿಭಾಗಗಳು ಚಾಲುಕ್ಯರ ನೇರ ಅಧೀನಕ್ಕೆ ಬದಲಾಗಿ ನೂರುಂಬಾಡದ ಕದಂಬರು ರಟ್ಟಪಳ್ಳಿ-೭೦ ಮತ್ತು ಬೆಳಗತ್ತಿಯ ಸಿಂಧರು ಎಡವಟ್ಟೆ-೭೦ ವಿಭಾಗಗಳನ್ನು ಆಳುತ್ತಿದ್ದಿರಬೇಕು.

ಎರಡನೆಯ ಚಟ್ಟರಸನ ಮೊಮ್ಮಗ ಮಾಚರಸ ಕ್ರಿ.ಶ. ೧೧೨೦ ರಲ್ಲಿ ಆಡಳಿತಕ್ಕೆ ಬರುತ್ತಾನೆ. ಆಗ ಸಿಂಧರು ನೊಳಂಬವಾಡಿಯಲ್ಲಿ ಇನ್ನೂ ಮೂರು ವಿಭಾಗಗಳನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳುವುದನ್ನು ಕಾಣುತ್ತೇವೆ. ಕ್ರಿ.ಶ. ೧೦೪೩ರಲ್ಲಿ ಚಾಳುಕಿ ಅಹಿಯರಸ ಭ್ರಾಂತಿಕಾಡು-೩೦ ರ ನಾಳ್ಗಾವುಂಡನಾಗಿ ಆಳುತ್ತಿದ್ದ.[21] ಈ ಶಾಸನವು ಭ್ರಾಂತಿಕಾಡು-೩೦, ಬಿನ್ನವೂರು-೧೨ ಮತ್ತು ಮುರ್ಚನೂರು-೧೨ ಈ ವಿಭಾಗಗಳನ್ನು ಅಂತೂ ೫೪ ಬಾಡಗಳೆಂದು ತಿಳಿಸುತ್ತದೆ. ಚಾಳುಕಿ ಅಹಿಯರಸ ಮಾಚರಸನ ಮಾವನೆಂದು ಹರಿಹರದ ಶಾಸನದಿಂದ ತಿಳಿದುಬರುತ್ತದೆ. ಪ್ರಾಯಶಃ ಮಾಚರಸನ ಹೆಂಡತಿಯಾದ ಚಟ್ಟಲದೇವಿಯು ಈ ಚಾಳುಕಿ ಅಹಿಯರಸನ ಮಗಳಾಗಿರಬೇಕು. ನೊಳಂಬರ ಕಾಲದ್ದಿ ೫೪ ಬಾಡಗಳಾಗಿದ್ದ (೩೦-+೧೨+೧೨=೫೪) ಈ

ಮೂರು ವಿಭಾಗಗಳಿಗೆ ಇನ್ನೂ ಎರಡು ಬಾಡಗಳು ಸೇರಿ ೫೬ ಬಾಡಗಳಾಗಿ ಬೆಳಗುತ್ತಿ ಸಿಂಧರ ಶಾಸನಗಳಲ್ಲಿ ೫೬ ಬಾಡಗಳೆಂದೇ ಕರೆಯಲ್ಪಟ್ಟಿವೆ.

ಆಡಳಿತಾತ್ಮಕ ಅಥವಾ ಬೇರೆ ಕಾರಣಗಳಿಂದಾಗಿ ಎರಡು ಅಥವಾ ಮೂರು ವಿಭಾಗಗಳು ಒಟ್ಟುಗೂಡಿದಾಗ ಈ ವಿಭಾಗಗಳ ಗ್ರಾಮಗಳ ಬಾಡಗಳ ಸಂಖ್ಯೆಯನ್ನು ಒಟ್ಟುಗೂಡಿಸಿ ಬರುವ ಮೊತ್ತವನ್ನು ಯಾವುದಾದರೊಂದು ಪ್ರಮುಖ ವಿಭಾಗದ ಹೆಸರಿನೊಂದಿಗೆ ಅಥವಾ ಬೇರೆ ಹೆಸರನ್ನು ಈ ಹೊಸ ವಿಭಾಗಕ್ಕೆ ಅನ್ವಯಿಸಿ ಶಾಸನಗಳಲ್ಲಿ ಬಳಸಿರುವುದನ್ನು ಕಾಣುತ್ತೇವೆ. ರಾಷ್ಟ್ರಕೂಟರ ಕಾಲದಲ್ಲಿನ ಕ್ರಿ.ಶ. ೯೧೨ರ ಶಾಸನದಲ್ಲಿ ಕುಡುವಣ್ಣ ಗಂಡ-೭೦ ಮತ್ತು ಇಟ್ಟಿಗೆ-೩೦ ವಿಭಾಗಗಳ ಉಲ್ಲೇಖವಿದೆ. ಇದೇ ಪ್ರದೇಶ ಕಲ್ಯಾಣ ಚಲುಕ್ಯರ ಕಾಲದಲ್ಲಿ ರಟ್ಟಪಳ್ಳಿ-೭೦ ಮತ್ತು ಇಟ್ಟಿಗೆ-೩೦ ಎಂದು ಕರೆಯಲ್ಪಟ್ಟಿದೆ. ಒಂದು ವಿಭಾಗದ ಹೆಸರು ಬದಲಾಗಿರುವುದು ಪ್ರಾಯಶಃ ಕುಡುವಣ್ಣ ಗಂಡ-೭೦ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡು ಬರುಬರುತ್ತಾ ರಟ್ಟಪಳ್ಳಿ ಗ್ರಾಮ ಪ್ರಾಮುಖ್ಯತೆ ಗಳಿಸಿ ಪ್ರಮುಖ ಪಟ್ಟಣವಾಗಿ ಆಳುವ ರಾಜವಂಶದ ಬದಲಾವಣೆಯಾಗಿ ರಾಜಧಾನಿಯ ಸ್ಥಳಾಂತರಕ್ಕೆ ಕಾರಣವಾಗಿರಬಹುದು.**[22]** ಇಟ್ಟಿಗೆ-೩೦ ಮತ್ತು ರಟ್ಟಪಳ್ಳಿ-೭೦ ವಿಭಾಗಗಳು ಸೇರಿ ನೂರುಂಬಾಡ ಆಗಿದ್ದನ್ನು ಇಟ್ಟಿಗೆಯ ಶಾಸನದಿಂದ ಕಾಣುತ್ತೇವೆ.**[23]**

ರಾಜ್ಯ ವಿಸ್ತರಣಾಕಾಂಕ್ಷಿಯಾದ ಹೊಯ್ಸಳ ವಿಷ್ಣುವರ್ಧನ ಉಚ್ಚಂಗಿಯನ್ನು ಗೆದ್ದುಕೊಂಡು ಹಾನಗಲ್ಲು ಪ್ರದೇಶಕ್ಕೂ ಬಂದು ಸಾಂತರರ ಸ್ನೇಹ ಬೆಳೆಸಿದ್ದನ್ನು ಕಾಣುತ್ತೇವೆ. ಆಳ್ವಖೇಡದ ಅಳುಪರು ಸಾಂತಳಿಗೆಯನ್ನು ಮುತ್ತಿದಾಗ ಬನವಾಸಿಯಲ್ಲಿ ತಂಗಿದ್ದ ವಿಷ್ಣುವರ್ಧನ ಅಳುಪರನ್ನು ಸೋಲಿಸಿ ಸಾಂತರರ ಬೆಂಬಲಕ್ಕೆ ನಿಂತನು. ಹಾನುಗಲ್ಲು ಕದಂಬರ ತೈಲಪ ಕ್ರಿ.ಶ. ೧೯೯೦ ರಲ್ಲಿ ಪಟ್ಟಕ್ಕೆ ಬಂದಿದ್ದು ಆರನೆಯ ವಿಕ್ರಮಾದಿತ್ಯನ ವಿಶ್ವಾಸ ಗಳಿಸಿ ಬನವಾಸಿ ಮತ್ತು ಹಾನಗಲ್ಲು ಪ್ರದೇಶಗಳನ್ನು ಆಳುತ್ತಿದ್ದನು. ಶಿವಮೊಗ್ಗ ತಾಲೂಕಿನ ಕ್ರಿ.ಶ. ೧೧೧೫ ಶಾಸನದಲ್ಲಿ ಹೇಳಿದಂತೆ**[24]** ತೈಲಪನ ಮಾಂಡಳೀಕ ಮಹಾಪ್ರಧಾನಿ ಮಸಣಯ್ಯ ಹೊಂಬುಚದ ಸಾಂತರರ ಮೇಲೆ ಧಾಳಿಮಾಡಿ ಸಾಂತರರ ಮನ್ನೆಯ ಬಮ್ಮರಸನ ಮಗನನ್ನು ಕೊಲ್ಲುತ್ತಾನೆ. ಶಿಕಾರಿಪುರ ಮತ್ತು ಸೊರಬ ತಾಲೂಕಿನ ಕೆಲವು ಶಾಸನಗಳಲ್ಲಿ ಕೂಡಾ ಮಸಣಯ ಉಲ್ಲೇಖವಿದೆ. ಶಿವಮೊಗ್ಗ ತಾಲೂಕು ಅಗ್ರಹಾರ ಚೋರಡಿಯ ಕಾಲದ ಉಲ್ಲೇಖವಿಲ್ಲದ ವೀರಗಲ್ಲು ಶಾಸನದಲ್ಲಿ ಕದಂಬರ ತೈಲಪ ಇಲ್ಲಿನ ಹಸುಗಳನ್ನು ಅಪಹರಿಸಿದ್ದನ್ನು ತಿಳಿಸುತ್ತದೆ.**[25]** ಕದಂಬರ ತೈಲಪ ಹೆಚ್ಚಿನಪಾಲು ಹೊಂಬುಚದ ಸಾಂತರರು ಮತ್ತು ಹೊಯ್ಸಳರನ್ನು ಎದುರಿಸುತ್ತಾ ಬನವಾಸಿ ಪ್ರಾಂತದಲ್ಲೇ ಹೆಚ್ಚು ಕಾಲ ಕಳೆದಿರಬೇಕು. ಬೆಳಗುತ್ತಿಯ ಸಿಂದರು ಪರೋಕ್ಷವಾಗಿ ಹೊಯ್ಸಳರ ಬದಲಿಗೆ ಕದಂಬರ ತೈಲಪನನ್ನೆ ಬೆಂಬಲಿಸಿರಬೇಕು. ಬೆಳಗುತ್ತಿಯ ೧೦ನೇ ವೀರಗಲ್ಲು**[26]** ೬ ಅಕ್ಟೋಬರ್೧೧೩೦ ರಂದು ತೈಲಪ ಮರಣ ಹೊಂದಿದನ್ನು ಆ ಸಮಯದಲ್ಲಿ ಮಹಾಪ್ರಧಾನಿ ಮಸಣಯ್ಯನ ತಮ್ಮ ಬೊಪ್ಪ ವೇಳೆವಾಳಿಯಾಗಿ ಸ್ವರ್ಗವೇರಿದ ವಿಷಯ ತಿಳಿಸುತ್ತದೆ.

ನೂರುಂಬಾಡದ ಮೂರನೆಯ ಕೇತರಸನ ಮೂವರು ಪತ್ನಿಯರಲ್ಲಿ ಸಿಂಧ ಮನೆತನದ ದೋರಲಾದೇವಿಯು ಒಬ್ಬಳು. ಡಾ. ಶ್ರೀನಿವಾಸ ರಿತ್ತಿಯವರು ಬಹುತೇಕ ಈ ದೋರಲಾದೇವಿಯು ಬೆಳಗುತ್ತಿಯ ಸಿಂಧರ ಒಂದನೆಯ ಈಶ್ವರದೇವನ ಮಗಳಿರಬಹುದೆಂದು ಅಭಿಪ್ರಾಯ ಪಡುತ್ತಾರೆ.**[27]**

ಗದಗ ತಾಲುಕಿನ ಹಂಚಿನಾಳದ ಅತಿತ್ರುಟಿತ ಶಾಸನವೊಂದು**[28]** ಸಿಂಧ ಪೆರ್ಮಾಡಿ ಗೋವೆಯ ಕದಂಬರನ್ನು ಸೋಲಿಸಿ ಕೊಳ್ಳಿಗನಘಟ್ಟಕ್ಕೆ ದಾಳಿಮಾಡಿ ಹೊಯ್ಸಳ ವಿಷ್ಣುವರ್ಧನನನ್ನು ದೋರಸಮುದ್ರದವರೆಗೆ ಬೆನ್ನಟ್ಟಿ ಹೋಗಿದ್ದನ್ನು ತಿಳಿಸುತ್ತದೆ. ಕೊಳ್ಳಿಗನ ಘಟ್ಟವು ಹೊನ್ನಾಳಿ ತಾಲೂಕಿನಲ್ಲಿರುವ ಕೊಳ್ಳಿಗ-೭೦ ವಿಭಾಗವಾಗಿದ್ದು ಕುಳಗಟ್ಟೆ ಇದರ

ರಾಜಧಾನಿಯಾಗಿದೆ. ಶಾಸನೋಕ್ತ ಸಿಂಧ ಪೆರ್ಮಾಡಿ ಪ್ರಾಯಶಃ ಬೆಳಗುತ್ತಿಯ ಸಿಂಧ ಮಾಚರಸನಿರಬೇಕೆಂದು ತೋರುತ್ತದೆ.

(೨) ಕಳಚೂರ್ಯ, ಸೇವುಣ ಮತ್ತು ಹೊಯ್ಸಳರಿಗೆ ಪರ-ವಿರೋಧವಾಗಿ

ಹಾನಗಲ್ಲು, ಉದ್ದರೆ ಮತ್ತು ಸಾಂತಳಿಗೆ ಅರಸರು ತಮ್ಮನ್ನು ಹೊಯ್ಸಳರೊಂದಿಗೆ ಗುರ್ತಿಸಿಕೊಂಡರು. ಬೆಳಗುತ್ತಿಯ ಸಿಂಧರು ತಮ್ಮನ್ನು ಕಳಚೂರ್ಯರೊಂದಿಗೆ ಗುರ್ತಿಸಿಕೊಂಡರು. ಹೊಯ್ಸಳ ಒಂದನೆಯ ನರಸಿಂಹನು ಕ್ರಿ.ಶ. ೧೧೫೪ ರಲ್ಲಿ ಬನವಾಸಿಯಲ್ಲಿ ಕೆಲಕಾಲ ತಂಗಿದ್ದನು. ಬಿಜ್ಜಳನು ಕ್ರಿ.ಶ. ೧೧೬೩ ರಲ್ಲಿ ಸಾಗರ ತಾಲೂಕಿನ ತ್ಯಾಗರ್ತಿಯಲ್ಲಿ ಸಾಂತರರ ಜಗದೇವನನ್ನು ಸೋಲಿಸಿದನು. ಹೊಯ್ಸಳ ನರಸಿಂಹನು ಬೆಳಗುತ್ತಿಯನ್ನು ವಶಪಡಿಸಿಕೊಂಡಿರಬೇಕು. ಬೆಳಗುತ್ತಿಯಲ್ಲಿರುವ ಈಶ್ವರರ ದೇವನ ಕ್ರಿ.ಶ. ೧೧೬೬ರ ಶಾಸನದ ಪ್ರಕಾರ ಆತನ ಅಧಿಕಾರಿಗಳಾದ ಹೆಗ್ಗಡೆ ಸಿಂಗಯ್ಯ ಮತ್ತು ಗಂಡ ವಿಗ್ರಹ ಕೇಶದೇವ ಬೆಳಗುತ್ತಿಯ ಕೋಟೆಯ ಮೇಲೆ ಧಾಳಿ ಮಾಡಿರುವುದನ್ನು ಕಾಣುತ್ತೇವೆ.**[29]** ಕ್ರಿ.ಶ. ೧೧೬೫ ರ ಹಿರೇಕೆರೂರು ತಾಲೂಕು ನಿಡನೇಗಿಲ**[30]** ಶಾಸನದಲ್ಲಿ ತಿಳಿಸಿದಂತೆ ಈಶ್ವರದೇವ ಹಳ್ಳೂರಿನಿಂದ ಐದು ನಾಡುಗಳಲ್ಲಿ ಹದಿನಾರು ಕಂಪಣಗಳನ್ನು ಆಳುತ್ತಿದ್ದನು. ಎರಡನೆಯ ಈಶ್ವರದೇವ ತನ್ನ ಅಭ್ಯುದಯಕ್ಕೆ ಕಾರಣನಾದ ಮಾವ ಅಲ್ಲಮರಸ ಮತ್ತು ಮಂತ್ರಿ ಮಹದೇವನನ್ನು ಸ್ಮರಿಸುತ್ತಾನೆ. ಈ ಸಮಯದಲ್ಲೆ ಬೆಳಗುತ್ತಿ ಸಿಂಧರ ಆಳ್ವಿಕೆಯ ಪ್ರದೇಶದ ವಿಸ್ತಾರ ಹೆಚ್ಚುವುದನ್ನು ಕಾಣುತ್ತೇವೆ.

ಈ ಹದಿನಾರು ಕಂಪಣಗಳು ಹಿರೇಕೆರೂರು, ಹೊನ್ನಾಳಿ, ಶಿವಮೊಗ್ಗ, ಹರಿಹರ, ದಾವಣಗೆರೆ, ಹೊಸದುರ್ಗ, ತರೀಕೆರೆ ಮತ್ತು ಅರಸೀಕೆರೆ ತಾಲೂಕುಗಳಲ್ಲಿ ಹರಡಿಕೊಂಡಿದ್ದವು. ಆ ನಾಡುಗಳಾವುವೆಂದರೆ:

ಬನವಾಸೆ ನಾಡು	ಮಾಸೂರು-೧೨ ಎಡವಟ್ಟೆ-೭೦, ಬಳ್ಳವೆ-೭೦, ನರಿಯಳಿಗೆ-೭೦
ಸಾನ್ತಳಿಗೆ ನಾಡು	ಎಡಮಲೆ-೭೦, ಮುದುವರ (ಮುದುಮಲ್ಲ)-೩೦
ಮಂಡಲಿ ನಾಡು	ಹೊಳಲೂರು-೧೨
ನೊಳಂಬವಾಡಿ ನಾಡು	ಕೊಳ್ಳಿಗ-೭೦, ಕುಂದೂರು-೭೦, ಅರಬಲ-೭೦ ಬಾಡ-೫೬
ಮುನುಡಿವೂಳಲು	೧೨, ಅರಕೆರೆ-೧೨, ಅತ್ತಿಗೇರ-೧೨, ಪಡುಗಲು-೧೨,
ಅಸನ್ದಿ ನಾಡು	ಕಳಿಕಟ್ಟೆ-೧೨, ಅರಬಲ-೭೦

ಹೊಯ್ಸಳ ವೀರ ಬಲ್ಲಾಳ ಕೃಷ್ಣಾನದಿಯವರೆಗೂ ರಾಜ್ಯ ವಿಸ್ತರಿಸಿದ್ದು, ಈಗ ಲಕ್ಕುಂಡಿಯಲ್ಲಿ ಉತ್ತರ ಭಾಗದ ರಾಜಧಾನಿಯನ್ನಾಗಿ ಆಳುತ್ತಿದ್ದನು. ಕ್ರಿ.ಶ. ೧೨೦೦ ರಲ್ಲಿ ಹೊಯ್ಸಳ ಮಹಾದೇವಿಯು ದೋರಸಮುದ್ರದಲ್ಲಿ ಆಳುತ್ತಿದ್ದಳು. ಹೊಯ್ಸಳ ಬಲ್ಲಾಳನು ಗುತ್ತಿ, ಉದ್ದರೆ, ಬಂದಣಿಕೆ, ರಟ್ಟಹಳ್ಳಿ, ಕೋಟೆಗಳನ್ನು ವಶಪಡಿಸಿಕೊಂಡಿದ್ದು ಕ್ರಿ.ಶ. ೧೧೯೩ ರಲ್ಲಿ ಆತನ ದಂಡನಾಯಕನೊಬ್ಬ ಬನವಾಸಿ ಮತ್ತು ಸಾಂತಳಿಗೆಯನ್ನು ಆಳುತ್ತಿದ್ದನೆಂದು ಲಕ್ಕುಂಡಿಯ ಶಾಸನ ಹೇಳುತ್ತದೆ.

ಕ್ರಿ.ಶ. ೧೧೮೭ ರಲ್ಲಿ ಪಾಂಡ್ಯನು ನ್ಯಾಮತಿಯ (ನೆಲವತ್ತಿ) ಮೇಲೆ ಧಾಳಿ ಮಾಡಿ ಹಸುಗಳನ್ನು ಅಪಹರಿಸುವಾಗ ಮಲ್ಲಿದೇವನು ಪಡೆಯ ಚಟ್ಟನಾಯಕ ಎದುರಾಳಿಗಳ ನೆತ್ತುರೋಕುಳಿಯಾಡಿ ಹಸುಗಳನ್ನು ಮರಳಿ ಪಡೆಯುತ್ತಾನೆ.**[31]** ಕ್ರಿ.ಶ. ೧೧೯೫ ರಲ್ಲಿ ಮಲ್ಲಿದೇವನು ರಟ್ಟೆಹಳ್ಳಿಯ ಮೇಲೆ ದಾಳಿ ಮಾಡಿದಾಗ ಕಲ್ಲೆಯನಾಯಕ ಮರಣ

ಹೊಂದುತ್ತಾನೆ. ರಟ್ಟೆಹಳ್ಳಿಯ ಈ ದಾಳಿಯು ಕೋಟೆಯನ್ನು ವಶಪಡಿಸಿಕೊಂಡ ಹೊಯ್ಸಳ ಬಲ್ಲಾಳನನ್ನು ಅಲ್ಲಿಂದ ಹೊರದೂಡುವ ಉದ್ದೇಶದಿಂದಲೇ ಆಗಿರಬೇಕು.

ವೀರ ಬಲ್ಲಾಳನ ಹೆಂಡತಿ ಹಿರಿಯ ಕೇತಲದೇವಿ ಕುಂದವಾಡದಲ್ಲಿ[32] ಸಂತೆಯನ್ನು ಸ್ಥಾಪಿಸಿ ದತ್ತಿಗಳನ್ನು ಬಿಡುತ್ತಾಳೆ. ಮತ್ತೊಬ್ಬ ಹೆಂಡತಿ ವುಮಾದೇವಿಗೆ ಬೆಳಗುತ್ತಿಯ ಮೇಲೆ ವಿಶೇಷ ಆಸಕ್ತಿಯನ್ನು ಕಾಣುತ್ತೇವೆ. ಕ್ರಿ.ಶ. ೧೧೯೬ ರಲ್ಲಿ ಆಕೆ[33] ಕವುಡಿವೂಳೆಯಲ್ಲಿ ಬೀಡುಬಿಟ್ಟು (ತುಂಗಭದ್ರಾ ಪಶ್ಚಿಮ ತೀರದ ಜಾಳೆವೂಳ್-ಹೊನ್ನಾಳಿ ತಾಲೂಕಿನ ಇಂದಿನ ಬಳ್ಳೇಶ್ವರ?) ಬೊಪ್ಪಾದೇವಿಯರೊಡಗೂಡಿ ಬೆಳಗುತ್ತಿಯ ಮೇಲೆ ಧಾಳಿ ಮಾಡಿ ಹಸುಗಳನ್ನು ಅಪಹರಿಸಿ ಕೊಂಡು ಹೋಗುವಾಗ ಮಲ್ಲೆನಾಯಕನ ಮಗ ಗಟ್ಟಿನಾಯಕ ಮತ್ತು ಇತರರು ಕಾದಿ ಮರಣ ಹೊಂದುತ್ತಾರೆ. ಕ್ರಿ.ಶ. ೧೧೯೬ರ ಚಿಕ್ಕ ಎರೆಹಳ್ಳಿಯ ಶಾಸನದಲ್ಲಿ ಸಂವತ್ಸರವನ್ನು ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟದಲ್ಲಿ ಪಿಂಗಳ ಎಂದು ಓದಲಾಗಿದೆ. ಆದರೆ ಕ್ರಿ.ಶ. ೧೧೯೬ಕ್ಕೆ ನಳ ಸಂವತ್ಸರವನ್ನು ಬರುತ್ತಿದ್ದು ಹೊಯ್ಸಳ ವುಮಾದೇವಿಯ ಬೆಳಗುತ್ತಿಯ ದಾಳಿಯಿಂದ ಹಿಂತಿರುವಾಗ ೧೬ನೇ ದಿನ ದಾರಿಯಲ್ಲಿ ಕತ್ತಿಗೆ ಗ್ರಾಮದ ಹಸುಗಳನ್ನು ಕದ್ದೊಯ್ಯಲು ಪ್ರಯತ್ನಿಸಿದಾಗ ಮಲಯನ ಮಗ ಚೀಲಯ್ಯ ಹತ್ತೂರು ಕೆರೆಯ ಕೆಳಗಿನ ಬಯಲಲ್ಲಿ ಹೊಯ್ಸಳರನ್ನು ಎದುರಿಸಿ ಹಸುಗಳನ್ನು ಹಿಂದಕ್ಕೆ ಪಡೆದು ಸ್ವರ್ಗಸ್ಥನಾಗುತ್ತಾನೆ. ಕ್ರಿ.ಶ. ೧೧೯೮ ಶಿಕಾರಿಪುರ ಶಾಸನ[34] ಹೊಯ್ಸಳ ಬಲ್ಲಳ ಸಿಂದರನ್ನು ಅಡಗಿಸಿದನೆಂದು ತಿಳಿಸುತ್ತದೆ

ವಿಜಯ ಸಮುದ್ರ ಹಳ್ಳವೂರೆ?

ಕ್ರಿ.ಶ. ೧೨೦೦ರ ಹಾಸನ ಶಾಸನದಲ್ಲಿ ವೀರಬಲ್ಲಾಳನು ವಿಜಯ ಸಮುದ್ರದಲ್ಲಿ ಬೀಡುಬಿಟ್ಟಿದ್ದನ್ನು ಕಾಣುತ್ತೇವೆ. ಬಿ.ಎಲ್.ರೈಸರು ವಿಜಯ ಸಮುದ್ರವು ವಿಜಯಪುರ ಅಥವಾ ಹಳ್ಳೂರು ಎಂದು ಗುರುತಿಸಿದ್ದಾರೆ. ವೀರಬಲ್ಲಾಳನು ತನ್ನ ತಂದೆಯಾದ ನರಸಿಂಹನ ಹೆಸರಿನಲ್ಲಿ ತುಂಗಭದ್ರಾ ಪಶ್ಚಿಮ ತೀರದಲ್ಲಿನ ಜಾಳೆವಳೆಯಲ್ಲಿ ಲಿಂಗ ಪ್ರತಿಷ್ಠೆಯ ಮಾಡಿ ದೇವಾಲಯ ನಿರ್ಮಿಸಿದನು.[35] ಈ ಜಾಳವಳೆಯನ್ನು ಇಂದಿನ ಹೊನ್ನಾಳಿ ತಾಲೂಕಿನ ಬಳ್ಳೇಶ್ವರದೊಂದಿಗೆ ಗುರ್ತಿಸಬಹುದು. ಇಲ್ಲಿ ತ್ರಿಕೂಟಾಚಲ ದೇವಾಲಯವಿದ್ದು ಮಧ್ಯದ ಲಿಂಗವನ್ನು ಬಳ್ಳೇಶ್ವರನಾಗಿದ್ದು, ಬಳ್ಳಿಗಾವೆಯ ಶಾಸನದಿಂದ ತಿಳಿಯುವ ವಿಷಯವೇನೆಂದರೆ ಮಹದೇವ ಎಂಬ ಸಹವಾಸಿ ಬ್ರಾಹ್ಮಣ ಗೌತಮೇಶ್ವರ ಎಂಬ ಲಿಂಗ ಮತ್ತು ಆತನ ಸಹೋದರಿ ಮಾದಲದೇವಿಯು ಲಕ್ಷ್ಮೀನಾರಾಯಣನ್ನು ಪ್ರತಿಷ್ಠಾಪಿಸಿದರು. ಈ ಊರು ತುಂಗಭದ್ರಾ ನದಿಯ ದಕ್ಷಿಣ ದಡದಲ್ಲಿ ಇದ್ದು ಬಲ್ಲಾಳನಿಂದ ನಿರ್ಮಿತವಾದ ದೆಸೆಯಿಂದ ದೇವಾಲಯವನ್ನು ಈಗ ಬಳ್ಳಿಲಿಂಗಪ್ಪನ ಗುಡಿಯೆಂತಲೂ ಗ್ರಾಮವನ್ನು ಬಳ್ಳೇಶ್ವರ ಎಂದು ಕರೆದಿರಬೇಕು. ಇದರ ಸಮೀಪದಲ್ಲೇ ನರಸಿಂಹಪುರ ಎಂಬ ಬೇಚಿರಾಕ್ ಗ್ರಾಮವಿದೆ. ಇದು ಪ್ರಾಯಶಃ ಅಂದು ಹೊಯ್ಸಳ ಬಲ್ಲಾಳ ತನ್ನ ತಂದೆಯ ಹೆಸರಿನಲ್ಲಿ ಲಿಂಗ ಸ್ಥಾಪಿಸಿದ ನಂತರ ಸ್ಥಾಪಿಸಿದ ಅಗ್ರಹಾರ ಗ್ರಾಮ ಇರಬೇಕೆಂದು ಕಾಣುತ್ತದೆ.

ಚೆನ್ನಗಿರಿ ತಾಲೂಕಿನ ತಾವರೆಕೆರೆಯ ಅತಿತ್ರುಟಿತವಾದ ಹಾಗೂ ಕಾಲದ ಉಲ್ಲೇಖವಿಲ್ಲದ ಶಾಸನವೊಂದು ವೀರ ಬಲ್ಲಾಳ ವಿಜಯ ಸಮುದ್ರದಲ್ಲಿರುವುದನ್ನು ಹಾಗೆಯೇ ಅರಸೀಕೆರೆಯ ತಾಲೂಕು ಕಣಿಕಟ್ಟೆಯ ಕ್ರಿ.ಶ. ೧೨೦೯ರ ಶಾಸನ[36] ಹಳ್ಳೂರಿನಿಂದ ರಾಜ್ಯವಾಳುತ್ತಿದ್ದುದನ್ನು ತಿಳಿಸುತ್ತವೆ. ಹರಿಹರ ತಾಲೂಕಿನ ದೇವರಬೆಳಕೆರೆಯ ಹತ್ತಿರದ ಹಳೆಹಾಳುಪಾಳು ಗ್ರಾಮದ ಕಲ್ಲೇಶ್ವರ ದೇವಾಲಯದ ರಂಗ ಮಂಟಪದ ಕಂಬದ ಮೇಲಿನ ಶಾಸನವು ವಿಜಯ ಸಂವತ್ಸರದಲ್ಲಿ ಹೊರಡಿಸಲಾಗಿದ್ದು ಕಲಿಯುಗ ಧನ್ವಂತರಿ ವಿಜಯ ಪಂಡಿತರು ತಾವು ಕಟ್ಟಿಸಿದ ವಿಜಯ ಸಮುದ್ರದ ಕೆಳಗೆ ಗದ್ದೆ ದಾನವನ್ನು ಕಲಿದೇವರಿಗೆ ನೀಡಿದ ಉಲ್ಲೇಖವಿದೆ.[37] ಆದರೆ ಕಡೂರಿನ ಶಾಸನವೊಂದರಲ್ಲಿ ಹಳ್ಳೂರಿನ ಪ್ರತಿ ನಾಮವು

‘ವಿಜಯಸಮುದ್ರ’ ಆಗಿತ್ತೆಂಬ ಸ್ಪಷ್ಟ ಉಲ್ಲೇಖ ಇರುವುದರಿಂದ ರೈತರ ಅಭಿಪ್ರಾಯವೇ ಸರಿ ಎಂಬುದು ಸ್ಪಷ್ಟ.

ಕ್ರಿ.ಶ. ೧೧೭೫ರ ಬೆಳಗುತ್ತಿ ಶಾಸನದಲ್ಲಿ ತಿಳಿಸಿರುವಂತೇ ಹೊಯ್ಸಳ ಬಲ್ಲಾಳ ತೂದು ಪಿಳ್ಳೆ ದಂಡನಾಯಕನನ್ನು ಬೆಳಗುತ್ತಿಯಲ್ಲಿ ಆಡಳಿತಾಧಿಕಾರಿಯಾಗಿ ನೇಮಿಸಿದನು. ಕ್ರಿ.ಶ. ೧೨೦೮ರ ಚಿಕ್ಕ ಯೆರೆಹಳ್ಳಿಯ ರಾಮೇಶ್ವರ ದೇವಾಲಯದ ಶಾಸನದಲ್ಲಿ **[38]** ತೂದು ಪಿಳ್ಳೆ ದಂಡನಾಯಕ ಮತ್ತು ಬೆಳಗುತ್ತಿಯ ಸುಂಕದ ಹೆಗ್ಗಡೆ ವಿರುಪಯ್ಯ, ನಾಕಯ್ಯರು ಹತ್ತೂರ ರಾಮನಾಥ ದೇವರಿಗೆ ಹತ್ತೆತ್ತಿನ ವಕ್ಕಲುದೆರೆ ಸುಂಕವೊಂದು ಹಡುಂಕೆದೆರೆ ಇವುಗಳನ್ನು ಬಿಡುತ್ತಾರೆ. ಈ ಎರಡೂ ಶಾಸನಗಳ ಅವಧಿಯನ್ನು ಪರಿಗಣಿಸಿದರೆ ತೂದುಪಿಳ್ಳೆ ದಂಡನಾಯಕ ಹೊಯ್ಸಳರ ಅಧಿಕಾರಿಯಾಗಿ ಬೆಳಗುತ್ತಿಯಲ್ಲಿ ೩೩ ವರ್ಷಕಾಲ ಇದ್ದನೆ**?** ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಹೊಯ್ಸಳರಿಗೂ ಮತ್ತು ಕಳಚೂರ್ಯರಿಗೂ ಆಗಾಗ್ಗೆ ಕದನವಾಗುತ್ತಿದ್ದು ಇವರಿಬ್ಬರನಡುವೆ ಸಂಧಾನವಾಗಿರುವುದು ಕುತೂಹಲಕಾರಿಯಾಗಿದೆ. ಕ್ರಿ.ಶ. ೧೨೫೫ರ ಅರಿಸೀಕೆರೆ ತಾಲೂಕಿನ ಹಿರಿಯೂರು ಗ್ರಾಮದಲ್ಲಿನ ಕುಂಜೇಶ್ವರ ದೇವಾಲಯದ ಶಾಸನ ಈ ಸಂಧಾನದ ವಿವರಗಳನ್ನು ನೀಡುತ್ತದೆ.**[39]** ಮಲೆಯಾಳ ದೇಶದ ಕುಂಜನಂಬಿಶೆಟ್ಟಿಯ ಬಗ್ಗೆ ಆತನ ಅಳಿಯ ಹೊಗಳುತ್ತಾ ತನ್ನ ಮಾವನಾದ ಕುಂಜನಂಬಿಶೆಟ್ಟಿಯು ವಿದ್ಯಾ ನಿಪುಣನೂ, ಮಂತ್ರಿಯ ಸಾಮರ್ಥ್ಯ ಹೊಂದಿದವನೂ ಸಂಧಿವಿಗ್ರಹಿಯೂ ಆಗಿದ್ದನು. ಹೊಯ್ಸಳ ವೀರಬಲ್ಲಾಳ ಮತ್ತು ಉತ್ತರದ ಅಹವಮಲ್ಲ ಇವರಿಬ್ಬರೂ ಮೆಚ್ಚುವಂತಹ ಸಂಧಾನವನ್ನು ಏರ್ಪಡಿಸಿದನು. ಡೆರೆಟ್ ಅವರು ಈ ಅಹವಮಲ್ಲ ಕಳಚೂರ್ಯ ಸಂಕಮ ಆಗಿರಬಹುದೆಂದು ಅಭಿಪ್ರಾಯ ಪಡುತ್ತಾರೆ. ಈ ಸಂಧಾನದ ಫಲಶೃತಿಯನ್ನು ಬೆಳಗುತ್ತಿಯ ಅರಸರ ಶಾಸನಗಳಲ್ಲಿ ಕಾಣುತ್ತೇವೆ. ಈ ಸಂಧಾನದ ಫಲವಾಗಿ ನಾವು ತೂದುಪಿಳ್ಳೆ ದಂಡನಾಯಕನನ್ನು ೩೩ ವರ್ಷಗಳ ಕಾಲ ಬೆಳಗುತ್ತಿಯಲ್ಲಿ ಆಡಳಿತ ಅಧಿಕಾರಿಯಾಗಿ ಕಾಣುತ್ತೇವೆ. ಅದರಂತೆ ಬೆಳಗುತ್ತಿಯ ಸಿಂಧರ ಶಾಸನಗಳು ದೂರದ ಅರಿಸೀಕೆರೆಯ ತಾಲೂಕಿನ ಕಳಿಕಟ್ಟೆ-೧೨ ಮತ್ತು ಅರಬಲ-೭೦ (ಅಸನ್ದಿ ನಾಡಿನ ಭಾಗಗಳು) ವಿಭಾಗಗಳನ್ನು ಆಳುತ್ತಿದ್ದಾಗಿ ತಿಳಿಸುತ್ತವೆ.

ಹೊಯ್ಸಳ ಪ್ರತಿನಿಧಿಯ ಉಲ್ಲೇಖವು ಬೆಳಗುತ್ತಿ ಸಿಂಧರ ಎರಡು ಶಾಸನಗಳಲ್ಲಿ ಕಂಡು ಬಂದರೆ, ಹೊಯ್ಸಳರ ಆಳ್ವಿಕೆಯ ಪ್ರದೇಶವಾದ ಅರಬಲ-೭೦ ಮತ್ತು ಕಳಿಕಟ್ಟೆ-೧೨ ವಿಭಾಗಗಳಲ್ಲಿ ಬೆಳಗುತ್ತಿ ಸಿಂಧರ ಯಾವುದೇ ರೀತಿಯ ಶಾಸನ ಅಥವಾ ಪರೋಕ್ಷ ಉಲ್ಲೇಖ ಕಂಡು ಬರದೇ ಇರುವುದು ಗಮನಾರ್ಹವಾಗಿದೆ. ಅಲ್ಲದೆ ಬೆಳಗುತ್ತಿ ಸಿಂಧರು ಈ ನಾಡುಗಳಲ್ಲಿನ ಕಂಪಣಗಳಲ್ಲಿ ಆಳುತ್ತಿರುವ ಹೇಳಿಕೆ ಬಿಟ್ಟರೆ ಇನ್ನಾವುದೇ ಪ್ರಮಾಣವಿಲ್ಲ.

(೩) ಪ್ರತ್ಯೇಕ ಅಸ್ತಿತ್ವದಲ್ಲಿ

ಮೂರನೆಯ ಈಶ್ವರದೇವ ಹೊಯ್ಸಳರ ವಿರುದ್ಧ ತಿರುಗಿ ಬೀಳುವುದಕ್ಕಾಗಿ ಸಮಯ ಕಾಯುತ್ತಿದ್ದನು. ಹೊಯ್ಸಳರು ಬಂಕಾಪುರದ ಮುಖಾಂತರ ನಾಗರಖಂಡ ವಿಭಾಗವನ್ನು ವಶಪಡಿಸಿಕೊಂಡರು. ಕ್ರಿ.ಶ. ೧೨೦೩ರಲ್ಲಿ ಹೊಯ್ಸಳರ ಕಮ್ಮಟದ ಮಲ್ಲಣ್ಣ ದಂಡನಾಯಕ ಜಿಡ್ಡುಳಿಗೆ-೭೦ ನ್ನು ಮುತ್ತಿದನು. ವೀರ ಬಲ್ಲಾಳನ ಪಿರಿಯರಸಿ ಕೇತಲದೇವಿಯು ಬಂದಳಿಕೆಯಲ್ಲಿದ್ದುದನ್ನು ಕಾಣುತ್ತೇವೆ.**[40]**

ಎರಡನೆಯ ಮಲ್ಲಿದೇವನ ಆಡಳಿತದ ಸಮಯದಲ್ಲಿ ಹೊಯ್ಸಳರು ಬೆಳಗುತ್ತಿಯ ಮೇಲೆ ಹಿಡಿತ ಸ್ಥಾಪಿಸಿರಬೇಕು. ಕಲ್ಯಾಣ ಚಾಲುಕ್ಯ ಮತ್ತು ಕಳಚೂರ್ಯರನ್ನು ಬೆಂಬಲಿಸಿದ ಸಿಂಧರಿಗೆ ಹೊಯ್ಸಳರ ಮೇಲಾಳಿಕೆ ಬೇಕಾಗಿರಲಿಲ್ಲ. ಆದ್ದರಿಂದ ಈಶ್ವರದೇವ ಸೇವುಣ ಸಿಂಘಣನ ಸ್ನೇಹ ಬಯಸಿದನು. ಸೇವುಣರಿಗೂ ಹೊಯ್ಸಳರ ವಿರುದ್ಧ ನಿಲ್ಲಬಲ್ಲ ಒಂದು ಅರಸು ಮನೆತನ ಬೇಕಾಗಿತ್ತು. ಮಾಧನಬಾವಿಯ ಶಾಸನವು ಈಶ್ವರದೇವನನ್ನು ಸಿಂಹಳ ರಾಜ್ಯಾಭ್ಯುದಯ

ಕಾರಣನೆಂದು ಹೊಗಳುತ್ತದೆ.[41] ಕ್ರಿ.ಶ. ೧೨೧೬ ರಲ್ಲಿ ಹೊಯ್ಸಳರ ಪರಮ ವಿಶ್ವಾಸಿಗಳಾದ ಬೇಡರ ಪಡೆಯು ಮಾಧನಬಾವಿಯ ಮೇಲೆ ದಾಳಿ ಮಾಡಿದಾಗ ಈಶ್ವರದೇವನ ಪಟ್ಟಣ ಸಾಹಣಿ ಚಿಣ್ಣಯ್ಯ ಹೋರಾಡುತ್ತಾನೆ.[42] ಇದೇ ವರ್ಷ ಈಶ್ವರದೇವ ಅಬ್ಬಲೂರ ಮೇಲೆ ಆಕ್ರಮಣ ಮಾಡಿ ಹಸುಗಳನ್ನು ಅಪಹರಿಸಲು ಪ್ರಯತ್ನಿಸಿದಾಗ ಮಾಚ ಮತ್ತು ಗುರವ ಮರಣ ಹೊಂದುತ್ತಾರೆ.[43] ಮತ್ತೊಮ್ಮೆ ಈಶ್ವರದೇವ ಹಲವು ಮನ್ನೆಯರ ಹಾಗೂ ಸಾಂತಳಿಗೆ ನಾಯಕರನ್ನು ಕೂಡಿ ೧೦,೦೦೦ ಆಳು, ೧೦೦೦ ಕುದುರೆಗಳಿಂದ ಅಬ್ಬಲೂರ ಮೇಲೆ ಆಕ್ರಮಣ ಮಾಡಿದನು.[44]ಕ್ರಿ.ಶ. ೧೨೨೧ರಲ್ಲಿ ಬಂದಳಿಕೆಯ ಬೊಮ್ಮಿ ದೇವನನ್ನು ಕೂಡಿಕೊಂಡು ಮುಳುಗಂದದ ಮೇಲೆ ದಾಳಿ ಮಾಡಿದನು.[45] ಕೊಡಮಗ್ಗಿಯ ಕ್ರಿ.ಶ. ೧೨೧೭ರ ಶಾಸನದಲ್ಲಿ[46] ಹೊಯ್ಸಳ ಬಲ್ಲಾಳ ಬೆಳಗುತ್ತಿಯ ಮೇಲೆ ಧಾಳಿ ಮಾಡಿದಾಗ ವೀರನೊಬ ಮರಣ ಹೊಂದುತ್ತಾನೆ.

ಮೂರನೆಯ ಈಶ್ವರದೇವನು ಸ್ವತಂತ್ರ ಅಸ್ತಿತ್ವಕ್ಕಾಗಿ ನಡೆಸಿದ ಪ್ರಯತ್ನವು ಸೇವುಣರೊಂದಿಗಿನ ಅವರ ಸ್ನೇಹವನ್ನು ಕಡಿಯಿತು. ಈಶ್ವರದೇವ ಸೇವುಣರನ್ನು ಬೆಳ್ವೊಲದವರೆಗೂ ಬೆನ್ನಟ್ಟಿದ್ದಾಗಿ ಸೊರಬ ಶಾಸನ ಸೂಚಿಸುತ್ತದೆ.[47] ಮಾಧನಬಾವಿಯ ಶಾಸನವು ಸೂಚಿಸುವಂತೇ ಹಿಂದೆ ಆಳುತ್ತಿದ್ದ ೧೬ ಕಂಪಣಗಳಲ್ಲದೇ ಉಚ್ಚಂಗಿ-೩೦, ನಾಗರಖಂಡ, ಜಿಡ್ಡುಳಿಗೆ ಮತ್ತು ಮಾತೃಪಕ್ಷ ಇನ್ನೂರು ಅಲ್ಲದೆ ಇನ್ನೂ ಇತರ ವಿಭಾಗಗಳನ್ನು ತನ್ನ ಮಗನಾದ ಕೇಶವದೇವನೊಂದಿಗೆ ಆಳುತ್ತಿದ್ದನು. ಈ ಮಾತೃಪಕ್ಷ ಇನ್ನೂರು ಯಾವ ವಿಭಾಗವಾಗಿತ್ತೆಂದು ಪರಿಶೀಲಿಸಬೇಕಾಗಿದೆ. ಈಶ್ವರದೇವನ ಪ್ರಯತ್ನ ಸೇವುಣ ಮತ್ತು ಹೊಯ್ಸಳರ ಬಲದ ಮುಂದೆ ಬಹಳ ಸಮಯ ನಿಲ್ಲಲಿಲ್ಲವೆಂದು ಕಾಣುತ್ತದೆ.

ಸೇವುಣ ಹೊನ್ನಬೊಮ್ಮಿಸೆಟ್ಟಿ ಬನವಾಸಿಯಲ್ಲಿದ್ದಾಗ ಆತನ ಮೇಲೆ ಕೇಶವದೇವನ ಅಧಿಕಾರಿಯಾದ ಬೊಮ್ಮ ಆಕ್ರಮಣ ಮಾಡಿದಾಗ ಹೊನ್ನಬೊಮ್ಮಿಸೆಟ್ಟಿಯು ಸೇನಾಸಮೇತನಾಗಿ ಬಂದು ಕಾದಿದ ಯುದ್ಧದಲ್ಲಿ ಬೊಮ್ಮ ಮರಣ ಹೊಂದುತ್ತಾನೆ.[48] ಸೇವುಣರ ಪ್ರಾಬಲ್ಯವನ್ನು ಹೊಸಗುಂದದ ಬೀರರಸ ಬೆಳಗುತ್ತಿಯನ್ನು ಆಳುತ್ತಿರುವಾಗಲೂ ಕಾಣುತ್ತೇವೆ. ಕ್ರಿ.ಶ. ೧೨೪೬ರಲ್ಲಿ ಹತ್ತೂರ ಮೇಲೆ ಲಖಣಪಾಲ (ಲಕ್ಷ್ಮಣಪಾಲ)ನ ದಾಳಿ ಮತ್ತು ಕ್ರಿ.ಶ. ೧೨೪೬ರಲ್ಲಿ[49] ಶ್ರೀಧರ ದಂಡನಾಯಕನ ಕೂಡಲಿಯುದ್ಧ, ಕ್ರಿ.ಶ. ೧೨೪೭ರ ಚೇಳಂಗಿಯ ಬಿರಯನಾಯಕ ಮಹಾಮಂಡಳೇಶ್ವರ ದೇಕರಸನ ನ್ಯಾಮತಿಯ ದಾಳಿಗಳನ್ನು ಬೀರರಸ ತಡೆದುದು ಬೆಳಗುತ್ತಿಯ ಹತ್ತಿರದ ಕುಳಹಳ್ಳಿಯ ವೀರಗಲ್ಲುಗಳು ಸೂಚಿಸುತ್ತವೆ.[50] ಹೊಯ್ಸಳ ವೀರನರಸಿಂಹನು ಹೊಸಗುಂದದ ಗಡಿ ಪ್ರದೇಶದವರನ್ನು ಹಿಂಸಿಸುತ್ತಿದ್ದು ಬೀರರಸನ ಮಗ ಬೊಮ್ಮರಸ ಅವರ ಮೇಲೆ ಯುದ್ಧ ಮಾಡಿ ಅವರನ್ನು ಸೋಲಿಸುತ್ತಾನೆ.

ಆಡಳಿತ ಮತ್ತು ಧರ್ಮ

ಎರಡನೆಯ ಈಶ್ವರದೇವ ಅನೇಕ ದಾನ ಕಾರ್ಯಗಳಲ್ಲಿ ಭಾಗವಹಿಸಿದ್ದ. ಹಿರೆಕೆರೂರು ಕೊಡಮೊಗ್ಗೆಯ ದೇವಾಲಯಕ್ಕೆ ದಾನ ನೀಡಿದ್ದಾನೆ. ಇದೇ ತಾಲೂಕಿನ ಹಳೆನಿಡನೇಗಿಲದಲ್ಲಿ ನಾಗದೇವ ಮತ್ತು ನನ್ನಿಕವ್ವೆ ಇವರ ಮಗನಾದ ಮಹಾದೇವ ಮಂತ್ರಿಯು ಕಟ್ಟಿಸಿದ ಮಲ್ಲಿಕಾರ್ಜುನ ದೇವಾಲಯಕ್ಕೆ ಪ್ರತೀಗಾಣದ ಮೇಲಿನ ಡೊಂಕೆವಣ (ದೇವರ ನಂದಾದೀವಿಗೆಗೆ ನಡೆಸುವ ಸಲುವಾಗಿ ಬಿಟ್ಟ ಹಣ) ಬಿಡಲಾಗಿದೆ.[51]

ಹರಿಹರವು ಅನೇಕ ದೇವಾಲಯಗಳಿಂದ ಕೂಡಿದ ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತು. ಇಲ್ಲಿನ ಶ್ರೀ ಯೋಗೇಶ್ವರ ದೇವರಿಗೆ ಬೆಳೆಗೆರೆಯ ಹತ್ತಿರದಲ್ಲಿನ ಕೆಕರಗೋಳದಲ್ಲಿ ೧ ಮತ್ತರು ಭೂಮಿಯನ್ನು ಮಾಚರಸ ದಾನನೀಡುತ್ತಾನೆ. ಎರಡನೆಯ ಈಶ್ವರದೇವ ಈ ಭೂಮಿಗೆ ಹೊಂದಿಕೊಂಡಂತೆ ಇನ್ನೂ ೨ ಮತ್ತರು ದಾನ ನೀಡುತ್ತಾನೆ. ಇದೇ ಶಾಸನದಲ್ಲಿ ಅಂಬಿಗರು

ಅಂಬಿಗೆದೆರೆಯನ್ನು ಬಿಡುವುದನ್ನು ಕಾಣುತ್ತೇವೆ.[52] ಕಳಚೂರ್ಯ ಮಲ್ಲಿದೇವ ಶಂಕರನಾರಾಯಣ ದೇವರಿಗೆ ದಾನ ನೀಡುವ ಸಂದರ್ಭದಲ್ಲಿ ಈಶ್ವರದೇವ ತನ್ನ ಮನ್ನೆಯದ ಭ್ರಾನ್ತಿ-೩೦ರ ಪ್ರತಿಯೊಂದು ಊರಿನಿಂದ ಒಂದು ಹೊನ್ನು ನೀಡುತ್ತಾನೆ.[53]

ಕುರುವದ ರಾಮೇಶ್ವರ ದೇವರ ದೇವತಾ ಭವನವನ್ನು ಬೆಳಗುತ್ತಿಯ ಹೆಜ್ಜುಂಕದ ದೇವರಸ ಜೀರ್ಣೋದ್ಧಾರ ಮಾಡಿಸಿ ಒಂದು ಮತ್ತರು ದಾನ ನೀಡುತ್ತಾನೆ. ದೇವರಸ ವಿರುಪಯ್ಯ ಮತ್ತು ನಾಕಣ್ಣರು ಎಡವಟ್ಟೆ ಮತ್ತು ಬಳ್ಳವೆಯ ಸುಂಕದ ಅಧಿಕಾರಿಗಳಾಗಿದ್ದರು. ಇವರು ಚಿಕ್ಕೆರೆಹಳ್ಳಿಯ ಶ್ರೀ ರಾಮೇಶ್ವರ ದೇವರಿಗೂ ದಾನ ನೀಡುವಲ್ಲಿ ಭಾಗಿಯಾಗಿದ್ದಾರೆ.[54] ಎರಡನೆಯ ಮಲ್ಲಿದೇವನ ಕಾಲದಲ್ಲಿ ಬೆಳಗುತ್ತಿಯ ಸಿದ್ದೇಶ್ವರ ದೇವಾಲಯಕ್ಕೆ ಭೂಮಿದಾನ ಮಾಡಲಾಯಿತು; ಮತ್ತು ತೆಲ್ಲಿಗರು ನಂದಾದೀವಿಗೆಗೆ ಗಾಣವೊಂದನ್ನು ಬಿಟ್ಟರು. ಅರಕೆರೆಯ ಶ್ರೀ ಯೋಗೇಶ್ವರ ದೇವರಿಗೆ ಸಂತೆಯ ಆದಾಯವನ್ನು ಬಿಟ್ಟುದನ್ನು ಕಾಣುತ್ತೇವೆ.[55]

ಹೊಯ್ಸಳರ ಅಧಿಕಾರಿಯಾದ ತೂದು ಪಿಳ್ಳೆದಂಡನಾಯಕ ೩೩ ವರ್ಷಕಾಲ ಬೆಳಗುತ್ತಿಯಲ್ಲಿ ಇದ್ದರೆ, ಅದೇ ರೀತಿ ಕಳಚೂರ್ಯರ ಅಧಿಕಾರಿ ಇರುವುದನ್ನು ರಾಣೆಬೆನ್ನೂರು ತಾಲೂಕು ನದಿಹರಳಹಳ್ಳಿ ಶಾಸನ ಸೂಚಿಸುತ್ತದೆ.[56] ಕಳಚೂರ್ಯ ರಾಯಮುರಾರಿ ಸೋವಿದೇವನ ಕಾಲದಲ್ಲಿ ಮಹಾಪ್ರದಾನಿ ಕೇಸಿಮಯ್ಯ ದಂಡನಾಯಕ ಬನವಾಸಿ ಆಳುತ್ತಿದ್ದಾಗ ಕ್ರಿ.ಶ. ೧೧೭೨ ರಲ್ಲಿ ಗೊಟ್ಟಗಡಿಯ ನಾಗಗಾವುಂಡನ ಬಸದಿಗೆ ನೀಡಿರುವ ದಾನದಲ್ಲಿ ಬನವಸೆ ನಾಡ ಹೆಜ್ಜುಂಕ ವಡ್ಡರಾವುಳದ ದಂಡನಾಯಕ ಮಹೇಶ್ವರದೇವನ ಬೆಸದಿಂದ ಎಡವಟ್ಟೆ ಬಳ್ಳವೆ ನರಿಯಳಿಗೆ ಮತ್ತು ನೂರುಂಬಾಡದದವಸಾಯದ ಸುಂಕವೆರ್ಗ್ಗಡೆ ದಾವರಸ, ಮಂನ್ನೆಯ ಸುಂಕವೆರ್ಗ್ಗಡೆ ಬೊಮ್ಮದೇವ ಬಾಗಿಯಾಗಿದ್ದರೆ. ದವಸದಾಯದ ಸುಂಕವೆರ್ಗ್ಗಡೆ ದಾವರಸ ಬೆಳಗುತ್ತಿಯ ಸಿಂಧರ ಕೆಲವು ವಿಭಾಗಗಳ ಮತ್ತು ನೂರುಂಬಾಡದ ಕದಂಬರ ವಿಭಾಗದ ಸುಂಕದ ಅಧಿಕಾರಿಯಾಗಿ ಕಂಡುಬರುತ್ತಾರೆ.

ನ್ಯಾಮತಿ, ದಿಡಗೂರು, ಮಾದನಬಾವಿ, ಚಿಕ್ಕೆ ಎರೆಹಳ್ಳಿ, ತೀರ್ಥರಾಮೇಶ್ವರ ಮತ್ತು ಸಾಸುವೆಹಳ್ಳಿಯಲ್ಲಿ ಜಿನದೇವಾಲಯಗಳು ಇದ್ದವು.[57]ಚೀಲೂರಿನಲ್ಲಿ ನಾಲ್ಕು ತಿಂಗಳ ಕಾಲ ಅರೆವಟ್ಟಿಗೆಯನ್ನು ನಡೆಸುತ್ತಿದ್ದು ಇಲ್ಲಿ ಭತ್ತದ ಅಂಬಳಕ (ಗಂಜಿ)? ನೀಡಲಾಗುತ್ತಿತ್ತು.[58] ಸಹಗಮನ ಪದ್ಧತಿಯು ರೂಢಿಯಲ್ಲಿತ್ತೆಂದು ಚಿಕ್ಕಹಾಲಿವಾಣದ ಕ್ರಿ.ಶ. ೧೪೧೦ರ ಶಾಸನದಲ್ಲಿ ಕಂಡು ಬರುತ್ತದೆ.[59]

ಭೂಮಾಪನ

ತುಂಗಭದ್ರಾ ನದಿಯ ಬಲಭಾಗದಲ್ಲಿ ಕೃಷಿ ಭೂಮಿಗೆ ಸಂಬಂಧಿಸಿ 'ಮಾರು' ಅಳತೆಯುಬಳಕೆಯಲ್ಲಿತ್ತು. ದಾವಣಗೆರೆ ತಾಲೂಕಿನ ಆನೆಕೊಂಡದಲ್ಲಿ ೧೫ ಮಾರು, ಚನ್ನಗಿರಿ ತಾಲೂಕಿನ ಅಲಕನಾಳದಲ್ಲಿ ೪ ಮಾರು, ನಲ್ಕುಧರೆಯಲ್ಲಿ ೧೪ ಮಾರು, ಹೊನ್ನಾಳಿ ತಾಲೂಕು ಅರಕೆರೆಯಲ್ಲಿ ಮಾರುಬತೋಳು ಮತ್ತು ಅರಸೀಕೆರೆ ಹಿರಿಯೂರಿನಲ್ಲಿ ೫ ಮಾರು ಬಳಸುತ್ತಿದ್ದರು.[60]ಕುಂದೂರು-೭೦ ವಿಭಾಗದ ಬನ್ನಿಕೋಡು ಗ್ರಾಮದಲ್ಲಿ ಉಚ್ಚಂಗಿ-೩೦ರ ಪ್ರಮುಖ ಪಟ್ಟಣವಾದ ಬೇತೂರಿನ....ಕು ಗೇಣ ಗಳೆಯನ್ನು ಉಪಯೋಗಿಸಲಾಗಿದೆ.[61] ತುಂಗಭದ್ರಾ ನದಿಯ ಎಡಭಾಗದಲ್ಲಿನ ಎಡವಟ್ಟೆ-೭೦ರ ರಾಜಧಾನಿ ಮೇದೂರಿನಲ್ಲಿ ಕಚ್ಚವಿಯ ಕೋಲನ್ನು ಬಳಸಲಾಗಿದೆ.[62] ಚಿಕ್ಕ ಎರೆಹಳ್ಳಿ ಮತ್ತು ಕುರುವ ಶಾಸನಗಳು ಒಂದು ಮತ್ತರು ನೂರು ಕಮ್ಮಗಳನ್ನೊಳಗೊಂಡಿತ್ತೆಂದು ಸೂಚಿಸುತ್ತವೆ.[63] ಅರಕೆರೆಯ ಶಾಸನವು ಒಂದು ಮತ್ತರು ಕೇವಲ ೯ ಕಮ್ಮ ಮಾತ್ರ ಒಳಗೊಂಡಿತ್ತೆಂದು ಸೂಚಿಸುತ್ತದೆ.[64] ಇದು ಶಾಸನಗಳಲ್ಲೇ ಸೂಚಿತವಾಗುವ ಒಂದು ಮತ್ತರಿನ ಅತೀ ಕಡಿಮೆಪ್ರಮಾಣ. ಮತ್ತರನ್ನು ನೀರಿನ ಸೌಲಭ್ಯವನ್ನು ಆದರಿಸಿ ಗದ್ದೆ, ಬೆದ್ದಲು ಎಂದು ಗುರ್ತಿಸುವುದಲ್ಲದೆ ಬೆಳೆಯುವ ಬೆಳೆಯ

ಆಧಾರದ ಮೇಲೆ ನೆಲ್ಲು ಮತ್ತರು, ಎಳ್ಳು ನವಣೆ ಮತ್ತರು ಎಂದು ಗುರ್ತಿಸಿದ್ದರು.[65] ಅಲ್ಲದೆ ಕುರಿಕಮ್ಮ ಎಂಬ ಉಲ್ಲೇಖವು ಗಮನಾರ್ಹವಾಗಿದ್ದು ಇದು ಗೋಮಾಳ ಭೂಮಿಯಂತೆ ಇರುವ ಭೂಮಿಯಾಗಿರಬಹುದು.

ಆಯಾ ಪ್ರದೇಶದಲ್ಲಿ ಪ್ರಚಲಿತದಲ್ಲಿದ್ದ ಅಳತೆ ಕೋಲುಗಳನ್ನೇ ಬಳಸಲಾಗಿತ್ತು. ಬೆಳಗುತ್ತಿ ಸಿಂಧರ ಆಡಳಿತದಲ್ಲಿ ಏಕರೂಪದ ಅಳತೆಯ ಕೋಲುಗಳ ಬಳಕೆಯಾಗಿಲ್ಲವೆಂದು ಕಂಡುಬರುತ್ತದೆ.

ಬೆಳಗುತ್ತಿ ಸಿಂಧರು ಆಳಿದ ನಾಡನೊಳಗಿನ ಕಂಪಣಗಳು (ನಕಾಶೆ ನೋಡಿ)

೧. ಬನವಾಸೆ ನಾಡು

ಅ) ಮಾಸೂರು ೧೨ : ಹಿರೆಕೆರೂರು ತಾಲೂಕಿನ ಕುಮದ್ವತಿ ನದಿಯ ಎಡಭಾಗದಲ್ಲಿನ ಮಾಸೂರು ಗ್ರಾಮವನ್ನು ಕೇಂದ್ರವಾಗಿ ಒಳಗೊಂಡ ಪ್ರದೇಶ.

ಆ) ಎಡವಟ್ಟೆ ೭೦ : ಬಾದಾಮಿ ಚಾಲುಕ್ಯರ ಕಾಲದಿಂದಲೂ ಉಲ್ಲೇಖಿಸಲ್ಪಡುವ ಈ ನಾಡು ಹಿರೆಕೆರೂರು ತಾಲೂಕಿನ ದಕ್ಷಿಣಭಾಗ ಮತ್ತು ಹೊನ್ನಾಳಿ ತಾಲೂಕಿನ ಉತ್ತರ ಭಾಗವನ್ನಾಗಿ ಒಳಗೊಂಡ ಪ್ರದೇಶವಾಗಿತ್ತು. ಇಂದಿನ ಮೇದೂರನ್ನು ರಾಜಧಾನಿಯಾಗಿ ಹೊಂದಿತ್ತು. ಇದೇ ವಿಭಾಗದಲ್ಲಿ ಬರುವ ಹಳ್ಳೂರು ತುಂಗಭದ್ರಾ ನದಿ ತೀರದಲ್ಲಿದ್ದು ಮುಖ್ಯ ಪಟ್ಟಣವಾಗಿ ವಿಜಯಪುರವೆಂದು ಕರೆಯಲ್ಪಟ್ಟು ಕೆಲವು ಬಾರಿ ಬೆಳಗುತ್ತಿಯ ಸಿಂಧ ಅರಸರು ಮತ್ತು ಹೊಯ್ಸಳ ಅರಸರು ಇಲ್ಲಿಂದ ಆಳುತ್ತಿದ್ದುದ್ದಾಗಿ ಹೇಳಲಾಗಿದೆ.

ಇ) ಬಳ್ಳವೆ ೭೦ : ಎಡವಟ್ಟೆ ನಾಡಿನ ದಕ್ಷಿಣ ಭಾಗದಲ್ಲಿ ಬಹುತೇಕ ಹೊನ್ನಾಳಿ ತಾಲೂಕಿನಲ್ಲಿ ಈ ಪ್ರದೇಶ ಇದ್ದು ಕ್ರಿ.ಶ. ೧೦೭೭ ರಲ್ಲಿ ಬಳ್ಳಿ ೭೦ (ಹೊ.ನಂ.೧೪) ಹೊನ್ನಾಳಿ ಶಾಸನದಲ್ಲಿ ಬಳ್ಳವಿ ೭೦ (ಹೊ ನಂ ೧) ಕ್ರಿ.ಶ. ೧೨೫೮ರಲ್ಲಿ ಬಳೆಯ ನಾಡ ಬೆಳಗವತ್ತಿ (ಹೊ ನಂ ೭೬) ವಿಜಯನಗರ ಹರಿಹರನ ಸುರಹೊನ್ನೆ ಶಾಸನದಲ್ಲಿ ಬಳೆಯನಾಡ ಬೆಳಗವತ್ತಿಯೊಳಗಣ ನೇಮತ್ತಿ (ಹೊ ನಂ ೭೧) ನ್ಯಾಮತಿ ಶಾಸನದಲ್ಲಿ ಬಳ್ಳಿಯನಾಡು (ಹೊ ನಂ ೭೨) ಮತ್ತು ಮಲ್ಲಿಗೇನಹಳ್ಳಿಯ ಶಾಸನದಲ್ಲಿ ಬಳ್ಳವೆ, ಬೆಳಗುತ್ತಿಯ ಪ್ರದೇಶವೆ ಆಗಿದ್ದು ಬೆಳಗುತ್ತಿಯು ಅದರ ರಾಜಧಾನಿಯಾಗಿತ್ತು.

ಈ) ನರಿಯಳಿಗೆ ೪೦ : ಡಾ. ಶ್ರೀನಿವಾಸ ರಿತ್ತಿಯವರು ಶಿವಮೊಗ್ಗ ಜಿಲ್ಲೆಯಲ್ಲಿ ಇದೇ ಹೆಸರಿನ ಗ್ರಾಮವಾಗಿರಬೇಕೆಂದು ಊಹಿಸಿದ್ದಾರೆ. ಇದನ್ನು ಸದ್ಯಕ್ಕೆ ಸೊರಬ ತಾಲೂಕಿನ ಕುಬಟೂರು ಬಳಿಯ ನೇರಲಿಗೆಯೊಂದಿಗೆ ಗುರ್ತಿಸಬಹುದು.

೨. ಸಾನ್ತಳಿಗೆ ನಾಡು

ಅ) ಎಡಮಲೆ ೭೦ : ಶಿವಮೊಗ್ಗ ತಾಲೂಕಿನ ಉತ್ತರ ಭಾಗದಲ್ಲಿರುವ ಎಡವಾಳ ಗ್ರಾಮ ಮುಖ್ಯ ಪಟ್ಟಣವಾಗಿ ಹೊಂದಿದ ಪ್ರದೇಶ ಆಗಿರಬೇಕು.

ಆ) ಮುದುವರ ೩೦ (ಮುದುಮಲ್ಲ ೩೦) : ಕುರುವದಗಡ್ಡೆ ಶಾಸನದಲ್ಲಿ ಈ ವಿಭಾಗದಲ್ಲಿ ಸೊಗಿಲು ಗ್ರಾಮವಿತ್ತೆಂದು ತಿಳಿಯುತ್ತದೆ. ಇದನ್ನು ಕೂಡ ಶಿವಮೊಗ್ಗ ತಾಲೂಕಿನ ಉತ್ತರ ಭಾಗದಲ್ಲಿನ ಮುದುವಳಲು ಗ್ರಾಮವನ್ನು ರಾಜಧಾನಿಯಾಗಿ ಹೊಂದಿದ ಪ್ರದೇಶವಾಗಿ ಸಧ್ಯಕ್ಕೆ ಗುರ್ತಿಸಬಹುದು.

೩. ಮಂಡಲಿ ನಾಡು

ಅ) ಹೊಳಲೂರು ೧೨ : ಶಿವಮೊಗ್ಗ ತಾಲೂಕಿನ ತುಂಗಭದ್ರಾ ನದಿಯ ಎಡದಂಡೆಯಲ್ಲಿನ ಹೊಳಲೂರನ್ನು ಕೇಂದ್ರವಾಗಿ ಹೊಂದಿದ ಪ್ರದೇಶ.

೪. ನೊಳಂಬವಾಡಿ ನಾಡು

ಅ) ಮುನುಡಿ ವೊಳಲು ೧೨ (ಮನುಜ ವೊಳಲು) : ಚನ್ನಗಿರಿ ತಾಲೂಕಿನ ಮಲ್ಲಿಗೆಯ ಹಳ್ಳಿಯನ್ನೊಳಗೊಂಡ ಪ್ರದೇಶವಾಗಿರಬೇಕು.

ಆ) ಕೊಳ್ಳಿಗ ೭೦ : ಹೊನ್ನಾಳಿ ತಾಲೂಕಿನ ತುಂಗಭ್ರಾ ನದಿಯ ಬಲದಂಡೆಯಲ್ಲಿನ ಕುಳಗಟ್ಟೆಯನ್ನು ರಾಜಧಾನಿಯನ್ನಾಗಿ ೭೦ ಗ್ರಾಮಗಳನ್ನೊಳಗೊಂಡ ಇದು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಕೊಳ್ಳಿಗನಘಟ್ಟ ಎಂದು ಕರೆಯಲಾಗಿರುವ ಈ ಊರು ನಾಲ್ಕೂ ದಿಕ್ಕುಗಳಿಂದ ಬರುವ ನಾನಾ ದೇಶಿಗಳಿಗೆ ಆಶ್ರಯ ತಾಣವಾಗಿತ್ತು. ಕ್ರಿ.ಶ. ೧೧೭೩ರ ಗೋಳಿಹಳ್ಳಿ ಖಾನಾಪುರ ಶಾಸನ ಐಹೊಳೆ ೫೦೦ ಸ್ವಾಮಿಗಳನ್ನು ಹೆಸರಿಸುವಾಗ ಕುಳಿಗಲು ಗೆರೆಯವರನ್ನು (ಕುಳಗಟ್ಟೆಯವರನ್ನು) ಹೆಸರಿಸುತ್ತದೆ. ಹೊಯ್ಸಳ ಬಾಲ್ಲಾಳನ ಪತ್ನಿಯಾದ ಚೋಳ ಮಹಾದೇವಯ ಹೆಸರನ್ನು ಕ್ರಿ.ಶ. ೧೨೯೧ ರಲ್ಲಿ ಗಂಗ ಪೆರುಮಾಳೆ ದೇವರಸ ಕೊಳ್ಳಿಗನ ಘಟ್ಟಕ್ಕೆ ಇಟ್ಟು ಇದನ್ನು ಚೋಳಮಹಾದೇವಿಪುರ ಎಂದು ಕರೆದಿದ್ದಾನೆ. ಇದೇ ಪೆರಮಾಳೇದೇವರಸನು ಹರಿಹರದ ದೇವಾಲಯದ ಕ್ರಿ.ಶ. ೧೨೫೪, ೧೨೫೮, ೧೨೬೬, ೧೨೭೭ ಮತ್ತು ೧೨೯೦ ರ ದಾನಶಾಸನಗಳಲ್ಲಿ ಹೆಸರಲ್ಪಟ್ಟಿದ್ದಾನೆ. ಬೆಳಗುತ್ತಿ ಸಿಂಧರ ಪತನಾನಂತರ ಈ ವಿಭಾಗದಲ್ಲಿ ಈ ಅಧಿಕರಿ ೩೭ ವರ್ಷ ಇರುವುದನ್ನು ಕಾಣುತ್ತೇವೆ.

ಇ) ಕುಂದೂರು ೭೦ : ಹೊನ್ನಾಳಿ ತಾಲೂಕಿನ ಕುಂದೂರನ್ನು ಮುಖ್ಯ ಕೇಂದ್ರವಾಗಿ ಹೊಂದಿದ ಈ ವಿಭಾಗದಲ್ಲಿ ಬನ್ನಿಕೊಡು, ಹಪ್ಪರ ವನಹಾಳು ಮತ್ತು ನಿಟ್ಟೂರು ಗ್ರಾಮಗಳಿದ್ದವು.

ಈ) ಬಾಡ ೫೬: ಮೂರು ಉಪ ವಿಭಾಗಗಳಾದ ಭ್ರಾನ್ತಿ ೩೦, ಭಿನ್ನವೂರು ೧೨ ಮತ್ತು ಮುರ್ಚನೂರು ೧೨ ಸೇರಿ ೫೪ ಬಾಡ ಆಗಿದ್ದು, ಪ್ರಾಯಶಃ ಅನಂತರದ ಶಾಸನಗಳಲ್ಲಿ ಇನ್ನೂ ಎರಡು ಬಾಡ ಸೇರಿ ೫೬ ಬಾಡ ಎಂದು ಆಗಿದೆ.

ಬ್ರಾನ್ತಿ ೩೦ ದಾವಣಗೆರೆ ತಾಲೂಕಿನ ಬಾತಿಯನ್ನು ಮುಖ್ಯ ಪಟ್ಟಣವಾಗಿ ಹರಿಹರ ತಾಲೂಕಿನ ಗುತ್ತೂರನ್ನು ಒಳಗೊಂಡಿತ್ತು. ಸಿಂಧ ಮಾಚರಸನ ಮಾವ ಚಾಲುಕಿ ಅಹಿಯರಸ ಇಲ್ಲಿನ ನಾಳ್ಗಾ ಮುಂಡನಾಗಿದ್ದನು. ಮುರ್ಚನೂರು ವಿಭಾಗವನ್ನು ದಾವಣಗೆರೆ ತಾಲೂಕಿನ ತುರವನೂರು ಅಥವಾ ತುರ್ಚಘಟ್ಟ ಗ್ರಾಮದೊಂದಿಗೆ ಗುರ್ತಿಸುವ ಸಾಧ್ಯತೆ ಇದೆ. ಬಿನ್ನವೂರಿನಲ್ಲಿ ಕುಳವನೂರು ಇತ್ತು.

ಉ) ಪಡುಗಲು ೧೨ : ದಾವಣಗೆರೆ ತಾಲೂಕಿನ ಹದಡಿ ಇದರ ಮುಖ್ಯ ಕೇಂದ್ರವಾಗಿತ್ತು. ಕ್ರಿ.ಶ. ೧೦೩೭ ರಲ್ಲಿ ನೊಳಂಬ ಪಲ್ಲವ ಪರ್ಮಾಡಿ ಕಾಲದಲ್ಲಿ ಬ್ರಹ್ಮಧಿರಾಜ ಪದಡಿ ೧೨ ಆಳುತ್ತಿದ್ದ. ಕ್ರಿ.ಶ. ೧೧೬೫ರ ಹಳೆ ನಿಡನೇಗಿಲ ಶಾಸನದಲ್ಲಿ ಪಡುಗಲು ೧೨ ಎಂದು ಕರೆಯಲಾಗಿದೆ.

ಊ) ಅತ್ತಿಗೇರಿ ೧೨ : ದಾವಣಗೆರೆ ತಾಲೂಕಿನ ಅತ್ತಿಗೇರೆ ಮುಖ್ಯ ಪಟ್ಟಣವಾಗಿ, ತೊಗಲೇರಿ ಗ್ರಾಮವೂ ಈ ವಿಭಾಗದಲ್ಲಿ ಸೇರಿತ್ತು.

ಋ) ಮಲೆ ೭೦ : ಹರಿಹರ ತಾಲೂಕಿನ ಮಲೆಬೆನ್ನೂರನ್ನು ಕೇಂದ್ರವಾಗಿ ಹೊಂದಿದ ಪ್ರದೇಶ

ಋ) ಅರಕೆರೆ ೧೨ : ಹೊನ್ನಾಳಿ ತಾಲೂಕಿನ ತುಂಗಭದ್ರಾನದಿಯ ಬಲದಂಡೆಯಲ್ಲಿನ ಅರಕೆರೆ ಗ್ರಾಮವನ್ನು ಕೇಂದ್ರವನ್ನಾಗಿ ಹೊಂದಿದ್ದ ಪ್ರದೇಶವಾಗಿತ್ತು.

೫. ಅಸನ್ದಿ ನಾಡು

ಅ) ಅರಬಲ ೭೦ : ಹೊಸದುರ್ಗ ಮತ್ತು ತರೀಕೆರೆ ತಾಲೂಕುಗಳಲ್ಲಿ ಈ ಪ್ರದೇಶ ಇದ್ದಿರಬೇಕು.

ಆ) ಕಳಿಕಟ್ಟೆ ೧೨ : ಅರಸೀಕೆರೆ ತಾಲೂಕಿನ ಇದೇ ಹೆಸರಿನ ಗ್ರಾಮವನ್ನು ಕೇಂದ್ರವಾಗಿ ಹೊಂದಿದ್ದ ಪ್ರದೇಶವಾಗಿದೆ.

[1]ಬಿ.ಆರ್. ಗೋಪಾಲ್ *ಮೈನರ್ ಡೈನಾಸ್ಟೀಸ್ ಆಫ್ ಕರ್ನಾಟಕ*, ನ್ಯೂ ಎರಾ ಪಬ್ಲಿಕೇಷನ್ಸ್ ಮದ್ರಾಸ್ ೧೯೮೨ ಪುಟ ೮೭.
[2]ಇಸಿ (ಎಫಿಗ್ರಾಫಿಯಾ ಕರ್ನಾಟಿಕ, ರೈಸ್ ಸಂಪಾದಿತ) ೯ ದಾವಣಗೆರೆ ೪೩, ಇಸಿ ೭ ಹೊನ್ನಾಳಿ ೫೦, ಕೆ.ಐ. (ಕರ್ನಾಟಕ ಇನ್ಸ್‌ಕ್ರಿಪ್ಷನ್ಸ್) ೬ ನಂ ೧೧
[3]ಡಾ. ಶ್ರೀನಿವಾಸ್ ರಿತ್ತಿ, *ದಿ ಸೇವುಣಾಸ್* ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೭೩ ಪು ೩೩೩
[4]ಡಾ. ಬಿ.ಆರ್.ಗೋಪಾಲ್ *ಹಿಂದೆ ಉಲ್ಲೇಖಿಸಿದ್ದು* ಪುಟ ೯-೯೬
[5]ಇಸಿ ೯ ದಾವಣಗೆರೆ ನಂ.?
[6]ಜಗದೀಶ್, "*ಹುಲ್ಲುಣಿಯ ತೀರ್ಥ: ಗಳಗನಾಥ', ಕರ್ನಾಟಕ ಇತಿಹಾಸ ದರ್ಶನ* ಸಂಪುಟ ಪು
[7]ಡಾ.ಬಿ.ಆರ್. ಗೋಪಾಲ್ *ಹಿಂದೆ ಉಲ್ಲೇಖಿಸಿದ್ದು* ಪು ೯-೯೬ ಕರ್ನಾಟಕ ಇನ್‌ಸ್ಕ್ರಿಪ್ಶನ್ಸ್,
[8]ಡಾ. ಬಿ.ಆರ್.ಗೋಪಾಲ್ *ಹಿಂದೆ ಉಲ್ಲೇಖಿಸಿದ್ದು* ಪುಟ ೯೮
[9] *ಇಸಿ೮* ಶಿಕಾರಿಪುರ ನಂ. ೩೧೬
[10]ಕೆ.ಐ. (ಕರ್ನಾಟಕ ಇನ್ಸ್‌ಕ್ರಿಪ್ಷನ್ಸ್), ಸಂ. ಅಣ್ಣಿಗೇರಿ ಕನ್ನಡ ಸಂ. ಸಂಸ್ಥೆ ಧಾರವಾಡ ಸಂಪುಟ ೪ ನಂ. ೩೯
[11]ಅದೇ ೬ ನಂ. ೩೮
[12]ಎ.ಆರ್.ಐ.ಇ. (ಎನ್ಯುಯಲ್ ರಿಪೋರ್ಟ್ ಆಫ್ ಇಂಡಿಯನ್ ಎಫಿಗ್ರಾಫಿ) ೧೯೫-೫೯ ನಂ. ೫೭೧
[13] *ಇಸಿ೯* ದಾವಣಗೆರೆ ನಂ ೬ (ಕ್ರಿ.ಶ.೧೧೭೧ ಪರೋಕ್ಷವಾಗಿ ಕ್ರಿ.ಶ. ೧೧೪೩ ಸೂಚಿಸುತ್ತದೆ.)
[14]ಎ.ಆರ್.ಐ.ಇ. ೧೯೫೮-೫೯ ನಂ. ೫೭೧
[15]ಕೆ.ಐ. ಸಂಪುಟ ೪ ನಂ ೧೩
[16] *ಇಸಿ೭* ಹೊನ್ನಾಳಿ ನಂ ೪೩
[17]ಅದೇ ನಂ ೪೩
[18]ಬಿ.ಆರ್.ಗೋಪಾಲ್ ಹಿಂದೆ ಉಲ್ಲೇಖಿಸಿದ್ದು ಪುಟ ೧೦೬
[19]ಕೆ.ಐ. ಸಂಪುಟ ೪ ನಂ. ೪೩
[20]ಅದೇ ನಂ. ೪೩
[21] *ಇಸಿ೯* ದಾವಣಗೆರೆ ನಂ. ೬೧
[22]ಎಸ್‌ಐಐ ೧೮ ಇಂಟ್ರುಡಕ್ಷನ್
[23]ಎಸ್‌ಐಐ *ಸೌತ್ ಇಂಡಿಯನ್* ಇನ್ಸ್‌ಕ್ರಿಪ್ಷನ್ಸ್, ೧೮ ಇಟ್ಟಿಗೆ ಶಾಸನ ನಂ. ೩೩೫
[24] *ಇಸಿ೭* ಶಿವಮೊಗ್ಗ ನಂ. ೨೩
[25]ಎಂಎಆರ್ ೧೯೪೨ ನಂ. ೬೨
[26] *ಇಸಿ೭* ಹೊನ್ನಾಳಿ ನಂ. ೪೭
[27]ಡಾ. ಶ್ರೀನಿವಾಸ ರಿತ್ತಿ *ಹಿಂದೆ ಉಲ್ಲೇಖಿಸಿದ್ದು* ಪುಟ ೩೧೮

[28] *ಕೆಐಸಂಪುಟ ೫* ಗದಗ, ಹಂಚಿನಾಳ ನಂ. ೭೨
[29] *ಎಂಎಆರ್೧೯೪೨* ನಂ. ೬೬
[30] *ಕೆಐಸಂಪುಟ* ೪ ಹಳೆ ನಿಡನೇಗಿಲ ನಂ. ೧೩
[31] *ಇಸಿ೭* ಹೊನ್ನಾಳಿ ನಂ. ೩೫ ಮತ್ತು ೫೧
[32] *ಇಸಿ೧೧* ದಾವಣಗೆರೆ ನಂ. ೧೦೫
[33] *ಇಸಿ೭* ಹೊನ್ನಾಳಿ ನಂ. ೨೮; ೩೭;೩೮;೪೦
[34] *ಇಸಿ೮* ಶಿಕಾರಿಪುರ ನಂ. ೩೫
[35] *ಇಸಿ೭* ಹೊನ್ನಾಳಿ ನಂ. ೧೭
[36] *ಇಸಿ೭* ಚನ್ನಗಿರಿ ನಂ. ೭೭; ಇಸಿ ೫ ಅರಸೀಕೆರೆ ತವರೆಕೆರೆ ನಂ. ೪೬
[37] *ಇಸಿ೧೧* ದಾವಣಗೆರೆ, ಹಳೆಹಾಳುಪಾಳು ಗ್ರಾಮ (ದೇವರಬೆಳೆಕೆರೆ) ನಂ. ೭೪
[38] *ಇಸಿ೭* ಹೊನ್ನಾಳಿ ನಂ. ೨೫
[39] *ಇಸಿ೫* ಅರಸೀಕೆರೆ, ಹಿರಿಯೂರು ನಂ. ೧೦೮
[40]ಡಾ. ಬೋಜರಾಜ ಪಾಟೀಲ, ನಾಗರಖಂಡ ೭೦, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ ಶಿವಮೊಗ್ಗ, ಪುಟ ೧೯೯
[41] *ಇಸಿ೭* ಹೊನ್ನಾಳಿ ನಂ. ೨೦
[42]ಅದೇ ನಂ. ೪೮
[43] *ಎಆರ್ಎಸ್ಐಇ*(ಎನ್ಯುಯಲ್ ರಿಪೋರ್ಟ್ಆಫ್ಸೌಥ್ ಇಂಡಿಯನ್ ಎಫಿಗ್ರಾಫಿ) ೧೯೫-೫೮ ನಂ. ೨೮೪
[44] *ಎಪಿಗ್ರಾಫಿಯಾ*ಇಂಡಿಕಾ ಸಂಪುಟ ೫ ಪುಟ ೨೬೩
[45]ಡಾ. ಶ್ರೀನಿವಾಸ ರಿತ್ತಿ *ಹಿಂದೆ ಉಲ್ಲೇಖಿಸಿದ್ದು* ಪುಟ ೧೨೩
[46]ಎಆರ್ಎಸ್ಐಇ ೧೯೫-೫೮ ನಂ. ೫೭೨
[47] *ಇಸಿ೮* ಸೊರಬ ನಂ. ೨೭೬
[48] *ಇಸಿ೭* ಹೊನ್ನಾಳಿ ನಂ. ೩೦
[49] *ಇಸಿ೭* ಹೊನ್ನಾಳಿ ನಂ. ೫೪
[50] *ಇಸಿ೭* ಹೊನ್ನಾಳಿ ನಂ. ೫೫; ೫೮
[51] *ಕೆಐ*ಸಂಪುಟ ನಂ. ೪ ನಂ. ೧೩
[52] *ಇಸಿ೧೧* ದಾವಣಗೆರೆ ನಂ. ೬೨
[53] *ಇಸಿ೧೧* ದಾವಣಗೆರೆ ನಂ. ೪೩ ಸಾಲು ೧೮೩
[54] *ಇಸಿ೭* ಹೊನ್ನಾಳಿ ನಂ. ೨೫
[55].........ಅದೇ ನಂ. ೫೦, ೧೦೮
[56]ಎಸ್ಐಐ ೧೮ ರಾಣೆಬೆನ್ನೂರು, ನದಿಹರಳಹಳ್ಳಿ, ನಂ. ೧೮೩
[57] *ಇಸಿ೭* ಹೊನ್ನಾಳಿ ನಂ. ೫,೨೦,೩೨,೫೨,೮೬
[58].............. *ಅದೆ*ನಂ. ೧೮
[59].............. *ಅದೆ*ನಂ. ೧೮
[60] *ಇಸಿ೧೧* ದಾವಣಗೆರೆ ನಂ. ೩, ಇಸಿ ೭ ಚನ್ನಗಿರಿ ನಂ. ೫೨, ಇಸಿ ೫ ಅರಸೀಕೆರೆ ಹಿರಿಯೂರು ನಂ. ೧೦೮
[61] *ಇಸಿ*ದಾವಣಗೆರೆ ನಂ. ೭೭
[62]ಕೆಐ ಸಂಪುಟ ೪ ನಂ. ೪೦
[63] *ಇಸಿ೭* ಹೊನ್ನಾಳಿ ನಂ. ೧೨೫
[64].............. *ಅದೆ*ನಂ. ೧೦೭
[65].............. *ಅದೆ*ನಂ. ೫

ಮಲೆಕರ್ನಾಟಕದ ಅರಸು ಮನೆತನಗಳು: ೭. ಹೊಸಗುಂದದ ಅರಸರು (೧)

ಹೊಸಗುಂದವು ಇಂದಿನ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಅರಣ್ಯದಲ್ಲಿರುವ ಒಂದು ಹಳ್ಳಿಯಾಗಿದೆ. ಈ ಸ್ಥಳವು ೧೨-೧೩ನೇ ಶತಮಾನದಲ್ಲಿ ಒಂದು ಸ್ಥಾನಿಕ ಅರಸರ ರಾಜಧಾನಿಯಾಗಿತ್ತು ಈ ಅರಸರ ಸಂಬಂಧಿಸಿ ವಿವರವಾದ ಅಧ್ಯಯನ ಇನ್ನೂ ನಡೆಯಬೇಕಿದೆ. ಈ ಅರಸರನ್ನು ಹುಂಚದ ಸಾಂತರರ ವಂಶಜರೆಂದು ಬಿ.ಎಲ್.ರೈಸ್ ಅವರು ಗ್ರಹಿಸಿದ್ದರು.

[1] ನಂತರದ ವಿದ್ವಾಂಸರು ಇವರನ್ನು ಸಾಂತರರ ಅಧಿಕಾರಿಗಳೆಂದು ಗುರುತಿಸುತ್ತಾರೆ. ಆದರೆ ಇವರ ಕುರಿತು ಪ್ರತ್ಯೇಕ ಒಂದು ಅಧ್ಯಯನ ಇನ್ನೂ ಆಗಿಲ್ಲ.
ಈ ಅರಸರ ಕುರಿತು ಪ್ರತ್ಯೇಕ ಅಧ್ಯಯನ ನಡೆಸಲು ನಮಗೆ ಸುಮಾರು ೧೦೦ ರಷ್ಟು ಶಾಶನಗಳು ಸಾಗರ, ಹೊಸನಗರ, ತೀರ್ಥಹಳ್ಳಿ, ಸೊರಬ, ಶಿಕಾರಿಪುರ ಹಾಗೂ ಶಿವಮೊಗ್ಗ ತಾಲ್ಲೂಕುಗಳಲ್ಲಿ ಸಿಗುತ್ತವೆ.**[2]** ಅವುಗಳಲ್ಲಿ ೬೦ ರಷ್ಟು ಕೇವಲ ಸಾಗರ ತಾಲ್ಲೂಕಿನಲ್ಲೇ ಸಿಗುತ್ತವೆ ಎನ್ನುವ ಸಂಗತಿಯನ್ನು ಗಮನಿಸಿದರೆ ಈ ಅರಸರ ಆಳ್ವಿಕೆಯು ಅಲ್ಲೇ ಕೇಂದ್ರಿತವಾಗಿತ್ತೆನ್ನುವುದು ಸ್ಪಷ್ಟವಾಗುತ್ತದೆ. ಈ ಶಾಸನಗಳಲ್ಲಿ ನಾಲ್ಕೈದನ್ನು ಬಿಟ್ಟರೆ ಉಳಿದವೆಲ್ಲ ವೀರಗಲ್ಲುಗಳೆಂಬುದು ಗಮನಾರ್ಹ. ಹೊಸಗುಂದ, ನಾಡಕಳಸಿ ಮುಂತಾದೆಡೆಗಳಲ್ಲಿ ಆ ಕಾಲದ ಕೋಟೆ ಅಥವಾ ವಸತಿಗಳ ಅವಶೇಷಗಳನ್ನು ಇನ್ನೂ ನೋಡಬಹುದು. ಈ ಕಾಲದವು ಎನ್ನಬಹುದಾದ ದೇವಾಲಯಗಳು ಹೊಸಗುಂದ, ನಾಡಕಳಸಿ, ಕೋಡಕಣಿ, ಪುರ, ಮುಂತಾದೆಡೆಗಳಲ್ಲಿ ಪೂರ್ಣಪ್ರಮಾಣದಲ್ಲಿ ಕಂಡುಬಂದರೆ ಆ ಕಾಲದ ವೀರಗಲ್ಲುಗಳು ಸಿಗುವ ಹಲವೆಡೆ ದೇವಾಲಯಗಳ ಅವಶೇಷಗಳನ್ನೂ ಗುರುತಿಸಬಹುದು.

೧. ಐತಿಹಾಸಿಕ ಹಿನ್ನೆಲೆ

ಮಧ್ಯಕಾಲೀನ ಮಲೆನಾಡಿನಲ್ಲಿ ರಾಜ್ಯನಿರ್ಮಾಣ ಪ್ರಕ್ರಿಯೆಯ ಸ್ವರೂಪ

ಸಾಂತಳಿಗೆ ಅಥವಾ ಸಾಂತಳಿಗೆ ಸಾವಿರ ಎಂಬ ಭೌಗೋಲಿಕ ವಿಭಾಗವು ೯ನೆಯ ಶತಮಾನದಿಂದ ೧೪ನೆಯ ಶತಮಾನದವರೆಗೆ ಅಸ್ತಿತ್ವದಲ್ಲಿದ್ದ ಒಂದು ಆಡಳಿತ ವಿಭಾಗವಾಗಿದ್ದಿತ್ತು. ಈ ಸಾಂತಳಿಗೆ ಈಗಿನ ಶಿವಮೊಗ್ಗ ಜಿಲ್ಲೆಯ ದಟ್ಟ ಹಾಗೂ ಅರೆ-ಮಲೆನಾಡಿನ ಭಾಗಗಳನ್ನು ಒಳಗೊಂಡ ಪ್ರದೇಶವಾಗಿದೆ. ಪಶ್ಚಿಮದಲ್ಲಿ ಸಹ್ಯಾದ್ರಿಯೇ ಗಡಿಯಾಗಿ, ಪೂರ್ವದಲ್ಲಿ ಈಗಿನ ಸೊರಬ ಮತ್ತು ಶಿಕಾರಿಪುರ ತಾಲ್ಲೂಕುಗಳ ಪಶ್ಚಿಮದ ಸ್ವಲ್ಪ ಭಾಗವನ್ನು ಇದು ಒಳಗೊಳ್ಳುತ್ತದೆ. ಈಗಿನ ಸಾಗರ, ಹೊಸನಗರಗಳು ಹಾಗೂ ತೀರ್ಥಹಳ್ಳಿ, ಶಿವಮೊಗ್ಗ ತಾಲೂಕುಗಳ ಕೆಲ ಭಾಗಗಳೂ ಈ ಪ್ರದೇಶದಲ್ಲಿ ಬರುತ್ತವೆ. ಈ ಪ್ರದೇಶಕ್ಕೆ ತೀರ ವಿಶಿಷ್ಟವಾದ ಭೌಗೋಳಿಕ ಆವರಣವಿದೆ. ಇದರ ಬಹುಭಾಗ ದುರ್ಗಮವಾದ ಮಲೆನಾಡಾಗಿದೆ. ಮಲೆನಾಡಿನ ಕಾಡು, ಬೆಟ್ಟಗಳು ಪಶ್ಚಿಮದಲ್ಲಿ ಶರಾವತಿ ಜಲಾನಯನ ಪ್ರದೇಶ ಹಾಗೂ ಹೊಂಬುಚದ ಪ್ರದೇಶದಲ್ಲಿ ದಟ್ಟವಾಗಿದ್ದು, ಪೂರ್ವಕ್ಕೆ ಬಂದಂತೆ ನೆಲ ಸಮತಟ್ಟಾಗುತ್ತ ಹೋಗುತ್ತದೆ. ಅದೇ ರೀತಿ ಈ ಪ್ರದೇಶದ ಪಶ್ಚಿಮ ಭಾಗ ನಿತ್ಯ ಹರಿದ್ವರ್ಣ ಕಾಡುಗಳಿಂದ ಕೂಡಿದ್ದರೆ, ಪೂರ್ವ ಭಾಗದಲ್ಲಿ ಚಳಿಗಾಲದಲ್ಲಿ ಎಲೆ ಉದುರಿಸುವ ಹಸಿ ಕಾಡುಗಳಿವೆ. ಈ ಭಾಗ ಮನ್ಸೂನ ಕಾಲದಲ್ಲಿ ಜೂನ್‌ನಿಂದ ಸೆಪ್ಟೆಂಬರವರೆಗೆ ಮಳೆಯಲ್ಲಿ ತೊಯ್ದುಕೊಂಡಿರುತ್ತದೆ. ಮಧ್ಯಕಾಲದ ಸಂದರ್ಭದಲ್ಲಿ ಈ ನೈಸರ್ಗಿಕ ಅಂಶಗಳು ನಾಗರೀಕತೆಯ ಬೆಳವಣಿಗೆಗೆ ದೊಡ್ಡ ತೊಡಕಾಗಿದ್ದುದರಲ್ಲಿ ಸಂದೇಹವಿಲ್ಲ. ಆಧುನಿಕ ಪೂರ್ಣ ಕಾಲದಲ್ಲಿ ಮುಖ್ಯವಾಗಿ ಹೇರೆತ್ತಿನ

ಮೇಲೇ ವ್ಯಾಪಾರ ನಡೆಯುತ್ತಿದ್ದ ಈ ಭಾಗದಲ್ಲಿ ಸಂಪರ್ಕ ವ್ಯವಸ್ಥೆ ಮಿತವಾಗಿ ಇತ್ತು. ಬಹುಶಃ ಈ ಕಾರಣಗಳಿಂದಾಗಿ ಎಂಟು-ಒಂಭತ್ತನೆಯ ಶತಮಾನದವರೆಗೂ ಈ ಪ್ರದೇಶ, ಉಳಿದ ಇಂಥ ಮಲೆನಾಡಿನ ಪ್ರದೇಶಗಳಂತೇ ಬಯಲು ನಾಡಿನ ರಾಜ್ಯಗಳಿಗೆ ಅಜ್ಞಾತ ಪ್ರದೇಶವಾಗಿ ಉಳಿದುಕೊಂಡು ಬಂದಿತು.

ಹನ್ನೊಂದನೆಯ ಶತಮಾನದಲ್ಲಿ ಕಲ್ಯಾಣದ ಚಾಲುಕ್ಯರು ಈ ಪ್ರದೇಶವನ್ನು ಸಾಂತಳಿಗೆ ಸಾವಿರ ಎಂದು ಒಳಗೊಳ್ಳುವ ಪೂರ್ವದಲ್ಲಿ ನೂರಾರು ವರ್ಷಗಳ ಮನುಷ್ಯ ವಸತಿಗಳ ಇತಿಹಾಸ ಇದಕ್ಕೆ ಇತ್ತು. ಒಂಭತ್ತನೆಯ ಶತಮಾನದ ಸುಮಾರಿಗೇ ಇಂದಿನ ಹುಂಚವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ 'ಶಾಂತರ' ರಾಜವಂಶ ಈ ಪ್ರದೇಶದ ಇತಿಹಾಸದಲ್ಲಿ ಪ್ರಮುಖ ಸ್ಥಾನ ಪಡೆಯುತ್ತದೆ. ಈ ಪ್ರದೇಶದ ಮನುಷ್ಯ ವಸತಿ, ಆರ್ಥಿಕಾಭಿವೃದ್ಧಿ, ಸಾಂಸ್ಕೃತಿಕ ಬೆಳವಣಿಗೆ ಶಾಂತರರ ಆಳ್ವಿಕೆಯ ಕಾಲದಲ್ಲಿ ರಾಜ್ಯ ಸಂಸ್ಕೃತಿಗೆ ನೆಲವನ್ನು ಹದಗೊಳಿಸಿದ್ದವು. ಶಾಂತರರು ಆಳಿದ ಈ ಒಟ್ಟೂ ಪ್ರದೇಶ ಸಾಂತಳಿಗೆ ಎಂದೇ ಗುರುತಿಸಲ್ಪಟ್ಟು ಹೀಗೆ ಚಾಲುಕ್ಯ ಸಾಮ್ರಾಜ್ಯದಲ್ಲಿ ಸಾಂತಳಿಗೆ ಸಾವಿರವಾಗಿ ರಾಜ್ಯಾಧಿಕಾರದ ಮತ್ತೊಂದು ಆಯಾಮ ಮಲೆನಾಡಿಗೆ ಸಂದಿತು. ಸಾಂತಳಿಗೆಯ ಅಧಿಪತಿಗಳು ಸಮಧಿಗತ ಪಂಚಮಹಾಶಬ್ದ ಮಹಾ ಮಂಡಲೇಶ್ವರರು, ಆಗಿ ಪರಿವರ್ತಿತರಾದರು. ತದನಂತರ ಕರ್ನಾಟಕದ ಈ ಪ್ರದೇಶದ ತೀರ ಪ್ರಬಲ ಅರಸರು, ಅಥವಾ ಚಕ್ರವರ್ತಿಯ ಆಪ್ತರು ಬನವಾಸಿ ೧೨೦೦೦ ಹಾಗೂ ಸಾಂತಳಿಗೆ ಸಾವಿರಗಳನ್ನು ಪಾಲಿಸುವ ಪರಿಕ್ರಮವನ್ನು ಹೊಯ್ಸಳ ಸಾಮ್ರಾಜ್ಯದ ಪತನದವರೆಗೂ ನೋಡುತ್ತೇವೆ.

ಆಡಳಿತಾತ್ಮಕವಾಗಿ ಸಾಂತಳಿಗೆಯ ಪ್ರದೇಶ ವಿಜಯನಗರ ಕಾಲದವರೆಗೂ ಸಾಮ್ರಾಜ್ಯದ ಅಂಚಿನಲ್ಲೇ ಇತ್ತು. ಈ ಪ್ರದೇಶದ ಪಶ್ಚಿಮ ಘಟ್ಟದ ಕೆಳಗಿನ ತುಳುವ ನಾಡಿನ ರಾಜಕೀಯ ಸಂಬಂಧ ಇಲ್ಲಿಯ ರಾಜರಿಗೆ ಸಾಕಷ್ಟಿದ್ದರೂ ಪಶ್ಚಿಮಘಟ್ಟವೊಂದು ಅಡ್ಡಿಯಾಗಿದ್ದಿತ್ತು. ಪೂರ್ವದ ಗಡಿಯಲ್ಲಿ ಬರುವ ಬನವಾಸಿ ೧೨೦೦೦ ಬಯಲುನಾಡಿನ ಸಾಮ್ರಾಜ್ಯಗಳ ವಿಶೇಷ ಆಕರ್ಷಣೆಯಾಗಿತ್ತು. ಅಲ್ಲಿಯ ಶಾಸನಗಳಲ್ಲಿ ನಾವು ಚಕ್ರವರ್ತಿಯ ಅಸ್ತಿತ್ವವನ್ನು ಗಾಢವಾಗಿ ಕಾಣಬಹುದಾಗಿದೆ. ಚಕ್ರವರ್ತಿಗಳು ಆ ಪ್ರದೇಶದಲ್ಲಿ ಕೆಲವೊಮ್ಮೆ ಖುದ್ದಾಗಿ ಸಂಚರಿಸಿ, ಠಿಕಾಣಿ ಹಾಕಿ, ಮಹತ್ತರ ದೇವಾಲಯಗಳನ್ನು ಸಂದರ್ಶಿಸಿ, ದಾನ ನೀಡಿ ಹೋಗುತ್ತಿದ್ದುದಲ್ಲದೇ ಅವರ ಮಹಾ ದಂಡನಾಯಕರು, ಪ್ರಧಾನರು ಮುಂತಾದವರೆಲ್ಲ ಉಸ್ತುವಾರಿ ನಡೆಸುತ್ತಿದ್ದರು. ಆದರೆ ಸಾಂತಳಿಗೆಯ ಶಾಸನಗಳು ಪ್ರತಿಬಿಂಬಿಸುವ ಚಿತ್ರವೇ ಬೇರೆ. ಇಲ್ಲಿನ ರಾಜರೂ ಮಹಾಮಂಡಲೇಶ್ವರ ಎಂದು ಬಿರುದು ಧರಿಸುವುದು ಒಂದು ಸ್ಥಾನಮಾನ ಎಂದು ಗ್ರಹಿಸುತ್ತಾರೆಯಾದರೂ ಅವರು ಯಾರ ಮಂಡಲೇಶ್ವರರು ಎಂಬುದು ಬಹಳ ಬಾರಿ ಅಪ್ರಸ್ತುತವಾಗುತ್ತದೆ. ಚಕ್ರವರ್ತಿ ಇಲ್ಲಿ ಒಬ್ಬ ವ್ಯಾವಹಾರಿಕನಲ್ಲದ ತತ್ಕ್ಷಣದ ಶಕ್ತಿಯಾಗದ ರೀತಿಯಲ್ಲಿ ಅಲ್ಲಲ್ಲಿ ಉಲ್ಲೇಖಿತನಾಗುತ್ತಾನೆ. ಎಲ್ಲೋ ಯಾದವ ಕನ್ನರದೇವನ ಬಂಟರ ಜೊತೆ ಯುದ್ಧ ಮಾಡಲಿಕ್ಕೆ ಇಲ್ಲ ಬಿಜ್ಜಳ ಅಥವಾ ಬಲ್ಲಾಳನಿಂದ ಕಳಿಸಲ್ಪಟ್ಟ ಅವರ ಬಂಟರ ಜೊತೆ ಯುದ್ಧ ಮಾಡಲಿಕ್ಕೆ ಅವರು ಪ್ರಸ್ತುತರಾಗುತ್ತಾರೆ. ಅಂದರೆ ಈ ಚಕ್ರವರ್ತಿಗಳಿಗೆ ಮಲೆನಾಡಿನ ಅರಸರನ್ನು ಬಗ್ಗುಬಡಿಯುವ ಸಾಮರ್ಥ್ಯ ಇರಲಿಲ್ಲ ಎಂತಲ್ಲ, ಸಾಂತಳಿಗೆಯ ಭೌಗೋಳಿಕ ಸ್ವರೂಪವೇ ಅದನ್ನು ಸಾಮ್ರಾಜ್ಯಗಳಿಗೆ ದುಃಸಾಧ್ಯವನ್ನಾಗಿ ಮಾಡಿತ್ತು. ಭೌಗೋಳಿಕ ಪರಿಸರ ಸಾಂತಳಿಗೆಯ ರಾಜಕೀಯವನ್ನು ನಿರ್ಧರಿಸುವ ಒಂದು ಮುಖ್ಯ ಸಂಗತಿಯಾಗಿದ್ದಿತ್ತು. ಹಾಗಾಗಿ ಸಾಮ್ರಾಟರ ಆಟಾಟೋಪಗಳು ಏನೇ ಇರಲಿ ಸಾಂತಳಿಗೆಯನ್ನು ಅವರು ಪೂರ್ಣ ಸ್ವಾಧೀನಕ್ಕೆ ತೆಗೆದುಕೊಳ್ಳುವದು ವಿಜಯನಗರ ಕಾಲದವರೆಗೂ ಸಾಧ್ಯವಾಗಲಿಲ್ಲ. ಈ ರೀತಿ ಸಾಂತಳಿಗೆ ಸಾವಿರ ಸಾಮ್ರಾಜ್ಯದ ಒಂದು ಆಡಳಿತ ವಿಭಾಗವಾಗಿ ಸೇರ್ಪಡೆಯಾದ ಮೇಲೂ ಅದರ ಅಂಚಿನ ಭಾಗವಾಗೇ ಉಳಿಯಿತು.

ಸಾಂತಳಿಗೆಯ ರಾಜಕೀಯ

ಸಾಂತಳಿಗೆ ಸಾವಿರ ಪ್ರದೇಶದಲ್ಲಿನ ೧೦ ರಿಂದ ೧೪ನೇ ಶತಮಾನದವರೆಗಿನ ಐತಿಹಾಸಿಕ ಪ್ರಕ್ರಿಯೆ ಮಲೆನಾಡಿನ ಇತಿಹಾಸದ ನಿರ್ಮಾಣ ಘಟ್ಟ ಎನ್ನಬಹುದು. ಒಂದು ಪ್ರದೇಶ ತನ್ನ ಸೀಮಿತತೆಯನ್ನು ಒಡೆದುಕೊಂಡು ವಿಶಾಲ ಸಾಮ್ರಾಜ್ಯದ ಭಾಗವಾದ ಈ ಪ್ರಾರಂಭಿಕ ಅವಸ್ಥೆಯಲ್ಲಿ ಈ ಸಣ್ಣ ಪ್ರದೇಶದಲ್ಲಿ ಕೂಡ ರಾಜ್ಯ ಸಂಸ್ಕೃತಿ ಬೆಳೆಯತೊಡಗಿತು. ಅರಣ್ಯವನ್ನು ವ್ಯವಸಾಯ ಭೂಮಿಯನ್ನಾಗಿ ಪರಿವರ್ತಿಸುವುದು, ಕೆರೆ ನೀರಾವರಿಯಿಂದ ಒಣ ಭೂಮಿಯನ್ನು ಬೇಸಾಯಕ್ಕೆ ಒಳಪಡಿಸುವುದು, ಗ್ರಾಮಗಳ ಹಾಗೂ ಜನಸಂಖ್ಯೆಯ ವೃದ್ಧಿಯ ಜೊತೆಗೇ ಹಳ್ಳಿಯ ಮಟ್ಟದಿಂದ ಹಿಡಿದು ಆಳ್ವಿಕೆಯ ಹಾಗೂ ಶಿಷ್ಟ ಸಂಸ್ಕೃತಿಯ ಬೆಳವಣಿಗೆ, ಸಾಂಸ್ಕೃತಿಕ ಪ್ರಭಾವಗಳು ಇದು ಈ ಪ್ರದೇಶದ ಶಾಸನಗಳಲ್ಲೂ ಬಿಂಬಿತವಾದ ಒಂದು ಪ್ರಕ್ರಿಯೆ. ಈ ಪ್ರದೇಶವನ್ನು ತಮ್ಮ ಆಳ್ವಿಕೆಗೊಳಪಡಿಸುವ ಪ್ರಯತ್ನವನ್ನು ಪ್ರಾದೇಶಿಕ ಮನೆತನಗಳೂ ಹೆಚ್ಚು ಮಾಡಿದಂತೆಲ್ಲ, ಸಾಮ್ರಾಜ್ಯಗಳು ಹೆಚ್ಚು ಗಂಭೀರವಾಗಿ ಈ ಪ್ರದೇಶವನ್ನು ಪರಿಗಣಿಸಿ ವಿಜಯನಗರದ ಕಾಲದಲ್ಲಿ ಇದೇ ಪ್ರದೇಶದ ಅರಗ ಹಾಗೂ ಚಂದ್ರಗುತ್ತಿಯಲ್ಲಿ ಪಾಳಯ ಪಟ್ಟನ್ನು ಸ್ಥಾಪಿಸಿದರು.

ಈ ಪ್ರದೇಶದಲ್ಲಿ ೧೨-೧೩ನೇ ಶತಮಾನದಲ್ಲಿ ನಡೆದ ಪೈಪೋಟಿಯನ್ನು ಎರಡು ಮಟ್ಟಗಳಲ್ಲಿ ಗುರುತಿಸುವುದು ಅಗತ್ಯವಿದೆ. ೧) ಈ ಪ್ರದೇಶದ ಹೊರಗಿನ ರಾಜಕೀಯ ೨) ಆಂತರಿಕ ರಾಜಕೀಯ. ಹೊರಗಿನ ರಾಜಕೀಯದಲ್ಲಿ ಮುಖ್ಯ ಭಾಗಿಗಳೆಂದರೆ ಕರ್ನಾಟಕ ಒಳನಾಡಿನ ಮಹಾರಾಜಾಧಿರಾಜರು ಹಾಗೂ ಅವರ ಮಧ್ಯವರ್ತಿಗಳು. ನಾವು ಪರಿಗಣಿಸುತ್ತಿರುವ ಕಾಲದಲ್ಲಿ ಈ ಪ್ರದೇಶದೊಳಗೆ ಉಲ್ಲೇಖಿತರಾಗುವವರೆಂದರೆ, ಕಳಚೂರ್ಯ ಎರಡನೆಯ ಬಿಜ್ಜಳ (೧೧೩೦-೧೧೬೭), ಸೇವುಣ ಕನ್ನರ (ಕ್ರಿ.ಶ. ೧೨೪೭-೧೨೬೧), ಸೇವುಣ ರಾಮಚಂದ್ರ (ಕ್ರಿ.ಶ. ೧೨೭೧-೧೩೧೨), ಹೊಯ್ಸಳ ನರಸಿಂಹ, ಸೋಮೇಶ್ವರ, ಎರಡನೆಯ ವೀರಬಲ್ಲಾಳ (ಕ್ರಿ.ಶ. ೧೧೭೩-೧೨೨೦) ಹಾಗೂ ಮೂರನೆಯ ವೀರಬಲ್ಲಾಳ (ಕ್ರಿ.ಶ. ೧೨೯೨-೧೩೪೨). ಈ ಚಕ್ರವರ್ತಿಗಳು ನೇರವಾಗಿ ಈ ಪ್ರದೇಶದಲ್ಲಿ ಬರದೇ ತಮ್ಮ ಪರವಾಗಿ ತಮ್ಮ ಅಧೀನ ಅರಸರ ಮೂಲಕ ವ್ಯವಹರಿಸಿದ್ದು ಕಂಡು ಬರುತ್ತದೆ. ಸಾಂತಳಿಗೆಯ ಅರಸರು ಕೂಡ ಕೆಲವೊಮ್ಮೆ ಈ ಚಕ್ರವರ್ತಿಗಳ ಬೆಸದಿಂದ ತಮ್ಮ ಪ್ರದೇಶದವರೇ ಆದ ಅರಸರ ಮೇಲೆ ಉಳಿದ ಮಾಂಡಲಿಕರನ್ನು ಕೂಡಿಕೊಂಡು ಯುದ್ಧಕ್ಕೆ ಹೋಗಿದ್ದರು. ಅಥವಾ ಚಕ್ರವರ್ತಿಗೆ ಅವಿಧೇಯರಾಗಿ ವರ್ತಿಸಿ ಅವರನ್ನು ಬಗ್ಗುಬಡಿಯಲೆಂದು ಚಕ್ರವರ್ತಿಗಳು ಕಳುಹಿಸಿದ ಮಾಂಡಲಿಕರ ಜೊತೆ ಯುದ್ಧ ಮಾಡಿದ್ದರು. ಒಟ್ಟಿನಲ್ಲಿ ಈ ಚಕ್ರವರ್ತಿಗಳು ಪ್ರಾದೇಶಿಕ ಅರಸರ ಮಧ್ಯದ ಪೈಪೋಟಿಯನ್ನು ಉಪಯೋಗಿಸಿ ಕೊಂಡು ತಮ್ಮ ಆಳ್ವಿಕೆಯನ್ನು ಗಟ್ಟಿ ಮಾಡುವ ಪ್ರಯತ್ನ ಎದ್ದು ಕಾಣಿಸುತ್ತದೆ. ಸಾಂತಳಿಗೆಯ ಹೊಸಗುಂದದ ಅರಸರಿಗೆ ಹೊಯ್ಸಳ ಮೂರನೆಯ ವೀರಬಲ್ಲಾಳ ನಿರ್ಣಾಯಕನಾಗಿ ಪರಿಣಮಿಸಿದ. ಹೊಸಗುಂದದ ಆಳ್ವಿಕೆ ನಿಲ್ಲಲು ಬಲ್ಲಾಳ ಕೋಟೆ ನಾಯ್ಕನನ್ನು ಹಿಡಿದುಕೊಂಡು ಹೋದದ್ದೇ ಕಾರಣವಾಯಿತು. ಈ ಪ್ರದೇಶದೊಳಗೆ ಈ ರೀತಿ ಪ್ರವೇಶಿಸಿದ ಒಳನಾಡಿನ ಮಾಂಡಲಿಕರಲ್ಲಿ ಒಂದಣಿಕೆಯ ಸೋಯಿದೇವ, ಉದ್ಧರೆಯ ಎಕ್ಕಲರಸ, ಕಂದಾರದೇವನ ಮಹಾ ಪ್ರಧಾನ ಬೊಮ್ಮಯಸೆಟ್ಟಿ, ಚಂದಾವೂರಿನ ಕದಂಬರು, ಗುತ್ತಿಯ (ಹಾನಗಲ್ಲು ಕದಂಬ ವಂಶದ) ಮಾಂಡಲಿಕ, ಸಾಂತರ ಸಿಂಗಿದೇವ ಮುಂತಾದವರಿದ್ದಾರೆ. ಇವರ ಜೊತೆಗೆ ತುಳುನಾಡಿನ ಅರಸರು ಈ ಪ್ರದೇಶದ ರಾಜಕೀಯದ ಜೊತೆಗೆ ನಿಕಟ ಸಂಬಂಧ ಹೊಂದಿದ್ದರು.

ಆಳುವ ವರ್ಗ ಮತ್ತು ಅಧಿಕಾರಕ್ಕಾಗಿ ಪೈಪೋಟಿ

ಈ ಕಾಲದ ಸಾಂತಳಿಗೆಯ ಆಳ್ವಿಕೆಯ ಶ್ರೇಣೀಯಲ್ಲಿ ಕಳಚೂರ್ಯ, ಹೊಯ್ಸಳ, ಯಾದವರಂಥ ಸಾಮ್ರಾಜ್ಯಗಳು ವಹಿಸಿದ ಪಾತ್ರದ ಯಥಾರ್ಥತೆಯನ್ನು ಅರಿಯುವುದು ಕಷ್ಟ. ಖಂಡಿತವಾಗಿಯೂ ಅವರು ಈ ಪ್ರದೇಶದ ರಾಜಕೀಯವನ್ನು ಪ್ರಭಾವಿಸಿದ್ದಾರೆ. ಈ ಪ್ರದೇಶದ ರಾಜಕೀಯ ಕೆಲವೊಮ್ಮೆ ಈ ಸಾಮ್ರಾಜ್ಯಗಳ ನೆರಳಿನಲ್ಲೇ ತನ್ನ ಗತಿಯನ್ನು ಪಡೆದರೆ

ಕೆಲವೊಮ್ಮೆ ಅದನ್ನು ಮೀರುವ ಪ್ರಯತ್ನದಲ್ಲಿ ತೊಡಗಿದ್ದುದೂ ಕಂಡು ಬರುತ್ತದೆ. ಸಾಂತರದ ಆಳ್ವಿಕೆಯ ಕಾಲದಲ್ಲಿ ಸಾಂತರರು ಈ ಪ್ರದೇಶದ ಅರಸರಾಗಿ ಸಾಮ್ರಾಜ್ಯಗಳ ಅಧೀನರಾಗಿ ಆಳಿದ್ದರೆ ಅವರ ಸ್ಥಾನವನ್ನು ಹೊಸಗುಂದದ ಅರಸರು ನಂತರ ತುಂಬಿದ್ದುದು ಕಂಡು ಬರುತ್ತದೆ. ಹೊಸಗುಂದದ ಅರಸರ ಉಚ್ಛ್ರಾಯ ಸ್ಥಿತಿಯ ಹಿಂದೆ ಹೊಯ್ಸಳರ ರಾಜಕೀಯದ ಆಶ್ರಯ ಮೊದಮೊದಲು ಇತ್ತು. ನಂತರ ಹೊಸಗುಂದದ ಅರಸರು ಹೊಯ್ಸಳ ಮೇಲಧಿಕಾರವನ್ನು ಕನಿಷ್ಟ ಸ್ಥಿತಿಗೆ ಒಯ್ದು ತಮ್ಮ ಪ್ರಾಬಲ್ಯ ಸ್ಥಾಪನೆ ಮಾಡಿದರು. ಆದರೆ ಇದಕ್ಕೂ ಆಚೆಗೆ ಹೊಸಗುಂದದ ಅರಸರಿಗೆ ಬೆಳೆಯುವ ಸಾಮರ್ಥ್ಯವಾಗಲೀ, ಸನ್ನಿವೇಶವಾಗಲೀ ನಿರ್ಮಾಣವಾಗಲಿಲ್ಲ. ಹೊಸಗುಂದದ ಅರಸರ ಇತಿಹಾಸ ತೋರಿಸುವಂತೆ ಮಧ್ಯಕಾಲದಲ್ಲಿ ಅರಸೊತ್ತಿಗೆಯ ನಿರ್ಮಾಣದಲ್ಲಿ ಮಹಾರಾಜ ಭಾಗಶಃ ಮಾತ್ರ ಕಾರಣೀಭೂತನಾಗಿದ್ದ. ಪ್ರಾದೇಶಿಕ ಮಟ್ಟದಲ್ಲಿ ಆಳ್ವಿಕೆಗಳಿಸಲು ಒಂದು ಮುಕ್ತ ಪೈಪೋಟಿಯ ವಾತಾವರಣವೂ ಇತ್ತು. ಈ ಪೈಪೋಟಿಗಳು ಪ್ರಾದೇಶಿಕ ಕದನಗಳಾಗಿ ಕೂಡ ಆಗಾಗ ಪರ್ಯಾವಸಾನಗೊಳ್ಳುತ್ತಿದ್ದವು. ಇಂಥ ಪೈಪೋಟಿಯಲ್ಲಿ ಗೆದ್ದವರು ನಿಧಾನವಾಗಿ ಪ್ರಾದೇಶಿಕ ಆಳ್ವಿಕೆಯ ಮೆಟ್ಟಿಲುಗಳನ್ನು ಏರುತ್ತಿದ್ದರು. ಹೊಸಗುಂದದ ಅರಸರ ಕಾಲದಲ್ಲಿ ಇತಿಹಾಸ ಇಂಥ ಯುದ್ಧಗಳಿಂದಲೇ ತುಂಬಿದೆ. ಈ ಯುದ್ಧಗಳಲ್ಲಿ ಕೆಲವನ್ನು ಸ್ಥಾನಿಕ ಆಳರಸರನ್ನು ಬಗ್ಗುಬಡೆಯಲಿಕ್ಕಾಗಿ ಪ್ರಾದೇಶಿಕ ಅರಸರು ನಡೆಸಿದ್ದರೆ, ಇನ್ನೂ ಕೆಲವು ಸಾಮ್ರಾಜ್ಯಗಳ ಪರವಾಗಿ ತನ್ನ ವೈರಿ ಪ್ರಾದೇಶಿಕ ಅರಸರನ್ನು ಬಗ್ಗುಬಡೆಯಲಿಕ್ಕಾಗಿ ನಡೆಸಿದವುಗಳಾಗಿವೆ. ಈ ಮೂಲಕ ವೈರಿ ಹನನ ಹಾಗೂ ಸಾಮ್ರಾಟರ ಆಶ್ರಯ ಎರಡನ್ನೂ ಸಾಧಿಸುವ ರಾಜನೀತಿಯನ್ನು ಈ ಅರಸರು ಅನುಸರಿಸಿದ್ದರು. ಪ್ರಾದೇಶಿಕವಾಗಿ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸುವ ಸಾಮರ್ಥ್ಯದ ಲಕ್ಷಣವನ್ನು ತೋರಿಸಿದ ಇಂಥ ಅರಸರನ್ನು ಸಾಮ್ರಾಜ್ಯಗಳ ರಾಜಕೀಯದಲ್ಲಿ ಪ್ರಾದೇಶಿಕ ಮಧ್ಯವರ್ತಿಗಳನ್ನಾಗಿ ಒಳಗೊಳ್ಳುವ ನೀತಿಯನ್ನು ತೋರಿಸುತ್ತಿದ್ದರು. ಈ ರೀತಿ ಸಾಂತಳಿಗೆ ಪ್ರದೇಶದ ಮೇಲೆ ತಮ್ಮ ಹತೋಟಿಯನ್ನು ಪಡೆಯುವುದಕ್ಕಾಗಿ ಸಾಮ್ರಾಟರು ಪ್ರಾದೇಶಿಕ ರಾಜಕೀಯದ ಉಪಯೋಗ ಮಾಡಿಕೊಂಡದ್ದು ಕಂಡು ಬರುತ್ತದೆ.

ಪ್ರಾದೇಶಿಕ ರಾಜಕೀಯದ ದೃಷ್ಟಿಯಿಂದ ಸಾಂತಳಿಗೆಯನ್ನು ಪರಶೀಲಿಸಿದರೆ ಅಲ್ಲಿಯ ಆಂತರಿಕ ಪೈಪೋಟಿ ನಮಗೆ ಎದ್ದು ಕಾಣುತ್ತದೆ. ಇಲ್ಲಿರುವ ಹೆಗ್ಗಡೆಗಳು, ಅರಸರು, ಗಾವುಂಡರು, ನಾಯಕರು, ಪ್ರಧಾನಿಗಳು, ದಂಡನಾಯಕರು, ಸಾವಂತರು ಮುಂತಾದ ಆಳುವ ವರ್ಗದವರು ೧೨-೧೩ನೆಯ ಶತಮಾನದಲ್ಲಿ ಸಾಕಷ್ಟು ಕಾದಾಟಗಳಲ್ಲಿ ತೊಡಗಿಕೊಂಡದ್ದು ತಿಳಿದು ಬರುತ್ತದೆ. ವೀರಗಲ್ಲುಗಳಲ್ಲಿ ಮಡಿದ ವೀರರ ಕೌಟುಂಬಿಕ ವಿವರಗಳು ಸೂಚಿಸುವಂತೇ ಈ ವರ್ಗದವರು ಮಲೆನಾಡಿನ ಯೋಧ ಜನಾಂಗದವರಾಗಿದ್ದರು. ಇವರಲ್ಲಿ ಅನೇಕ ವಂಶಗಳು ೧೨-೧೩ನೆಯ ಶತಮಾನದಲ್ಲಿ ಹೆಗ್ಗಡೆ ಹಾಗೂ ಅರಸಪಟ್ಟವನ್ನು ಗಳಿಸಿದ್ದರು. ಪಟುಗುಪ್ಪೆಯಲ್ಲಿ ಅಂಥ ಅರಸು ಕುಲ ಇದ್ದ ಉಲ್ಲೇಖ ಬರುತ್ತದೆ. ಅಲ್ಲಿಯ ಚೋಕರ್ಸನು ತನ್ನನ್ನು 'ಮಹಾ ಮಂಡಳೇಶ್ವರ' ಎಂದು ಕರೆದುಕೊಳ್ಳುತ್ತಾನೆ. ಆತನ ಮಗ ಚೆಲ್ಲರ್ಸ ಹಾಗೂ ಮೊಮ್ಮಗ ತೈಲರ್ಸರ ಕಾಲದವರೆಗೂ ಹೊಸಗುಂದದ ಅರಸರಿಗೂ ಅವರಿಗೂ ಕಾದಾಟ ನಡೆದದ್ದು ಕಂಡು ಬರುತ್ತದೆ. ಅದೇ ರೀತಿ ಸೇತುವಿನಿಂದ ಒಬ್ಬ ದೇಕರಸ ಎಂಬವನು ೧೨೭೫ ರಲ್ಲಿ ಆಳುತ್ತಿದ್ದನು. ಇನ್ನೂ ಕೆಲವು ಇಂಥ ಅರಸರು ಶಾಸನಗಳಲ್ಲಿ ಉಲ್ಲೇಖಿತರಾಗಿದ್ದಾರೆ. ಹೆಗ್ಗಡೆಗಳು ಸಾಕಷ್ಟು ಬಾರಿ ಶಾಸನಗಳಲ್ಲಿ ಉಲ್ಲೇಖಿತರಾಗಿದ್ದಾರೆ. ಅದರಲ್ಲಿ ಮೂರನೆಯ ಬೊಂಮರಸನು ಬಿದಿರೂರಿನ ಕಲ್ಲವೆಗ್ಗಡೆ ಎಂಬವನ ಮೇಲೆ ದಂಡೆತ್ತಿ ಹೋಗಿದ್ದನು. ಈ ರೀತಿಯಾಗಿ ಹೊಸಗುಂದದ ಅರಸರು ಸಾಂತಳಿಗೆ ಪ್ರದೇಶದ ಇಂಥ ಸಣ್ಣ ಪುಟ್ಟ ಅರಸರ ಮೇಲೆ ತಮ್ಮ ಪ್ರಾಬಲ್ಯವನ್ನು ಸ್ಥಾಪಿಸಿದ್ದು ಕಂಡು ಬರುತ್ತದೆ.

೨. ಸಾಮಾಜಿಕ ಹಿನ್ನೆಲೆ

ಈ ಅರಸರ ಸಂಬಂಧಿಸಿ ವೀರಗಲ್ಲುಗಳು ಮಾತ್ರ ಸಿಗುವುದು ಈ ಅರಸು ಮನೆತನದ ಸಾಮಾಜಿಕ ಹಿನ್ನೆಲೆಯ ಮೇಲೂ ಬೆಳಕು ಚೆಲ್ಲುತ್ತದೆ. ಇವರು ಸ್ಥಾನಿಕ ಆಳರಸರಾಗಿದ್ದರೂ ದೇವಾಲಯ ದಾನಗಳನ್ನು ಅಥವಾ ಅಗ್ರಹಾರ ದಾನಗಳನ್ನು ಮಾಡುವುದರತ್ತ ತಮ್ಮ ಗಮನ ಹರಿಸಿದ್ದು ಕಡಿಮೆ. ಬದಲಾಗಿ ಇವರ ಕಾಲದಲ್ಲಿ ಕಡೆತನಕವೂ ಯುದ್ಧಗಳೇ ಪ್ರಧಾನವಾಗಿದ್ದವು. ಇದು ಒಂದೆಡೆ ಇವರ ರಾಜ್ಯದಲ್ಲಿ ನಿರಂತರ ಅಸ್ಥಿರತೆ ಇದ್ದುದನ್ನು ಸೂಚಿಸಿದರೆ ಮತ್ತೊಂದೆಡೆ ಇವರು ಯುದ್ಧವನ್ನೇ ಆಧರಿಸಿ ಮಹ್ವ ಗಳಿಸಿದ್ದನ್ನೂ ಸೂಚಿಸಬಹುದು. ಇವರು ದುರ್ಗಮವಾದ ಅಡವಿಗಳಲ್ಲಿ ಪಡೆಗಳನ್ನು ಕಟ್ಟಿಕೊಂಡು ಬದುಕುತ್ತಿದ್ದ ಒಂದು ಸಮಾಜವಾಗಿದ್ದರು. ಪಕ್ಕದ ಅರೆಬಯಲುನಾಡಿನ ವ್ಯವಸಾಯ ರಾಜ್ಯಗಳಲ್ಲಿನ ಹಳ್ಳಿಗಳಿಗೆ ನುಗ್ಗಿ ಕಿರುಕುಳ ನೀಡುತ್ತಿದ್ದರು. ಇಂಥವರನ್ನು ಮಲೆಪರು, ಬೇಡರು, ಕಿರಾತಕರು ಎಂದೆಲ್ಲ ಅರೆಬಯಲುನಾಡಿನ ಶಾಸನಗಳಲ್ಲಿ ಕರೆಯಲಾಗಿದೆ. ಅಂಥ ಮಲೆಪರಲ್ಲಿ ಈ ಅರಸರ ಸಮಾಜವೂ ಒಂದಾಗಿತ್ತು. ಇವರು ಶಿವಮೊಗ್ಗಾದ ಮಲೆನಾಡಿನ ಭಾಗದಲ್ಲಿ ಅದರಲ್ಲೂ ಮೇಲು ಸಾಂತಳಿಗೆ ಅಂದರೆ ಈಗಿನ ಸಾಗರದ ಭಾಗದಲ್ಲಿ ಪ್ರಬಲವಾಗಿದ್ದರು. ಬಹುಶಃ ಇವರು ಮೊದಮೊದಲು ತಮ್ಮ ಪಡೆಗಳ ಮೂಲಕ ಸಾಂತರರನ್ನು ಹಾಗೂ ಇತರ ನಾಡರಸರನ್ನು ಸೇವಿಸುತ್ತಿದ್ದವರು ಕ್ರಮೇಣ ಮೇಲು ಸಾಂತಳಿಗೆಯಲ್ಲಿ ರಾಜ್ಯ ಸ್ಥಾಪಿಸಿರಬಹುದು. ಈ ವಿಷಯವು ಕೆಳಗಿನ ವಿವರಗಳ ಮೂಲಕ ಧೃಡಪಡುತ್ತದೆ.


ಈ ಅರಸರು ತಾವು ಬಿಲ್ಲೇಶ್ವರ ದೇವರ ಪಾದ ಪದ್ಮಾರಾಧಕರು ಎಂದುಕೊಳ್ಳುತ್ತಾರೆ. ಈ ಬಿಲ್ಲೇಶ್ವರನು ಹೊಂಬುಚದ ಆದಿ ಬಿಲ್ಲೇಶ್ವರ ಎಂದು ತಿಳಿದುಬರುತ್ತದೆ. ಇವರು ತಾವು ಸಾಂತರರ ವಂಶದವರೆಂದು ತೀರ ಕೊನೆಗಾಲದ ಶಾಸನವೊಂದನ್ನು ಬಿಟ್ಟರೆ ಎಲ್ಲೂ ಹೇಳಿಕೊಳ್ಳುವುದಿಲ್ಲ. ಬಿಲ್ಲೇಶ್ವರ ದೇವರು ಈ ಪ್ರದೇಶದ ಬಿಲ್ಲ ಅಥವಾ ಬಿಲ ಎಂಬ ಜನಾಂಗದ ದೇವತೆಯಾಗಿತ್ತು. ಈ ಸಂಬಂಧಿಸಿ ನಮಗೆ ಕೋಡಕಣಿ ಹಾಗೂ ಕುರುವದ ಎರಡು ಶಾಸನಗಳು ಕೆಲ ಉಪಯುಕ್ತ ಮಾಹಿತಿ ನೀಡುತ್ತವೆ.**[3]** ಈ ಶಾಸನಗಳಲ್ಲಿ ಬಿಲ ಮುನ್ನೂರ್ವರು ಎಂಬ ಯೋಧ ಜನಾಂಗದ ಶ್ರೇಣಿಯ ಉಲ್ಲೇಖವಿದೆ. ಕೋಡಕಣಿಯ ಶಾಸನದಲ್ಲಿ ಈ ಶ್ರೇಣಿಯ ಕುರಿತ ಪ್ರಶಸ್ತಿ ಸರಿಯಾಗಿ ಕಾಣಿಸುವುದಿಲ್ಲ. ಅವರು ಬಿಲ್ಲೇಶ್ವರ ದೇವರಿಗೆ ಒಂದು ದೇವಾಲಯವನ್ನು ಕಟ್ಟಿಸಿ ಹಂಚೆಯ ರಾಮೇಶ್ವರ ದೇವರ ಆಚಾರ್ಯರಿಗೆ ಅದನ್ನು ವಹಿಸಿ ಕೊಟ್ಟರು. ಕುರುವದ ಶಾಸನದಲ್ಲಿ ಅಲ್ಲಿನ ರಾಮೇಶ್ವರ ದೇವರಿಗೆ ದಾನ ಕೊಡುವ ಸಂದರ್ಭದಲ್ಲಿ ಇವರ ಕುರಿತು ದೀರ್ಘ ಪ್ರಶಸ್ತಿ ಬರುತ್ತದೆ. ಅಲ್ಲಿ ಇವರನ್ನು "ಬಿಲು ಪಡ್ಡೆಕಾರರು, ಕಿರಾತಾನ್ವಯರು, ಕಾಡಾನೆ ಮಲ್ಲರು, ಹುಲಿ-ಸಿಂಹಗಳನ್ನು ಬೇಟೆಯಾಡುವವರು, ನೋಡಿ ತಪ್ಪದೆಸೆವ ಕಣ್ಣಂಬಿನವರು, ಅರಣ್ಯ ಭಂಡಾರರು, ಬೈಸಣಿಗೆ, ತೋರಣ, ಪರಕ್ಷಪಾಳಕರು, ಪರಸೈನ್ಯ ಗಜಕೇಸರಿಗಳು, ಹೊಯ್ಸಣ ಬೀಡಿನ ಪರಮ ವಿಶ್ವಾಸಿಗಳು" ಎಂದೆಲ್ಲ ವಿವರಿಸಲಾಗಿದೆ ಈ ವಿವರಗಳು ಭಿಲ್ಲರ ಜನಾಂಗೀಯ ವಿವರಗಳನ್ನು ತುಂಬಾ ಅರ್ಥಪೂರ್ಣವಾಗಿ ಕಟ್ಟಿ ಕೊಡುತ್ತವೆ. ಇವರು ಬಿಲ್ಲಾಳುಗಳಾಗಿದ್ದು ಅಡವಿಯನ್ನೇ ನೆಚ್ಚಿಕೊಂಡ ಬೇಟೆಗಾರ ಬುಡಕಟ್ಟಿನವರಾಗಿದ್ದರು ಹಾಗೂ ಬಹುಶಃ ಹೊಯ್ಸಳ ರಾಜರಿಂದ ಮಾನ್ಯತೆ ಪಡೆದ ಪಡೆವಳರಾಗಿದ್ದರು. ಈ ಬಿಲ್ಲರು ಸಾಂತಳಿಗೆಯ ಶಾಸನಗಳಲ್ಲಿ ಸಾಮಾನ್ಯವಾಗಿ ಕಂಡುಬರುತ್ತಾರೆ. ಬಹುಶಃ ಇವರಲ್ಲಿನ ಒಂದು ಬಳಿ ಅದಿಯರಬಳಿ ಎಂಬ ಹೆಸರನ್ನು ಹೊಂದಿತ್ತು ಹಾಗೂ ಈ ಬಳಿಯವರೇ ೧೩ನೇ ಶತಮಾನದ ಸ್ಥಾನಿಕ ರಾಜಮನೆತನಗಳಾಗಿ ಬೆಳೆದರು. ಅದಿಯರ ಕುಲಕ್ಕೆ ಸೇರಿದ, ಬಿಲ್ಲೇಶ್ವರನು ಕುಲದೇವತೆಯಾದ ಕೆಲ ಅರಸು ಮನೆತನಗಳಲ್ಲಿ ಹೊಸಗುಂದದ ಅರಸರು ಪ್ರಮುಖರು. ಇವರ ಜೊತೆಗೇ ನಾಡಕಳಸಿಯ ಅರಸರು ಹಾಗೂ ಜೋಗದ ಬಳಿಯ ಬಿದಿರೂರಿನವರು ಸಾಕಷ್ಟು ಪೈಪೋಟಿ ನಡೆಸಿದ್ದು ಕಂಡುಬರುತ್ತದೆ. ಇವರಲ್ಲದೇ ಪಟ್ಟುಗುಪ್ಪೆ, ಸೇತು, ಹಾಲುಗುಡ್ಡೆ, ಕೋಡೂರು ಮುಂತಾದೆಡೆಗಳಲ್ಲೂ ಈ ಕುಲದವರು ಪ್ರಭುಗಳಾಗಿದ್ದಂತೆ ತೋರುತ್ತದೆ. ಇವರೆಲ್ಲ ಅರಸ, ಹೆಗ್ಗಡೆ, ಸಾವಂತ ಹಾಗೂ ಪಡೆವಳ ಎಂಬ ಬೇರೆ ಬೇರೆ ಸ್ಥಾನಗಳಿಂದ ಗುರುತಿಸಲ್ಪಟ್ಟಿದ್ದಾರೆ. ಪಡೆವಳರೆಂದರೆ ಯೋಧರ ಪಡೆಯನ್ನು ಕಟ್ಟಿಕೊಂಡ ನಾಯಕರಾಗಿದ್ದರು. ಈ ಅರಸು ವಂಶಗಳಲ್ಲಿ ಬಿಲ್ಲವೆಗ್ಗಡೆ, ಬಾಳೆಯಮ್ಮವೆಗ್ಗಡೆ ಮುಂತಾದ

ಹೆಸರುಗಳು ಪ್ರಾರಂಭದಲ್ಲಿ ಕಾಣಸಿಗುತ್ತವೆ. ಹೆಗ್ಗಡೆಗಳು ಉಳಿದ ಪ್ರದೇಶಗಳಲ್ಲಿ ಮುಖ್ಯವಾಗಿ ರಾಜ್ಯದ ಅಧಿಕಾರಿಗಳಾಗಿದ್ದರೆ ಇಲ್ಲಿ ಅವರು ಮುಖ್ಯವಾಗಿ ಯುದ್ದ ಹಾಗೂ ರಾಜ್ಯ ನಿರ್ಮಾಣದಲ್ಲಿ ನಿರತರಾಗಿದ್ದರು.

ಈ ಅರಸರ ಹೆಸರುಗಳೂ ಅಚ್ಚ ಪ್ರಾದೇಶಿಕ ಮೂಲದವಾಗಿವೆ. ಬೀರ ಹಾಗೂ ಬೊಮ್ಮ ಎಂಬ ಹೆಸರುಗಳು ಸಾಮಾನ್ಯವಾಗಿವೆ. ಈ ಹೆಸರುಗಳು ಸಾಂತರ ಅರಸರಲ್ಲೂ ಬಳಕೆಯಲ್ಲಿದ್ದವು. ಇವೇ ಸಂಸ್ಕೃತೀಕರಣವಾಗಿ ವೀರ ಹಾಗೂ ಬ್ರಹ್ಮ ಎಂಬ ರೂಪ ತಳೆದದ್ದನ್ನು ನೋಡಬಹುದು. ಬೀರನು ಗುಡ್ಡಗಾಡು ಹಾಗೂ ಪಶುಸಂಗೋಪನಾ ಸಮಾಜಗಳ ಜನಪ್ರಿಯ ದೇವತೆಯಾಗಿದ್ದಾನೆ. ಆಸಕ್ತಿಯ ವಿಷಯವೆಂದರೆ ಬೀರರಸ ಎಂಬವನನ್ನು ಬಿಲ್ಲವೆಗ್ಗಡೆ ಎಂದೂ ಶಾಸನಗಳು ಉಲ್ಲೇಖಿಸುವುದರಿಂದ ಬಿಲ್ಲ ಮತ್ತು ಬೀರ ಎಂಬ ಹೆಸರುಗಳೆರಡೂ ಉಚ್ಚಾರಣಾ ವ್ಯತ್ಯಾಸಗಳೆಂದು ಗ್ರಹಿಸಬಹುದು. ಹಾಗಾಗಿ ಬಿಲ್ಲೇಶ್ವರನು ಬೀರದೇವತೆಯೇ ಆಗಿರುವಂತೆ ತೋರುತ್ತದೆ. ಬೊಮ್ಮ ಎಂಬ ದೇವತೆ ತುಳು ನಾಡಿನದೇ ವಿಶಿಷ್ಟ ದೇವತೆಯಾಗಿದ್ದು ದಕ್ಷಿಣ ಕನ್ನಡದ ಬರ್ಮೇರ್ ದೇವತೆ ಎಂಬುದು ಸ್ಪಷ್ಟ. ಈ ಅರಸರಿಗೇ ವಿಶಿಷ್ಟವಾದ ಮತ್ತೊಂದು ಹೆಸರು ಬಾಳೆಯಮ್ಮ ಎಂಬುದು.

೩. ಶಾಸನೋಕ್ತ ಅರಸರು

ಈ ಅರಸರ ಒಂದು ವ್ಯವಸ್ಥಿತವಾದ ವಂಶಾವಳಿಯನ್ನು ಕಟ್ಟಿಕೊಡುವುದು ಪ್ರಯಾಸದ ಕೆಲಸವೇ ಆಗಿದೆ. ಈ ಕೆಲಸದಲ್ಲಿ ಎದುರಾಗುವ ಮೊದಲನೇ ತೊಡಕು ಎಂದರೆ ಕೇವಲ ಬೀರರಸ ಹಾಗೂ ಬೊಮ್ಮರಸ ಎಂಬ ಎರಡೇ ಹೆಸರುಗಳನ್ನು ಬೇರೆ ಬೇರೆ ತಲೆಮಾರಿನ ಅರಸರೆಲ್ಲರೂ ಇಟ್ಟುಕೊಂಡಿದ್ದರು. ಎರಡನೆಯದಾಗಿ ಇದು ಒಂದೇ ವಂಶವೂ ಆಗಿರಲಿಲ್ಲ. ಅಳಿಯಂದಿರು, ಅಧಿಕಾರಿಗಳು ಕೂಡ ಆಳಿದ್ದಾರೆ. ಇವರ ಅನೇಕ ಶಾಸನಗಳ ಕಾಲ ಬಹುಶಃ ತಪ್ಪಾಗಿ ಓದಲ್ಪಟ್ಟು ಅಚ್ಚಾಗಿವೆ. ಹಾಗಾಗಿ ಲಭ್ಯವಿರುವ ಮಾಹಿತಿಗಳಿಂದ ಒಂದು ತಾತ್ಕಾಲಿಕ ವಂಶಾವಳಿಯನ್ನು ಮಾತ್ರ ಸೂಚಿಸಬಹುದು. ಗೊಂದಲದ ಭಾಗಗಳನ್ನು ಮುಂದಿನ ಸಂಶೋಧನೆಗೆ ಬಿಡಲಾಗಿದೆ. ಹೊಸಗುಂದವೇ ಇವರ ಪ್ರಮುಖ ರಾಜಧಾನಿಯಾಗಿದ್ದರಿಂದ ಇವರನ್ನು ಹೊಸಗುಂದದ ಅರಸರೆಂದು ಸ್ಥೂಲವಾಗಿ ಕರೆಯಬಹುದು.



ಮೊದಲನೇ ಬೊಮ್ಮರಸ, ಬೀರರಸರು

೧೧೪೭ರಲ್ಲಿ ಜಗದೇವ ಸಾಂತರನು ಸೇತುವಿನಿಂದ ಆಳತೊಡಗಿದ ನಂತರ ಹೊಸಗುಂದದ ಅರಸರು ತಮ್ಮ ಅಸ್ತಿತ್ವವನ್ನು ಪ್ರಕಟಿಸಲು ಪ್ರಾರಂಭಿಸುತ್ತಾರೆ. ೧೧೬೨ರಲ್ಲಿ ತೈಲಹರಸ ಸಾಂತರನ ಅಧಿಕಾರಿಯಾಗಿ ಹೊಸಗುಂದದ ಬೀರರಸ ಎಂಬವನು ಮೇಲು ಸಾಂತಳಿಗೆಯನ್ನು ಆಳುತ್ತಿದ್ದನು.[4] ಈ ಮೇಲು ಸಾಂತಳಿಗೆಯಲ್ಲೇ ಕುಂದನಾಡು ಹಾಗೂ ಕೊಡನಾಡುಗಳು ಬರುತ್ತವೆ. ಈ ಬೀರರ ಸನಿಗೂ ಪೂರ್ವದಲ್ಲಿ ಒಬ್ಬ ಬೊಮ್ಮ ರಸನೆಂಬವನು ಇದ್ದಿರಬಹುದು. ನಾಡಕಳಸಿಯ ಶಾಸನದಲ್ಲಿ ಬೊಮ್ಮರಸನೆಂಬವನೊಬ್ಬನು ೧೨ನೇ ಶತಮಾನದ ಮಧ್ಯ ಭಾಗದಲ್ಲಿ ಕುಂದನಾಡು ಹಾಗೂ ಕೊಡನಾಡುಗಳ ಆಳ್ವಿಕೆಯನ್ನು ನಡೆಸುತ್ತಿದ್ದುದಾಗಿ ಉಲ್ಲೇಖವಿದೆ.[5](ಆ ಬೊಮ್ಮರಸನ ಮಗಳ ಮಗಳ ಮಗ ೧೨೧೮ರ ಶಾಸನದಲ್ಲಿ ಕಲಿಸೆಯ ಅರಸನಾಗಿ ಕಾಣಿಸಿಕೊಳ್ಳುತ್ತಾನೆ.) ಇವರಿಬ್ಬರನ್ನೂ ಮೊದಲನೆಯ ಬೀರರಸ ಹಾಗು ಮೊದಲನೆಯ ಬೊಮ್ಮರಸರೆಂದು ಇಲ್ಲಿ ಗ್ರಹಿಸಿಕೊಳ್ಳಲಾಗಿದೆ. ಬಹುಶಃ ಮೊದಲನೆಯ ಬೀರರಸನನ್ನೇ ಬಿಲ್ಲವೆಗ್ಗಡೆ ಎಂದೂ ಕರೆಯಲಾಗುತ್ತಿತ್ತು. ಈ ಬೀರರಸನಿಗೂ ಆತನ ಮೇಲೆ ಆಳುತ್ತಿದ್ದ ಸಾಂತರ ಸಿಂಗಿದೇವನಿಗೂ ಮಧ್ಯೆ ಸದಾ ತಿಕ್ಕಾಟ ನಡೆದಿತ್ತು. ಬೀರರಸನು ಸಾಂತರರ ಮೇಲಾಳಿಕೆಯನ್ನು ಕಿತ್ತೊಗೆಯಲೂ ಪ್ರಯತ್ನಿಸುತ್ತಿದ್ದನೆಂದು ತೋರುತ್ತದೆ. ೧೧೬೪ ರಲ್ಲಿ ಸಿಂಗಿದೇವನು ಕೆಲ ಮಾಂಡಳಿಕರನ್ನು ಕೂಡಿಕೊಂಡು ಬೀರರಸನ ಮೇಲೆ ದಂಡೆತ್ತಿ ಬಂದಿದ್ದನು.[6]ಘಟ್ಟದ ಕೆಳಗಿನ ಆಳ್ವರಸರು ಸಾಂತರರ ಪರವಾಗಿ ಬಂದು ನಾಡುಗಳನ್ನು ಕೆಡಿಸುತ್ತಿದ್ದರು. ಇವರ ಸೈನ್ಯದಲ್ಲಿ ೧೦೦೦ ಕುದುರೆಗಳು ಹಾಗೂ ೫೦,೦೦೦ ಆಳುಗಳು ಇದ್ದರೆಂದು ಹೇಳಲಾಗಿದೆ. ಬಹುಶಃ ಇದೇ ಸಮಯದಲ್ಲಿ ಬೀರರಸನು ಅಂಧಾಸುರದ ಅಂಧಾಸುರದಲ್ಲಿ ಜಗದೇವ ಸಾಂತರನನ್ನು ಮುತ್ತಿದಾಗ ಆತನ ಇತರ ಮಾಂಡಳಿಕರ ಜೊತೆಗೆ ಬೀರರಸನೂ ಇದ್ದನು.[7]ಇದರಿಂದ ಸ್ಪಷ್ಟವಾಗುವ ವಿಷಯವೆಂದರೆ ತನ್ನ ಕಾಲದ ರಾಜಕೀಯ ಪ್ರಕ್ಷುಬ್ಧತೆಯನ್ನು ಬೀರರಸನು ಸದುಪಯೋಗಪಡಿಸಿಕೊಂಡನು. ಈ ಬೀರರಸನು ಯಾವುದೇ ಬಿರುದುಗಳನ್ನೂ ಧರಿಸಿದಂತೆ ಕಂಡುಬರುವುದಿಲ್ಲ.

೧೧೭೨ರಲ್ಲಿ ಒಬ್ಬ ಕುಮಾರ ಮಾಂಡಲಿಕ ಬೊಮ್ಮರಸ ಎಂಬವನ ಉಲ್ಲೇಖವಾಗುತ್ತದೆ.[8]ಇವನನ್ನು ಮಾಂಡಳಿಕ ಎಂದು ಕರೆದಿರುವುದರಿಂದ ಮೊದಲನೇ ಬೀರರಸನ ತಂತ್ರ ಫಲಿಸಿದಂತೆ ತೋರುತ್ತದೆ, ಅಂದರೆ ಈ ಅರಸರು ಕುಂದನಾಡು-ಕೊಡನಾಡುಗಳ ಜೊತೆಗೇ ಸಾಂತಳಿಗೆ ಅಧಿಕಾರವನ್ನೂ ಪಡೆದಿರಬಹುದು. ಈ ಬೊಮ್ಮರಸನು ಬಹುಶಃ ಎರಡನೆ ಬೊಮ್ಮರಸನಾಗಿದ್ದಾನೆ. ಆದರೆ ೧೧೭೨ ರಿಂದ ಸುಮಾರು ೧೨೧೫ರ ವರೆಗೆ ಸಾಂತರರು ಹೊಸಗುಂದದ ಅರಸರನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ಸಮರ್ಥರಾದರು. ೧೧೯೦-೧೨೦೦ರ ಮಧ್ಯದಲ್ಲಿ ಒಂದೆರಡು ಬಾರಿ ಬೀರರಸ ಹಾಗೂ ಬೊಮ್ಮರಸ ಎಂಬವರ ಉಲ್ಲೇಖವಾದರೂ ಅವರ ಕುರಿತ ವಿವರಗಳು ಸಿಗುವುದಿಲ್ಲ. ಈ ಮಧ್ಯದ ಕಾಲದಲ್ಲಿ ಆಗಿಹೋದ ಅರಸರ ಕುರಿತು ಇನ್ನಾವುದೇ ಮಾಹಿತಿ ಲಭ್ಯವಿಲ್ಲ.

ಕಲಿಸೆಯ ಬಾಳೆಯಮ್ಮವೆಗ್ಗಡೆ

೧೨೧೬ ರಲ್ಲಿ ಜಗದೇವ ಪಾಂಡ್ಯದೇವರಸನೆಂಬ ಸಾಂತರನ ಮಹಾಪ್ರಧಾನಿ, ಸರ್ವಾಧಿಕಾರಿ, ಬಾಹತ್ತರ ನಿಯೋಗಾಧಿಕಾರಿ ಎಂದೆಲ್ಲ ಕರೆದುಕೊಂಡು ಕುಮಾರ ಬಾಳೆಯಮ್ಮವೆಗ್ಗಡೆ ಎಂಬವನು ಕಲಿಸೆಯಲ್ಲಿ ಆಳುತ್ತಿದ್ದನು.[9]ಆತನು ನೆರೆಯ ಜಿಡ್ಡುಳಿಗೆ ನಾಡಿನ ಹಳ್ಳಿಗಳ ಮೇಲೆ ಧಾಳಿ ನಡೆಸುತ್ತಿದ್ದನು. ೧೨೧೮ರ ನಾಡಕಲಸಿಯ ಸೋಮನಾಥ ದೇವಾಲಯದ ಶಾಸನಗಳಲ್ಲಿ ಈ ಅರಸನ ಬಗ್ಗೆ ಅನೇಕ ವಿವರಗಳು ದಾಖಲಾಗಿವೆ.[10]ಆತನು ತಾನು ಬೊಮ್ಮರಸನೆಂಬವನ ಮಗಳ ಮಗಳ ಮಗನೆನ್ನುತ್ತಾನೆ. ಆತನ ತಾಯಿ ಬಿಯಬರಸಿಯು ಬೊಮ್ಮರಸನ ಮಗಳು ಕೆಳೆಯಬರಸಿಯ ಮಗಳಾಗಿದ್ದಳು. ಆತನ ತಂದೆ ಹ(ಪ)ಡವಳ ಗೊಂಗಣ್ಣ ಹಾಗೂ ಮಾವನು ಬಿಲ್ಲವೆಗ್ಗಡೆಯಾಗಿದ್ದನು. ಈ ಬಿಲ್ಲವೆಗ್ಗಡೆ ಹೊಸಗುಂದದ ವಂಶದವನೆಂಬುದು ಸ್ಪಷ್ಟ. ಬಹುಶಃ ಅವನು ೧೧೭೨ ರಲ್ಲಿ ಕಾಣಿಸಿಕೊಳ್ಳುವ ಬೊಮ್ಮರಸನ ಮಗನಾಗಿರಬಹುದು. ಆದರೆ ೧೨೧೫ರ ಸುಮಾರಿಗೆ ಹೊಸಗುಂದದ ಅರಸರೂ ಧರಿಸದಿದ್ದ ಪ್ರಶಸ್ತಿಗಳನ್ನೆಲ್ಲ ಧರಿಸಿ ಕಲಿಸೆಯ ಬಾಳೆಯಮ್ಮವೆಗ್ಗಡೆ ಹೇಗೆ ಪ್ರಬಲನಾದ ಎಂಬುದು ಸ್ಪಷ್ಟವಿಲ್ಲ. ಆತನಿಗೆ ಅದಿಯರಾದಿತ್ಯ, ಸತ್ಯ ರತ್ನಾಕರ ಮುಂತಾದ ಬಿರುದುಗಳಿದ್ದವು. ಆತನ ಪರಾಕ್ರಮವನ್ನು ಸುದೀರ್ಘವಾಗಿ ವರ್ಣಿಸಲಾಗಿದೆ. ಬಹುಶಃ ಆತನು ತನ್ನ ಶೌರ್ಯದಿಂದ ಅಥವಾ ನಿಷ್ಠೆಯಿಂದಾಗಿ ಸಾಂತರರಿಗೆ ಆಪ್ತನಾಗಿರಬಹುದು. ಆತನು ತನ್ನನ್ನು ಮಾಂಡಳಿಕನೆಂದುಕೊಳ್ಳುತ್ತಾನೆ. ನಾಡಕಲಸಿಯ ಸೋಮನಾಥ ದೇವಾಲಯವನ್ನು ಆತನು ಕಟ್ಟಿಸಿದನು. ೧೨೨೦ರ ಸುಮಾರಿಗೆ ಚಿಟ್ಟೂರು ಕೋಟೆಯಲ್ಲಿದ್ದ ಬೆಳಗುತ್ತಿಯ ಈಶ್ವರದೇವನನ್ನು ಮುತ್ತಿ ಕಾದಾಡುತ್ತಿದ್ದನು.[11]

ಹೊಸಗುಂದದ ಬಿಲ್ಲವೆಗ್ಗಡೆಯ ಮಗ (ಎರಡನೆಯ) ಬೊಮ್ಮರಸ

೧೨೨೦ರ ನಂತರ ಹೊಸಗುಂದದ ಬಿಲ್ಲವೆಗ್ಗಡೆಯ ಮಗನಾದ ಕುಮಾರ ಬೊಮ್ಮರಸನು ಸಾಂತರರ ಮೇಲಾಳಿಕೆಯಿಂದ ಸ್ವತಂತ್ರನಾದಂತೆ ತೋರುತ್ತದೆ. ೧೧೧೦ ಕ್ಕೂ ಮೊದಲಿನಿಂದಲೇ ಈತನು ಆಳುತ್ತಿರುವ ಸಾಧ್ಯತೆ ಇದ್ದಿರಬಹುದಾದರೂ, ೧೨೨೮ಲರಲ್ಲಿ ಆತನು ಸಾಂತಳಿಗೆ ೧೦೦೦ ವನ್ನು ಸುಖಸಂಕಥಾವಿನೋದದಿಂದ ಆಳುತ್ತ ನಾಡುಹಳ್ಳಿಗೆ ಧಾಳಿಯಿಟ್ಟಿದ್ದಾಗಿ ತಿಳಿದುಬರುತ್ತದೆ. ಆತನು ೧೨೨೬ ರಲ್ಲಿ ತೀರಿಕೊಂಡಿದ್ದನು.[12]

ಕಲಿಸೆಯ ಅಳಿಯ ಬೀರರಸ

೧೨೩೦ರಲ್ಲೇ ಕಲಿಸೆಯ ಬಾಳೆಯಮ್ಮವೆಗ್ಗಡೆಯ ಮಗ ಕುಮಾರ ಬೀರರಸನು ಕಾಣಿಸಿಕೊಳ್ಳುತ್ತಾನೆ.[13]“ಮಾವನ ಗಂಧವಾರಣ” ಎಂಬುದು ಆತನ ಬಿರುದುಗಳಲ್ಲೊಂದಾಗಿತ್ತು. ಅವನು ಕುಂದನಾಡು-ಕೊಡನಾಡುಗಳನ್ನು ಆಳುತ್ತಿದ್ದುದಾಗಿ ತಿಳಿದು ಬರುತ್ತದೆ. ೧೨೨೯ರಲ್ಲಿ ಹೊಸಗುಂದದ ಬೊಮ್ಮರಸನ ಕಾಲದ ನಂತರ ಆತನೇ ಕಾರಣಾಂತರದಿಂದ ಸಾಂತಳಿಗೆ ಅರಸನಾದನು. ೧೨೨೯ರ ಒಂದು ಶಾಸನದ ‘ಪ್ರಕಾರ

ಬಾಳೆಯಮ್ಮವೆಗ್ಗಡೆಯ ಸುತ ಬೀರರಸನು ಕುಮಾರ ಬೊಮ್ಮರಸನ ಕಾಲಾನಂತರ' ಸಾಂತಳಿಗೆಗೆ ಅರಸನಾದನು.[14]ಈತನನ್ನು ಅಳಿಯ ಬೀರರಸ ಅಥವಾ ಕಲಿಸೆಯ ಬೀರರಸ ಎಂದೂ ಕರೆಯಲಾಗಿದೆ. ಪುರದ ಶಾಸನವೊಂದರಲ್ಲಿ ಈತನನ್ನು ಹೊಸಗುಂದದ ಬೊಮ್ಮರಸನ ಅಳಿ ಎಂದು ಕರೆಯಲಾಗಿದೆ.[15]ಈತನು ೧೨೪೫ಕ್ಕೂ ಸ್ವಲ್ಪ ಮೊದಲು ಬೆಳಗುತ್ತಿಯ ಸಿಂಧರ ಈಶ್ವರದೇವನನ್ನು ಸೋಲಿಸಿ ಬೆಳಗುತ್ತಿಯನ್ನು ಆಕ್ರಮಿಸಿಕೊಂಡು ತನ್ನ ಸೇಡನ್ನು ತೀರಿಸಿಕೊಂಡನು. ೧೨೫೭ರ ವರೆಗೂ ಆತನ ಶಾಸನಗಳು ಬೆಳಗುತ್ತಿಯಲ್ಲಿ ಸಿಗುತ್ತವೆ.[16]ಅವನಿಗೆ ಶ್ರೀಧರನೆಂಬ ದಂಡನಾಯಕನಿದ್ದನು ಹಾಗೂ ಬೀರರಸನ ಜಯಗಳಲ್ಲಿ ಆತನ ಪಾತ್ರ ಮಹತ್ವದ್ದಾಗಿತ್ತೆಂದು ಶಾಸನಗಳ ಮೂಲಕ ತಿಳಿದು ಬರುತ್ತದೆ. ೧೨೪೮ ರಲ್ಲಿ ಈತನು ಹೊಂಬುಚ ಹಾಗೂ ಸೇತುವಿನ ಮೇಲೆ ಧಾಳಿ ಮಾಡಿದ್ದನು ಹಾಗೂ ಆಗ ಹೊಂಬುಚದಲ್ಲಿ ಬೊಮ್ಮಸನೆಂಬವನು ಆಳುತ್ತಿದ್ದನು. ಈ ಬೊಮ್ಮರಸನು ಸಾಂತರನೆ ಅಥವಾ ಹೊಸಗುಂದದವನೆ ಎಂಬುದು ಸ್ಪಷ್ಟವಿಲ್ಲ. ೧೨೫೩ ರಲ್ಲಿ ಬಿದಿರೂರಿನ ಈಡು ಸಾವಂತನ ಮೇಲೆ ಧಾಳಿ ಮಾಡಿದನು. ೧೨೫೫ರ ವರೆಗೂ ಬಿದಿರೂರಿನ ಮೇಲೆ ಧಾಳಿ ಮುಂದುವರೆದಿತ್ತು.

ಅಳಿಯ ಬೀರರಸನು ಈ ರೀತಿ ಪ್ರಬಲನಾಗುತ್ತಾ ಒಳನಾಡಿನ ಸಾಮ್ರಾಜ್ಯಗಳ ಹಿಡಿತದಿಂದ ಸ್ವತಂತ್ರನಾಗಲು ಹವಣಿಸಿದಂತೆ ತೋರುತ್ತದೆ. ೧೨೧೫ ರ ಸುಮಾರಿಗೇ ದೇವಗಿರಿಯ ಯಾದವರು ಹೊಯ್ಸಳರನ್ನು ಬನವಾಸಿ ಪ್ರದೇಶದಿಂದ ಹಿಮ್ಮೆಟ್ಟಿಸಿದ್ದರು. ಹೊಯ್ಸಳರಿಂದ ವಿಶೇಷವಾಗಿ ಸನ್ಮಾನಿತರಾಗಿ ಅವರ ಅಂಕೆಯೊಳಗೆ ಇದ್ದ ಈ ಅರಸರಿಗೆ ಹೊಯ್ಸಳರ ಈ ಹಿಮ್ಮೆಟ್ಟುವಿಕೆಯಿಂದ ತಕ್ಕಮಟ್ಟಿಗಿನ ಸ್ವಾತಂತ್ರ್ಯ ಸಿಕ್ಕಿರಬಹುದು ಅಥವಾ ಹೊಯ್ಸಳರು ವಿಶೇಷ ಸ್ವಾತಂತ್ರ್ಯವನ್ನು ನೀಡಿರಬಹುದು. ಬೆಳಗುತ್ತಿಯ ಅರಸರನ್ನೂ ಹೊಯ್ಸಳರು ಮಣಿಸಿ ತಮ್ಮ ಅಂಕೆಯಲ್ಲಿ ತಂದುಕೊಂಡಿದ್ದರು. ಎರಡನೆಯ ಬಿಲ್ಲಾಳನ ಕಾಲದ ನಂತರ ಬೀರರಸನು ಬೆಳಗುತ್ತಿಯನ್ನು ಆಕ್ರಮಿಸಿಕೊಳ್ಳುವುದು ಬೀರರಸನಿಗೆ ಸಿಕ್ಕ ಹೊಸ ರಾಜಕೀಯ ಅವಕಾಶದ ದೃಷ್ಟಾಂತವಾಗಿದೆ. ಈ ಅವಕಾಶವನ್ನು ಉಪಯೋಗಿಸಿಕೊಂಡು ಬೀರರಸನು ತನ್ನ ಬಿರುದಾವಳಿಗಳನ್ನು ಹೆಚ್ಚಿಸಿಕೊಂಡನು. ಆತನ ಬಿರುದುಗಳಲ್ಲಿ ಮುಖ್ಯವಾದುವೆಂದರೆ 'ಹೊನ್ನ ಕೊಟ್ಟು ಕುದುರೆ ಕಟ್ಟುವ ಮಾಂಡಳಿಕರ ಗಂಡ', 'ಕೊಂಕಣಿಗೆ ಬೇಟೆಗಾರ', 'ತುಳುರಾಜ್ಯ ಸಮುದ್ಧರಣ' ಎಂಬವು. ಕರಾವಳಿಗೆ ಹೊಂದಿಕೊಂಡಿರುವ ಈ ಮಲೆನಾಡಿನ ಘಟ್ಟ ಪ್ರದೇಶವು ಮಧ್ಯ ಕಾಲದ ಅರಬ್ಬರ ಕುದುರೆ ವ್ಯಾಪಾರದ ಮಾರುಕಟ್ಟೆಯಾಗಿತ್ತು ಎಂಬುದು ಇದರಿಂದ ತಿಳಿದು ಬರುತ್ತದೆ. ಈ ಕಾಲದ ವೀರಗಲ್ಲುಗಳ ಶಾಸನಗಳಲ್ಲಿ ಸಾಮಾನ್ಯವಾಗಿ ಕುದುರೆ ಸವಾರರ (ಮೇಲಾಳುಗಳ) ವರ್ಣನೆ ಬರುತ್ತದೆ. ಶಾಸನ ಕಲ್ಲುಗಳ ಶಿಲ್ಪಗಳಲ್ಲೂ ಕುದುರೆಗಳ ಚಿತ್ರ ಸಾಮಾನ್ಯ. ಬಹುಶಃ ಬೀರರಸನ ಹೊನ್ನು ಕೊಟ್ಟು ಖರೀದಿಸುವುದು ಈ ಕಾಲದ ಮಾಂಡಲೀಕರ ಪ್ರತಿಷ್ಠೆಯ ವಿಷಯವೂ ಆಗಿತ್ತೆಂಬುದು ಇಲ್ಲಿ ವಿದಿತವಾಗಿದೆ. ಕೊಂಕಣಿಗ ಬೇಂಟೆಗಾರ ಎಂಬ ಬಿರುದು ಆತನು ಬಹುಶಃ ಹೈವೆಯ ಅಥವಾ ಗೋವೆಯ ಅರಸರ ವಿರುದ್ಧ ಸಾಧಿಸಿದ ಜಯವನ್ನು ಸೂಚಿಸಬಹುದು. ತುಳುರಾಜ್ಯ ಸಮುದ್ಧರಣ ಎಂಬ ಬಿರುದು ಹೊಸಗುಂದದ ಅರಸರಿಗೆ ನೇರವಾಗಿ ಹೇಗೆ ಸಂಬಂಧಿಸಿದೆ ಎಂಬುದು ಸ್ಪಷ್ಟವಿಲ್ಲ. ಆದರೆ ೯೮೦ ರಿಂದ ೧೦೧೦ರ ವರೆಗೆ ಆಳಿದ ಬಂಕಿದೇವನೆಂಬ ತುಳುರಾಜನು ಚೋಳರಿಗೆ ಸೋತಾಗ ಸಾಂತರರು ಸಹಾಯ ಮಾಡಿದ್ದರು.[17]೧೨೫೭ರ ಶಾಸನವೊಂದರಲ್ಲಿ ಬೀರರಸನು ಅಭಿನವ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ದಾನ ನೀಡುವ ಸಂದರ್ಭದಲ್ಲಿ ಬೀರರಸನನ್ನು ಸತ್ಯರತ್ನಾಕರ, ಸಾಹಿತ್ಯಜನ ಹೃತ್ ಸರೋಜ ಎಂದೆಲ್ಲ ಬಣ್ಣಿಸಲಾಗಿದೆ.[18]ಈ ಶಾಸನದಲ್ಲಿ ಉಲ್ಲೇಖಿತವಾದ ಸೊನ್ನಲಿಗೆಯು ವೀರಶೈವ ಮತದ ಆದ್ಯಪುರುಷರಲ್ಲೊಬ್ಬರಾದ ಸಿದ್ಧರಮನ ಕ್ಷೇತ್ರವಾಗಿದ್ದು ಅದರ ಪ್ರಭಾವ ಈ ಪ್ರದೇಶದಲ್ಲೂ ಆಗಿತ್ತು ಎಂದು ತಿಳಿದು ಬರುತ್ತದೆ.

೧೨೫೭ರ ಸುಮಾರಿನ ಒಂದು ಶಾಸನವು ಆಸಕ್ತಿ ಪೂರ್ಣವಾಗಿದೆ. ಇದರ ಪ್ರಕಾರ ಬೀರದೇವನ ಅತಿಬಿರುದುಗಳನ್ನು ಕಂಡು ಸಿಟ್ಟಿಗೆದ್ದ ಯಾದವರ ಕಂದಾರದೇವನು ದಂಡನಾಯಕ ಬೊಮ್ಮಿಸೆಟ್ಟಿಯನ್ನು ಅವನನ್ನು ಹಿಡಿದುಕೊಂಡು ಬರುವಂತೆ ಆದೇಶಿಸಿ ಕಳುಹಿಸಿದ್ದನು.[19]ಆ ಶಾಸನದಲ್ಲಿ ಬೀರರಸನನ್ನು ‘ಸಮಸ್ತ ಭುವನಾಶ್ರಯ, ಪ್ರಥುವೀ ವಲ್ಲಭ, ಮಹಾರಾಜಾಧಿರಾಜ ಪರಮೇಶ್ವರ, ಸತ್ಯಾಶ್ರಯ ಕುಳತಿಳಕ ಪದ್ಮಾವತೀ ದೇವಿ ವರಪ್ರಸಾದಾಸಾದಿತ’ ಮುಂತಾಗಿ ಕರೆಯಲಾಗಿದೆ. ಈ ಬಿರುದುಗಳಲ್ಲಿ ಕೊನೆಯದನ್ನು ಬಿಟ್ಟು ಉಳಿದವೆಲ್ಲ ಚಾಲುಕ್ಯ ಸಾಮ್ರಾಟರ ಬಿರುದುಗಳೆಂಬುದು ಗಮನಾರ್ಹ. ಕೊನೆಯದು ಹೊಂಬುಚದ ಸಾಂತರರ ಬಿರುದಾಗಿದೆ. ಬಹುಶಃ ಈ ಮೂಲಕ ಬೀರರಸನು ಯಾದವ ಆಳ್ವಿಕೆಯಿಂದ ಸ್ವತಂತ್ರನಾಗಲು ಹವಣಿಸಿದ್ದಿರಬಹುದು. ಆ ಯುದ್ಧದ ಪರಿಣಾಮ ಏನಾಯಿತೆಂಬುದು ಸ್ಪಷ್ಟವಿಲ್ಲ. ಏಕೆಂದರೆ ಅದೇ ಶಾಸನದಲ್ಲಿ ಆತನ ಮಗ ಬೊಮ್ಮರಸನು ಹತನಾದ ವೀರನೊಬ್ಬನಿಗೆ ನೆತ್ತರುಗೊಡಗೆ ನೀಡಿದನು. ಅಂದರೆ ಬೀರರಸನು ಆ ಯುದ್ಧದಲ್ಲೇ ಸತ್ತಿರಬಹುದು ಅಥವಾ ಪದಚ್ಯುತನಾಗಿರಬಹುದು. ೧೨೮೩ರ ಎರಡು ಶಾಸನಗಳಲ್ಲಿ ಅಳಿಯ ಬೀರರಸನು ಮಲೆಯ ನಾಯಕರನ್ನು ಕೂಡಿಕೊಂಡು ಹೊಸಗುಂದದ ಮೇಲೆ ದಂಡೆತ್ತಿ ಹೋದ ಉಲ್ಲೇಖವಿದೆ.[20]ಆಗ ಹೊಸಗುಂದದಲ್ಲಿ ಬೊಮ್ಮರಸನ ಮಗ ತಮ್ಮರಸನು ಆಳುತ್ತಿದ್ದನು. ಇವನು ಈ ಹಿಂದೆ ಚರ್ಚಿಸಿದ ಅಳಿಯ ಬೀರರಸನೇ ಆಗಿದ್ದಲ್ಲಿ ಕೆಲ ಪ್ರಶ್ನೆಗಳು ಏಳುತ್ತವೆ. ಮೊದಲನೆಯದಾಗಿ ಏಕೆ ಈ ಬೀರರಸನು ತನ್ನ ಮಗ ಹಾಗೂ ಮೊಮ್ಮಗನಿಂದ ಅಧಿಕಾರ ವಂಚಿತನಾದನು ಹಾಗೂ ಏಕೆ ಅವರ ಮೇಲೆ ಹಗೆತನವನ್ನು ಬೆಳೆಸಿಕೊಂಡನು? ಎಂಬುದು. ಎರಡನೆಯದಾಗಿ ೧೨೩೦ ರ ಸುಮಾರಿಗೆ ಪ್ರಬುದ್ಧಾವಸ್ಥೆಗೆ ಬಂದ ಈತನು ೧೨೮೩ರ ವರೆಗೆ ಯುದ್ಧಗಳಲ್ಲಿ ತೊಡಗಿಕೊಂಡಿರುವುದು ಸಾಧ್ಯವೇ ಎಂಬುದು. ಗಮನಿಸಬೇಕಾದ ವಿಷಯವೆಂದರೆ ಬೊಮ್ಮರಸ ತಮ್ಮರಸರು ತಮ್ಮನ್ನು ಹೊಸಗುಂದದ ಅರಸರೆಂದೇ ಗುರುತಿಸಿಕೊಳ್ಳುತ್ತಾರೆ. ಬಹುಶಃ ಕಂದಾರ ದೇವನ ಕಾಲದಲ್ಲೇ ಬೊಮ್ಮರಸನನ್ನು ಬೀರರಸನ ಬದಲಾಗಿ ಹೊಸಗುಂದದಲ್ಲಿ ಅಧಿಕೃತವಾಗಿ ಸ್ಥಾಪಿಸಿರಬಹುದು.

[1]ಬಿ.ಲೆವಿಸ್ ರೈಸ್,*ಎಫಿಗ್ರಾಫಿಯಾ ಕರ್ನಾಟಿಕಾ*,ಸಂ.೮, ೧೯೦೪, ಮುನ್ನುಡಿ ಪು.೯
[2]ಈ ಶಾಸನಗಳು ಈ ಕೆಳಗಿನ ಸಂಗ್ರಹಗಳಲ್ಲಿ ಸಿಗುತ್ತವೆ: ಎಪಿಗ್ರಾಫಿಯಾ ಕರ್ನಾಟಕ, (ಎ.ಕ). ಸಂ. ೭ ಹಾಗೂ ೮*: ಮೈಸೂರು ಆರ್ಕಿಯಾಲಾಗಿಕಲ್‌ರಿಪೋರ್ಟ್ಸ್*,(ಮೈ.ಆ.ರಿ.) ೧೯೨೩, ೧೯೩೦, ೧೯೩೫, ೧೯೩೧. ೧೯೪೩ ಹಾಗೂ ೧೯೪೪: ಎ.ಕ.*ಸಪ್ಲಿಮೆಂಟರಿವೊಲ್ಯೂಂ*(ಎ.ಕ.ಸ.): ಎರಡು ಶಾಸನಗಳನ್ನು ಶ್ರೀ ಜಗದೀಶ್ ಅಗಸಿಬಾಗಿಲವರ್ ಶಿವಮೊಗ್ಗಾದ ಎಸ್.ಪಿ. ಆಫೀಸಿನ ಸಂಗ್ರಹದಿಂದ ಓದಿ ಕೊಟ್ಟಿದ್ದಾರೆ.
[3]*ಎ.ಕ.*ಸಂ.೮ ಸೊರಬ ಸಂ. ೫೮೬. ಕೋಡಕಣಿ ೧೨೦೮, ಹಾಗೂ*ಎ.ಕ.*ಸಂ. ೭, ಹೊನ್ನಾಳಿ ೮. ಸು. ೧೧೫೦
[4]ಮೈ.ಆ.ರಿ. ೧೯೨೩, ಸಂ ೬೪.
[5]ಎ.ಕ. ೮ ಸಾಗರ ೧೫, ಕ್ರಿ.ಶ. ೧೨೧೫, ೧೫೩ ೧೧೩೪ ಸಾಲೆಕೊಪ್ಪ, ಜಗದೇವ ಸಿಂಗಿದೇವರಸನ ಪಾದ ಪದ್ಮೋಪಜೀವಿ ಬಮ್ಮವೆಗ್ಗಡೆ.
[6]ಮೈ.ಆ ರಿ. ೧೯೩೦, ಸಂ. ೬೭
[7]*ಎ.ಕ.*೮ ಸಾಗರ ೧೧೪. ಬಸವ ನೆಲ್ಲೂರು ಸು. ಕ್ರಿ.ಶ. ೧೧೬೬
[8]ಮೈ.ಆ ರಿ. ೧೯೨೩. ಸಂ. ೧೨೫.
[9]*ಎ.ಕ.*೮ ಸಾಗರ ೧೨೫. ನಾಡಮಂಚಸಾಲೆ ಕ್ರಿ.ಶ. ೧೨೧೭
[10]*ಎ.ಕ.*೮ ಸಾಗರ ೧೫.
[11]*ಎ.ಕ.*೮ ಸಾಗರ ೪. ಮಾಳವಿ.

[12]*ಎ.ಕ.*೮ ಸಾಗರ ೧೪೮, ಹೊಸಗುಂದ ೮೩, ಆವಿನಹಳ್ಳಿ ಸು. ಕ್ರಿ.ಶ. ೧೨೨೫, ೧೩೬ ಹೊಸಗುಂದ ೧೨೨೬ ಬೊಮ್ಮರಸ ತೀರಿದ ವರ್ಷ
[13]*ಎ.ಕ.*೮ ಸೊರಬ ೫೪೦. ಹುನವಳ್ಳಿ ೧೨೩೦-೩೧
[14]*ಎ.ಕ.*೮ ಸಾಗರ ೧೪೬. ಹೊಸಗುಂದ ೧೨೨೯-೩೦
[15]*ಎ.ಕ.*೮ ಸೊರಬ ೫೨೨.
[16]*ಎ.ಕ.*೭ ಹೊನ್ನಾಳಿ ೪೯-೧೨೪೫ ೫೪-೧೨೪೬ ೫೫-೧೨೫೭ ೫೬, ೫೮, ೭೯ ಇದು ಬೊಮ್ಮರಸನದು. ಬೀರರಸನ ಹೆಚ್ಚಿನ ಶಾಸನಗಳು ಕುಳ್ಳಳ್ಳಿಯಲ್ಲಿ ಸಿಗುತ್ತವೆ.
[17]ಗುರುರಾಜ ಭಟ್.*ಸ್ಟಡೀಸ್ ಇನ್‌ತುಳುವ ಹಿಸ್ಟ್ರಿ ಎಂಡ್ ಕಲ್ಚರ್*, ಮಣಿಪಾಲ್ ೧೯೭೫, ಪು.೧೨
[18]*ಎ.ಕ.*೮ ಸೊರಬ ೫೬೧, ಕೋಳಿಸಾಲೆ
[19]*ಎ.ಕ.*೮ ಸಾಗರ ೧೧೯. ಮಲ್ಲಂದೂರು
[20]*ಎ.ಕ.*೮ ಸಾಗರ ೮೫, ೮೬ ಆವಿನಹಳ್ಳಿ

ಮಲೆಕರ್ನಾಟಕದ ಅರಸು ಮನೆತನಗಳು: ೭. ಹೊಸಗುಂದದ ಅರಸರು (೨)

ಅಳಿಯ ಬೀರರಸನ ಮಗ ಹೊಸಗುಂದದ (ಮೂರನೆಯ) ಬೊಮ್ಮರಸ

ಈ ಬೊಮ್ಮರಸನು ೧೨೫೮ರಲ್ಲೇ ಪಟ್ಟಕ್ಕೇರಿದನು. ಆತನನ್ನು ಕೆಲ ಶಾಸನಗಳಲ್ಲಿ ‘ಬೀರ ಭೂಪನ ಪ್ರಿಯ ವಲ್ಲಭೆ ಹೊನ್ನಲದೇವಿಯ’ ಕುಮಾರನೆಂದು ತಿಳಿಸಲಾಗಿದೆ.[1]ಹೊಸಗುಂದದ ಯಾವ ಅರಸರನ್ನೂ ಹೀಗೆ ತಾಯಿಯ ಹೆಸರಿನಿಂದ ಗುರುತಿಸಿಲ್ಲವಾದ್ದರಿಂದ ಈ ಹೊನ್ನಲದೇವಿ ಹೊಸಗುಂದದ ಎರಡನೇ ಬೊಮ್ಮರಸನ ಮಗಳಾಗಿದ್ದಿರಬಹುದು. ಅಳಿಯ ಬೀರರಸನು ಹೊಸಗುಂದದ ಬೊಮ್ಮರಸನ ಅಳಿಯ ಎಂಬ ಉಲ್ಲೇಖಗಳು ಇರುವುದರಿಂದ ಹೀಗೆ ಗ್ರಹಿಸಬಹುದು. ಅಳಿಯ ಬೀರರಸನು ಗಂಡು ಸಂತಾನವಿಲ್ಲದ ಹೊಸಗುಂದಕ್ಕೆ ಅರಸನಾಗಿ ಜವಾಬ್ದಾರಿ ವಹಿಸಿಕೊಂಡು ಅಧಿಕಾರ ವಿಸ್ತರಣೆ ಮಾಡುತ್ತಿರುವಾಗ ಬೊಮ್ಮರಸನನ್ನು ಹೊಸಗುಂದದ ಅಧಿಕೃತ ವಾರಸುದಾರನನ್ನಾಗಿ ಪಟ್ಟ ಕಟ್ಟಿದಂತೆ ತೋರುತ್ತದೆ. ಮತ್ತು ಕೆಲವು ಶಾಸನಗಳಲ್ಲಿ ಬೊಮ್ಮರಸನ ರಾಜ್ಯೋದಯದ ವರ್ಷವನ್ನೂ ಉಲ್ಲೇಖಿಸಲಾಗಿದೆ. ಹಾಗಾಗಿ ಶಾಸನಗಳಲ್ಲಿ ಅಳಿಯ ಬೀರರಸನನ್ನು ಕಲಿಸೆಯ ಅರಸನೆಂದೇ ಉಲ್ಲೇಖಿಸಲಾಗಿದೆ. ೧೨೪೮ ರಲ್ಲಿ ಹೊಂಬುಚದಲ್ಲಿ ಇದ್ದ ಬೊಮ್ಮರಸನು ಇವನೇ ಆಗಿರುವ ಸಾಧ್ಯತೆ ಇದೆ. ಏಕೆಂದರೆ ಈತನು ಪೊಂಬುಚ್ಚಪುರವರಾದೀಶ್ವರ ಎಂಬ ಬಿರುದನ್ನು ಧರಿಸಿದ್ದನು. ಈ ಬೊಮ್ಮರಸನು ತನ್ನ ಕೆಲವು ಶಾಸನಗಳಲ್ಲಿ ಸೋಮನಾಥ ವರಪ್ರಸಾದಾಸಾದಿತನೆಂದು ಕೊಳ್ಳುತ್ತಾನೆ. ಈ ಸೋಮನಾಥ ದೇವರು ಕಲಿಸೆಯದೇ ಎಂಬುವುದರಲ್ಲಿ ಸಂಶಯವಿಲ್ಲ. ಇದರಿಂದ ಆತನು ಕಲಿಸೆಯ ಅಳಿಯ ಬೀರರಸನ ಮಗನೆಂಬುದು ದೃಢಪಡುತ್ತದೆ.

ಬಹುಶಃ ಅಳಿಯ ಬೀರರಸನ ಇಚ್ಚೆಗೆ ವಿರುದ್ದವಾಗಿ ಆತನನ್ನು ಹೊಸಗುಂದದ ಅರಸನನ್ನಾಗಿ ಮಾಡಿದಂತೇ ತೋರುತ್ತದೆ. ಹಾಗಾಗಿ ಬೀರರಸನು ಆತನ ವಿರುದ್ದ ಕೆಲ ಬಾರಿ ದಂಡೆತ್ತಿ ಹೋಗಿದ್ದನು.

ಬೊಮ್ಮರಸನು ಪಟ್ಟವನ್ನೇರಿದಂದಿನಿಂದಲೂ ಕಾದಾಟದಲ್ಲಿ ನಿರತನಾಗಿದ್ದನು. ೧೨೬೨ ರಿಂದ ೧೨೬೫ರ ವರೆಗೆ ತೈಲಪನ ಕುಮಾರ ಕಾವದೇವನ ಪ್ರಧಾನಿ ಕಲ್ಲವೆಗ್ಗಡೆ ಎಂಬವನ ಜೊತೆ ಹೋರಾಡುತ್ತಿದ್ದನು.[2]ಈ ಕಾವದೇವನು ಚಂದಾವೂರು ಕದಂಬರ ವಂಶದವನಾಗಿದ್ದಂತೆ

ತೋರುತ್ತದೆ. ಈ ಕಾಳಗಗಳು ಕೋಡ್ಕಣಿ ಹಾಗೂ ಬರದವಳ್ಳಿಗಳಲ್ಲಿ ನಡೆದವು. ತನ್ನ ಪಟ್ಟಾಭಿಷೇಕದ ೧೨ಮೇ ವರುಷದಲ್ಲಿ ಆತನು ಬಿದಿರೂರ ಮಳಲಿಗೆ ದಾಳಿಯಿಕ್ಕಿ ವಾಪಾಸು ಬರುತ್ತಿರುವಾಗ ಲಿಂಗನಮಕ್ಕಿಯಲ್ಲಿ ಒಂದು ಕಾಳ ನಡೆದದ್ದು ಗೊತ್ತಾಗುತ್ತದೆ.[3]೧೨೬೮ರ ಸುಮಾರಿಗೆ ಆತನು ಶಿವಮೊಗ್ಗ ಬಳಿಯ ಕೂಡಲಿಯನ್ನು ಇರಿದು ತುರುಗಳುವು ಮಾಡಿದ್ದನು.[4]೧೨೭೦-೭೧ ರಲ್ಲಿ ಮಹಾಮಂಡಲೇಶ್ವರ ಅಣ್ಣಮವೆಗ್ಗಡೆಯ ಮೇಲೆತ್ತಿ ಹೋಗಿ ಹೊಸನಗರದ ಬಳಿಯ ಕೋಡೂರು ದುರ್ಗವನ್ನು ಮುರಿದು ಒಳನುಗ್ಗಿದ್ದನು.[5]

ಬೊಮ್ಮರಸನ ಬಿರುದುಗಳಲ್ಲಿ "ಪಶ್ಚಿಮಸಮುದ್ರಾಧಿಪತಿ" ಎಂಬುದು ಆತನು ಚಂದಾವೂರು ಕದಂಬರನ್ನು ಹಿಮ್ಮೆಟ್ಟಿಸಿದ ನಂತರ ಧರಿಸಿದ್ದಾಗಿ ತೋರುತ್ತದೆ. ಈತನ "ಕಾದಂಬರಾಯ ವಿಭಾಡ" ಎಂಬ ಬಿರುದೂ ಈ ಘಟನೆಯನ್ನೇ ಸೂಚಿಸುತ್ತಿರಬಹುದು. ಈತನ "ಸಿಲ್ದ (ಸಿಂಧ?) ಕುಳನಿರ್ಮೂಳನ" ಎಂಬ ಬಿರುದು ಕುತೂಹಲಕಾರಿಯಾಗಿದೆ. ಇದು ಸಿಂಧ ಎಂದಾದರೆ ಬೆಳಗುತ್ತಿಯ ಸಿಂಧರನ್ನೇ ಸೂಚಿಸುತ್ತದೆ. ಆದರೆ ನಮಗೆ ತಿಳಿದ ಹಾಗೆ ಬೆಳಗುತ್ತಿಯ ಸಿಂದರನ್ನು ನಿರ್ಮೂಲನ ಮಾಡಿದವನು ಬೀರರಸನೇ ಹೊರತೂ ಬೊಮ್ಮರಸನಲ್ಲ. ಬಹುಶಃ ಇದು ಬೀರರಸನ ಬಿರುದುಗಳ ಕೇವಲ ಅನುಕರಣೆಯಾಗಿರಬಹುದು. ಏಕೆಂದರೆ ಈತನು ತನ್ನ ಹಿಂದಿನ ಅರಸರಂತೇ ಅವರ ಅನೇಕ ಬಿರುದುಗಳನ್ನು ಧರಿಸಿದ್ದನು. ಅವುಗಳಲ್ಲಿ 'ಹೊನ್ನಕೊಟ್ಟು ಕುದುರೆ ಕಟ್ಟುವ ಮಂಡಳಿಕರ ಗಂಡ' ಎಂಬುದು ಒಂದು.

ಮೂರನೆಯ ಬೀರರಸ ಹಾಗೂ ತಮ್ಮರಸ

ಬೊಮ್ಮರಸನು ೧೨೮೫ರಕ್ಕು ಮೊದಲೇ ನಿಧನ ಹೊಂದಿದಂತೆ ತೋರುತ್ತದೆ.[6]ಬಹುಶಃ ಈತನ ಮರಣ ಪಟ್ಟುಗುಪ್ಪೆಯ ಶಾಸನದಲ್ಲಿ ಸೂಚಿತವಾದಂತೆ ೧೭೨೮ರಲ್ಲಿ ಆಯಿತು. ಈತನ ಮೊದಲನೆ ಮಗ ಬೀರರಸನೆಂಬವನು ೧೨೮೫ರ ವರೆಗೆ ಆಳಿದನು. ಇವನ ಕಾಲದಲ್ಲಿ ಐವತ್ತುನಾಡು ಎಂಬ ಭಾಗವು ಹೊಸಗುಂದದ ಅರಸರ ಕೈತಪ್ಪಿ ಹೋಯಿತು. ೧೨೮೫ ರಲ್ಲಿ ಬೊಮ್ಮರಸನ ಮತ್ತೊಬ್ಬ ಮಗ ತಮ್ಮರಸನು ಹೊಸಗುಂದದ ಉತ್ತರಾಧಿಕಾರಿಯಾದನು ಹಾಗೂ ಅದೇ ವರ್ಷದಲ್ಲೇ ಪಟ್ಟುಗುಪ್ಪೆಯ ಚೆಲ್ಲರ್ಸನ ಜೊತೆ ಈ ಕಾರಣಕ್ಕಾಗಿ ಯುದ್ಧ ಮಾಡಿದನು. ೧೨೮೨-೮೫ ರಲ್ಲಿ ಅಳಿಯ ಬೀರರಸನು ಹೊಸಗುಂದದ ಮೇಲೆ ದಾಳಿ ಮಾಡಿದಾಗ ತಮ್ಮ ರಸನ ದಂಡನಾಯಕ ಕೋಟಿನಾಯಕನು ಅವನನ್ನು ಸಮರ್ಥವಾಗಿ ಎದುರಿಸಿದನು.[7]ತಮ್ಮರಸನ ಸಹೋದರ ಬೀರರಸನು ೧೩೦೦ರ ಸುಮಾರಿಗೆ ಪುಣಜಿಯಲ್ಲಿ ಬಯೇಶ್ವರ ದೇವರಿಗೆ ದಾನ ನೀಡಿದ ಒಂದ ಶಾಸನೋಲ್ಲೇಖವಿದೆ.[8]

ತಮ್ಮರಸನ ಕಾಲದಲ್ಲಿ ಆತನ ಅಧಿಕಾರಿಯಾಗಿ ಸೋಮೆಯ ನಾಯಕ ಹಾಗೂ ಕೋಟಿ ನಾಯಕ ಎಂಬುವನು ತೀರ ಪ್ರಬಲರಾಗಿ ಬೆಳೆದರು. ಸೋಮೆಯ ನಾಯಕನು 'ಮಹಾಪ್ರಧಾನ' ಹಾಗೂ ಇನ್ನೂ ಅನೇಕ ಬಿರುದಾವಳಿಗಳನ್ನು ಧರಿಸಿದ್ದನು. ಕೋಟಿನಾಯಕನು ಆತನ ಸೇನಾದಂಡನಾಯಕನಾಗಿದ್ದನು. ತಮ್ಮರಸನು ತನ್ನ ಹಿರಿಯರು ಧರಿಸಿದ ಅನೇಕ ಬಿರುದುಗಳನ್ನು ಧರಿಸುವುದರ ಜೊತೆಗೇ 'ಲಾಳರಾಯ ಮಾನಮರ್ಧನ' 'ಕದಂಬರಾಯ ವಿಭಾಡ' ಎಂಬ ಬಿರುದುಗಳನ್ನು ಧರಿಸಿದ್ದನು. ೧೨೮೭ರ ಒಂದು ಶಾಸನದಲ್ಲಿ 'ಮಹಾ ಮಂಡಳೇಸ್ವರ ತಮ್ಮರಸನು ಹೊಸಗುಂದದಲ್ಲಿ ಸುಖಸಂಕಥಾವಿನೋಧದಿಂದ ರಾಜ್ಯವಾಳುತ್ತಿದ್ದ'ಂತೆ ಉಲ್ಲೇಖವಿದೆ.[9]

ಸೊಡ್ಡಲದೇವ, ಸೋಮೆಯ ನಾಯಕ ಹಾಗೂ ಕೋಟಿನಾಯಕ

೧೨೮೮ರಲ್ಲೇ ಕೋಟಿನಾಯ್ಕ ಸೋಮೆಯ ನಾಯ್ಕ ಹಾಗೂ ಕುಮಾರ ಸೊಡ್ಡಲದೇವ ಇವರು ಸಾಂತಳಿಗೆಯನ್ನು ಆಳುತ್ತಿದ್ದುದಾಗಿ ಉಲ್ಲೇಖ ಬರುತ್ತದೆ.[10]ಇವರಲ್ಲಿ ಸೊಡ್ಡಲದೇವನು ಹೊಸಗುಂದದ ಅರಸರ ಉತ್ತರಾಧಿಕಾರಿಯಾಗಿದ್ದಂತೆ ತೋರುತ್ತದೆ. ೧೩೦೨ ರ ಒಂದು

ಶಾಸನದಲ್ಲಿ ಆತನಿಗೆ ಹಿಂದಿನ ಅರಸರಿಗಿದ್ದ ಅನೇಕ ಬಿರುದುಗಳನ್ನು ಆರೋಪಿಸಲಾಗಿದೆ. ಆತನನ್ನು 'ವೀರಬಲ್ಲಾಳ ಪಾದಾಂಬೋಜ ಪಸಾಯಿತನಪ್ಪ ಶ್ರೀ ಮನು ಮಹಾಮಂಡಳೇಶ್ವರ' ಎಂದು ವರ್ಣಿಸಲಾಗಿದೆ. ಅಂದರೆ ವೀರಬಲ್ಲಾಳನು ೧೩೦೦ ರಲ್ಲಿ ಹೊಸಗುಂದ ಅರಸೊತ್ತಿಗೆಯನ್ನು ಸಂಪೂರ್ಣ ತನ್ನ ಕೈವಶ ಮಾಡಿಕೊಂಇಡದ್ದನು. ಈ ಸಂದರ್ಭದಲ್ಲಿ ವೀರಬಲ್ಲಾಳನಿಗೂ ಕೋಟಿನಾಯಕನಿಗೂ ಘರ್ಷಣೆ ಬೆಳೆದಿತ್ತು. ಹೊಸಗುಂದದ ಶಾಶನಗಳು ಈ ಕುರಿತು ಆಸಕ್ತಿ ಪೂರ್ಣ ವಿವರಗಳನ್ನು ಹೊರಚೆಲ್ಲುತ್ತವೆ. ಬಹುಶಃ ಕೋಟಿನಾಯಕನು ತಮ್ಮರಸನ ಮರಣಾ ನಂತರ ಆತನ ಉತ್ತರಾಧಿಕಾರಿ ಸೊಡ್ಡಲದೇವನನ್ನು ಬದಿಗೊತ್ತಿ ತಾನೇ ಅಧಿಕಾರಗ್ರಹಣ ಮಾಡಿದ್ದಾಗಿ ತೋರುತ್ತದೆ. ಈ ಕೆಲಸವನ್ನು ಆತನು ಸೋಮೆಯ ನಾಯಕನ ಜೊತೆ ಕೂಡಿಕೊಂಡು ಮಾಡಿರಬಹುದು. ಆದರೆ ನಂತರ ಕ್ರಮೇಣ ತಾನೊಬ್ಬನೇ ಅಧಿಕಾರ ಹಿಡಿದನು. ೧೨೯೦ರಲ್ಲಿ ಕೋಟಿನಾಯಕ ಸೋಮೆನಾಯಕರು ಹದಿನೆಂಟು ಕಂಪಣಗಳನ್ನು ಆಳುತ್ತಿದ್ದರು.[11]ಇವು ವಿಜಯನಗರ ಕಾಲದಲ್ಲಿ ಹೆಸರಿಸುವ ಆರಗ ವೇಂಠೆಯ ಹದಿನೆಂಟು ಕಂಪಣಗಳ ಉಲ್ಲೇಖವೆನ್ನಬಹುದು. ಅದೇ ಕಾಲದ ಕೆಲ ಶಾಸನಗಳಲ್ಲಿ ಕೋಟಿಸೋಮೆ ನಾಯಕ ಎಂದು ಒಂದೇ ವ್ಯಕ್ತಿಯನ್ನು ಸೂಚಿಸಲಾಗಿದೆ. ಜೊತೆಗೇ ಆತನನ್ನು 'ಹೊಂಬುಚ ಪುರವರಾಧೀಶ್ವರ ಸಮಸ್ತ ಪ್ರಶಸ್ತಿ ಸಹಿತ ಮಹಾಮಂಡಲೇಶ್ವರ' ಎಂದು ಕರೆಯಲಾಗಿದೆ. ೧೨೯೩ ರಲ್ಲಿ ಆತನನ್ನು ಮಹಾಮಂಡಲೇಶ್ವರ ಎಂದು ಕರೆದು ಆತನು ಸಾಂತಳಿಗೆ ೧೦೦೦ವನ್ನು ಆಳುತ್ತಿದ್ದನೆಂದು ಹೇಳಲಾಗಿದೆ.[12]೧೨೯೪ರಲ್ಲಿ ಯಾದವರ ದಳವಾಯಿ ಪರಶುರಾಮನು ಇವನ ಮೇಲೆ ದಂಡೆತ್ತಿ ಬಂದಿದ್ದನು. ೧೨೯೪ರಲ್ಲೇ ಆತನಿಗೆ ಹೊಸಗುಂದದ ಅರಸರ ಅನೇಕ ಬಿರುದುಗಳನ್ನು ಆರೋಪಿಸಲಾಗಿದೆ. ಆತನ ಕುಲದೈವ ಕಲಿನಾಥ ದೇವರಾಗಿತ್ತು. ಆತನ ಒಂದು ಬಿರುದು "ವೀರ ಪಂಚ ವರಪ್ರತಿಷ್ಠಾಚಾರ್ಯ", "ಹೊನ್ನ ಕೊಟ್ಟು ಕುದುರೆಯ ಕಟ್ಟುವವರ ಗಂಡ", "ಕೊಂಕಣಿಗ ಬೇಟೆಗಾರ", "ಕದಂಬರಾಯ ವಿಭಾಡ" ಮುಂತಾದ ಬಿರುದುಗಳು ಈತನು ಹೊಸಗುಂದದ ಅರಸೊತ್ತಿಗೆಯನ್ನು ತನ್ನ ವಶದಲ್ಲಿ ತೆಗೆದುಕೊಂಡ ಸೂಚನೆಯಾಗಿವೆ. ೧೨೯೦ ರಲ್ಲಿ ಬಂಕಿನಾಯ್ಕನೆಂಬವನ ಮೇಲೆ ಧಾಳಿ ಮಾಡಿದನು. ೧೨೯೩ರಲ್ಲಿ ಈತನು ಇರುವಂದೂರು ಮಾಳೆಯ ಸಾವಂತನ ಜೊತೆ ಎಡಮಲೆಯಲ್ಲಿ ಕಾದಾಡಿದನು. ಈ ಯೆಡ(ರ) ಮಲೆಯೆಂಬುದು ಸಹ್ಯಾದ್ರಿ ಘಟ್ಟದ ತುದಿಯಲ್ಲಿ ಸಾಂತಳಿಗೆಯ ಪಶ್ಚಿಮದ ಮೇರೆಯಾಗಿದೆ. ಆದರೆ ೧೩೦೦ರ ಸುಮಾರಿಗೆ ವೀರ ಬಲ್ಲಾಳನು ಹೊಸಗುಂದದ ಮೇಲೆ ಧಾಳಿಮಾಡಲು ಪ್ರಾರಂಭಿಸಿದ್ದನು. ಬಲ್ಲಾಳನು ಈ ಧಾಳಿಯನ್ನು ಒಂದು ಆನೆಯ ಸಲುವಾಗಿ ಮಾಡಿದಂತೆ ತೋರುತ್ತದೆ. ಆತನು ಪಂಚಪ್ರಧಾನರ ಸಮೇತ ಹೊಸಗುಂದಕ್ಕೆ ಧಾಳಿ ಮಾಡಿ ಕೋಟಿ ನಾಯಕನನ್ನು ಹಿಡಿದುಕೊಂಡು ಹೋದನು.[13]

ಈತನ ಕಾಲದಲ್ಲಿ ಬಿದಿರೂರಿನಲ್ಲಿ ತಮ್ಮೆಯ ಸಾವಂತನೆಂಬವನು ಆಳುತ್ತಿದ್ದನು. ಈತನು ಹಿರಿಯ ಸುಳಸೆ ಹಾಗೂ ಗಾವಣ ನಾಡುಗಳನ್ನು ಆಳುತ್ತಿದ್ದನು. ಇವನಿಗೂ ಇರುವಂದೂರಿನ ಮಾಳೆಯ ಸಾವಂತನಿಗೂ ಮಧ್ಯದಲ್ಲಿ ತಿಕ್ಕಾಟವಿತ್ತು ಹಾಗೂ ಕೋಟಿನಾಯ್ಕನು ತಮ್ಮೆಯನಿಗೆ ಸಹಾಯ ಮಾಡಿದ್ದನು. ಇವರಿಬ್ಬರೂ ೧೩೦೧ರ ಸುಮಾರಿಗೆ ಒಟ್ಟಾಗಿ ರಾಜ್ಯವಾಳುತ್ತಿದ್ದುದಾಗಿ ತಿಳಿದುಬರುತ್ತದೆ.[14]ಬಹುಶಃ ಬಲ್ಲಾಳನು ಕೋಟಿಯ ನಾಯಕನನ್ನು ಸೆರೆ ಹಿಡಿದ ವರ್ಷವೇ ಬಿಡುಗಡೆ ಮಾಡಿದನು. ಅಷ್ಟರ ನಂತರ ೧೩೦೪ ರಲ್ಲಿ ಆತನು ಸೇತುವಿನಲ್ಲಿ ರಾಜ್ಯಭಾರ ಮಾಡುತ್ತಿದ್ದನು. ೧೩೨೦ರ ವರೆಗೂ ಆತನು ಅಲ್ಲೇ ಇದ್ದುದಾಗಿ ಕಂಡು ಬರುತ್ತದೆ.

ಸೋಮೆಯ ನಾಯಕನು ೧೨೮೭ರಲ್ಲಿ ತಮ್ಮರಸನ ಕಾಲದಲ್ಲಿ ಸಂಡ ಗ್ರಾಮದಲ್ಲಿ ಕಾಳಿಯಘಟ್ಟ ಕಟ್ಟಿಸಿ ಒಂದು ಸುದೀರ್ಘವಾದ ಶಾಸವನ್ನು ನಿಲ್ಲಿಸಿದನು.[15]ಅದರಲ್ಲಿ ಆತನನ್ನು "ಮಹಾಪ್ರಧಾನ", "ಬಾಹತ್ತರ ನಿಯೋಗಾಧಿಪತಿ", "ಮಂಡಳಿಕ ಸ್ಥಾಪನಾಚಾರ್ಯ", "ಮಲ್ಲಿನಾಥ ದೇವರ ಭಕ್ತ", "ಕಲಿಯುಗ ವೀರಭದ್ರ", "ಮಹೇಶ್ವರ ಗಣಾವತಾರ" "ಶಿವರಾಶಿ ದೇವರ ಶಿಷ್ಯ" ಎಂದು ಕರೆಯಲಾಗಿದೆ. ಈ ಬಿರುದುಗಳು ಸೂಚಿಸುವ

ಹಾಗೆ ಸೋಮೆಯ ನಾಯಕನು ೧೩ನೇ ಶತಮಾನದಲ್ಲಿ ಆಗ ತಾನೇ ಪ್ರವರ್ಧಮಾನಕ್ಕೆ ಬರುತ್ತಿದ್ದ ವೀರಶೈವ ಸಂಪ್ರದಾಯದ ಅನುಯಾಯಿಯಾಗಿದ್ದನು. ೧೨೯೦ರ ವರೆಗೆ ಕೋಟಿ ನಾಯಕನ ಜೊತೆ ಕಾಣಿಸಿಕೊಳ್ಳುವ ಈತನು ನಂತರ ಏನಾದ ಎಂಬುದು ಸ್ಪಷ್ಟವಿಲ್ಲ. ೧೩೨೦ರ ಒಂದು ಶಾಸನದ ಪ್ರಕಾರ ವೀರ ಬಲ್ಲಾಳನ ದಂಡನಾಯಕನ ಮಗ ದೇವಪ್ಪನು ಸೋಮೆಯ ನಾಯಕನಿಗೆ ಹೊಸಗುಂದದ ಒಡೆತನವನ್ನು ನೀಡಿದನು.[16]ಅಂದರೆ ಸೋಮೆಯ ನಾಯಕನೂ ಅಷ್ಟು ಕಾಲದವರೆಗೆ ತನ್ನ ಸ್ಥಾನಮಾನಗಳನ್ನು ಉಳಿಸಿಕೊಂಡಿದ್ದನು.

೧೩೨೦ರ ನಂತರ ಹೊಸಗುಂದದ ಅರಸೊತ್ತಿಗೆಯ ವಿಚಾರ ಏನಾಯಿತೆಂದು ತಿಳಿದು ಬರುವುದಿಲ್ಲ. ಆದರೆ ಹೊಸಗುಂದವು ೧೪೧೩ರ ವರೆಗೂ ಒಂದು ಪ್ರಾದೇಶಿಕ ರಾಜಧಾನಿಯಾಗಿತ್ತೆಂದು ಚಿಕ್ಕಬೆಳಗುಂಜಿಯ ಶಾಸನದ ಮೂಲಕ ತಿಳಿದುಬರುತ್ತದೆ. ಗೋವೆ ಚಂದ್ರಗುತ್ತಿಯ ರಾಜ್ಯವನ್ನು ಅರಸಪ್ಪನು ಆಳುತ್ತಿದ್ದಾಗ, ಹಂದಿ ನಾಯಕನು ಹೊಸಗುಂದದ ಮೇಲೆ ಧಾಳಿಮಾಡಿದ್ದನು.

೪. ಕೆಲ ಚಿಕ್ಕಪುಟ್ಟ ಸ್ಥಾನಿಕ ಮನೆತನಗಳು

೧೧೬೪ರಲ್ಲಿ ಆವಿನಹಳ್ಳಿಯಲ್ಲಿ ಬಿಲ್ಲವೆಗ್ಗಡೆಯ ಪ್ರಧಾನ ಸಿಂಗವೆಗ್ಗಡೆ ಎಂಬವನಿದ್ದನು. ಹೊಸಗುಂದ ಹಾಗೂ ಕಲಿಸೆಗಳನ್ನು ಬಿಟ್ಟರೆ ಇನ್ನೂ ಅನೇಕ ಚಿಕ್ಕಪುಟ್ಟ ಮನೆತನಗಳೂ ಈ ಪ್ರದೇಶದಲ್ಲಿ ಇದ್ದವು. ಅವುಗಳಲ್ಲಿ ಬಿದಿರೂರು ಪ್ರಮುಖವಾದುದು. ಅಲ್ಲಿ ೧೨೫೩ ರಲ್ಲಿ ಆಳುತ್ತಿದ್ದ ಈಡು ಸಾವಂತ, ೧೨೯೩ರಲ್ಲಿ ಇದ್ದ ತಮ್ಮೆಯ ಸಾವಂತರ ಕುರಿತು ತಿಳಿದು ಬರುತ್ತದೆ. ಇವರು ಹಿರಿಯಸುಳಸೆ ಮತ್ತು ಗಾವಣ ನಾಡುಗಳನ್ನು ಆಳುತ್ತಿದ್ದರು ಹಾಗೂ ತಮ್ಮನ್ನು ಮಹಾಮಂಡಳೇಶ್ವರರೆಂದು ಕರೆದುಕೊಂಡಿದ್ದರು.[17]೧೪೧೦ರ ಶಾಸನವೊಂದರ ಪ್ರಕಾರ ಇವರೂ ಅದಿಯರ ಬಳಿಯವರೇ ಆಗಿದ್ದರು. ಈ ಬಳಿಗೆ ಸೇರಿದ ರಾಮನಾಯ್ಕ ಎನ್ನುವವನು ಅದೀಸ್ವರ ದೇವಾಲಯವನ್ನು ಕಟ್ಟಿಸಿದನು. ಇಂದಿನ ನಗರ ತಾಲ್ಲೂಕಿನ ಪಟ್ಟುಗುಪ್ಪೆಯಲ್ಲೂ ತಮ್ಮನ್ನು ಮಹಾಮಂಡಳೇಶ್ವರರೆಂದು ಗುರುತಿಸಿಕೊಂಡ ಒಂದು ವಂಶ ಇತ್ತು. ಸುಮಾರು ೧೨೭೦ ರಿಂದ ೧೨೯೭ರ ವರೆಗಿನ ಅವಧಿಯಲ್ಲಿ ಚೋಕರ್ಸ, ಚೆಲ್ಲರ್ಸ ಹಾಗೂ ತೈಲರ್ಸ ಎಂಬ ಮೂರು ತಲೆಮಾರಿನ ಅರಸರು ಉಲ್ಲೇಖಿತರಾಗಿದ್ದಾರೆ.[18]ಸುಮಾರು ೧೨೬೫-೭೦ ರಲ್ಲಿ ಅಣ್ಣಮವೆಗ್ಗಡೆ ಎಂಬವನು ಕೋಡೂರು ದುರ್ಗದಲ್ಲಿ ಆಳುತ್ತಿದ್ದಂತೆ ತೋರುತ್ತದೆ. ೧೨೯೩ರಲ್ಲಿ ಹಾಲುಗೆದ್ದೆಯ ನಾಗದೇವರಸ ಗಾವುಂಡನನ್ನು "ಶ್ರೀಮತು ಸಮುದ್ರಾಧಿಪತಿ" ಎಂದು ಕರೆಯಲಾಗಿದೆ. ಈತನಿಗೂ ಇರುವಂದೂರಿನ ಮಾಳೆಯ ಸಾವಂತನಿಗೂ ಯುದ್ಧವಾಯಿತು. ೧೩೦೪ ರಲ್ಲಿ ಅದಿಯರ ಬಳಿಯವನೇ ಆದ ದೇಕರಸನು ಸೇತುವಿನಲ್ಲಿ ಆಳುತ್ತಿದ್ದನು. ಇವರಲ್ಲಿ ಕೆಲವರು ಹೊಸಗುಂದದ ಅರಸರಿಗೆ ನಿಷ್ಠೆಯನ್ನು ತೋರಿಸಿದರೆ ಇನ್ನೂ ಕೆಲವರು ಹೊಸಗುಂದದ ಅರಸರ ಅಂಕೆಯಲ್ಲಿ ಬರಲಿಕ್ಕೆ ಪ್ರತಿರೋಧಿಸುತ್ತಿದ್ದರು.

೫. ರಾಜ್ಯ ನಿರ್ಮಾಣ ಪ್ರಕ್ರಿಯೆ ಮತ್ತು ಇವರ ಸಾಂಸ್ಕೃತಿಕ ನೀತಿಯ ವೈಶಿಷ್ಟ್ಯತೆಗಳು

ಹೊಸಗುಂದದ ಅರಸರ ಆಳ್ವಿಕೆಯ ವೈಶಿಷ್ಟ್ಯತೆಗಳಲ್ಲಿ ಕೆಲವನ್ನು ಈ ಕೆಳಗಿನಂತೆ ಗುರುತಿಸಬಹುದು. ೧)ಈ ಅರಸರು ತಮ್ಮನ್ನು ಮಂಡಳೇಶ್ವರರೆಂದು ಕರೆದುಕೊಂಡರೂ ಯಾವ ಸಾಮ್ರಾಜ್ಯಗಳಲ್ಲೂ ತಮ್ಮನ್ನು ವ್ಯವಸ್ಥಿತವಾಗಿ ಗುರುತಿಸಿಕೊಳ್ಳಲಿಲ್ಲ. ಈ ದುರ್ಗಮ ಅರಣ್ಯ ಪ್ರದೇಶದಲ್ಲಿ ಸಾಮ್ರಾಜ್ಯಗಳ ಅಸ್ತಿತ್ವವನ್ನು ಸಂಪೂರ್ಣ ಒಪ್ಪಿಕೊಳ್ಳದೇ ಇರುವುದೂ ಇವರಿಗೆ ಸಾಧ್ಯವಿತ್ತು. ೨) ಮಧ್ಯಕಾಲೀನ ರಾಜ್ಯಸಂಸ್ಕೃತಿಯ ಅನೇಕ ಅಂಶಗಳು ಇವರಲ್ಲಿ ಕಂಡುಬರುವುದಿಲ್ಲ. ಇವರಿಗೆ ಒಂದು ವಂಶಾವಳಿ ಇರಲಿಲ್ಲ. ಹಾಗಾಗಿ ಉತ್ತರಾಧಿಕಾರತ್ವ ಇವರಲ್ಲಿ ತೀರಾ ಅನಿಶ್ಚಿತವಾಗಿತ್ತು. ೩) ಇವರು ತಮ್ಮ ರಾಜತ್ವದ ಪ್ರತಿಷ್ಠೆಯನ್ನು ದೇವಾಲಯಗಳ, ಮಠಗಳ, ಅಗ್ರಹಾರಗಳ ಪೋಷಣೆ ಮಾಡುವ ಮೂಲಕ ಆಚರಿಸಲಿಲ್ಲ.

ಇವರಲ್ಲಿಲ್ಲದ ಈ ಮೇಲಿನ ಲಕ್ಷಣಗಳು ಬನವಾಸಿ ೧೨೦೦೦ದ ಅರಸೊತ್ತಿಗೆಗಳಲ್ಲಿ ಹಾಗೂ ಸಾಂತಳಿಗೆಯಲ್ಲೇ ಸಾಂತರರಲ್ಲಿ ಕಂಡುಬರುತ್ತವೆ. ಹೊಸಗುಂದದ ಅರಸರು ಇವುಗಳಲ್ಲಿ ಕೆಲವು ಲಕ್ಷಣಗಳನ್ನು ಮೈಗೂಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿದ್ದರು. ಉದಾಹರಣೆಗೆ ಮೂರನೇ ಬೊಮ್ಮರಸನ ಕಾಲದ ಶಾಸನಗಳಲ್ಲಿ ಅವರ ಹೆಸರಿನ ಸಂಸ್ಕೃತೀಕರಣವಾಗಿ ವೀರ, ಬ್ರಹ್ಮ ಎಂಬ ರೂಪ ತಳೆಯುತ್ತವೆ. ೧೨೮೭ ರ ತಮ್ಮರಸನ ಕಾಲದ ಸೋಮೆಯ ನಾಯಕನ ಶಾಸದಲ್ಲಿ ಪ್ರಪ್ರಥಮ ಬಾರಿಗೆ ಈ ಅರಸರನ್ನು ರಾಜವಂಶಾವಳಿಯೊಳಗೆ ಗುರುತಿಸುವ ಪ್ರಯತ್ನ ನಡೆಯಿತು.[19]ಈ ಶಾಸನದ ಪ್ರಾರಂಭ "ನಮಸ್ತುಂಗ..." ಶ್ಲೋಕದಿಂದ ಆಗುತ್ತದೆ. ನಂತರ ಚಾಳುಕ್ಯಾನ್ವಯ ಎಂಬುದೊಂದು ಆಗಿಹೋಗಿದೆ, ಅದರಲ್ಲಿ ಸಾಂತರಸರೂ ಅವತರಿಸಿದರು ಎಂದಿದೆಯೇ ಹೊರತೂ ಈ ಅರಸರ ವಿವರಗಳು ಇಲ್ಲ. ಸಾಂತರರಿಂದ ಬ್ರಹ್ಮನು (ಮೂರನೇ ಬೊಮ್ಮರಸ) ಅಧಿಕಾರ ಪಡೆಯುತ್ತಾನೆ. ಬ್ರಹ್ಮನ ಬಿರುದಾವಳಿಗಳು ಯಾವುವೂ ಇಲ್ಲಿ ಇಲ್ಲ. ನಂತರ ಆತನ ಮಗ ತಮ್ಮರಸನ ಹೆಸರನ್ನು ಸಂಸ್ಕೃತೀಕರಿಸಲಾಗಿದೇ ಹಾಗೇ ಇಡಲಾಗಿದೆ. ಆದರೆ ಆತನಿಗೆ ದೀರ್ಘ ಬಿರುದಾವಳಿಯನ್ನು ಆರೋಪಿಸಲಾಗಿದೆ. ನಂತರ ಸೋಮೆನಾಯಕನ ಬಿರುದಾವಳಿಗಳು ಬರುತ್ತವೆ. ಈ ಶಾಸನದ ಮೂಲಕ ಸೋಮೆಯನಾಯಕನು ತನ್ನನ್ನು ವೈಭವೀಕರಿಸಿಕೊಳ್ಳಲು ಪ್ರಯತ್ನಿಸುವುದು ಗಮನಾರ್ಹವಾಗಿದೆ. ಈ ಶಾಸನ ಸಿಕ್ಕ ಪುನೇದಹಳ್ಳಿ ಬನವಾಸಿ ೧೨೦೦೦ ದ ಗಡಿ ಪ್ರದೇಶವಾಗಿದೆ.

ಸಾಂತಳಿಗೆಯ ಒಳಗೇ ಇಂತಹ ಒಂದು ಪ್ರಯತ್ನ ೧೨೧೮ ರಷ್ಟು ಹಿಂದೇ ನಡೆದಿತ್ತು.[20]ಕಲಿಸೆಯ ಬಾಳೆಯಮ್ಮವೆಗ್ಗಡೆ ಸೋಮನಾಥ ದೇವಾಲಯವನ್ನು ಕಟ್ಟಿಸಿ ತನ್ನ ಪ್ರಶಸ್ತಿ ಶಾಸನಗಳನ್ನು ಬರೆಸಿದ್ದನು. ಅದರಲ್ಲಿ ತನ್ನ ವಂಶಾವಳಿಯನ್ನು ತಾಯಿಯ ಕಡೆಯಿಂದ ಹೊಸಗುಂದದ ಮೊದಲನೇ ಬೊಮ್ಮರಸನವರೆಗೆ ಗುರುತಿಸುತ್ತಾನೆ. ಆದರೆ ಇದೊಂದು ಪಿತೃಪ್ರಧಾನ ವಂಶಾವಳಿ ಅಲ್ಲದ್ದರಿಂದಲೋ ಅಥವಾ ಸಾಂತರರಿಗೂ ಇವರಿಗೂ ವಂಶ ಸಂಬಂಧ ಸಾಧ್ಯವಾಗಿರದ್ದರಿಂದಲೋ ಏನೋ ನಾಲ್ಕನೆಯ ಬೊಮ್ಮರಸನ ಕಾಲದವರೆಗೂ ಮತ್ತೊಮ್ಮೆ ಈ ಅರಸರು ತಮ್ಮ ವಂಶಾವಳಿಯಲ್ಲಿ ಆಸಕ್ತಿ ತೋರಿಸಲಿಲ್ಲ. ಕೋಟಿನಾಯಕನು ಹೊಸಗುಂದವನ್ನು ವಶಕ್ಕೆ ತೆಗೆದುಕೊಂಡ ಮೇಲಂತೂ ವಂಶಾವಳಿಯ ಸಾಧ್ಯತೆ ಮತ್ತೂ ಕಷ್ಟವಾಯಿತು.

ಈ ಅರಸರ ಕಾಲದ ಕೆಲ ದೇವಾಲಯಗಳು ಉತ್ತಮವಾದ ಮಾದರಿಗಳಾದರೂ ಅವುಗಳನ್ನು ಹೊಸಗುಂದದ ಅರಸರೇ ಕಟ್ಟಿಸಿ ದಾನ ಕೊಟ್ಟ ಮಾಹಿತಿಗಳಿಲ್ಲ. ಬಾಳೆಯಮ್ಮವೆಗ್ಗಡೆ ಕಟ್ಟಿಸಿದ ಸೋಮನಾಥ ದೇವಾಲಯಕ್ಕೂ ಭೂಮಿದಾನ ನೀಡಿದ ಶಾಸನೋಲ್ಲೇಖವಿಲ್ಲ. ಅಳಿಯಬೀರರಸನು ಅಭಿನವ ಶ್ರೀಶೈಲ ಎನಿಸಿದ ಸೊನ್ನಲಿಗೆಯ ಕಪಿಲಸಿದ್ಧ ಮಲ್ಲಿಕಾರ್ಜುನ ದೇವರಿಗೆ ದಾನ ಕೊಟ್ಟ ಸ್ಥಳವೂ ಕೂಡ ಬನವಾಸಿ ೧೨೦೦೦ದ ಗಡಿಯಲ್ಲೇ ಇದೆ. ಈ ದಾನ ಶಾಸನವು ಹೊಸಗುಂದದ ಅರಸರದೇ ಆದ ಏಕೈಕ ದೇವದಾನ ಶಾಸನವಾಗಿದೆ.[21]ಈ ಶಾಸನದಲ್ಲಿ ಬೀರರಸನ ಬಿರುದುಗಳಲ್ಲಿ "ಸಾಹಿತ್ಯ ರತ್ನಾಕರ", "ಆಶ್ರಿತ ಜನ ಹೃತ್ಸರೋಜಿನೀವಿರಾಜಿತ", "ಆಶ್ರಿತಜನ ಚಿಂತಾಮಣಿ" ಎಂಬ ಬಿರುದುಗಳು ಒಂದು ಮಧ್ಯಕಾಲೀನ ರಾಜತ್ವದ "ಆಶ್ರಯ ದಾತ" ಕಲ್ಪನೆಯನ್ನು ಈ ಅರಸನಿಗೆ ಆರೋಪಿಸುವ ಪ್ರಯತ್ನವನ್ನು ಪ್ರತಫಲಿಸುತ್ತದೆ. ಆದರೆ ಈ ಅರಸರು ಮತ್ತೆಲ್ಲೂ ಇಂಥ ಪ್ರಯತ್ನವನ್ನು ಮಾಡಲಿಲ್ಲ. ಇವರ ಪ್ರಧಾನನಾದ ಸೋಮೆನಾಯಕನು ಸಂಡದಲ್ಲಿ ಕಾಳಿಯಘಟ್ಟ ಕಟ್ಟಿಸಿ ಅನೇಕ ಅಗ್ರಹಾರಗಳ ಸಮ್ಮುಖದಲ್ಲಿ ಅಗುಂದದ ಬ್ರಾಹ್ಮಣರಿಂದ ಪಡೆದ ಭೂಮಿಯನ್ನು ದಾನನೀಡುತ್ತಾನೆ. ೧೪೯೮ರಲ್ಲಿ ಕೋಟಿನಾಯಕನು ತಾರೆ ಗ್ರಾಮದಲ್ಲಿ ತಮ್ಮೆಯ ಸಾವಂತನ ಜೊತೆ ಸೇರಿಕೊಂಡು ವಿಠ್ಠಲದೇವರನ್ನು ಹಾಗೂ ಆತನ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಿದನು. ಈ ಸಂದರ್ಭದಲ್ಲಿ ಹಾರುವಿಗೊಪ್ಪದ ವಾಮನ ಹೆಬ್ಬಾರುವರ ಮಗ ರಾಯ ರಾಜಗುರು ಭಟ್ಟಾಚಾರ್ಯರ ದೀಕ್ಷಾಪುತ್ರ ವಿಠ್ಠಯ್ಯ ಸೇನಬೋವನಿಗೆ ೩ ಸಿವನೆ, ೧ ಹೊದ

ಭೂಮಿಯನ್ನು ದಾನ ನೀಡಿದನು.[22]ವಿಠಲ ದೇವತೆಗೆ ಮಲೆನಾಡಿನಲ್ಲಿ ನೀಡಿದ ಅತೀ ಪ್ರಾಚೀನ ದಾನ ಹಾಗೂ ಆತನ ಪ್ರತಿಷ್ಠೆಯ ಉಲ್ಲೇಖ ಇದಾಗಿದೆ.

ಇವರು ಕೊಟ್ಟ ದಾನಗಳೆಲ್ಲ ಗತಿಸಿದ ವೀರರ ಸಂಬಂಧಿಗಳಿಗೆ ನೀಡಿದ ಉಂಬಳಿ, ನೆತ್ತರ ಕೊಡಿಗೆ, ಹೆಣ್ಣು ದಾನ (ಸತಿ ಹೋದವರ ಸಂಬಂಧಿಗಳಿಗೆ) ಮುಂತಾದವುಗಳಿವೆ. ಭೂಮಿದಾನವನ್ನು ಉಂಬಳಿ ಹಾಗೂ ಹೆಣ್ಣುದಾನವನ್ನು ಕಂಬಳ ಎಂದೂ ಸೂಚಿಸಲಾಗಿದೆ. ಭೂ ದಾನವನ್ನು ಒಂದೆರಡು ಸಿವನೆ ಅಥವಾ ಮತ್ತರು ಭೂಮಿಗಳ ರೂಪದಲ್ಲಿ ಕೊಡುತ್ತಿದ್ದರು. ಈ ಅರಸರು ಅಗ್ರಹಾರಗಳನ್ನು ಸ್ಥಾಪಿಸಲಿಲ್ಲ ಹಾಗೂ ಅವುಗಳಿಗೆ ದಾನವನ್ನು ನೀಡಿದಂತೆಯೂ ಕಾಣುವುದಿಲ್ಲ. ಬದಲಾಗಿ ಮೊದಲನೇ ಬೀರರಸನು ಅಂಧಾಸುರದ ಅಗ್ರಹಾರದ ಮೇಲೆ ಧಾಳಿಮಾಡಿದ ಉಲ್ಲೇಖ ಇದೆ. ಇವರು ಕೆಲ ಶೈವ ಮುನಿಗಳಿಗೆ ಪೋಷಣೆ ನೀಡಿದ ಉಲ್ಲೇಖ ಇದ್ದರೂ ದಟ್ಟ ಮಲೆನಾಡಿನ ಇವರ ರಾಜ್ಯದ ಕೇಂದ್ರ ಭಾಗದಲ್ಲೇ ಇವರು ಅಂಥದೊಂದು ಸಂಸ್ಕೃತಿಯನ್ನು ನೆಲೆನಿಲ್ಲಿಸಲು ಪ್ರಯತ್ನಿಸಿದಂತಿಲ್ಲ. ಇವರಿಗೂ ಮೊದಲನ ಸಾಂತರ ರಾಜರು ಇದಕ್ಕೂ ದಟ್ಟ ಮಲೆನಾಡಿನ ಭಾಗದಲ್ಲಿ ಜೈನ ಮಠ ಮತ್ತು ದೇವಾಲಯಗಳನ್ನು ಪೋಷಿಸುತ್ತಾ ತಮ್ಮ ರಾಜ್ಯವನ್ನು ನೆಲೆ ನಿಲ್ಲಿಸಿದ್ದನ್ನು ಗಮನಿಸಿ ಈ ವಿಷಯವನ್ನು ಪರಿಶೀಲಿಸಬಹುದು. ಒಂದು ಉಲ್ಲೇಖಾರ್ಹ ವಿಷಯವೆಂದರೆ ಈ ಕಾಲದಲ್ಲಿ ಕರ್ನಾಟಕದಲ್ಲಿ ತಲೆ ಎತ್ತುತ್ತಿದ್ದ ವೀರಶೈವ ಸಂಪ್ರದಾಯ ಈ ಮಲೆನಾಡಿನ ಗಡಿಭಾಗದಲ್ಲೂ ಪ್ರಸಾರವಾಗುತ್ತಿದ್ದಿತ್ತು.

೬. ಹೊಸಗುಂದದ ಅರಸರ ಕಾಲದ ಸಾಂತಳಿಗೆ

ಐತಿಹಾಸಿಕ ಭೂಗೋಲ : (ನಗಾಶೆ ನೋಡಿ) ಹೊಸಗುಂದದ ಅರಸರು ಆಳಿದ ಪ್ರದೇಶವು ಇಂದಿನ ಶಿವಮೊಗ್ಗಾದ ದಟ್ಟ ಮಾಲೆನಾಡಲ್ಲಿ ಬರುತ್ತದೆ. ಇದನ್ನು ಭೌಗೋಲಿಕವಾಗಿ ಮೇಲಿನ ಹಾಗೂ ಕೆಳಗಿನ ಸಾಂತಳಿಗೆಗಳೆಂದು ಗುರುತಿಸಲಾಗಿತ್ತು. ಅಂದರೆ ಪಶ್ಚಿಮ ಘಟ್ಟಗಳಿಗೆ ಹೊಂದಿಕೊಂಡು ಶರಾವತಿ ಪಾತ್ರದ ತಗ್ಗಿನ ಪ್ರದೇಶವನ್ನು ಕೆಳ ಸಾಂತಳಿಗೆಯೆಂದೂ ಕುಮುದ್ವತಿ ಹಾಗೂ ವರದಾ ನದಿಗಳ ಜಲಾನಯನದ ಎತ್ತರ ಪ್ರದೇಶವನ್ನು ಮೇಲು ಸಾಂತಳಿಗೆಯೆಂದೂ ಗುರುತಿಸಿದ್ದರು. ಕೆಳ ಸಾಂತಳಿಗೆಯು ಸಾಂತರ ಅರಸರ ಕೇಂದ್ರಸ್ಥಾನವಾಗಿ ಹೊಂಬುಚದಂಥ ಪಟ್ಟಣಗಳಿಂದ ಹೆಚ್ಚು ಜನವಸತಿಗಳನ್ನು ಹೊಂದಿತ್ತು. ಮೇಲು ಸಾಂತಳಿಗೆಯು ಸ್ಥೂಲವಾಗಿ ಇಂದಿನ ಸಾಗರ ತಾಲ್ಲೂಕನ್ನು ಒಳಗೊಂಡಿತ್ತು. ಒಟ್ಟಾರೆಯಾಗಿ ಮೇಲು ಸಾಂತಳಿಗೆಯು ದುರ್ಗಮ ಜನರಹಿತ ಪ್ರದೇಶವಾಗಿದ್ದರೂ ಇದರಲ್ಲಿ ಬರುವ ಕುಂದನಾಡು ಹಾಗೂ ಕೊಡನಾಡಗಳು ಹೆಚ್ಚು ಅಭಿವೃದ್ಧಿ ಹೊಂದಿದ್ದವು. ಹಾಗಾಗೇ ಹೊಯ್ಸಳರು ಈ ನಾಡುಗಳಿಗೇ ಪ್ರತ್ಯೇಕ ಅರಸೊತ್ತಿಗೆಯನ್ನು ಮಾನ್ಯ ಮಾಡಿದ್ದರು ಎಂದು ತೋರುತ್ತದೆ. ಶರಾವತಿ ನದೀ ಕಣಿವೆಯ ಪ್ರದೇಶದಲ್ಲಿ ಹಿರಿಯ ತುಳಸೆ, ಗಾವಣನಾಡು, ಸೇತುನಾಡು, ಮುಂತಾದ ನಾಡುಗಳಿದ್ದವು. ಇವುಗಳ ಪಶ್ಚಿಮಕ್ಕೆ ಘಟ್ಟದ ತುದಿಗೆ ಎಡಮಲೆ ಎಂದೆನ್ನುತ್ತಿದ್ದರು. ಇಂದಿನ ಕಾರ್ಗಲ್ಲಿನ ಸಮೀಪದ ಬಿದಿರೂರು ಒಂದು ಸ್ಥಾನಿಕ ಆಳ್ವಿಕೆಯ ಕೇಂದ್ರವಾಗಿತ್ತು. ಇವಲ್ಲದೇ ಸಾಂತಳಿಗೆಯ ಮಧ್ಯ ಭಾಗದಲ್ಲಿ ಬಲೆನಾಡು, ಬಡಗಿನಾಡು, ಕಬ್ಬುನಾಡು, ಮುಂತಾದ ನಾಡುಗಳು ಇದ್ದವು. ಬನವಾಸಿ ೧೨೦೦೦ ದ ಗಡಿಯಲ್ಲಿ ಎಡೆನಾಡು ಹಾಗೂ ಜಿಡ್ಡುಳಿಗೆ ನಾಡುಗಳಲ್ಲಿ ಕೂಡ ಹೊಸಗುಂದದ ಅರಸರು ಕೆಲ ಭಾಗಗಳ ಮೇಲೆ ತಮ್ಮ ಅಧಿಕಾರವನ್ನು ವಿಸ್ತರಿಸುವ ಪ್ರಯತ್ನದಲ್ಲಿದ್ದರು. ೧೪೯೦ರ ಒಂದು ಶಾಸನದ ಪ್ರಕಾರ ಸಾಂತಳಿಗೆಯಲ್ಲಿ ೧೮ ಕಂಪಣಗಳಿದ್ದವು.[23]ಕಂಪಣ ಶಬ್ದವನ್ಉ ನಾಡು ಎಂಬರ್ಥದಲ್ಲಿ ೧೨ನೇ ಶತಮಾನದಿಂದಲೇ ಬಳಸಿದರೂ ನಾಡುಗಳಿಗೆ ಕಂಪಣವೆಂಬ ಅಧಿಕೃತ ಪರಿಭಾಷೆಯು ೧೩-೧೪ನೇ ಶತಮಾನದಲ್ಲಿ ಗಟ್ಟಿಯಾಯಿತು. ಇವೇ ಮುಂದೆ ಆರಗ ೧೮ ಕಂಪಣಗಳೆಂದು ಪ್ರಸಿದ್ಧವಾದವು. ಹೊಸಗುಂದದ ಅರಸರು ಬನವಾಸಿ ೧೨೦೦೦ ಪ್ರದೇಶದ ಬಳ್ಳವೆ ೭೦ ಎಂಬ ಇಂದಿನ ಹೊನ್ನಾಳಿ ತಾಲ್ಲೂಕಿನ ಭಾಗಗಳನ್ನು ೧೨೪೫ ರಿಂದ ಆಳಿದ್ದರು.

ಅರಣ್ಯಾವೃತವಾದ ಈ ಭಾಗದಲ್ಲಿ ಹೊಂಬುಚ, ಅಂಧಾಸುರ ಮುಂತಾದ ಸ್ಥಳಗಳು ೧೧-೧೨ನೇ ಶತಮಾನದಲ್ಲೇ ರಾಜಧಾನಿ ಪಟ್ಟಣಗಳಾಗಿ ಸಮೃದ್ಧ ಕೃಷಿ ವಲಯಗಳಾಗಿ ಬೆಳೆದಿದ್ದವು. ಬನವಾಸಿ ೧೨೦೦೦ ಕ್ಕೆ ತಾಗಿಕೊಂಡ ಭಾಗಗಳಲ್ಲಿ ಕೆರೆ ನೀರಾವರಿಯಿಂದ ಕೃಷಿ ಪ್ರದೇಶಗಳಾಗಿದ್ದ ಹಳ್ಳಿಗಳಿದ್ದವು. ೧೦೪೩ರ ಅಂಧಾಸುರದ ಶಾಸನವೊಂದು ಸಾಂತಳಿಗೆ ಸಾಸಿರದ ಬೆಳೆಗಳಾದ ಕಬ್ಬು, ಬತ್ತ, ಎಲೆ, ಅಡಕೆ, ತೆಂಗು, ಮಾವು, ಮೆಣಸು, ಅರಸಿನ, ಏಲಕ್ಕಿ, ಬಾಳೆ ಮುಂತಾದ ಬೆಳೆಗಳನ್ನೂ, ಕೋಡಾನೆಗಳನ್ನೂ ಈ ಪ್ರದೇಶದ ಸಂಪತ್ತೆಂದು ವರ್ಣಿಸುತ್ತದೆ. ಇಲ್ಲಿನ ಹಳ್ಳಿಗಳಲ್ಲಿ ಅನೇಕ ಕೆರೆಗಳ ಉಲ್ಲೇಖವೂ ಬರುತ್ತದೆ. ಆದರೆ ಹೊಸಗುಂದದ ಸುತ್ತ ಮುತ್ತಲ ಪ್ರದೇಶವು ಹೀಗೆ ಬೆಳೆದಿದ್ದರ ಸ್ಪಷ್ಟ ಉಲ್ಲೇಖಗಳಿಲ್ಲ. ಸಿಗುವ ಅಲ್ಪಸ್ವಲ್ಪ ವಿವರಗಳು ಹೊಸಗುಂದ, ಬಿದಿರೂರು ಮುಂತಾದ ಒಂದೆರೆಡು ಪಟ್ಟಣಗಳನ್ನು ಹಾಗೂ ಅನೇಕ ಹಳ್ಳಿಗಳನ್ನೂ ಉಲ್ಲೇಖಿಸುತ್ತವೆ. ಇಲ್ಲಿನ ಹಳ್ಳಿಗಳಲ್ಲಿ ಬತ್ತದ ಗದ್ದೆಗಳು ಸಾಮಾನ್ಯವಾಗಿ ನೆತ್ತರು ಕೊಡುಗೆಯ ಸಂದರ್ಭದಲ್ಲಿ ಉಲ್ಲೇಖಿತವಾಗುತ್ತವೆ. ತೋಟ, ಪೊರಡು ಮುಂತಾದ ಭೂವಿವರಗಳು ಅಪರೂಪಕ್ಕೆ ಕಾಣಸಿಗುತ್ತವೆ. ಈ ಹಳ್ಳಿಗಳಲ್ಲಿ ರಾಜ್ಯದ ಆಡಳಿತ ವ್ಯವಸ್ಥೆಯ ಪ್ರತಿಬಿಂಬವಾಗಿ ಮಹಾಮಂಡಳೇಶ್ವರರು, ಸಾವಂತರು, ಮನ್ನೆಯರು, ಹೆಗ್ಗ್ಗಡೆಗಳು, ನಾಯಕರು, ಗಾವುಂಡರು, ಪಡವಳರು ಮುಂತಾದವರ ಜೊತೆಗೇ ಸೇನಬೊವರು, ಹಳ್ಳಿನಾಡ ಸಮಸ್ತರು ಅಥವಾ ಹಲರು ಇಲ್ಲಿ ಕಾಣಿಸಿಕೊಳ್ಳುತ್ತಾರೆ. ಇಲ್ಲಿ ಕಾಣಿಸಿಕೊಳ್ಳದ ಎರಡು ವರ್ಗಗಳೆಂದರೆ ಮಹಾಜನರ ಹಾಗೂ ವರ್ತಕರು. ಸೆಟ್ಟಿಗಳ ಉಲ್ಲೇಖ ಬಂದರೂ ಅವರು ವೀರರಾಗಿ ಕಾಣಿಸಿಕೊಳ್ಳುತ್ತಾರೆ. ಬಹುಶಃ ಇವರ ಶಾಸನಗಳೆಲ್ಲ ವೀರಗಲ್ಲುಗಳೇ ಆಗಿರುವುದೂ ಇದಕ್ಕ ಕಾರಣವಿರಬಹುದು. ಇಲ್ಲಿನ ಅರಣ್ಯವೂ ಈ ರಾಜರಿಗೆ ಒಂದು ಸಂಪತ್ತಾಗಿತ್ತೆಂಬುದನ್ನು ಬಿಲ ಮೂನೂರ್ವರ "ಅರಣ್ಯ ಭಂಡಾರರು" ಎಂಬ ಬಿರುದೇ ತಿಳಿಸುತ್ತದೆ.

ವ್ಯವಸಾಯ-ವಾಣಿಜ್ಯ : ಕೃಷಿಭೂಮಿಯನ್ನು ಮಲೆನಾಡಿನ ಭಾಗದಲ್ಲಿ ಸಿವನೆ ಎಂಬ ಅಳತೆಯಲ್ಲೂ ಅರೆಮಲೆನಾಡಿನಲ್ಲಿ ಮತ್ತರು ಎಂಬ ಅಳತೆಯಲ್ಲೂ ಲೆಕ್ಕಹಾಕುತ್ತಿದ್ದರು. ಈ ಅರಸರ ಕಂದಾಯ ವ್ಯವಸ್ಥೆ ಕೂಡ ನಿಗೂಢವಾಗಿದೆ. ೧೧-೧೨ನೇ ಶತಮಾನದ ಸಾಂತರರ ಶಾಸಗಳಲ್ಲಿ ಈ ಕುರಿತು ಸಿಗುವ ವಿವರಗಳು ಇವರ ಶಾಸನಗಳಲ್ಲಿ ದುರ್ಲಭವಾಗಿವೆ. ಆದರೆ ಇದಕ್ಕೂ ಮೊದಲೇ ಈ ಪ್ರದೇಶದಲ್ಲಿನ ಹಳ್ಳಿಗಳಲ್ಲಿ ಕಂದಾಯದ ವ್ಯವಸ್ಥೆ (ಮರ್ಯಾದೆ) ಇತ್ತು. ಹೊಸಗುಂದದ ಅರಸರ ಶಾಸನಗಳಲ್ಲಿ ಅಪರೂಪಕ್ಕೆ ಗದ್ಯಾಣದ ರೂಪದಲ್ಲಿ ಭೂಮಿದಾನವನ್ನು ಉಲ್ಲೇಖಿಸರುವುದರಿಂದ ಅದು ಕಂದಾಯವೇ ಇರಬೇಕು. ೧೨೭೬ರ ಶಾಸನವೊಂದರಲ್ಲಿ ಹದಿನೆಂಟು ಕಂಪಣದ ಕಂಡೆ, ಸಿದ್ದಾಯ, ಮನಿದಾವಣ ಮುಂತಾದುವುಗಳ ಉಲ್ಲೇಖ ಬರುತ್ತದೆ.[24]೧೩೨೧ರ ಹೊಸಗುಂದದ ಶಾಸನವೊಂದು ಗುಡ್ಡೆಯಬೀಡು ಎಂಬ ಹಳ್ಳಿಯ ಸೇಸೆ, ಸಿದ್ದಾಯ, ಕಾಣಿಕೆ, ಕಿರುಕುಳ ಮುಂತಾದುವುಗಳನ್ನು ದಾನ ನೀಡಿದ್ದಾಗಿ ತಿಳಿಸುತ್ತದೆ.[25]"ಹೊನ್ನ ಕೊಟ್ಟು ಕುದುರೆ ಕಟ್ಟುವವರ ಗಂಡ" ಎಂಬ ಬಿರುದು ಸ್ಪಷ್ಟವಾಗೇ ಈ ಅರಸರು ಮಾಡುತ್ತಿದ್ದ ಕುದುರೆ ಖರೀದಿಯ ಕುರಿತು ತಿಳಿಸುತ್ತದೆ. ಈ ವ್ಯಾಪಾರವನ್ನು ಬಹುಶಃ ಪರ್ಶಚಿಮ ಕರಾವಳಿಯಲ್ಲಿ ಮಾಡುತ್ತಿದ್ದಿರಬಹುದು. ಈ ಕಾಲದಲ್ಲಿ ಅರಬ್ಬರು ಪಶ್ಚಿಮ ಕರಾವಳಿಯಲ್ಲಿ ಕುದುರೆ ವ್ಯಾಪಾರ ಮಾಡುತ್ತಿದ್ದರು ಎಂಬುದು ಗಮನಿಸಬೇಕಾದ ವಿಷಯ.

ವ್ಯಕ್ತಿನಾಮಗಳು : ಈ ಕಾಲದ ಶಾಸನಗಳಲ್ಲಿ ಬರುವ ಜನರ ಹೆಸರುಗಳಲ್ಲಿ ಹೆಚ್ಚು-ಕಡಿಮೆ ಎಲ್ಲವೂ ಸ್ಥಾನಿಕ ಹಿನ್ನೆಲೆಯವೇ ಆಗಿವೆ. ಅರಸು ಮನೆತನದವರ ಹೆಸರುಗಳು ಎಲ್ಲವೂ ಬೀರ, ಬೊಮ್ಮ, ಬಾಳೆಯಮ್ಮ, ಬಿಲ್ಲ, ತಮ್ಮೆಯ, ಸೊಡ್ಡಲ, ಕಾಳ, ಕೆಳೆಯಬ್ಬೆ, ಬಿಯಬ್ಬೆ, ಹೊನ್ನಲೆ, ಮುಂತಾದವಾಗಿವೆ. ಈ ಕಾಲದ ಉಳಿದ ಆಳುವ ಸ್ಥಾನಮಾನ ಹೊಂದಿದ್ದ ವ್ಯಕ್ತಿಗಳೂ ಅಣ್ಣಮ, ಬೆಳ್ಳ, ಸೊಡ್ಡಿಗ, ಎರಹ, ಗಬ್ಬಿ, ಬೊಪ್ಪ, ಕನ್ನ, ಮಲ್ಲ, ಸೆಟುಮ, ಹೆಳವ, ಹಳೆಯ, ಬೋಳ, ತಾರ, ಬೀಬಿ, ಸಖಣ, ಕಪ್ಪ, ಹುಲಿಯ ಮುಂತಾಗಿದ್ದು ಇವುಗಳಿಗೆ ಅರಸ, ನಾಯಕ, ಸೆಟ್ಟಿ, ಹೆಗ್ಗಡೆ,

ಗಾವುಂಡ ಅಂತ್ಯಗಳನ್ನು ಸೇರಿಸಲಾಗಿದೆ. ಸಿರಿಯಬ್ಬೆ, ಬೊಮ್ಮಕ್ಕ, ಮುಂತಾದ ಹೆಂಗಸರ ಹೆಸರುಗಳೂ ಬರುತ್ತವೆ. ಈ ಮೇಲಿನ ಹೆಸರುಗಳಲ್ಲಿ ಅನೇಕವು ಪ್ರಾದೇಶಿಕ ದೇವತೆಗಳ ಹೆಸರುಗಳಾಗಿದ್ದಿರಬಹುದು. ಸಿರಿ, ಜಕ್ಕ, ಲಚ್ಚಿ, ಕನ್ನ, ವಿಠ್ಠಯ್ಯ, ಬಿಟ್ಟಿಗ ಮುಂತಾದವು ತದ್ಭವಗಳಂತೇ ಭಾಸವಾಗುತ್ತವೆಯಾದರೂ ಬಹುತೇಕ ಹೆಸರುಗಳಿಗೆ ಅಂಥ ಯಾವ ಸಂಸ್ಕೃತ ಸಂಬಂಧ ಇಲ್ಲ ಎಂಬುದು ಗಮನಾರ್ಹ. ಈ ಅರಸರು ಹಾಗೂ ಅಧಿಕಾರಿಗಳು ಶಾಸನಗಳಲ್ಲೂ ತಮ್ಮ ಹೆಸರಿನ ಸಂಸ್ಕೃತೀಕರಣಕ್ಕೆ ಗಮನ ನೀಡಲಿಲ್ಲ ಎಂಬುದು ಪ್ರಾದೇಶಿಕತೆಯ ಪ್ರಭಾವ ಇಲ್ಲಿ ಗಾಢವಾಗಿದ್ದುದರ ಪ್ರತಿಬಿಂಬವಾಗಿದೆ.

ಯೋಧ ಜನರು ಹಾಗೂ ಸೈನ್ಯ ಸಂಘಟನೆ : ಇಲ್ಲಿ ಇದ್ದ ಬೇರೆ ಬೇರೆ ಬುಡಕಟ್ಟು/ಜಾತಿ/ವೃತ್ತಿಗಳ ಹಿನ್ನಲೆಯ ಜನರ ಕುರಿತು ಅಲ್ಪಸ್ವಲ್ಪ ಮಾಹಿತಿ ಸಿಗುತ್ತದೆ. ಇಲ್ಲಿ ಹಡವಳ (ಪಡೆವಳ-ಸೈನಿಕ) ವೃತ್ತಿಯನ್ನು ಆಧರಿಸಿದವರಲ್ಲಿ ಭಿಲ್ಲರು ಮುಖ್ಯರಾಗಿದ್ದರು. ಇವರು ಬಿಲ ಮುನ್ನೂರ್ವರೆಂಬ ಗುಂಪನ್ನೂ ಕಟ್ಟಿಕೊಂಡಿದ್ದರು. ಇವರು ತಮ್ಮನ್ನು ನಿಷ್ಣಾತ ಬಿಲ್ಲುಗಾರರೆಂದು, ಹೊಯ್ಸಳರ ಪರಮ ವಿಶ್ವಾಸಿಗಳೆಂದು ಕರೆದುಕೊಳ್ಳುತ್ತಾರೆ. ಬಹುಶಃ ಈ ಐತಿಹಾಸಿಕ ಮಹತ್ವದಿಂದಾಗಿ ಈ ದುರ್ಗಮ ಮಲೆನಾಡಿನಲ್ಲಿ ಇವರು ಆಳುವ ವರ್ಗವಾಗಿ ರೂಪುಗೊಂಡರು. ಹಡವಳ ವೃತ್ತಿಯನ್ನು ಆಧರಿಸಿದ ಮತ್ತೊಂದು ಜನರು ದೀವರಾಗಿದ್ದರು. ಎರಡು ಶಾಸನಗಳಲ್ಲಿ ಬಾಲಿ ಅರಸ, ಎರಹಗಬ್ಬಿ, ಬೊಪ್ಪಣ ಮುಂತಾದ ದೀವರ ಹಡವಳರ ಉಲ್ಲೇಖವಿದೆ.[26]ಇನ್ನು ಯೋಧರಾಗಿ ಹೋರಾಡಿದ, ನಾಯಕರಾಗಿ ಸೈನ್ಯ ನಡೆಸಿದ ಜನರಲ್ಲಿ ಸೆಟ್ಟಿ, ಗಾವುಂಡ, ಹೆಗ್ಗಡೆ, ನಾಯಕ ಮುಂತಾದ ಅಂತ್ಯ ಪದಗಳನ್ನು ಹೊಂದಿದ ಹೆಸರಿನವರಿದ್ದಾರೆ. ಬಹುಶಃ ಈ ಭಾಗದ ಹಳ್ಳಿ, ಪಟ್ಟಣ ಹಾಗೂ ಗುಡ್ಡಗಾಡು ಪ್ರದೇಶದ ಬೇರೆ ಬೇರೆ ಜನರು ಈ ವಿದ್ಯೆಯನ್ನು ಬಲ್ಲವರಾಗಿದ್ದರೂ ಹೆಚ್ಚಿನವರು ಕೃಷಿಕರೇ ಆಗಿದ್ದರು. ಜೊತೆಗೇ ಯುದ್ಧದಲ್ಲಿ ಮಡಿದವರ ಸಂಬಂಧಿಗಳಿಗೆ ನೆತ್ತರು ಕೊಡಿಗೆ, ಉಂಬಳಿ ಮುಂತಾದವುಗಳ ಮೂಲಕ ಕೃಷಿ ಭೂಮಿಯನ್ನು ದಾನ ನೀಡುತ್ತಿದ್ದರಾದ್ದರಿಂದ ಯೋಧರು ಕೃಷಿಕರಾಗಿ ಮಾರ್ಪಟ್ಟಿರಬಹುದು.

ಈ ಪ್ರದೇಶದ ಶಾಸನಗಳು ಈ ಕುರಿತು ವಿಶೇಷ ಬೆಳಕು ಚೆಲ್ಲುತ್ತವೆ. ಪ್ರಾದೇಶಿಕವಾಗಿ ಸೈನ್ಯ ಸಂಘಟನೆ ಮಾಡುವ ಸಾಮಂತ ವೃತ್ತಿ ಪ್ರಚಲಿತದಲ್ಲಿತ್ತು. ಈ ಸಾಮಂತರು ತಮ್ಮ ಮೇಲಿನ ರಾಜರಿಂದ ಹಳ್ಳಿಗಳ ಆದಾಯವನ್ನು ಪಡೆಯುತ್ತಿದ್ದರು. ಸಾಗರ ತಾಲ್ಲೂಕಿನ ಸಣಿಗೆಯ ಶಾಸನವೊಂದರಲ್ಲಿ ಇಂಥ ವಿವರ ಬರುತ್ತದೆ.[27]ಹಾನಂಗಲ್ಲು ಕದಂಬ ಕೀರ್ತಿದೇವನ ಬಂಟ ಹಾಗೂ ಆತನ ಸಾಮಂತನೊಬ್ಬನ ಪಡೆವಳನಾಗಿದ್ದ ಭಿಲ್ಲ ಬೊಮ್ಮನ ಮಗ ಕುಪ್ಪನು ಕದಂಬರಲ್ಲಿ ಸಾಮಂತ ವೃತ್ತಿಯನ್ನು ಪಡೆದು ಐನೂರು ಆಳಿಗೆ (ಯೋಧರಿಗೆ) ಪೆದ್ದೊರೆಗೋಡಿ ಹಳ್ಳಿಯ ಮನ್ನೆಯವನ್ನು ಪಡೆದು ಬೀಡನ್ನು ಕಟ್ಟಿಕೊಂಡಿದ್ದನು. ಬಹುಶಃ ಇವರ ಕೆಳಗೆ ಪಡೆವಳರು ಸೇವೆಸಲ್ಲಿಸುತ್ತಿದ್ದರು. ಇವರು ಇವರ ಸ್ಥಾನವೇ ಸೂಚಿಸುವಂತೆ ಪಡೆ ಕಟ್ಟಿಕೊಂಡು ಇದ್ದವರಾಗಿದ್ದರು. ಕಲಿಸೆಯ ಬಾಳೆಯಮ್ಮ ವೆಗ್ಗಡೆ ಪಡೆವಳ ಗೊಂಗಣ್ಣನೆಂಬವನ ಮಗನಾಗಿದ್ದ ಎಂಬುದನ್ನು ಗಮನಿಸಿದರೆ ಪಡೆವಳ ಮನೆತನಗಳೂ ಅರಸು ಮನೆತನಗಳ ಜೊತೆ ವಿವಾಹ ಸಂಬಂದ ಹೊಂದಿದ್ದ ವಿಷಯ ಸ್ಪಷ್ಟವಾಗುತ್ತದೆ. ಇವರು ಯುದ್ಧದಲ್ಲಿ ಮುಂದಾಗಿ ಹೊಡೆದಾಡುತ್ತಿದ್ದರೆಂದು ತೋರುತ್ತದೆ. ಯೋಧರನ್ನು ಬಂಟ, ಬಿಟ್ಟಿಗ, ಬೆಸಮಗ, ಲೆಂಕ ಮುಂತಾದ ಪ್ರಕಾರಗಳಲ್ಲಿ ಗುರುತಿಸಬಹುದು. ಬಂಟರು ಅಂಗರಕ್ಷರಾಗಿದ್ದಿರಬಹುದು. ಬಿಟ್ಟಿಗೆ ಬಿಟ್ಟಿಯಾಗಿ ಸೇವೆ ಸಲ್ಲಿಸುವವನು ಹಾಗೂ ಬೆಸಮಗ ಕರೆದಾಗ ಬಂದು ಸೇವೆ ಸಲ್ಲಿಸುವವನು. ಅವರಿಗೆ ವೀಳೆಯವನ್ನು ಕೊಟ್ಟು ಅಥವಾ ನೇಮವನ್ನು ಮಾಡಿ ಹೋರಾಡಲು ಕಳುಹಿಸುತ್ತಿದ್ದರು. ಪಡೆಗಳಲ್ಲಿ ಸಾಮಾನ್ಯವಾಗಿ ಕಾಲಾಳುಗಳು ಹಾಗೂ ಮೇಲಾಳುಗಳು (ಕುದುರೆ ಸವಾರರು) ಅಥವಾ ರಾಹುತರು ಇರುತ್ತಿದ್ದರು ಅಪರೂಪಕ್ಕೆ ಗಜಗಳ ಉಲ್ಲೇಖವೂ ಬರುತ್ತದೆ. ಕುದುರೆಗಳು ತೀರ ಮಹತ್ವದ ಹಾಗೂ ನಿರ್ಣಾಯಕ ಪಾತ್ರ ಹೊಂದಿದ್ದವು ಎಂಬುದು ವೀರಗಲ್ಲುಗಳ ಶಿಲ್ಪ ಹಾಗೂ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಹೋರಾಟದಲ್ಲಿ ಮಡಿದರೆ

ವೀರಗಲ್ಲನ್ನು ನಿಲ್ಲಿಸಿ ನೆತ್ತರುಗೊಡಗೆಯನ್ನು ಹಾಗೂ ಸತಿ ಹೋದವರಿಗೆ ಹೆಣ್ಣುದಾನವನ್ನೂ ಭೂಮಿ ರೂಪದಲ್ಲಿ ನೀಡುತ್ತಿದ್ದರು.

ಶಿಲ್ಪಿಗಳು ಮತ್ತು ಬರಹಗಾರರು : ಈ ಶಾಸನಗಳಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವ ಮತ್ತೊಂದು ರೀತಿಯ ಜನವೆಂದರೆ ಶಿಲ್ಪಿಗಳು ಮತ್ತು ಬರಹಗಾರರು. ಬಹುಶಃ ಈ ಪ್ರದೇಸಕ್ಕೂ ಹೊರಜಗತ್ತಿಗೂ ಸಂಪರ್ಕ ಕಲ್ಪಿಸಿದ ಒಂದು ಪ್ರಮುಖ ಸಮಾಜ ಇದಾಗಿತ್ತು. ಇಲ್ಲಿನ ವೀರಗಲ್ಲುಗಳನ್ನು ಕೊರೆಯಲು, ದೇವಾಲಯಗಳನ್ನು ಕಟ್ಟಲು ಈ ಪರಿಣಿತರ ಅಗತ್ಯ ತುಂಬಾ ಇತ್ತು. ವೀರಗಲ್ಲುಗಳನ್ನು ನಿಲ್ಲಿಸುವವರು (ಕಲ್ಲುಗೆಯ್ಸುವವರು), ಕಲ್ಲು ಕಡಿಯುವವರು (ಕಲ್ಕುಟಿಗ), ಅಕ್ಷರ ಕೊರೆಯುವವರು (ಸಿಳಾಲಿಖಿತಮಾಡುವವ), ಶಾಸನಗಳ ಪಾಠವನ್ನು ರಚಿಸುವವರು (ಬರೆದಾತ) ಮುಂತಾದ ವಿಭಿನ್ನ ಜನ ಇಲ್ಲಿ ಒಟ್ಟಾಗುತ್ತಿದ್ದರು. ಮೊದಲನೆಯ ಪ್ರಕಾರದವರು ಸತ್ತವರ ಸಂಬಂಧಿಗಳಾಗಿದ್ದರು. ಎರಡನೇ ಹಾಗೂ ಮೂರನೆಯ ಪ್ರಕಾರದವರು ಶಿಲ್ಪಿಕುಲಕ್ಕೆ ಸೇರಿದ್ದರು. ಅವರನ್ನು ಕಲ್ಕುಟಿಗೆ, ಬಿನ್ನಾಣಿ (ವಿಜ್ಞಾನಿ), ರೂವಾರಿ ಎಂದು ವಿಶೇಷವಾಗಿ ಸೂಚಿಸಲಾಗಿದೆ. ಬಹುಶಃ ರೂವಾರಿ ಶಿಲ್ಪ ಕೆತ್ತುವ ಪರಿಣತನಾಗಿದ್ದನು. ಇವರ ಹೆಸರುಗಳು ರಾಮೋಜ, ಮಧುಕೋಜ, ಆದಿತ್ಯಾಚಾರಿ, ಪಾಂಡ್ಯಾಚಾರಿ, ಸಿಂಗೋಜ, ಭೀಮ, ಬೀರೋಜ, ಸಂಕೋಜ, ಮುಂತಾಗಿದ್ದು ಈ ಹಿಂದೆ ಪರಿಶೀಲಿಸಿದ ಅಚ್ಚ ಪ್ರಾದೇಶಿಕ ಆಳುವವರ ಹೆಸರಿಗಿಂತ ತೀರ ಭಿನ್ನವಾಗಿರುವುದನ್ನು ಗಮನಿಸಬಹುದು. ಕಲಿಸೆ ಹಾಗೂ ಹುಂಚದಲ್ಲಿ ಇಂಥ ಶಿಲ್ಪಿಗಳ ಕೇಂದ್ರಗಳಿದ್ದವು. ಇಲ್ಲಿನ ಶಿಲ್ಪಿಗಳು ಉಳಿದ ಅನೇಕ ಕಡೆಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಒಂದು ವೀರಗಲ್ಲಿನಲ್ಲಿ ಅಬ್ಬಲೂರಿನ ಸಂಕೋಜನೆಂಬವನು ಇಲ್ಲಿಗೆ ಬಂದು ಕೆಲಸ ಮಾಡಿದ್ದು ತಿಳಿದುಬರುತ್ತದೆ.[28]ಶಾಸನಗಳನ್ನು ಬರೆಯುವವರು ಸಾಧಾರಣವಾಗಿ ಅಕ್ಷರಸ್ಥರಾದ ಸೇನಬೊವರಾಗಿದ್ದರು. ಒಂದು ಶಾಸನವನ್ನು ಚಿಕ್ಕಕೆರೆಯೂರು 'ಕವಿದರ್ಪಣ' ಎಂಬ ಬಿರುದು ಧರಿಸಿದ್ದ ಬೊಮ್ಮರಾಯ ಎಂಬುವನು ರಚಿಸಿದನು.[29]ಈ ಕಾಲದ ಅನೇಕ ವೀರಗಲ್ಲುಗಳು ತೀರ ಸುಂದರ ಕಲಾಕೃತಿಗಳಾಗಿವೆ.

ದೇವಾಲಯಗಳ ವಾಸ್ತುಶಿಲ್ಪ : ಈ ಪ್ರದೇಶದ ಮೇಲೆ ಬಾಹ್ಯ ಸಂಸ್ಕೃತಿಯ ಪ್ರಭಾವ ಹಾಗೂ ಅದರ ಪ್ರಾದೇಶಿಕ ತಿದ್ದುಪಡಿಗೆ ಈ ಕಾಲದ ದೇವಾಲಯಗಳು ಸಾಕ್ಷಿಗಳಾಗಿವೆ. ಕಲಿಸೆ(ನಾಡ ಕಳಸಿ)ಯ ಸೋಮನಾಥ ದೇವಾಲಯವನ್ನು ಬಿಟ್ಟರೆ ಉಳಿದವಕ್ಕೆ ಶಾಸನಾಧಾರಗಳಿಲ್ಲ. ಆದರೆ ಈ ಕಾಲದ ದೇವಾಲಯಗಳನ್ನು ಕೋಡಕಣಿ, ಪುರ, ನಾಡಕಳಸಿ (ಮಲ್ಲಿಕಾರ್ಜುನ ದೇವಾಲಯ), ಹೊಸಗುಂದ, ಬಿಳಗುಂಜಿ ಹಾಗೂ ಮರಗಳಲೆ ಮುಂತಾದ ಸ್ಥಳಗಳಲ್ಲಿ ನೋಡಬಹುದು. ಈ ದೇವಾಲಯಗಳು ಸಾಮಾನ್ಯವಾಗಿ ಬನವಾಸಿ ೧೨೦೦೦ ದ ಈ ಕಾಲದ ಚಾಲುಕ್ಯ ದೇವಾಲಯಗಳ ಸಂಪ್ರದಾಯದಲ್ಲೇ ಇವೆ.[30]ಇವುಗಳಲ್ಲಿ ವಿಮಾನಕ್ಕೆ ಒಂದು ಗೂಢಮಂಡಪವನ್ನು ಜೋಡಿಸಲಾಗುತ್ತದೆ. ಇಲ್ಲ ಒಂದು ಅರೆತೆರೆದ ಸಭಾಮಂಡಪವನ್ನು ಜೋಡಿಸಲಾಗುತ್ತದೆ. ಗರ್ಭಗೃಹಗಳು ಚಾಲುಕ್ಯ ಶೈಲಿಯಲ್ಲಿ ನಿರಂಧಾರ (ಪ್ರದಕ್ಷಿಣಾಪಥರಹಿತ) ವಾಗಿರುತ್ತವೆ. ಮಲೆನಾಡಿನ ಪ್ರದೇಶದಲ್ಲಿ ಅಂಥ ಗರ್ಭಗೃಹಗಳ ಜೊತೆಗೇ ತೀರ ವಿಶಿಷ್ಟವಾದ ಸಾಂಧಾರ ಗರ್ಭಗೃಹಗಳೂ ಪ್ರಾದೇಶಿಕವಾಗಿ ಪ್ರಚಲಿತದಲ್ಲಿದ್ದವು. ಕಲಿಸೆಯ ರಾಮೇಶ್ವರ (ಸೋಮನಾಥ) ದೇವಾಲಯದಲ್ಲಿ ಹಾಗೂ ಹೊಸಗುಂದದ ಈಶ್ವರ ದೇವಾಲಯದಲ್ಲಿ ಇಂಥ ಉದಾಹರಣೆಗಳಿವೆ. ಇಂಥ ವಿಮಾನಗಳಿಗೆ ಪ್ರತ್ಯೇಕ ಅಂತರಾಳ ಇರುವುದಿಲ್ಲ. ಬದಲಾಗಿ ಪ್ರದಕ್ಷಿಣಾಪಥಕ್ಕೇ ರಂಗಮಂಡಪವನ್ನು ಜೋಡಿಸಲಾಗುತ್ತದೆ. ಹೊಸಗುಂದದ ದೇವಾಲಯದಲ್ಲಿ ಗರ್ಭಗೃಹದ ದ್ವಾರದ ಎದುರಿಗೇ ಮುಖಭದ್ರವನ್ನು ಜೋಡಿಸಲಾಗಿದೆ ಹಾಗೂ ಇದರ ಎದುರಿಗೆ ಅಂತರಳದ ಜಾಲಂದ್ರಗಳು ಬರುತ್ತವೆ. ನಿರಂಧಾರ ವಿಮಾನಗಳಿಗೆ ಚಾಲುಕ್ಯ ಶೈಲಿಯ ಭದ್ರ (ಭಿತ್ತಿಯ ಮಧ್ಯದ ಉಬ್ಬುಗಳು) ಉಪಭದ್ರಗಳು ಇದ್ದು ಕಪೋತಬಂಧ ಅಧಿಷ್ಠಾನಗಳಿರುತ್ತವೆ. ಇವುಗಳ ಶಿಖರಗಳು ಮೆಟ್ಟಿಲು ಮೆಟ್ಟಿಲಾಗಿ ಪಿರಮಿಡ್ ಆಕಾರದಲ್ಲಿರುತ್ತವೆ. ಇದು ಒಂದು ತೀರ ಜನಪ್ರಿಯ ಪ್ರಾದೇಶಿಕ ಶೈಲಿಯಾಗಿತ್ತು.

ವಿಮಾನಗಳಿಗೆ ಸೇರಿಸಲಾಗಿರುವ ಸಭಾಮಂಡಪಗಳು ೧೧೭೦ರ ನಂತರದಲ್ಲಿ ಬನವಾಸಿ ಪ್ರದೇಶದಲ್ಲಿ ಪ್ರಚಲಿತದಲ್ಲಿ ಬಂದಂಥವುಗಳಾಗಿವೆ. ಇಲ್ಲಿ ವಿಮಾನದ ಗೋಡೆಯನ್ನೇ ವಿಸ್ತರಿಸಿ ಸಭಾಮಂಡಪದ ಒಂದು ಭಾಗಕ್ಕೆ ಚಾಚಲಾಗಿದೆ. ಈ ಮಂಡಪಗಳ ಪ್ರವೇಶದ ಮೆಟ್ಟಿಲುಗಳ ಎರಡೂ ಕಡೆ ವೇದಿಕೆಗಳು ಇರುತ್ತವೆ. ಮಂಡಪದ ಒಳಭಾಗದಲ್ಲಿ ನಾಲ್ಕು ಸಾಲು ಶ್ರೀಕಾರ **(**ಘಂಟಾಕಾರ**)** ಕಂಭಗಳಿದ್ದು ಕಕ್ಷಾಸನಗಳ ಮೇಲೆ ಗಿಡ್ಡ ಧಾರಾವೃತ್ತ **(**ಬಹುಮುಖಗಳ**)** ಕಂಭಗಳನ್ನು ಜೋಡಿಸಲಾಗಿದೆ. ಕಕ್ಷಾಸನದ ಬಾಹ್ಯ ಅಲಂಕಾರವು ತೀರ ಸಾಮಾನ್ಯವಾಗಿ ಕೂಟಸ್ತಂಭಗಳ ಸಾಲುಗಳಾಗಿದ್ದು ಮೇಲೆ ಶಿಲ್ಪಗಳ ಚೌಕಟ್ಟುಗಳನ್ನು ನೋಡಬಹುದು. ಇಂಥ ಶಿಲ್ಪಗಳಲ್ಲಿ ನರ್ತಕರು, ಮಿಥುನಗಳು, ದೇವತೆಗಳನ್ನು ಚಿತ್ರಿಸಲಾಗಿದೆ.

[1]*ಎ.ಕ.* ೮ ಸೊರಬ ೧೯. ಕೊಡಕಣಿ ೧೧೫೨

[2]*ಎ.ಕ.* ೮ ಸಾಗರ ೧೩೯. ಹೊಸಗುಂದ

[3]*ಎ.ಕ.* ೮ ಸಾಗರ ೭೮, ಸೇಣಿಗೆ ೧೨೬೬

[4]*ಎ.ಕ.* ೭ ಶಿವಮೊಗ್ಗ ೬೧, ೬೨ ಹಾರೋಬೆನವಳ್ಳಿ

[5]*ಎ.ಕ.* ೮ ಸಾಗರ ೧೩೮. ಹೊಸಗುಂದ. ಶಕವರ್ಷ ತಪ್ಪಾಗಿ ಓದಲ್ಪಟ್ಟಿದೆ. ಸಂವತ್ಸರದ ಆಧಾರದ ಮೇಲೆ ೧೨೭೦-೭೧ ಎನ್ನಬಹುದು.

[6]*ಎ.ಕ.* ೮ ನಗರ ೨೦ ಪಟ್ಟುಗುಪ್ಪೆ ಅರಸರ ಕುರಿತು ಮುಂದಿನ ವಿವರಗಳೆಲ್ಲ ಈ ಶಾಸನದಲ್ಲೇ ಇವೆ.

[7]*ಎ.ಕ.* ೮ ಸಾಗರ ೮೬. ಆವಿನಹಳ್ಳಿ

[8]ಮೈ.ಆ ರಿ. ೧೯೩೧, ಸಂ.೬೬.

[9]*ಎ.ಕ.* ೭ ಶಿಕಾರಿಪುರ ೩೧೨. ಪುನೇದಹಳ್ಳಿ

[10]*ಎ.ಕ.* ೮ ನಗರ ೬೧. ಹುಂಚದ ಕಮಟೇಶ್ವರ ದೇವಾಲಯಕ್ಕೆ ಈತನು ದಾನ ನೀಡಿದ್ದನು.

[11]*ಎ.ಕ.* ೮ ಸಾಗರ ೩೧. ಕಂಬಳಿಕೊಪ್ಪ

[12]*ಎ.ಕ.* ೮ ಸಾಗರ ೯೭. ನಾಡಮಡುವು

[13]*ಎ.ಕ.* ೮ ಸಾಗರ ೯೬, ೯೮. ನಾಡಮಡುವು ೧೩೦೦-೧೩೦೧

[14]*ಎ.ಕ.* ೮ ಸಾಗರ ೯೯, ನಾಡಮಡುವು

[15]*ಎ.ಕ.* ೭ ಶಿಕಾರಿಪುರ ೩೧೨, ಪುನೇದಹಳ್ಳಿ

[16]*ಎ.ಕ.* ೮ ಸಾಗರ ೧೩೫ ಹೊಸಗುಂದ

[17]*ಎ.ಕ.* ೮ ಸಾಗರ ೯೭. ನಾಡಮಡುವು

[18]*ಎ.ಕ.* ೮ ನಗರ ೨೦, ಪಟ್ಟುಗುಪ್ಪೆ

[19]*ಎ.ಕ.* ೭ ಶಿಕಾರಿಪುರ ೩೧೨. ಪುನೇದಹಳ್ಳಿ

[20]*ಎ.ಕ.* ೮ ಸಾಗರ ೧೫. ನಾಡಕಳಸಿ

[21]*ಎ.ಕ.* ೮ ಸೊರಬ ೫೬೧. ಕೋಳಿಸಾಲೆ

[22]*ಎ.ಕ.* ೮ ಸಾಗರ ೯೯. ನಾಡಮಡುವು

[23]*ಎ.ಕ.* ೮ ಸಾಗರ ೩೧, ಕಂಬಳಿಕೊಪ್ಪ ೧೨೯೦, ೭೦ ಸಾತಳಲು ೧೨೭೬

[24]*ಎ.ಕ.* ೮ ಸಾಗರ ೭೦. ಸಾತಳಲು ೧೨೭೬

[25]*ಎ.ಕ.* ೮ ಸಾಗರ ೧೩೫, ಹೊಸಗುಂದ ೧೩೨೧ ರ ಕಂಚಿಕಾಳಮ್ಮನ ಗುಡಿ ಶಾಸನ

[26]*ಎ.ಕ.* ೮ ಸಾಗರ ೯೧, ೯೨ ಹೆಡತರಿ ೧೧೬೧

[27]*ಎ.ಕ.* ೮ ಸಾಗರ ೭೧.

[28]*ಎ.ಕ.* ೮ ಸಾಗರ ೧೦೧. ಮತ್ತಿಕೊಪ್ಪ ೧೩೦೩

[29]ಅದೇ.

[30]ಧಾಕೆ ಎಂ.ಎ. *ಎನ್ಸೈಕ್ಲೋಪೀಡಿಯ ಆಫ್ ಇಂಡಿಯನ್ ಆರ್ಕಿಟೆಕ್ಚರ್, ಸೌಥ್ ಇಂಡಿಯಾ ಅಪ್ಪರ್ ದ್ರಾವಿಡ ದೇಶ, ಲೇಟರ್‌ಫೇಸ್*, ಅಮೇರಿಕನ್ ಇನ್ಸಿಟ್ಯೂಟ್ ಆಫ್ ಇಂಡಿಯನ್ ಸ್ಟಡೀಸ್, ೧೯೯೬, ಸಂ. ೧, ಪು. ೨೯೫.

ಮಲೆಕರ್ನಾಟಕದ ಅರಸು ಮನೆತನಗಳು: ೮. ಆಸಂದಿಯ ಅರಸರು (೧)

೧೧ನೇ ಶತಮಾನದ ಆರಂಭದಲ್ಲಿ ಚೋಳ-ಗಂಗ ಸಂಘರ್ಷ ಪರಾಕಾಷ್ಠೆಯ ಹಂತವನ್ನು ತಲುಪಿ ತಲಕಾಡಿನ – ಗಂಗರ ಪತನದಲ್ಲಿ ಪರ್ಯಾವಸಾನಗೊಳ್ಳುತ್ತದೆ. ಕ್ರಿ.ಶ. ೧೦೦೪ ರಲ್ಲಿ ನಡೆದ ತಲಕಾಡಿನ ಯುದ್ಧ,**[1]** ಮತ್ತು ಕ್ರಿ.ಶ. ೧೦೦೬ರಲ್ಲಿ ನಡೆದ ಕಲಿಯೂರು ಕಾಳಗಗಳು,**[2]**ಪ್ರತಿಷ್ಠಿತ ತಲಕಾಡು ಗಂಗ ರಾಜ ಮನೆತನದ ಶತಮಾನಗಳ ಅಖಂಡ ಆಳ್ವಿಕೆಯನ್ನು ಕೊನೆಗೊಳಿಸುತ್ತವೆ. ಈ ಐತಿಹಾಸಿಕ ಕದನಗಳ ನಂತರ ತಲಕಾಡಿನ ‘ರಕ್ಕಸ ಗಂಗ’ ಸುಮಾರು ೧೦೨೪ ರವರೆಗೆ ಚೋಳ ರಾಜಮನೆತನದ ಮಾಂಡಲೀಕನಾಗಿ ಆಳ್ವಿಕೆ ನಡೆಸುತ್ತಾನೆ.**[3]**ಮಲೆಕರ್ನಾಟಕದ ಅರಸು ಮನೆತನಗಳು

ತಾವು ಗಂಗರ ವಂಶಜರೆಂದು ಹೇಳಿಕೊಳ್ಳುವ ಅನೇಕ ಮನೆತನಗಳು ಸಾಮಂತರಾಗಿ ವಿವಿಧ ಪ್ರಾಂತ್ಯಗಳಲ್ಲಿ ಆಳ್ವಿಕೆಯನ್ನು ನಡೆಸಿದರು. ಹೀಗೆ ಆಸಂದಿಯಲ್ಲಿ ಹೊಯ್ಸಳ ಮಾಂಡಲೀಕರಾಗಿ ಅಸ್ತಿತ್ವಕ್ಕೆ ಬಂದ ಗಂಗರಸರು ಸುಮಾರು ೨ ಶತಮಾನಗಳ ಕಾಲ ಹೊಯ್ಸಳ ಮಾಂಡಲೀಕರಾಗಿ ಆಸಂದಿಯಲ್ಲಿ ಆಳ್ವಿಕೆಯನ್ನು ನಡೆಸುತ್ತಾರೆ.

ಆಸಂದಿ

ಆಸಂದಿ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕಿನಲ್ಲಿರುವ ಒಂದು ಗ್ರಾಮ. ಇದು ಕಡೂರಿಗೆ ಈಶಾನ್ಯ ದಿಕ್ಕಿನಲ್ಲಿ ೨೦ ಕಿ.ಮೀ. ದೂರದಲ್ಲಿದೆ.[4] ಅಜ್ಜಂಪುರ-ಹೊಸದುರ್ಗ-ರಸ್ತೆಯಲ್ಲಿರುವ ಬೇಗೂರು ಗ್ರಾಮದಿಂದ ೨ ಮೈಲು ದೂರದಲ್ಲಿದೆ.[5] ಮಲೆನಾಡು ಮತ್ತು ಬಯಲು ನಾಡಿನ ಮಧ್ಯೆ ಹರಡಿರುವ ಅರೆಮಲೆನಾಡಿನ ಭೂ ಲಕ್ಷ್ಮಣ ಮತ್ತು ಪ್ರಾಕೃತಿಕ ಹಿನ್ನೆಲೆಯನ್ನು ಹೊಂದಿರುವ ಆಸಂದಿ, ಸೀಗೆ ಮತ್ತು ಜಾಲಿಯ ಕುರುಚಲು ಕಾಡಿನಿಂದ ಆವೃತವಾಗಿದೆ.

ಮೊದಲನೆ ವೈಜರಸ (ಕ್ರಿ.ಶ. ೧೦೮೦-೧೧೦೦)೨

“ಕಣ್ಣಂಬಿ” ನಾತನೆಂದು ಬಿರುದಾಂಕಿತನಾದ ವೈಜರಸ ಹೊಯ್ಸಳ ಮಾಂಡಲೀಕನಾಗಿ ಆಳ್ವಿಕೆಯನ್ನು ಆರಂಭಿಸಿದಂತೆ ಕಂಡು ಬರುತ್ತದೆ. ಆಸಂದಿಯ ಕೆಲವು ಶಾಸನಗಳಲ್ಲಿ ಎರಯಂಗರಸನ ಕಾಲದಲ್ಲಿ ಬೇಡರ ಬಂಕಿ ವನದಲ್ಲಿ ಅಗ್ಗದ ರಾಯನೆಂಬುವನು ಎದುರಿನಲ್ಲಿ ಓಡಿದಾಗ ವೈಜರಸನ ಒಂದು ಬಾಣ ಆತನನ್ನು ಸೀಳಿಕೊಂಡು ಆಗಸದಲ್ಲಿಯ ಹಕ್ಕಿಯಾಕಾರದ ಗಾಳಿಪಟದ ಕಣ್ಣನ್ನು ಸೀಳಿತೆಂದು, ಇದರಿಂದ ಅಚ್ಚರಿಪಟ್ಟ ಹೆಮ್ಮಡಿರಾಯ ಆತನಿಗೆ ಕಣ್ಣಂಬಿನಾತನೆಂಬ ಬಿರುದನ್ನು ದಯಪಾಲಿಸಿದನೆಂದು ತಿಳಿಸುತ್ತವೆ.[6] ತಲಕಾಡಿನ ಗಂಗರಿಗೂ ಆಸಂದಿಯ ಈ ವೈಜರಸನಿಗೂ ಇರುವ ಸಂಬಂಧಗಳು ಸ್ಪಷ್ಟವಾಗುವುದಿಲ್ಲ. ಶಾಸನಗಳಲ್ಲಿ ಈತನ ಕಣ್ಣಂಬಿನ ಪ್ರಶಸ್ತಿ, ಎರೆಯಂಗರಸನ ಕಾಲದೊಳ್, ಎಂಬ ಒಕ್ಕಣೆಯ ನಂತರವೇ ಕಂಡು ಬರುತ್ತದೆ. ಬಿ.ಎಲ್. ರೈಸ್ ರವರು ಈತ ೧೦೮೧ ರಲ್ಲಿ ಆಳ್ವಿಕೆ ನಡೆಸುತ್ತಿದ್ದನೆಂದು ತಿಳಿಸುತ್ತಾರೆ.[7] ನಂತರ ಕ್ರಿ.ಶ. ೧೧೦೪ರ ಬಂಕಿನಕಟ್ಟೆ ಶಾಸನ ಇವನ ಮಗ ನಾಡರಸನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.[8] ಆದ್ದರಿಂದ ಸರಿ ಸುಮಾರು ಕ್ರಿ.ಶ. ೧೦೮೦ ರಿಂದ ೧೧೦೦ ರ ವರೆಗೆ ಆಸಂದಿಯ ಗಂಗರಸರ ಮೊದಲನೆಯ ದೊರೆಯಾಗಿ ಕಣ್ಣಂಬಿನ ವೈಜರಸನು ಆಳ್ವಿಕೆ ನಡೆಸಿದನೆಂದು ತಿಳಿಯುತ್ತದೆ. ಈತನ ಬಿರುದುಗಳು ಸಮಕಾಲೀನ ಇತಿಹಾಸ ಪುನರ್ರಚನೆಯ ದೃಷ್ಟಿಯಿಂದ ಮಹತ್ವಪೂರ್ಣ ಮಾಹಿತಿಯೊದಗಿಸುವುದಿಲ್ಲವಾದರೂ ಹೆಮ್ಮಡಿರಾಯನನ್ನು ಚಾಲುಕ್ಯ ದೊರೆಯೆಂದು ಬಿ.ಎಲ್.ರೈಸ್ ರವರು ಸರಿಯಾಗಿಯೇ ಗುರುತಿಸಿದ್ದಾರೆ.[9] ಐತಿಹಾಸಿಕವಾಗಿ ಇದು ಕಲ್ಯಾಣ ಚಾಳುಕ್ಯರ ಉತ್ಕರ್ಷದ ಕಾಲವಾದ್ದರಿಂದ ಸಹಜವಾಗಿಯೇ ಚಾಲುಕ್ಯರ ಮಾಂಡಲೀಕರಾಗಿದ್ದ ಹೊಯ್ಸಳರು ಅವರ ಅನೇಕ ಕದನದಲ್ಲಿ ಭಾಗಿಯಾಗಿದ್ದಾರೆ. ಮೇಲಾಗಿ ಹೊಯ್ಸಳ ಎರೆಯಂಗದೇವನನ್ನು ಚಾಲುಕ್ಯ ವಿಕ್ರಮನ ಬಲಗೈ ಬಂಟನೆಂದು ಕರೆಯಲಾಗಿದೆ.[10] ಆದ್ದರಿಂದ ಹೊಯ್ಸಳ ಮಾಂಡಲೀಕರಾಗಿದ್ದ ಆಸಂದಿಯ ವೈಜರಸನು ಈ ಯುದ್ಧಗಳಲ್ಲಿ ಭಾಗವಹಿಸಿದ್ದನೆಂದು ಇದರಿಂದ ಊಹಿಸಬಹುದಾಗಿದೆ. ಕಣ್ಣಂಬಿನ ಘಟನೆಯಲ್ಲಿ ಬರುವ ‘ಹೆಮ್ಮಾಡಿ’ ಆರನೇ ವಿಕ್ರಮಾದಿತ್ಯನೆಂದು ಗುರುತಿಸಲ್ಪಟ್ಟರೂ ಈ ಘಟನೆಯಲ್ಲಿನ ‘ಅಗ್ಗದರಾಯ’ ಮತ್ತು ಬೇಡರ ಬಂಕಿಗಳನ್ನು ಖಚಿತವಾಗಿ ಗುರುತಿಸಲಾಗಲಿಲ್ಲ. ಬಹುಶಃ ಆತನೊಬ್ಬ ಬೇಡ ದೊರೆಯಾಗಿರಬಹುದು. ಏಕೆಂದರೆ ಆಸಂದಿ ನಾಡಿನ ಅನೇಕ ಶಾಸನಗಳಲ್ಲಿ ಬೇಡರ ಧಾಳಿಗಳನ್ನು ಉಲ್ಲೇಖಿಸಲಾಗಿದೆ.[11] ವೈಜರಸನ ಮಡದಿ “ಅಂಗನಾ”[12]ಇವರೀರ್ವರ ಪುತ್ರ ಶ್ರೀನಾಡ.

ನಾಡರಸ (ಕ್ರಿ.ಶ. ೧೧೦೦-೧೧೧೫)

ಮೊದಲನೆ ವೈಜರಸ ಮತ್ತು ಅಂಗನೆಯ ಪುತ್ರ ಶ್ರೀನಾಡ. ಈತನನ್ನು ಕ್ರಿ.ಶ. ೧೧೦೪ರ ಬಂಕಿನಕಟ್ಟೆ ಶಾಸನದಲ್ಲಿ ಮಹಾಮಂಡಳೇಶ್ವರ, ತ್ರಿಭುವನಮಲ್ಲ, ಹೊಯ್ಸಳ ದೇವರು, ಗಂಗವಾಡಿ, ತೊಂಭತ್ತಾರು ಸಾಸಿರವನ್ನು ಪ್ರತಿಪಾಲಿಸುತ್ತಿರಲು, ಶ್ರೀಮನ್ ಮಹಾಮಂಡಳೀಕಂ, ನಾಡರಸರು, ಆಸಂದಿಯ ನೆಲೆವೀಡಾಗಿ ಸುಖ-ಸಂಕಥಾ ವಿನೋದದಿಂದ ರಾಜ್ಯಂಗೈಯುತ್ತಿದ್ದರೆಂದು ಪರಿಚಯಿಸುತ್ತದೆ. ಅದೇ ಶಾಸನ ನಾಡರಸನನ್ನು, ಸತ್ಯವಾಕ್ಯ, ಕೊಂಗುಳಿವರ್ಮ, ಧರ್ಮರಾಜಾಧಿರಾಜ, ವಂದಿಜನಕಳ್ಪಭುಜಂ, ಕೋಳಲಪುರವರಾಧೀಶ್ವರ, ಪ್ರತಾಪಮಹೇಶ್ವರ, ನಂದಗಿರಿನಾಥ, ಮನುಜ ಮಾನ್ಧಾತ, ನಂನಿಯಗಂಗ, ಜಯದುತ್ತರಂಗ, ಮದಗಜೇಂದ್ರಲಾಂಛನ, ವಿನಿಯೋಗ ಕಾಂಚನ, ಪದ್ಮಾವತೀಲಬ್ಧವರಪ್ರಸಾದ, ಮೃಗಮದಾ ಮೋದ, ರಿಪುನಿವಹಕ, ಜವನಕುಂಜರ, ಗಂಗಕುಳಕಮಳಮಾರ್ತಣ್ಡ, ಅಣಿಯೊಡೆಗಂಣ್ಡ, ಕೋದಂಡಪಾತ್ಥರಣ, ರಂಗನೀರ, ಬಿಲಂಕಕಾರ, ಪರಮಂಡಲ ಸೂರೆಕಾರ, ಎಸುವರಾದಿತ್ಯ, ಕಂಣ್ಮಂಬಿನಾತ, ಅಹವಜತ್ತಲಟ್ಟ, ವೈರಿಘರಟ್ಟ, ಶರಣಾಗತ, ವಜ್ರಪಂಜರ, ವೈರಿಕ್ಕುಂಜರ, ಕ್ಷತ್ರಿಯಪವಿತ್ರ, ಪರಬಳಭಯಂಕರ, ಬಂಟರಭಾವ, ಮರೆಯಂಗೆಕಾವ, ತಪ್ಪೆತಪ್ಪ ಮನೆನ್ನುವೊಪ್ಪುವ, ನಾಮಾದಿ ಸಮಸ್ತ ಪ್ರಶಸ್ತಿ ಸಹಿತ**[13]**ನೆಂದು, ತಲಕಾಡಿನ ಗಂಗರ ಎಲ್ಲ ಪ್ರಶಸ್ತಿಗಳೊಂದಿಗೆ ಹೆಸರಿಸುವುದು ಅತ್ಯಂತ ಗಮನಾರ್ಹ ಸಂಗತಿ. ಈತ ಹೊಯ್ಸಳ ಎರೆಯಂಗನ ಮಗ ಮೊದಲನೇ ವೀರಬಲ್ಲಾಳನ ಸಮಕಾಲೀನನಾಗಿ ಕ್ರಿ.ಶ. ೧೧೦೪ ರಿಂದ ೧೧೧೫ ರವರೆಗೆ, ಹೊಯ್ಸಳ ಮಾಂಡಲೀಕನಾಗಿ ಆಳ್ವಿಕೆ ನಡೆಸಿದ. ನಾಡರಸನ ಮಡದಿ ನಾಗಲೆ.**[14]** ಇವರೀರ್ವರ ಮಗ ಎರಡನೆ ವೈಜರಸ.

ಎರಡನೆ ವೈಜರಸ (ಕ್ರಿ.ಶ. ೧೧೧೫-೧೧೩೦)

ನಾಡರಸ ಮತ್ತು ನಾಗಲೆಯರ ಪುತ್ರ ಎರಡನೇ ವೈಜರಸನನ್ನು ಕ್ರಿ.ಶ. ೧೧೪೧ರ ಅನುವನಹಳ್ಳಿ ಶಾಸನ ಪರಿಚಯಿಸುತ್ತದೆ. ಈ ಶಾಸನದ ಕಾಲವನ್ನು ಬಿ.ಎಲ್.ರೈಸ್ ಕ್ರಿ.ಶ. ೧೧೪೧ ಎಂದು ನಿರ್ಧರಿಸಿದ್ದಾರೆ.**[15]** ಶಾಸನದಲ್ಲಿ "ಸ್ವಸ್ತಿ ಶ್ರೀ ಮಾ ಚಾಳುಕ್ಯ ಚಕ್ರವರ್ತಿ ಜಗದೇಕಮಲ್ಲ ವರ್ಶ್ಯದ || ೨೫ನೆಯ ಶುಕ್ಲ ಸಂವತ್ಸರದ, ಫಾಲ್ಗುಣ ಸುದ್ದ ಪುಣ್ಯಮಿ, ಸೋಮವಾರದಂದು"**[16]**ಎಂದಿದೆ. ಇವು ಒಂದಕ್ಕೊಂದು ತಾಳೆಯಾಗುವುದಿಲ್ಲವೆನ್ನುವುದು ಅವರ ಅಭಿಮತ. ಆದರೆ ವೈಜರಸನ ಮಗ ಬರ್ಮರಸ ಕ್ರಿ.ಶ. ೧೧೩೦ ರಲ್ಲಿ ರಾಜ್ಯವಾಳುತ್ತಿದ್ದನೆಂದು ಬುಕ್ಕಾಂಬುಧಿಯ ಶಾಸನ ಸ್ಪಷ್ಟವಾಗಿ ತಿಳಿಸುತ್ತದೆ.**[17]** ಬಿ.ಎಲ್.ರೈಸ್ ಈ ಶಾಸನದ ಕಾಲವನ್ನು ಅಂಗೀಕರಿಸಿದ್ದಾರೆ.**[18]** ಆದ್ದರಿಂದ ಎರಡನೇ ವೈಜರಸ ಮತ್ತು ಬರ್ಮರಸ ಜಂಟಿಯಾಗಿ ಆಳ್ವಿಕೆ ನಡೆಸುತ್ತಿದ್ದರೆಂದು ಭಾವಿಸಬೇಕಾಗುತ್ತದೆ. ನಂತರ ಕ್ರಿ.ಶ. ೧೨೦೫ರ ಆಸಂದಿ ಶಾಸನ ಮತ್ತೆ ವೈಜರಸನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.**[19]** ಆದ್ದರಿಂದ ಈತ ಬಹು ದೀರ್ಘಾವಧಿಯವರೆಗೆ ಬದುಕಿದ್ದನೆಂದು ಭಾವಿಸಬೇಕಾಗುತ್ತದೆ. ನಾಡರಸನಂತೆ ವೈಜರಸನು ಸಹ ತಲಕಾಡು ಗಂಗರ ಬಹುತೇಕ ಎಲ್ಲ ಪ್ರಶಸ್ತಿಗಳಿಂದ ಬಿರುದಾಕಿಂತನಾಗಿದ್ದಾನೆ. ಆದರೆ ಕ್ರಿ.ಶ. ೧೧೪೧ರ ಅನುವನಹಳ್ಳಿ ಶಾಸನದಲ್ಲಿ ಈತನನ್ನು "ಕೊಂಗಹತ್ರ್ಯ" ಎಂದು ಕರೆಯಲಾಗಿದೆ.**[20]** ಇದನ್ನು ಕೊಂಗಾಳ್ವರನ್ನು ನಾಶಪಡಿಸಿದವನೆಂದು ಅರ್ಥೈಸಬಹುದೇ **?** ಹೊಯ್ಸಳ ವಿಷ್ಣುವರ್ಧನನ ಕಾಲದಲ್ಲಿ ಆತನ ದಂಡನಾಯಕ "ಪುನಿಸ" ಕೊಂಗಾಳ್ವರನ್ನು ಹತ್ತಿಕ್ಕಿದ. 'ಪುನಿಸ'ನ ಈ ವಿಜಯದಿಂದಾಗಿ ಹೊಯ್ಸಳ ವಿಷ್ಣು "ಕೊಂಗಾಳ್ವ ನೃಪವನದಾವಾನಲ" ಎಂಬ ಬಿರುದು ಗಳಿಸಿದ್ದನೆಂದು ಡಾ ಎ.ವಿ. ನರಸಿಂಹಮೂರ್ತಿಯವರು ತಿಳಿಸುತ್ತಾರೆ.**[21]** ಆದ್ದರಿಂದ ಹೊಯ್ಸಳ ಪರಮಾಪ್ತ ಮಾಂಡಲೀಕನಾಗಿದ್ದ ಎರಡನೇ ವೈಜರಸನೂ ಸಹ, "ಹೊಯ್ಸಳ-ಕೊಂಗಾಳ್ವ" ತೀವ್ರ ಸಂಘರ್ಷಗಳಲ್ಲಿ ಪಾಲ್ಗೊಂಡು ಹೊಯ್ಸಳರ ವಿಜಯಕ್ಕೆ ಕಾರಣೀಭೂತನಾಗಿದ್ದರಿಂದ "ಕೊಂಗಹತ್ರ್ಯ"ನೆಂಬ ಬಿರುದು ಗಳಿಸಿದಂತೆ ಕಂಡು ಬರುತ್ತದೆ. ಈತನ ಸತಿ ವೈಜಲಾದೇವಿ.**[22]** ಇವರೀರ್ವರ ಪುತ್ರ ಬರ್ಮರಸ.

ಬರ್ಮರಸ (ಕ್ರಿ.ಶ. ೧೧೩೦-೧೧೮೦)

ಆಸಂದಿಯ ಅರಸರಲ್ಲೆಲ್ಲಾ ಸುವಿಖ್ಯಾತನಾದ, ಬರ್ಮರಸನನ್ನು ಕ್ರಿ.ಶ. ೧೧೩೦ರ ಬುಕ್ಕಾಂಬುಧಿಯ ಶಾಸನ,[23]ಗಂಗರ ಸಕಲ ಬಿರುದು – ಬಾವಲಿಗಳೊಂದಿಗೆ ಪರಿಚಯಿಸುತ್ತದೆ. ೧೧೭೩ರ ಮುದಿಗೆರೆಯ ಶಾಸನ "ಬರಸಿಡಿಲಿಟ್ಟ ವೊಯ್ವ ತೆರದಿಂದ ದುರದಾಂತರಿ, ಮಾಂಡಲೀಕರಂ, ತರಿಯೆ, ರಣಾಗ್ರದೊಳ್ನೆರೆದ ಭೂತ, ಪಿಶಾಚ, ದಡಾಕಿನಿಮಯಂ, ಬಿರುವರಿವೀರ..."ನೆಂದು ಆತನ ಶೌರ್ಯವನ್ನು ಕೊಂಡಾಡುತ್ತದೆ. ಅದೇ ಶಾಸನ ಆತನನ್ನು ಗಂಗಾಚೂಡಾಮಣಿ, ವಿದ್ವಜ್ಜನ ಚಿಂತಾಮಣಿ, ಕವಿ, ಗಮಕ, ವಾದಿ, ವಾಗ್ಮಿಗಳಿಗೆ ಆಶ್ರಯ ದಾತನೆಂದು ಕೊಂಡಾಡುತ್ತದೆ.[24] ಕ್ರಿ.ಶ. ೧೧೮೦ರ ಆಸಂದಿಯ ಶಾಸನ, ಬರ್ಮರಸ ಮತ್ತು ಆತನಲೆಂಕ, ಸಂಕಲಮೆಯ ಬಮ್ಮೆನಾಯಕನ ಮರಣವನ್ನು ವೀರೋಚಿತವಾಗಿ ದಾಖಲಿಸುತ್ತದೆ. ಅದೇ ಶಾಸನ, ಆತ ಕೊಂಗು, ಕಳಿಂಗ, ಸಿಂಗಳ, ಸುಲಾಟ, ತೆಲುಂಗ, ಮಾಗಧೋತ್ತುಂಗ, ನೃಪಾಳರು, ಎದುರಿಲ್ಲದೆಂದು ಹೋರಾಡಿ, ಸುರಾಂಗನಾಲಿಂಗನಚಿತ್ತ, ಇಂದ್ರನ ಅಮರಾವತಿಯನ್ನು ಮುತ್ತಿದನೆಂದು ವರ್ಣಿಸುತ್ತದೆ.[25] ಹೊಯ್ಸಳ ವಿಷ್ಣುವರ್ಧನ ೧೧೨೨ ರಲ್ಲಿ ಚಾಲುಕ್ಯರಿಂದ ತೀವ್ರ ಪರಾಭೌವವನ್ನನುಭವಿಸುತ್ತಾನೆ. ಈ ಪರಾಭವದ ನಂತರ ಚಾಲುಕ್ಯ ಆರನೇ ವಿಕ್ರಮಾದಿತ್ಯನಿಗೆ ನಿಷ್ಠನಾಗಿ ಚಾಲುಕ್ಯ ಪರ ಯುದ್ಧಗಳಲ್ಲಿ ಸಕ್ರಿಯ ಸಹಾಯ ಹಸ್ತ ನೀಡತೊಡಗಿದ. ಈ ಅಂಶ ಆಸಂದಿಯ ಅರಸರ ಶಾಶನಗಳಲ್ಲಿ ಸೂಚ್ಯವಾಗಿ ಅಭಿವ್ಯಕ್ತವಾಗಿದೆ. ಕ್ರಿ.ಶ. ೧೧೭೩ರ ಮುದಿಗೆರೆ ಶಾಸನ ಕಲ್ಯಾಣಿ ಚಾಲುಕ್ಯರನ್ನು ಅತ್ಯುನ್ನತ ಪ್ರಶಸ್ತಿಗಳಿಂದ ವರ್ಣಿಸಿ, ಅವರ ಸಾಮಂತ ಅರಸರಾದ ಹೊಯ್ಸಳರನ್ನು "......ಆತನ ತತ್ಪಾದ ಪದ್ಮೋಪಜೀವಿ.... ಶ್ರೀ ವಿಷ್ಣುಭೂಪಂ, ಬೆಳಗುಗೆ ಜಗಂ, ರಾಜಾಮಾರ್ತಾಂಡರೂಪಂ" ಎಂದು ಹೆಚ್ಚಿನ ಯಾವುದೇ ಆಡಂಬರದ ಪ್ರಶಸ್ತಿಗಳಿಲ್ಲದೆ ವರ್ಣಿಸುತ್ತದೆ.[26] ಈ ಹಿನ್ನೆಲೆಯಲ್ಲಿ ಹೊಯ್ಸಳ ಮಾಂಡಲೀಕನಾಗಿದ್ದ ಬರ್ಮರಸ, ಚಾಲುಕ್ಯರ ಪರವಾಗಿ ಕಳಿಂಗ, ಲಾಟ, ಮಾಳ್ವ, (ಮಾಗಧೋತ್ತುಂಗ) ವೆಂಗಿ (ತೆಲುಂಗ)ಯ ಕದನಗಳಲ್ಲಿ ಭಾಗವಹಿಸಿದ್ದಾನೆ. ಅಂತೆಯೇ ಹೊಯ್ಸಳರ ಪರವಾಗಿ ಕೊಂಗಾಳ್ವ (ಕೊಂಗು)ರ ವಿರುದ್ಧ ಹೋರಾಡಿದ್ದಾನೆ. ಈ ನಿರಂತರ ಹೋರಾಟದ ಬದುಕು ಆಸಂದಿಯ ಬರ್ಮರಸನನ್ನು ಆಸಂದಿಯಿಂದ ಬಹುಕಾಲ ಹೊರಗುಳಿಯುವಂತೆ ಮಾಡಿತು. ಈ ರಾಜಕೀಯ ಅನಿವಾರ್ಯತೆ, ವೈಜರಸ ಮತ್ತು ಬರ್ಮರಸರ ಜಂಟಿ ಆಳ್ವಿಕೆಯನ್ನು ಸೃಷ್ಟಿಸಿದ್ದಂತೆ ಕಂಡು ಬರುತ್ತದೆ. ಬರ್ಮರಸನ ಸತಿ ಗಂಗಾಮಹಾದೇವಿ.[27] ಇವರ ಪುತ್ರ ನಾರಸಿಂಗದೇವ ಅಥವಾ ನರಸಿಂಹ.

ನರಸಿಂಹ (ಕ್ರಿ.ಶ. ೧೧೮೦-೧೨೦೨)

ಬರ್ಮರಸ ಮತ್ತು ಗಂಗಾಮಹಾದೇವಿಯವರ ಪುತ್ರ ನರಸಿಂಹನನ್ನು ಕ್ರಿ.ಶ. ೧೧೩೦ರ ಬುಕ್ಕಾಂಬುಧಿಯ ಶಾಸನ, "ಜಗದ್ವಿಖ್ಯಾತ ನರಸಿಂಹ ಭೂಪ ನತಿಬಳ...... ವೀತರಿಪುನಿವಹನ ಖಿಳೋದ್ವಿ...... ತಳನ್ರಿಪ ಮಸ್ತಕಾಗ್ರಮಣಿಯೆನೆ ನೆಗಳ್ದಂ" ಎಂದು ವರ್ಣಿಸುತ್ತದೆ.[28] ಕ್ರಿ.ಶ. ೧೧೮೦ ರಲ್ಲಿ ಆಸಂದಿಯ ಬರ್ಮರಸ ಮರಣ ಹೊಂದಿದ. ಆತನ ಮರಣಾನಂತರ ಅವನ ಮಗ ನರಸಿಂಹ ಭೂಪತಿ ಅಧಿಕಾರಕ್ಕೆ ಬಂದ. ಕ್ರಿ.ಶ. ೧೧೩೦ರ ಶಾಸನದಲ್ಲಿ ನರಸಿಂಹನ ಉಲ್ಲೇಖವಿರುವುದರಿಂದ, ಆತ ಅಧಿಕಾರಕ್ಕೆ ಬರುವಾಗ ಪ್ರಬುದ್ಧ ವಯಸ್ಕನಾಗಿದ್ದನೆಂಬುವುದು ಸುಸ್ಪಷ್ಟವಾಗುತ್ತದೆ. ಕ್ರಿ.ಶ. ೧೧೯೦ರ ಆಸಂದಿ ಶಾಸನ, ಈತನನ್ನು "ಕರಿಪತಿಯಪ್ಪ ಮಾಳವ ಮಹೀಪತಿ, ಬಂಟನಲಾಳ ಭೂಮಿಪಂ, ತುರುಗಚಯಂಗಳಿಂದೆಸೆವ ಗೂರ್ಜರ ಭೂಪತಿ, ಚೋಳ ಭೂಭುಜಂ, ನೆರೆದಿದಿರಾಂತು ಹಾಗೆ, ರಣರಂಗದೋಳುದ್ವನೇ ಕಾಡಿಗೆಲ್ವನೀ ನರಪತಿ, ಬಲ್ಲ ಭೂಪನ ಬೆಸಂ ಒಡೆದಿ ನರಸಿಂಹ ಭೂಭುಜಂ" ಎಂದು ವರ್ಣಿಸುತ್ತದೆ.[29] ಬಹುಶಃ ಈ ಯುದ್ಧಗಳಲ್ಲಿ ನರಸಿಂಹ ತನ್ನ ತಂದೆಯ ಕಾಲದಲ್ಲಿ ಭಾಗವಹಿಸಿದ್ದಿರಬೇಕು. ಏಕೆಂದರೆ ಹೊಯ್ಸಳ ಎರಡನೆಯ ವೀರಬಲ್ಲಾಳ ತನ್ನ ಅಧಿಕಾರಾವಧಿಯಲ್ಲಿ ಮಾಳ್ವ, ಲಾಟ, ಗೂರ್ಜರರೊಡನೆ ಹೋರಾಡಿದ ನಿದರ್ಶನಗಳು ನಮಗೆ ದೊರೆಯುವುದಿಲ್ಲ. ನಂತರ

ಆಸಂದಿಯ ಕ್ರಿ.ಶ. ೧೧೯೧-೯೨ ಮತ್ತು ೧೨೦೨ ಶಾಸನಗಳು[30] ನರಸಿಂಹನ ಆಳ್ವಿಕೆಯ ಕಾಲದಲ್ಲಿ ನೀಡಿದ ದಾನ ದತ್ತಿಗಳನ್ನು ಉಲ್ಲೇಖಿಸುತ್ತದೆ. ನಂತರ ಯಾವುದೇ ಶಾಸನಗಳಲ್ಲಿ ನರಸಿಂಹನ ಪ್ರಸ್ತಾಪ ದೊರೆಯುವುದಿಲ್ಲ. ಆದ್ದರಿಂದ ೧೨೦೨ರ ನಂತರ ಈತ ಮರಣ ಹೊಂದಿರಬೇಕೆನಿಸುತ್ತದೆ. ಕ್ರಿ.ಶ. ೧೨೦೫ರ ಆಸಂದಿಯ ಶಾಸನ ವೈಜರಸನ ಉಪಸ್ಥಿತಿಯನ್ನು ಉಲ್ಲೇಖಿಸಿದರೂ ನರಸಿಂಹನ ಆಳ್ವಿಕೆಯೊಂದಿಗೆ, ಆಸಂದಿಯ ಗಂಗರಸರ ಆಳ್ವಿಕೆ ಬಹುತೇಕ ಕೊನೆಗೊಳ್ಳುತ್ತದೆ.

ಮರುಳಮಾರ್ಕಂಡದೇವ (ಕ್ರಿ.ಶ. ೧೨೦೬-೧೨೧೬)

ಕ್ರಿ.ಶ. ೧೨೦೫ರಲ್ಲಿ ಆಸಂದಿಯ ವೈಜರಸ ಮರಣ ಹೊಂದಿದ ನಂತರ, ಮರುಳುಮಾರ್ಕಂಡದೇವ ಆಸಂದಿನಾಡನ್ನಾಳುತ್ತಿದ್ದಂತೆ ಕ್ರಿ.ಶ. ೧೨೦೬ರ ಆಸಂದಿ ಶಾಸನ[31] ತಿಳಿಸುತ್ತದೆ.

ಹೆಬ್ಬಾರಿಮಾರ್ಕಂಡದೇವ (ಕ್ರಿ.ಶ. ೧೨೧೬-೧೨೨೫)

ಹರಿಹರ ದಣ್ಣಾಯಕರು ಆಸಂದಿನಾಡಂ ಸುಖ ಸಂಖಥಾ ವಿನೋದದಿಂ ರಾಜ್ಯಂಗೆಯುತ್ತಮಿರೆ, ಹೆಬ್ಬಾರಿಮಾರ್ಕಂಡದೇವ ಆಸಂದಿ ನಾಡ ಪ್ರಭುವಾಗಿದ್ದನೆಂದು ಕ್ರಿ.ಶ. ೧೨೧೬ರ ಆಸಂದಿಯ ಶಾಸನ ತಿಳಿಸುತ್ತದೆ.[32]

ತಲಕಾಡಿನ ಗಂಗರ ಪತನಾನಂತರ ಹೊಯ್ಸಳ ರಾಜ್ಯಭಾರದಲ್ಲಿ ಪ್ರಮುಖ ಪಾತ್ರವಹಿಸಿದ್ದ ಆಸಂದಿಯ ಗಂಗರಸರು ೧೨೦೫ರ ನಂತರ ರಾಜಕೀಯ ರಂಗದಿಂದ ಸಂಪೂರ್ಣವಾಗಿ ಕಣ್ಮರೆಯಾಗುತ್ತಾರೆ.

ಆಡಳಿತ

ಹಲವು ಶತಮಾನಗಳ ಸುದೀರ್ಘ ಐತಿಹಾಸಿಕ ದಾಖಲೆ ಹೊಂದಿರುವ ಆಸಂದಿ, ಕರ್ನಾಟಕದ ರಾಜಕೀಯ ಮತ್ತು ಬದುಕಿನೊಂದಿಗೆ ಅಭೇದ ಸಂಬಂಧವನ್ನು ಹೊಂದಿದೆ.

ತಲಕಾಡಿನ ಗಂಗ ಶ್ರೀ ಪುರುಷನ ಕ್ರಿ.ಶ. ೭೫೦ರ ಆಸಂದಿ ಶಾಸನ, ಆತನ ಮಗ ವಿಜಯಾದಿತ್ಯ, ಈ ನಾಡು ಆಳುತ್ತಿದ್ದ ಕಾಲದಲ್ಲಿ ಅವರ ಆಳು, ಚಣ್ಣವೂರಲ್ಲಿ, ಎರಮ್ಮಾ ಆಸಂದಿ ಆಳುತ್ತಿದ್ದನೆಂದು ತಿಳಿಸುತ್ತದೆ.[33] ಗಂಗ ಎರಡನೆಯ ಶಿವಮಾರನ ಕ್ರಿ.ಶ. ೭೯೫ರ, ಆಸಂದಿ ತಾಮ್ರ ಪಟ ಶಾಸನ, ಆತನ ಮಗ ಜಯಸಿಂಹ?ನ ವಿಜ್ಞಾಪನೆಯ ಮೇರೆಗೆ ಅರಸ ಶಿವಮಾರ ಆಸಂದಿ ವಿಷಯಕ್ಕೆ ಸೇರಿದ ತೋರುಗಲ್ಲು ಎಂಬ ಗ್ರಾಮವನ್ನು ಅನೇಕ ವೃತ್ತಿಗಳಾಗಿ ವಿಂಗಡಿಸಿ ಹನ್ನೊಂದು ಜನ ಬ್ರಾಹ್ಮಣರಿಗೆ, ದಾನವಿತ್ತಿದ್ದನ್ನು ಹೆಸರಿಸುತ್ತದೆ.[34] ಈ ಶಾಸನದಲ್ಲಿ ಉಲ್ಲೇಖವಾದ ಎರಡನೆಯ ಶಿವಮಾರನ ಮಗ ಜಯಸಿಂಹ, ಮಾರಣಸಿಂಹನಿರಬೇಕೆಂದು ಲೇಖಕರು ತಿಳಿಸುತ್ತಾರೆ.[35]

ಕ್ರಿ.ಶ. ೯೮೦ರ ಅರಕೆರೆ ಶಾಸನ, ಗಂಗ ಎರಡನೆಯ ರಾಚಮಲ್ಲನ ಕಾಲದಲ್ಲಿ ಮಹಾಬಲಿ ವಂಶದ ಶ್ರೀಮುತ್ತರ ಆಸಂದಿ ನಾಡನ್ನು ಆಳುತ್ತಿದ್ದನೆಂದು ತಿಳಿಸುತ್ತದೆ.[36]

ಕ್ರಿ.ಶ. ೮೯೯ರ ಹಿರೇಬಾಸೂರಿನ ಶಾಸನ, ಗಂಗ, ನೀತಿಮಾರ್ಗ ರಾಜಮಲ್ಲನ ಕಾಲದಲ್ಲಿ ಆಸಂದಿ ನಾಡನ್ನು ನೊಳಂಬ ಮಹಾದೇವ ಆಳುತ್ತಿದ್ದನೆಂದು ತಿಳಿಸುತ್ತದೆ.[37] ಗಂಗ ಮೂರನೆಯ ರಾಚಮಲ್ಲನ ಕ್ರಿ.ಶ. ೯೦೦ ಮುಗಳವಳ್ಳಿ ಶಾಸನವು ಮಾದಿವರ್ಮನನ್ನು ಆಸಂದಿ ನಾಡಿಗೆ ನೇಮಕ ಮಾಡಿದುದನ್ನು ತಿಳಿಸುತ್ತದೆ.[38] ಈತ ಕದಂಬ ವಂಶದವನಿರಬೇಕೆಂದು

ಬಿ.ಎಲ್.ರೈಸ್ ಅಭಿಪ್ರಾಯ ಪಡುತ್ತಾರೆ.[39] ಮೇಲಿನ ಉಲ್ಲೇಖಗಳಿಂದ “ಆಸಂದಿ ನಾಡು” ಕ್ರಿ.ಶ. ೭-ಲನೇ ಶತಮಾನದಿಂದಲೇ ಒಂದು ಪ್ರಮುಖ ಆಡಳಿತ ವಿಭಾಗವಾಗಿತ್ತೆನ್ನುವುದು ಸ್ಪಷ್ಟವಾಗುತ್ತದೆ.

ಐತಿಹಾಸಿಕ ಭೌಗೋಳಿಕ ವ್ಯಾಪ್ತಿ

ಈ ನಾಡು ಕಡೂರು ತಾಲೂಕಿನ ಹಿರೇನೆಲ್ಲೂರು ಹೋಬಳಿಯ ಈಗಿನ ಆಸಂದಿ ಪಟ್ಟಣವನ್ನು ಕೇಂದ್ರವಾಗಿ ಹೊಂದಿತ್ತು. ಹಾಸನ ಜಿಲ್ಲೆಯ ಅರಸೀಕೆರೆ ಮತ್ತು ಬೇಲೂರು ತಾಲೂಕುಗಳನ್ನು ಒಳಗೊಂಡಿತ್ತಾದರೂ ಚಿಕ್ಕಮಗಳೂರು ಜಿಲ್ಲೆಯ ಕಡೂರು ಮತ್ತು ತರೀಕೆರೆ ತಾಲೂಕುಗಳು ಇದರ ಕೇಂದ್ರ ಭಾಗವಾಗಿತ್ತು.[40] ಆದರೆ ಕ್ರಿ.ಶ. ೧೧೬೫ರ ಹಳೇನಿಡನೇಗಿಲ ಶಾಸನ ಆಸಂದಿ ನಾಡಿನ ಅರಬಲ ೭೦ ಮತ್ತು ಕಳಕಿಟ್ಟೆ ೧೨ನ್ನು ಉಲ್ಲೇಖಿಸುತ್ತದೆ.[41] ಇದರಲ್ಲಿ ಅರಬಲ ೭೦, ಈಗಿನ ಶಿವಮೊಗ್ಗ ಜಿಲ್ಲೆಯ ಹೊನ್ನಾಳಿ ತಾಲೂಕಿನಲ್ಲಿದೆ. ಕಳಿಕಟ್ಟೆ ಅರಸೀಕೆರೆ ತಾಲೂಕಿನಲ್ಲಿದೆ. ಆದ್ದರಿಂದ ಆಸಂದಿ ನಾಡು ಪ್ರಸ್ತುತ ಚಿಕ್ಕಮಗಳೂರು ಜಿಲ್ಲೆಯ ಕಡೂರು, ತರೀಕೆರೆ, ಹಾಸನ ಜಿಲ್ಲೆಯ ಬೇಲೂರು, ಅರಸೀಕೆರೆ ಮತ್ತು ಕೆಲವೊಮ್ಮೆ ಶಿವಮೊಗ್ಗ ಜಿಲ್ಲೆಯ ಚೆನ್ನಗಿರಿ, ಹೊನ್ನಾಳಿ ತಾಲೂಕುಗಳನ್ನು ಒಳಗೊಂಡಿರುವುದು ಸ್ಪಷ್ಟವಾಗಿದೆ.[42]

ಆಸಂದಿ ನಾಡಿನ ರಾಜಧಾನಿ “ಆಸಂದಿಯನ್ನು” ನೆಲೆವೀಡು ಎಂದು ಅನೇಕ ಶಾಸನಗಳಲ್ಲಿ ಕರೆಯಲಾಗಿದೆ.[43] ರಾಜಧಾನಿಯನ್ನು “ನೆಲೆವೀಡು” ಎಂದು ಕರೆಯುತ್ತಿದ್ದರೆಂದು ಡಾ. ಎಂ. ಚಿದಾನಂದಮೂರ್ತಿ ತಿಳಿಸುತ್ತಾರೆ.[44] ಚಕ್ರವರ್ತಿಯನ್ನು ಕುರಿತು ಹೇಳುವಾಗ, ಅವನ ಬೇರೆ, ಬೇರೆ ರಾಜಧಾನಿಗಳ ಉಲ್ಲೇಖಗಳು ಬರುತ್ತವೆ. ಇವೆಲ್ಲಾ ಆತನ ರಾಜಧಾನಿಗಳಾಗಿದ್ದವೆಂದು ಎಲ್ಲರೂ ಭಾವಿಸುತ್ತಾರೆ. ಆದರೆ ಆತನಿಗೆ ರಾಜಧಾನಿ ಇದ್ದುದು ಒಂದೇ. ಪ್ರಯಾಣ ಪ್ರಸಂಗದಲ್ಲಿ ಬೀಡು ಬಿಟ್ಟ ಗ್ರಾಮದಿಂದ ದಾನನೀಡಿದಾಗ ಆ ಗ್ರಾಮದಿಂದ ಆಳುತ್ತಿರಲಾಗಿ ಎಂದು ಬರೆಯುವುದು ರೂಢಿ. ಹೀಗೆಂದ ಮಾತ್ರಕ್ಕೆ ಇವೆಲ್ಲಾ ರಾಜಧಾನಿಗಳೆಂದು ಭಾವಿಸಲಾಗದು. ಇದೇ ರೀತಿ ಅಧಿಕಾರಿಗಳನ್ನು ಉಲ್ಲೇಖಿಸುತ್ತಾ “ಆಳುತ್ತಾಮಿರೆ” ಎಂಬ ಪದವನ್ನು ಶಾಸನಗಳು ಬಳಸಿವೆ. ಅಲ್ಲಿ ಈ ಪದ **Ruling** ಮತ್ತು **Administration** ಎಂಬ ಎರಡು ಅರ್ಥಗಳಲ್ಲಿ ಬಳಕೆಯಾಗಿದೆ. ಹಾಗಾಗಿ ಕೆಲವರು ಅಧಿಪತ್ಯದ ಪ್ರಭುಗಳು, ಇನ್ನು ಕೆಲವರು ಆಡಳಿತಾಧಿಕಾರಿಗಳು ಎಂದು ಆಡಳಿತವರ್ಗದವರನ್ನು ವರ್ಗೀಕರಿಸಬೇಕು. ಇದರಿಂದಾಗಿ ಚಕ್ರವರ್ತಿ, ಮಾಂಡಲೀಕ, ಸಾಮಂತರು, ನಾಳ್ಗಾವುಂಡ, ಗಾವುಂಡ ಇವರೆಲ್ಲಾ ಪ್ರಭುಗಳು, ಮಿಕ್ಕವರು ಅಧಿಕಾರಿಗಳೆಂದು ಸ್ಪಷ್ಟವಾಗುತ್ತದೆ.[45] ಕ್ರಿ.ಶ. ೧೨೦೫ರ ಆಸಂದಿ ಶಾಸನ, ಆಸಂದಿಯನ್ನು “ಶ್ರೀಮತ್ ರಾಜಧಾನಿ ಆಸಂದಿಪುರವೆಂದೂ” ತಿಳಿಸುತ್ತದೆ.[46] ಮಾನಸಾರದ ಪ್ರಕಾರ, ಒಂದು ಊರು, ‘ಪಪುರ’ ಎನ್ನಿಸಿಕೊಳ್ಳಬೇಕಾದರೆ ಅದರ ಸುತ್ತ-ಮುತ್ತ ಆರಾಮಗಳು, ತೋಟಗಳು ಇರಬೇಕು. ಮಾರಾಟಗಾರರಿಂದ ಮತ್ತು ಕೊಳ್ಳುವವರಿಂದ ಕಿಕ್ಕಿರಿದು ತುಂಬಿ ಗದ್ದಲದಿಂದ ಕೂಡಿರಬೇಕು. ಏಳು ದೇವ – ದೇವತೆಗಳ ದೇವಸ್ಥಾನದಿಂದ ರಾರಾಜಿಸುತ್ತಿರಬೇಕು.[47] ಕ್ರಿ.ಶ. ೭೫೧ರ ಆಸಂದಿ ಶಾಸನ ೫೨ ಜನರನ್ನು (ಅಯ್ಯದಿಮ್ಬುರುಂ) ನೌಕರರನ್ನು ಉಮತ್ತು ಸೇನೆಯನ್ನು ಉಲ್ಲೇಖಿಸುತ್ತದೆ.[48] ೧೨೦೬ರ ಆಸಂದಿಯ ಶಾಸನ, ಆಸಂದಿಯ ೧೪ ಶಿವದೇವಾಲಯಗಳನ್ನು ಹೆಸರಿಸುತ್ತದೆ.[49] ಕ್ರಿ.ಶ. ೧೨೮೭ರ ಗಡಿವಳ್ಳಿ ಶಾಸನ, ಆಸಂದಿ ನಾಡೊಳಗಣ ಉಭಯನಾನಾದೇಶಿಯನ್ನು ಹೆಸರಿಸುತ್ತದೆ.[50]

ಜಿ.ಆರ್. ಕುಪ್ಪುಸ್ವಾಮಿಯವರು ಮೂರು ವಿಧದ ಪಟ್ಟಣಗಳನ್ನು ಹೆಸರಿಸುತ್ತಾರೆ. ಅವೆಂದರೆ ರಾಜಧಾನಿ, ನೆಲೆವೀಡು, ಪಟ್ಟಣ ಅಥವಾ ನಗರ. ಆದರೆ ರಾಜಧಾನಿಯೆನ್ನುವುದು, ರಾಜ್ಯದ ರಾಜಧಾನಿಯಾಗಿರಬೇಕಿಲ್ಲ. ಒಂದು ಪ್ರದೇಶದ ಮುಖ್ಯ ಪಟ್ಟಣವೂ ಆಗಿರಬಹುದೆನ್ನುತ್ತಾರೆ. ಆದ್ದರಿಂದ ಅವರ ಪ್ರಕಾರ, ನೆಲೆವೀಡು, ರಾಜಧಾನಿಗಿಂತ ಭಿನ್ನವಾಗಿದ್ದು ಪ್ರದೇಶದ ಆಡಳಿತಗಾರ ಅಥವಾ ಸಾಮಂತ ದೊರೆಗಳ ಕೇಂದ್ರಸ್ಥಳವಾಗಿದ್ದು ಚಕ್ರವರ್ತಿಗಳು ಅಂಥದಲ್ಲಿ

ನೆಲೆ ನಿಲ್ಲುವ ವಸತಿ ಸ್ಥಳಗಳಾಗಿದ್ದವು ಇಲ್ಲದಿದ್ದರೆ ಅವುಗಳಿಗೆ ಯಾವುದೋ ವಾಣಿಜ್ಯ-ವ್ಯಾಪಾರದ ಪ್ರಾಮುಖ್ಯತೆ ಅನುಮಾನಾಸ್ಪದವೆನ್ನುತ್ತಾರೆ.[51]

ಆದ್ದರಿಂದ ಆಸಂದಿ ನಾಡಿನ ಕೇಂದ್ರವಾಗಿದ್ದ 'ಆಸಂದಿ' ಮಧ್ಯಕಾಲೀನ ಕರ್ನಾಟಕದ ಪ್ರಮುಖ ಪಟ್ಟಣವಾಗಿತ್ತೆಂದು ಮೇಲಿನ ಅಭಿಪ್ರಾಯಗಳೊಂದಿಗೆ ಸಮಕಾಲೀನ ದಾಖಲೆಗಳ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

ಕ್ರಿ.ಶ. ೧೨೦೨ರ ಆಸಂದಿ ಶಾಸನ, ಕೋಟಿ ಹಾಳದ ಸೂರ್ಯ ದೇವಾಲಯಕ್ಕೆ ದತ್ತಿ ನೀಡಿದವರನ್ನು ಹೆಸರಿಸುತ್ತದೆ. ಆಸಂದಿಯ ನಾರಸಿಂಹ ದೇವ, ವಿರಬಲ್ಲಾಳ ದೇವನ ಹಿರಿಯ ಮಾಣಿಕ್ಯ ಭಂಡಾರಿ ಸಿಂಗಯ್ಯ, ಆಸಂದಿಯ ಮಹಾದೇವ ಶೆಟ್ಟಿಯ ಮಗ ಆದಿಶೆಟ್ಟಿ ತದನಂತರ ಆ ಭಂಡಾರಿ ಸಿಂಗಯ್ಯನ ಮಗ ಸಂಕರ, ಡಣ್ಣಾಯಕ ಆಲಕಟ್ಟದ ಹಿರಿಯಣ್ಣ ಸಿಂಗಯ್ಯ, ಮುದುಗೆರೆಯ ರಾಮಗೌಡ...... ಘೆಯಹರಿಯಮಗ ಗೌಡ, ಮಾಳವದ ಮಾದಿಗೌಡ, ದಂ...... ಬಮ್ಮಗೌಡ, ಕಲ್ಲಕೆರೆಯ ಕನ್ನಗೌಡ, ಅಂತರಗಟ್ಟದ..... ಗೌಡ, ಹಡುಗಲ ಭೀಮಗೌಡ ಇಂತಿವರು ಮುಖ್ಯವಾಗಿದ್ದ ಪ್ರಭುಗಾವುಂಡಗಳು ಇದ್ದು, ಆ ದೇವಾಲಯದ ಜೀರ್ಣೋದ್ಧಾರ ಸಮಸ್ತ ಭೋಗಕ್ಕೆ ಮಲ್ಲಿಕಾರ್ಜುನ ಗುರುಗಳಿಗೆ ಧಾರಾಪೂರ್ವಕವಾಗಿ ಕೊಟ್ಟಂತೆ ತಿಳಿಸುತ್ತದೆ.[52] ಆಡಳಿತದಲ್ಲಿ ಕೇಂದ್ರೀಯ ಮತ್ತು ಪ್ರಾಂತೀಯ ಎಂಬ ಜೋಡು ಪದ್ಧತಿ ರೂಢಿಯಲ್ಲಿತ್ತು. ಅಂದರೆ ಯಾವುದೇ ಪ್ರಾಂತ್ಯದಲ್ಲಿ ಕೇಂದ್ರದ ಆಡಳಿತದವರು, ಪ್ರಾಂತ್ಯದ ಕೆಲಸದವರು ಒಟ್ಟಿಗೇ ಕೆಲಸ ಮಾಡುತ್ತಿದ್ದರು.[53] ಮೇಲೆ ಉಲ್ಲೇಖಿತ ಕ್ರಿ.ಶ. ೧೨೦೨ರ ಆಸಂದಿ ಶಾಸನದಲ್ಲಿ ಹೆಸರಿಸುವ, ಆಸಂದಿಯ ನಾರಸಿಂಗ ದೇವ, ಆಸಂದಿ ನಾಡಿನ ಮಹಾಮಾಂಡಲೀಕ ನಾಗಿದ್ದರೆ, ವೀರಬಲ್ಲಾಳ ದೇವನ ಹಿರಿಯ ಮಾಣಿಕ್ಯ ಭಂಡಾರಿ ಸಿಂಗಯ್ಯ ಮತ್ತು ಆತನ ಮಗ ಸಂಕರ ಡಣ್ಣಾಯಕ ಕೇಂದ್ರೀಯ ಅಧಿಕಾರಿಗಳು. ಇದು ಆಡಳಿತದಲ್ಲಿ ಕೇಂದ್ರೀಯ ಮತ್ತು ಪ್ರಾಂತೀಯ ಎಂಬ ಜೋಡುಪದ್ಧತಿ ಅಸ್ತಿತ್ವದಲ್ಲಿದ್ದುದನ್ನು ಸ್ಪಷ್ಟಪಡಿಸುತ್ತದೆ. ಕ್ರಿ.ಶ. ೧೨೦೬ರ ಆಸಂದಿ ಶಾಸನದಲ್ಲಿ ಮರುಳುಮಾರ್ಕಂಡದೇವ, ಬೆಳುಗೌಡ, ರಾಂಚೇಗೌಡ, ಕಡಜಿಗೌಡ, ಹೋಲಿಗೌಡ, ರಂಗಗೌಡ, ಕಲ್ಲಗೌಡ, ರಾಮಗೌಡ, ಹೊಂನ್ನಗೌಡ, ಮಾಳಗೌಡ, ಹರಿಯಮಗೌಡ, ಮಾಕಗೌಡ, ಬೋಕಗೌಡ, ಆಸಂದಿಯ ಬಮ್ಮಗೌಡ, ಪಟ್ಟಣಸ್ವಾಮಿ ಸೆಟ್ಟಿಯಂಣ್ಣ, ಆದಿಸೆಟ್ಟಿ, ಬಳ್ಳಿಕೆರೆಯ ಬಮ್ಮರಸರು, ಅಂತರಘಟ್ಟದ ಬಿಟ್ಟಗವುಡ ಮುಖ್ಯರಾಗಿ ಪ್ರಭುಗೌಡಗಳು ದತ್ತಿ ನೀಡಿದಂತೆ ಉಲ್ಲೇಖಿಸುತ್ತದೆ.[54] ಅದೇ ರೀತಿ ೧೨೧೬ರ ಆಸಂದಿಯ ಶಾಸನವು ವರ್ಣಿಸುತ್ತದೆ. ಕ್ರಿ.ಶ. ೧೨೭೮ರಲ್ಲಿ ಗುಡಿಹಳ್ಳಿ ಶಾಸನ, ಆಸಂದಿ ನಾಡಿನ ಉಭಯನಾನಾದೇಶೀ, ಸಮಸ್ತ ಪ್ರಜೆ ಗಾವುಂಡಗಳು, ಬೋವಕ್ಕಳು, ಮುಖ್ಯರಾದ ಹದಿನೆಂಟು ಸಮಯಿಗಳು, ನೀಡಿದ ದತ್ತಿಯನ್ನು ವಿವರಿಸುತ್ತದೆ.[55]

ಈ ಮೇಲಿನ ಉಲ್ಲೇಖಗಳು, ನಾಡಿನ ಆಡಳಿತದಲ್ಲಿ, ನಖರರು, ಉಭಯ ನಾನಾ ದೇಶಿಗಳು, ಪ್ರಭುಗಾವುಂಡರು, ಬೋವಕ್ಕಳು, ಹದಿನೆಂಟು ಸಮಯಿಗಳು, ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದ ರೆಂದು ಸ್ಪಷ್ಟಪಡಿಸುತ್ತದೆ.

[1]ಬಿ.ಶೇಕ್‌ಅಲಿ, *ಹಿಸ್ಟರಿ ಆಫ್ ದಿ ವೆಸ್ಟರ್ನ್‌ಗಂಗಾಸ್ - ೧೯೭೬*, ಪು. ೧೫೯.

[2] *ಅದೇ*, ಪು.೧೬೦

[3] *ಅದೇ*, ಪು.೧೬೧

[4] *ಕರ್ನಾಟಕ ಸ್ಟೇಟ್ ಗ್ಯಾಸಟಿಯರ್*- ಚಿಕ್ಕಮಗಳೂರು ಡಿಸ್ಟ್ರಿಕ್ಟ್, ೧೯೮೧, ಪು. ೫೫

[5] *ಮಾನವಿಕ ಕರ್ನಾಟಕ ಸಂಪುಟ* ೧೫, ಸಂಚಿಕೆ ೩. ಆಸಂದಿಯ ೨ ಶಾಸನಗಳು – ಆರ್. ರಾಜಪ್ಪ ದಳವಾಯಿ, ಪು.೫೩

[6] *ಎಪಿಗ್ರಾಫಿಯಾ ಕರ್ನಾಟಕ*, (ಎ.ಕ) ಸಂ.೬, ಕಡೂರು ೧೫೬-೫೭, ಪು.೧೪೮

[7] *ಅದೇ*, ಸಂ.೬, ಇನ್‌ಟ್ರಡಕ್ಷನ್, ಪು. ೮-೧೨

[8] *ಅದೇ*, ಸಂ.೬, ತರೀಕೆರೆ, ೬೨, ಪು.೪೫೩

[9] *ಅದೇ*, ಸಂ.೬, ಇನ್‌ಟ್ರಡಕ್ಷನ್, ಪು. ೮-೧೨

[10] ಡಾ. ಶೇಕ್‌ಅಲಿ, ಸಂ. *ದಿ ಹೊಯ್ಸಳ ಡೈನಾಸ್ಟಿ*, ೧೯೭೨, ಹೊಯ್ಸಳ ಚಾಲುಕ್ಯ ರಿಲೇಶನ್ಸ್- ಡಾ. ಎಂ. ಮುದ್ದಾಚಾರಿ, ಪು.೫೭

[11] ಎ.ಕ., ಸಂ.೬, ತರೀಕೆರೆ, ೮೪, ಪು.೪೭೦, ತರೀಕೆರೆ, ೬೩, ಪು.೪೫೩.

[12] *ಅದೇ*, ಸಂ.೬, ಕಡೂರು ೧೫೬, ಪು. ೧೩೯

[13] *ಅದೇ*, ಸಂ.೬, ತರೀಕೆರೆ, ೬೨, ಪು. ೪೫೨-೫೩

[14] *ಅದೇ*, ಸಂ.೬, ತರೀಕೆರೆ, ೮೫, ಪು. ೪೭೧

[15] *ಅದೇ*, ಸಂ.೬, ತರೀಕೆರೆ, ೬೫, ಆಂಗ್ಲ ಸಾರಾಂಶ ಪು.೧೧೭

[16] *ಅದೇ*, ಸಂ.೬, ತರೀಕೆರೆ, ೬೫, ಪು. ೪೫೪

[17] *ಅದೇ*, ಸಂ.೬, ತರೀಕೆರೆ, ೬೫, ಪು. ೪೫೫

[18] *ಅದೇ*, ಸಂ.೬, ತರೀಕೆರೆ, ೬೬, ಆಂಗ್ಲ ಸಾರಾಂಶ, ಪು.೧೧೭

[19] *ಅದೇ*, ಸಂ.೬, ಕಡೂರು, ೧೪೯, ಪು.೧೩೨

[20] *ಅದೇ*, ಸಂ.೬, ಕಡೂರು, ೬೫, ಪು. ೪೫೪

[21] ಡಾ.ಎ.ವಿ. ನರಸಿಂಹಮೂರ್ತಿ, “ಸಂ. ಇನ್ ಪರ್ಮನೆಂಟ್‌ಹೊಯ್ಸಳ ಫ್ಯೂಡಟರೀಸ್”, ಡಾ. ಬಿ.ಶೇಕ್ ಅಲಿ, ಸಂ. *ದಿ ಹೊಯ್ಸಳ ಡೈನಾಸ್ಟಿ*, ೧೯೭೨, ಪು. ೭೫

[22] *ಎ.ಕ.* ಸಂ.೬, ಕಡೂರು, ೧೪೮, ಪು.೧೩೦

[23] *ಅದೇ*, ಸಂ.೬, ತರೀಕೆರೆ, ೬೬, ೪೫೫-೫೩

[24] *ಅದೇ*, ಸಂ.೬, ತರೀಕೆರೆ, ೮೫, ಪು-೪೭೧

[25] *ಅದೇ*, ಸಂ.೬, ಕಡೂರು, ೧೪೬, ಪು.೧೨೯

[26] *ಅದೇ,* ಸಂ.೬, ತರೀಕೆರೆ, ೮೫, ಪು.೪೭೧

[27] *ಅದೇ,* ಸಂ.೬, ಕಡೂರು, ೧೪೮, ಪು.೧೪೦

[28] *ಅದೇ,* ಸಂ.೬, ತರೀಕೆರೆ, ೬೬, ಪು. ೪೫೫-೫೬

[29] *ಅದೇ,* ಸಂ.೬, ಕಡೂರು, ೧೫೬, ಪು.೧೩೯

[30] *ಅದೇ,* ಸಂ.೬, ಕಡೂರು, ೧೫೭, ಪು.೧೪೧, ೧೫೬, ಪು. ೧೩೮, ೧೪೮, ಪು.೧೩೯

[31] *ಅದೇ,* ಸಂ.೬, ಕಡೂರು, ೧೫೪, ಪು. ೧೩೭

[32] *ಅದೇ,* ಸಂ.೬, ಕಡೂರು, ೧೫೧, ಪು. ೧೩೫

[33] *ಅದೇ,* ಸಂ.೬, ಕಡೂರು, ೧೫೫, ಪು.೧೨೩ 'ಅವರಾಳ್ವೆಣ್ಣವೂರೊಳ್ ಎಮ್ಮನಾಸನಿಂ ಅಳೆ'

[34]ರಾಜಪ್ಪ ದಳವಾಯಿ, 'ಆಸಂದಿಯ ಎರಡು ತಾಮ್ರ ಶಾಸನಗಳು', *ಮಾನವಿಕ ಕರ್ನಾಟಕ*, ಸಂ. ೧೧೧೫, ಸಂಚಿಕೆ ೩, ೧೯೮೫, – ಪು. ೫೩-೬೩

[35]ಅದೇ, ೧೯೯೫, ಪು.೫೬

[36]ಎ.ಎಸ್.ಎಂ.ಎ.ಆರ್. ೧೯೧೦-೧೯೧೧, ಸಂ.೩, ಎಸ್.ಶೆಟ್ಟರ್, ಪು.೧೪೩

[37]ಎ.ಕ.ಸಂ.೬ ಮ ಕಡೂರು, ೧೪೧, ಪು.೧೨೫

[38] *ಅದೇ,* ಚಿಕ್ಕಮಗಳೂರು, ೧೨೮, ಪು.೨೧೪

[39] *ಅದೇ,* ಇನ್‌ಟ್ರಡಕ್ಷನ್‌ಪು.೦೫

[40]ಎಂ.ಎ.ಆರ್. ೧೯೦೮, ಸಂ.,೨, ಪು.೫೯ರ ೭೧ನೇ ಅಡಿಟಿಪ್ಪಣಿ – ಎಸ್.ಸೆಟ್ಟರ್

[41]ಎ.ಎಂ. ಅಣ್ಣಿಗೇರಿ (ಸಂ) '*ಕರ್ನಾಟಕ ಇನ್‌ಸ್ಕ್ರಿಪ್ಷನ್ಸ್*' ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ. ಸಂ., ೪, ಪು. ೩೭

[42]ಆಸಂದಿ ಆಡಿನ ಪುನಾರಚಿತ ಭೂಪಟವನ್ನು (ಭೂಪಟ ನಂ.೧) ನೀಡಲಾಗಿದೆ.

[43]ಎ.ಕ.ಸಂ.೬, ತರಿಕೆರೆ, ೬೨, ಪು. ೪೫೨; ೬೫, ಪು. ೪೫೪; ೭೨, ಪು. ೪೬೦; ೮೫, ಪು. ೭೭೨; ಕಡೂರು ೧೪೮, ಪು. ೧೩೧

[44]ಎಂ.ಚಿದಾನಂದ ಮೂರ್ತಿ, *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,* ೧೯೭೯ ಪು. ೪೬೦

[45]ಎಂ.ಎಂ.ಕಲಬುರ್ಗಿ, *ಮಹಾರಾಷ್ಟ್ರದ ಕನ್ನಡ ಶಾಸನಗಳು* – ೧೯೮೭, ಪು.೫೪

[46]ಎ.ಕ.ಸಂ.೬, ಕಡೂರು, ೧೪೯, ಪು.೧೩೪

[47]ಕನ್ನಡ ಶಾಶನಗಳ ಸಾಂಸ್ಕೃತಿಕ ಅಧ್ಯಯನ – ಡಾ| ಎಂ.ಚಿದಾನಂದಮೂರ್ತಿ, ೧೯೭೯, ಪು. ೨೪೯

[48]ಎ.ಕ.ಸಂ.೬, ಕಡೂರು, ೧೪೫, ಪು.೧೨೩

[49] *ಅದೇ* ಕಡೂರು, ೧೫೪, ಪು. ೧೩೭

[50] *ಅದೇ* ತರೀಕೆರೆ ೮೭, ಪು. ೪೬೬

[51]ಜಿ.ಆರ್.ಕುಪ್ಪುಸ್ವಾಮಿ, *ಇಕನಾಮಿಕ್ ಕಂಡೀಶನ್ಸ್ ಇನ್ ಕರ್ನಾಟಕ*-೧೯೭೫, ಪು. ೯೫-೯೬

[52] *ಎ.ಕ.* ಸಂ.೬, ಕಡೂರು, ೧೪೮, ೧೩೧

[53]ಎಂ.ಎಂ.ಕಲಬುರ್ಗಿ, ೧೯೮೭, *ಹಿಂದೆ ಉಲ್ಲೇಖಿಸಿದ್ದು*, ಪು.೫೪

[54] *ಎ.ಕ.*ಸಂ.೬, ಕಡೂರು, ೧೫೪, ಪು.೧೩೭

[55] *ಅದೇ,* ತರಿಕೆರೆ, ೮೦, ಪು.೪೬೬

ಮಲೆಕರ್ನಾಟಕದ ಅರಸು ಮನೆತನಗಳು: ೮. ಆಸಂದಿಯ ಅರಸರು (೨)

ಗ್ರಾಮಾಡಳಿತ

ಗ್ರಾಮಾಡಳಿತದ ಮುಖ್ಯಸ್ಥನನ್ನು ಪ್ರಭುಗಾವುಂಡನೆಂದು ಕರೆಯಲಾಗುತ್ತಿತ್ತು. ಕ್ರಿ.ಶ. ೧೧೦೪ರ ಬಂಕಿನಕಟ್ಟೆಯ ಶಾಸನ, ಬಂಕಿನಕಟ್ಟೆಯ ಬಂಕಗಾವುಂಡ ಮತ್ತು ಬಮ್ಮಗಾವುಂಡಿಯ ಪುತ್ರ ಚಟ್ಟಗಾವುಂಡ, ಚಂದವೆಗಾವುಂಡಿಯನ್ನು ಹೆಸರಿಸುತ್ತವೆ.**[1]** ಕ್ರಿ.ಶ. ೧೧೩೦ರ, ಬುಕ್ಕಾಂಬುಧಿ ಶಾಸನ, ಅರಗಟ್ಟದ ಚಟ್ಟಗೌಂಡ, ಮಾದಿಗೌಂಡ, ಮಾಚಗೌಂಡನನ್ನು ಉಲ್ಲೇಖಿಸುತ್ತದೆ.**[2]** ಕ್ರಿ.ಶ. ೧೧೪೧ರ ಅನುವನಹಳ್ಳಿ ಶಾಸನ ಕಾಳಗವುಡ ಮತ್ಕಾಳಗವುಡಿ ಅವರ ಆಲಗವುಡ ಮತ್ತು ಆತನ ಮದವಳಿಗೆ ದುಗ್ಗಗಾವುಡಿ ಆ ಗವುಡನ ಮಗ ಕಾಳಗವುಡನನ್ನು ಹೆಸರಿಸುತ್ತದೆ.**[3]** ಕ್ರಿ.ಶ. ೧೧೭೩ರ ಮುದಿಗೆರೆ ಶಾಸನದಲ್ಲಿ ಮುದಿಗೆರೆಯ ಮಹಾಪ್ರಭು ಮತ್ತು ಆದಿಗೌಡ ಮತ್ತು ಮಾಕಗವುಂಡಿಗೆ, ಬ್ಯೇಲಗೌಡ, ಚೀಲಗೌಡ, ರಾಮಗೌಡರೆಂಬ ಮಕ್ಕಳೆಂದು ತಿಳಿಸುತ್ತದೆ.**[4]** ಅಂತೆಯೇ ಕ್ರಿ.ಶ. ೧೨೩೦ರ ಮುದಿಗೆರೆಯ ಮತ್ತೊಂದು ಶಾಸನ ಬ್ಯೇಳಗೌಡ, ಚೀಲಗೌಡ, ರಾಮಗೌಡ, ಆ ಮೂವರು ಮಕ್ಕಳು, ರಾಮಗೌಡ, ಆ ಸೋಮಗೌಡ ಮತ್ತು ಬಯಿಚಗೌಡನನ್ನು ಹೆಸರಿಸುತ್ತದೆ.**[5]** ಹಾಗೆಯೇ ೧೨೦೨ರ ಮತ್ತು ೧೨೦೬ರ ಆಸಂದಿ ಶಾಸನಗಳು ಇತರ ಗಾವುಂಡರನ್ನು ಉಲ್ಲೇಖಿಸುತ್ತವೆ.

ಗ್ರಾಮಾಡಳಿತ ಮುಖ್ಯಸ್ಥರಾಗಿದ್ದ ಆ ಪ್ರಭು ಗಾವುಂಡರು ಗ್ರಾಮ ಸಭೆಗಳ ಸಹಕಾರ ಸಹಾಯದೊಂದಿಗೆ ಗ್ರಾಮಗಳ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಹೊಯ್ಸಳರ ಕಾಲದಲ್ಲಿ ಗ್ರಾಮ ಸಭೆಗಳು ಅಸ್ತಿತ್ವದಲ್ಲಿದ್ದವು. ಶಾಸನಗಳಲ್ಲಿ ಅವುಗಳನ್ನು ಅವುಗಳನ್ನು

ಒಕ್ಕಲು ಮಹಾಜನರು, ಹಲರು, ಹದಿನೆಂಟು ಸಮಯ, ಸಮುದಾಯ, ಸಮೂಹ ಮತ್ತು ಪ್ರಜೆ ಎಂದು ಕರೆಯಲಾಗುತ್ತಿತ್ತೆಂದು ಡಾ. ವೆಂಕಟರತ್ನಂ ತಿಳಿಸಿರುತ್ತಾರೆ.**[6]**

ಧರ್ಮ

ಜೈನಧರ್ಮ

ದಕ್ಷಿಣ ಭಾರತದ ಜೈನಧರ್ಮದ ಇತಿಹಾಸವೆಂದರೆ ಬಹುತೇಕ ಕರ್ನಾಟಕದ ಜೈನ ಧರ್ಮದ ಇತಿಹಾಸವೇ ಆಗಿದೆ. ಈ ಮಾತು ಕರ್ನಾಟಕದಲ್ಲಿನ ಜೈನಧರ್ಮದ ಪ್ರಾಬಲ್ಯಕ್ಕೆ ಸಾಕ್ಷಿಯಾಗಿದೆ. ಕ್ರಿ.ಶ. ೯೭೧ರ ಕಡೂರಿನ ಶಾಸನ "ಸ್ವಸ್ತಿ ಶ್ರೀ ಕೊಂಡಕುನ್ದಾನ್ವಯ ದೇಸಿಯ ಗಣ ಮುಖ್ಯರ್‌ದೇವೇನ್ದ್ರ ಸಿದ್ಧಾನ್ತ ಭಟಾರರ ಹಿರಿಯ ಶಿಷ್ಯರ್ ಚಾನ್ದ್ರಾಯಣದ ಭಟಾರರ ಶಿಷ್ಯರ್‌ಗುಣಚನದ್ರಭಟಾರರ ವರಶಿಷ್ಯರ್‌ಶ್ರೀ ಮದಭಯಣನ್ದಿ ಪಣ್ಡಿತದೇವರನಾಣಬ್ಬೆಕನ್ತಿಯರ ಶಿಶ್ಯನ್ತಿಯರ್ ಪಡಿಯರದೊರಪಯ್ಯನ ಪಿರಿಯರಸಿ ಪಾಂಬಬ್ಬೆ ತಲೆನರಿದು ಮೂವತ್ತು ವರಿಸಂ ತಪಂಗೆಯ್ದನೋನ್ತುಚ್ಚಮರಣಮೇರುದರ್" ಎಂದು ಪಾಂಬಬ್ಬೆಯನ್ನು ಕೊಂಡಾಡಿದೆ.**[7]**

ಹೊಯ್ಸಳ ವಿಷ್ಣುವರ್ಧನನ ಸುಪ್ರಸಿದ್ಧ ದಂಡನಾಯಕ ಗಂಗರಾಜನ ಮರಣಾನಂತರ, ಆತನ ಮಗ ಬೊಪ್ಪ ದೋರ ಸಮುದ್ರದಲ್ಲಿ (ಈಗಿನ ಹಳೇಬೀಡು) ದ್ರೋಹರಘಟ್ಟ ಜಿನಾಲಯವನ್ನು ನಿರ್ಮಿಸಿದ.**[8]**ದ್ರೋಹರಘಟ್ಟ ಎಂಬುದು ಗಂಗರಾಜನ ಪ್ರಸಿದ್ಧ ಬಿರುದುಗಳಲ್ಲೊಂದು. ಈ ಜಿನಾಲಯ ಪ್ರತಿಷ್ಠಾಪನೆಯ ಪ್ರಸಾದ ಹೊಯ್ಸಳ ವಿಷ್ಣುವರ್ಧನನಿಗೆ ತಲುಪಿದಾಗ, ವಿಷ್ಣುವರ್ಧನನು ಬಂಕಾಪುರದಲ್ಲಿ ತನ್ನ ಶತ್ರುಗಳ ವಿರುದ್ಧ ವಿಜಯವನ್ನು ಗಳಿಸಿದ್ದ ಹಾಗೂ ಇದೇ ಸಂದರ್ಭದಲ್ಲಿ ಆತನ ಪತ್ನಿ ಲಕ್ಷ್ಮೀದೇವಿ ಪುತ್ರ ಸಂತಾನ ಪಡೆದ ಸುದ್ದಿ ಆತನಿಗೆ ತಲುಪಿತು. ಇದರಿಂದ ಆನಂದ ಪಟ್ಟ ಹೊಯ್ಸಳ ವಿಷ್ಣು, ದ್ರೋಹರಘಟ್ಟ ಜಿನಾಲಯದ ಜಿನಮೂರ್ತಿಗೆ ವಿಜಯಪಾರ್ಶ್ವನೆಂದೂ ಹಾಗೂ ತನ್ನ ಮಗನಿಗೆ ವಿಜಯ ನರಸಿಂಹ ದೇವನೆಂದು ನಾಮಕರಣ ಮಾಡಿದ ಎಂದು ಬೇಲೂರಿನ ಶಾಸನವೊಂದು ವರ್ಣಿಸುತ್ತದೆ. ಹಾಗೂ ಆಸಂದಿ ನಾಡಿನ ಜಾವಗಲ್ಲನ್ನು ದತ್ತಿ ನೀಡಿದುದಾಗಿ ತಿಳಿಸುತ್ತದೆ.**[9]**

ಹತ್ತನೆ ಶತಮಾನ ಜೈನಧರ್ಮದ ಸುವರ್ಣಯುಗವಾಗಿದ್ದರೆ, ನಂತರದ ಕಾಲ ಜೈನಧರ್ಮದ ಇಳಿಕೆಯ ಕಾಲ. ತಲಕಾಡಿನ ಗಂಗರು ಜೈನ ಧರ್ಮದ ಪ್ರಬಲ ಪೋಷಕರಾಗಿದ್ದರು.

ಬೌದ್ಧ ಧರ್ಮ

ಆಸಂದಿಯ ಗಂಗರಸರ ಕಾಲದ ದಾಖಲೆಗಳಲ್ಲಿ ಬೌದ್ಧಮತದ ನೇರ ಉಲ್ಲೇಖಗಳು ಕಂಡು ಬರುವುದಿಲ್ಲ. ಆದರೆ ಕದಂಬರ ಕಾಲದ ಆಲೂರಿನ ತಾಮ್ರಪಟ ಶಾಸನ ಬೌದ್ಧ ಧರ್ಮಕ್ಕೆ ನೀಡಿದ ದಾನ ದತ್ತಿಗಳನ್ನು ಉಲ್ಲೇಖಿಸುತ್ತದೆ ಎಂದು ಡಾ. ಅ. ಸುಂದರ ತಿಳಿಸಿರುತ್ತಾರೆ.**[10]**ಬೌದ್ಧ ಧರ್ಮ ತನ್ನ ನೇರ ಅಸ್ತಿತ್ವವನ್ನು ಕಳೆದುಕೊಂಡರೂ ಪಾಶುಪತ ಶೈವ ಧರ್ಮದ ವೇಷಾಂತರದಲ್ಲಿ ಅಸ್ತಿತ್ವದಲ್ಲಿದ್ದಿತೆಂಬುದು, ಚಿಕ್ಕಮಗಳೂರಿನ ಮುಳ್ಳಯ್ಯನಗಿರಿ ಅಧ್ಯಯನದಿಂದ ತಿಳಿದು ಬರುತ್ತದೆ. ಮುಳ್ಳಯ್ಯನಗಿರಿಯಲ್ಲಿರುವ ಮುಳ್ಳಯ್ಯನ ಮಠದ ಪ್ರಧಾನ ಗದ್ದುಗೆ ಗಜಪೃಷ್ಠಾಕಾರದ ವಾಸ್ತುವಿನಿಂದ ಸುತ್ತುವರಿಯಲ್ಪಟ್ಟಿದ್ದು ಪೂರ್ವಾಭಿಮುಖವಾಗಿದೆ. ಹೊರಗಿನಿಂದ ವೀಕ್ಷಿಸಿದರೆ ಅರ್ಧ ಗೋಲವನ್ನು ಭೂಮಿಯ ಮೇಲೆ ಮಗುಚಿ ಇಟ್ಟಂತೆ ಕಂಡು ಬರುತ್ತದೆ. ಸಾಮಾನ್ಯವಾಗಿ ಬೌದ್ಧರ ಸ್ತೂಪಗಳು ಈ ರೀತಿಯ ರಚನೆಯನ್ನು ಹೊಂದಿರುತ್ತವೆ. ಈ ಗದ್ದುಗೆ ಬೌದ್ಧರ ಸ್ತೂಪವನ್ನು ಹೋಲುತ್ತಿದ್ದು ಮೇಲ್ಭಾಗದಲ್ಲಿ ಒಂದು ಕಲಶವಿದೆ. ಇದು ಮೂಲ ರಚನೆಯಾಗಿದ್ದು ನಂತರ ಅದಕ್ಕೆ ನವರಂಗ ಮುಖಮಂಟಪವನ್ನು ಸೇರಿಸಲಾಗಿದೆ. ಈ ಎಲ್ಲಾ

ಲಕ್ಷಣಗಳನ್ನು ಗಮನಿಸಿದಾಗ ಹನ್ನೆರಡನೇ ಶತಮಾನಕ್ಕೂ ಮೊದಲು ಈ ಕ್ಷೇತ್ರ ವಜ್ರಯಾನ ಬೌದ್ಧಮತದ ಕೇಂದ್ರವಾಗಿತ್ತೇ? ಎನ್ನುವ ಅನುಮಾನಗಳು ಕಾಡುತ್ತವೆ.[11]

ಶೈವಧರ್ಮ

ವೈದಿಕ ಶೈವಕ್ಕೆ ಭಿನ್ನವಾದ ನಕುಲೀಶ ಪಾಶುಪತ ಹೆಸರಿನ ಆಗಮಿಕ ಶೈವವೊಂದು ಕರ್ನಾಟಕದಲ್ಲಿ ತುಂಬ ಪ್ರಸಿದ್ಧವಾಗಿದ್ದಿತು.[12]ಈ ಧರ್ಮ ಆಚಾರ್ಯರ ಹೆಸರಿನ ಮುಂದೆ ರಾಶಿ, ಪಂಡಿತ, ಜೀಯ, ಶಕ್ತಿಯೆಂಬ ಉತ್ತರ ಪದಗಳು ಬಳಕೆಯಾಗುತ್ತಿದ್ದವು.[13]ಈ ಪಾಶುಪತರ ಮುಖ್ಯ ಕೊಡುಗೆಯೆಂದರೆ ದೇವಾಲಯ ಮತ್ತು ಮಠ ನಿರ್ಮಾಣ. ದೇವಾಲಯವ್ನು ಕಟ್ಟಿಸಿ, ತಮ್ಮ ಹೆಸರಿನಲ್ಲಿ ಲಿಂಗವನ್ನು ಸ್ಥಾಪಿಸಿದವರು ದೇವರೇ ಆಗುತ್ತಾರೆಂಬ ಆಗಮ ವಾಕ್ಯದ ಮೇರೆಗೆ ಆ ಕಾಲದಲ್ಲಿ ಅನೇಕರು ತಮ್ಮ ಮತ್ತು ತಮ್ಮ ಪರಿವಾರದವರ ಹೆಸರಿನಲ್ಲಿ ದೇವಾಲಯಗಳನ್ನು ಕಟ್ಟಿಸುತ್ತಿದ್ದರು.[14]ಆಸಂದಿ ಅರಸರ ಕಾಲದ ದಾಖಲೆಗಳು, ಶೈವ ಧರ್ಮಕ್ಕೆ ಹೆಚ್ಚಿನ ಸ್ಥಾನಮಾನವಿದ್ದುದನ್ನು ದಾಖಲಿಸುತ್ತವೆ. ಕ್ರಿ.ಶ. .... ಬಂಕನಕಟ್ಟೆ ಶಾಸನ, ಬಂಕೇಶ್ವರ ದೇವರ ಪ್ರತಿಷ್ಠೆಯನ್ನು ಮಾಡಿ, ಕೆರೆಯನ್ನು ಕಟ್ಟಿಸಿ, ಶಿವಶಕ್ತಿ ಪಂಡಿತರಿಗೆ ಧಾರಾಪೂರ್ವಕಂ ಮಾಡಿ, ದತ್ತಿ ನೀಡಿರುವುದನ್ನು ದಾಖಲಿಸುತ್ತದೆ.[15]ಕ್ರಿ.ಶ. ೧೧೩೦ರ ಬುಕ್ಕಾಂಬುದಿ ಶಾಸನ, ಶ್ರೀಮತು ಮಂಡಳೀಕ ಬಂಮ್ಮರ್ಯರಸ ದೇವರು, ಅರಘಟ್ಟದ ಕೆರೆಯನ್ನು ಕಟ್ಟಿಸಿ, ಶಿವಾಲ್ಯವನ್ನು ಮಾಡಿ ಶ್ರೀ ರಾಮೇಶ್ವರ ದೇವರಿಗೆ ದಾನ ದತ್ತಿ ನೀಡಿ, ಸುರೇಶ್ವರ ಪಂಡಿತರು ಹಡದಪೂರ್ವ ಸ್ಥಾನಮಂ ಮಹಾಬಳ ದೇವರ್ಗೆ ಧಾರಾಪೂರ್ವಕವಾಗಿ ಕೊಟ್ಟುದುದನ್ನು ದಾಖಲಿಸುತ್ತದೆ.[16]ಕ್ರಿ.ಶ. ೧೧೭೩ರ ಮುದಿಗೆರೆ ಶಾಸನ, ರಾಮೇಶ್ವರ ದೇವರಿಗೆ ದೇವಾಲಯವನ್ನು ಮಾಡಿ, ಕಲ್ಯಾಣಶಕ್ತಿ ದೇವರಿಗೆ ಧಾರಾಪೂರ್ವಕವಾಗಿ ನೀಡಿದ ದತ್ತಿಯನ್ನು ಹೆಸರಿಸುತ್ತದೆ.[17]ಕ್ರಿ.ಶ. ೧೨೦೫ರ ಶಾಸನ, ಮಹಾಪ್ರಧಾನ ಹರಹಸಾಹಣಿ ಆಸಂದಿಪುರದಲ್ಲಿ, ಸಮಸ್ತ ಭುವನ ವ್ಯಾಪಾರ ಪಾರಾಯಣ ತ್ರಿಮೂರ್ತಿಯಂ, ಬಲ್ಲೇಶ್ವರ ದೇವರನ್ನೂ ಪ್ರತಿಷ್ಠೆ ಮಾಡಿದುದನ್ನು ತಿಳಿಸುತ್ತದೆ.[18]ಕ್ರಿ.ಶ. ೧೧೯೧-೯೨ರ ಶಾಸನ ಬ್ರಹ್ಮೇಶ್ವರ ಮತ್ತು ಗಂಗೇಶ್ವರ ದೇವಾಲಯಗಳ ಪ್ರತಿಷ್ಠೆಯನ್ನು ಮಾಡಿ, ರಾಜಗುರು ಕ್ರಿಯಾಶಕ್ತಿ ದೇವರು, ಸೇನಬೋವ ಕಲ್ಯಾಣ ದೇವರಿಗೆ ಧಾರಾಪೂರ್ವಕವಾಗಿ ಮಾಡಿಕೊಟ್ಟ ವಿಷಯವನ್ನು ತಿಳಿಸುತ್ತದೆ.[19]ಕ್ರಿ.ಶ. ೧೨೦೨ರ ಆಸಂದಿಯ ಶಾಸನ, ಅನಾದಿ ಸಂಸಿದ್ಧ.... ಹಳೆ ಸೂರ್ಯ ದೇವರ ದೇವಾಲಯಕ್ಕೆ ದತ್ತಿಯನ್ನು ನೀಡಿ ಬಪ್ಪಜೀಯವರ ಪುತ್ರ ಮಲ್ಲಿಕಾರ್ಜುನ ಗುರುಗಳಿಗೆ ನೀಡಿದುದನ್ನು ಅರುಹುತ್ತದೆ.[20]ಕ್ರಿ.ಶ. ೧೨೦೬ರ ಆಸಂದಿಯ ಶಾಸನ ಗಂಗೇಶ್ವರ, ಬ್ರಹ್ಮೇಶ್ವರ, ವೇದೇಶ್ವರ, ನಖರೇಶ್ವರ, ವೀರ ಬ್ರಹ್ಮೇಶ್ವರ, ದೇಣೇಶ್ವರ, ಬಲೇಶ್ವರ, ಮಾಚೇಶ್ವರ, ಜಗತೇಶ್ವರ, ಜಾದೆಶ್ವರ, ಮಾದೇಶ್ವರ, ಒಳಗಣ ಬಲ್ಲೇಶ್ವರ, ಮತ್ತು ಸೂರ್ಯದೇವರ ದೇವಾಲಯಗಳನ್ನು ಹೆಸರಿಸುತ್ತದೆ ಹಾಗೂ ಸರ್ವಬಾಧೆ ಪರಿಹಾರವಾಗಿ ಆ ಸ್ಥಳಗದ ರಾಜಗುರು, ಕ್ರಿಯಾ ಶಕ್ತಿ ದೇವರು, ಸೂರ್ಯಾಭರಣ ದೇವರು, ಕೇಸವ ಜೀಯ್ಯ, ನಖರೇಶ್ವರ ರುದ್ರಶಕ್ತಿ ಪಿಳ್ಳಜೀಯರಿಗೆ ಧಾರಾಪೂರ್ವಕವಾಗಿ ಬಿಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ.[21]ಕ್ರಿ.ಶ. ೧೨೧೬ರ ಆಸಂದಿ ಶಾಸನ, ಶಕ್ತಿ ಪಂಡಿತರ ಪುತ್ರ ಚಿಕ್ಕರುದ್ರ ಶಕ್ತಿ, ಕಲ್ಯಾಣ ಶಕ್ತಿಯನ್ನು ಹೆಸರಿಸುತ್ತದೆ.[22]ಕ್ರಿ.ಶ. ೧೨೩೫ರ ಆಸಂದಿಯ ಶಾಸನ, ಆಸಂದಿಯ ರಾಜಗುರು, ನಾರಸಿಂಗ, ವಾಮಶಿವದೇವ, ಬೈಚಯ್ಯ, ಚವುಡಯ್ಯ, ಬೊಂದುಜೀಯರನ್ನು, ಕಮೇಶ್ವರದ ಪೊಪುಜೀಯ, ಜವನಜೀಯರನ್ನು, ವೈಜೇಶ್ವರದ ರುದ್ರಶಕ್ತಿ, ಹೆಗ್ಗಡೆಯವರ ಬಲ್ಲಯ್ಯ, ದೋಕಜೀಯ, ಜಗತಜೀಯ, ಕಲ್ಲಜೀಯರನ್ನು, ಬಲ್ಲೇಶ್ವರದ ಕಲ್ಲಜೀಯ, ನಾಗಜೀಯರನ್ನು ಹೆಸರಿಸುತ್ತದೆ.[23]

ಮೇಲಿನ ಈ ಅಂಶಗಳು, ಆಸಂದಿ ನಾಡಿನಲ್ಲಿ ಶೈವಧರ್ಮ ಅತ್ಯಂತ ಪ್ರಬಲವಾಗಿತ್ತೆನ್ನುವ ಅಂಶವನ್ನು ಹೆಚ್ಚು ದೃಢವಾಗಿ ದಾಖಲಿಸುತ್ತದೆ.

ವೈದಿಕ ಧರ್ಮ

ಕ್ರಿ.ಶ. ೭೫೫ರ ಎರಡನೇ ಶಿವಮಾರನ ಆಸಂದಿಯ ತಾಮ್ರಪಟ ಶಾಸನ, ಮಗ ಜಯಸಿಂಹನ? ವಿಜ್ಞಾಪನೆಯ ಮೇರೆಗೆ ಅರಸ ಶಿವಮಾರ ಆಸಂದಿ ವಿಷಯಕ್ಕೆ ಸೇರಿದ ತೋರಗಲ್ಲು ಎಂಬ ಗ್ರಾಮವನ್ನು ವೃತ್ತಿಗಳಾಗಿ ವಿಂಗಡಿಸಿ ನಂದಿಗ್ರಾಮದ ಅತ್ರೇಯ ಗೋತ್ರದ ಪನಂಕಾಟದತ್ತ ಶರ್ಮ, ಡಾಯಣ್ಣೋಯಕುಲದ ಇಂದ್ರಪ್ರಮದ, ವಶಿಷ್ಠ ಗೋತ್ರದ ವಿಷ್ಣುದಾಸ ಶರ್ಮ, ಏಟೂರು ಗ್ರಾಮದ ವಶಿಷ್ಠ ಗೋತ್ರದ ವಿಂಧ್ಯ ಕುಮಾರ ಶರ್ಮ, ಚಾಂದೂರು ಗ್ರಾಮದ ಭಾರದ್ವಾಜ ಗೋತ್ರದ ದ್ರೋನಾಶರ್ಮ, ಪರನ್ನೂರು ಗ್ರಾಮದ ಭಾರದವಾಜ ಗೋತ್ರದ ಭಾಸ್ಕರ, ಕುಮಳೂರು ಗ್ರಾಮದ ಕೌಶಿಕ ಗೋತ್ರದ ಶಿವಕುಮಾರ ಶರ್ಮ, ಅಳಂಪೂರು ಗ್ರಾಮದ ಕಾಶ್ಯಪ ಗೋತ್ರದ ನಾರಾಯಣ ಶರ್ಮ, ಮುಡುಂಬಿ ಗ್ರಾಮದ ಕಾಮಣಯನ ಗೋತ್ರದ ನಾಗಶರ್ಮರಿಗೆ ದಾನವಿತ್ತುದನ್ನು ತಿಳಿಸುತ್ತದೆ. ಈ ಪ್ರತಿಗ್ರಹಿಗಳು ಪರೋಪಕಾರಿಗಳು, ಯಮನಿಯಮತತ್ಪರರು ಹಾಗೂ ದೇವಿದ್ವಿಜಗುರು ಪೂಜನಾರತರರೆಂದು ಶಾಸನದಲ್ಲಿ ಪ್ರಶಂಸಸಿಸಲಾಗಿದೆ.**[24]**ಆದರೆ ಹತ್ತನೇ ಶತಮಾನದ ತರುವಾಯ ಶೈವ ಧರ್ಮದ ಪ್ರಾಬಲ್ಯದಿಂದಾಗಿ ವೈದಿಕ ಧರ್ಮ ಮಂಕಾದ ಹಾಗೆ ಕಂಡು ಬರುತ್ತದೆ. ಕಾರಣ ಆಸಂದಿ ಅರಸರ ಶಾಸನಗಳು ವೈದಿಕ ಧರ್ಮದ ಕಿಂಚಿತ್‌ಉಲ್ಲೇಖವನ್ನು ಮಾಡುವುದಿಲ್ಲ ಆದರೆ ಇರಲೇ ಇಲ್ಲವೆಂದು ಭಾವಿಸುವುದು ತಪ್ಪಾಗುತ್ತದೆ.

ಅಂತರಗಟ್ಟೆ ಮಾರಮ್ಮ

ಆಸಂದಿ ನಾಡಿನ ಅಂತರಗಟ್ಟೆ ಮಾರಮ್ಮ ಜನಪದ ದೇವತೆ. ‘ಅಂತರಗಟ್ಟೆ ಮಾರಮ್ಮ’ನಂತೂ ಜಿಲ್ಲೆಯಲ್ಲೇ ಪ್ರಸಿದ್ಧ ದೇವತೆ.... ಅಂತರಗಟ್ಟಮ್ಮನ ಆಪ್ತ ಸಹಾಯಕನೆಂದರೆ ‘ಆಸಾದಿ’. ಅವನು ತಾಯಿಯನ್ನು ಕುರಿತು ನೂರೆಂಟು ರೀತಿಯಲ್ಲಿ ಹಾಡಿ ಹೊಗಳುತ್ತಾನೆ. ಅದೇ ನಾಲಿಗೆಯಲ್ಲಿ ಅಮ್ಮನನ್ನು ಸಲುಗೆಯಿಂದ ನೂರೆಂಟು ರೀತಿಯಲ್ಲಿ ಬೈದೂ ಹಂಗಿಸುವುದೂ ಉಂಟು.

ಆಸಂದಿ ಸೀಮ್ಯೋಳ್ಳೇ ರೇಸಿಮೆ ಸೀರ್ಯೋಳೆ,
ಏಸೊಂದು ಬೆಳ್ಳಿ ಬಳೆಯೋಳೆ-ಮಾರಮ್ಮ
*ಬೋಸಡಿ ಬಾರೆ ಬಯಲಿಗೆ !***[25]**

ವಾಸ್ತುಶಿಲ್ಪ

ಆಸಂದಿ ನಾಡಿನ, ಆಸಂದಿ, ಮುದಿಗೆರೆ, ಗಡಿಹಳ್ಳಿ, ಕಡೂರು, ಕಲ್ಲಹತ್ತಿ, ಬುಕ್ಕಾಂಬುಧಿ, ಹಾಗೂ ಇನ್ನಿತರ ಅನೇಕ ಸ್ಥಳಗಳಲ್ಲಿ ತಲಕಾಡಿನ ಗಂಗರು ಮತ್ತು ಆಸಂದಿ ಗಂಗರ ವಾಸ್ತುಶಿಲ್ಪಗಳು ಕಂಡು ಬರುತ್ತವೆ.

ಆಸಂದಿಯ ಭಾಗವಾಗಿರುವ, ಕೋಟೆಹಾಳು ದಿಬ್ಬ ಅನೇಕ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅವಶೇಷಗಳ ಆಗರ. ಈ ದಿಬ್ಬದಲ್ಲಿನ ಇಟ್ಟಿಗೆಗಾಗಿ ಜನ ಅದನ್ನು ಅಗೆದು, ಅಮೂಲ್ಯ ಐತಿಹಾಸಿಕ ಸಂಪತ್ತನ್ನು ನಾಶಪಡಿಸುತ್ತಿದ್ದಾರೆ. ಈ ದಿಬ್ಬದಲ್ಲಿ, ಈ ಲೇಖಕನಿಗೆ ಜೈನಶಿಲ್ಪವೊಂದು ದೊರೆತಿತ್ತು.**[26]**ಇದೇ ದಿಬ್ಬದಲ್ಲಿ ಅಗೆಯುವಾಗ ಸ್ಥಳೀಯರಿಗೆ ಪ್ರಾಚೀನ ತಾಮ್ರಪಟ ಶಾಸನಗಳು ದೊರಕಿದ್ದವು. ಈ ಹಿನ್ನೆಲೆಯಲ್ಲಿ ಈ ಪ್ರದೇಶದ ವ್ಯವಸ್ಥಿತ ಅಧ್ಯಯನ ಮತ್ತು ಉತ್ಖನನಗಳು ಗಂಗ ಇತಿಹಾಸದ ಕುರಿತು ಅಪೂರ್ವ ಮಾಹಿತಿ ಒದಗಿಸಬಹುದಾಗಿದೆ. ಈ ಸ್ಥಳದಲ್ಲಿದ್ದ ಸೂರ್ಯ ದೇವಾಲಯವನ್ನು ಆಸಂದಿ ಅರಸರ ಶಾಸನಗಳು ‘ಕೋಟೆಹಳಿದ ಅನಾದಿ ಸಂಸಿದ್ಧ ಹಳಿ ಸೂರ್ಯದೇವರು’ ಎಂದು ಉಲ್ಲೇಖಿಸಿವೆ.**[27]**ಆದರೆ ಅಲ್ಲಿ ಈಗ ಕೇವಲ ವಿಶಾಲ ದಿಬ್ಬವಿದೆ.

ಆಸಂದಿಯ ೧೨೦೬ರ ಶಾಸನವೊಂದು, ಆಸಂದಿಯ ೧೨ ಶಿವಾಲಯಗಳು ಮತ್ತು ಸೂರ್ಯ ದೇವಾಲಯವನ್ನು ಸಮಸ್ತ ಶಿವಾಲ್ಯಂಗಳೆಂದು ಹೆಸರಿಸುತ್ತದೆ.[28]ಆದರೆ ಈಗ ಆಸಂದಿಯಲ್ಲಿ, ಕೇವಲ ಮೂರು ದೇವಾಲಯಗಳಿದ್ದು ತೀರಾ ದುಸ್ಥಿತಿಯಲ್ಲಿವೆ.

ಗಂಗೇಶ್ವರ ಮತ್ತು ಬ್ರಹ್ಮೇಶ್ವರ

ಆಸಂದಿಯನ್ನು ಪ್ರವೇಶಿಸುತ್ತಿದ್ದಂತೆ, ಶಾಲೆಯ ಪಕ್ಕದಲ್ಲಿ ಕಂಡು ಬರುವ ದೇವಾಲಯ ಸ್ಥಳೀಯರಿಂದ ಬೇಕಾಬಿಟ್ಟಿ ಜೀರ್ಣೋದ್ಧಾರಗೊಂಡು ಮತ್ತೆ ದುಃಸ್ಥಿತಿಯಲ್ಲಿದೆ. ಈ ದೇವಾಲಯ ಎರಡು ಗರ್ಭಗೃಹ, ಅಂತರಾಳ, ಏಕವಾದ ಒಂದೇ ತೆರದ ಮಂಟಪವನ್ನು ಒಳಗೊಂಡಿದೆ. ಇಲ್ಲಿನ ಎರಡು ಗರ್ಭಗೃಹಗಳಲ್ಲಿಯೂ ಮೂರ್ತಿಗಳಿಲ್ಲ. ಮುಖ ಮಂಟಪದ ಎರಡು ಬದಿಗಳಲ್ಲಿ ಪ್ರವೇಶ ದ್ವಾರವಿದೆ. ಗರ್ಭಗುಡಿಗೆ ನೇರವಾಗಿ ಎದುರಿನಿಂದ ಎರಡು ಪ್ರವೇಶ ದ್ವಾರವಿದೆ. ಒಟ್ಟು ನಾಲ್ಕು ಪ್ರವೇಶ ದ್ವಾರವನ್ನು ಒಳಗೊಂಡಿರುವ ಮುಖ ಮಂಟಪದಲ್ಲಿ ಕಕ್ಷಾಸನವಿದೆ. ಕಕ್ಷಾಸನದ ಹೊರಭಿತ್ತಿಯಲ್ಲಿ ಸುಂದರವಾದ ಹೂವು, ಲತೆ, ಪ್ರಾಣಿ, ಪಕ್ಷಿ ಹಾಗೂ ಚಿಕ್ಕ, ಚಿಕ್ಕ ಗೋಪುರಗಳ ಆಕರ್ಷಕ ಕೆತ್ತನೆಗಳಿವೆ. ಈ ದೇವಾಲಯವನ್ನು ಕ್ರಿ.ಶ. ೧೧೯೧ ರಲ್ಲಿ ಆಸಂದಿಯ ನಾರಸಿಂಗ ದೇವ ತನ್ನ ತಂದೆ-ತಾಯಿಗಳ ಹೆಸರಿನಲ್ಲಿ ಕಟ್ಟಿಸಿ, ಗಂಗೇಶ್ವರ, ಬ್ರಹ್ಮೇಶ್ವರ ದೇವಾಲಯವೆಂದು ನಾಮಕರಣ ಮಾಡಿದಂತೆ ತಿಳಿದು ಬರುತ್ತದೆ.[29]ದ್ವಿಕೂಟಾಚಲ ಮಾದರಿಯ ಈ ದೇವಾಲಯಗಳು ಆಯತಾಕಾರದ ತಲ ವಿನ್ಯಾಸವನ್ನು ಹೊಂದಿದ್ದು, ಎತ್ತರವಾದ ಅಧಿಷ್ಠಾನದ ಮೇಲೆ ನಿರ್ಮಿಸಲ್ಪಟ್ಟಿವೆ. ದೇವಾಲಯದ ಹೊರಭಿತ್ತಿಯಲ್ಲಿ ಅರೆಗಂಭಗಳು, ಶಿಖರಗಳ ಅಲಂಕರಣೆಯಿದೆ. ಹೊಯ್ಸಳ ಶೈಲಿಯ ಅತ್ಯಂತ ಸುಂದರವಾದ ಹಾಗೂ ಕಲಾತ್ಮಕವಾದ ಸ್ತಂಭಗಳು ದೇವಾಲಯದ ಮುಖ ಮಂಟಪದಲ್ಲಿವೆ. ಭುವನೇಶ್ವರಿಯಲ್ಲಿನ ಕಲಾತ್ಮಕ ಕೆತ್ತನೆ ಆಕರ್ಷಕವಾಗಿದೆ.

ವೀರಭದ್ರ ದೇವಾಲಯ

ಈಗ ವೀರಭದ್ರ ದೇವಾಲಯವೆಂದು ಕರೆಯಲ್ಪಡುವ ದೇವಾಲಯವನ್ನು ಕ್ರಿ.ಶ. ೧೨೦೫ರಲ್ಲಿ ಹೊಯ್ಸಳ ಮಹಾ ಪ್ರಧಾನ ಹರಹಯ ಸಾಹಣಿ ಆಸಂದಿಪುರದಲ್ಲಿ ನಿರ್ಮಿಸಿ ತ್ರಿಮೂರ್ತಿ ಮತ್ತು ಬಲ್ಲೇಶ್ವರ ದೇವರನ್ನು ಪ್ರತಿಷ್ಠೆ ಮಾಡಿಸಿದನೆಂದು ಶಾಸನ ತಿಳಿಸುತ್ತದೆ.[30]ಘಟಿಕಾ ಸ್ಥಾನವಿದ್ದಲ್ಲಿ ತ್ರೈಪುರುಷ (ಬ್ರಹ್ಮ, ವಿಷ್ಣು, ಮಹೇಶ್ವರ) ದೇವಾಲಯಗಳಿರುತ್ತಿದ್ದವು ಎಂದು ಡಾ. ಎಂ.ಎಂ. ಕಲಬುರ್ಗಿ ತಿಳಿಸುತ್ತಾರೆ.[31]ಇದು ತ್ರಿಕೂಟಾಚಲ ದೇವಾಲಯವಾಗಿದ್ದು, ಮಧ್ಯದ ಗರ್ಭಗುಡಿಯಲ್ಲಿರುವ ಲೋಹದ ಮುಖವಾಡಗಳು ಇತ್ತೀಚಿನ ಶಿಲ್ಪಗಳಾಗಿವೆ. ಎಡ-ಬಲದ ಗರ್ಭಗೃಹದಲ್ಲಿ ವೀರಭದ್ರರ ಪುರುಷ ಪ್ರಮಾಣದ ಎರಡು ಶಿಲ್ಪಗಳಿವೆ. ಪೂರ್ವ (ಬಲ)ದ ಗರ್ಭಗುಡಿಯಲ್ಲಿ ಮತ್ತೊಂದು ವೀರಭದ್ರನ ಶಿಲ್ಪವಿದ್ದು ಸ್ಥಳೀಯವಾಗಿ ಅದನ್ನು ಕಲ್ಲಮ್ಮ ಎಂದು ಜನ ಕರೆಯುತ್ತಾರೆ. ಈ ಶಿಲ್ಪಗಳು ವಿಜಯನಗರದ ಶಿಲ್ಪ ಲಕ್ಷಣಗಳನ್ನೊಳಗೊಂಡಿವೆ. ಬಲಭಾಗದ ಗರ್ಭಗೃಹದಲ್ಲಿನ ವೀರಭದ್ರ ಮೂರ್ತಿಯ ಪೀಠದಲ್ಲಿನ ಉಬ್ಬು ಶಿಲ್ಪವನ್ನು ಉಜ್ಜಿ ಅಳಿಸುವ ಪ್ರಯತ್ನ ಮಾಡಿದ್ದರೂ, ಅವು ಇಂದಿಗೂ ಸ್ಪಷ್ಟವಾಗಿ ದೃಗ್ಗೋಚರವಿದ್ದು ಈ ದೇವಾಲಯದ ಅಧ್ಯಯನದಲ್ಲಿ ಮಹತ್ವಪೂರ್ಣ ಸುಳಿವು ನೀಡುತ್ತವೆ. ಪೀಠದ ಮೇಲೆ ಸ್ಪಷ್ಟವಾಗಿ ಸಪ್ತಾಶ್ವಗಳು ಹಾಗೂ ಅರುಣ ಶಿಲ್ಪವಿದ್ದು ಇದು ಖಚಿತವಾಗಿ ಅಲ್ಲಿ ಮೂಲತಃ ಸೂರ್ಯನ ಶಿಲ್ಪವಿತ್ತೆನ್ನುವುದಕ್ಕೆ ಸಾಕ್ಷಿಯಾಗಿದೆ. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ನಿರ್ಮಿಸಿದ ತ್ರೈಪುರುಷ ದೇವಾಲಯಗಳಲ್ಲಿ ಎರಡು ಶೈವ ಮತ್ತು ಸೂರ್ಯ ವಿಗ್ರಹಗಳಿರುವುದನ್ನು ನಾನು ಗುಲಬರ್ಗಾ ಜಿಲ್ಲೆ ಕಾಳಿಗ ದೇವಾಲಯದಲ್ಲಿ ಗಮನಿಸಿದ್ದೇನೆ. ಅದೇ ರೀತಿ ಇಲ್ಲಿಯೂ ಎರಡು ಶಿವಲಿಂಗ ಮತ್ತು ಸೂರ್ಯನನ್ನು ಪ್ರತಿಷ್ಠಾಪಿಸಿದ ತ್ರಿಮೂರ್ತಿ ದೇವಾಲಯವನ್ನು ಹರಹಸಾಹಣಿ ನಿರ್ಮಿಸಿದಂತೆ ಕಂಡುಬರುತ್ತದೆ. ಆದ್ದರಿಂದ ತ್ರೈಪುರುಷ ದೇವಾಲಯವೆಂದರೆ ಕೇವಲ ಬ್ರಹ್ಮ, ವಿಷ್ಣು,

ಮಹೇಶ್ವರರ ಶಿಲ್ಪಗಳೇ ಇರಬೇಕೆಂದಿಲ್ಲ. ಈ ದೇವಾಲಯದ ಹೊರಭಿತ್ತಿಯಲ್ಲಿ ಜನಾರ್ಧನ, ಕೇಶವ, ಸದಾಶಿವ, ಬ್ರಹ್ಮ, ಸ್ತ್ರೀ, ಶಿಲ್ಪಗಳು ಇವೆ. ಭುವನೇಶ್ವರಿಯಲ್ಲಿ ಆಕರ್ಷಕ ಕೆತ್ತನೆಗಳೊಡನೆ, ದಿಕ್ಪಾಲಕರ ಶಿಲ್ಪಗಳಿವೆ. ಈ ದೇವಾಲಯದ ಪ್ರವೇಶ ದ್ವಾರದಲ್ಲಿರುವ ಆನೆಕಲ್ಲುಗಳು (ವ್ಯಾಳಿ ಶಿಲ್ಪಗಳು) ಕೇವಲ ಆಕರ್ಷಣೀಯ ದೃಷ್ಟಿಯಿಂದಲ್ಲದೆ ಅವುಗಳ ಪ್ರಾಚೀನತೆಯಿಂದಲೂ ನಮ್ಮ ಗಮನ ಸೆಳೆಯುತ್ತವೆ. ಇಲ್ಲಿನ ತ್ರಿವಿಕ್ರಮ ಶಿಲ್ಪ ಹಾಗೂ ನಟರಾಜ, ಎಲ್ಲೋರಾದ ಕೈಲಾಸ ದೇವಾಲಯದ ಭಿತ್ತಿ ಕೆತ್ತನೆಗಳನ್ನು ನೆನಪಿಸುತ್ತವೆ. ಆದ್ದರಿಂದ ಸುಮಾರು ೮-೯ನೇ ಶತಮಾನದ ಯಾವುದೇ ಹಳೆ ದೇವಾಲಯದಿಂದ ಇವುಗಳನ್ನು ತಂದು ಇಲ್ಲಿ ಇಟ್ಟಿರಬೇಕೆನಿಸುತ್ತದೆ.

ಚಂಡಿಕೇಶ್ವರಿ ದೇವಾಲಯ

ಈ ದೇವಾಲಯದ, ಎರಡು ಗರ್ಭಗುಡಿಯಲ್ಲಿ, ಎರಡು ಶಿವಲಿಂಗಗಳಿವೆ. ಮಧ್ಯದ ಗರ್ಭಗುಡಿ ಖಾಲಿಯಿದೆ. ಎಡಭಾಗದ ಗರ್ಭಗುಡಿಯಲ್ಲಿ ಲಿಂಗದ ಎಡಭಾಗಕ್ಕೆ ಸಿಂಹದ ಶಿಲ್ಪವೊಂದಿದೆ. ತಟ್ಟನೆ ಚೋಳರ ಸಿಂಹವನ್ನು ನೆನಪಿಸುವ ಅದು ಆಸಂದಿ ಗಂಗರ ಕಾಲದ ಅವಶೇಷ. ಅದೇ ಗರ್ಭಗೃಹದ ಎಡಬದಿ ಗೋಡೆಗೆ, ತಾಗಿಸಿದಂತಿರುವ ಸ್ತ್ರೀ ಶಿಲ್ಪ “ಕಾಲಭೈರವಿ”ಯದು, ಕೊರಳಲ್ಲಿ ರುಂಡಮಾಲೆ, ಜಟೆಯಲ್ಲಿ ರುಂಡ ಶಿಲ್ಪ, ಪಾನಪಾತ್ರೆ ಕೈಯಲ್ಲಿ, ಪಾನಪಾತ್ರೆಯ ಕೆಳಗೆ ಶುನಕ (ನಾಯಿ) ಮತ್ತು ಬೇತಾಳನ ಕೆತ್ತನೆಗಳಿವೆ. ಕೈಯಲ್ಲಿ ರುಂಡವೊಂದನ್ನು ಹಿಡಿದಿರುವಂತೆ ಚಿತ್ರಿಸಲಾಗಿದೆ. ಮತ್ತೊಂದು ಕೈಯಲ್ಲಿ ತ್ರಿಶೂಲವಿದೆ. ಎಲ್ಲವೂ ಹೆಸರಿಗೆ ತಕ್ಕ ರೂಪವಾಗಿದೆ. ಇದು ಸಹ ಆಸಂದಿ ಅರಸರ ಕಾಲದ ಶಿಲ್ಪ. ಮತ್ತೊಂದು ಸ್ತ್ರೀ ಶಿಲ್ಪವಿದ್ದು ಕೈಯಲ್ಲಿ ಬಿಲ್ಲು ಬಾಣಗಳಿವೆ. ಅದರ ಇತರ ಲಕ್ಷಣಗಳು ಸ್ಪಷ್ಟವಾಗಿಲ್ಲದಿರುವುದರಿಂದ ಗುರುತಿಸಲು ಸಾಧ್ಯವಾಗುವುದಿಲ್ಲ. ಈ ಮೂರ ಗರ್ಭಗುಡಿಗಳಿಗೆ ಒಂದೇ ಮುಖ ಮಂಟಪವಿದೆ. ಲಿಂಗದ ಎದುರು ನಂದಿಗಳಿವೆ. ಮುಖಮಂಟಪ ಸಂಪೂರ್ಣ ಹೊಯ್ಸಳ ಶೈಲಿಯಲ್ಲಿದೆ. ಆಕರ್ಷಕ ಕೆತ್ತನೆಗಳಿಂದ ಕೂಡಿದ ಭುವನೇಶ್ವರಿಗಳು, ಅದರಲ್ಲಿ ತಾಂಡವಮೂರ್ತಿ, ವೀರಭದ್ರನ ಶಿಲ್ಪಗಳಿವೆ. ಭುವನೇಶ್ವರಿಯ ಅಷ್ಟ ದಿಕ್ಕುಗಳಲ್ಲಿ ಅಷ್ಟ ದಿಕ್ಪಾಲಕರ ಪಟ್ಟಿಕೆಗಳಿವೆ ಹಾಗೂ ರಾಮಾಯಣ ಮತ್ತು ಮಹಾಭಾರತದ ಕೆತ್ತನೆಗಳಿವೆ.

ಉಪಸಂಹಾರ

ಕ್ರಿ.ಶ. ೧೧೧೦ಳರ ಬಂಕನಕಟ್ಟೆ ಶಾಸನ,**[32]**ಗಂಗ ನಾಡರಸನನ್ನು ತನ್ನ ಪರಂಪರಾಗತ ಬಿರುದುಗಳೊಂದಿಗೆ, ಕೋದಂಡ ಪಾತ್ಥರಣ, ರಂಗನೀರ, ಬಿಲ್ಲಂಕಕಾರ, ಪರಮಂಡಲ ಸೂರೆಕಾರ, ಕಂಣಂಬಿನಾತನೆಂದು ಕರೆಯುತ್ತದೆ.

ಮೊದಲನೆ ವೈಜರಸ ‘ಕಣ್ಣಂಬಿನಾತ’ನೆಂದು ಬಿರುದು ಧರಿಸಿದ ಮೊದಲ ಗಂಗರಸ, ಆತನ ನಂತರದ ಈ ಮನೆತನದ ಎಲ್ಲಾ ದೊರೆಗಳು, ಮೊದಲನೆ ವೈಜರಸ ಮತ್ತು ಶ್ರೀನಾಡ ಪ್ರಶಸ್ತಿಗಳೊಂದಿಗೆ ಗುರುತಿಸಿಕೊಂಡಿದ್ದಾರೆ. “ನೋಡಿ ತಪ್ಪದೆಸೆವ ಕಣ್ಣಂಬಿನವರು” ಎಂಬ ಉಲ್ಲೇಖವನ್ನು ರಾಜಾರಾವ್ ಹೆಗಡೆಯವರು ಮಾಡಿದ್ದಾರೆ.**[33]**ಆಸಂದಿಯ ಕ್ರಿ.ಶ. ೧೨೦೬ರ ಶಾಸನವೊಂದು ಆಸಂದಿಯ ಶಿವಸ್ಥಾನಗಳನ್ನು ಹೆಸರಿಸುತ್ತಾ ಬಲ್ಲೇಶ್ವರ ಮತ್ತು ಒಳಗಣ ಬಲ್ಲೇಶ್ವರಗಳನ್ನು ಉಲ್ಲೇಖಿಸುತ್ತದೆ. ಆಸಂದಿ ನಾಡಿನ ಅನೇಕ ಶಾಸನಗಳಲ್ಲಿ ವ್ಯಕ್ತಿನಾಮಗಳು, ಬೀರ, ಮಾರ, ಬಯಿಚ ಮುಂತಾಗಿ ದೊರೆಯುತ್ತವೆ. ೧೨೭೮ರ ಗಡಿಹಳ್ಳಿ ಶಾಸನ (ಟಿ.ಕೆ.೮೦) ಆದಿ ಕಲಿದೇವ, ರಾಮನಾಥ, ಸಬ್ಬಳೇಶ್ವರ ದೇವಾಲಯಗಳೊಂದಿಗೆ ಶ್ರೀ ಮಯಿಲಾರನನ್ನು ಉಲ್ಲೇಖಿಸುತ್ತದೆ. ಆಸಂದಿಯಲ್ಲಿ ಬಿಲ್ಲು ಬಾಣ ಹೊಂದಿರುವ ಸ್ತ್ರೀ ಶಿಲ್ಪವೊಂದಿದೆ.

ಆಸಂದಿ ನಾಡಿನಲ್ಲಿ ಆಸಂದಿಯೂ ಸೇರಿದಂತೆ, ಕಡೂರು, ಬೀರೂರು ಅನೇಕ ಕಡೆಗಳಲ್ಲಿ ಬೀರೇಶ್ವರ ಜನಸಾಮಾನ್ಯರ ಅಂದರೆ ಕುರುಬರ ಜನಪ್ರಿಯ ದೈವ. ಬಲ್ಲೇಶ್ವರ, ರಂಗ, ರಾಮು,

ಇವೆಲ್ಲಾ ಬೇಟೆಯ ಮೂಲದ ದೇವತೆಗಳು. ಆಸಂದಿ ಅರಸರ ಪ್ರಭು ಗಾವುಂಡುಗಳನ್ನು ಒಂದು ಶಾಸನ 'ಸತ್ಯರತುನಾಕರ ಸಿವಗಣವತಾರ, ಮಹೇಶ್ವರ, ಪ್ರಜೆಮೆಚ್ಚೆಗಂಡ, ದಾಯಿಗ, ಬೇಟೆಕಾರ, ಸಿವಪಾದಸೇಕರ' ನೆನ್ನುತ್ತದೆ. ಈ ಅಂಶಗಳನ್ನು ಐತಿಹಾಸಿಕ ಮತ್ತು ಜಾನಪದೀಯ ಹಿನ್ನೆಲೆಯಲ್ಲಿ ಇನ್ನೂ ಹೆಚ್ಚಿನ ಅಧ್ಯಯನಕ್ಕೊಳಪಡಿಸಬೇಕಾಗಿದೆ.

[1] *ಅದೇ,* ತರಿಕೆರೆ, ಪು.೪೫೩

[2] *ಅದೇ,* ತರಿಕೆರೆ, ೬೬, ಪು.೪೫೬

[3] *ಅದೇ,* ತರಿಕೆರೆ, ೬೫, ಪು.೪೫೪

[4] *ಅದೇ,* ತರಿಕೆರೆ, ೮೫, ಪು.೪೭೧

[5] *ಅದೇ,* ತರಿಕೆರೆ, ೮೩, ಪು.೪೬೯

[6]ಡಾ. ಎ.ವಿ.ವೆಂಕಟರತ್ನಂ, "ವಿಲೇಜ್ ಆಟೋನಮಿ, ಅಂಡರ್ ದಿ ಹೊಯ್ಸಳಸ್" ಶೇಕ್‌ಅಲಿ, *ಹಿಂದೆ ಉಲ್ಲೇಖಿಸಿದ್ದು* – ಪು.೧೩೭

[7]ಎ.ಕ.ಸಂ.೬ ಕಡೂರು, ೧, ಪು.೧

[8]ಎ.ಎಸ್.ಎಮ್.ಎ.ಆರ್., ೧೯೦೮, ಸಂ. II ಪು. ೫೯, ಎಸ್.ಶೆಟ್ಟರ್

[9]ಡಾ.ಎಚ್.ವಿ.ಶ್ರೀನಿವಾಸಮೂರ್ತಿ, "ಜೈನಿಸಮ್‌ಅಂಡರ್‌ದಿ ಹೊಯ್ಸಳಾಸ್" ಡಾ. ಬಿ.ಷೇಕ್‌ಅಲಿ, *ಹಿಂದೆ ಉಲ್ಲೇಖಿಸಿದ್ದು,* – ಪು.೩೨೧-೨೨.

[10]ಮಲೆನಾಡು ಕರ್ನಾಟಕ ಅರಸು ಮನೆತನಗಳು ವಿಚಾರ ಸಂಕಿರಣ – ಫೆಬ್ರುವರಿ ೧೨, ೧೩, ೨೦೦೦. ಪ್ರಸ್ತುತ ಪ್ರಬಂಧವನ್ನು ಲೇಖಕ ಮಂಡಿಸಿದಾಗ ಈ ಶಾಸನದ ವಿಷಯವಾಗಿ ಡಾ| ಅ. ಸುಂದರ ಅವರು ನೀಡಿದ ಮಾಹಿತಿ. ಅದಕ್ಕಾಗಿ ಈ ಲೇಖಕ ಅಭಾರಿಯಾಗಿದ್ದಾನೆ.

[11]ಟಿ. ಮುರುಗೇಶಿ, "ಗತಕಾಲದ ಚಿರಂತ ಸಾಕ್ಷಿ" – ಮುಳ್ಳಯ್ಯನ ಗಿರಿ, ಶಿರೋರತ್ನ ಚಿಕ್ಕಮಗಳೂರು ಜಿಲ್ಲಾ ಕನ್ನಡ ದಿನಪತ್ರಿಕೆ, ೬-೪-೧೯೯೦

[12]ಡಾ.ಎಂ.ಎಂ.ಕಲಬುರ್ಗಿ, *ಹಿಂದೆ ಉಲ್ಲೇಖಿಸಿದ್ದು,* ೧೯೮೭, ಪು.೪೩

[13]ಅದೇ. ಪು.೪೩

[14]ಅದೇ, ಪು.೪೪

[15] *ಎ.ಕ.* ಸಂ.೬, ತರೀಕೆರೆ, ೬೨, ಉಪ. ೪೫೩

[16]ಅದೇ, ತರೀಕೆರೆ, ೬೬, ಪು. ೪೫೬

[17]ಅದೇ, ತರೀಕೆರೆ, ೮೫, ಪು. ೪೭೨

[18]ಅದೇ, ತರೀಕೆರೆ, ೧೪೯ ಪು. ೧೩೪

[19]ಅದೇ, ತರೀಕೆರೆ, ೧೪೭ ಪು. ೧೪೩

[20]ಅದೇ, ತರೀಕೆರೆ, ೧೪೮ ಪು. ೧೩೧

[21]ಅದೇ, ತರೀಕೆರೆ, ೬೧ ಪು. ೪೫೨

[22]ಅದೇ, ತರೀಕೆರೆ, ೧೫೧ ಪು. ೧೩೬

[23]ಅದೇ, ತರೀಕೆರೆ, ೧೫೨ ಪು. ೧೩೬

[24]ಆರ್. ರಾಜಪ್ಪ ದಳವಾಯಿ, "ಆಸಂದಿಯ ಎರಡು ತಾಮ್ರ ಶಾಸನಗಳು", ಮಾನವಿಕ ಕರ್ನಾಟಕ ಸಂ.೧೫.೩, ೧೯೮೫, ಪು.೫೬

[25]*ಚಿಕ್ಕಮಗಳೂರು ಜಿಲ್ಲಾ ದರ್ಶನ,*ಹೋಗಿ ಬರುವೇನು ತೌರಿಗೆ, ಪು. ೧೬೫-೧೬೬ – ಗೊ.ರು.ಚೆನ್ನಬಸಪ್ಪ.

[26]ಈ ಶಿಲ್ಪ ಪ್ರಸ್ತುತ ಶಿರ್ವದ ಎಂ.ಎಸ್.ಆರ್.ಎಸ. ಕಾಲೇಜಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂರಕ್ಷಿಸಲ್ಪಟ್ಟಿದೆ. ಕೆಂಪು ಮರಳುಗಳಲ್ಲಿನ ಈ ಚಿಕ್ಕ ಶಿಲ್ಪ ಪದ್ಮಾಸನ ಭಂಗಿಯಲ್ಲಿ ಕುಳಿತಿದ್ದು, ಸೊಂಟದ ಮೇಲ್ಭಾಗ ತುಂಡಾಗಿ ಹೋಗಿದ್ದು ಮೇಲ್ಭಾಗ ದೊರೆತಿಲ್ಲ. ಅತ್ಯಂತ ಆಕರ್ಷಕವಾಗಿರುವ ಈ ಜಿನಬಿಂಬ ೧೦ನೇ ಶತಮಾನದ ಶಿಲ್ಪಲಕ್ಷಣಗಳನ್ನೊಳಗೊಂಡಿದೆ.

[27]ಎ.ಕ. ಸಂ.೬, ಕಡೂರು, ೧೪೮, ಪು.೧೩೧.

[28]ಅದೇ, ಕಡೂರು, ೧೫೪, ಪು. ೧೩೭

[29]ಅದೇ, ಕಡೂರು, ೧೫೭, ಪು. ೧೪೩

[30]ಅದೇ, ಕಡೂರು, ೧೪೯, ಪು. ೧೩೪

[31]ಡಾ. ಎಂ.ಎಂ.ಕಲಬುರ್ಗಿ*, ಹಿಂದೆ ಉಲ್ಲೇಖಿಸಿದ್ದು*, ೧೯೮೭, ಪು.೫೦

[32]ಎ.ಕ.ಸಂ.೬, ತರೀಕೆರೆ ೬"ಹೊಸಗುಂದದ ಅರಸರು" – ರಾಜಾರಾಮ್ ಹೆಗಡೆ, *ಮಲೆನಾಡು ಕರ್ನಾಟಕ ಅರಸು ಮನೆತನಗಳು ವಿಚಾರ ಸಂಕಿರಣ* ೧೨, ೧೩ ಫೆಬ್ರುವರಿ ೨೦೦೦ ಶಿವಮೊಗ್ಗ.೨, ಪು. ೪೫೨-೫೩

[33]

ಮಲೆಕರ್ನಾಟಕದ ಅರಸು ಮನೆತನಗಳು: ೯. ಹಾರುವ ಬೇಲುಹೂರು ಕದಂಬರು (ಸಕಲೇಶಪುರ ಕದಂಬರು)

ಕ್ರಿಸ್ತಶಕ ೬ನೇ ಶತಮಾನದಲ್ಲಿ ಕದಂಬರು ಚಾಲುಕ್ಯರಿಗೆ ಸೋತು ಅವರ ಮಾಂಡಳಿಕರಾದರು. ಆಗ ಕದಂಬರ ರಾಜ್ಯವು ಒಡೆದು ಅವರ ವಂಶದವರಿಂದಲೇ ಆಳ್ವಿಕೆಗೊಳಗಾಗಿದ್ದ ಪ್ರದೇಶಗಳು ಚಿಕ್ಕ – ಚಿಕ್ಕ ರಾಜ್ಯಗಳಾಗಿ ಅಸ್ತಿತ್ವಕ್ಕೆ ಬಂದವು ಅಥವಾ ಕಾಲಗತಿಯಲ್ಲಿ ಬನವಾಸಿಯ ಮೂಲ ಕದಂಬರು ಹಲವಾರು ಟಿಸಿಲುಗಳಾಗಿ ಬೇರೆ-ಬೇರೆ ಪ್ರದೇಶಗಳಿಗೆ ಹೋಗಿ ನೆಲಸಿ ಅಲ್ಲಿಯೆ ಆಳ್ವಿಕೆ ಮಾಡತೊಡಗಿರಬೇಕು. ಹೀಗೆ ಆಳ್ವಿಕೆ ಮಾಡಿದವರಲ್ಲಿ ಸಕಲೇಶಪುರ ಮತ್ತು ಸೋಮವಾರ ಪೇಟೆ (ಕೊಡಗು) ಪ್ರದೇಶಗಳಲ್ಲಿ ನೆಲೆಸಿ ಆಳಿದ ಸಕಲೇಶಪುರದವರೆಂದು ಹೆಸರಿಸಲ್ಪಡಬಹುದಾದ ಕದಂಬರೂ ಸಹ ಒಬ್ಬರು. ಇವರನ್ನು ಮಂಜ್ರಾಬಾದ್ ಕದಂಬರು ಅಥವಾ ಬೇಲೂರು ಕದಂಬರೆಂದೂ ಕರೆಯುತ್ತಾರೆ. ಈ ಹಿಂದೆ ಸಕಲೇಶಪುರಕ್ಕೆ ಸಮೀಪದಲ್ಲೇ ಇರುವ ಟಿಪ್ಪುವಿನದೆಂದು ಹೇಳಲಾದ ಮಂಜ್ರಾಬಾದ್ ಕೋಟೆಯಿಂದಾಗಿ ಅದನ್ನು ಮಂಜ್ರಾಬಾದ್ ತಾಲ್ಲೂಕೆಂದು ಕರೆದಿದ್ದರು. ಆದ್ದರಿಂದಲೇ ಈ ಪರಿಸರದಲ್ಲಿ ಆಳ್ವಿಕೆ ಮಾಡಿದ ಕದಂಬರನ್ನು ಮಂಜ್ರಾಬಾದ್ ಕದಂಬರೆಂದು ಕರೆಯಲಾಗುತ್ತದೆ. ಜಾರ್ಜ್ ಮೊರೆಸ್ ಅವರು ಇವರನ್ನು ಬೇಲೂರು ಕದಂಬರೆಂದು ಕರೆಯಲು ಕಾರಣ ಈ ಅರಸರು ಪಶ್ಚಿಮ ದಿಕ್ಕಿನಲ್ಲಿ ಇರುವ ಇಂದಿನ ಹಳ್ಳಿ ಹಾಲಬೇಲೂರನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದುದೇ ಆಗಿದೆ.**[1](ನಕಾಶೆ ನೋಡಿ)**

ದೇವ ದೇವ ಮಹಾರಾಜ (ಕದಂಬರಸ)

ಮೊದಲ ಅರಸನನ್ನು ದೇವ ದೇವ ಮಹಾರಾಜನೆಂದು ಗುರುತಿಸಲಾಗಿದೆ. ಈತನು ೧೧ನೇ ಶತಮಾನದ ಸುಮಾರಿಗೆ ಬಲಶಾಲಿಗಳಾಗಿದ್ದ ಗಂಗರ ಪ್ರಭಾವವಲಯ ಮಂಕಾದಂತೆ ಸ್ವತಂತ್ರ ರಾಜ್ಯವನ್ನೆ ಸ್ಥಾಪಿಸುವ ಕನಸು ಕಂಡನು. ಈತನಿಗೆ ಸಂಬಂಧಿಸಿದ ಹಲಸುಲಿಗೆ ಶಾಸನವೊಂದರಲ್ಲಿ**[2]** ಪಲ್ಪಸೆಟ್ಟಿ ಎಂಬಾತ 'ವೆಳೆಯೆಳ್ದು' ಸತ್ತಾಗ ದತ್ತಿ ಕೊಟ್ಟ ಸಂಗತಿ ಬಂದಿದೆ. ಶಾಸನದಲ್ಲಿ ತೇದಿ ಇಲ್ಲದಿದ್ದರೂ ಬಿ.ಎಲ್. ರೈಸ್ ಅವರು ಇದರ ಕಾಲವನ್ನು ಕ್ರಿ.ಶ. ೧೦೦೦ ಎಂದಿದ್ದಾರೆ.**[3]** ಈ ಶಾಸನದಲ್ಲಿ 'ದೇವ ದೇವ ಮಾಹಾರಾಜ' ಎಂಬ ಹೆಸರಿದ್ದು ಈತನೇ ದತ್ತಿಯನ್ನು ಕೊಟ್ಟ 'ಕದಂಬರಸ' ಆಗಿರಲು ಸಾಧ್ಯ**[4]** 'ದೇವ ದೇವ ಮಾಹಾರಾ (ಅ)ಜ' ಎಂಬ ಹೆಸರು ಗಮನಾರ್ಹವಾಗಿದ್ದು 'ದೇವವರ್ಮ' ಎಂಬುದಕ್ಕೆ ಹತ್ತಿರವಾಗಿದೆ.**[5]**

ಮಲಪರಾಜ

ಕ್ರಿ.ಶ. ೧೦೨೫ಕ್ಕೆ ಸೇರಿದ ಕಣತೂರಿನ ಶಾಸನದಲ್ಲಿ ಯಾವುದೊ ಕದಂಬ ರಾಜನ ಹೆಸರು ಅಳಿಸಿಹೋಗಿದೆಯೆಂದು *ಎಪಿಗ್ರಾಫಿಯ ಕರ್ನಾಟಿಕ*ದ ಪೀಠಿಕಾ ಭಾಗದಲ್ಲಿ ಅಭಿಪ್ರಾಯ ಪಡಲಾಗಿದೆ.**[6]**ಆದರೆ ಸರಿಯಾಗಿ ಶಾಸನ ಅಧ್ಯಯನ ಮಾಡಿದಾಗ ರಾಜನ ಹೆಸರು ಗೋಚರವಾಗುತ್ತದೆ. ಶಾಸನದಲ್ಲಿ 'ಸಿಂಹಲಾಂಚನ ವನರಾಜ ಸಮಸ್ತ ಪ್ರತಿ ರಾಜ್ಯ…. ಸಿಂಗ… ನಗರಾಧಿನಾ…. ತ್ರ… ಕುಲೋದಯಾದ್ರಿ ಸಮಾನನಪ್ಪ ಶ್ರೀಮದ್ ಮಲಪರಾಜ…… ಮಲೆಪರಾದಿತ್ಯಂ.**[7]** ಎಂದಿರುವುದರಿಂದ ಪ್ರಸ್ತುತ ಅರಸನ ಹೆಸರು 'ಮಲಪರಾಜ' ಎಂದು ಸ್ಪಷ್ಟವಾಗುತ್ತದೆ.

ಕಣತೂರಿನ ಈ ಶಾಸನ ವ್ಯಕ್ತಿಯೋರ್ವನಿಗೆ '.....ಮಹಾರಾಜಂ ಆನೆಯನೇರಿಸಿ ಸೆಟ್ಟಿವಟ್ಟಮ ಕಟ್ಟಿಕೊಟ್ಟ' ಸಂಗತಿ ತಿಳಿಸುತ್ತದೆ. ಇನ್ತಪ್ಪುದಕ್ಕೆ ಸಾಕ್ಷಿಗಳು' ಎಂದು ಹಲವಾರು ಜನರನ್ನು ಹೆಸರಿಸಿದೆ ಶಾಸನದಲ್ಲಿ 'ಮಾಹಾರಾಜ' ಎಂದು ಉಲ್ಲೇಖಿಸಲ್ಪಟ್ಟಿರುವುದು ಗಮನಾರ್ಹ. ಜೊತೆಗೆ ಈ ರಾಜನು ಗಂಗರ ಅಧೀನ ಸಾಮಂತನಾಗಿದ್ದ ಕುರುಹಾಗಿ ಹಾಗೂ ತನಗಿಂತ ಹರಿಯ ವ್ಯಕ್ತಿಯ ಹೆಸರು ಬಿರುದುಗಳನ್ನು ಧರಿಸುವುದು ಗೌರವದ ವಿಷಯವಾದ್ದರಿಂದ 'ಪೆರ್ಮಾಡಿ' ಎಂಬ ಬಿರುದನ್ನು ಸಹ ಧರಿಸಿದ್ದಾನೆ. 'ವಿದಿತ ಪೆರ್ಮ್ಮಾಡಿ ಪರ' ಎಂದಿರುವುದನ್ನು ಗಂಗರ ಬೆಂಬಲಗ (ಪೆರ್ಮ್ಮಾಡಿ ಪರ) ಅಥವಾ ಖ್ಯಾತಪೆರ್ಮ್ಮಾಡಿ/ಪೆರ್ಮ್ಮಾಡಿ ಎಂದು ಹೆಸರುವಾಸಿಯಾದ (ವಿದಿತ ಪೆರ್ಮ್ಮಾಡಿ) ಎಂದಾದರೂ ತೆಗೆದುಕೊಳ್ಳಬಹುದು. ಇವನ ಸಮಕಾಲೀನನಾದ ಹೊಯ್ಸಳ ಅರಸ ಎರಡನೆಯ ನೃಪಕಾಮನನ್ನು ಮೂಡಿಗೆರೆ ಶಾಸನದಲ್ಲಿ[8]'ರಾಚಮಲ್ಲ ಪೆರ್ಮಾನಡಿ ಯೆನಿಪ ಕಾಮ ಹೊಯ್ಸಳ' ಎಂದು ವರ್ಣಿಸಲಾಗಿದೆ. ಮಲಪರಾಜ ಮತ್ತು ನೃಪಕಾಮ, ಮೊದಲಿಗೆ ಗಂಗರ ಸಾಮಂತರಾದುದರಿಂದ ಅವರ ಬಿರುದುಗಳನ್ನು ಇಬ್ಬರೂ ಅನುಕರಿಸಿದ್ದಾರೆ.

ಚಾಗಿ ಮಹಾರಾಜ

ಕದಂಬರ ವಂಶಾವಳಿಯ ವಿವರವನ್ನು ಸಕಲೇಶಪುರ ೪೫ನೆಯ ಸಂಖ್ಯೆಯ ಶಾಸನವು[9] ನೀಡುತ್ತದೆ. ಇದರ ಪ್ರಕಾರ ಮನುಜ ಮನೋಜೇಂದ್ರು ಸಿದ್ದನಾಗಿ ಚಾಗಿ ಮಹಾರಾಜ ಹಾಗೂ ಆತನೇ ಮಗನೇ (ತನಯಂ), ಭೂಭವನದೊಳು ಅನುಪಮ ಕೀರ್ತ್ತಿ ಪ್ರುತಪವನ್ನು ಪಡೆದ ದುದ್ದರಸ. ಅವನ ಹೆಂಡತಿ ಮೇಚಲರಸಿಗೆ ಮೂರು ಜನ ಮಕ್ಕಳು ಜನಿಸಿದರು. ಸಾರ್ಥಿಗನೃಪ, ಚಾಗಿಮಹಾರಾಜ ಮತ್ತು ದಯಾಸಿಂಹನೃಪ.

ಚಾಗಿ ಮಹಾರಾಜನ ಬಗ್ಗೆ ಹೆಚ್ಚಿನ ವಿವರಗಳು ಈ ಶಾಸನದಲ್ಲಿ ದೊರೆಯಲಾರದು. ಚಾಗಿ ಮಹಾರಾಜನ ಹೆಸರನ್ನೇ ಅವನ ಮೊಮ್ಮಗನಿಗೆ ಇಟ್ಟಿರುವ ಸಂಗತಿ ತಿಳಿದು ಬರುತ್ತದೆ. ಆದರೆ ಇಲ್ಲಿನ ಒಂದನೇ ಚಾಗಿಮಹಾರಾಜ ಮತ್ತು ದಿನಾಂಕವಿಲ್ಲದ ಹೆಗ್ಗಡೆದೇವನಕೋಟೆಯ ಶಾಸನ ಸಂಖ್ಯೆ ೧೧೦ ರಲ್ಲಿ ಬಂದಿರುವ ಚಾಗಿಮಹಾರಾಜ ಇಬ್ಬರೂ ಒಂದೇ ಆಗಿರಲು ಸಾಧ್ಯವಿದೆ.[10] ಎಂದು *ಎಫಿಗ್ರಾಫಿಯ ಕರ್ನಾಟಕದ* ೯ನೇ ಸಂಪುಟದಲ್ಲಿ ಅಭಿಪ್ರಾಯಪಡಲಾಗಿದೆ. ಈ ಬಗ್ಗೆ ಶಾಸನವನ್ನ ಪರಿಶೀಲಿಸಿದಾಗ ಬಯಲ್ನಾಡಿನ ಚಾಗಿ ಆಳುತ್ತಿರುವಾಗ ಮಣೆಲಿಯ ಸತ್ತಿಯಾ ರಮಣ ಎಂಬಾತ ಕಟಾಗಿ ಕಾಳಗದಲ್ಲಿ ಪಾಲ್ಗೊಂಡು ಸತ್ತ, 'ಇನ್ನೂರು ಬತ್ತದ ಮಣ್ಣಂ ಕಲ್ನಾಡಾಗಿ' ಪಡೆದ ಆತನ ಮಕ್ಕಳು ಅದರ ವಾರಸುದಾರರು ಎಂಬ ವಿಷಯವಿದೆ. ಆದರೆ ಇಲ್ಲಿ ಉಲ್ಲೇಖಿತ ಬಯಲ್ನಾಡಿನ ಚಾಗಿಗೆ ಮಹಾರಾಜ ಎಂಬ ಬಿರುದು ಇಲ್ಲದಿರುವುದನ್ನು ಗಮನಿಸಬೇಕು. ಜೊತೆಗೆ ಬಯಲ್ನಾಡು-ಐದುಮುನೂರು ಪ್ರದೇಶಗಳನ್ನು ಆಳುತ್ತಿದ್ದ ಬಯಲ್ನಾಡಿನ ಕದಂಬರಸರಾದ ರವಿವರ್ಮ್ಮ (ಕ್ರಿ.ಶ. ೯೯೮-೯೯) ಮತ್ತು ರವಿವರ್ಮ (ಕ್ರಿ.ಶ. ೧೦೭೯)ರ ನಡುವೆ ಚಾಗಿ ಇದ್ದನೆಂದು ಗುರುತಿಸುವುದನ್ನು[11] ಪ್ರಶ್ನಿಸಬೇಕಾಗುತ್ತದೆ. ಕ್ರಿ.ಶ. ೧೧೦೫ ರಲ್ಲಿದ್ದ ದಯಾಸಿಂಹನಿಗಿಂತ ಸುಮಾರು ೬೦ ವರ್ಷಗಳ ಹಿಂದೆ ಆತನ ಅಜ್ಜ ಚಾಗಿ ಮಹಾರಾಜ ಆಳುತ್ತಿದ್ದನೆಂದು ಹೇಳಬಹುದಾಗಿದ್ದು, ಪ್ರಾಯಶಃ ಕ್ರಿ.ಶ. ೧೦೭೦ ರವರೆಗೂ ಆಳಿದ ತರುವಾಯ ದುದ್ದಮಹಾರಾಜನು ಅರಸನಾದನೆಂದು ಊಹಿಸಬಹುದು.

ರಾಜೇಂದ್ರಪುರದ ಕ್ರಿ.ಶ. ೧೦-೧೧ನೇ ಶತಮಾನದ ಶಾಸನವೊಂದು[12] ವಾಮಶಿವದೇನ ಮಗನಾದ ಚಾಮ (ಚಾವಂ)ನನ್ನು 'ಕದಂಬರಾಜ್ಯ ಮೂಳಸ್ತಂಭಂ' ಎಂದು ವಣಿಸಿದೆ. ಬಹುಶಃ ಈತ ಸೈನ್ಯದ ಹಿರಿಯ ಅಧಿಕಾರಿಯಾಗಿರಬೇಕೆಂದು ಊಹಿಸಬಹುದಾದರೂ, ಚಾಗಿ ಮಹಾರಾಜನನ್ನೆ ಚಾಮ (ಚಾವಂ) ಎಂದು ಕರೆಯುತ್ತಿರಬಹುದು ಎಂಬ ಅನುಮಾನವೂ ಸಹ ಕಾಡುತ್ತದೆ.

ದುದ್ದರಸ ಮತ್ತು ಅರಸಿ ಮೇಚಲದೇವಿ

ಕದಂಬ ವಂಶಜನಾದ ದುದ್ದರಸನ ಬಗ್ಗೆ ಬೆಲುಹೂರು ಶಾಸನದಲ್ಲಿ ಹೆಚ್ಚಿನ ಮಾಹಿತಿ ದೊರೆಯದು. ಆದರೆ ಆತನ ಪತ್ನಿ 'ಪಂಕಜನಾಭಂಗೆ' (ವಿಷ್ಣುವಿಗೆ) ಭಕ್ತೆಯಾದ ಮೇಚಲ ದೇವಿಯ ಗುಣಗಾನ ಮಾಡಲಾಗಿದೆ. 'ಅತಿ ಚತುರೋಕ್ತಿಯೊಳ್ ಸರಸ್ವತಿಗಂ ಮಿಗಿಲೆನಿಸಿ ಭುವನದೊಳು ಧರ್ಮ ಪ್ರತತಿಗೆ ನೆಲೆಯಾಗಿ ಮಹಾಸತಿ ಮೇಚಲದೇವಿ ಸಂತತಂ ಸೊಗಯಿಸುಗುಂ'[13]ಎಂದು ವರ್ಣಿಸಲ್ಪಟ್ಟಿದ್ದಾಳೆ. ಹೀಗೆ ಪ್ರಾಚೀನ ಕಾಲದಲ್ಲಿಯೆ ಉನ್ನತ ವಿದ್ಯಾವಂತೆಯಾದ ಈಕೆ ದಾನಧರ್ಮದಲ್ಲಿ ಮುಂದಾಗಿ ಕೆರೆಯೊಂದನ್ನು ಕಟ್ಟಿಸಿ ಅದಕ್ಕೆ ಮೇಚಲ ಸಮುದ್ರವೆಂಬ ಹೆಸರಿಡುತ್ತಾಳೆ. 'ಸರಸಿಜ ಸಂಕುಳದಿಂದಂ ತರದಿಂ ತುಂಬಿಗಳ ಹಂಸೆಗಳ ಬಳಗ ದಿನಚ್ಚರಿಯೆನಿಸಿ ತೋರ್ಪ್ಪುದಿನ್ತೀ ಧರಣಿಗೆ ಮೇಚಲ ಸಮುದ್ರವೆಂಬ ತಟಾಕಂ'.[14]ಎಂದು ಕೆರೆಯನ್ನು ವರ್ಣಿಸಲಾಗಿದೆ.

ಪುಣ್ಯಕಥನ ಪುರಾಣ ಪ್ರಸಂಗದಲ್ಲಿ ಆಸಕ್ತಿ ತೋರುವ ಮೇಚಲದೇವಿ ಬೆಲುಹೂರ ಮಹಾಗ್ರಹಾರದಲ್ಲಿ 'ದೇವಾಲಯಮಂ ಮಾಡಿಸಿಯಲ್ಲಿ ಶ್ರೀ ವಾಸುದೇವರಂ ಸುಪ್ರತಿಷ್ಠಿತಂ' ಮಾಡಿದಳೆಂದು 'ದೇವರಂಗಭೋಗ ಪೂಜಾ ವಿಧಾನ ನಿತ್ಯ ನೈವೇದ್ಯಕ್ಕಂ' ಮತ್ತು 'ಚೈತ್ರ ಪವಿತ್ರ' ಮುಂತಾದ ಹಬ್ಬಗಳ ಸಲುವಾಗಿ ಭೂಮಿಯನ್ನು ಆಗ ಇದ್ದ ಬೆಲೆಗೆ ಕೊಂಡು (ಭೂಮಿಯಂ ಸಲುವ ಕ್ರಯದಲು ಹೊನ್ನಂಕೊಟ್ಟು) ಅದನ್ನೆ ದೇವಾಲಯಕ್ಕೆ ದತ್ತಿ ನೀಡಿದ್ದಾಳೆ. 'ಕುಂಬಾರನ ಹಳ್ಳಿಯನ್ನು ಅರಸಿಯರಪುರ ಮಾಡಿ, ಅದನ್ನು ಐದು ಜನ ಬ್ರಾಹ್ಮಣರಿಗೆ ದತ್ತಿಯಾಗಿ ಧಾರಾಪೂರ್ವಕ ಕೊಟ್ಟಿದ್ದಾಳೆ. ಇಂತಹ ದಾನಶೀಲೆಯಾದ ಮೇಚಲದೇವಿಯು 'ಬಂಕಿ ಬಳರಿತ ಮಹಿಪಂಗಂ' ಮಗಳೆಂದು ತಿಳಿಯುತ್ತದೆ. ಈ ವ್ಯಕ್ತಿ ಬಂಕಿ ಅರಸನೇ ಆದರೆ ಈತನನ್ನು ಹೆಗ್ಗಡೆದೇವನಕೋಟೆಯ ಸೋಗಳ್ಳಿಯ ಶಾಸನದಲ್ಲಿ ಬರುವ ಬಂಕಿಯರಸನೊಂದಿಗೆ ಸಮೀಕರಿಸಬಹುದು[15] ಎನ್ನಲಾಗಿದೆ. ಇಲ್ಲಿ ಬರುವ ಬಂಕಿಯರಸನ ಹರಿಯ ಎನ್ನುವವನನ್ನು ಸೋವಯ್ಯ ಎನ್ನುವಾತ ಎದುರಿಸಿದ ಸಂಗತಿ ಬರುತ್ತದೆ.[16] ಆದರೆ ಸಕಲೇಶಪುರದ ನೆರೆಯ ಪ್ರದೇಶವಾದ ತುಳುನಾಡಿನಲ್ಲಿ ಆಳ್ವಿಕೆ ಮಾಡಿದ ಮಧ್ಯಯುಗೀನ ಆಳುಪರಲ್ಲಿಯೂ ಸಹ ಬಂಕಿದೇವರು ಬರುವುದನ್ನು ಗಮನಿಸಬಹುದು.[17]

ಜೂಜರಸನ ಶಾಸನ : ದುದ್ದರಸನ ಮರಣದ ಬಗ್ಗೆ ಸೋಮವಾರಪೇಟೆಯ ಯಡೂರಿನ ಸುಗ್ಗಿದೇವರ ಗುಡಿಯಲ್ಲಿರುವ ಶಾಸನ[18] ಅಪೂರ್ವ ಮಾಹಿತಿಯನ್ನು ನೀಡುತ್ತದೆ. ಅದು ದುದ್ದರಸನನ್ನು 'ಬಲೀಂದ್ರ ಕುಲ ಕಮಲ ಮಾರ್ತ್ತಂಡೆ', 'ಬಲಿಯರ ಭೀಮ' ಎಂದು ವರ್ಣಿಸುತ್ತದೆ. ಈ ಬಿರುದುಗಳಾವುವೂ ಕದಂಬರಿಗೆ ಸಂಬಂಧಿಸಿದವುಗಳಲ್ಲವಾದ್ದರಿಂದ ಅನುಮಾನ ಮೂಡುತ್ತದೆ. ಜೊತೆಗೆ ಇಲ್ಲಿಯ ದುದ್ದರಸನು ಹಿಟ್ಟಿಯರಸ ಹಾಗೂ ಜುಂಜಲದೇವಿಯರ ಮಗನೆಂದು ಹೇಳಿದೆ. ಅಲ್ಲದೆ ಈತನ ಪತ್ನಿ ಚಿಕಲದೇವಿ. ಆದರೆ ಹಾಲೆಬೇಲೂರು ಶಾಸನದಲ್ಲಿ ಹೇಳುವ ದುದ್ದರಸನ ತಂದೆಯ ಹೆಸರು ಚಾಗಿ ಮಹಾರಾಜ. ಪತ್ನಿಯ ಹೆಸರು ಮೇಚಲರಸಿ. ಆದ್ದರಿಂದ ಯಡೂರಿನ ಶಾಸನದಲ್ಲಿ ಉಲ್ಲೇಖಿತ ದುದ್ದರಸ ಕದಂಬ ವಂಶದವನಾಗದೆ ಬೇರೊಂದು ವಂಶಕ್ಕೆ ಸೇರಿದ್ದಾನೆ[19] ಎಂಬ ಭಿನ್ನ ಅಭಿಪ್ರಾಯವಿದೆ. ಆದಾಗ್ಯೂ ಬಿ.ಎಲ್.ರೈಸ್ ಅಭಿಪ್ರಾಯಿಸಿದಂತೆ 'ದುದ್ದರಸ' ಎಂಬ ಹೆಸರಿನ ಸಾಮ್ಯದ ಮೇಲೆ, ಎರಡು ಶಾಸನಗಳ ತೇದಿಯೂ ಕ್ರಿ.ಶ. ೧೧೯೫ ಆಗಿರುವುದರಿಂದ[20] ಹಾಗೂ ಅಕ್ಕಪಕ್ಕದ ಹೊಂದಿದಂತಿರುವ ಪ್ರದೇಶದ ಆಧಾರದ ಮೇಲೆ ಇಬ್ಬರೂ ಒಂದೇ ಕದಂಬರ ವಂಶಕ್ಕೆ ಸೇರಿದವರೆಂದು ತಿಳಿಯಬಹುದು. ಮಿಕ್ಕೆಲ್ಲ ಅನುಮಾನಗಳಿಗೆ ಕೆಳಕಂಡಂತೆ ಊಹಿಸಿ ಸಮಾಧಾನ ಕಂಡುಕೊಳ್ಳಬಹುದು.

ಹಾಲೆ ಬೇಲೂರು ಶಾಸನದಲ್ಲಿ[21] ಹೇಳಲಾದ ದುದ್ದರಸನ ತಂದೆಯ ಹೆಸರಾದ 'ಚಾಗಿ ಮಹಾರಾಜ' ಎಂಬುದು ಹಿಟ್ಟಿಯರಸನ ಬಿರುದಾಗಿರಬಹುದು. ಆದ್ದರಿಂದ ಚಾಗಿ ಮಹಾರಾಜ

ಎಂದು ಜನಪ್ರಿಯನಾಗಿದ್ದರೂ, ಹಿಟ್ಟಿಯರಸ ಎಂಬ ಮುಲ ಹೆಸರನ್ನೆ ಶಾಸನದ ನಿರ್ಮಾತೃ ಜೂಜರಸ ಬಳಸಿಕೊಂಡಿದ್ದಾನೆ. ಹಾಲೇಬೇಲೂರು ಶಾಸನದಲ್ಲಿ ಚಾಗಿ ಮಹಾರಾಜನ (ಹಿಟ್ಟಿಯರಸ) ಪತ್ನಿಯ ಉಲ್ಲೇಖವಿಲ್ಲ. ಆದರೆ ಯಡೂರು ಶಾಸನದಲ್ಲಿ**[22]** ಉಲ್ಲೇಖವಾಗಿದ್ದು,ಜುಂಜಲದೇವಿಯೆಂದು ತಿಳಿದುಬರುತ್ತದೆ. ಅವರಿಗೆ ಜನಿಸಿದ ದುದ್ದರಸ ಹಿರಿಯ ಮಗನಾಗಿದ್ದು, ಜೂಜರಸ ಕಿರಿಯವನಾಗಿರಬೇಕು. ಆತ ಸೋಮವಾರಪೇಟೆ ಪ್ರದೇಶದ ಕದಂಬ ಭಾಗಗಳನ್ನು ನೋಡಿಕೊಳ್ಳುವ ಜವಾಬ್ದಾರಿ ಹೊತ್ತು ಅಲ್ಲಿಯೆ ಆಳ್ವಿಕೆ ಮಾಡುತ್ತಿರಬಹುದು. ದುದ್ದರಸ ಹಿರಿಯವನಾದ್ದರಿಂದ 'ಶಿವಲೋಕ ಪ್ರಾಪ್ತನಾಗಲ್, ಸಹೋದರಂ ಜೂಜರಸಂ ಸ್ನೇಹದಿಂದ ಪರೋಕ್ಷವಿನೆಯಂ ಗೆಯ್ದು ವೀರಸಾಸನಮಂ ಬರೆಯಿಸಿದಂ'**[23]**ಎಂದು ಒಂದು ಶಾಸನದಲ್ಲಿ ವರ್ಣಿಸಲಾಗಿದೆ.

ದಯಾಸಿಂಹನೃಪ

ದುದ್ದರಸನ ನಂತರ, ಅವನ ಮೂರು ಮಕ್ಕಳಲ್ಲಿ ಕಿರಿಯವನಾದ ತ್ರಿಭುವನಮಲ್ಲ ದಯಾಸಿಂಹ ಮಹಾರಾಜನು ಸಿಂಹಾಸವನ್ನೇರಿದನು. ಹಾಲೇಬೇಲೂರಿನ ಶಾಸನವು**[24]** ಈತನ ರಾಜಗೌರವ ಮತ್ತು ವ್ಯಕ್ತಿತ್ವವನ್ನು ವರ್ಣಿಸುತ್ತದೆ. ದಯಾಸಿಂಹನಿಗೆ ಸಾತ್ರಿಗನೃಪ ಮತ್ತು ಚಾಗಿಮಹಾರಾಜ ಎಂಬ ಹಿರಿಯ ಅಣ್ಣಂದಿರಿದ್ದರೂ, ಅವರಿಗಿಂತಲೂ ಶೂರನು, ಧೀರನು, ಧೀಮಂತನು ಇವನಾಗಿದ್ದರಿಂದ ಪಟ್ಟದ ಪ್ರಭುತ್ವ ಇವನಿಗೆ ದೊರೆತಿರಬೇಕೆಂದು ತೋರುತ್ತದೆ. ಈಗಿನ ಹಾಲೆಬೇಲೂರಿನಲ್ಲಿ ವಾಸುದೇವ (ಕೇಶವ/ಚೆನ್ನಕೇಶವ) ದೇವಾಲಯವನ್ನು ಕಟ್ಟಿಸಿ ಕುಂಬಾರನಹಳ್ಳಿಯನ್ನು ಅರಸಿಯಪುರವೆಂದು ಕರೆದು ಐದು ಜನ ಹಾರುವರಿಗೆ ದತ್ತಿಯಾಗಿತ್ತದ್ದು, ದಯಾಸಿಂಹನ ತಾಯಿಯೆಂದು (ಮೇಚಲರಸಿ) ಶಾಸನದಲ್ಲಿ ಉಲ್ಲೇಖಿತವಾಗಿದ್ದರೂ, ಇದು ತನ್ನ ತಾಯಿಯ ಪರವಾಗಿ, ಅವಳ ಹೆಸರಿನಲ್ಲಿ ಮತ್ತು ಮಾತಾಭಕ್ತಿಯ ಕುರುಹಾಗಿ ದಯಾಸಿಂಹನಿಂದಲೇ ಆಗಿದೆ.

'ಶ್ರೀಮತ್ ಕದಂಬವಂಶಸಿಖಾಮಣಿ'ಯೆಂದು ಕದಂಬ ಕುಳಕಮಳ ಮಾರ್ತ್ತಣ್ಡ'ನೆಂದು ಹೆಸರುವಾಸಿಯಾದ ದಯಾಸಿಂಹನೃಪ ಸಮಧಿಗತ ಪಂಚಮಹಾಶಬ್ದ ಮಹಾ ಮಂಡಳೇಶ್ವರನೂ ಹೌದು. ವೈರಿಗಳನ್ನು ಯುದ್ಧದಲ್ಲಿ ಸೋಲಿಸಿದನೆಂದು ಹೇಳಲಾಗಿದ್ದರೂ ಶ್ರೀಪಾಲನನ್ನು ಮಾತ್ರ ಸೋಲಿಸಿದ ಉಲ್ಲೇಖ ಬರುತ್ತದೆ. ಶ್ರೀಪಾಲ ಬಹುದೊಡ್ಡ ಸೈನ್ಯವನ್ನೇ ಹೊಂದಿದ್ದರೂ (ಅತಿ ಬಹಳ ಬಳವ್ಯೂಹ) ಸಹ ಆತನನ್ನು ಯುದ್ಧದಲ್ಲಿ ಕೊಂದನೆಂಬ ಪ್ರಸ್ತಾಪವಿದೆ. ದಯಾಸಿಂಹನು

ಪ್ರಚಂಡ ದೋರ್ದ್ದಂಡ ಮಣ್ಡಳಾಗ್ರ
ಖಣ್ಡಿತಾರಾತಿ ಮಣ್ಡಳಿಕ ಸೈನ್ಯ ಸಂಘಾತ
ಮದಾರಾತಿ ಮಣ್ಡಳಿಕ
ನಿರ್ಗ್ಘಾತ ಕ್ರೂರಾತಾತಿ ಮಣ್ಡಳಿಕ
ದರ್ಪದಳ ಸಮರ ಕೇಳಿ ಪ್ರಳಯ ಕಾಳಭೈರವ
*ಉದ್ದಣ್ಡ ಮಣ್ಡಳಿಕ ವೇದಣ್ಡ ಕಣ್ಠೀರವ***[25]**

ನಾದ್ದರಿಂದಲೇ ತನ್ನ ಅಧಿರಾಜನಾದ ಆರನೆಯ ವಿಕ್ರಮಾದಿತ್ಯನ 'ತ್ರಿಭುವನಮಲ್ಲ' ಎಂಬ ಬಿರುದನ್ನು ಧರಿಸಿದ್ದಾನೆ. ಈ ಶಾಸನದ ಕಾಲ ಕ್ರಿ.ಶ. ೧೧೦೫ ನ್ನು ಗಮನದಲ್ಲಿಟ್ಟುಕೊಂಡು, ಹೊಯ್ಸಳ ವಿಷ್ಣುವರ್ಧನನ (ಕ್ರಿ.ಶ. ೧೧೧೦೮-೧೧೪೧) ಕ್ರಿ.ಶ. ೧೧೧೭ನೇ ಇಸವಿಯ ಶಾಸನವೊಂದನ್ನು**[26]** ಅಧ್ಯಯನ ಮಾಡಿದಾಗ ವಿಷ್ಣುವರ್ಧನನ ಈ ಶಾಸನಕ್ಕೆ ಕ್ರಿ.ಶ. ೧೧೦೫ರ ದಯಾಸಿಂಹನ ಶಾಸನ ಮಾದರಿಯಾಗಿರುವುದು, ಆರಂಭಿಕ ಪದ್ಯ ಒಂದೇ ಆಗಿರುವುದು 'ಸ್ತುತಿ' ಹೆಸರಿನ ಬದಲಾವಣೆಯೊಂದನ್ನು ಬಿಟ್ಟು ಒಂದೇ ಆಗಿರುವುದು ಮತ್ತು

ವಿಷ್ಣುವರ್ಧನನು ದಯಾಸಿಂಹನು ಬಿರುದುಗಳನ್ನು ಅನುಸರಿಸುವುದೇ ಮುಂತಾದ ಸಾಮ್ಯಗಳು ಸೋಜಿಗ ಹುಟ್ಟಿಸುತ್ತವೆ.

ದಯಾಸಿಂಹ ಧರಿಸಿರುವ 'ರಾಜಮಾಂಧಾತ' ಎಂಬ ಬಿರುದನ್ನು ಕ್ರಿ.ಶ. ೧೦೬೨-೬೩ರಷ್ಟು ಹಿಂದೆಯೆ ಹೊಯ್ಸಳ ವಿನಯಾದಿತ್ಯ 'ರಾಜಮಾಂನ್ಧಾತನೃಪಂ' ಎಂದು ಧರಿಸಿರುವುದನ್ನು ಸಹ ಉಲ್ಲೇಖಿಸಬೇಕಾಗುತ್ತದೆ.[27] ಹೀಗೆ ದಯಾಸಿಂಹ ಕೇವಲ 'ಸಮರಪ್ರಚಣ್ಡ'ನಾಗಿರಲಿಲ್ಲ. 'ಪಾವನಚರಿತ್ರೆಯು ಮಪ್ಪ ಮೇಚಲದೇವಿಯರ ಪುತ್ರನಾಗಿ[28] ಗೀತ, ವಾದ್ಯ, ನೃತ್ಯ, ಇವುಗಳಿಗೆ ತನ್ನ ಆಸ್ಥಾನದಲ್ಲಿ ಮಹತ್ವದ ಸ್ಥಾನ ನೀಡಿದ್ದು ಕವಿ ಕಲಾವಿದರಿಗೆ ಆಶ್ರಯವನ್ನು ನೀಡುವ ಸಹೃದಯಿಯೂ ಆಗಿದ್ದನು. ಕಾವ್ಯ, ನಾಟಕ, ವಿಚಾರ ಪ್ರಸಂಗಗಳಲ್ಲಿ ಆಸಕ್ತಿ ಹೊಂದಿದ್ದನು. ತರ್ಕಶಾಸ್ತ್ರ, ವ್ಯಾಕರಣ, ಚಿತ್ರಕಲೆ ಮುಂತಾದ ೬೪ ಕಲೆಗಳಲ್ಲಿ ಪಾರಂಗತಿ ಹೊಂದಿದ್ದನಲ್ಲದೆ 'ಸಮಸ್ತ ಆಗಮ ಪ್ರಬುದ್ಧನೂ' ಆಗಿದ್ದನು.

ರಾಜಧಾನಿ : ಹಾಲೇ ಬೇಲೂರು ಕದಂಬರು ತಮ್ಮನ್ನು 'ತ್ರಿಪುರಾದೀಶ್ವರ'ರೆಂದು ಕರೆದುಕೊಂಡಿದ್ದಾರೆ.[29] ಉಲ್ಲೇಖಿತ 'ತ್ರಿಪುರ' ಮೂಲ ಕದಂಬರ ದಕ್ಷಿಣಭಾಗದ ರಾಜಧಾನಿಯಾಗಿದ್ದ ತ್ರಿಪರ್ವತವೆಂದೂ ಊಹಿಸಬಹುದು. ಈ ತ್ರಿಪರ್ವತವೇ ಈಗನ ಹಳೇಬೀಡು[30] ಎಂಬ ಅಭಿಪ್ರಾಯವೂ ಇದೆ. ಈ ತ್ರಿಪರ್ವತವೇ ಆಗಿದ್ದರೆ, ಮೊದಲಿಗೆ ಕದಂಬ ಶಾಖೆ ಅಲ್ಲಿಗೆ ಬಂದು ಆಳ್ವಿಕೆಯನ್ನು ಪ್ರಾರಂಭಿಸಿರಬೇಕು. ನಂತರ ಹೊಯ್ಸಳರ ಒತ್ತಡದಿಂದ ಇನ್ನೊಂದು ಬನವಾಸಿಗೆ (ಮೂಲ ಬನವಾಸಿಯಲ್ಲ ಸಕಲೇಶಪುರದಲ್ಲಿರು ಬನವಾಸಿ) ತಮ್ಮ ರಾಜಧಾನಿಯನ್ನು ಬದಲಾಯಿಸಿರಬೇಕೆಂದು ಊಹಿಸಬಹುದು. ಆದಾಗ್ಯೂ 'ತ್ರಿಪುರ' ಎನ್ನುವುದನ್ನು ಉಲ್ಲೇಖಿಸುವ ಶಾಸನ ನಂತರದ ಕಾಲಾವಧಿಯದೆ ಅಂದರೆ ಕ್ರಿ.ಶ. ೧೧೯೫ರದೆಂದು ಅನುಮಾನಿಸಲು ಅಡ್ಡಿಯಿಲ್ಲ. ಅವರು ಮೂಲ ರಾಜಧಾನಿಯ ನೆನಪು ಮಾಸದೆ ಅದೆ ಹೆಸರನ್ನೆ ತಮ್ಮ ಹೊಸ ರಾಜಧಾನಿಗೆ ಇಟ್ಟಿರಬೇಕು. ಅಂತೆಯೆ ತಮ್ಮನ್ನು 'ಬನವಾಸಿಪುರವರಾಧೀಶ್ವರ'[31]ರೆಂದೂ ಕರೆದುಕೊಂಡಿದ್ದಾರೆ. ಇದು ಸೊಸೆವೂರಿನಿಂದ ಕೇವಲ ೩೨ ಕಿ.ಮೀ. ದೂರದಲ್ಲಿದ್ದುದರಿಂದ ಈಗಾಗಲೇ ಪ್ರವರ್ಧಮಾನಕ್ಕೆ ಬರುತ್ತಿದ್ದ ಹೊಯ್ಸಳರ ದೃಷ್ಟಿಗೆ ತಾಕಿರಲೇಬೇಕು. ಹೀಗಾಗಿಯೇ ಹೊಯ್ಸಳ ನೃಪಕಾಮನ ಎರಡು ಶಾಸನಗಳು ಬನವಾಸಿಯ ಪಕ್ಕದ ಗ್ರಾಮವಾದ ರಾಜೇಂದ್ರಪುರದಲ್ಲಿ ಕಂಡು ಬರುತ್ತವೆ. ಕ್ರಿ.ಶ. ೧೦೨೨-೨೩ನೇ ಇಸವಿಗೆ ಇಸವಿಗೆ ಸೇರಿದ ಒಂದು ಶಾಸನದಲ್ಲಿ ನೃಪಕಾಮನೇ ಚೋಳರ ಮೇಲೆ ಯುದ್ಧ ಮಾಡಿದುದರ[32] ಉಲ್ಲೇಖವಿದೆ. ಬಹುಶಃ ಚೋಲಸಾಮ್ರಾಟ 'ರಾಜೇಂದ್ರ ಚೋಳ ಪೃಥಿವೀ ಮಹಾರಾಜ' ಅಂದರೆ ಒಂದನೇ ರಾಜೇಂದ್ರ ಚೋಳ (ಆಳ್ವಿಕೆ ಕಾಲಾವಧಿ ಕ್ರಿ.ಶ. ೧೦೧೨-೪೪) ನೇ ದುರ್ದೆಸೆಯಲ್ಲಿದ್ದ ಕದಂಬರನ್ನು ಒಳಗೊಂಡು ಬನವಾಸಿಯನ್ನು ರಕ್ಷಿಸುವ ಕೆಲಸ ಮಾಡಿರಬೇಕು ಅಥವಾ ಕೊಡಗಿನ ಮೂಲಕ ತಮ್ಮ ಉತ್ತರದಲ್ಲಿದ್ದ ಕದಂಬರ ರಾಜ್ಯವನ್ನು ಆಕ್ರಮಿಸುತ್ತ ಹೊಯ್ಸಳರ ರಾಜ್ಯಕ್ಕೆ ಸಮೀಪಿಸುತ್ತಿರುವುದು ಕಂಡುಬರುತ್ತದೆ. ಆದರೆ ಮುಂದೆ ಕ್ರಿ.ಶ. ೧೦೨೭ರಲ್ಲಿ ಬನವಾಸಿಯ ಮೇಲೆ ಯಾರೊ ವೈರಿಗಳು[33] (ಹೆಸರು ಅಳಿಸಿಹೋಗಿದೆ) ಬಿದ್ದು ಕಾದುತ್ತಿರುವಾಗ ಜನತೆಯನ್ನು ರಕ್ಷಿಸುವ ಉದ್ದೇಶದಿಂದ ಹೊಯ್ಸಳ ನೃಪಕಾಮ ಮಹಾರಾಜನೆ ಬಂದಿದ್ದು, ಬನವಾಸಿ ಹೊಯ್ಸಳರ ಕೃಪಾಕಟಾಕ್ಷದಲ್ಲಿ ಉಳಿಯುವ ಸ್ಥಿತಿ ಒದಗಿರಬೇಕು. ಹೀಗಾಗಿಯೆ ಮತ್ತೊಮ್ಮೆ ಅವರ ಪ್ರಭಾವದಿಂದ ಮುಕ್ತರಾಗಲು ತಮ್ಮ ರಾಜಧಾನಿಯನ್ನು ಹಾಲೇಬೇಲೂರಿಗೆ (<ಹಾರುವ ಬೇಲುಹೂರು?) ವರ್ಗಾಯಿಸಿರಬೇಕು ಎಂಬ ಸಂಗತಿಯನ್ನು ಕಲ್ಪಿಸಿಕೊಳ್ಳಬಹುದು. ಅಂತೆಯೆ ಸಂಶೋಧಕರಲ್ಲಿ ಇವರು ಬೇಲೂರು ಕದಂಬರೆಂದು[34] ಹೆಸರುವಾಸಿಯಾಗಿದ್ದರೂ, ಸೂಕ್ಷ್ಮವಾಗಿ ಒಂದು ಅನುಮಾನ ಕಾಡದೆ ಇರಲಾರದು. ಅದೆಂದರೆ, ಹೊಯ್ಸಳ ವಿಷ್ಣುವರ್ಧನನ ಚೆನ್ನಕೇಶವ ದೇವಾಲಯ ನಿರ್ಮಾಣ ಶಾಸನಕ್ಕೂ[35] ಮಾದರಿಯಾದ ದಯಾಸಿಂಹ ಮಹಾರಾಜನ ಸುಂದರ ಶಾಸನ ಹಾಲೆ ಬೇಲೂರಿನಲ್ಲಿ ದೊರೆತಿದೆಯಾದರೂ, ಅದನ್ನೂ ಒಳಗೊಂಡು ಅವರ ಇತರ ಯಾವುದೇ ಶಾಸನದಲ್ಲಿ ಬೇಲೂರು (ಹಾಲೆ ಬೇಲೂರು/ಹಾರುವ ಬೆಲುಹೂರು/ ಬೆಲುಹೂರು)

ರಾಜಧಾನಿಯಾಗಿದ್ದುದರ ಬಗ್ಗೆ ಉಲ್ಲೇಖವಿಲ್ಲ. ಬದಲಿಗೆ ಅದು ಮಹಾಗ್ರಹಾರವಾಗಿದ್ದುದರ ಬಗ್ಗೆ ಶಾಸನದಲ್ಲಿ ಉಲ್ಲೇಖವಿದೆ. ಆದ್ದರಿಂದ ಕದಂಬರು ತಮ್ಮ ಕೊನೆ ಕಾಲದಲ್ಲಿ ಮಹಾಗ್ರಹಾರವಾಗಿದ್ದ ಹಾರುವ ಬೆಲುಹೂರದಲ್ಲಿ ವಾಸಮಾಡ ತೊಡಗಿದರೇ? ಎಂಬ ಭಾವನೆಯೂ ಬರುತ್ತದೆ.

ಮಲೆಪರು ಯಾರು?

ಮಲೆ ಎಂಬ ಹೆಸರೇ ಗುಡ್ಡಗಾಡನ್ನು (ಗುಡ್ಡ + ಕಾಡು), ಮಲೆನಾಡನ್ನು ಸೂಚಿಸುತ್ತದೆ. ಹೊಯ್ಸಳರು ಸಹ ಸಕಲೇಶಪುರ – ಮೂಡಿಗೆರೆಯ ದಟ್ಟಡವಿಯಿಂದ ಬಂದವರಾದ್ದರಿಂದ ಮಲೆನಾಡಿನವರು, ಮಲೆಪರಾಗಿದ್ದರು ಎನ್ನಲಡ್ಡಿಯಿಲ್ಲ. ಆದರೆ ಹೊಯ್ಸಳರು ತಮ್ಮನ್ನು ಎಲ್ಲಿಯೂ ಮಲೆಪರೆಂದು ಗುರುತಿಸಿಕೊಂಡಿಲ್ಲ. ಬದಲಿಗೆ ಮಲೆಪರ ಸಂಹಾರಕರು ಅಥವಾ ಅವರನ್ನು ಸದೆಬಡಿದವರು ತಾವೆಂಬ ಅರ್ಥದಲ್ಲಿ 'ಮಲೆಪರೊಳ್ಗಂಡ'**[36]**ಎಂಬ ಬಿರುದನ್ನು ಧರಿಸಿರುವುದನ್ನು ಹಲವಾರು ಶಾಸನಗಳಲ್ಲಿ ಗಮನಿಸುತ್ತೇವೆ. ಹೊಯ್ಸಳ ವಿನಯಾದಿತ್ಯನಾದರೊ ಕ್ರಿ.ಶ. ೧೦೯೭ರ ಹಳೇಬೀಡಿನ ಶಾಸನದಲ್ಲಿ ತನ್ನನ್ನು ಈ ರೀತಿ ಕರೆದುಕೊಂಡಿದ್ದಾನೆ.

ಬಲಿದೊಡೆ ಮಲೆದೊಡೆ ಮಲೆಪರ ತಲೆಯೊಳ್‌ಬಾಳಿಡುವನುದಿತಭಯ
ರಸವಶದಿಂ ಬಲಿಯದ ಮಲೆಯದ ಮಲೆಪರ ತಲೆಯೊಲು ಕೈಯ್ಯಿಡು
*ವನೊಡನೆ ವನಯಾದಿತ್ಯ***[37]**

ಅಂದರೆ ಅಹಂಕಾರಿಗಳಾದ, ತನ್ನನ್ನು ವಿರೋಧಿಸುವ ಮಲೆಪರ ತಲೆಗಳನ್ನು ಕತ್ತಿಯಿಂದ ಚೆಂಡಾಡುವನೆಂದು, ಆದರೆ ಯಾವ ಮಲೆಪರಿಗೆ ಅಹಂಕಾರವಿಲ್ಲ ಮತ್ತು ತನ್ನನ್ನು ವಿರೋಧಿಸುವುದಿಲ್ಲ ಅವರನ್ನು ರಕ್ಷಿಸಿ ಕಾಪಾಡುವನೆಂದು ಹೇಳಲಾಗಿದೆ. ಹೀಗಿರುವಾಗ ಬಲಿದ ಮಲೆಪರ ಅಂದರೆ ಯಾರು ಎಂಬ ಪ್ರಶ್ನೆ ಮೂಡುವುದು ಸಹಜ.

ಹೊಯ್ಸಳರ ಪ್ರಭುತ್ವವನ್ನು ವಿರೋಧಿಸುವವರು ಅಂದರೆ ಅವರು ಸಂಘಟಿತ ರಾಜವಂಶಕ್ಕೆ ಸಂಬಂಧ ಪಟ್ಟಿರುವವರಾಗಿರಲೇಬೇಕು ಎಂಬುದು ದಿಟ ಎಂಬ ಅಭಿಪ್ರಾಯವನ್ನು ಇಟ್ಟುಕೊಂಡು ಸಂಶೋಧನೆಯಲ್ಲಿ ತೊಡಗಿದಾಗ ಕದಂಬರೇ ಮಲೆರರಾಗಿದ್ದರು ಎಂಬ ಅಂಶ ಬೆಳಕಿಗೆ ಬಂದಿದೆ.

ಕ್ರಿ.ಶ. ೧೦೭೫ ಕ್ಕೆ ಸೇರಿದ ಕಣತೂರಿನ ಶಾಸನದಲ್ಲಿ 'ಮಲೆಪರ ಸೂರ್ಯ', 'ಮಲೆಪರಾದಿತ್ಯಂ' ಎಂದು ಹೆಸರುವಾಸಿಯಾದ ಕದಂಬರ ಅರಸ ಮಲಪರಾಜನ ಉಲ್ಲೇಖವಿದೆ.**[38]** ಈತನು ವ್ಯಕ್ತಿಯೋರ್ವನಿಗೆ ಆನೆಯನೇರಿಸಿ ಸೆಟ್ಟಿ ಪದವಿಯನ್ನು ನೀಡಿ ಜಮೀನು ನೀಡಿದ ಸಂಗತಿ ಬರುತ್ತದೆ. ಈ ಶಾಸನದಲ್ಲಿ ಆತನದು ಸಿಂಹಲಾಂಛನವೆಂದು, ವನರಾಜನೆಂದು ವರ್ಣಿಸಲ್ಪಟ್ಟಿರುವುದನ್ನು ಕ್ಷಣ ನಿಂತು ಯೋಚಿಸಬೇಕಾಗುತ್ತದೆ. ಸಿಂಹ ಇಡೀ ಕಾಡಿಗೆ ರಾಜನಿದ್ದಂತೆ, ತಾನೂ ಸಹ ಇಡೀ ಗುಡ್ಡಗಾಡಿಗೆ ನಾಯಕ, ರಾಜ, ಸೂರ್ಯ, ಎಂಬುದನ್ನು 'ಶ್ರೀಮದ್ ಮಲಪರಾಜ... ಮಲೆಪರಾದಿತ್ಯಂ' ಹೆಸರಿನ ಮೂಲಕವೂ ಅರ್ಥೈಸಿದ್ದಾನೆ. ಹೋಲಿಕೆಯ ಹೆಸರಾಗುವ ಸಾಧ್ಯತೆಗೆ 'ಶ್ರೀ ಮದ್ ಮಲಪರಾಜ' ಉತ್ತಮ ಉದಾಹರಣೆಯಾಗುವ, ಇದರಿಂದ ಜೊತೆಗೆ ಕದಂಬರೇ ಸ್ವತಃ ಮಲೆಪರಾಗಿದ್ದರು ಎಂಬ ಮಹತ್ವದ ಮಾಹಿತಿ ದೊರಕುತ್ತದೆ.

ಸೋಮವಾರಪೇಟೆ ತಾಲ್ಲೂಕಿನ ಯೆಡೂರಿನ ಸುಗ್ಗಿದೇವರ ಗುಡಿಯಲ್ಲಿ ಚಾಗಿ ಮಹಾರಾಜನ (ಹಿಟ್ಟಿಯರಸ) ಮಗನಾದ ದುದ್ದರಸನ ಸ್ಮರಣಾರ್ಥ ಆತನ ಸಹೋದರ ಜೂಜರಸ 'ವೀರಸಾಸನ' ಬರೆಯಿಸಿದ್ದಾನೆ.**[39]** ಇಲ್ಲಿಯ ದುದ್ದರಸನ ಅನೇಕ ನಾಮಾವಳಿಯಲ್ಲಿ

‘ಬಲಿನ್ದ್ರ ಕುಲಕಮಲ ಮಾರ್ತ್ತಣ್ಡ
ಚತುರ್ಮ್ಮುಖಗಣ್ಡ
ಸರಣಾಗತ ವಜ್ರಪಂಜರ
ವೈರಿ ಗನ ಕೇಸರಿ
ಲಿಯರ ಭೀಮ ‘ಸಂಗ್ರಾಮ ರಾಮ ಮಲೆಪರ ನಂದನವನಂ [40]

ಬರುತ್ತದೆ. ಈ ಶಾಸನದಲ್ಲಿ ದುದ್ದರಸನ ಅನೇಕ ಬಿರುದುಗಳಲ್ಲಿ ‘ಮಲೆಪರ ನಂದನವನ’ ಎಂಬ ಬಿರುದೂ ಕಂಡುಬರುತ್ತದೆ. ದುದ್ದರಸನನ್ನು ಮಲೆಪರ ಮುಖ್ಯಸ್ಥನೆಂದು ಅವರನ್ನು ಸದಾ ಸಂತೋಷದಲ್ಲಿಡುವ ನಂದವನವೆಂಬ (Pleasure Garden) ಅರ್ಥ ಬರುವ ರೀತಿಯಲ್ಲಿ ವರ್ಣಿಸಲಾಗಿದೆ. ಮಲಪೆರ ನಂದನವನ ಎಂದರೆ ಮಲೆನಾಡುಗಳ ಪತಿ ಅಥವಾ ಒಡೆಯರಿಗೆ ನಂದನವನದಂತೆ ಆಶ್ರಯಕೊಡುವವನು ಎಂದೂ ಸಹ ಅರ್ಥ ಮಾಡಬಹುದು.

ಅಂದರೆ ಕದಂಬರೇ ವಿನಯಾದಿತ್ಯನ ಶಾಸನದ ಮಲೆಪರಾಗಿದ್ದರು ಎಂಬ ಬಗ್ಗೆ ಅಮೂಲ್ಯ ಮಾಹಿತಿಯನ್ನು ದಾಖಲಿಸಿ ಮೇಲೆ ಉಲ್ಲೇಖಿಸಿದ ಶಾಸನಗಳು ತಮ್ಮಷ್ಟಕ್ಕೆ ತಾವೇ ಮಹತ್ವವನ್ನು ಪಡೆದಿರುವುದು ಗಮನಾರ್ಹ.

ಹಾಲೆಬೇಲೂರು ವಾಸುದೇವ (ಚೆನ್ನಕೇಶವ?) ವಿಗ್ರಹ : ಸ್ಥಳೀಯರಿಂದ ಚೆನ್ನಕೇಶವ ಎಂದು ಕರೆಯಲ್ಪಡುವ ಈ ಶಿಲ್ಪವು ಶಾಸನದಲ್ಲಿ[41] ಉಲ್ಲೇಖಿಸಿದಂತೆ ವಾಸುದೇವ ವಿಗ್ರಹವಾಗಿದೆ. ಇದು ಸುಮಾರು ೫ ಅಡಿ ಎತ್ತರವಾಗಿದ್ದು, ಕಪ್ಪು ಶಿಲೆಯ (Post Stone) ಸುಂದರ ಹಸನ್ಮುಖ ಭಾವವನ್ನು ಹೊಂದಿದೆ. ವಾಸುದೇವು ನಿಂತ ಭಂಗಿಯಲ್ಲಿದ್ದು, ಬಲಗೈನ ಮುಂಭಾಗದಲ್ಲಿ ದಂಡ (ಗದೆ)ವಿದೆ. ಅದರ ಹಿಂಭಾಗದಲ್ಲಿ ಶಂಖವಿದೆ. ಎಡಗೈನ ಹಿಂಭಾಗದಲ್ಲಿ ಚಕ್ರವು ಮತ್ತು ಅದರ ಮುಂಭಾಗದಲ್ಲಿ ಪದ್ಮವಿದೆ. ಅವನ ಎಡಬಲದಲ್ಲಿ ಸಖಿಯರಿದ್ದಾರೆ. ಆಂಜನೇಯನ ಪೀಠದ ಮೇಲೆ ವಾಸುದೇವನನ್ನು ನಿಲ್ಲಿಸಲಾಗಿದ್ದು, ಪೀಠದ ಮುಂಭಾಗದಲ್ಲಿ ಆಂಜನೇಯನು ಎಡಗೈಯಲ್ಲಿ ಬೆಟ್ಟವನ್ನು ಎತ್ತಿಕೊಂಡು ಹಾರುತ್ತಿರುವ ಚಿತ್ರವಿದೆ. ವಾಸುದೇವನ ತಲೆಯ ಹಿಂಭಾಗದಲ್ಲಿ ಕೀರ್ತಿಮುಖವಿದೆ. ಶಂಕುವಿನಾಕಾರದ ಕಿರೀಟವಿದ್ದು, ಇದು ಸಾಲಿಗ್ರಾಮದ ಯೋಗನರಸಿಂಹನನ್ನು ನೆನಪಿಸುತ್ತದೆ. ಪ್ರಭಾವಳಿಯು ವಿಷ್ಣುವಿನ ದಶಾವತರಾದ ಚಿತ್ರಗಳನ್ನು ಹೊಂದಿರದೆ ಇರುವುದು ಕಂಡು ಬರುತ್ತದೆ. ವಿಗ್ರಹಕ್ಕೆ ಸ್ವಲ್ಪ ಹಾನಿಯಾಗಿದ್ದರೂ, ಅದರ ಪ್ರತಿಯೊಂದು ಅಂಗಾಂಗಗಳೂ ಸೂಕ್ಷ್ಮ ಕೆತ್ತನೆಯಿಂದ ಕೆತ್ತಲ್ಪಟ್ಟಿರುವುದು, ಅದೂ ಬೇಲೂರು ಚೆನ್ನಕೇಶವ (೧೧೮೮ರಲ್ಲಿ)ನನ್ನು ಕೆತ್ತುವ ಮುಂಚೆಯೆ ಸ್ಥಳೀಯ ಕದಂಬರಿಂದ (ಕ್ರಿ.ಶ. ೧೦೯೫ ರಲ್ಲಿ) ನಿರ್ಮಿಸಲ್ಪಟ್ಟಿರುವುದು ಗಮನಾರ್ಹವಾದುದು. (ಛಾಯಾಚಿತ್ರ ನೋಡಿ)

ಶಾಸನ ಶಿಲ್ಪ

ಹಾಲೆಬೇಲೂರಿನ ವಾಸುದೇವ ದೇವಾಲಯದ ಹಿಂಭಾಗದಲ್ಲಿ ದೇವಾಲಯದ ನಿರ್ಮಾಣ ಮತ್ತು ದತ್ತಿಗೆ ಸಂಬಂಧಿಸಿದ ಶಾಸನವಿದೆ. ಇದನ್ನು ಪೀಠದ ಮೇಲೆ ನಿಲ್ಲಿಸಲಾಗಿದ್ದು ಇದು ಅರ್ಧ ಅಡಿ ಅಗಲ ಮತ್ತು ಆರೂವರೆ ಅಡಿ ಎತ್ತರವಿದೆ. ಶಾಸನದ ಎರಡೂ ಕೊನೆಯಲ್ಲಿ ಅರೆಗಂಭದ ಮಾದರಿಯಿದ್ದು, ನಡುವೆ ಶಾಸನ ಕೆತ್ತಲಾಗಿದೆ. ಶಾಸನದ ಮೇಲೆ ಚಾಚಿದ್ದ ಪಟ್ಟಿ ಬಂದಿದ್ದು, ಅದರ ಮೇಲೆ ತ್ರಿಭಂಗದಲ್ಲಿ ನಿಂತ ವಾಸುದೇವನ ಚಿತ್ರವಿದೆ. ಅವನ ಎಡಭಾಗಕ್ಕೆ ಹಸು ಮತ್ತು ಕರುವನ್ನು ಚಿತ್ರಿಸಲಾಗಿದೆ. ಸುತ್ತುವರಿದಂತೆ ಅಲಂಕೃತವಾದ ಕೀರ್ತಿಮುಖ ಬಂದಿದ್ದು ಶಾಸನವು[42] ಮಾರ್ಚ್೧೪. ೧೦೯೫ರ ಇಸವಿಗೆ ಸೇರಿದೆ. (ಛಾಯಾ ಚಿತ್ರ ನೋಡಿ)

[1]ಜಾರ್ಜ್ಎಂ. ಮೊರೆಸ್, *ದಿ ಕದಂಬ ಕುಲ – ಎ ಇಸ್ಟರಿ ಆಫ್ ಏನ್ಸಿಯಂಟ್ ಅಂಡ್ ಮೆಡಿವಲ್‌ಕರ್ನಾಟಕ*ಪುಟ – ೨೨೪.

[2]*(ಎಪಿಗ್ರಾಫಿಯಾ ಕರ್ನಾಟಿಕಾ)-೯,* ಪರಿಷ್ಕೃತ ಮುದ್ರಣ, ಸಕಲೇಶಪುರ-೧೪, ಹಲಸುಲಿಗೆ, ಸುಮಾರು ೧೦-೧೧ನೇ ಶತಮಾನ.

[3]*ಎ.ಕ.* – ೫. ಮಂಜ್ರಾಬಾದ್ – ೩೫.

[4]*ಎ.ಕ.* – ೯, ಪೀಠಿಕೆ X/vi

[5]*ಅದೇ.*

[6]*ಅದೇ.*

[7]*ಎ.ಕ.*-೮, ಆಲೂರು – ೮, ಮಾರ್ಚ್೯೧೬, ೧೦೨೫.

[8]*ಎ.ಕ.*-೮, ಮೂಡಿಗೆರೆ – ೧೯

[9]*ಎ.ಕ.*-೯, ಸಕಲೇಶಪುರ – ೪೫, ೧೪ ಮಾರ್ಚ್೯ ೧೦೯೫.

[10]*ಎ.ಕ.*-೨, ಪೀಠಿಕೆ, x/vii

[11]*ಅದೇ.*

[12]*ಎ.ಕ.*-9, ಸಕಲೇಶಪುರ – ೩೬.

[13]*ಎ.ಕ.*-೯, ಸಕಲೇಶಪುರ – ೪೫, ೧೪ ಮಾರ್ಚ್೧೦೯೫.

[14]*ಅದೇ.*

[15]*ಎ.ಕ.*-೯, ಪೀಠಿಕೆ x/vii

[16]*ಎ.ಕ.*-೩, ೧೩೫-ಹೆಗ್ಗಡೆದೇವನ ಕೋಟೆ.

[17]ರಮೇಶ್.ಕೆ.ವಿ. *ತುಳುನಾಡಿನ ಇತಿಹಾಸ*ಪುಟ. ೫೨

[18]*ಎ.ಕ.*-೧, ಸೋಮವಾರ ಪೇಟೆ – ೬೨, ೬ ಜುಲೈ ೧೦೯೫.

[19]*ಎ.ಕ.*-೧, ಪೀಠಿಕೆ ಪುಟ xxxi

[20]*ಎ.ಕ.*-೧ ಪೀಠಿಕೆ ಪುಟ x x vi

[21]*ಎ.ಕ.*-೯ ಸಕಲೇಶಪುರ – ೪೫, ೧೪ ಮಾರ್ಚ್ ೧೦೯೫.

[22]ಎ.ಕ.-೧, ಸೋಮವಾರ ಪೇಟೆ -೬೨, ೬ ಜುಲೈ ೧೦೯೫.

[23]ಅದೇ.

[24]ಎ.ಕ.-೯, ಸಕಲೇಶಪುರ – ೪೫, ೧೪ ಮಾರ್ಚ್೧೦೯೫.

[25]ಅದೇ.

[26]ಎ.ಕ.-೦, ಬೇಲೂರು-೧೬,ಮಾರ್ಚ್ ೯೧೦, ೧೧೧೭.

[27]ಎ.ಕ.-೯, ಹಳೇಬೀಡು-೩೩೫, ೧೦೬೨-೬೩.

[28]ಎ.ಕ.-೯, ಸಕಲೇಶಪುರ – ೪೫, ೧೪ ಮಾರ್ಚ್೧೦೯೫.

[29]ಎ.ಕ.-೧, ಸೋಮವಾರ ಪೇಟೆ – ೬೨, ೬ ಜುಲೈ ೧೦೯೫.

[30]ಜಾಜ್ಎಂ. ಮೊರೆಸ್, ಹಿಂದೆ ಉಲ್ಲೇಖಿಸಿದ್ದು, ಪುಟ – ೨೨೪.

[31]ಎ.ಕ.-೯, ಸಕಲೇಶಪುರ – ೪೫, ೧೪ ಮಾರ್ಚ್೯ ೧೦೯೫.

[32]ಎ.ಕ.-೯, ಸಕಲೇಶಪುರ – ೩೪, ೧೦೨೨-೨೩.

[33]ವೈರಿಯ ಹೆಸರು ಅಳಿಸಿಹೋಗಿರಬಹುದಾದರೂ, ಆತ ಗಂಗ ವಂಶದ ನೀತಿಮಹಾರಾಜನೆ ಆಗಿದ್ದಾನೆ ಎಂದು ಊಹಿಸಿಕೊಳ್ಳಬಹುದಾಗಿದ್ದು, ಗುಳೆ ಹೊರಟು ಬಂದು ಇಲ್ಲಿ ಬಿಡಾರ ಹೂಡಿದಾಗ ವೈರಿಯಾಗಿ ಕಂಡು ಬಂದು ಸ್ಥಳೀಯ ಪ್ರತಿಭಟನೆ ಎದುರಾಗಿರಬೇಕು.

[34]ಜಾರ್ಜ್ಎಂ. ಮೊರೆಸ್, ಹಿಂದೆ ಉಲ್ಲೇಖಿಸಿದ್ದು, ಪು ೨೨೪.

[35]ಎ.ಕ.-೯, ಬೇಲೂರು ೧೬, ಮಾರ್ಚ್೧೦, ೧೧೧೭.

[36]ಎ.ಕ.-೯, ೯೬, ೯೯, ೧೩೪, ೧೪೫, ೧೬೩, ೧೬೮ ಮತ್ತು ಇತರ ಶಾಸನಗಳು.

[37]ಎ.ಕ.-೯, ಬೇಲೂರು – ೩೪೧, ೧೦೯೭-೯೮.

[38]ಎ.ಕ.-೮, ಆಲೂರು-೮, ಮಾರ್ಚ್೧೬, ೧೦೨೫.

[39]ಎ.ಕ.-೧, ಸೋಮವಾರ ಪೆಟೆ – ೬೨, ೬ ಜುಲೈ ೧೦೯೫.

[40]ಅದೇ.

[41]ಎ.ಕ.-೯, ಸಕಲೇಶಪುರ – ೪೫, ಪುಟ – ೫೨೬, ಕ್ರಿ.ಶ. ೧೦೯೫.

[42]ಅದೇ.

ಮಲೆಕರ್ನಾಟಕದ ಅರಸು ಮನೆತನಗಳು: ೧೦. ಕೊಂಗಾಳ್ವರು

ಒಂದು ನಾಡಿನ ಇತಿಹಾಸದಲ್ಲಿ ಪ್ರಧಾನ ರಾಜವಂಶಗಳಿಗೆ ನೀಡುವ ಮಹತ್ತ್ವವನ್ನು ಆಯಾ ಕಾಲದ ಸಾಮಂತ ಮನೆತನಗಳಿಗೂ ಸಲ್ಲಿಸಬೇಕಾದುದು ಇತಿಹಾಸಕಾರರ ಕರ್ತವ್ಯವಾಗಿದೆ. ಏಕೆಂದರೆ ಎಷ್ಟೋ ಸಲ ಒಂದು ಸಾಮಂತ ಮನೆತನ ಪ್ರಧಾನ ರಾಜವಂಶವಾಗಿ ಬೆಳೆಯುವುದಕ್ಕೂ ಮತ್ತು ಒಂದು ರಾಜವಂಶ ಸಾಮಂತ ಮನೆತನವಾಗಿ ಪರಿವರ್ತನೆಗೊಳ್ಳುವುದಕ್ಕೂ ಕಾಲಧರ್ಮ ಅಸ್ಪದವಿತ್ತುದನ್ನು ನಾವು ಕಾಣುತ್ತೇವೆ.

ಕರ್ನಾಟಕದ ಇತಿಹಾಸದಲ್ಲಿ ಅಂತ ಹಲವು ಸಾಮಂತ ಮನೆತನಗಳ ಅಸ್ತಿತ್ವವನ್ನು ನಾವು ನೋಡಬಹುದು. ಈ ಸಾಮಂತ ಮನೆತನಗಳ ಅರಸರು ತಮ್ಮ ಸಾರ್ವಭೌಮರಿಗೆ ನಿಷ್ಠರಾಗಿದ್ದು, ಅವರು ದುರ್ಬಲರಾದಾಗ ಸ್ವತಂತ್ರರಾಗಲು ಹವಣಿಸುತ್ತಿದ್ದರು, ಇಲ್ಲವೇ ಅದಕ್ಕಿಂತ ಪ್ರಭಾವಶಾಲಿಯಾದ ಮತ್ತೊಂದು ರಾಜವಂಶಕ್ಕೆ ಅಧೀನರಾಗಿ ಕೆಲವು ಪ್ರದೇಶಗಳಲ್ಲಿ ಆಡಳಿತ ನಡೆಸುತ್ತಿದ್ದರು. ಕನ್ನಡ ನಾಡಿನ ಇತಿಹಾಸದಲ್ಲಿ ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ಸೇವುಣರು ಮುಂತಾದ ಪ್ರಮುಖ ರಾಜವಂಶಗಳೆಲ್ಲ ಮೂಲತಃ ಸಾಮಂತ ಮನೆತನಗಳಾಗಿ ಜನ್ಮ ತಳೆದು, ಕ್ರಮೇಣ ಬಲಯುತವಾಗಿ ಸ್ವತಂತ್ರ ಸಾಮ್ರಾಜ್ಯಗಳನ್ನು ಸ್ಥಾಪಿಸಿದುವು. ಇನ್ನು ಕೆಲವು ಸಾಮಂತ ಮನೆತನಗಳು ಒಂದೆರಡು ಶತಮಾನಗಳ ಕಾಲ ಆಳಿ, ಹೇಳಹೆಸರಿಲ್ಲದಂತೆ ಅಳಿದುಹೋದವು. ಕೊಂಗಾಳ್ವ ಮನೆತನವು ಎರಡನೆಯ ವರ್ಗಕ್ಕೆ ಸೇರಿದುದು.

ಕೊಂಗಾಳ್ವರ ಇತಿಹಾಸವನ್ನು ಪುನಾರಚಿಸಲು ಇರುವ ಏಕೈಕ ಆಕರವೆಂದರೆ ಶಾಸನಗಳು. ಇವು ಕೊಡಗು ಜಿಲ್ಲೆಯ ಸೋಮವಾರಪೇಟೆ, ಮೈಸೂರು ಜಿಲ್ಲೆಯ ಕೃಷ್ಣರಾಜನಗರ, ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ, ಹಾಸನ ಜಿಲ್ಲೆಯ ಅರಕಲಗೂಡು, ಹೊಳೇನರಸೀಪುರ ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಕಾಣಸಿಗುತ್ತವೆ. ಉಪಲಬ್ಧ ಶಾಸನಗಳಲ್ಲಿ ಸ್ಮಾರಕ ಶಾಸನಗಳು ಎಂದರೆ ವೀರಗಲ್ಲು ಮತ್ತು ನಿಷಿಧಿಗಳು ಹಾಗೂ ದಾನಶಾಸನಗಳೇ ಅಧಿಕವಾಗಿವೆ. ಒಂದೂ ತಾಮ್ರಶಾಸನ ದೊರೆತಿಲ್ಲ. ಒಟ್ಟು ಶಾಸನಗಳು ಸುಮಾರು ೩೫ ಎಂದು ಹೇಳಬಹುದು.

ಕೊಂಗಾಳ್ವರನ್ನು ಕುರಿತು ಮೊಟ್ಟಮೊದಲು ಉಲ್ಲೇಖಿಸಿದವರೆಂದರೆ ಬೆಂಜಮಿನ್ ಲೂಯಿ ರೈಸ್. ಹಾಸನ ಮತ್ತು ಕೊಡಗು ಜಿಲ್ಲೆಗಳ ಶಾಸನಗಳನ್ನು ಕುರಿತು ಪ್ರಾಸ್ತಾವನೆಯನ್ನು ಬರೆಯುವಾಗ ಹಾಗೂ ಮೈಸೂರು ಅಂಡ್ ಕೂರ್ಗ್ ಫ್ರಂ ಇನ್‌ಸ್ಕ್ರಿಪ್ಷನ್ಸ್ ಎಂಬ ಗ್ರಂಥ ರಚಿಸುವಾಗ ಅವರು ಕೊಂಗಾಳ್ವರ ಬಗ್ಗೆ ವಿವರವಾಗಿ ಚರ್ಚಿಸಿದ್ದಾರೆ. ಡಾ. ಬಿ.ಶೇಕ್ ಅಲಿ ಅವರ ಸಂಪಾದಕತ್ವದಲ್ಲಿ ಹೊರಬಂದ ದಿ ಹೊಯ್ಸಳ ಡೈನಾಸ್ಟಿ (೧೯೭೨) ಎಂಬ ಸಂಶೋಧನ ಪ್ರಬಂಧಗಳ ಸಂಕಲನದಲ್ಲಿ ಡಾ. ಎ.ವಿ.ನರಸಿಂಹಮೂರ್ತಿ ಅವರು 'ಸಂ ಇಂಪಾರ್ಟೆಂಟ್ ಹೊಯ್ಸಳ ಫ್ಯೂಡೇಟರೀಸ್' ಎಂಬ ಲೇಖನದಲ್ಲಿ ಕೊಂಗಾಳ್ವರ ಸಂಕ್ಷಿಪ್ತ ಇತಿಹಾಸವನ್ನು ಎರಡು ಪುಟಗಳಲ್ಲಿ (೭೪-೭೫) ನೀಡಿದ್ದಾರೆ. ಕೊಂಗಾಳ್ವರನ್ನು ಕುರಿತ ಸಂಶೋಧನ ಲೇಖನವೊಂದನ್ನು *ಮಾನವಿಕ ಕರ್ಣಾಟಕ*ದಲ್ಲಿ (ಸಂಪುಟ ೩, ಸಂಚಿಕೆ ೨, ೧೯೭೩) ಈ ಲೇಖನದ ಕರ್ತೃ ಪ್ರಕಟಿಸಿದರು; ಆಗ ಲಭ್ಯವಿದ್ದ ಬಹುತೇಕ ಮಾಹಿತಿಯನ್ನು ಈ ಲೇಖನದಲ್ಲಿ ಕ್ರೋಢೀಕರಿಸಲಾಗಿದೆ. ೧೯೬೬ ರಲ್ಲಿಯೇ *ಕರ್ನಾಟಕ ಥ್ರೂ ದಿ ಏಜಸ್* ಎಂಬ ಗ್ರಂಥದಲ್ಲಿ ಎಂ.ವಿ.ಕೃಷ್ಣರಾವ್ ಕೇವಲ ಎರಡು ಪ್ಯಾರಾಗಳಲ್ಲಿ ಕೊಂಗಾಳ್ವರ ಸ್ಥೂಲ ಪರಿಚಯವನ್ನು ಮಾಡಿಕೊಟ್ಟಿದ್ದರು; ಈ ಗ್ರಂಥ ಕರ್ಣಾಟಕದ ಪರಂಪರೆ ಎಂಬ ಶೀರ್ಷಿಕೆಯಡಿ ಅನುವಾದಗೊಂಡು ಪ್ರಕಟವಾಗಿದೆ (೧೯೭೦). ಕರ್ನಾಟಕ ವಿಷಯ ವಿಶ್ವಕೋಶದಲ್ಲಿ (೧೯೭೯)

ಡಾ. ಎ.ವಿ.ನರಸಿಂಹಮೂರ್ತಿ ಅವರು ಕೊಂಗಾಳ್ವರ ಇತಿಹಾಸವನ್ನು ಸಂಕ್ಷಿಪ್ತವಾಗಿ ನಿರೂಪಿಸಿದ್ದಾರೆ. ಡಾ. ಬಾ.ರಾ.ಗೋಪಾಲ ಅವರು ತಮ್ಮ ಒಂದು ಕೃತಿಯಲ್ಲಿ**[1]** ಹಾಗೂ ಎಪಿಗ್ರಾಫಿಯ ಕರ್ನಾಟಕದ ಪರಿಷ್ಕೃತ ಸಂಪುಟಗಳಲ್ಲಿ**[2]** ಕೊಂಗಾಳ್ವರ ಇತಿಹಾಸವನ್ನು ವಿಶ್ಲೇಷಿಸಿದ್ದಾರೆ. ವೆಂಕಟೇಶ್ ಅವರು ಪಿ.ಎಚ್.ಡಿ.ಪದವಿಗೆ ಸಲ್ಲಿಸಿದ ತಮ್ಮ ಪ್ರೌಢ ಪ್ರಬಂಧದಲ್ಲಿ**[3]** ಈ ವಿಷಯದ ಬಗ್ಗೆ ಚರ್ಚಿಸಿದ್ದಾರೆ. ಕೊಡಗಿನ ಗೆಜೆಟಿಯರ್‌ನಲ್ಲಿ (ಪು.೪೮-೫೦) ಕೊಂಗಾಳ್ವರ ಇತಿಹಾಸ ನಿರೂಪಿತವಾಗಿದೆ. ಡೆರೆಟ್,**[4]** ಕೊಎಲ್ಹೊ**[5]** ಮುಂತಾದವರ ಕೃತಿಗಳಲ್ಲಿ ಅನುಷಂಗಿಕವಾಗಿ ಕೊಂಗಾಳ್ವರ ಉಲ್ಲೇಖಗಳು ಬಂದಿವೆ.

ಕ್ರಿ.ಶ. ೬ನೆಯ ಶತಮಾನದಲ್ಲಿಯೇ ರವಿವರ್ಮನ ಗುಡ್ನಾಪುರ ಶಾಸನದಲ್ಲಿ ಆತ ಗಂಗಪುನ್ನಾಟ, ಕೊಂಗಾಳ್ವ, ಪಾಂಡ್ಯ ಮತ್ತು ಆಳುಪ ದೊರೆಗಳನ್ನು ಸೋಲಿಸಿದನೆಂದು ಹೇಳಿದೆ.**[6]** ಆದರೆ ಶಾಸನದಲ್ಲಿ ಬಳಸಿರುವ 'ಕೊಂಗಾಳ್ವ' ಎಂಬ ಶಬ್ದವು ಒಂದು ಪ್ರದೇಶವನ್ನು ಸೂಚಿಸುತ್ತದೆ, ಮನೆತನವನ್ನಲ್ಲ ಎಂದು ತೋರುತ್ತದೆ. ಕೊಂಗಾಳ್ವರು ಆಳುವಖೇಡದ (ಈಗಿನ ದಕ್ಷಿಣ ಕನ್ನಡ ಪ್ರದೇಶ) ಆಳ್ವ ಅಥವಾ ಆಳುವ ಮನೆತನದ ಶಾಖೆಯೊಂದಕ್ಕೆ ಸೇರಿದವರಿರಬೇಕೆಂದು ಕೆಲವು ಭಾವಿಸುತ್ತಾರೆ.**[7]** ಕೊಂಗು ನಾಡನ್ನು ಅವರು ಆಳುತ್ತಿದ್ದುದರಿಂದ ಕೊಂಗಾಳ್ವರೆನಿಸಿದರು ಎಂಬ ವೆಂಕಟೇಶ್ ಅವರು ಅಭಿಪ್ರಾಯ ಸಮ್ಮತಾರ್ಹವೆನ್ನಿಸುತ್ತದೆ. ಚಂಗಾಳ್ವ, ನಾಡಾಳ್ವ ಎಂಬಂತೆಯೇ ಕೊಂಗಾಳ್ವವಿದ್ದಿರಬೇಕು. ಕೊಂಗನಾಡು, ಕೊಂಗವಿಷಯ, ಕೊಂಗಲ್ನಾಡು, ಕೊಂಗನಾಡು ಎರಡಿಚ್ಛಾಸಿರ ಮುಂತಾದ ಅನೇಕ ಉಲ್ಲೇಖಗಳು ಈ ಭಾಗದ ಶಾಸನಗಳಲ್ಲಿ ದೊರೆಯುತ್ತವೆ.**[8]**

ಕೊಂಗಾಳ್ವರ ಶಾಸನಗಳೆಲ್ಲ ಕನ್ನಡದಲ್ಲಿಯೇ ಇದ್ದರೂ ಒಂದು ಶಾಸನದಲ್ಲಿ ಮಾತ್ರ ಅವರು ಚೋಳ ಮೂಲದವರಿರಬಹುದೆಂಬ ಊಹೆಗೆ ಅವಕಾಶ ದೊರೆಯುತ್ತದೆ; ಅರಕಲಗೂಡು ತಾಲ್ಲೂಕಿನ ಸುಳಗೋಡು ಸೋಮವಾರ ಎಂಬಲ್ಲಿರುವ ಶಾಸನವು ರಾಜೇಂದ್ರ ಪೃಥುವೀ ಕೊಂಗಾಳ್ವನೆಂಬ ರಾಜನಿಗೆ ಸೇರಿದ್ದು, ಅದರಲ್ಲಿರುವ ಬಿರುದುಗಳ ಪೈಕಿ 'ಜತಾಚೋಳಿ ಕುಳೋದಯಾಚಳಗಭಸ್ತಿಮಾಳಿ' ಎಂಬುದೊಂದು. ಹಾಗೆಯೇ ಅವರು ಸೌರ ವಂಶದವರೆಂಬುದು 'ಸೂರ್ಯ್ಯವಂಶ ಶಿಖಾಮಣಿ' ಎಂಬ ಬಿರುದಿನಿಂದ ವಿದಿತವಾಗುತ್ತದೆ.

ಕರ್ನಾಟಕ ಮತ್ತು ತಮಿಳುನಾಡಿನ ಅರಸರ ನಡುವಣ ಹಗೆತನ ದಕ್ಷಿಣ ಭಾರತದ ಇತಿಹಾಸದುದ್ದಕ್ಕೂ ಎದ್ದು ಕಾಣುವ ಅಂಶ. ಕ್ರಿ.ಶ. ೧೧ನೆಯ ಶತಮಾನದ ಆರಂಭದಲ್ಲಿ ಚೋಲ ದೊರೆ ಒಂದನೆಯ ರಾಜರಾಜನು ಗಂಗವಾಡಿಯನ್ನು ಗೆದ್ದುಕೊಂಡನು. ಇದರಿಂದಾಗಿ ಕೊಂಗಾಳ್ವರು ಚೋಲಮಾಂಡಲೀಕರಾಗಿ ಕೆಲವು ಭೂಭಾಗಗಳನ್ನು ಆಳುವಂತಾಯಿತು.

ಕೊಂಗಾಳ್ವ ಮನೆತನದ ಅತ್ಯಂತ ಪ್ರಾಚೀನ ಶಾಸನ ಸೋಮವಾರಪೇಟೆ ತಾಲ್ಲೂಕಿನ ಮಾಲಂಬಿ ಗ್ರಾಮದಲ್ಲಿ ದೊರೆತಿದೆ.**[9]** ಕೊಂಗಾಳ್ವರು ಅಧಿಕಾರಕ್ಕೆ ಬಂದ ಪರಿಸ್ಥಿತಿಯನ್ನು ಇದರಲ್ಲಿ ತಿಳಿಸಿದೆ. 'ಕವೇರ ಕನ್ಯಕಾ ಸಖೀಯ ಮಾನ' ಮತ್ತು 'ಚೋಳಮಹಾಮಹೀಪತಿ' ಎನಿಸಿದ ರಾಜಕೇಸರಿವರ್ಮ ಪೆರ್ಮನಡಿಯು (ಒಂದನೆಯ ರಾಜರಾಜ) ಪನಸೋಗೆಯ ಕಾಳಗದಲ್ಲಿ ಶತ್ರುಗಳ ದಮನವಾಗುವವರೆಗೂ ಹೋರಾಡಿದ ಮನಿಜನ ಪರಾಕ್ರಮವನ್ನು ಮೆಚ್ಚಿದ; ಅವನಿಗೆ ಪಟ್ಟವನ್ನು ಕಟ್ಟಿ ನಾಡನ್ನು ಕೊಡಬೇಕೆಂದು ಪಂಚವನ್ ಮಾರಾಯನಿಗೆ ಆದೇಶ ನೀಡಿದ; ಅದರಂತೆ ಪಂಚವನ್ ಮಾರಾಯನು ಮನಿಜನಿಗೆ 'ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ' ಎಂಬ ಬಿರುದನ್ನಿತ್ತು ಮಾಲ್ವಿಯನ್ನು ನೀಡಿದನೆಂದು ಅದೇ ಶಾಸನದಲ್ಲಿ ಹೇಳಿದೆ. ಇದರಲ್ಲಿನ 'ಕೊಂಗಾಳ್ವ' ಎಂಬ ಶಬ್ದ ಕೊಂಗನ್ನು ಅಥವಾ ಕೊಂಗನಾಡನ್ನು ಆಳುವವ ಎಂದೇ ಸೂಚಿಸುವಂತಿದೆ. ಶಾಸನೋಕ್ತ ಮಾಲವ್ವಿ ಕೊಡಗಿನಲ್ಲಿದೆ. ಮನಿಜ ಈ ಪ್ರದೇಶದವನಾಗಿರಬಹುದು. ಕೆಲವರು ಪಂಚವನ್ ಮಾರಾಯನೇ ಮಾಲವ್ವಿಯನ್ನು ಪಡೆದನೆಂದು ಹಾಗೂ ಆತನೇ ಕೊಂಗಾಳ್ವ ಮನೆತನದ ಮೊದಲ ಮಾಂಡಲಿಕನೆಂದು

ಭಾವಿಸುತ್ತಾರೆ.[10] ಆದರೆ ಪಂಚವನ್ ಮಾರಾಯ ಎಂಬುದು ಚೋಲಯುವರಾಜ ಮತ್ತು ಗಂಗಮಂಡಲದ ಪ್ರಧಾನ ಸೇನಾನಿಯಾಗಿದ್ದ ಒಂದನೆಯ ರಾಜೇಂದ್ರ ಚೋಳನ ಬಿರುದುಗಳಲ್ಲೊಂದು.[11]ಅಲ್ಲದೆ, ಶಾಸನದಲ್ಲಿ ಮನಿಜನ ಹೆಸರು ಸ್ಪಷ್ಟವಾಗಿದೆ. ಆದ್ದರಿಂದ ಮನಿಜನೇ ಕೊಂಗಾಳ್ವವಂಶದ ಮೊದಲ ಮಾಂಡಲಿಕನೆಂದು ನಿರ್ಧರಿಸಬಹುದು. ಸುಮಾರು ಕ್ರಿ.ಶ. ೧೦೦೪-೦೫ ರಲ್ಲಿ ಪನಸೋಗೆಯ ಕಾಳಗವು ಗಂಗರ ಇಲ್ಲವೇ ಚಂಗಾಳ್ವರ ವಿರುದ್ಧ ನಡೆದಿರಬೇಕು. ಕೊಂಗಾಳ್ವರ ಆಳ್ವಿಕೆ ಕೂಡ ಇದೇ ಸುಮಾರಿಗೆ ಆರಂಭವಾಗಿರಬಹುದು. ಆದರೆ ಶಾಸನದಲ್ಲಿ 'ಪಟ್ಟವಂ ಕಟ್ಟಿ ಮಾಲವ್ವಿಯನ್' ಕೊಟ್ಟುದಷ್ಟನ್ನು ಮಾತ್ರ ಹೇಳಿದೆ. ಪಟ್ಟ ದೊರೆತದ್ದರಿಂದ ಮಾಲವ್ವಿಯ ಆಸುಪಾಸಿನ ಪ್ರದೇಶವನ್ನು ಆತ ಆಳಿದನೆಂದು ಭಾವಿಸಲಾಗಿದೆ.

ಸು. ಕ್ರಿ.ಶ. ೧೦೨೦ ಕ್ಕೆ ಅನ್ವಯಿಸಲಾದ ಶಾಸನವೊಂದರಲ್ಲಿ ಬಡಿವ ಕೊಂಗಾಳ್ವನ ಉಲ್ಲೇಖವಿದೆ.[12]ಇನ್ನೇನೂ ವಿವರ ದೊರೆಯುವುದಿಲ್ಲ. ಇದು ಒಂದು ಬಿರುದಾಗಿರಬಹುದೆಂಬುದು ಡಾ. ಬಾರಾ. ಗೋಪಾಲರ ಅಭಿಪ್ರಾಯ.[13]ಕ್ರಿ.ಶ. ೧೧ನೆಯ ಶತಮಾನದ ಮೊದಲ ದಶಕಗಳಿಗೆ ಸೇರಬಹುದಾದ ಒಂದು ಶಾಸನದಲ್ಲಿ ಕಾಡವ ಕೊಂಗಾಳ್ವನ ಪ್ರಸ್ತಾಪವಿದೆ.[14] ಬಡಿವ ಮತ್ತು ಕಾಡವ ಅಭಿನ್ನರೆ? ಆಧಾರಗಳ ಕೊರತೆಯಿಂದಾಗಿ ಇದು ಕೇವಲ ಊಹೆಯಾಗುತ್ತದೆ. ಮನಿಜನಿಗೂ ಬಡಿವ ಅಥವಾ ಕಾಡವನಿಗೂ ಇರುವ ಸಂಬಂಧವೂ ತಿಳಿದು ಬರುವುದಿಲ್ಲ.

ಕ್ರಿ.ಶ. ೧೦೨೨-೨೩ಕ್ಕೆ ಸೇರಿದ, ಸಕಲೇಶಪುರ ತಾಲ್ಲೂಕಿನ ರಾಜೇಂದ್ರಪುರದಲ್ಲಿರುವ ಹಾಗೂ ರಾಜೇಂದ್ರಚೋಳ ಪೃಥುವೀ ಮಹಾರಾಜನಿಗೆ ಸೇರಿದ ವೀರಗಲ್ಲು ಪಡೆವಳ ಜೋಗಯ್ಯನ ಮರಣವನ್ನು ದಾಖಲಿಸುತ್ತದೆ.[15]ಜೋಗಯ್ಯನು ಹೊಯ್ಸಳ ಪಕ್ಷದ ವೀರನೆಂದೂ ಕೊಂಗಾಳ್ವರ ಪರ ಹೋರಾಡಿದ ಕನ್ನಮ್ಮ ನೃಪಕಾಮ ಪೊಯ್ಸಳನ ಪ್ರಾಣಕ್ಕೆ ಸಂಚಕಾರ ತರಲು ಜೋಗಯ್ಯ ರಕ್ಷಣೆಗೆ ಧಾವಿಸಿ ಕನ್ನಮ್ಮನನ್ನೂ ಅವನ ಕುದುರೆಯನ್ನೂ ಕೊಂದು ಅಸುನೀಗಿದನೆಂದು ಅರ್ಥೈಸಲಾಗಿತ್ತು. ಇದು ಸರಿಯಲ್ಲ. ಶಾಸನದಲ್ಲಿ ರಾಜೇಂದ್ರಚೋಳ ಪೃಥುವೀ ಮಹಾರಾಜನ ಹೆಸರು ಮೊದಲು ಬರುತ್ತದೆ; ನೃಪಕಾಮನನ್ನು ಮಹಾರಾಜ ಎಂದು ಕರೆದಿಲ್ಲ; ಹಾಗೂ ಶಾಸನ ದೊರೆತ ಗ್ರಾಮದ ಹೆಸರು ಈಗಲೂ ರಾಜೇಂದ್ರಪುರ ಎಂದಿರುವುದು ಗಮನಾರ್ಹ. ಈ ಹೋರಾಟದಲ್ಲಿ ವಿಜಯಿಯಾದವನು ರಾಜೇಂದ್ರನೇ. ಆದರೆ ಇಲ್ಲೊಂದು ಸಮಸ್ಯೆ ಇದೆ. ಹೊಯ್ಸಳ ವಿರೋಧಿಯನ್ನು ಕೊಂಗಾಳ್ವನೆಂದು ಹೇಳಿಲ್ಲ; ಅಲ್ಲದೆ, "ಇದು ಮಾಂಡಲಿಕರ ಮೇಲಿನ ಅಧಿರಾಜರಿಗೆ ಸಂಬಂಧಿಸಿದೆ ಎನ್ನುವುದಕ್ಕೆ 'ಪೃಥುವೀ ಮಹಾರಾಜ' ಎಂಬ ಬಿರುದನ್ನು ಇದರಲ್ಲಿ ಬಳಸಿರುವುದು ಬಹಳ ಮುಖ್ಯವಾಗಿದೆ. ಮತ್ತೆ ಕೊಂಗಾಳ್ವರು ತಮ್ಮನ್ನು 'ಪೃಥುವೀ ಮಹಾರಾಜ ಎಂದು ಕರೆದುಕೊಂಡಿರುವುದಕ್ಕೆ ಎಲ್ಲಿಯೂ ಇನ್ನೊಂದು ದಾಖಲೆ ಈ ಕಾಲದಲ್ಲಿ ಇಲ್ಲ .....ಶಾಸನದಲ್ಲಿ ರಾಜೇಂದ್ರ ಚೋಳ ಪೃಥುವೀ ಮಹಾರಾಜ ಎಂದು ಸ್ಪಷ್ಟವಾಗಿ ಹೇಳಿರುವುದರಿಂದ ಇದು ಒಂದನೆಯ ರಾಜೇಂದ್ರ ಚೋಳ ದೊರೆಗೆ (ಕ್ರಿ.ಶ. ೧೦೧೨-೧೦೪೪) ಸಂಬಂಧಿಸಿದೆ" ಎಂದು ಹೇಳಲಾಗಿದೆ.[16]ಕೊಂಗಾಳ್ವ ಶಾಸನಗಳಲ್ಲಿ ರಾಜೇಂದ್ರಚೋಳ ಕೊಂಗಾಳ್ವ ಎಂಬುದಕ್ಕಿಂತಲೂ ಹೆಚ್ಚು ಕಂಡುಬಂದಿರುವುದು ರಾಜೇಂದ್ರ ಪೃಥುವೀ ಕೊಂಗಾಳ್ವ ಎಂಬ ರೂಪವೇ. ಚೋಳರ ಶಾಸನಗಳು ಸಕಲೇಶಪುರದಂಥ ಮಲೆನಾಡಿನ ಪ್ರದೇಶದಲ್ಲಿ ದೊರೆಯುವ ಸಂಭವನೀಯತೆ ಕಡಿಮೆ. ಇದು ಕೊಂಗಾಳ್ವ-ಹೊಯ್ಸಳ ಹೋರಾಟವೆಂದೇ ತೋರುತ್ತದೆ; ಏಕೆಂದರೆ ಮೂರ್ನಾಲ್ಕು ವರ್ಷಗಳಲ್ಲೇ, ಎಂದರೆ ಕ್ರಿ.ಶ. ೧೦೨೬ರ ಫೆಬ್ರುವರಿ ೪ ರಂದು ಹೊಯ್ಸಳರಿಗೂ ಕೊಂಗಾಳ್ವರಿಗೂ ಮತ್ತೆ ಹೋರಾಟ ನಡೆಯಿತೆಂದು ಹೆಣ್ಣೂರು ಗ್ರಾಮದ ವೀರಗಲ್ಲಿನಿಂದ ತಿಳಿದುಬರುತ್ತದೆ.[17]ಮಣ್ಣೆ ಎಂಬಲ್ಲಿ ನಡೆದ ಹೋರಾಟದಲ್ಲಿ ಕೊಂಗಾಳ್ವ ದೊರೆಗೆ ಜಯ ಲಭಿಸಿತು. ಇರ್ಗ್ಗಡಲ ಕೋಟೆಯನ್ನು ವಶಪಡಿಸಿಕೊಳ್ಳುವ ಪ್ರಯತ್ನದಲ್ಲಿ ಮಡಿದ ಜಾಕವನಿಗೆ ಆತನ ತಾಯಿ ವೆಂದಕಬ್ಬೆ ವೀರಗಲ್ಲನ್ನು ನಿಲ್ಲಿಸಿದಳು; ಮೃತವೀರನ ತಂದೆಯ ಹೆಸರು ಕೊಂಗಳಾಚಾರಿ. ಈ ವೀರಗಲ್ಲು

ಶಾಸನದಲ್ಲಿ ಗಮನಿಸಬೇಕಾದುದು 'ಮುಣ್ಡಪೊಯ್ಸಳ' ಎಂಬ ಉಲ್ಲೇಖ. ಬಿ.ಎಲ್.ರೈಸ್ ಈ ಶಬ್ದವನ್ನು 'base ಎಂದು ಅರ್ಥೈಸಿದ್ದಾರೆ.[18] ಕೊಎಲ್ಹೊ ಈ ಅರ್ಥವನ್ನು ಒಪ್ಪಿಕೊಂಡಿದ್ದಾರೆ.[19] ಡೆರೆಟ್‌ರಂತೂ, ನೃಪಕಾಮನು ಯುದ್ಧದಲ್ಲಿ ಯಾವುದೋ ಅಂಗವನ್ನು ಕಳೆದುಕೊಂಡವನಿರಬೇಕೆಂದು ಭಾವಿಸಿ ಮುಂಡವೆಂಬ ಶಬ್ದಕ್ಕೆ ಅಂಗಹೀನ (deprived of limb) ಎಂಬ ವಿಪರೀತಾರ್ಥ ಕಲ್ಪಿಸಿದ್ದಾರೆ.[20]ಮಂಡನೆಂಬ ಹೊಯ್ಸಳ ದೊರೆ ಕ್ರಿ.ಶ. ೧೦೦೬ ರಿಂದ ೧೦೨೬ರವರೆಗೆ ಆಳಿದನೆಂಬ ಅಭಿಪ್ರಾಯವೂ ಇದೆ. ಕಲಿಯೂರು ಶಾಸನೋಕ್ತ 'ಗಣ್ಡರಗಣ್ಡ ಮುಣ್ಡ' ಈತನೇ ಎಂದು ಗುರುತಿಸಿದೆ.[21]ಮುಂಡ ಎಂಬ ಶಬ್ದವು ಚಾಮುಂಡ ಎಂಬ ಶಬ್ದದ ಒಂದು ರೂಪ. ಅದು ವ್ಯಕ್ತಿನಾಮವಾಗಿ ಮತ್ತು ಕುಲಸೂಚಕವಾಗಿ ಬಂದಿರುವ ಉದಾಹರಣೆಗಳನ್ನು ಶಾಸನಗಳಲ್ಲಿ ಕಾಣಬಹುದು.[22]ರಾಜೇಂದ್ರ ಕೊಂಗಾಳ್ವನು ಚೋಳರ ಪರವಾಗಿ ಹೊಯ್ಸಳರೊಡನೆ ಕಾದಿರಬೇಕೆಂದು ರೈಸ್ ಭಾವಿಸುತ್ತಾರೆ.[23]

ರಾಜೇಂದ್ರ ಚೋಳನ ತರುವಾಯ ಮೂರುದಶಕಗಳವರೆಗೆ ನಮಗೆ ಕೊಂಗಾಳ್ವ ಶಾಸನಗಳು ಕಂಡುಬರುವುದಿಲ್ಲ. ಕ್ರಿ.ಶ. ೧೦೫೯ ರಲ್ಲಿ ರಾಜೇಂದ್ರಚೋಳ ಕೊಂಗಾಳ್ವನು ತನ್ನ ತಂದೆ ಕಟ್ಟಿಸಿದ ಬಸದಿಗೆ ದಾನನೀಡಿದರು.[24]ಈತನನ್ನು ನಾವು ಎರಡನೆಯ ರಾಜೇಂದ್ರಚೋಳ ಕೊಂಗಾಳ್ವನೆಂದು ಪರಿಗಣಿಸಬಹುದು. ಈತನ ತಂದೆಯ ಹೆಸರನ್ನು ಸೂಚಿಸಿಲ್ಲವಾದರೂ, ರಾಜಾಧಿರಾಜ ಎಂದಿರಬೇಕೆಂದು ಕೊಂಗಾಳ್ವ ವಂಶಾವಳಿಯ ಪರಿಶೀಲನೆಯಿಂದ ಊಹಿಸಬಹುದು.

ಎರಡನೆಯ ರಾಜೇಂದ್ರ ಚೋಳನ ಅನಂತರದ ಕೊಂಗಾಳ್ವ ವಂಶಾವಳಿಯಲ್ಲಿ ಹೆಚ್ಚು ತೊಡಕಿಲ್ಲ. ರಾಜಾಧಿರಾಜ ಕೊಂಗಾಳ್ವನ ತಾಯಿ ಪೋಚಬ್ಬರಸಿಯು ಮುಳ್ಳೂರಿನಲ್ಲಿ ಬಸದಿಯೊಂದನ್ನು ಕಟ್ಟಿಸಿದಳು.[25]ಅದೇ ಬಸದಿಯ ತಳಪಾಯ ಕಲ್ಲಿನ ಮೇಲಿರುವ ಇನ್ನೊಂದು ಶಾಸನದಿಂದ ರಾಜಾಧಿರಾಜ ಕೊಂಗಾಳ್ವನು ರಾಜೇಂದ್ರಚೋಳ ಕೊಂಗಾಳ್ವನ ಮಗನೆಂದೂ, ಆ 'ವಾಸಸ್ಥಾನ'ವನ್ನು ಗುಣಸೇನ ಪಂಡಿತನೆಂಬ ಜೈನಗುರುವಿಗೆ ನೀಡಿದನೆಂದೂ ತಿಳಿದು ಬರುತ್ತದೆ.[26]ಈ ಗುಣಸೇನ ಪಂಡಿತ ಪೋಚಬ್ಬರಸಿಗೂ ಗುರುವಾಗಿದ್ದನು.[27]ಆದ್ದರಿಂದ ಎರಡನೆಯ ರಾಜಾಧಿರಾಜನು ಪೋಚಬ್ಬರಸಿ ಮತ್ತು ಎರಡನೆಯ ರಾಜೇಂದ್ರ ಚೋಳ ಕೊಂಗಾಳ್ವನ ಮಗನೆಂದು ತೀರ್ಮಾನಿಸಬಹುದು. ಮುಳ್ಳೂರಿನಲ್ಲಿ ರುಗ್ಮಿಣಿದೇವಿಯು ಬಹಶಃ ವಿಗ್ರಹವೊಂದನ್ನು ಪ್ರತಿಷ್ಠಾಪಿಸಿದಳು.[28]ಸುಮಾರು ಮೂರು ಶತಮಾನಗಳ ನಂತರ ಕ್ರಿ.ಶ. ೧೩೯೦ರ ಶಾಸನವೊಂದು ಈಕೆಯ ಹೆಸರನ್ನು ರಾಜಾಧಿರಾಜ ಕೊಂಗಾಳ್ವನ ಜೊತೆಯಲ್ಲಿ ಪ್ರಸ್ತಾಪಿಸುತ್ತದೆ.[29]ಆದ್ದರಿಂದ ಈಕೆ ರಾಜಾಧಿರಾಜ ಕೊಂಗಾಳ್ವನ ಪತ್ನಿಯಾಗಿದ್ದಿರಬೇಕು.

ಎರಡನೆಯ ರಾಜಾಧಿರಾಜನ ತರುವಾಯ ಮೂರನೆಯ ರಾಜೇಂದ್ರ ಅಧಿಕಾರಕ್ಕೆ ಬಂದ. ಈತನ ಆಳ್ವಿಕೆಯ ಕಾಲದಲ್ಲಿ ಬುಳ್ಳಹನಾಡಿನ ಪಳಿಗವೆರ್ಗಡೆಯು ಇಡಿಗ್ಗುಳೂರಿನಲ್ಲಿ ದೇವಾಲಯವನ್ನು ಕಟ್ಟಿಸಿ ಅದಕ್ಕೆ ಭೂಮಿದಾನಮಾಡಿದ ವಿಷಯ ಮಲ್ಲಿ ಪಟ್ಟಣದ ಕ್ರಿ.ಶ. ೧೦೬೬ರ ಶಾಸನದಲ್ಲಿ ನಿರೂಪಿತವಾಗಿದೆ.[30] ಮಲ್ಲಿಪಟ್ಟವನೇ ಶಾಸನೋಕ್ತ ಇಡಿಗ್ಗುಳೂರಿರಬಹುದು. ದಾನವನ್ನು ಸ್ವೀಕರಿಸಿದವನು ಮಲೆಯಾಳಜೀಯ ಎಂದೂ ಪರಿಚಿತನಾದ ನೀಲಕಂಠರವಿಭಟಾರ; ನಲ್ಲೂರ್ಪಳ್ಳಿಗೆ ಸೇರಿದವನು. ಇದೇ ರಾಜನ ಆಳ್ವಿಕೆಗೆ ಸೇರಿದ, ಕ್ರಿ.ಶ. ೧೦೭೦ರ ಎರಡು ಶಾಸನಗಳು ಹೊಸಹಳ್ಳಿಯಲ್ಲಿ ದೊರೆತಿವೆ. ದೊರೆಯು 'ಅಯ್ವತ್ತು ಖಣ್ಡುಗ ಬಿಡಭೂಮಿಯಂ ಹೊಷವಳ್ಳಿ ವೀರಸಿದ್ದೇಶ್ವರ ದೇವರ್ಗ್ಗಂ ಅರ್ಚನಾಭೋಗಕ್ಕಂ' ನೀಡಿದ ವಿಷಯ ಮೊದಲನೆಯ ಶಾಸನದ ವಸ್ತು.[31]ಅದೇ ತೇದಿಯಂದು, ಅದೇ ದೇವರಿಗೆ 'ಪೊಸವಳ್ಳಿಯ ನೀರಗಾವುಣ್ಡನ' ಭೂಮಿಯಲ್ಲಿ ಹತ್ತು ಖಂಡುಗವನ್ನು ಕೊಂಡು ದಾನವಿತ್ತು ಸಂಗತಿ ಎರಡನೆಯ ಶಾಸನದಲ್ಲಿ ನಿರೂಪಿತವಾಗಿದೆ.[32]ಈ ಕೊಂಗಾಳ್ವ ರಾಜನ ಪತ್ನಿ ಪದ್ಮಲದೇವಿ. ಆಕೆ ಕ್ರಿ.ಶ. ೧೦೭೭ರಲ್ಲಿ

ಮರಣ ಹೊಂದಿದಳು. ಆ ಸಂದರ್ಭದಲ್ಲಿ ಬಹುಶಃ 'ಗರುಡ'ರಾಗಿದ್ದ ಒಬ್ಬ ವೀರ ಮತ್ತು ಆತನ ಪತ್ನಿ ಸಹ ಪ್ರಾಣತ್ಯಾಗ ಮಾಡಿದರು. ಆದರೆ ಈ ವೀರಗಲ್ಲು ಶಾಸನದಲ್ಲಿ ವಿವರಗಳು ದುರದೃಷ್ಟವಶಾತ್‌ನಷ್ಟವಾಗಿವೆ.**[33]**

ಸುಳಗೋಡು ಸೋಮವಾರದಲ್ಲಿರುವ ಕ್ರಿ.ಶ. ೧೦೭೯-೮೦ರ ಶಾಸನವೊಂದು ಕೊಂಗಾಳ್ವರ ಕೆಲವು ಬಿರುದುಗಳನ್ನು ನಮೂದಿಸುತ್ತದೆ.**[34]** ಅವೆಂದರೆ ಮಹಾಮಂಡಲೇಶ್ವರ, ಒರೆಯೂರ್ಪುರ ವರಾಧೀಶ್ವರ, ಜಟಾಚೋಳ ಕುಳೋದಯಾಚಳ ಗಭಸ್ತಿ ಮಾಳಿ, ಸೂರ್ಯ್ಯವಂಶ ಶಿಖಾಮಣಿ ಹಾಗೂ ಶರಣಾಗತ ವಜ್ರಪಂಜರ. ಕೊಂಗಾಳ್ವರು ಚೋಳರನ್ನು ಹೇಗೆ ಹೆಸರಿನಲ್ಲಿ ಮಾತ್ರವಲ್ಲದೆ ಬಿರುದುಗಳಲ್ಲಿ ಕೂಡ ಅನುಕರಿಸುತ್ತಿದ್ದರೆಂಬುದು ಈ ಶಾಸನದಿಂದ ಸ್ಪಷ್ಟವಾಗುತ್ತದೆ. ಕೊಂಗಾಳ್ವ ಜೈನ ಗೃಹವೊಂದನ್ನು ಅದಟರಾದಿತ್ಯ ಕಟ್ಟಿಸಿದ; ರಾಜೇಂದ್ರ ಕೊಂಗಾಳ್ವನೇ ಈ ಅದಟರಾದಿತ್ಯ; ಅದಟರಾದಿತ್ಯ ಎಂದರೆ ಶೂರರಲ್ಲಿ ಕಂಗೊಳಿಸುವವನು ಎಂದರ್ಥ. ಗಂಡ ವಿಮುಕ್ತ ಸಿದ್ಧಾಂತ ದೇವರಿಗೆ ಈ ಬಸದಿಯನ್ನು ಒಪ್ಪಿಸಿ, ಅದಕ್ಕೆ ತರಿಗಳನೆಯಲ್ಲಿ ಭೂದಾನ ನೀಡಿದುದನ್ನು ಪ್ರಸ್ತುತ ಶಾಸನ ತಿಳಿಸುತ್ತದೆ.

ಕ್ರಿ.ಶ. ೧೦೭೯ರ ಸಾಲಿಗ್ರಾಮದ ಶಾಸನದಲ್ಲಿ**[35]** ತ್ರಿಭುವನಮಲ್ಲ ಕೊಂಗಾಳ್ವನಿಗೂ ಚಂಗಾಳ್ವರಿಗೂ ಹೋರಾಟ ನಡೆದ ಉಲ್ಲೇಖವಿದೆ. ಅದರಲ್ಲಿ ತ್ರೈಳೋಕ್ಯಸೆಟ್ಟಿ ಮತ್ತು ಚೆಳುಕಿಸೆಟ್ಟಿ ಕಾದಿ ಮಡಿದರು. ತ್ರಿಭುವನಮಲ್ಲ ಎನ್ನುವುದು ಕೂಡ ರಾಜೇಂದ್ರ ಕೊಂಗಾಳ್ವನ ಬಿರುದಿರಬೇಕು. ಈ ಪ್ರದೇಶದಲ್ಲಿ ಚಾಲುಕ್ಯರಪ್ರಭಾವ ಹೆಚ್ಚಾಗಿದ್ದಾಗ ಕೊಂಗಾಳ್ವದೊರೆಯು ಚೋಳ ಚಾಲುಕ್ಯರಿಬ್ಬರೊಡನೆಯೂ ವಿರೋಧ ಕಟ್ಟಿಕೊಳ್ಳಲು ಇಚ್ಛಿಸದೆ 'ತ್ರಿಭುವನಮಲ್ಲ ಚೋಳ' ಎಂಬ ಹೆಸರನ್ನು ಧರಿಸಿದ್ದಿಬೇಕೆಂದು ಡರೆಟ್ ಅಭಿಪ್ರಾಯಪಡುತ್ತಾರೆ.**[36]**ಸುಮಾರು ಕ್ರಿ.ಶ. ೧೧೦೮ಂಕ್ಕೆ ಸೇರಿಸಬಹುದಾದ ಗುಬ್ಬಿ ಶಾಸನವು ಮಹಾಮಂಡಲೇಶ್ವರ ಅದಟರಾದಿತ್ಯ ತ್ರಿಭುವನಮಲ್ಲ ಚೋಳ ಕೊಂಗಾಳ್ವದೇವನನ್ನು ಉಲ್ಲೇಖಿಸುತ್ತದೆ. ರಾಜೇಂದ್ರನನ್ನೇ ಇದು ಸೂಚಿಸುತ್ತದೆಂಬುದು ರೈಸ್ ಅವರ ಅಭಿಪ್ರಾಯ; ಅದಟರಾದಿತ್ಯ ಎಂಬುದನ್ನು ಜೈನಗುರು ಪ್ರಭಾಚಂದ್ರನನ್ನು ಪ್ರಶಂಸಿಸಲೂ ಬಳಸಿರಬೇಕೆಂದು ಅವರು ಹೇಳುತ್ತಾರೆ.**[37]**ಸಾವಂತಬೂವೆಯನಾಯಕನು ಪದ್ಮನಂದಿದೇವನೆಂಬ ಜೈನಯತಿಗೆ ಭೂದಾನವಿತ್ತುದು ಪ್ರಸ್ತುತ ಶಾಸನದ ವಸ್ತು; ಸಾವಂತನಿಗೂ ಅದಟರಾದಿತ್ಯ ಎಂಬ ಬಿರುದಿದೆ.**[38]**ದೊಡ್ಡ ಬೆಮ್ಮತ್ತಿ ಶಾಸನವು ರಾಜೇಂದ್ರನ ಆಳ್ವಿಕೆಗೆ ಸೇರಿದೆ; ಅದರ ಕಾಲ ಕ್ರಿ.ಶ. ೧೦೯೧. "ರಾಯನ ಬೆಮ್ಮತ್ತಿಯ ಮಾಕಬ್ಬೆ ಎತ್ತಿಸಿದ ಆದಿತ್ಯದೇವರ್ಗ್ಗೆ" ನೈವೇದ್ಯಕ್ಕಾಗಿ ರಾಜೇಂದ್ರನು ಭೂಮಿದಾನ ಮಾಡಿದ.**[39]**ಕ್ರಿ.ಶ. ೧೦೯೪ ಮತ್ತು ೧೧೦೦ರ ಎರಡು ಶಾಸನಗಳು ರಾಜೇಂದ್ರ ಪೃಥುವೀ ಕೊಂಗಾಳ್ವನನ್ನು ಉಲ್ಲೇಖಿಸುತ್ತವೆ.**[40]**ಇವೆರಡೂ ವೀರಗಲ್ಲುಗಳು. ಕ್ರಿ.ಶ. ೧೧೦೫ರಲ್ಲಿ ಚಂಗಾಳ್ವರು ಮತ್ತೊಮ್ಮೆ ಸಾಲಿಗ್ರಾಮದ ಮೇಲೆ ದಾಳಿ ಮಾಡಿ ಬ್ರಾಹ್ಮಣರನ್ನು ಲೂಟಿ ಮಾಡಿದಾಗ ಮಾಸಯ್ಯ ಹೋರಾಡಿ ಮಡಿದ.**[41]** ಚಂಗಾಳ್ವರ ದಾಳಿಯನ್ನು ಕೊಂಗಾಳ್ವರು ಸಮರ್ಥವಾಗಿ ಎದುರಿಸಿದರು.

ಮೂರನೆಯ ರಾಜೇಂದ್ರನಾದ ಮೇಲೆ ದುದ್ದಮಲ್ಲ ಅಧಿಕಾರಕ್ಕೆ ಬಂದನೆಂದು ತೋರುತ್ತದೆ. ಈತ 'ಸಕಳ ರಾಜ್ಯೋತ್ಸಾಹದಿಂ ಹೆಣ್ಣೆಗಡಂಗದೊಳ್' ಸುಖದಿಂದಿದ್ದ ವಿಷಯವನ್ನು ಅಂಕನಾಥಪುರದ ಶಾಸನವೊಂದು**[42]** ಸಾರುತ್ತದೆ. ಆತ ಅಲ್ಲಿದ್ದಾಗ ಜಿನಮಂದಿರವೊಂದರ ನಿರ್ಮಾಣಕ್ಕೆ ಮತ್ತು ಜೀರ್ಣೋದ್ಧಾರಕ್ಕೆ ಅಯ್ಯವಳ್ಳಿ ಗ್ರಾಮವನ್ನು ಪ್ರಭಾಚಂದ್ರದೇವರೆಂಬ ಜೈನಯತಿಗೆ ನೀಡಿದ; ಈ ಶಾಸನದ ಕಾಲ ಕ್ರಿ.ಶ. ೧೧-೧೨ನೆಯ ಶತಮಾನ.**[43]** ಇದೇ ದುದ್ದಮಲ್ಲನ ಬಾಣಸಿಗನಾಗಿದ್ದ ಜಕ್ಕಯ್ಯ ಸುಳಗೋಡು ಸೋಮವಾರದಲ್ಲಿ ಬಸದಿಯನ್ನು ಕಟ್ಟಿಸಿದ.**[44]** ಇವೆರಡೂ ಶಾಸನಗಳಲ್ಲಿ ಉಕ್ತನಾದ ದೊರೆ ಕೊಂಗಾಳ್ವ ಮನೆತನದವನೆಂದು ತೋರುತ್ತದೆ; ಈ ದುದ್ದಮಲ್ಲ ಮತ್ತು ವೀರಕೊಂಗಾಳ್ವದೇವ ಅಭಿನ್ನರೆನಿಸುತ್ತದೆ. ಅದು ಸಂದೇಹಾಸ್ಪದವೆಂದು ಡಾ. ಬಾ.ರಾ.ಗೋಪಾಲ ಅಭಿಪ್ರಾಯಪಡುತ್ತಾರೆ.**[45]**

ಮಹಾಮಂಡಲೇಶ್ವರ ವೀರಕೊಂಗಾಳ್ವದೇವನು ಪ್ರಭಾಚಂದ್ರ ಸಿದ್ಧಾಂತದೇವರ ಗುಡ್ಡ; ಸತ್ಯವಾಕ್ಯ ಜಿನಾಲಯವನ್ನು ಕಟ್ಟಿಸಿದ; ಪ್ರಭಾಚಂದ್ರನಿಗೆ ಹೆಣ್ಣೆಗಡಲು ಗ್ರಾಮವನ್ನು ದಾನವಿತ್ತು.[46] ಹೆಣ್ಣೆಗಡಂಗ ಮತ್ತು ಹೆಣ್ಣೆಗಡಲು ಒಂದೇ ಗ್ರಾಮವನ್ನು ಸೂಚಿಸುತ್ತವೆ; ಪ್ರತಿಗ್ರಹಿಯೂ ಒಬ್ಬನೇ; ಆದ್ದರಿಂದ ದುದ್ದಮಲ್ಲ ಮತ್ತು ವೀರಕೊಂಗಾಳ್ವ ಅಭಿನ್ನ ಎಂದು ತಿಳಿಯಬಹುದು. ಶಾಸನದಲ್ಲಿ ಕಾಲ ಸೂಚಿತವಾಗಿಲ್ಲ; ಆದರೆ ಶ್ರವಣಬೆಳಗೊಳದ ಒಂದು ಶಾಸನದಲ್ಲಿ[47] ಈ ಪ್ರಭಾಚಂದ್ರ ಉಲ್ಲೇಖಿತನಾಗಿರುವುದರಿಂದ, ಅದರ ಆಧಾರದ ಮೇಲೆ ಈ ಶಾಸನದ ಕಾಲ ಕ್ರಿ.ಶ. ಸು. ೧೧೨೦ ಎಂದು ಭಾವಿಸಬಹುದು.

ಕ್ರಿ.ಶ. ೧೧೭೧ ಮತ್ತು ೧೧೭೭ಕ್ಕೆ ಸೇರುವ ತ್ರಿಭುವನಮಲ್ಲ ವೀರದುದ್ದ ಕೊಂಗಾಳ್ವ ದೇವನ ಎರಡು ಶಾಸನಗಳು ಲಭ್ಯವಾಗಿವೆ. ಕೊಂಗಾಳ್ವ ದೊರೆಯು ಮೊಳತೆಯ ಬೀಡಿನಿಂದ ಆಳುತ್ತಿದ್ದಾಗ ಹೊಯ್ಸಳ ದೊರೆ. ಒಂದನೆಯ ನರಸಿಂಹನು ಮೊಳತೆಯನ್ನು ಮುತ್ತಿದನೆಂದು ಮೊದಲನೆಯ ಶಾಸನದಲ್ಲಿ ಹೇಳಿದೆ.[48]ಇಲ್ಲಿ ನಡೆದ ಹೋರಾಟದಲ್ಲಿ ತಮ್ಮಡಿ ರುದ್ರನು ಒಡೆಯನ ಅಪ್ಪಣೆಯ ಮೇರೆಗೆ ಶತ್ರುಗಳೊಡನೆ ಕಾದಿ ಮೃತನಾದ; ಆತನಿಗೆ ಕೋಟೆಹಾಳು ಗ್ರಾಮವನ್ನು ನೀಡಲಾಯಿತು. ವೀರಚೋಳ ಕೊಂಗಾಳ್ವನು ಆಳುತ್ತಿದ್ದಾಗ ಕ್ರಿ.ಶ. ೧೧೭೭ರಲ್ಲಿ ಇಪ್ಪಯದ ಈಶ್ವರ ದೇವಾಲಯಕ್ಕೆ ಕೊಂಗಳಸೆಟ್ಟಿ ಮತ್ತು ಇತರರು ದತ್ತಿ ಬಿಟ್ಟರೆಂದು ಇನ್ನೊಂದು ಶಾಸನದಿಂದ ತಿಳಿದುಬರುತ್ತದೆ.[49]

ಕ್ರಿ.ಶ. ೧೨೧೩ರಲ್ಲಿ ರಾಜೇಂದ್ರಬಿಲ್ಲ ಕೊಂಗಾಳ್ವನೆಂಬಾತ ಮೊಳತೆಯ ಬೀಡಿನಿಂದ ಆಳುತ್ತಿದ್ದನು.[50] ಈತನೇ ನಮಗೆ ತಿಳಿದುಬರುವ ಕೊನೆಯ ದೊರೆ. ಕೊಂಗಾಳ್ವ ವಂಶಾವಳಿಯನ್ನು ಹೀಗೆ ರೂಪಿಸಿಬಹುದು :

ಮನಿಜ (೧೦೦೪-೦೫)
|
ಬಡವ/ಕಾಡವ (೧೦೨೦-೨೧)
|
ರಾಜೇಂದ್ರ ಪೃಥುವೀ ಮಹಾರಾಜ (೧೦೨೨-೨೬)
(ರಾಜೇಂದ್ರ ಚೋಳ ಕೊಂಗಾಳ್ವ)
|
ರಾಜಾಧಿರಾಜ I
ರಾಜೇಂದ್ರ ಪೃಥುವೀ ಕೊಂಗಾಳ್ವ II (೧೦೫೯)
(ಪತ್ನಿ ಪೋಚಬ್ಬರಸಿ)
|
ರಾಜಾಧಿರಾಜ II
ರಾಜೇಂದ್ರ ಪೃಥುವೀ ಕೊಂಗಾಳ್ವ III (೧೦೬೬-೧೧೦೫)
(ಅದಟರಾದಿತ್ಯ, ತ್ರಿಭುವನಮಲ್ಲ ಚೋಳ)
(ಪತ್ನಿ ಪದ್ಮಲದೇವಿ)
|
ದುದ್ದಮಲ್ಲ (ವೀರಕೊಂಗಾಳ್ವದೇವ) (ಸು.೧೧೨೦)
|
ವೀರದುದ್ದ ಕೊಂಗಾಳ್ವ (೧೧೭೧-೭೭)
(ತ್ರಿಭುವನಮಲ್ಲ; ವೀರಚೋಳ)
|
ರಾಜೇಂದ್ರ ಬಿಲ್ಲ ಕೊಂಗಾಳ್ವ (೧೨೧೩)

ಕೊಂಗಾಳ್ವ ದೊರೆಗಳು ತಮ್ಮ ಹೆಸರು ಮತ್ತು ಬಿರುದುಗಳಲ್ಲಿ ಚೋಳರನ್ನು ಅನುರಕಿಸಿದರೂ ಧರ್ಮದಲ್ಲಿ ಮಾತ್ರ ಜೈನಮತಾನುಯಾಯಿಗಳಾಗಿದ್ದರೆನ್ನುವುದು ಗಮನಾರ್ಹ ಅಂಶ. ಒಂದನೆಯ ರಾಜಾಧಿರಾಜನು ಮುಳ್ಳೂರಿನಲ್ಲಿ ಕಟ್ಟಿಸಿದ ಬಸದಿಗೆ ಅವನ ಮಗ ಎರಡನೆಯ ರಾಜೇಂದ್ರನು ದತ್ತಿ ನೀಡಿದುದನ್ನು ಹಿಂದೆ ಗಮನಿಸಲಾಗಿದೆ. ಅದಟರಾದಿತ್ಯ ಅಥವಾ ಮೂರನೆಯ ರಾಜೇಂದ್ರನು ಅದಟರಾದಿತ್ಯ ಚೈತ್ಯಾಲಯವನ್ನೂ, ದುದ್ದಮಲ್ಲನು ಸತ್ಯವಾಕ್ಯ ಜಿನಾಲಯವನ್ನೂ ಕಟ್ಟಿಸಿದರು. ರುಗ್ಮಿಣಿದೇವಿಯು ಪ್ರಾಯಶಃ ಜಿನಮೂರ್ತಿಯೊಂದನ್ನು ಪ್ರತಿಷ್ಠೆ ಮಾಡಿಸಿದಳು. ಕೊಂಗಾಳ್ವರು ಇತರ ಧರ್ಮಗಳನ್ನು, ವಿಶೇಷವಾಗಿ ಶೈವ ಧರ್ಮವನ್ನು ಉದಾರವಾಗಿ ಕಂಡರೆಂಬುದಕ್ಕೆ ಮೂರನೆಯ ರಾಜೇಂದ್ರನು ಹೊಸಹಳ್ಳಿಯ ವೀರಸಿದ್ದೇಶ್ವರ ದೇವಾಲಯಕ್ಕೆ ನೀಡಿದ ದತ್ತಿಗಳು ಸಾಕ್ಷಿಯಾಗುತ್ತವೆ.

ಕೊಂಗಾಳ್ವರ ಈ ಧಾರ್ಮಿಕ ಕಾರ್ಯಗಳಿಗೆ ಮೂಲಸ್ಫೂರ್ತಿ ಎಂದರೆ ಜೈನಗುರು ಗುಣಸೇನ ಪಂಡಿತ. ಈತ ದ್ರವಿಳ ಅಥವಾ ತಿವುಳಿಗಣ, ನಂದಿಸಂಘ ಹಾಗೂ ಅರುಂಗಳಾನ್ವಯಕ್ಕೆ ಸೇರಿದವನು;**[51]**ಪುಷ್ಪಸೇನ ಸಿದ್ಧಾಂತ ದೇವನ ಶಿಷ್ಯ.**[52]**ಕ್ರಿ.ಶ. ೧೦೬೧ರ ಸುಮಾರಿಗೆ ಮುಳ್ಳೂರಿನ ಬಸದಿಗಳೆಲ್ಲ ಈತನ ಸ್ವಾಮಿತ್ವಕ್ಕೆ ಒಳಪಟ್ಟಿದ್ದುವು. ಕ್ರಿ.ಶ. ೧೦೬೪ ರಲ್ಲಿ ಈತ ಮುಳ್ಳೂರಿನಲ್ಲಿ ಸಮಾಧಿಮರಣ ಹೊಂದಿದ. ಮುಳ್ಳೂರಿನ ಶಾಸನವೊಂದು ಈತನನ್ನು 'ಪರಮಾರ್ಹನ್ತ್ಯಾದಿ ರತ್ನತ್ರಯಸರಳ ಮಹಾಶಬ್ದಶಾಸ್ತ್ರಾಗಮಾದಿ ಸ್ಥಿರ ಷಟ್ತರ್ಕ ಪ್ರವೀಣರ್' ಎಂದು ಬಣ್ಣಿಸಿದೆ. ಶ್ರವಣಬೆಳಗೊಳದ ಒಂದು ಶಾಸನದಲ್ಲಿ ಈತನ ಉಲ್ಲೇಖವಿದೆ.**[53]** ಮುಳ್ಳೂರಿನ ಬಸದಿ ಮತ್ತು ಶಾಸನಗಳ ಬಗ್ಗೆ ಒಂದು ಪರಿಚಯ ಲೇಖನವನ್ನು ರೈಸ್ ಬರೆದಿದ್ದಾರೆ.**[54]**ಕ್ರಿ.ಶ. ೧೦೦೧ ರಲ್ಲಿ ಮುಳ್ಳೂರ್ನಾಡು ಇತ್ತು.**[55]**

ಕೊಂಗಾಳ್ವ ಶಾಸನಗಳಲ್ಲಿ ಕಂಡುಬರುವ ಇನ್ನೊಬ್ಬ ಜೈನಗುರು ಪ್ರಭಾಚಂದ್ರ ಸಿದ್ಧಾಂತದೇವ. ಈತ ಮೇಘಚಂದ್ರ ತ್ರೈವಿದ್ಯ ದೇವನ ಶಿಷ್ಯ. ಕೊಂಗಾಳ್ವ ದೊರೆ ದುದ್ದಮಲ್ಲ ಅಥವಾ ವೀರ ಕೊಂಗಾಳ್ವನು ಪ್ರಭಾಚಂದ್ರನ ಶಿಷ್ಯ. ಪ್ರಭಾಚಂದ್ರ ಮೂಲಸಂಘ, ದೇಸಿಗಗಣ ಮತ್ತು ಪುಸ್ತಕಗಚ್ಚಕ್ಕೆ ಸೇರಿದವನು. ಇತರ ಜೈನ ಯತಿಗಳಲ್ಲಿ ಗಂಡವಿಮುಕ್ತ ಸಿದ್ಧಾಂತ, ಕಲಾಚಂದ್ರ ಸಿದ್ಧಾಂತದೇವ ಭಟಾರ, ಕನಕಸೇನ, ಪದ್ಮನಂದಿ, ಅಮಳಚಂದ್ರಭಟಾರರನ್ನು ಹೆಸರಿಸಬಹುದು. ಪಳಿಗವೆರ್ಗ್ಗಡೆ, ಮಾಕಬ್ಬೆ, ಅಹಿತರರೇಚಿಸೆಟ್ಟಿ, ಚರುವಕಬ್ಬೆ, ಮಸಣಮೆಯ ನಾಯಕ, ಬಸವಿಸೆಟ್ಟಿ, ಬಮ್ಮದೇವ, ಮಲ್ಲಿಸೆಟ್ಟಿ ಮುಂತಾದ ಅನೇಕ ಶೈವ-ಜೈನಭಕ್ತರು ಈ ಕಾಲದ ಶಾಸನಗಳಲ್ಲಿ ಉಲ್ಲೇಖಿತರಾಗಿದ್ದಾರೆ. ಯಲ್ಲೇಶ್ವರ, ಪೊಲ್ಲೇಶ್ವರ, ಅಮ್ರಿತೇಶ್ವರ ಈ ಕಾಲದ ಶಿವಾಲಯಗಳು.

ಮುಳ್ಳೂರಿನಲ್ಲಿ ಪಾರ್ಶ್ವನಾಥ, ಚಂದ್ರನಾಥ ಹಾಗೂ ಶಾಂತೀಶ್ವರ ಬಸದಿಗಳಿವೆ. ಪಾರ್ಶ್ವನಾಥ ಬಸದಿಯನ್ನು ಎರಡನೆಯ ರಾಜೇಂದ್ರನ ಪತ್ನಿ ಪೋಚಬ್ಬರಸಿ ಕಟ್ಟಿಸಿದಳು. ಚಂದ್ರನಾಥ ಬಸದಿಯನ್ನು ಎರಡನೆಯ ರಾಜಾಧಿರಾಜನು ತನ್ನ ತಾಯಿ ಪೋಚಬ್ಬರಸಿಯ ಪುಣ್ಯಾರ್ಥವಾಗಿ ಕಟ್ಟಿಸಿದನು. ಶಾಂತಿನಾಥ ಬಸದಿಯನ್ನು ಪ್ರಾಯಶಃ ಒಂದನೆಯ ರಾಜಾಧಿರಾಜನು ಕಟ್ಟಿಸಿದನು. ಈ ಬಸದಿಯಲ್ಲಿರುವ ಶಾಂತೀಶ್ವರ ವಿಗ್ರಹದ ಪೀಠದ ಮೇಲಿನ ಶಾಸನದಿಂದ ಕ್ರಿ.ಶ. ೧೨ನೆಯ ಶತಮಾನದ ಮಧ್ಯಭಾಗದಲ್ಲಿ ಮಲ್ಲಷೇಣ ಎಂಬ ಜೈನಯತಿ ಈ ಬಸದಿಯ ಜೀರ್ಣೋದ್ಧಾರ ಮಾಡಿಸಿದನೆಂದು ತಿಳಿದುಬರುತ್ತದೆ.**[56]**ಸುಳಗೋಡು ಸೋಮವಾರದ ಅದಟರಾದಿತ್ಯ ಚೈತ್ಯಾಲಯವು ಪಾಳುಬಿದ್ದಿದ್ದು, ಜಿನವಿಗ್ರಹಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ. ಈಗ ಅದು ಬಸವಣ್ಣ ದೇವಾಲಯವಾಗಿ ಪರಿವರ್ತಿತವಾಗಿದೆ. ಸತ್ಯವಾಕ್ಯ ಜಿನಾಲಯ ನಿರ್ಮಾಣ ವಿಷಯವನ್ನು ತಿಳಿಸುವ ಶಾಸನ ಈಗ ಹೊಳೇನರಸೀಪುರದ ಲಕ್ಷ್ಮೀನರಸಿಂಹ ದೇವಾಲಯದ ಪ್ರಾಕಾರದಲ್ಲಿರುವ ರಾಮಾನುಜಾಚಾರ್ಯರ ಗುಡಿಯ ಮುಂದಣ ಕೈಸಾಲೆ ಕಂಬವಾಗಿದೆ. ಅರಕೆರೆಯಲ್ಲಿ ಒಂದು ಬಸದಿ ಇದ್ದ ಉಲ್ಲೇಖ ಉಂಟು.**[57]**ಮುಳ್ಳೂರಿನಲ್ಲಿರುವ

ಜಿನಬಿಂಬಗಳು ಕೊಂಗಾಳ್ವ ಶಿಲ್ಪಕಲೆಗೆ ಸಾಕ್ಷಿಯಾಗಿವೆ; ಬಸದಿಗಳು ಅಷ್ಟೇನೂ ಉತ್ತಮ ಸ್ಥಿತಿಯಲ್ಲಿಲ್ಲ.

ಕ್ರಿ.ಶ. ೧೧೯೪ಳರಲ್ಲಿ ಚರುವಕಬ್ಬೆ ಎಂಬ ಭಕ್ತೆಯು ನಂದಿ, ನಂದಿಮಂಟಪ, ಭೈರವ, ಭೈರವನ ಗುಡಿ, ಭಗವತಿ, ನಾರಾಯಣ ಮತ್ತಿತರ ಪರಿವಾರದೇವತೆಗಳನ್ನು ಮಾಡಿಸಿದಳು; ಪೊಲ್ಲೇಶ್ವರ ದೇಗುಲದ ಸುಣ್ಣಬಣ್ಣ ಮಾಡಿಸಿದಳು. ಈ ದೇಗುಲ ಕಟ್ಟಿದ ಶಿಲ್ಪ ಲಕನಾಚಾರಿ.**[58]**ಹೊಸಹಳ್ಳಿಯ ವೀರಸಿದ್ದೇಶ್ವರ ದೇವಾಲಯದ ಬಗ್ಗೆ ಹಿಂದೆ ಪ್ರಸ್ತಾಪಿಸಿದೆ.

ಕೊಂಗಾಳ್ವರಿಗೂ ಹೊಯ್ಸಳರಿಗೂ ಇದ್ದ ರಾಜಕೀಯ ಮತ್ತು ರಾಜಕೇಯೇತರ ಸಂಬಂಧಗಳನ್ನು ಶಾಸನಗಳಿಂದ ತಿಳಿಯಬಹುದು. ಒಂದನೆಯ ರಾಜೇಂದ್ರ ಮತ್ತು ವೀರಚೋಳರ ಕಾಲದಲ್ಲಿ ಹೊಯ್ಸಳರಿಗೂ ಕೊಂಗಾಳ್ವರಿಗೂ ಹೋರಾಟಗಳು ನಡೆದವು. ಹೊಯ್ಸಳರ ಶಾಸನಗಳಲ್ಲಿಯೂ ಕೊಂಗಾಳ್ವರ ಉಲ್ಲೇಖ ಕಂಡುಬರುತ್ತದೆ. ಕ್ರಿ.ಶ. ೧೧೩೦ರ ಶಾಸನವೊಂದು ವಿಷ್ಣುವರ್ಧನನನ್ನು ‘ಕೊಂಗಾಳ್ವನೃಪಾಳವನದಹನದಾವಾನಳ’ ಎಂದು ಬಣ್ಣಿಸುತ್ತದೆ.**[59]** ಇನ್ನೂ ಹಿಂದೆಯೇ ಸುಮಾರು ಕ್ರಿ.ಶ. ೧೧೦೪ರಲ್ಲಿ ತ್ರಿಭುವನಮಲ್ಲ ಬಲ್ಲಾಳು ಪೊಯ್ಸಳ ದೇವನು ‘ಗೊಂಗಾಳ್ವದೇವರ ಮೇಲೆ ಧಾಳಿ’ ಮಾಡಿದ ಉಲ್ಲೇಖವಿದೆ; ಹೊಯ್ಸಳ ದೊರೆ ಒಂದನೆಯ ಬಲ್ಲಾಳ,**[60]** ಎರಡನೆಯ ಬಲ್ಲಾಳನ, ಕ್ರಿ.ಶ. ೧೧೭೭-೭೮ರ ಕೂಡಲೂರು ಶಾಸನ ತುಂಬ ಮಹತ್ವದ ವಿಷಯವನ್ನು ದಾಖಲಿಸುತ್ತದೆ. ಬಲ್ಲಾಳನು ತನ್ನ ತಂದೆಯನ್ನು ವಿರೋಧಿಸಿ ಮಲೆನಾಡಿಗೆ ಹೋದಾಗ ತಂತ್ರಪಾಳ ಹೆಮ್ಮಾಡಿದೇವನು ಆತನ ಪರವಾಗಿ ನಿಂತು ಕೊಂಗಾಳ್ವ ಚಂಗಾಳ್ವನೂ ಸೇರಿದಂತೆ ಮಲೆಯ ಮಂಡಳಿಕರು ಮತ್ತು ಪ್ರಜೆಗಾವುಂಡುಗಳು ರಾಜಕುಮಾರನನ್ನು ಕಂಡು ನೆರವು ನೀಡುವಂತೆ ಮಾಡಿದ್ದಿರಬೇಕು. ಆತನು ಬಲ್ಲಾಳನಿಗೆ ಪಟ್ಟಕಟ್ಟಿಸಿ ತಾನೂ ಪ್ರಧಾನ ಪದವಿ ಪಡೆದನಂತೆ.**[61]** ಕೊಂಗಾಳ್ವರು ಹೊಯ್ಸಳರ ಸಾಮಂತರಾಗಿ ರಾಜ್ಯವಾಳಿದರೆಂಬುದನ್ನು ಇದು ಸೂಚಿಸುತ್ತದೆ. ೧೨೧೩ರಲ್ಲಿ ಕೊಂಗಾಳ್ವ ದೊರೆಯೊಬ್ಬ ಮಲೆರಾಜರಾಜ, ಮಲೆಪರೊಳುಗಂಡ, ಕದನಪ್ರಚಂಡ ಶರಣಾಗತ ವಜ್ರಪಂಜರ ಎಂಬ ಬಿರುದು ಧರಿಸುವುದು ಸಹ ಇದನ್ನು ಸಮರ್ಥಿಸುತ್ತದೆ.**[62]** ಹೊಯ್ಸಳ ಶಾಸನವೊಂದು ಭೂದಾನದ ಸೀಮೆಯನ್ನು ವಿವರಿಸುವಾಗ ಕೊಂಗಾಳ್ವನ ಕೆರೆ ಎಂಬ ಸ್ಥಳವನ್ನು ಉಲ್ಲೇಖಿಸುತ್ತದೆ.**[63]**

ಡೆರೆಟ್ ಅವರು ವಿಷ್ಣುವರ್ಧನನ ಪತ್ನಿ ಚಂದಲದೇವಿ ಕೊಂಗಾಳ್ವ ರಾಜಪುತ್ರಿಯಾಗಿದ್ದಿರಬೇಕೆಂದು, ವಿವಾಹಸಂಬಂಧದ ಮೂಲಕ ಕ್ರಿ.ಶ. ೧೧೧೫-೧೬ರಲ್ಲಿ ವಿಷ್ಣುವರ್ಧನ ಕೊಂಗಾಳ್ವರೊಂದಿಗೆ ಮೈತ್ರಿಯನ್ನು ಏರ್ಪಡಿಸಿಕೊಂಡನೆಂದು ಅಭಿಪ್ರಾಯ ಸೂಚಿಸುತ್ತಾರೆ.**[64]** ಶ್ರವಣನಹಳ್ಳಿಯಲ್ಲಿರುವ ಒಂದು ಶಾಸನದಿಂದ “ವಿಷ್ಣುವರ್ಧನ ಹೊಯ್ಸಳದೇವರ ಪಿರಿಯರಸಿ ಚಂದಲದೇವಿಯರು ತ್ರಿಭುವನ ತಿಳ ..... ತೀರ್ತ್ಥದ ವೀರಕೊಂಗಾಳ್ವ ಜಿನಾಲೆಯದ ದೇವರ ಅಂಗಭೋಗಕ್ಕಂ ರಿಷಿಯರಾಹಾರದಾನಕ್ಕಂ ತಮ್ಮ ಬಪ್ಪ ಪ್ರಿಥ್ವಿಯ ಕೊಂಗಾಳ್ವದೇವರವಗ ಬಳಿವಳಿ ಬಿಟ್ಟ ಮಂದಗೆಱೆಯ ಶ್ರಿತಿಯೊಳಗೆ ಕಾವನಹಳ್ಳಿಯ ದುದ್ದಮಲ್ಲದೇವನು ತಾವೂವಿಳ್ದು” ಪ್ರಭಾಚಂದ್ರ ಸಿದ್ಧಾಂತದೇವರ ಕಾಲ್ತೊಳೆದು ದಾನವಿತ್ತರೆಂದು ಗೊತ್ತಾಗುತ್ತದೆ.**[65]**

ಕ್ರಿ.ಶ. ೧೦೬೩ರಲ್ಲಿಯೇ ಮುಳ್ಳೂರ ಗುಣಸೇನಪಂಡಿತ ದೇವರಿಗೆ ರಕ್ಕಸಪೊಯ್ಸಳ ಅರ್ಥಾತ್‌ವಿನಯಾದಿತ್ಯನ ಪತ್ನಿ ಪರಿಯಲದೇವಿಯ ಸೊಸೆವೂರಿನ ಬಸದಿ ಸ್ಥಾನವೊಂದನ್ನು ಒಪ್ಪಿಸಿದ ಸಂಗತ ಗಮನಾರ್ಹವಾದುದು.**[66]** ಗುಣಸೇನಪಂಡಿತರನ್ನು ‘ಪೊಯ್ಸಳನ ಗುರುಗಳ್’ ಎಂದು ಕರೆದಿದೆ. ಕ್ರಿ.ಶ. ೧೧೭೫ರ ವೀರಚೋಳ ಕೊಂಗಾಳ್ವನ ಶಾಸನವೊಂದರಲ್ಲಿ ಆತನು ತಾಯಿ ಪದುಮಲದೇವಿ, ಸೋಮಲದೇವಿ ಮತ್ತು ಇತರರ ಸಮ್ಮುಖದಲ್ಲಿ ದಾನ ನೀಡಿದ ಉಲ್ಲೇಖವಿದೆ.**[67]** ಈ ವೇಳೆಗೆ ಕೊಂಗಾಳ್ವರು ಹೊಯ್ಸಳರ ಸಾಮಂತರಾಗಿ

ಅವರೊಡನೆ ಸುಮಧುರ ಬಾಂಧವ್ಯ ಹೊಂದಿದ್ದರು. ಹೊಯ್ಸಳ ಎರಡನೆಯ ಬಲ್ಲಾಳನ ಪತ್ನಿ ಮತ್ತು ಪುತ್ರಿಯರ ಹೆಸರು ಸಹ ಕ್ರಮವಾಗಿ ಪದುಮಲದೇವಿ ಮತ್ತು ಸೋಮಲದೇವಿ ಎಂದಿದೆ. ಬಲ್ಲಾಳನ ಪತ್ನಿಪುತ್ರಿಯರ ಸನ್ನಿಧಿಯಲ್ಲಿ ಈ ದಾನ ನೀಡಿದ್ದಿರಬೇಕೆಂಬುದು ಕೊಎಲ್ಹೊ ಅವರ ಅಭಿಪ್ರಾಯ.[68] ಅವರ ಈ ಅಭಿಪ್ರಾಯ ನಿಂತಿರುವುದು ಶಾಸನೋಕ್ತ ವ್ಯಕ್ತಿಗಳು ಹೊಯ್ಸಳ ರಾಜಕುಟುಂಬದವರೇ ಎಂಬ ರೈಸ್‌ಅವರ ಅಭಿಪ್ರಾಯದ ಆಧಾರದ ಮೇಲೆ. ಆದರೆ ರಾಜಯೋಗ್ಯವಾದ ಯಾವ ಶಬ್ದವನ್ನೂ ಶಾಸನದಲ್ಲಿ ಬಳಸದಿರುವುದರಿಂದ ಈ ಅಭಿಪ್ರಾಯ ಕರಿಯಲ್ಲ ಎಂಬ ವಾದವೂ ಇದೆ. ಏನೇ ಇದ್ದರೂ ಹೊಯ್ಸಳರಿಗೂ ಕೊಂಗಾಳ್ವರಿಗೂ ಸುಮಾರು ಎರಡು ಶತಮಾನಗಳ ಸಂಪರ್ಕ-ಸಂಬಂಧಗಳಿದ್ದವೆಂದೂ ಖಚಿತವಾಗಿ ಹೇಳಬಹುದು.

ಕೊಂಗಾಳ್ವರ ಕಾಲದಲ್ಲಿದ್ದ ಕೆಲವೇ ಅಧಿಕಾರಿಗಳ ಹೆಸರುಗಳನ್ನು ಶಾಸನಗಳಿಂದ ಉಲ್ಲೇಖಿಸಬಹುದು: ರಾಜಯ ಸುಂಕವೆರ್ಗಡೆಯಾಗಿದ್ದು ವೀರಕೊಂಗಾಳ್ವದೇವನ ಕಾಲದಲ್ಲಿದ್ದ ಮಸಣಮೆಯ ನಾಯಕನು ಮಹಾಪ್ರಧಾನ ಹಾಗೂ ಪಸಾಯ್ತದ ಹೆಗ್ಗಡೆಯಾಗಿದ್ದ. ಜಕ್ಕಯ್ಯ ದುದ್ದಮಲ್ಲನ ಬಾಣಸಿಯಾಗಿದ್ದ. ಬೂವೆಯನಾಯಕನೆಂಬ ಸಾವಂತನೊಬ್ಬ ಕೊಂಗಾಳ್ವರ ಒಂದು ಶಾಸನದಲ್ಲಿ ಉಲ್ಲೇಖಿತನಾಗಿದ್ದಾನೆ. ನಕುಳಾರ್ಯ ಸಂಧಿವಿಗ್ರಹಿಯಾಗಿದ್ದ. ಜಾಕವ, ಕೋಗಿಲ್ಲನಾಯಕ, ಜೋಗಯ್ಯ, ಚೆಳುಕಿಸೆಟ್ಟಿ ಮುಂತಾದ ವೀರರು ಕೊಂಗಾಳ್ವರ ಪರ ಕಾದಿ ಮಡಿದರು. ತಮ್ಮಡಿ ರುದ್ರನು ಕೋಟೆಹಾಳನ್ನು 'ತಲೆಗೊಟ್ಟು ಹಡದ'ನಂತೆ. ಕೊಂಗಾಳ್ವಸೆಟ್ಟಿ, ಕೊಂಗಳಾಚಾರಿ ಮುಂತಾದ ವ್ಯಕ್ತಿನಾಮಗಳು ವಿಶೇಷವೆನಿಸುತ್ತವೆ.

ದುರದೃಷ್ಟವಶಾತ್ ಕೊಂಗಾಳ್ವರ ಕಾಲದ ಸಾಹಿತ್ಯವನ್ನು ತಿಳಿಯಲು ಸಾಕಷ್ಟು ಸಾಮಗ್ರಿ ಇಲ್ಲ. ಕ್ರಿ.ಶ. ೧೦೭೯-೮೦ರ ಶಾಸನವೊಂದನ್ನು 'ಚತುರ್ಭಾಷಾ-ಲಿಖಿತ್ವಕ ವಿದ್ಯಾಧರ' ಎನಿಸಿದ ನಕುಳಾರ್ಯ ಬರೆದ. ಪಾಶುಪತಪಂಥದ ಲಕುಳ ಈತನಿರಬಹುದೆ ಎನ್ನುವ ರೈಸರ ಊಹೆ ತುಂಬ ದುರ್ಬಲವಾದುದು; ಕೇವಲ ಹೆಸರಿನ ಸಾಮ್ಯವನ್ನು ಆಧರಿಸಿರುವಂಥದ್ದು. ಈತನ ಶೈಲಿಗೆ ಇದೊಂದಿಗೆ ನಿದರ್ಶನ.

ಜಗದಾಶ್ಚರ್ಯ ಮಿದತ್ಯ ಪೂರ್ವ್ವಮಿದರಂದಕ್ಕಬ್ಜಜಂ ಕೂಡಬ
ಟ್ಟೆಗೆಯಂತಿಟ್ಟು ಮಿಡಲ್ಕೆದೇನ್ನೆಱದನೇ ಪೇಳೆಂಬ ಕೊಂಗಾಳ್ವ ಜೈ!
ನಗೃಹಂ ನಾಡಬೆಡಂಗು ವೆತ್ತದಟರಾದಿತ್ಯಾವನೀನಾಥ ಕೀ
ರ್ತಿಗಡರ್ಪ್ಪಿರ್ಪ್ಪವೊಲಾಪ್ಪರ್ತೋಪ್ಪರ್ದೆನೆ ಮತ್ತೆ ಮತ್ತೇವಣ್ಣಿಪಂ ಬಣ್ಣಿಪಂ //[69]

ತಮ್ಮಡಿರುದ್ರನೆಂಬ ವೀರನ ವ್ಯಕ್ತಿತ್ವವನ್ನು ಹೀಗೆ ಕೊಂಡಾಡಿದೆ:

ಎರವರ್ತಿಜನಕ್ಕೆ ಸುರಕುಜಂ
ನಿರುತಂ ಕಾಮಿನಿಯರಲ್ಲಿಗಭಿಮಾನ ಕಾಮಂ /
ಪರಬಳಕೆ ಭೀಮಸೇನಂ
ಹರಪದಯುಗ್ಮಭ್ರಿಂಗನೆನಿಪ ತಮ್ಮಡಿಯ ರುದ್ರ /[70]

ಪ್ರಭಾಚಂದ್ರನೆಂಬ ಜೈನಗುರು ಪರಸಮಯತಿಮಿರ ದಿನಕರನೆನಿಸಿದ್ದ; ಉರುತರ ಕವಿಗಮಕ ವಾದಿವಾಗಿತ್ವ ದೊಡೆಯನಾಗಿದ್ದನಂತೆ.[71]

ಕೊಂಗಾಳ್ವ ಶಾಸನಗಳಲ್ಲಿ ಆಡವಲ, ಆಡವಲಗದ್ಯಾಣ ಎಂಬ ಶಬ್ದಗಳು ಕಂಡುಬರುತ್ತವೆ.[72]ಇವಕ್ಕೆ ಅರ್ಥವೇನೆಂದು ತಿಳಿಯದು. ಚೋಳರ ಸುಧಾರಿತ ಚಿನ್ನದ ನಾಣ್ಯವನ್ನು ಇದು ಸೂಚಿಸಬಹುದೆಂದು ಪ್ರೊ. ಕೆ.ಎ. ನೀಲಕಂಠ ಶಾಸ್ತ್ರಿಗಳು ತಿಳಿಸುತ್ತಾರೆ.[73]

ಕೊಂಗಾಳ್ವರ ಶಾಸನಗಳನ್ನು ಆಧರಿಸಿ ಒಂದು ಸ್ಥೂಲವಾದ ಅಧ್ಯಯನವನ್ನು ಮೇಲೆ ಮಾಡಲಾಗಿದೆ. ಮಾಲಂಬಿ, ಮುಳ್ಳೂರು, ಹೆಣ್ಣೆಗಡಂಗ, ಮೊಳತೆ, ಸುಳಗೋಡು ಸೋಮವಾರ, ಮಗ್ಗೆ, ನಂದಳಕ್ಕೆ, ರಾಜೇಂದ್ರಪುರ ಮುಂತಾದ ಹಲವು ಸ್ಥಳಗಳು ಕೊಂಗಾಳ್ವರ ನೇರ ಆಡಳಿತಕ್ಕೆ ಕೆಲವು ಕಾಲವಾದರೂ ಒಳಪಟ್ಟಿದ್ದವು. ಹೊಳೇನರಸೀಪುರ ತಾಲೂಕಿನಲ್ಲಿ ಕೊಂಗಲ್ ಬೀಡು ಎಂಬ ಗ್ರಾಮವಿದ್ದು ನಮ್ಮ ಕುತೂಹಲವನ್ನು ಕೆರಳಿಸುತ್ತದೆ. ಹೆಚ್ಚಿನ ಪರಿಶೋಧನೆಯಿಂದ ಕೊಂಗಾಳ್ವ ಇತಿಹಾಸದ ಬಗ್ಗೆ ಮತ್ತಷ್ಟು ವಿಷಯಗಳು ತಿಳಿದು ಬರಬಹುದು.

[1] ***Minor Dynasties of south India : Karnataka,*** **Vol. I (1982, New Era Publications), Chapter 7, Families of the Mediaeval Period.**

[2]ಸಂಪುಟ **I** (೧೯೭೨) ಮತ್ತು **VIII** (೧೯೮೪) ಇತ್ಯಾದಿ

[3] ***History of Some Feudatory Dynasties of Karnataka*** **(1982, Unpublished).**

[4] J.D. Derret, ***The Hoysalas*** **(1957)**

[5] W. Coelho, ***The Hoysalavamsa*** **(1950)**

[6] P.B. Desai and others : ***A History of Karnataka*****, p.62;** ***Sri Kanthika*** **(Dr.S. Srikantha Sastri Felicitation volume, 1973), p.63 & 70; Dr. B.R. Gopal:** ***Corpus of Kadamba Inscriptions*****, Vol. I (1985). p.84 & 89. Introduction (LIV): "Reference to a Kongalva in the Gudnapura Inscription is the earliest."**

[7] ***Epigraphia Carnatica*** **(EC) Vol. Introduction, P.7 ; S.K. Aiyangar and R. Sewel :** ***Historical Inscriptions of South India,*** **P. 364**

[8] EC. IV, ಚಾಮರಾಜನಗರ – ೩೫೪, ಬೇಲೂರು ೯೬, ೧೪೫, ೧೬೮ ಇತ್ಯಾದಿ; "ಮಲೆಯಂ ಸಾಧಿಸಿ ಕೊಂಗಚಂಗ ವಿಷಯ ಕ್ಷೋಣೀಶರಂ ಗೆಲ್ದು" – ನರಸಿಂಹನ ಶಾಸನ, **IX,** ಬೇಲೂರು ೨೬೮; ಗಂಗ ಎರೆಯಪ್ಪ ಕೊಂಗಲ್ನಾಡಿನಲ್ಲಿ ಭೂದಾನ ನೀಡಿದ, **EC, VIII** ಅರಕಲಗೂಡು-೫; ಕೊಂಗನಾಡ ಎರಡಿಚ್ಛಾಸಿರ, **VIII,** ಅರಕಲಗೂಡು ೧೩೧; ಇತ್ಯಾದಿ. ಕೊಂಗನಾಡು ಕಾವೇರಿ ಮತ್ತು ಹೇಮಾವತಿ ನದಿಗಳ ನಡುವಣ ಪ್ರದೇಶ.

[9] EC., I, ಕೊಡಗು – ೬೫

[10] B.L. Rice : ***Mysore and Coorg from inscriptions*****, p.144;** ಕರ್ಣಾಟಕದ ಪರಂಪರ, ಸಂಪುಟ ೧, ಪು ೪೮೬; ಇತ್ಯಾದಿ.

[11] K.A. Nilakantha Sastri : ***The Colas*****, Madras, 1955, p. 172.**

[12] EC. VIII (ಪರಿಷ್ಕೃತ) ಅರಕಲಗೂಡು – ೧೭೦

[13] B.R. Gopal : ***Minor Dynasties of South India : Karnataka*****, Vol. I.p.178.**

[14] EC.VI (ಪರಿಷ್ಕೃತ), ಕೃಷ್ಣರಾಜಪೇಟೆ – ೧೫.

[15] EC., IX (ಪರಿಷ್ಕೃತ), ಸಕಲೇಶಪುರ – ೩೪.

[16]ಅದೇ, ಪೀಠಿಕೆ, ಪು. Lii

[17] EC., VIII (ಪರಿಷ್ಕೃತ), ಅರಕಲಗೂಡು – ೧೪೩.

[18] EC., V, Introduction,p.7

[19] W. Coelho, O.P. Cit. p.27.

[20] D.L. Derret. O.P. Cit.p.27.

[21]ಎಂ.ಎನ್.ಪ್ರಭಾಕರ, "ಮುಣ್ಡ ಪೊಯ್ಸಳ", ಇತಿಹಾಸ ದರ್ಶನ ಸಂಪುಟ ೭, ಪು.೨೨೨ ರಿಂದ.

[22] EC., VIII (ರೈಸ್ ಆವೃತ್ತಿ) ತೀರ್ಥಹಳ್ಳಿ – ೩೧,೧೩೪ ಇತ್ಯಾದಿ; ಮುಣ್ಡಗೌಡ ಕುಲದ ಉಲ್ಲೇಖ, ಕ್ರಿ.ಶ. ೧೧೯೮ರ ಲಕ್ಕೂರು ಶಾಸನ, EC., VIII (ಪರಿಷ್ಕೃತ) ಅರಕಲಗೂಡು – ೧೦೧.

[23] B.L. Rice, *Op. Cit.* P. ೨೧೫; M.A.R., 1915 p.14

[24] EC, *1*,ಕೊಡಗು – ೭೨.

[25]ಅದೇ, ಕೊಡಗು – ೬೮.

[26]ಅದೇ, ಕೊಡಗು – ೬೯.

[27]ಅದೇ, ಕೊಡಗು – ೭೨.

[28]ಅದೇ, ಕೊಡಗು – ೭೦.

[29]ಅದೇ, ಕೊಡಗು – ೭೫.

[30] EC., VIII (ಪರಿಷ್ಕೃತ), ಅರಕಲಗೂಡು – ೧೬೮

[31] EC., I, ಕೊಡಗು – ೪೮.

[32]ಅದೇ, ಕೊಡಗು – ೪೯.

[33]ಅದೇ, ಕೊಡಗು – ೮೧.

[34] *EC.*, VIII (ಪರಿಷ್ಕೃತ), ಅರಕಲಗೂಡು – ೧೩೩.

[35] EC., V (ಪರಿಷ್ಕೃತ), ಕೃಷ್ಣರಾಜನಗರ – ೬೬.

[36] **D.L.Derret, o*p.Cit,* p.33**

[37] **EC., V (ರೈಸ್ ಆವೃತ್ತಿ), Introduction, p.7**

[38] **EC. VIII (ಪರಿಷ್ಕೃತ),** ಹೊಳೇನರಸೀಪುರ – ೧೩೫.

[39]ಅದೇ, ಅರಕಲಗೂಡು – ೧೫೧

[40]ಅದೇ, ಅರಕಲಗೂಡು – ೧೪೫ ಹಾಗೂ **EC. IX (ಪರಿಷ್ಕೃತ),** ಸಕಲೇಶಪುರ – ೫೭

[41] ***EC. V*(ಪರಿಷ್ಕೃತ),** ಕೃಷ್ಣರಾಜನಗರ – ೬೭

[42] ***EC.* VIII (ಪರಿಷ್ಕೃತ),** ಹೊಳೇನರಸೀಪುರ – ೬೧

[43]ಅದೇ, ಹೊಳೇನರಸೀಪುರ – ೫೬

[44]ಅದೇ, ಅರಕಲಗೂಡು – ೧೩೯

[45] **B.R. Gopal, *op. Cit*, Vol. I, p.183**

[46] ***EC.,* VIII (ಪರಿಷ್ಕೃತ),** ಹೊಳೇನರಸೀಪುರ – ೭ ಮತ್ತು ೮.

[47] ***EC.,* II (ಪರಿಷ್ಕೃತ, ೧೯೭೩),** ಶ್ರವಣಬೆಳಗೊಳ-೧೬೨.

[48] ***EC.,* VIII (ಪರಿಷ್ಕೃತ),** ಹೊಳೇನರಸೀಪುರ – ೧೦೮.

[49]ಅದೇ, ಹೊಳೇನರಸೀಪುರ – ೧೦೬.

[50]ಅದೇ, ಅರಕಲಗೂಡು – ೩೫

[51] ***EC.,* I,** ಕೊಡಗು – ೭೭

[52]ಅದೇ, ಕೊಡಗು – ೭೮

[53] ***EC.,* II (ಪರಿಷ್ಕೃತ, ೧೯೭೩),** ಶ್ರವಣಬೆಳಗೊಳ – ೭೭

[54] ***Indian Antiquary*, Vol. 45,1915, p.14-42.**

[55] ***EC.,*I (ಪರಿಷ್ಕೃತ),** ಕೊಡಗು – ೨

[56]ಅದೇ, ಕೊಡಗು – ೭೭

[57] ***EC.,* VIII (ಪರಿಷ್ಕೃತ),** ಅರಕಲಗೂಡು – ೫

[58]ಅದೇ, ಅರಕಲಗೂಡು – ೧೪೬.

[59] ***EC.,* XI** (ಪರಿಷ್ಕೃತ), ಚಿಕ್ಕಮಗಳೂರು-೧೦೮

[60] ***EC.,* VIII** (ಪರಿಷ್ಕೃತ), ಹಾಸನ-೧೭೭; **B.R. Gopal : *op. cit.,* p. 182.**

[61] ***EC.,* IX** (ಪರಿಷ್ಕೃತ), ಬೇಲೂರು – ೨೨೫. ಸಂಬಂಧಿಸಿದ ಶಾಸನಪಾಠ ಹೀಗಿದೆ: "ಬಲ್ಲಾಳದೇವಂ ತಂಮ ಬಪ್ಪನಿಂ ತೊಲಗಿ ಮಲೆವಾಯ್ದಿರಲು ಸಮಸ್ತ ಮಲೆಯ ಪ್ರಜೆಗಾವುಂಡುಗಳಂ ಕೊಂಗಾಳ್ವ ಚಂಗಾಳ್ವನಾದಿಯಾದ ಮಲೆ ಮಂಡಳಿಕರುಮಂ ಕಾಣಿಸಿ ತಂನಾಳ್ವಂಗೆ ಸಾಮ್ರಾಜ್ಯಪಟ್ಟಮಂ ಕಟ್ಟಿಸಿ ಪ್ರಧಾನ ಪದವಿಯಂ ಪಡದನ್."

[62] ***EC.,* VIII** (ಪರಿಷ್ಕೃತ), ಅರಕಲಗೂಡು – ೩೫.

[63] ***EC.,* IX** (ಪರಿಷ್ಕೃತ), ಬೇಲೂರು – ೨೪೪; ಕಾಲ ಕ್ರಿ.ಶ. ೧೧೮-೮೯.

[64] J.D. Derret. *op.cit.* p.48

[65]ಈ ಶಾಸನವು ಮೂಲತಃ ಮೈಸೂರು ಪುರಾತತ್ವ ಇಲಾಖೆಯ ೧೯೨೭ನೆಯ ವಾರ್ಷಿಕ ವರದಿಯಲ್ಲಿ ಪ್ರಕಟವಾಗಿದೆ. ಲಿಪ್ಯಂತರದಲ್ಲಿ ಅರಸಿಯ ಹೆಸರನ್ನು ಚನ್ತಲದೇವಿ ಎಂದು ನೀಡಿ, ಅದು ಶಾಂತಲದೇವಿಯ ತಪ್ಪು ರೂಪವೆಂದು ಸೂಚಿಸಲಾಗಿದೆ. ಆದರೆ ಕನ್ನಡ ಲಿಪಿ ಇರುವ ಭಾಗದಲ್ಲಿ ಚಂದಲದೇವಿ ಎಂಬ ರೂಪವೇ ಇದೆ. (ಪ್ರಭಾಚಂದ್ರ ಶಾಂತಲೆಗೆ ಗುರುವಾಗಿದ್ದ. ಬಹುಶಃ ಈ ಕಾರಣದಿಂದ ಶಾಮಶಾಸ್ತ್ರಿ ಅವರು ಚಂದಲೆ-ಶಾಂತಲೆ ಒಬ್ಬರೇ ಎಂದು ಭಾವಿಸಿದರು. ಆದರೆ ಆಕೆಯ ತಂದೆ ಮತ್ತು ತಮ್ಮಂದಿರ ಹೆಸರುಗಳು ಸ್ಪಷ್ಟವಾಗಿವೆ.

[66] ***EC.,* XI** (ಪರಿಷ್ಕೃತ), ಮೂಡಿಗೆರೆ – ೨೫.

[67] ***EC.,* I**, ಕೊಡಗು – ೮೭.

[68] W. Coelho. *op. Cit.* p.119 & 137

[69] ***EC.,* VIII** (ಪರಿಷ್ಕೃತ), ಅರಕಲಗೂಡು – ೧೩೩.

[70]ಅದೇ, ಹೊಳೇನರಸೀಪುರ – ೧೦೮.

[71]ಅದೇ, ಅರಕಲಗೂಡು – ೧೩೮.

[72] ***EC.,* I** ಕೊಡಗು – ೪೮ ಮತ್ತು ೪೯.

[73] K.A. Nilakantha Sastri. op. Cit, p.68.

ಮಲೆಕರ್ನಾಟಕದ ಅರಸು ಮನೆತನಗಳು: ೧೧. ಚಂಗಾಳ್ವರು (೧)

ಮಧ್ಯಕಾಲೀನ ಕರ್ನಾಟಕದ ಇತಿಹಾಸದಲ್ಲಿ ಚಂಗಾಳ್ವ ರಾಜ ವಂಶ ಪುಟ್ಟ ಅರಸು ಮನೆತನವೆನಿಸಿಕೊಂಡರೂ ಇವರು ಸುಮಾರು ೧೧ನೇ ಶತಮಾನದಿಂದ ೧೭ನೇ ಶತಮಾನದವರೆಗೂ ಅಂದರೆ ಸುಮಾರು ೭೦೦-೮೦೦ ವರ್ಷಗಳವರೆಗೂ ದೀರ್ಘಕಾಲ ರಾಜ್ಯಭಾರ ಮಾಡಿದರು. ಈಗಲೂ ತಮ್ಮನ್ನು ಚಂಗಾಳ್ವರೆಂದು ಗುರುತಿಸಿಕೊಳ್ಳುವ ಮನೆತನದವರು ಕೊಡಗು ಹಾಗೂ ಪಿರಿಯಾಪಟ್ಟಣದ ಕಡೆಗಳಲ್ಲಿ ಇದ್ದಾರೆ. ಚಂಗಾಳ್ವ ಚಂಗಲರಾಯರೆಡ್ಡಿ, ಚಂಗಪ್ಪ, ಚಂಗೇಗೌಡ ಎಂಬ ಹೆಸರಿನ ವ್ಯಕ್ತಿಗಳು ಈ ಸುತ್ತಿನಲ್ಲಿ ಇಂದಿಗೂ ಇರುವುದಲ್ಲದೆ ಅವರು ತಮ್ಮ ವಂಶದ ಕುರುಹನ್ನು ಹೆಮ್ಮೆಯಿಂದ ಹೇಳಿಕೊಳ್ಳುವವರೂ ಆಗಿದ್ದಾರೆ. ಆಶ್ಚರ್ಯವೆಂದರೆ ತಮ್ಮನ್ನು ಕೊಂಗಾಳ್ವರೆಂದೂ ತಾವು ಕೋಟೆಭೈರವನ ಒಕ್ಕಲಿನವರೆಂದು ಹೇಳಿಕೊಳ್ಳುವ ಒಕ್ಕಲಿಗರು ಕೆ.ಆರ್. ನಗರ ತಾಲೂಕಿನ ಹೆಬ್ಬಾಳು, ಮಿರ್ಲೆ, ಸಾಲಿಗ್ರಾಮ, ನಾಟ್ನಳ್ಳಿ ಹಾಗೂ ಕೆ.ಆರ್. ಪೇಟೆ ತಾಲ್ಲೂಕಿನಲ್ಲಿ ಈಗಲೂ ಇದ್ದಾರೆ. ಹೀಗೆ ಚಂಗಾಳ್ವರ ಹಾಗೂ ಕೊಂಗಾಳ್ವರ ಪಳೆಯುಳಿಕೆಯನ್ನು ಇಂದಿಗೂ ಗುರುತಿಸಬಹುದಾಗಿದೆ.

ಚಂಗಾಳ್ವರ ಇತಿಹಾಸ ಸುಮಾರು ೧೧ನೇ ಶತಮಾನದಿಂದ ೧೭ನೇ ಶತಮಾನದ ಮಧ್ಯ ಭಾಗದವರೆಗೆ ವ್ಯಾಪಿಸಿದೆ. ಅವರು ಇಷ್ಟು ದೀರ್ಘಕಾಲ ಆಳಿದರೂ ಅವರ ಬಗ್ಗೆ ಶಾಸನಗಳಿಂದಾಗಲಿ ಸಮಕಾಲೀನ ಕೃತಿಗಳಿಂದಾಗಲಿ ಹೆಚ್ಚು ವಿವರಗಳು ದೊರೆಯುವುದಿಲ್ಲ. ಅವರು ಆಳಿದ ಕೊಡಗಿನ ಭಾಗಗಳು ಮೈಸೂರು ಯುದ್ಧಗಳ ತರುವಾಯ ಸ್ಥಾಪಿಸಿದ ಕೊಡಗಿನ ರಾಜ್ಯಕ್ಕೆ ಸೇರಿ ಹೋದವು. ಉಳಿದ ಭಾಗಗಳಾದ ಪಿರಿಯಾಪಟ್ಟಣ ಹುಣಸೂರು ಕೃಷ್ಣರಾಜನಗರ (ಎಡತೊರೆ) ಮೊದಲಾದವು ಮೈಸೂರು ಜಿಲ್ಲೆಗೆ ಸೇರಿಕೊಂಡವು. ಚಂಗಾಳ್ವರು ಚೋಳರ ಸಾಮಂತರಾಗಿದ್ದು ಹೊಯ್ಸಳ, ವಿಜಯನಗರ ಹಾಗೂ ಮೈಸೂರು ಅರಸರೊಡನೆ ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿದರು. ಆದರೆ ಅವರು ಹೊಯ್ಸಳರಂತೆ ಶ್ರೀರಂಗಪಟ್ಟಣದ ಒಡೆಯರಂತೆ, ಇಕ್ಕೇರಿಯ ನಾಯಕರಂತೆ ದೊಡ್ಡ ರಾಜ್ಯವನ್ನು ಸ್ಥಾಪಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಬೆಟ್ಟ ಗುಡ್ಡಗಳಿಂದ ಕೂಡಿದ ಪಶ್ಚಿಮ ಘಟ್ಟಗಳ ಪಶ್ಚಿಮ ಭಾಗದ ಮಲೆನಾಡಿನಲ್ಲಿ ನೆಲೆಸಿದ್ದುದರಿಂದ ರಾಜ್ಯವನ್ನು ವಿಸ್ತರಿಸಿಕೊಳ್ಳಲು ಅವರಿಗೆ ಭೌಗೋಳಿಕವಾಗಿ ಸಾಧ್ಯವಾಗಲಿಲ್ಲವೆಂದು ಕಾಣುತ್ತದೆ. ಚಂಗಾಳ್ವ ಮತ್ತು ಕೊಂಗಾಳ್ವರ ಇತಿಹಾಸ ಕೊಡಗಿನ ಇತಿಹಾಸದೊಂದಿಗೆ ಹಾಸುಹೊಕ್ಕಾಗಿದೆ. ಚಂಗಾಳ್ವರಿಗೂ ಕೊಂಗಾಳ್ವರಿಗೂ ನಡುವೆ ಪದೇ ಪದೇ ಯುದ್ಧಗಳಾಗುತ್ತಿದ್ದು ಕೊನೆಗೆ ೧೩ನೇ ಶತಮಾನದಲ್ಲಿ ಚಂಗಾಳ್ವರು ಕೊಂಗಾಳ್ವರ ರಾಜ್ಯವನ್ನು ಗೆದ್ದುಕೊಂಡಂತೆ ಕಾಣುತ್ತದೆ. ಈ ಎರಡು ಕುಲದವರೂ ಒಂದೇ ಮೂಲದವರಾಗಿದ್ದು ದಾಯಾದಿಗಳಾಗಿರಬಹುದು. ಈ ಇರ್ವರೂ ಕನ್ನಡದಲ್ಲಿಯೇ ಶಾಸನಗಳನ್ನು ಹಾಕಿಸಿದ್ದಾರೆ. ಹೊಯ್ಸಳರು ಈ ಈರ್ವರನ್ನೂ ಮಲೆಪರೆಂದು ಕರೆದಿದ್ದಾರೆ. ಚಂಗಾಳ್ವರ ಶಾಸನಗಳು ಎಡತೊರೆ ಮತ್ತು ಹುಣಸೂರು ತಾಲ್ಲೂಕುಗಳಲ್ಲಿ ದೊರಕಿವೆ.

[1] ಆದರೆ ಅವರ ಪ್ರಸ್ತಾಪವಿರುವ ಶಾಸನಗಳು ಹಳೇ ಮೈಸೂರು ಭಾಗದಲ್ಲೆಲ್ಲ ಹರಡಿಕೊಂಡಿವೆ. ಅವರ ಮೂಲ ನೆಲೆ ಈಗಿನ ಹುಣಸೂರು ಮತ್ತು ಅದರ ಸುತ್ತಮುತ್ತಲ ಪ್ರದೇಶವಾಗಿತ್ತು. ಇದೇ ಚಂಗನಾಡು.**[2]**ಡೆರೆಟ್ ಅವರು ತಿಳಿಸುವಂತೆ ಚಂಗಾಳ್ವರಾಜ್ಯದ ಎಲ್ಲೆ ಕಟ್ಟು ಉತ್ತರ-ದಕ್ಷಿಣಕ್ಕೆ ಹೇಮಾವತಿಯಿಂದ ಕಾವೇರಿಯವರೆಗೆ ಪೂರ್ವ ಪಶ್ಚಿಮಕ್ಕೆ ಕಾವೇರಿಯಿಂದ ಕೊಡಗಿನವರೆಗೆ ವ್ಯಾಪಿಸಿತ್ತು.**[3]**
ಜನಪದ ವೀರಕಾವ್ಯ *'ಪಿರಿಯಾಪಟ್ಟಣದ ಕಾಳಗ'*ದಲ್ಲಿ ಪಿರಿಯಾಪಟ್ಟಣದ ರಾಜ್ಯವನ್ನು ಮತ್ತೆ ಮತ್ತೆ 'ಗಂಡುಭೂಮಿ' ಎಂದು ಸಾರಿ ಸಾರಿ ಹೇಳಲಾಗಿದೆ. ಇದರ ಸಂಸ್ಕೃತ ರೂಪವೇ ಪುಂರಾಷ್ಟ್ರ ಅನ್ನುವುದಾದರೆ ಈ ಗಂಡುಭೂಮಿ ಮೈಸೂರಿನಿಂದ ಪಡುವಣ ಭಾಗದ ನಾಡು ಎಂಬ ಅರ್ಥ ಬರುವಂತೆ ಹೇಳಿಕೊಂಡು ಬರಲಾಗಿದೆ. ಪುಂರಾಷ್ಟ್ರದ ವ್ಯಾಪ್ತಿಯನ್ನು ಇಂದು ಸ್ಪಷ್ಟವಾಗಿ ಹೇಳಬರುವುದಿಲ್ಲವಾದರೂ ಮಾಂಬಳಿಯ ಶಾಸನವೊಂದರಲ್ಲಿ ಅದು ಕಾವೇರಿ

ಹಾಗೂ ಕಪಿನೀ ನದಿಗಳಿಂದ ಶೋಭಿಸುತ್ತಿತ್ತೆಂದು ಹೇಳಲಾಗಿದೆ.[4] ಈ ಪುಂರಾಷ್ಟ್ರ ಅರ್ಥಾತ್ ಪುನ್ನಾಟ ಕಾವೇರಿ ನದಿಯು ಹರಿದು ಬರುವ ಕೊಡಗಿನ ಕುಶಾಲನಗರದಿಂದ ಹಿಡಿದು ರಾಮನಾಥಪುರ, ಎಡತೊರೆ ಸೇರಿದಂತೆ ಇತ್ತ ಕಡೆಗೆ ಕಪಿನೀ ಹರಿದು ಬರುವ ಹೆಗ್ಗಡದೇವನ ಕೋಟೆ ನಂಜನಗೂಡು, ಟಿ.ನರಸೀಪುರಗಳವರೆಗೂ ಆದರಿಸಿರುವ ಹುಣಸೂರು ಪಿರಿಯಾ ಪಟ್ಟಣಗಳ ವಿಸ್ತಾರವಾದ ನಾಡೆಂದು ಕಾಣುತ್ತದೆ. ಇದಕ್ಕೆ ಪೂರಕವಾಗಿ ಪ್ರೊ.ದೇಜಗೌ ಅವರು ಪಿರಿಯಾಪಟ್ಟಣದ ಸುತ್ತಮುತ್ತಣ ಪ್ರದೇಶಕ್ಕೆ ಹಿಂದೆ ಪುನ್ನಾಟ ಎಂಬ ಹೆಸರಿತ್ತು ಎಂದು ಹೇಳಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿರುವ ಪೂನಾಡಹಳ್ಳಿಯೇ ಪುನ್ನಾಟದ ಅವಶೇಷ ರೂಪವಾಗಿರಬಹುದೆಂದು ಹೇಳುತ್ತಾರೆ.[5]ಹೀಗಾಗಿ ಪುನ್ನಾಟದ ಕೇಂದ್ರವೇ ಆಗಿತ್ತೆಂಬುದಕ್ಕೆ ಈ ಹಿಂದೆ ಹೇಳಿರುವ ಎಲ್ಲ ತಾಲ್ಲೂಕುಗಳಲ್ಲೂ ಕಂಡು ಬರುವ ಜೈನಬಸದಿಗಳ ಅವಶೇಷಗಳು ಸಾಕ್ಷಿ ನುಡಿಯುತ್ತವೆ.

ಇಷ್ಟಾದರು ಚಂಗಾಳ್ವರ ರಾಜ್ಯದ ವಿಸ್ತಾರವನ್ನು ಸ್ಪಷ್ಟಪಡಿಸಿದಂತೆ ಆಗುವುದಿಲ್ಲ. ಅವರು ಮೊದಮೊದಲು ಸ್ವತಂತ್ರರಾಗಿದ್ದಂತೆ ಕಂಡರೂ ಕ್ರಮೇಣ ಚೋಳರ ಅಧೀನಕ್ಕೆ ಒಳಗಾದಂತೆ ಕಾಣುತ್ತದೆ. ಹೀಗಾಗಿ ಅವರು ಚೋಳರ ಪ್ರತಿನಿಧಿಗಳಾಗಿದ್ದಾಗ ಮಂಡ್ಯ ಜಿಲ್ಲೆಯ ಚುಂಚನಗಿರಿಯಿಂದ ಹಿಡಿದು ನಾಗಮಂಗಲ, ಕೆ.ಆರ್.ಪೇಟೆ, ಕೆ.ಆರ್.ನಗರ, ಅರಕಲಗೂಡು, ಕೊಡಗಿನ ಭಾಗವಾಗಿದ್ದ ಹುಣಸೂರು ತಾಲ್ಲೂಕುಗಳನ್ನೆಲ್ಲ ಆಳಿದಂತೆ ಕಾಣುತ್ತದೆ. ಏಕೆಂದರೆ ಲಾಳನಕೆರೆಯ ಶಂಭವರಾಯನ ವಂಶವು ಚಂಗಾಳ್ವರ ಒಂದು ಶಾಖೆಯೇ ಆಗಿದೆ. ಚೋಳರ ಸೈನ್ಯದ ತಂಗುದಾಣವಾಗಿದ್ದ ಚುಂಚನಗಿರಿಯಲ್ಲಿ ಅವರ ಸೈನ್ಯದ ಮೇಲ್ವಿಚಾರಣೆಯನ್ನು ಚಂಗಾಳ್ವರಿಗೆ ಒಪ್ಪಿಸಿದಂತೆ ಕಾಣುತ್ತದೆ. ಮಹಾವೀರರಾಗಿದ್ದ ಇವರು ಚೋಳರ ಪರವಾಗಿ ಪಡ್ಯೆವೀಡು ರಾಜ್ಯವೆಂದು ಹೆಸರು ಪಡೆದಿದ್ದ ಉತ್ತರ ಆರ್ಕಾಟ್ ಮತ್ತು ಚಂಗಲ್ಪೇಟೆ ಜಿಲ್ಲೆಗಳ ಸುತ್ತಮುತ್ತಲ ಪ್ರದೇಶದಲ್ಲಿದ್ದ ಚೋಲರ ಸಾಮಂತರಾಗಿ ದುಡಿದವರು.[6] ಈ ವಂಶದವನೇ ಆದ ಶಂಭುರಾಯ ಎಂಬುವನು ಪಿರಿಯಾಪಟ್ಟಣ ತಾಲ್ಲೂಕಿನ ಚಾಮರಾಯ (ಶಂಭುರಾಯ)ನ ಕೋಟೆ, ಸೂಳೆಕೋಟೆ (ಸುಶೀಲೆಕೋಟೆ), ಕೋಮಲಾಪುರಗಳ ಸಂಸ್ಥಾಪಕನೆಂಬ ಐತಿಹ್ಯಗಳು ವಾಚಕ ಸಂಪ್ರದಾಯದಲ್ಲಿ ಉಳಿದು ಬಂದಿವೆ. ಚಂಗಳ್ವೇಟೆಯಂತೆ ಮಳವಳ್ಳಿ ತಾಲ್ಲೂಕಿನ ಚಂಗವಾಡಿ ಎಂಬ ಊರು ಚಂಗಾಳ್ವರ ಹೆಸರಿನ ಊರಾಗಿರಬಹುದು. ಹೆಗ್ಗಡದೇವನ ಕೋಟೆಯ ತಾಲ್ಲೂಕಿನ ಅಂಕನಾಥಪುರದ ಶಾಸನ[7](ಕ್ರಿ.ಶ. ೧೦೩೭)ದಲ್ಲಿ, ಶಿಕಾರಿಪುರದ[8]೧೧೮೨ರ ಶಾಸನವೊಂದರ ‘ಆನನ ಕಾಶ್ಮೀರದ್ರವಂ ಪತ್ತಿದ ನಿಗಳದ ಚಂಗಾಳ್ವನಂಗಕ್ಕೆ ಸೇವಾ ಜನಿತಾ ರಾಗಂಬೊಲಾಗಳ್ ಮೆರೆವುದನುದಿನಂ ಸೋಮಭೂಮೀಶಪಾದಂ’ ಎಂಬ ಮಾತಿನಲ್ಲಿ ಚಿಕ್ಕನಾಯಕನಹಳ್ಳಿಯ[9] ಕ್ರಿ.ಶ. ೧೧೯೯ರ ಶಾಸನದ ‘ಚಂಗಾಳುವನೇ’ ರಿದ ಮಾತಂಗ ಮೊಗದೊಡ್ಡಿನಲಿ ಸಬಳದ ಮನೆಗಳು ಪಿಂಗದೆ ಪೋಲ್ತೆನೆದಿರ್ದವು’ ಎಂಬ ಉಲ್ಲೇಖಗಳಲ್ಲಿ ಚಂಗಾಳ್ವರು ಪ್ರಾರಂಭದಲ್ಲಿ ತಮ್ಮ ರಾಜ್ಯವನ್ನು ವಿಸ್ತರಿಸಲು ಹತ್ತೂ ದಿಕ್ಕುಗಳಲ್ಲೂ ಸುತ್ತಾಡಿದಂತೆ ಕಾಣುತ್ತದೆ.

೨

ಚಂಗಾಳ್ವರು ತಾವು ಚಂದ್ರವಂಶದವರೆಂದೂ, ಯಾದವ ಕುಲಕ್ಕೆ ಸೇರಿದವರೆಂದೂ, ದ್ವಾರಾವತಿಯಿಂದ ಬಂದವರೆಂದೂ ಹೇಳಿಕೊಂಡಿದ್ದಾರೆ. ಅವರು ಬಹುಶಃ ೭ನೇ ಶತಮಾನದಲ್ಲಿನ ಚಾಲುಕ್ಯರ ಅಧೀನರಾಗಿದ್ದ ಆಳುಪರ ಒಂದು ಶಾಖೆಯಾಗಿದ್ದಿರಬಹುದು. ಆದರೆ ಚಂಗಾಳ್ವರ ಶಾಸನಗಳಲ್ಲಿ ಆಳುಪರ ವಿಷಯ ಎಲ್ಲೂ ಕಂಡುಬರುವುದಿಲ್ಲ.

‘ಚಂಗ’ ಎಂಬುದಕ್ಕೆ ಸುಂದರ ಎಂಬ ಅರ್ಥವಿರುವಂತೆ ಚಂದ್ರ ಎಂಬ ಅರ್ಥಕ್ಕೂ ಇದು ಹತ್ತಿರದ ಪದವಾಗಿದೆ. ಚಂಗಾಳ್ವರು ಸುಂದರ ಕಾಯರಾಗಿದ್ದುದರಿಂದ ಅವರ ರಾಜ ಸಂತತಿಗೆ

ಚಂಗಾಳ್ವರು ಎಂಬ ಹೆಸರು ಬಂದಿರಬಹುದು. ಅಥವಾ ಬಹಳಷ್ಟು ರಾಜವಂಶಗಳು ತಮ್ಮನ್ನು ಚಂದ್ರವಂಶದವರೆಂದು ಕರೆದುಕೊಳ್ಳುವಂತೆ ಇವರೂ ಕರೆದುಕೊಂಡಿರಬಹುದು. ಚಂಗ ಅರಸರ ನಾಡು ಚಂಗನಾಡೆಂದು ಹೆಸರಾಯಿತೆಂದು ಕಾಣುತ್ತದೆ. ಚಂಗಾಳ್ವರನ್ನು ಕೊಡವರೆಂದೂ, ಕೊಡಗಿನ ರಾಜ ಸಂತತಿಯವರೆಂದೂ ಎಂ.ಪಿ.ಕಾರಿಯಪ್ಪ ಮತ್ತು ಶ್ರೀಮತಿ ಪೊನ್ನಮ್ಮ ಕಾರಿಯಪ್ಪ ಪುಷ್ಟೀಕರಿಸಲು ಪ್ರಯತ್ನಿಸಿದ್ದಾರೆ.**[10]** ಆದರೆ ಚಂಗಾಳ್ವರು ಕೊಡಗಿನ ಪ್ರದೇಶವನ್ನು ಆಳಿದರಾದರೂ ಕೊಡವರೇ ಇವರೆಂದು ಹೇಳುವುದು ಕಷ್ಟವೆನಿಸುತ್ತದೆ. ಏಕೆಂದರೆ ಕೊಡಗು ಪ್ರದೇಶದಲ್ಲಿರುವ ಜನರೆಲ್ಲ ಕೊಡವ ಜಾತಿಗೆ ಸೇರಿದವರಲ್ಲ.

ಪ್ರಾರಂಭದಲ್ಲಿ ಸ್ವತಂತ್ರರಾಗಿದ್ದ ಚಂಗಾಳ್ವರು ಮೂಲತಃ ಜೈನಧರ್ಮಿಯರಾಗಿದ್ದಂತೆ ಕಾಣುತ್ತದೆ. ಅವರು ಗಂಗರ ಅಧೀನಕ್ಕೊಳಪಟ್ಟಾಗ ಅವರ ಜೈನಧರ್ಮಕ್ಕೆ ಯಾವುದೇ ವಿಧವಾದ ಧಕ್ಕೆಯೂ ಬಂದಂತೆ ಕಾಣವುದಿಲ್ಲ. ಆದರೆ ಇವರು ಚೋಳರ ಆಕ್ರಮಣಕ್ಕೊಳಗಾದಾಗ ಶೈವಧರ್ಮವನ್ನು, ಹೊಯ್ಸಳರ ಆಡಳಿತಕ್ಕೆ ತಲೆಬಾಗಿದಾಗ ವೈಷ್ಣವ ಧರ್ಮವನ್ನು ಪೋಷಿಸಿಕೊಂಡು ಬಂದು ಹಾಲೇರಿ ರಾಜರ ಹಾಗೂ ವಿಜಯನಗರದ ಅರಸರ ಸಂಪರ್ಕದಿಂದಾಗಿ ಶೈವ ಹಾಗೂ ಜೈನಧರ್ಮಗಳನ್ನು ತೊರೆದು ವೀರಶೈವರಾದಂತೆ ಕಾಣುತ್ತದೆ ಆದರೆ ಚಂಗಾಳ್ವರು ಮೂಲತಃ ಒಕ್ಕಲಿಗರು. ನಾಗಮಂಗಲ ತಾಲ್ಲೂಕಿನ ಲಾಳನಕೆರೆಯಿಂದ ಹಿಡಿದು ಕೊಡಗಿನ ಸೋಮವಾರಪೇಟೆಯವರೆಗೂ ಈ ಒಕ್ಕಲಿಗರು ಹಬ್ಬಿಕೊಂಡಿದ್ದಾರೆ. ಇವರೆಲ್ಲರೂ ಭೈರವನ ಆರಾಧಕರಾಗಿದ್ದಾರೆ. ತಮ್ಮನ್ನು ಚಂಗಾಳ್ವರೆಂದು ಹೇಳಿಕೊಳ್ಳುವ ಲಾಳನಕೆರೆ ಮೂಲದ ಒಕ್ಕಲಿಗರು ಪಿರಿಯಾಪಟ್ಟಣ ತಾಲ್ಲೂಕಿನ ಕಿತ್ತೂರಿನಲ್ಲಿ ವಿಶೇಷವಾಗಿ ಕಾಣಿಸಿಗುತ್ತಾರೆ. ಇವರು ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ಪೇಟೆ, ಸೋಮವಾರಪೇಟೆ ತಾಲ್ಲೂಕುಗಳಲ್ಲಿ ಹರಡಿಕೊಂಡಿದ್ದಾರೆ. ಈ ಮೂಲದ ಕಿತ್ತೂರಿನ ದಮ್ಮನಹಳ್ಳಿ ಕೊಪ್ಪಲಿನ ಚಂಗೇಗೌಡರ ವಂಶಿಕರು ತಮ್ಮನ್ನು ಚಂಗಾಳ್ವರೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾರೆ.**[11]** ಇಂಥ ಕಂಠಸ್ಥ ಮೂಲಗಳಲ್ಲದೆ ಚಂಗಾಳ್ವರು ಒಕ್ಕಲಿಗರೆಂಬುದನ್ನು ಕಲ್ಲಹಳ್ಳಿಯ ಅರಸು ವಂಶದವರ ಕಡೆಯಿಂದಲೂ ಈಗಾಗಲೆ ಗುರುತಿಸಲಾಗಿದೆ. ನಂಜುಂಡ ಕವಿಯು ಪಾಂಚಾಲ ಗಂಗನಿಂದ ಕಮ್ಮಟದ ಬೇಡರ ರಾಮ ಕಥೆಯನ್ನು ಅರಿಯಲು ಲಿಂಗಧಾರಿಯಾದನೆಂದೂ ಆಗ ಆತ ತನ್ನ ಹೆಸರನ್ನು ಬದಲಾಯಿಸಿ ಕೊಂಡನೆಂದೂ ಹೇಳಿರುವ ದೇವಚಂದ್ರನ ಹೇಳಿಕೆಯನ್ನು ಸಂಶೋಧಕ ಶ್ರೀ ಹ.ಕ.ರಾಜೇಗೌಡರು ಪ್ರಸ್ತಾಪಿಸಿ ಕುಮಾರರಾಮ ಸಾಂಗತ್ಯದ ಹಸ್ತ ಪ್ರತಿಯೊಂದರ ಆರಂಭದಲ್ಲಿ 'ಕಲ್ಲಹಳ್ಳಿ ದೇವರಸಗೌಡ ಹೇಳಿದ ರಾಮನಾಥನ ಸಾಂಗತ್ಯಕ್ಕೆ ಮಂಗಳ' ಎಂದಿರುವುದನ್ನು ಹಾಗೂ *ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್‌*ನಲ್ಲಿನ ಶಾಸನವೊಂದರ ಬಗೆಗಿರುವ,

An image of Adiparameswara was Caused to be Carved at the instance of Rayagowda Son of Muddegowda who was the son of Malligowda and Jayagowda the disciple of Anantha Vidyadeva, whose guru was Jayadevan Battarakar.

ಎಂಬ ಹೇಳಿಕೆಯನ್ನು ಇಟ್ಟುಕೊಂಡು ಕರ್ನಾಟಕದ ಮುಖ್ಯಮಂತ್ರಿಯಾಗಿದ್ದ ಕಲ್ಲಹಳ್ಳಿಯ ದೇವರಾಜಾ ಅರಸ್ ಅವರ ಮನೆತನದವರು ಮೂಲತಃ ಒಕ್ಕಲಿಗರಾಗಿದ್ದು ಜೈನಧರ್ಮಾವಲಂಬಿಗಳಾಗಿದ್ದರೆಂಬುದನ್ನು ಸ್ಪಷ್ಟಪಡಿಸಿದ್ದಾರೆ.**[12]**

ಆದರೆ ಕಾಲಾನುಕ್ರಮದಲ್ಲಿ ಈ ಒಕ್ಕಲಿಗರು ಐದು ಹೋಳಾಗಿ ಒಡೆದು ಹೋದಂತೆ ಕಾಣಿಸುತ್ತದೆ. ಕೆಲವರು ಒಕ್ಕಲಿಗರಾಗಿಯೇ ಉಳಿದಿದ್ದರೆ ಮತ್ತೆ ಕೆಲವರು ವೀರಶೈವರಾದಂತೆ ಇನ್ನು ಕೆಲವು ಮೈಸೂರು ಅರಸರ ಸಂಬಂಧದಿಂದ ಅರಸು ಜಾತಿಯವರಾಗಿದ್ದು ಇನ್ನುಳಿದವರಲ್ಲಿ ಕೆಲವರು ತಮ್ಮನ್ನು ಕೊಡವರೆಂದು ಗುರುತಿಸಿಕೊಂಡಂತೆ ಬೂವನಹಳ್ಳಿ, ಹನಸೋಗೆ, ಸಾಲಿಗ್ರಾಮ, ಯಮಗುಂಬ ಮುಂತಾದಡೆಗಳಲ್ಲಿನ ಕೆಲವರಾದರೂ ತಮ್ಮನ್ನು ಜೈನರನ್ನಾಗಿ ಗುರುತಿಸಿಕೊಂಡಿದ್ದಾರೆ.

ಚಂಗಾಳ್ವರ ರಾಜ್ಯಸ್ಥಾಪನೆಯ ವಿಚಾರ ಅರೆ ಇತಿಹಾಸ ಹಾಗೂ ಐತಿಹ್ಯಗಳಿಂದ ಕೂಡಿದೆ. ಹತ್ತನೆಯ ಶತಮಾನದಲ್ಲಿ ದ್ವಾರಕ ಪಟ್ಟಣದಿಂದ ದಕ್ಷಿಣದ ಕಡೆಗೆ ವಲಸೆ ಬಂದ ಜೈನ ಕ್ಷತ್ರಿಯ ವಿಕ್ರಮ ಚಂಗಾಳ್ವನು ತುಂಬಾ ಎಂಬಲ್ಲಿ ತನ್ನೊಂದಿಗೆ ಬಂದ ೫೦೦-೬೦೦ ಕುಟುಂಬಗಳೊಂದಿಗೆ ನೆಲೆಸಿದ.[13] ಅವನು ಸುತ್ತಮುತ್ತಲ ಬೇಡರ ನಾಯಕರನ್ನು ಸೋಲಿಸಿ ರಾಜ್ಯವನ್ನು ವಿಸ್ತರಿಸಿದ. ಬೇಡರ ನಾಯಕರಲ್ಲಿ ಪ್ರಬಲರಾದವರು ವಲಸೆ ಬಂದ ಚಂಗಾಳ್ವರ ಹೆಣ್ಣುಗಳ ಸೌಂದರ್ಯಕ್ಕೆ ಸೋತು ವಿವಾಹ ಸಂಬಂಧಕ್ಕೆ ಒತ್ತಾಯ ಮಾಡಿದಾಗ ವಿಕ್ರಮ ಚಂಗಾಳ್ವನು ವಿವಾಹಕ್ಕೆ ಚಪ್ಪರವನ್ನು ಕಟ್ಟಿಸಿ, ಚಪ್ಪರದ ಕೊನೆಯಲ್ಲಿ ನಿರ್ಮಿಸಿದ ಕತ್ತಲೆಯ ಕೋಣೆಯಲ್ಲಿ ಕಂದಕವನ್ನು ತೋಡಿಸಿ ಪೂಜೆಯ ನೆಪದಿಂದ ಬೇಡರನ್ನು ಒಬ್ಬೊಬ್ಬರನ್ನಾಗಿ ಕಳುಹಿಸಿ, ಅವರನ್ನು ಕಡಿದು ಕಂದಕದಲ್ಲಿ ಹಾಕಿಸಿದ. ಬೇಡರ ಉಪದ್ರವ ಹೀಗೆ ಮುಕ್ತಾಯವಾಯಿತು.[14] ಮೈಸೂರರಸರ ಸಂಬಂಧವನ್ನು ಕೇಳಿ ಬಂದ ಕಾರುಗಳ್ಳಿ ಮಾರನಾಯಕನನ್ನು ಸಂಹರಿಸಿದ ಸಂಘಟನೆಯು ಇದನ್ನೆ ಹೋಲುತ್ತಿದ್ದು ಇದೊಂದು ಸಂಚಾರಿ ಆಶಯವಾಗಿದೆ. ಈ ವಿಕ್ರಮ ಚಂಗಾಳ್ವನು ತೀರ್ಥಂಕರ ಬೆಟ್ಟದ ಬಳಿ (ಬೆಟ್ಟದಪುರದ ಈಗಿನ ಸಿಡ್ಲು ಮಲ್ಲಿಕಾರ್ಜುನನ ಬೆಟ್ಟ. ಇದ ಮೊದಲು ಮಲ್ಲಿನಾಥ ತೀರ್ಥಂಕರನ ಬಸದಿಯಿದ್ದ ಬೆಟ್ಟವಾಗಿತ್ತು.) ಬಿಡಾರ ಬಿಟ್ಟಿದ್ದಾಗ ಮೊಲವೊಂದು ಬೇಟೆಯ ನಾಯಿಯನ್ನು ಅಟ್ಟಿಸಿಕೊಂಡು ಹೋಗುತ್ತಿದ್ದ ದೃಶ್ಯವನ್ನು ಕಂಡು ಆ ಭೂಮಿಯು ರಾಜ್ಯ ಸ್ಥಾಪನೆಗೆ ಯೋಗ್ಯವಾದ ಗಂಡುಭೂಮಿ ಎಂದು ತಿಳಿದು ಅಲ್ಲಿ ಕೋಟೆ ಸಮೇತ ಪಟ್ಟವನ್ನು ಕಟ್ಟಿಸಿ ಅದನ್ನು ಬೆಟ್ಟದಪುರವೆಂದು ಕರೆದ. ತರುವಾಯ ಅವನು ಬೆಟ್ಟದಪುರದ ಆಡಳಿತವನ್ನು ತನ್ನ ಮಗ ಚಂಗಲರಾಯನಿಗೂ ಕಲ್ಲಹಳ್ಳಿಯನ್ನು ತನ್ನ ಮಂತ್ರಿಯೂ ಹಾಗೂ ಕುಲದವನೂ ಆದ ಮಂಗರಸನಿಗೂ ವಹಿಸಿದನೆಂದು ಹೇಳಲಾಗಿದೆ.[15] (ಗಂಡುಭೂಮಿಯ ಕಲ್ಪನೆಯೂ ಒಂದು ಸಂಚಾರಿ ಆಶಯವೇ ಆಗಿದೆ. ಇಲ್ಲಿ ಹೇಳಿರುವ ಜೈನ ಕ್ಷತ್ರಿಯ ಮಂಗರಸನು ೧೫-೧೬ನೇ ಶತಮಾನದ ಅಂತರದಲ್ಲಿದ್ದ ಕಲ್ಲಹಳ್ಳಿಯ ಕವಿ ಮಂಗರಸನ ಪೂರ್ವಿಕನೇ ಆಗಿದ್ದಾನೆ.)

ಚಂಗಲರಾಯನ ಬಗೆಗೆ ಜನಪದ ಮೂಲವೆನಿಸುವ ಹಲವಾರು ದಂತಕಥೆಗಳಿವೆ. ಒಂದು ಕಥೆಯ ಪ್ರಕಾರ ಅವನ ಒಂದು ಕಿವಿ ಕತ್ತೆಯ ಕಿವಿಯಂತಿದ್ದು ಆ ರಹಸ್ಯವು ಅವನ ಕ್ಷೌರಿಕನಿಗೆ ಮಾತ್ರ ತಿಳಿದಿತ್ತು. ಕೆಲ್ಸಿಯು ಆ ರಹಸ್ಯವನ್ನು ತನ್ನಲ್ಲೇ ಇರಿಸಿಕೊಳ್ಳಲಾಗದೇ ಅರಮನೆಯ ಹೊರಾಂಗಣದಲ್ಲಿದ್ದ ಗಂಧದ ಮರಕ್ಕೆ ತಿಳಿಸಿದ. ಸ್ವಲ್ಪ ದಿನಗಳ ತರುವಾಯ ದೊಂಬರ ತಂಡವೊಂದು ಆಟವಾಡಿ ತನ್ನನ್ನು ಸಂತೋಷಗೊಳಿಸಲು ಚಂಗಲರಾಯನು ಅವರಿಗೆ ಡೋಲು ಮಾಡಿಕೊಳ್ಳಿರೆಂದು ಆ ಗಂಧದ ಮರವನ್ನು ಕಡಿದು ಕೊಟ್ಟ. ಅವರು ತಯ್ಯಾರಿಸಿದ ಡೋಲು ಕೆಲ್ಸಿಯು ಹೇಳಿದ್ದ ಅರಸನ ಕಿವಿಯ ರಹಸ್ಯದ ಹೊರತು ಯಾವ ನಾದವನ್ನು ಹೊರಡಿಸಲಿಲ್ಲ. ‘ಅರಸನ ಕಿವಿ ಕತ್ತೆ ಕಿವಿ’ ಎಂದು ಡೋಲು ಬಡಿದುಕೊಳ್ಳಲು ಅವನಿಗೆ ನಾಚಿಕೆಯು ಆಯಿತು. ಇನ್ನೊಂದು ದಂತಕಥೆಯ ಪ್ರಕಾರ ಚಂಗಲರಾಯನ ತೋಳುಗಳು ಮೊಣಕಾಲನ್ನು ಮುಟ್ಟುತ್ತಿದ್ದವು. ಜೈನನಾದ ಅವನು ಜೀವಂತ ಪ್ರಾಣಿಗಳನ್ನು ಎಲ್ಲಿ ತುಳಿದು ಬಿಡುವೆನೋ ಎಂಬ ಧರ್ಮ ಭೀತಿಯಿಂದ ತನ್ನ ಪಾದಗಳನ್ನು ಭೂಮಿಯ ಮೇಲೆ ಇರಿಸುತ್ತಿರಲಿಲ್ಲವಾಗಿ ಅವನ ಅಂಗಾಲ ತುಂಬಾ ಕೂದಲು ಬೆಳೆದಿತ್ತು.[16]

೪

ಚಂಗಾಳ್ವರು ಮೊದಮೊದಲು ಎಡತೊರೆ ಹಾಗೂ ಹನಸೋಗೆಯ ಜೈನ ಶಾಸನಗಳಲ್ಲಿ ಕಾಣಿಸಿಕೊಳ್ಳುತ್ತಾರೆ. ಪ್ರಾರಂಭದಲ್ಲಿ ಅವರು ಗಂಗವಾಡಿಯನ್ನು ಗೆದ್ದುಕೊಂಡು ಚೋಳರ ಅಧೀನರಾಗಿ ಅವರ ಸಾಮಂತರಾದರು.ಮೈಸೂರು ಜಿಲ್ಲೆಯ ದಕ್ಷಿಣ ಮತ್ತು ಪೂರ್ವ ಭಾಗಗಳು, ಅರಕಲಗೂಡು, ನಾಗಮಂಗಲ (ಮಂಡ್ಯ ಜಿಲ್ಲೆ) ಮೊದಲಾದ ಪ್ರದೇಶಗಳು ಚೋಳರ ವಶವಾದವು. ಹುಣಸೂರು ಮತ್ತು ಕೊಡಗಿನ ಭಾಗಗಳಲ್ಲಿ ಚಂಗಾಳ್ವರು ರಾಜರಾಜಚೋಳನ (೯೮೫-೧೦೧೬) ನಿಯಂತ್ರಣಕ್ಕೆ ಒಳಪಟ್ಟಿದ್ದರು. ಚೋಳರು ಚಂಗಾಳ್ವರನ್ನು ಸೋಲಿಸಿದ್ದು

೧೦೦೪ ರ ಪನಸೋಗೆ(ಹನಸೋಗೆ) ಯುದ್ಧದಲ್ಲಿ. ಚೋಳರ ದಂಡನಾಯಕ ಪಂಚವಾನ ಮಹಾರಾಯನಿಗೆ ಕೊಂಗಾಳ್ವ ಅರಸ ಮನಿಜ (ಸುಮಾರು ೧೦೦-೧೦೨೦) ಚಂಗಾಳ್ವರ ವಿರುದ್ಧ ನೆರವು ನೀಡಿದ ಕಾರಣ ಚಂಗಾಳ್ವರಿಗೆ ಸೋಲಾಯಿತು. ಚಂಗಾಳ್ವರಿಗೆ ಸೇರಿದ ಕೊಡಗಿನ ಕುಡುಮಲೈ ನಾಡು ರಾಜರಾಜಚೋಳನ ಸ್ವಾಧೀನವಾಯಿತು. ರಾಜೇಂದ್ರ ಚೋಳನು ತನ್ನ ನೆರವಿಗೆ ಬಂದ ಕೊಂಗಾಳ್ವ ಮನಿಜನಿಗೆ ಮಾಳವಿ (ಮಾಳಂಬಿ) ಮತ್ತು ಅರಕಲಗೂಡು ಏಳುಸಾವಿರ ಸೀಮೆಯನ್ನು ಕೊಟ್ಟುದಲ್ಲದೆ 'ಕ್ಷತ್ರಿಯ ಶಿಖಾಮಣಿ ಕೊಂಗಾಳ್ವ' ಎಂಬ ಬಿರುದನ್ನು ನೀಡಿದನು.[17]

ಕ್ರಿ.ಶ. ೧೦೩೬ರಲ್ಲಿ ತೆಲುಗರ ಮಾರಿ ಚಂಗಾಳ್ವನು ತನ್ನ ತಮ್ಮಂದಿರೊಡನೆ ತುರುಗಳನ್ನು ಕೊಂಡುಯ್ಯುತ್ತಿರಲು ಮೈಸೂರು ತಾಲ್ಲೂಕು ಮಲ್ಲೇಗೌಡನ ಕೊಪ್ಪಲಿನ ಬಳಿ ನಾಗಯ್ಯನ ಮಗ ಬಾಗುಳಿ ಸಿರಿಯಣ್ಣ ಚಂಗಾಳ್ವನ ಜೊತೆ ಕಾದಿ ತುರುಗಳನ್ನು ಮರಳಿಸುವಲ್ಲಿ ಸತ್ತ. ಅವನ ಹೆಸರಿನಲ್ಲಿ ನಿಲ್ಲಿಸಿದ ಪರೋಕ್ಷ ವಿನಯದ ಕಲ್ಲಿನ ವಿವರಗಳಿಂದ ಚಂಗಾಳ್ವರ ರಾಜ್ಯದ ವ್ಯಾಪ್ತಿ ಅರಿವಾಗುತ್ತದೆ.[18] ಆದರೆ ಎಡತೊರೆಯ ಹಂಪಾಪುರದಲ್ಲಿ ಸಿಕ್ಕಿರುವ ವೀರಗಲ್ಲಿನ ವಿವರಗಳ ಪ್ರಕಾರ ಒಂದನೆ ರಾಜೇಂದ್ರ ಚೋಳನ (೧೦೧೨-೧೦೪೪) ಪ್ರಭುತ್ವವನ್ನು ನನ್ನಿ ಚಂಗಾಳ್ವನು (ಸು.೧೦೩೩-೬೦) ಸ್ವೀಕರಿಸಿರುವುದು ಸ್ಪಷ್ಟವಾಗಿದೆ.[19]

[1]ಎಪಿಗ್ರಾಫಿಯ ಕರ್ನಾಟಕ. (ಎ.ಕ.) ಸಂ. ೪. ಭಾಗ.೨ Introduction.
[2] Karnataka Through The Ages. Govt of Mysore ೧೯೬೮ P. ೪೦೭
[3] Derret J.D.M : The Hoysalas, Oxford university Press (London. ೧೯೫೭) chapter I
[4]ಎ.ಕ.ಸಂ. ನಾಲ್ಕು ೪ ಯಳಂದೂರು ತಾಲ್ಲೂಕಿನ ೧೬೭ನೇ ಶಾಸನ.
[5]ದೇಜಗೌ. ಸ್ಥಳನಾಮ ವ್ಯಾಸಂಗ ಸಹ್ಯಾದ್ರಿ ಪ್ರಕಾಶನ (ಮೈಸೂರು ೧೯೯೦) ಪುಟ ೧೧೯.
[6]ಎ.ಕ.ಸಂ. ೭ ನಾಗಮಂಗಲ. ೬೨ ಲಾಳನಕೆರೆ ಶಾಸನ.
[7]ಎ.ಕ.ಸಂ. ೩ ಹೆಗ್ಗಡದೇವನ ಕೋಟೆ ೭ ಅಂಕನಾಥಪುರ ಶಾಸನ.
[8]ಎ.ಕ.ಸಂ. ೭ ಶಿಕಾರಿಪುರ. ೧೯೭-೪೫.
[9]ಎ.ಕ.ಸಂ. ೧೬ ಚಿಕ್ಕನಾಯಕನಹಳ್ಳಿ ೯೮-೩೪.
[10] M.P.Cariappa and Ponnamma. The Corrge and their Origin. Geeta Book House. Mysore (೧೯೮೧) P. ೨೫೪.
[11]ಈ ಮಾಹಿತಿ ಒದಗಿಸಿದವರು ಪುಟ್ಟಬಸವೇಗೌಡ ಎಂ.ಎ. ನಿವೃತ್ತ ಸಹಾಯ ನಿರ್ದೇಶಖರು, ಪ್ರಸಾರಾಂಗ, ಮೈಸೂರು. ವಿ.ವಿ. ಮೈಸೂರು.
[12] M.A.R. ಮೈಸೂರು ಆರ್ಕಿಯಾಲಜಿಕಲ್ ರಿಪೋರ್ಟ್ (೧೯೨೫) P ೧೦೯ ನೋಡಿ ಹ.ಕ. ರಾಜೇಗೌಡು ಸಂಪಾದಿಸಿರುವ ಮಂಗರಸನ ಶ್ರೀಪಾಲ ಚರಿತೆಗೆ ಬರೆದಿರುವ ಪೀಠಿಕೆ ಕ.ಅ.ಸಂ. ಮೈ.ವಿ.ವಿ. ಮಾಸೂರು (೧೯೭೭) ಪು. XXXIV
[13] C.Hayavadana Rao. Mysore Gazetteer Vol V.P. ೬೪೪.
[14]ಹ.ಕ. ರಾಜೇಗೌಡ. ಪೂರ್ವೋಕ್ತ ಪು. XVI-XVIII.
[15] M.A.R. (೧೯೨೫. P ೧೪)
[16] C.Hayavadana Rao. Mysore Gazetteer Vol V.Pag. ೬೪೪.
[17]ಎ.ಕ.ಸಂ. ೧ (ಕೊಡಗು) ೬೫ Mys Gaz Vol II Part ೨ P. ೯೫೨.
[18]ಎ.ಕ.ಸಂ. ೫ ಮೈಸೂರು ೧೧೩ ಮತ್ತು ೧೧೪.
[19] M.A.R. ೧೯೧-೧೩ Part II Para ೬೯.

ಮಲೆಕರ್ನಾಟಕದ ಅರಸು ಮನೆತನಗಳು: ೧೧. ಚಂಗಾಳ್ವರು (೨)

೫

ಪಣಸೋಗೆಯ ಯುದ್ಧದ ತರುವಾಯ ಮಲೆಪರ ನಾಡನ್ನು ಗೆದ್ದುಕೊಳ್ಳಲು ಆಗ ತಾನೆ ರಾಜ್ಯ ಕಟ್ಟಿಕೊಂಡಿದ್ದ ಹೊಯ್ಸಳರಿಗೂ ಚೋಳರಿಗೂ ಯುದ್ಧಗಳು ನಡೆಯಲಾರಂಭಿಸಿದವು. ತಲಕಾಡಿನ ಬಳಿ ಕಾವೇರಿಯ ದಕ್ಷಿಣ ತಟದಲ್ಲಿ ಕಲವೂರು (ಕಲಿಯೂರು) ಯುದ್ಧದಲ್ಲಿ (ಕ್ರಿ.ಶ. ೧೦೦೬) ಚೋಳರ ದಂಡನಾಯಕ ಅಪ್ರಮೇಯನು ಹೊಯ್ಸಳ ನೃಪಕಾಮನ (೧೦೦೬-೪೭) ದಳವಾಯಿ ನಾಗಣ್ಣನನ್ನು ಸೋಲಿಸಿದ.

[1]ಈ ಯುದ್ಧದ ವಿವರಗಳನ್ನು ನೀಡುವ ತಿರುಮಕೂಡ್ಲು ನರಸೀಪುರದ ೪೪ನೇ ಶಾಸನದಲ್ಲಿ ಅಪ್ರಮೇಯನು ತನ್ನನ್ನು 'ಮಲೆಪಕುಲಕಾಲಂ' ಎಂದು ಹೇಳಿಕೊಂಡಿದ್ದಾನೆ. ಈ ಕಲವೂರು ಯುದ್ಧವು ಮಲೆನಾಡನ್ನು ಗೆದ್ದುಕೊಳ್ಳಲು ಹೊಯ್ಸಳರು ಚೋಳರ ವಿರುದ್ಧ ಮಾಡಿದ ಯುದ್ಧಗಳಲ್ಲಿ ಮೊದಲನೆಯದೆಂದು ಕಾಣುತ್ತದೆ. ಚೋಳರ ಸಾಮಂತರಾಗಿದ್ದ ಚಂಗಾಳ್ವ ಮತ್ತು ಕೊಂಗಾಳ್ವರನ್ನು ಸದೆಬಡಿದು ಮಲೆನಾಡನ್ನು ಗೆದ್ದುಕೊಳ್ಳುವ ಉದ್ದೇಶವೇ ಹೊಯ್ಸಳರದಾಗಿತ್ತು. ಹೊನ್ನಾರು (ಹೊನ್ನೂರು), ರಾಜೇಂದ್ರಪುರ ಮತ್ತು ಗುಂಡೆತ್ತರಣ್ಯ ಶಾಸನಗಳು ಹೊಯ್ಸಳರ ಹಾಗೂ ಚೋಲರ ಸಾಮಂತರಾಗಿದ್ದ ಕೊಂಗಾಳ್ವ, ಚಂಗಾಳ್ವರ ನಡುವಣ ಗಡಿಯುದ್ಧಗಳನ್ನು ಚಿತ್ರಿಸುತ್ತವೆ.**[2]** ಹೊಯ್ಸಳ ನೃಪಕಾಮನು ತಾನಾಗಿಯೇ ಕೆಣಕಿ ಕೊಂಗಾಳ್ವ-ಚಂಗಾಳ್ವರ ಮೇಲೆ ಬೀಳುತ್ತಿರಲಿಲ್ಲ. ರಾಜೇಂದ್ರಚೋಳ ಕೊಂಗಾಳ್ವನು (೧೦೨೫-೫೫) ದಂಡೆತ್ತಿ ಬಂದಾಘ ಅವನನ್ನು ಓಡಿಸಲು ನೃಪಕಾಮ ಕ್ರಿ.ಶ. ೧೦೨೨ ರಲ್ಲಿ ಯುದ್ಧಮಾಡಿದ್ದಾನೆ. ಕೊಂಗಾಳ್ವನ ದಳಪತಿ ಕನ್ನನು ಸಮರದಲ್ಲಿ ನೃಪಕಾಮನನ್ನು ಪ್ರತಿಭಟಿಸಿ ನಿಂತಾಗ ನೃಪಕಾಮನ ದಳವಾಯಿ ಜೋಗಿಮಯ್ಯನು ಕೊಂಗಾಳ್ವ ಏರಿದ್ದ ಅಶ್ವದತ್ತ ನುಗ್ಗಿ ಕೊಂಗಾಳ್ವನನ್ನು ಕೊಂದು ಕೊಂಗಾಳ್ವನ ಖಡ್ಗಕ್ಕೆ ತಾನೂ ಬಲಿಯಾದ.**[3]** ಮತ್ತೆ ೧೦೨೬ರಲ್ಲಿ ಕೊಂಗಾಳ್ವರನ್ನು ಮನ್ನೆ ಎಂಬಲ್ಲಿ ನೃಪಕಾಮ ಸೋಲಿಸಿದ್ದಾನೆ.**[4]**ಆದರೆ ನೃಪಕಾಮನ ಕಾಲದಲ್ಲಿ ಹೊಯ್ಸಳರಿಗೂ ಚಂಗಾಳ್ವರಿಗೂ ಘರ್ಷಣೆಯಿರಲಿಲ್ಲ. ಹೊಳೆನರಸೀಪುರ ತಾಲ್ಲೂಕಿನ ಜೋಡಿಕುಪ್ಪೆ ಶಾಸನದಲ್ಲಿ ಚಂಗಾಳ್ವ-ಕೊಂಗಾಳ್ವರ ನಡುವೆ ನಡೆದ ಸಮರದಲ್ಲಿ ಕೊಂಗಾಳ್ವರಿಂದ ಚಂಗಾಳ್ವವೀರ ಮಡಿದಿರಬಹುದಾದ ವಿಷಯದ ಕುರಿತ ವಿವರಗಳು ಹಾಳಾಗಿವೆ. ಈ ಶಾಸನ ೧೧ನೇ ಶತಮಾನದ್ದಿರಬಹುದೆಂದು ಹೇಳಲಾಗಿದೆ. ನೃಪಕಾಮನ ತುವಾಯ ಬಂದ ಹೊಯ್ಸಳ ವಿನಯಾದಿತ್ಯನ ಕಾಲದಲ್ಲಿ (೧೦೪೭-೧೯೮) ಚಂಗಾಳ್ವರ ನನ್ನಿಚಂಗಾಳ್ವ, ಮಾಚೆಯರಸ, ಮಾದೇವ, ಒಡೆಯಾದಿತ್ತಯ ಎಂಬ ಅರಸರು ಶಾಸನಗಳಲ್ಲಿ ಕಂಡು ಬರುತ್ತಾರೆ. ಚಿಕ್ಕಹನಸೋಗೆಯಲ್ಲಿ ಶಾಂತೀಶ್ವರ ಬಸದಿ (ಅಬ್ಬೆಯ ಜಿನಾಲಯ)ಯನ್ನು ಕಟ್ಟಿಸಿದ ನನ್ನಿ ಚಂಗಾಳ್ವನು ರಾಜೇಂದ್ರಚೋಳ ನನ್ನಿ ಚಂಗಾಳ್ವ ವೀರರಾಜೇಂದ್ರ ನನ್ನಿ ಚಂಗಾಳ್ವ ಎಂಬ ಹೆಸರುಗಳನ್ನು ಹೊತ್ತಿದ್ದ. ಇವನ ಕಾಲ ಸುಮಾರು ೧೦೩೪ ಮತ್ತು ೧೦೬೦ ರ ನಡುವೆ, ಚೋಳರ ಅಧೀನಪ್ರಭುವಾಗಿದ್ದ ಕಾರಣ ನನ್ನಿಚಂಗಾಳ್ವ ತನ್ನ ಹೆಸರಿನೊಂದಿಗೆ ಚೋಳ ಚಕ್ರವರ್ತಿಗಳ ಹೆಸರುಗಳನ್ನು ಸೇರಿಸಿಕೊಂಡಿದ್ದಾನೆ. ಇವನು ಬಲಯುತನಾದ ರಾಜ. ಇವನು ಬೆಟ್ಟದಪುರ ಕೋಟೆಯನ್ನು ಭದ್ರಪಡಿಸಿ ರಾಜ್ಯವನ್ನು ವಿಸ್ತರಿಸಿದ. ಪಿರಿಯಾಪಟ್ಟಣದ (ಸಿಂಗಪಟ್ಟಣ) ನಂಜುಂಡರಾಜನ ಮಗವೀರರಾಜನಿಗೆ ತನ್ನ ಮಗಳು ಮಲ್ಲಾಜಮ್ಮನನ್ನು ಕೊಟ್ಟು ವಿವಾಹ ಮಾಡಿ ನಂಜುಂಡನೊಡನೆ ಸ್ನೇಹ ಬೆಳೆಸಿದ.**[5]** ನನ್ನಿಚಂಗಾಳ್ವನ ಆಳ್ವಿಕೆಯ ತರುವಾಯ ೧೯೬೦ರ ಶಾಸನದಲ್ಲಿ ಮಾದೆಯರಸ ಅಥವಾ ಮಾಚೆಯರಸ ಚಂಗಾಳ್ವನ ಹೆಸರು, ೧೯೬೧ ರ ಶಾಸನದಲ್ಲಿ ಮಾದೇವ ಅಥವಾ ಮಾದೇವಣ್ಣ

ಚಂಗಾಳ್ವರ ಹೆಸರು ಬರುತ್ತೆ. ಮಾಚೆಯರಸ ಹಾಗೂ ಮಾದೇವಣ್ಣ ಈ ಎರಡೂ ಹೆಸರುಗಳು ಒಬ್ಬನೇ ಚಂಗಾಳ್ವ ಅರಸನದಾಗಿರಬಹುದು. ಈ ಎರಡೂ ಶಾಸನಗಳ ವರುಷಗಳು ನಿಕಟ ಸಾಮೀಪ್ಯ ಹೊಂದಿರುವುದು ಈ ವಿಷಯವನ್ನೇ ಸಮರ್ಥಿಸುತ್ತವೆ. ಮೇಲೆ ಹೇಳಲಾದ ೧೦೯೦ ರ ಅರಕಲಗೂಡು ತಾಲ್ಲೂಕು ಲಕ್ಕೂರು ಶಾಸನದಲ್ಲಿ ಕುಪ್ಪಿನಾಡಿನ ಮಾವನೂರು ಗ್ರಾಮದ ಮುಂಡಗೌಡ ಕುಲದ ಚೋಳಗಾವುಂಡನ ಮಗ ಮಾರಗಾವುಂಡ ನಿಗಳಂಕಮಲ್ಲ ಮಾಚೆಯರಸ ಚಂಗಾಳ್ವನ ಸಮ್ಮುಖದಲ್ಲಿ ಚಂಗಾಳೇಶ್ವರ ದೇವರನ್ನು ನೊಕ್ಕಿಯೂರಿನಲ್ಲಿ ಪ್ರತಿಷ್ಠಾಪಿಸಿದ ವಿವರಗಳಿವೆ.**[6]** ೧೦೯೧ರ ಶಾಸನದ ಪ್ರಕಾರ ಮರಿಯಪೆರ್ಗಡೆ ಹಿಳ್ಳುವಯ್ಯನೊಂದಿಗೆ ಅವನು ಭೂಮಿಯನ್ನು ದಾನವಾಗಿ ನೀಡಿದ್ದಾನೆ.**[7]**ಕ್ರಿ.ಶ. ೧೦೭೯ ರ ಸಾಲಿಗ್ರಾಮದ ಶಾಸನದ ಪ್ರಕಾರ ರಾಜೇಂದ್ರಚೋಳ ಕೊಂಗಾಳ್ವನು ಆಳುತ್ತಿದ್ದ ಕಾಲದಲ್ಲಿ (೧೦೭೫-೧೧೦೦) ಚಂಗಾಳ್ವ ರಾಜನೊಬ್ಬ ಸಾಲಿಗ್ರಾಮದ ಮೇಲೆ ಧಾಳಿ ನಡೆಸಿದಾಗ ತ್ರೈಲೋಕ್ಯಸೆಟ್ಟಿ ಮತ್ತು ಬೆಳುತುಸೆಟ್ಟಿ ಎಂಬುವರು ಚಂಗಾಳ್ವನನ್ನು ಪ್ರತಿಭಟಿಸಿ ಯುದ್ದ ಮಾಡಿ ಸತ್ತರು. ಈ ಚಂಗಾಳ್ವ ಬಹುಶಃ ಮಾಚೆಯರಸನಿರಬಹುದು.**[8]**

೧೦೯೭ರ ಸಂಗರಶೆಟ್ಟಿಹಳ್ಳಿ ಶಾಸನವು ಮಹಾಮಂಡಲೇಶ್ವರ ಒಡೆಯಾದಿತ್ಯ ಚಂಗಾಳ್ವನ ಅಳ್ವಿಕೆಯನ್ನು ಸೂಚಿಸುವುದಲ್ಲದೆ ಅವನು ಕುಲೋತ್ತುಂಗ ಚೋಳ ಎಂಬ ಬಿರುದನ್ನು ಹೊತ್ತಿದ್ದುದನ್ನೂ ತಿಳಿಸುತ್ತದೆ. ಈ ಒಡೆಯಾದಿತ್ಯ ಚಂಗಾಳ್ವನು ಗಣಪತಿ ದೇವರನ್ನು ಚಂಗಾಳ್ವ ಶೆಟ್ಟಿಹಳ್ಳಿ (ಈಗಿನ ಸಂಗರಸೆಟ್ಟಿಹಳ್ಳಿ)ಯಲ್ಲಿ ಪ್ರತಿಷ್ಠಾಪಿಸಿದ್ದಾನೆ**[9]** ಈ ಚಂಗಾಳ್ವರಸನು ಒಂದನೇ ಕುಲೋತ್ತುಂಗ ಚೋಳನ (೧೦೭೦-೧೧೨೨) ಸಾಮಂತನಾಗಿದ್ದ. ಇದೇ ಅವಧಿಯದಿರಬಹುದಾದ ಅರಕಲಗೂಡು ತಾಲ್ಲೂಕಿನ ಸುಳುಗೋಡು ಸೋಮವಾರದ ಶಾಸನವು ಯರಗನೃಪನ ಮಗ ಚಂಗಾಳ್ವ ಮತ್ಸ್ಯಭೂಪಾಲಕ ಎಂಬುವನು ತನ್ನ ಅರಸಿ ಏಷಬ್ಬರಸಿಯ ಪರೋಕ್ಷ ವಿನಯ ನಿಮಿತ್ತ ಚೈತ್ಯಗೃಹವನ್ನು ಮಾಡಿಸಿದ ವಿವರಗಳನ್ನು ಹೇಳುತ್ತದೆ.**[10]**

ಹೊಯ್ಸಳ ಒಂದನೇ ಬಲ್ಲಾಳನು (೧೧೦೩-೧೧೦೮) ಚಾಲುಕ್ಯ ಆರನೇ ವಿಕ್ರಮಾದಿತ್ಯನ ಮಂಡಲಾಧಿಪತಿಯಾಗಿದ್ದ ಅವಧಿಯಲ್ಲಿ ಇನ್ನೂ ಸ್ವತಂತ್ರ ರಾಜನಾಗಿರಲಿಲ್ಲ. ಹೊಯ್ಸಳ ರಾಜ್ಯವನ್ನು ವಿಸ್ತರಿಸುವ ಯೋಜನೆಯಲ್ಲಿ ಅವನು ಗಂಗವಾಡಿಯನ್ನು ಹಾಗೂ ಕೊಡಗಿನ ಪ್ರದೇಶಗಳಲ್ಲಿದ್ದ ಮಲೆಪರ ಪಾಳೆಯಗಳನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ. ಈ ರಾಜ್ಯ ವಿಸ್ತರಣೆಯ ನೀತಿಗನುಸಾರವಾಗಿ ಅವನು ಚಂಗಾಳ್ವ ದೇವನ ಮೇಲೆ ದಂಡೆತ್ತಿ ಹೋದ.**[11]**ಈ ದಂಡಯಾತ್ರೆಯ ಕಾಲದಲ್ಲಿ ಅವನು ಗುಂಡೆತ್ತರಣ್ಯದ ಸೋಮೇಶ್ವರ ದೇವಾಲಯಕ್ಕೆ ದತ್ತಿಯನ್ನು ನೀಡಿದ.**[12]**

ಒಂದನೇ ಬಲ್ಲಾಳನ ತರುವಾಯ ಹೊಯ್ಸಳ ರಾಜ್ಯವನ್ನಾಳಿದ ಬಲ್ಲಾಳನ ಸಹೋದರ ವಿಷ್ಣುವರ್ಧನನು (೧೧೧೦-೧೧೪೨) ಚೋಳರಿಂದ ಗಂಡವಾಡಿಯನ್ನು ವಶಪಡಿಸಿಕೊಂಡ ಮೇಲೆ ಮಲೆಪರನ್ನು ಅಡಗಿಸುವ ಯೋಜನೆಯಲ್ಲಿ ಚಂಗಾಳ್ವ ಮತ್ತು ಕೊಂಗಾಳ್ವರನ್ನು ನಿಯಂತ್ರಿಸಲು ಮುಂದಾದ. ಕೊಂಗಾಳ್ವರು ಅವನ ಪ್ರಭುತ್ವವನ್ನು ಸ್ವೀಕರಿಸಿದರು. ವಿಷ್ಣುವರ್ಧನನು ತ್ರಿಭುವನಮಲ್ಲ ಕೊಂಗಾಳ್ವನ (ಸು.೧೧೧೦-೧೧೭೦) ಮಗಳಾದ ಚಂದಲಾ ದೇವಿಯನ್ನು ವಿವಾಹವಾದನು.**[13]**ಆದರೆ ಅವನು ಅಂಥ ವಿವಾಹಸಂಬಂಧವನ್ನು ಚಂಗಾಳ್ವರೊಡನೆ ಮಾಡಿಕೊಂಡಂತೆ ಕಂಡುಬರುವುದಿಲ್ಲ. ಚಂಗಾಳ್ವರು ಪದೇ ಪದೇ ಹೊಯ್ಸಳರ ಆಕ್ರಮಣವನ್ನು ತಡೆಯಬೇಕಾಯ್ತು. ಮಲೆಪರನ್ನೆಲ್ಲಾ ಕೂಡಿಸಿ ತನ್ನ ಮೇಲೆ ಬಿದ್ದ ಚಂಗಾಳ್ವರನ್ನು ಅಡಗಿಸಲು ವಿಷ್ಣುವರ್ಧನನು ಮುಂದಾದ. ಚಂಗಾಳ್ವರಿಗೂ ಹೊಯ್ಸಳರಿಗೂ ನಡುವೆ ಕ್ರೋಧನ ಸಂವತ್ಸರದಲ್ಲಿ (೧೧೨೪) ಘೋರ ಸಮರವಾಯ್ತು.**[14]** ವಿಷ್ಣುವರ್ಧನನ ವಿರುದ್ದ ಸೆಣಸಿದ ಈ ಚಂಗಾಳ್ವನೃಪನ ಹೆಸರೇನೆಂಬುದನ್ನು ಶಾಸನಗಳಲ್ಲಿ ನಮೂದಿಸಲಿಲ್ಲ. ಜೋಗನಹಳ್ಳಿ ಶಾಸನವು (೧೧೩೦-೩೧) ಚಂಗಾಳ್ವನೊಬ್ಬನ ಆಳ್ವಿಕೆಯನ್ನು

ಸೂಚಿಸುತ್ತದೆ.[15]ಇವನ ಹೆಸರೂ ಸಹ ತಿಳಿದುಬರುವುದಿಲ್ಲ. ೧೧೨೪ ಯುದ್ಧದ ತರುವಾಯ ಚಂಗಾಳ್ವರ ಬಲ ಕುಗ್ಗಿತು. ಅಣತಿಗ್ರಾಮದಲ್ಲಿನ ಎರಡು ಶಾಸನಗಳ ಪ್ರಕಾರ ಚಂಗಾಳ್ವರಸನ ಸೇವೆಯಲ್ಲಿದ್ದ ಪುರಾಣದ ಜನಾರ್ಧನ ಭಟ್ಟನ ಬೇಡಿಕೆಯಂತೆ ಆ ಗ್ರಾಮದ ನಾರಾಯಣಸ್ವಾಮಿ ದೇವಾಲಯಕ್ಕೆ ವಿಷ್ಣುವರ್ಧನನು ದತ್ತಿಯನ್ನು ನೀಡಿದ್ದಾನೆ.[16] ಚಂಗಾಳ್ವರ ರಾಜ್ಯ ಚನ್ನರಾಯಪಟ್ಟಣದವರೆಗೂ ವ್ಯಾಪಿಸಿತ್ತೆಂಬುದು ಈ ಶಾಸನದಿಂದ ತಿಳಿದುಬರುತ್ತದೆ.

ಹೊಯ್ಸಳ ಒಂದನೇ ನರಸಿಂಹನ (೧೧೪-೧೧೭೩) ಕಾಲದಲ್ಲಿ ಸಹ ಚಂಗಾಳ್ವರು ತಮ್ಮ ರಾಜ್ಯ ಸಂರಕ್ಷಣೆಗಾಗಿ ಹೋರಾಡಿದ್ದಾರೆ. ನರಸಿಂಹನು ೧೧೪೫ರಲ್ಲಿ ಚಂಗಾಳ್ವನ ಮೇಲೆ ದಂಡೆತ್ತಿ ಹೋಗಿ ರಣರಂಗದಲ್ಲಿ ಅವನನ್ನು ಕೊಂದು ಅವನ ಗಜ, ಅಶ್ವ, ಹೊನ್ನು, ಆಭರಣಾದಿಗಳನ್ನು ವಶಪಡಿಸಿಕೊಂಡ ವಿಚಾರವನ್ನು ನಾಗಮಂಗಲ ತಾಲ್ಲೂಕಿನ ಯಲ್ಲಾದಹಳ್ಳಿ ಶಾಸನ ತಿಳಿಸುತ್ತದೆ.[17] ಬಹುಶಃ ಇದೇ ಅವಧಿಯದಿರಬಹುದಾದ ನಾಗಮಂಗಲ ತಾಲ್ಲೂಕಿನ ಕಂಬದಹಳ್ಳಿ ಶಾಸನವು ಹೊಯ್ಸಳ ಸಣ್ಣ ನಾಡಾಳ ಚಂಗಿಕುಳದ ಸಾವಂತ ಭರತನಾಯಕನ ಶ್ರೀ ಶಾಂತೀಶ್ವರ ದೇವರ ಪೂಜೆಗೆ ಹಿರಿಯಕೆರೆಯ ದಕ್ಷಿಣ ಭಾಗದ ತೂಬಿನ ಮೊದಲೇರಿಯಲ್ಲಿ ಸಂಕ್ರಾಂತಿಯಂದು ಖಂಡುಗ ಗದ್ದೆಯನ್ನು ಧಾರಾಪೂರ್ವಕವಾಗಿ ಬಿಟ್ಟ ದತ್ತಿಯ ವಿವರಗಳನ್ನು ಹೇಳುತ್ತದೆ.[18] ಅರಸೀಕೆರೆ ತಾಲ್ಲೂಕಿನ ಬೆಂಡೆಕೆರೆ ಶಾಸನದಲ್ಲಿ ಸಾವಂತನಹಳ್ಳಿಯ ಮಸಣಗವುಂಡನ ಮದವಣಿಗೆ ಚಂಗವ್ವ ಎಂದು ಹೇಳಿದೆ. ಈ ಚಂಗವ್ವ ಚಂಗಾಳ್ವರ ಹೆಣ್ಣುಮಗಳೆ? ಎಂಬುದಕ್ಕೆ ಯಾವ ವಿವರಗಳೂ ಈ ಶಾಸನದಲ್ಲಿಲ್ಲ.[19] ಹೀಗೆ ಚಂಗಾಳ್ವರು ಹೊಯ್ಸಳ ಪೂರ್ವದಲ್ಲಿ ದಕ್ಷಿಣ ಕರ್ನಾಟಕದ ಬಹುಭಾಗಗಳಲ್ಲಿ ಹರಡಿಕೊಂಡಿದ್ದಂತೆ ಕಾಣುತ್ತದೆ.

೧೧೪೫ರ ಅನಂತರ ಐದು ವರ್ಷಗಳ ತರುವಾಯ ಚಂಗಾಳ್ವರು ಹೊಯ್ಸಳ ನಾಡನ್ನು ಆಕ್ರಮಿಸಿಕೊಳ್ಳಲು ಪ್ರಯತ್ನಿಸಿದ್ದಾರೆ.[20] ನರಸಿಂಹನ ದಂಡನಾಯಕ ಬೋಕಣ (ಬೋಕಿಮಯ್ಯ) ೧೧೫೫ರಲ್ಲಿ ಕೊಂಗ, ಚಂಗ, ಚೋಳ, ಕೇರಳನಾಡುಗಳ ಅರಸುಗಳನ್ನು ಅಡಗಿಸಿದನೆಂದು ತಿಳಿದು ಬರುತ್ತದೆ.[21]ಮತ್ತು ಹೊಯ್ಸಳ ನರಸಿಂಹನು ೧೧೬೯ರಲ್ಲಿ ಚಂಗಾಳ್ವರ ಮೇಲೆ ದಂಡೆತ್ತಿ ಹೋದಾಗ ಅವನ ದಳಪತಿ ಗೋವಿದೇವನು ಪರಾಕ್ರಮದಿಂದ ಯುದ್ಧವೆಸಗಿ ಚಂಗಾಳ್ವನು ಏರಿದ್ದ ಆನೆಯನ್ನು ತನ್ನ ಭರ್ಚಿಯಿಂದ ಗಾಯಗೊಳಿಸಿದ.[22] ಚಂಗಾಳ್ವನನ್ನು ಸೆರೆಹಿಡಿದು ಸಂಕೋಲೆಗಳಿಂದ ಬಂಧಿಸಿದ ವಿಷಯ ಸೊರಬದ ಶಾಸನವೊಂದರಲ್ಲಿದೆ.[23] ಈ ಯುದ್ಧಗಳಲ್ಲಿ ಸೋತು ಚಂಗಾಳ್ವರು ಬಲಹೀನರಾಗಿದ್ದ ಸಮಯದಲ್ಲಿ ಮುಂದೆ ಅರಸನಾಗಿ ಬಂದ ಮಹದೇವ ಚಂಗಾಳ್ವನು ರಾಜಧಾನಿಯನ್ನು ಹುಣಸೂರು ನಾಡಿನ ಬೆಟ್ಟದಪುರದಿಂದ ಕೊಡಗಿನ ಕಿಗ್ಗಟ್ನಾಡಿನ ಪಾಲ್ಪರೆಗೆ ವರ್ಗಾಯಿಸಿದ. ಹೊಯ್ಸಳ ಒಂದನೇ ನರಸಿಂಗನು ಚಂಗಾಳ್ವರ ವಿರುದ್ಧ ಯುದ್ಧ ಮಾಡಿದರೂ ಸಹ ಚಂಗನಾಡಿನವರೊಡನೆ ವೈವಾಹಿಕ ಸಂಬಂಧವನ್ನು ಮಾಡಿಕೊಂಡಿರುವಂತೆ ಕಾಣುತ್ತದೆ. ಅವರ ರಾಣಿ ಚಂಗಲದೇವಿ ಚಂಗಾಳ್ವ ಕುಲದ ರಾಜಕುಮಾರಿಯಾಗಿರಬಹುದು.[24]

ನರಸಿಂಹನ ತರುವಾಯ ಬಂದ ಹೊಯ್ಸಳ ಇಮ್ಮಡಿ ಬಲ್ಲಾಳನು (೨ನೇ ಬಲ್ಲಾಳ : ೧೧೭೩-೧೨೨೦) ಪರಮ ಪರಾಕ್ಷಮಿ ಹಾಗೂ ಮಹಾಸಾಹಸಿ. ಅವನು ೧೧೭೨-೭೩ ರ ನಡುವೆ ಸಿಂಹಾಸನಕ್ಕಾಗಿ ತಂದೆ ನರಸಿಂಹನ ಮೇಲೆ ದಂಗೆಯೆದ್ದು ಮಲೆನಾಡಿನ ಕಡೆ ಹೋದಾಗ, ಅಯ್ಯಾವೊಳೆಯಿಂದ ವಲಸೆ ಬಂದು ಕೊಡಗು ನಾಡಿನಲ್ಲಿ ನೆಲೆಸಿದ್ದ ಬಳೆಗಾರ ಕುಲದ ತಂತ್ರಪಾಲ ಹೆಮ್ಮಡಿಯಣ್ಣನು ಬಲ್ಲಾಳನ ಪರನಿಂತು ಚಂಗಾಳ್ವ ಕೊಂಗಾಳ್ವಾದಿ ಮಲೆಪರನ್ನು ಕೂಡಿಸಿಕೊಂಡು ಬಲ್ಲಾಳನಿಗೆ ಸಿಂಹಾಸನವನ್ನು ಸಾಧಿಸಲು ನೆರವು ನಿಂತು ತರುವಾಯ ಬಲ್ಲಾಳನ ಮಂತ್ರಿಯಾದ. ಶಾಸನದ ಮಾತುಗಳಲ್ಲಿ "ಹೆಮ್ಮಡಿಯಣ್ಣನು ಸಮಸ್ತ ಮಲೆಯ ಪ್ರಜೆಗಾವುಂಡಗಳಂ ಕೊಂಗಾಳ್ವ ಚಂಗಾಳ್ವಾದಿಯಾದ ಮಲೆಯ ಮಾಂಡಲಿಕರುಮಂ ಕಾಣಿಸಿ ತನ್ನಾಳ್ದಂಗೆ ಸಾಮ್ರಾಜ್ಯ ಪಟ್ಟಮಂ ಕಟ್ಟಿಸಿ ಪ್ರಧಾನ ಪದವಿಯಂ ಪಡೆದಂ"[25] ಆ

ಸಮಯದಲ್ಲಿ ಬಲ್ಲಾಳನಿಗೆ ವಿಶಿಷ್ಟವಾಗಿ ನೆರವು ನೀಡಿದವರು ಚಂಗಾಳ್ವರು ಮತ್ತು ಕೊಂಗಾಳ್ವರು.

ರಾಜ್ಯವನ್ನು ಸಾಧಿಸಿಕೊಳ್ಳಲು ತನಗೆ ಚಂಗಾಳ್ವರು ನೆರವು ನೀಡಿದರೂ ಇಮ್ಮಡಿ ಬಲ್ಲಾಳನಿಗೆ ಅವರ ಅಟ್ಟಹಾಸವನ್ನು ಸಹಿಸಿಕೊಳ್ಳಲಾಗಲಿಲ್ಲ. ಚಂಗಾಳ್ವರು ಹೊಯ್ಸಳರ ದ್ವಾರಾವತೀ ಪುರವರಾಧೀಶ್ವರ, ಭುಜಬಲ, ಗಂಡಭೇರುಂಡ ಮುಂತಾದ ಬಿರುದುಗಳನ್ನು ವಹಿಸಿಕೊಂಡು ಮೆರೆಯುತ್ತಿದ್ದುದೇ ಬಲ್ಲಾಳನು ಚಂಗಾಳ್ವರ ಮೇಲೆ ಸೈನ್ಯವೆತ್ತಲು ಕಾರಣ. ಕ್ರಿ.ಶ. ೧೧೭೨ ರ ಹುಣಸೂರು ಶಾಸನವು ಬಲ್ಲಾಳನ ಈ ದಂಡಯಾತ್ರೆಯ ವಿವರಗಳನ್ನು ನೀಡುತ್ತದೆ. ಬಲ್ಲಾಳನ ದಂಡನಾಯಕ ಬೆಟ್ಟದರಸನು ಪಾಲ್ಪರೆ ಕೋಟೆಗೆ ಮುತ್ತಿಗೆ ಹಾಕಿ, ಚಂಗಾಳ್ವ ಅರಸ ಮಹದೇವನನ್ನು ಸಮರದಲ್ಲಿ ಕೊಂದು, ಪಾಲ್ಪರೆಯನ್ನು ವಶಪಡಿಸಿಕೊಂಡು ಅಲ್ಲಿಯೇ ಬೀಡುಬಿಟ್ಟು ಅಲ್ಲಿಯ ಪಟ್ಟಣವನ್ನು ವಿಸ್ತರಿಸಿದನು. ಮಹದೇವ ಚಂಗಾಳ್ವನ ತರುವಾಯ ಪೆಮ್ಮವೀರ ಚಂಗಾಳ್ವನು ಪಾಲ್ಪರೆಯನ್ನು ವಶಪಡಿಸಿಕೊಳ್ಳಲು ಸರ್ವಪ್ರಯತ್ನ ಮಾಡಿದನು. ಕುಲೋತ್ತುಂಗ ಚೋಳ ಚಂಗಾಳ್ವ ಪೆಮ್ಮವೀರರಸ ಎಂಬುದಾಗಿ ತನ್ನನ್ನು ಕರೆದುಕೊಂಡಿರುವ ಇವನು ಕೊಡುಗುನಾಡಿನ ಎಲ್ಲಾ ಕೊಡವರನ್ನೂ ಸಂಘಟಿಸಿಕೊಂಡು ಅವರ ನೆರವಿನಿಂದ ಬೆಟ್ಟದರಸನನ್ನು ಪಾಲ್ಪರೆಯಿಂದ ಓಡಿಸಲು ಮುಂದಾದ. ಬೆಟ್ಟದರಸನಿಗೂ ಪೆಮ್ಮವೀರ ಚಂಗಾಳ್ವನಿಗೂ ನಡೆದ ಈ ಪಾಲ್ಪರೆಯ ಯುದ್ಧದಲ್ಲಿ ಮೊದಲು ಕೊಡವರಿಗೆ ಜಯಲಭಿಸುವಂತೆ ಕಂಡರೂ ಕೊನೆಯಲ್ಲಿ ಹೊಯ್ಸಳವೀರ ಮಾದಯ್ಯನಾಯಕನ ಸಾಹಸದಿಂದ ಬೆಟ್ಟದರಸನಿಗೆ ಜಯವಾಯಿತು. ಆದರೆ ಯುದ್ಧದಲ್ಲಿ ಮಾದಯ್ಯನಾಯಕ ಮಡಿದ. ಚಂಗಾಳ್ವರಿಗೆ ಕೊಡವರ ನಿಕಟ ಸಂಪರ್ಕ ಇಲ್ಲಿಂದ ಪ್ರಾರಂಭವಾಗುವುದಲ್ಲದೆ ಕೊಡವರ ಹೆಸರು ನಿರ್ದಿಷ್ಟವಾಗಿ ಮೊದಲ ಬಾರಿಗೆ ಕಾಣುವುದು ಪಾಲ್ಪರೆ ಯುದ್ಧಕ್ಕೆ ಸಂಬಂಧಪಟ್ಟ ಹುಣಸೂರು ಶಾಸನದಲ್ಲಿ.**[26]** ಈ ಯುದ್ಧದಲ್ಲಿ ಹೊಯ್ಸಳರ ಕಡೆಯ ಮಾಚದಂಡನಾಯಕನು ಚಂಗಾಳ್ವನು ಕುಳಿತಿದ್ದ ಆನೆಯ ಮೇಲೆ ತನ್ನ ಅಶ್ವವನ್ನು ನುಗ್ಗಿಸಿ ಚಂಗಾಳ್ವನ ಛತ್ರವನ್ನು ಕಸಿದುಕೊಂಡನೆಂದು ಹೇಳಲಾಗಿದೆ.**[27]** ಪಾಲ್ಪರೆ ಸೋಲಿನ ನಂತರ ಕುಲೋತ್ತುಂಗ ಚೋಳ ಚಂಗಾಳ್ವನೆಂದು ಕರೆದುಕೊಳ್ಳುವ ಪೆಮ್ಮವೀರರಸನ ಹೆಸರು ಕ್ರಿ.ಶ. ೧೧೮೬-೮೭ ರ ಶಾಸನದಲ್ಲಿ ಸಿಕ್ಕುತ್ತದೆ.**[28]** ಆ ತರುವಾಯ ಅವನ ಬಗ್ಗೆ ಯಾವ ಸುದ್ದಿಯೂ ತಿಳಿದುಬರುವುದಿಲ್ಲ. ಅವನ ಬಳಿಕ ಸುಮಾರು ಎಪ್ಪತ್ತು ವರ್ಷಗಳ ಕಾಲ ಚಂಗಾಳ್ವರ ಇತಿಹಾಸದ ಮೇಲೆ ಕತ್ತಲು ಕವಿದಿದೆ.

ಹೊಯ್ಸಳ ಸೋಮೇಶ್ವರನ ಕಾಲದಲ್ಲಿ (೧೨೩೪-೧೨೬೦) ಚಂಗಾಳ್ವ ಸೋಮದೇವ ಮತ್ತು ಬೊಪ್ಪದೇವ ಎಂಬಿಬ್ಬರು ಅರಸರು ಒಟ್ಟಿಗೆ ಶ್ರೀರಂಗಪಟ್ಟಣವನ್ನು ಆಳಿದರೆಂದು ತಿಳಿದು ಬರುತ್ತದೆ. ಈ ಸಂಬಂಧದಲ್ಲಿ ನಾವು ಆಗಿನ ರಾಜಕೀಯ ಪರಿಸ್ಥಿತಿಯನ್ನು ಗಮನಿಸಬಹುದು. ಆಗ ಹೊಯ್ಸಳರು ಕರ್ನಾಟಕ ಭಾಗದಲ್ಲಿ ಬಲಯುತವಾದ ರಾಜ್ಯವನ್ನು ಹಳೇಬೀಡಿನಿಂದ ಆಳುತ್ತಿದ್ದರು. ಶ್ರೀರಂಗಪಟ್ಟಣದಲ್ಲಿ ಮೈಸೂರು ಅರಸರು ರಾಜ್ಯಸ್ಥಾಪನೆಯನ್ನಿನ್ನೂ ಮಾಡಿರಲಿಲ್ಲ. ಅಲ್ಲದೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯೂ ಆಗಿರಲಿಲ್ಲ. ಹೊಯ್ಸಳ ಸೋಮೇಶ್ವರನು ಬಲಹೀನವಾಗಿದ್ದ ಚೋಳರಾಜ್ಯದ ಭಾಗವನ್ನು ಗೆದ್ದುಕೊಂಡು ಸುಮಾರು ೧೨೩೯ರಲ್ಲಿ ತಮಿಳುನಾಡಿನ ತಿರುಚನಾಪಲ್ಲಿ ಜಿಲ್ಲೆಯಲ್ಲಿ ಶ್ರೀರಂಗ ಕ್ಷೇತ್ರಕ್ಕೆ ಉತ್ತರದಲ್ಲಿರುವ ಕಣ್ಣಾನೂರು ಅಥವಾ ವಿಕ್ರಮಪುರವನ್ನು ನೆಲೆವೀಡನ್ನಾಗಿ ಮಾಡಿಕೊಂಡಿದ್ದ.**[29]** ಸೋಮೇಶ್ವರನು ಕಣ್ಣಾನೂರಿನಲ್ಲಿ ಬೀಡುಬಿಟ್ಟಿದ್ದ ಕಾಲದಲ್ಲಿ ತನ್ನ ಸಾಮಂತರಾಗಿದ್ದ ಈ ಚಂಗಾಳ್ವರಸರಿಗೆ ಶ್ರೀರಂಗಪಟ್ಟಣದ ಆಡಳಿತವನ್ನು ಒಪ್ಪಿಸಿದ್ದ. ಇವರು ಚೋಳರಿಗೂ, ಕೇರಳರಿಗೂ, ಕದಂಬರಿಗೂ ಸಿಂಹಪ್ರಾಯರಾಗಿದ್ದರೆಂದು ಹೇಳಲಾಗಿದೆ. ರಾಮನಾಥಪುರದ ದೇವಾಲಯದ ಕೈಲಾಸರೆಂಬ ಅರ್ಚಕರು ಶ್ರೀರಂಗಪಟ್ಟಣದಲ್ಲಿದ್ದ ಈ ಚಂಗಾಳ್ವ ಅರಸರಲ್ಲಿಗೆ ಹೋಗಿ ದೇವಸ್ಥಾನದ ಎಪ್ಪತ್ತೆರಡು ಎಮ್ಮೆಗಳ ಹಾಲಿನಿಂದ ಬರುವ ಇನ್ನೂರು ಗದ್ಯಾಣಗಳು ದೇವರ ಸೇವೆಗೆ ಸಾಲದೆಂದು ಹೇಳಿಕೊಂಡಾಗ, ಅವರು ದೇವಸ್ಥಾನದ ಪರಿಸ್ಥಿತಿಯನ್ನು ಕೇಳಿ

ರಾಮನಾಥಪುರಕ್ಕೆ ೧೨೪೫ರಲ್ಲಿ ಹೋಗಿ ದೇವಸ್ಥಾನವನ್ನು ದುರಸ್ತು ಮಾಡಿಸಿ ಮಾವನೂರನ್ನು ಉಂಬಳಿಯಾಗಿ ನೀಡಿದರು. ಚಂಗಾಳ್ವರ ನೆರವಿನಿಂದ ಉತ್ತೇಜಿತರಾದ ಅರ್ಚಕರು ಏಳು ವರ್ಷಗಳ ತರುವಾಯ ಅಂದರೆ ೧೨೫೨ರಲ್ಲಿ ಹೊಯ್ಸಳ ಸಾರ್ವಭೌಮ ಸೋಮೇಶ್ವರನಲ್ಲಿಗೆ ಹೋಗಿ ಚಂಗಾಳ್ವರು ನೀಡಿದ್ದ ಉಂಬಳಿ ಗ್ರಾಮವನ್ನು ದೇವಸ್ಥಾನಕ್ಕೆ ಸ್ಥಿರಗೊಳಿಸಿಕೊಂಡರೆಂದು ಹೇಳಲಾಗಿದೆ. ಆ ಸಂದರ್ಭದಲ್ಲಿ ಹೊಯ್ಸಳ ಸೋಮೇಶ್ವರನು ಚಂಗಾಳ್ವ ಬೊಪ್ಪದೇವ, ಸೋಮದೇವ, ಅವರ ರಾಯಸಕೂಸುಗಳು (ರಾಜಕುಮಾರರು) ಹಾಗೂ ಪರಿವಾರದೊಡನೆ ರಾಮನಾಥಪುರಕ್ಕೆ ಬಂದು ಮಾವನೂರಿನಲ್ಲಿ ನಂದೀ ಕಂಬವನ್ನು ಪ್ರತಿಷ್ಠಾಪಿಸಿ ರಾಮನಾಥ ದೇವಾಲಯದಲ್ಲಿ ಆ ಬಗ್ಗೆ ಶಾಸನವನ್ನು ನಡೆಸಿದ್ದಾನೆ.**[30]** ಸೋಮದೇವ ಮತ್ತು ಬೊಪ್ಪದೇವ ಚಂಗಾಳ್ವರ ತರುವಾಯ ಸುಮಾರು ಮುನ್ನೂರು ವರ್ಷಗಳ ತನಕ ಚಂಗಾಳ್ವ ಅರಸರ ಹಾಗೂ ಅವರ ಚಟುವಟಿಕೆಗಳ ಬಗ್ಗೆ ಶಾಸನಗಳಲ್ಲಿ ಏನೊಂದು ಮಾಹಿತಿಯೂ ಸಿಗುವುದಿಲ್ಲ. ಆದರೆ ೧೫ನೆಯ ಶತಮಾನದ್ದಿರಬಹುದಾದ ಮಿರ್ಲೆಯ ಶಾಸನವೊಂದರಲ್ಲಿ ತೆಂಗಾಳ್ವ ದೇವನು ಚನ್ನಿಗರಾಯ ದೇವಾಲಯಕ್ಕೆ ದತ್ತಿಕೊಟ್ಟ ಸಂಗತಿ ಇದೆ.**[31]** ಇಲ್ಲಿ ಚಂಗಾಳ್ವಕ್ಕೆ ಬದಲಿ ತೆಂಗಾಳ್ವ ಎಂದಿದ್ದು, ಇದು ಲಿಪಿಕಾರನ ದೋಷದಿಂದಾದುದಿರಬಹುದೆಂದು ಕಾಣುತ್ತದೆ. ಈ ಉಲ್ಲೇಖದ ಅನಂತರದಲ್ಲಿ, ಅಂದರೆ- ೧೬ನೇ ಶತಮಾನದ ಪ್ರಾರಂಭದಲ್ಲಿ ಚಂಗಾಳ್ವರು ಮತ್ತೆ ಕಾಣಿಸಿಕೊಳ್ಳುತ್ತಾರೆ ಎಂಬುದಾಗಿ ಬಿ.ಎಲ್.ರೈಸ್ ತಿಳಿಸುತ್ತಾರೆ.**[32]** ಆದರೆ ಬಿ.ಆರ್.ಗೋಪಾಲ್ ಅವರು *ಎಪಿಗ್ರಾಫಿಯ ಕರ್ನಾಟಕ*ದ ಪರಿಷ್ಕೃತ ಆವೃತ್ತಿಯ ಕೊಡಗು ಜಿಲ್ಲೆ ಸಂಪುಟಕ್ಕೆ ಬರೆದಿರುವ ಪೀಠಿಕೆಯಲ್ಲಿ ಹೀಗೆ ಹೇಳಿದ್ದಾರೆ.

"೧೩ನೆಯ ಶತಮಾನದ ಶಾಸನಗಳಲ್ಲಿ ಈ ವಂಶದ ಮುನಿವರಾದಿತ್ಯ, ಮಲ್ಲಿದೇವ ಮತ್ತು ಹರಿಹರದೇವ ಎಂಬ ಮೂವರು ಮಾಂಡಲಿಕರ ಹೆಸರುಗಳಿವೆ. ೭ನೆಯ ನಂಬರಿನ ಶಾಸನ ಸಹ ಒಡೆದು ಹೋಗಿವೆ. ಇದರಲ್ಲಿ ಮುನಿವರಾದಿತ್ಯ ಎಂಬ ಹೆಸರು ಎರಡು ಸಲ ಉಕ್ತವಾಗಿದೆ. ಒಮ್ಮೆ ಅದು 'ಚಂಗಾಳುವ' ಎಂಬ ಹೆಸರಿನೊಡನೆ ಕೂಡಿಕೊಂಡಿದೆ. ಈ ಮುನಿವರಾದಿತ್ಯನು ಚಂಗಾಳ್ವನಾಗಿರಬಹುದೆಂದು ಸಂದೇಹಾಸ್ಪದವಾಗಿಯೇ ಊಹಿಸಬಹುದು. ೫೦ ಮತ್ತು ೫೧ನೆಯ ಶಾಸನಗಳೂ ಅಷ್ಟೆ. ಇವರೆಡರಲ್ಲಿಯೂ ಮಲ್ಲಿದೇವ ಮತ್ತು ಹರಿಹರ ದೇವರು ನಮೂದಿಸಲ್ಪಟ್ಟಿದ್ದಾರೆ. ಇವರು ಚಂಗಾಳ್ವರೆಂದು ಅಭಿಪ್ರಾಯ ಪಡಲಾಗಿದೆ. ಮಲ್ಲಿದೇವನನ್ನು ೧೨೮೦ನೆಯ ನಾರಣಪುರದ ಶಾಸನದಲ್ಲಿ **(E.C.V.BI.೮೯)** ಮಹಾ ಮಂಡಲೇಶ್ವರ ಕುಲೋತ್ತುಂಗ ಚೋಲ ಶ್ರೀ ವೀರ ಚಂಗಾಳ್ವನೆಂದು ಕರೆಯಲಾಗಿದೆ. ಈ ಸಂಪುಟದ ಶಾಸನಗಳಲ್ಲಿ ಮಲ್ಲಿದೇವ ಮತ್ತು ಹರಿಹರ ದೇವರಿಬ್ಬರೂ ಜೊತೆಯಾಗಿಯೇ ಇದ್ದಾರೆ. ೧೨೯೬ನೆಯ ವರ್ಷದ ಶಾಸನದಲ್ಲಿ (ನಂ೮೦) ಮಾತ್ರ ಹರಿಹರ ದೇವನೊಬ್ಬನೇ ಆಳುತ್ತಿದ್ದುದಾಗಿ ಹೇಳಿದೆ. ಇದರಿಂದ ಈತನು ಮಲ್ಲಿದೇವನ ಮಗನಾಗಿದ್ದು ತಂದೆಯ ಆಳ್ವಿಕೆಯ ಕೊನೆಯ ವರ್ಷಗಳಲ್ಲಿ ಅವನೊಡನೆ ತಾನೂ ರಾಜ್ಯವಾಳತೊಡಗಿದಂತೆ ತೋರುತ್ತದೆ. ೮೦ನೆಯ ಈ ಶಾಸನದಲ್ಲಿ ಇವನನ್ನು ಹರಿಹರದೇವ ಚೋಲದೇವನೆಂದು ಕರೆಯಲಾಗಿದೆ. ತ್ರುಟಿತವಾದ ೬೦ನೆಯ ನಂಬರಿನ ಶಾಸನ ಸಹ ಬಹುಶಃ ಈತನದೇ ಆಗಿರಬಹುದು.**[33]**

೬

ಪಿರಿಯಾಪಟ್ಟಣದ ತಾಲ್ಲೂಕು ಹಿರೇಮಳಲಿಯ ೧೬ನೆಯ ಶತಮಾನದ ಸಂಸ್ಕೃತ ಶಾಸನದಲ್ಲಿ ಚಂಗನಾಡನ್ನು ಆಳಿದ ಉತ್ತರೋತ್ತರ ಅರಸರ ಹೆಸರುಗಳಿವೆ. ಅವರ ವಂಶಾವಳಿಯಲ್ಲಿ ಅನುಕ್ರಮವಾಗಿ ಚಂಗಾಳ್ವ, ಅವನ ಮಗ ನಾಗ, ಅವರ ಮಗ ರಂಗ, ರಂಗನ ಮಗ ಪಿರಿಯಣ್ಣ, ಪಿರಿಯಣ್ಣನ ಇಬ್ಬರು ಮಕ್ಕಳು ನಂಜ (ವೀರನಂಜಯ್ಯದೇವ) ಮತ್ತು ಮಹದೇವ ಕಂಡು ಬರುತ್ತಾರೆ.**[34]** ನಂಜ ಮತ್ತು ಮಹದೇವ ಚಂಗಾಳ್ವರಿಬ್ಬರೂ ಒಟ್ಟಿಗೆ ೧೫೦೩ ರಿಂದ ೧೫೨೫

ರವರೆಗೆ ಆಳಿದರೆಂದು ತಿಳಿದುಬರುತ್ತದೆ.[35] ಮಹಾದೇವನನ್ನು ಹಿರೇಮಳಲಿ ಶಾಸನದಲ್ಲಿ ಮಹಾಮಂಡಲೇಶ್ವರನೆಂದು, ಶ್ರವಣಬೆಳಗೊಳದ ಶಾಸನದಲ್ಲಿ ಮಹೀಪಾಲನೆಂದೂ ಕರೆಯಲಾಗಿದೆ.[36] ಮಹಾದೇವ ಚಂಗನಾಡಿನ ಮಹೀಪಾಲನಾಗಿದ್ದರೂ ವಿಜಯನಗರದ ಅರಸರ ಅಧೀನನಾಗಿಯೂ ಮಹಾಮಂಡಲೇಶ್ವರನ ಸ್ಥಾನವನ್ನೇ ಹೊಂದಿದ್ದ. ಅವನ ಕಾಲಕ್ಕಾಗಲೇ ಹೊಯ್ಸಳ ಸಾಮ್ರಾಜ್ಯ ಪತನಗೊಂಡು ಸುಮಾರು ೧೭೦ ವರ್ಷಗಳಾಗಿದ್ದವು. ವಿಜಯನಗರದಲ್ಲಿ ಆಗ ಸಾಳುವ ಸಂತತಿಯ ವೀರನರಸಿಂಹ (೧೫೦೫-೦೯) ಆಳುತ್ತಿದ್ದ. ಮಹಾದೇವನ ಸಹೋದರ ನಂಜಯ್ಯನನ್ನು ಶಾಸನಗಳಲ್ಲಿ ವೀರನಂಜಯ್ಯ ದೇವನೆಂದೂ ಕರೆಯಲಾಗಿದೆ. ಅವನು ತನ್ನ ಹೆಸರಿನಲ್ಲಿ ನಂಜರಾಜ ಪಟ್ಟಣವನ್ನು ಕೊಡಗಿನಲ್ಲಿ ಕಾವೇರಿಯ ಉತ್ತರದ ಕಡೆ ಕಟ್ಟಿಸಿದ.

ನಂಜರಾಜನು (೧೫೦೭-೧೫೩೩) ಅಧಿಕಾರಕ್ಕೆ ಬಂದ ಕೆಲವು ವರ್ಷಗಳಲ್ಲಿಯೇ ಎಂದರೆ ೧೫೦೯ರಲ್ಲಿ ಕೃಷ್ಣದೇವರಾಯನು ಪಟ್ಟಕ್ಕೆ ಬಂದನು. ಆತನು ಆಡಳಿತ ವಹಿಸಿಕೊಂಡ ಕೂಡಲೇ ಉಮ್ಮತ್ತೂರಿನ ಮೇಲೆ ದಂಡೆತ್ತಿ ಬಂದಾಗ ಹೊಯ್ಸಳನಾಡಿಗೂ ಬಂದಿದ್ದನೆಂದು ಚರಿತ್ರೆಯಲ್ಲಿ ವರ್ಣಿತವಾಗಿದೆ. ಬಹುಶಃ ಆ ಸಂದರ್ಭದಲ್ಲಿ ಸ್ವತಂತ್ರನಾಗಿಯೇ ಇರಲು ಪ್ರಯತ್ನಿಸಿದ ಚಂಗಾಳ್ವ ನಂಜರಾಜನಿಗೂ ಕೃಷ್ಣದೇವರಾಯನ ಸೈನ್ಯಕ್ಕೂ ಯುದ್ಧ ನಡೆದಿರಬಹುದು.[37] ವಿಜಯನಗರದ ಅರಸರ ಅಧೀನಕ್ಕೆ ಚಂಗಾಳ್ವರು ಒಳಗಾದ ಕಾರಣದಿಂದಾಗಿ ಚಂಗಾಳ್ವ ಭೂಮಿಯಲ್ಲೆಲ್ಲ ಅವರು ಹಾಕಿಸಿದ ಶಾಸನಗಳು, ಅವರು ಕಟ್ಟಿಸಿದ ದೇವಾಲಯಗಳು, ಅವರ ಹೆಸರಿನ ಊರುಗಳು ಎಲ್ಲೆಂದರಲ್ಲಿ ಕಾಣಸಿಗುತ್ತವೆ. ವಿಜಯನಗರದ ರಾರೋ ಅಥವಾ ಪ್ರತಿನಿಧಿಗಳೋ ಆಗಿರಬಹುದಾದ ಬುಕ್ಕರಾಯ, ಮಲ್ಲಿಕಾರ್ಜುನ, ನರಸಣ್ಣನಾಯಕ ಕೃಷ್ಣದೇವರಾಯ, ಲಕ್ಕಣ್ಣವೊಡೆಯ, ಹಂಪರಸ, ವೀರನರಸಿಂಹ, ಕೃಷ್ಣರಾಮನಾಯಕ, ಮಹಾಮಂಡಲೇಶ್ವರ ರಾಮರಾಜರಾಯ, ತಿರುಮಲರಾಜಯ್ಯದೇವರ ಹೆಸರುಗಳು ಈ ಸುತ್ತಿನ ಶಾಸನಗಳಲ್ಲಿ ದೊರೆಯುತ್ತವೆ. ಪಿರಿಯಾಪಟ್ಟಣ ತಾಲ್ಲೂಕಿನ ಮುತ್ತೂರು, ಗುಂಡುರಾಜಪಟ್ಟಣ ತೆಲುಗನಕುಪ್ಪೆ, ತಿರುಮಲಾಪುರಗಳನ್ನು ಕುರಿತ ಐತಿಹ್ಯಗಳು ವಿಜಯನಗರದ ಅರಸಸಂಬಂಧ ಕಥೆಗಳನ್ನು ಹೇಳುತ್ತವೆ. ವಿಜಯನಗರದ ಸೈನಿಕರೋ ಅಥವಾ ಸೈನಿಕರ ಜೊತೆಯಲ್ಲಿ ಬಂದಿದ್ದವರೋ ಆಗಿರಬಹುದಾದ ತೆಲುಗು ಬಣಜಿಗರು, ವೀರಶೈವರು, ಶ್ರೀವೈಷ್ಣವರು, ದೊಂಬಿದಾಸರು ಈ ವಲಯದಲ್ಲೆಲ್ಲ ಹರಡಿಕೊಂಡಿದ್ದಾರೆ. ಪಿರಿಯಾಪಟ್ಟಣದ ತಾಲ್ಲೂಕಿನಲ್ಲಿರುವ ಹಾಳುಬಿದ್ದರುವ ಗುಂಡುರಾಜ ಪಟ್ಟಣವು ವಿಜಯನಗರದ ಪ್ರತಿನಿಧಿ ಗುಂಡುರಾಜನಿಂದ ಕಟ್ಟಲ್ಪಟ್ಟ ಪಟ್ಟಣವಾಗಿರುವುದರರ ಜೊತೆಗೆ ಈ ಪಟ್ಟಣದ ಸಮೀಪದಲ್ಲಿರುವ ಚಿಕ್ಕಹೊನ್ನೂರು ಗುಡ್ಡದ ಮೇಲೆ ಗುಂಡುರಾಜನು ಶ್ರೀ ವೆಂಕಟರಮಣಸ್ವಾಮಿಯನ್ನು ಪ್ರತಿಷ್ಠಾಪಿಸಿದ್ದಾಗಿಯೂ ಆ ಸಂದರ್ಭದಲ್ಲಿ ವಿಜಯನಗರದಿಂದ ಪುರಂದರದಾಸರು ಇಲ್ಲಿಗೆ ಬಂದಿದ್ದರೆಂದೂ ಇಲ್ಲಿನ ಜನಶ್ರುತಿಯಿಂದ ತಿಳಿದು ಬರುತ್ತದೆ. ಆ ಸಂದರ್ಭದಲ್ಲಿ ಪುರಂದರದಾಸರು 'ಕಂಡು ಕಂಡು ನೀ ಎನ್ನ ಕೈಬಿಡುವರೆ' ಎಂಬ ದೇವರ ನಾಮವನ್ನು ಕಟ್ಟಿ ಹಾಡಿದರೆಂದೂ 'ಹೊನ್ನೂರು ಪುರವಾಸ' ಎಂಬ ಪ್ರಯೋಗ ಇಲ್ಲಿನ ಚಿಕ್ಕ ಹೊನ್ನೂರಮ್ಮ, ಇಲ್ಲಿನ ವಿಷ್ಣುವನ್ನು ಕುರಿತದ್ದೆಂದೂ ಹೇಳುತ್ತಾರೆ. ಗುಂಡುರಾಜನ ಹೆಸರನ್ನು ಹೇಳುವ ಯಾವ ಲಿಖಿತ ಆಧಾರಗಳು ಇಲ್ಲದಿದ್ದರೂ ಗುಂಡುರಾಜ ಪಟ್ಟಣ, ಗುಂಡುಪಟ್ಟದ ಕೆರೆಗಳ ಪಳಯುಳಿಕೆಗಳು ಅವನು ಇಲ್ಲಿದ್ದುದಕ್ಕೆ ಸಾಕ್ಷಿಯಾಗಿದೆ. ಈ ಅವಧಿಯಲ್ಲಿ ಚಂಗಾಳ್ವನೆಲದಲ್ಲಿ ವೀರಶೈವ ಹಾಗೂ ಶ್ರೀ ವೈಷ್ಣವ ಧರ್ಮಗಳು ತಲೆ ಎತ್ತಿದ್ದಲ್ಲದೆ ಪರಸ್ಪರ ಪೈಪೋಟಿ ಹಾಗೂ ದ್ವೇಷಕ್ಕೂ ಕಾರಣವಾದಂತೆ ಮುತ್ತೂರು ಹಾಗೂ ಹೊನ್ನೂರುಗಳ ಬಗೆಗಿರುವ ಐತಿಹ್ಯಗಳಿಂದ ತಿಳಿದು ಬರುತ್ತದೆ. ಅಲ್ಲದೆ ಈ ಅವಧಿಯಲ್ಲಿ ಜೈನಧರ್ಮ ತಬ್ಬಲಿಯಾದುದು ಮಾತ್ರವಲ್ಲ ಬೆಟ್ಟದಪುರದ ಮಲ್ಲಿನಾಥ ಬಸದಿ ಮಲ್ಲಿಕಾರ್ಜುನಸ್ವಾಮಿ ದೇವಾಲಯವಾಗಿ ಪರಿವರ್ತಿತವಾಯಿತು. ಚಂಗಾಳ್ವರು ಮಲ್ಲಿಕಾರ್ಜುನಸ್ವಾಮಿಯನ್ನು ತಮ್ಮ ಕುಲದೇವವನ್ನಾಗಿ ಸ್ವೀಕರಿಸಿದರು. ನಂಜರಾಜಪಟ್ಟಣದಿಂದ ಆಳ್ವಿಕೆ ನಡೆಸುತ್ತಿದ್ದ ನಂಜಯ್ಯನು ತನ್ನ ಕುಲದೈವವಾದ ಶ್ರೀಗಿರಿಯ

(ಬೆಟ್ಟದಪುರದ ಬೆಟ್ಟ) ಅನ್ನದಾನಿ ಮಲ್ಲಿಕಾರ್ಜುನ ದೇವಾಲಯಕ್ಕೆ ಅಲ್ಪ ನಾಯಕನಹಳ್ಳಿಯನ್ನು ೧೫೨೧ರಲ್ಲಿ ನೀಡಿದ್ದಾನೆ.**[38]**

ನಂಜಯ್ಯದೇವನ ತರುವಾಯ ಅವನ ಮಗ ನಂಜುಂಡನು ೧೫೨೫ ರಿಂದ ೧೫೪೦ ರವರೆಗೆ ನಂಜರಾಜಯಪಟ್ಟಣದಿಂದ ರಾಜ್ಯಭಾರ ಮಾಡಿದ. ಅವನ ಬಗ್ಗೆ ವಿಶೇಷ ಮಾಹಿತಿಗಳೇನೂ ಶಾಸನಗಳಲ್ಲಿ ದೊರೆಯುವುದಿಲ್ಲ. 'ರಾಮವಿಜಯ' ಕಾವ್ಯವನ್ನು ಬರೆದ ರಾವಂದೂರು ದೇವಪ್ಪ ಕವಿಯು ತಾನು 'ಹೊಯ್ಸಳ ದೇಶಕ್ಕೆ ಒಪ್ಪುವ ಚಂಗನಾಡ ನಡುವೆ' ಇರುವ ರಾವಂದೂರಿನಿಂದ ನಂಜರಾಜ ಪಟ್ಟಣಕ್ಕೆ ಹೋಗಿ ನಂಜುಂಡರಸನ ಆಶ್ರಯದಲ್ಲಿ ಕಾವ್ಯವನ್ನು ರಚಿಸಿರುವುದಾಗಿ ತಿಳಿಸುತ್ತಾನೆ.**[39]** ನಂಜುಂಡ ಚಂಗಾಳ್ವನು ಜೈನಧರ್ಮಕ್ಕೆ ಹಾಗೂ ಕನ್ನಡ ಸಾಹಿತ್ಯಕ್ಕೆ ನೀಡಿರುವ ಪ್ರೋತ್ಸಾಹ ಇಲ್ಲಿ ಅಭಿವ್ಯಕ್ತವಾಗಿದೆ. ನಂಜುಂಡರಸನು ನಂಜರಾಜಪಟ್ಟಣದಲ್ಲಿರುವಾಗಲೇ ಪಿರಿಯಾಪಟ್ಟಣವನ್ನು ಮಣ್ಣಿನ ಕೋಟೆ ಸಮೇತ ಕಟ್ಟಿದ. ಆ ಸಂಬಂಧವಾದ ಐತಿಹ್ಯದ ಪ್ರಕಾರ ಅವನು ಹನಗೋಡಿಗೆ ಹೋಗುತ್ತಿದ್ದಾಗ ದಾರಿಯಲ್ಲಿ ಮೊಲವೊಂದು ಕುದುರೆಯ ಪಾದವನ್ನು ಕಚ್ಚಿ ಕುದುರೆಯನ್ನು ಬೆದರಿಸುತ್ತಿದ್ದುದನ್ನು ಕಂಡು ಅದು ಪಟ್ಟಣವನ್ನು ಕಟ್ಟಲು ಯೋಗ್ಯವಾದ ಸ್ಥಳವೆಂದು ತಿಳಿದು ಅಲ್ಲಿ ಊರನ್ನು ಸ್ಥಾಪಿಸಿ ಕೋಟೆಯನ್ನು ಕಟ್ಟಿದ. ಈ ಸ್ಥಳಕ್ಕೆ ಪೂರ್ವದಲ್ಲಿ ಸಿಂಗಪಟ್ಟಣವೆಂಬ ಹೆಸರಿದ್ದು ಕರಿಕಾಲ ಚೋಳನು ಅಲ್ಲಿ ಒಂದು ಕೆರೆಯನ್ನೂ ಈಶ್ವರ ದೇವಾಲಯವನ್ನೂ ಕಟ್ಟಿಸಿದನೆಂದೂ ಹೇಳಲಾಗಿದೆ.**[40]**

ನಂಜುಂಡರಸ ಚಂಗಾಳ್ವನ ಮಗ ಶ್ರೀಕಂಠನು ಪ್ರಖ್ಯಾತನಾಗಿದ್ದು ರಾಜಾಧಿರಾಜ ಪರಮೇಶ್ವರ ಎಂಬ ಬಿರುದನ್ನು ತಾಳಿದ್ದ.**[41]**ಅವನನ್ನು ಶ್ರೀಕರಂಠರಸ, ಶ್ರೀಕಂಠವೊಡೆಯ ಎಂದೂ ಕರೆಯಲಾಗಿದೆ. ಅವನು ೧೫೪೦-೧೫೬೦ರ ಅವಧಿಯಲ್ಲಿ ರಾಜ್ಯಭಾರ ಮಾಡಿದನು. ಅವನು ನಂಜರಾಜ ಪಟ್ಟಣದ ಅರಸನಾಗಿದ್ದನೆಂದು ೧೫೪೫ರ ದೊಡ್ಡ ಬೇಲಾಳು ಶಾಸನ ತಿಳಿಸುತ್ತದೆ.**[42]** ಶ್ರೀಕಂಠನ ಮಗ ವೀರರಾಜನನ್ನು ಸಹ ನಂಜರಾಜ ಪಟ್ಟಣದ ಅರಸನೆಂದು ಕರೆಯಲಾಗಿದೆ. ಅವನಿಗೆ ವೀರರಾಜಯ್ಯ ಹಾಗೂ ಚಿಕ್ಕರಾಜಯ್ಯ ಎಂಬ ಹೆಸರುಗಳಿದ್ದವು. ಅವನ ಆಳ್ವಿಕೆ ೧೫೬೦ರಿಂದ ೧೫೮೫ ರವರೆಗೆ, ಬಸವಾಪಟ್ಟಣದ ೧೫೭೮ರ ಶಾಸನದಲ್ಲಿ ಅವನ ಮಗಳನ್ನು ಮಹಾಮಂಡಲೇಶ್ವರ ರಾಮರಾಜಯ್ಯದೇವ ಮಹಾ ಅರಸು ಮದುವೆಯಾಗಿ ವಧುವಿನ ಪಲ್ಲಕ್ಕಿಯುಂಬಳಿಯಾಗಿ ಬಸವಾಪಟ್ಟಣ ಮತ್ತು ಕೊಣನೂರುಗಳನ್ನು ಕೊಟ್ಟನೆಂದು ದಾಖಲೆಯಿದೆ.**[43]** ಈ ರಾಮರಾಯ ಶ್ರೀರಂಗಪಟ್ಟಣದಲ್ಲಿ ವಿಜಯನಗರದ ಪ್ರತಿನಿಧಿಯಾಗಿ ನೇಮಕವಾಗಿದ್ದವನು. ಅವನು ವಿಜಯನಗರದ ಅರವೀಡು ಸಂತತಿಯ ಒಂದನೇ ತಿರುಮಲರಾಯನ (೧೫೭೦-೧೫೭೪) ಎರಡನೆಯ ಮಗ.**[44]** ಆದ್ದರಿಂದ ಅವನನ್ನು ದೊಡ್ಡ ಬೇಲಾಳು ಶಾಸನದಲ್ಲಿ 'ಮಹಾ ಮಂಡಲೇಶ್ವರ' 'ಮಹಾ ಅರಸು' ಎಂದು ಕರೆಯಲಾಗಿದೆ.

ವೀರರಾಜಯ್ಯನ ತಮ್ಮ (ಶ್ರೀಕಂಠನ ಎರಡನೇ ಮಗ) ಪೆರಿಯರಾಜ ರುದ್ರಗಣ (ಕ್ರಿ.ಶ. ೧೫೮೫-೧೬೨೫) ನಂಜರಾಜ ಪಟ್ಟಣದಲ್ಲಿ ಆಳುತ್ತಿದ್ದ. ಕ್ರಿ.ಶ. ೧೬೦೦ರ ಹಾರನಹಳ್ಳಿ ಶಾಸನದಿಂದ ಅವನ ತಾಯಿ ವಲ್ಲಭಾಜಮ್ಮನೆಂದು ತಿಳಿದು ಬರುತ್ತದೆ.**[45]** ಇವನು ಪಿರಿಯಾಪಟ್ಟಣದ ಮಣ್ಣಿನ ಕೋಟೆಗೆ ಬದಲಾಗಿ ಕಲ್ಲಿನಕೋಟೆಯನ್ನು ಕಟ್ಟಿಸಿ ಪಿರಿಯಾ ಪಟ್ಟಣವನ್ನು ಭದ್ರಗೊಳಿಸಿದ. ಇವನ ಕಾಲದಲ್ಲಿ (ಕ್ರಿ.ಶ. ೧೬೦೭) ಶ್ರೀರಂಗಪಟ್ಟಣದಲ್ಲಿ ವಿಜಯನಗರ ಸಾಮ್ರಾಜ್ಯದ ಪರವಾಗಿ ರಾಜ್ಯಪಾಲನಾಗಿದ್ದ ತಿರುಮಲರಾಯನು 'ನಂಜರಾಜ ಪಟ್ಟಣದ ಚಂಗಾಳ್ವ ಅರಸ ಸಂತತಿ ಇರುವ ಪರ್ಯಂತವೂ'ಬೆಟ್ಟದಪುರದ ಅನ್ನದಾನಿ ಮಲ್ಲಿಕಾರ್ಜುನನ ಪೂಜೆ ಸುಗಮವಾಗಿ ಸಾಗುವಂತೆ ಕಟ್ಟೆಮಳಲವಾಡಿಯನ್ನು ಉಂಬಳಿಯಾಗಿ ನೀಡಿದ್ದಾನೆ.**[46]** ಪೆರಿಯರಾಜ ರುದ್ರಗುಣನೂ ಅವನ ದಾಯಾದಿ (ವೀರರಾಜಯ್ಯನ ಮಗ) ವಿರುಪರಾಜಯ್ಯನೂ ಒಟ್ಟಿಗೆ ಚಂಗನಾಡನ್ನು ಆಳಿದಂತೆ ತೋರುತ್ತದೆ. ಪೆರಿಯರಾಜ

ರುದ್ರಗಣನ (೧೫೮೫-೧೬೦೭) ತರುವಾಯ ಅವನ ತಮ್ಮ ಕೃಷ್ಣರಾಜ ಸ್ವಲ್ಪ ಕಾಲ ರಾಜ್ಯಭಾರ ಮಾಡಿದಂತೆ ಕಾಣುತ್ತದೆ. ಇಲ್ಲಿಂದ ಮುಂದಿನ ಅರಸುಗಳ ಕ್ರಮಬದ್ಧಯಾದಿ ಇಲ್ಲದಿರುವುದರಿಂದ ಆಳಿದ ಅರಸರುಗಳ ಹೆಸರು ಗೊಂದಲಕ್ಕೀಡಾಗಿದೆ. ನಂಜುಂಡ, ಮಲ್ಲರಾಜ, ವೀರರಾಜ, ಕೃಷ್ಣರಾಜ ರಾಜರುಗಳ ಹೆಸರುಗಳ ಪಟ್ಟಿಯನ್ನು ಕೊಡುವುದು ತುಂಬ ತೊಡಕಿನದಾಗಿದೆ.

ಜನಪದ ವೀರಕಾವ್ಯ 'ಪಿರಿಯಾಪಟ್ಟಣದ ಕಾಳಗ'ದ ಪ್ರಕಾರ ಚಂಗಾಳ್ವರ ಕೊನೆಯ ರಾಜ ವೀರರಾಜ ಪಿರಿಯಾಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ೧೬೧೯ ರಿಂದ ೧೬೪೪ ರವರೆಗೆ ರಾಜ್ಯಭರ ಮಾಡಿದ. ಚಂಗಾಳ್ವ ವೀರರಾಜಯ್ಯನು ಮಡಿಕೇರಿಯನ್ನಾಳುತ್ತಿದ್ದ ಹಾಲೇರಿ ರಾಜರ ಬಂಧುವಾಗಿದ್ದ. ಇವನ ಕಾಲಕ್ಕಾಗಲೆ ಜೈನಧರ್ಮ ಸಂಪೂರ್ಣವಾಗಿ ನಶಿಸಿ ಹೋಗಿದ್ದುದಲ್ಲದೆ ಮಲ್ಲಿನಾಥ ಬಸದಿಗಳು ಮಲ್ಲಯ್ಯನ ದೇವಾಲಯಗಳಾಗಿ ಚಂಗಾಳ್ವರು ವೀರಶೈವ ಧರ್ಮಾವಲಂಬಿಗಳಾಗಿದ್ದರು.

ಪಿರಿಯಾಪಟ್ಟಣದ ಚಂಗಾಳ್ವರಿಗೂ ಶ್ರೀರಂಗಪಟ್ಟಣದ ವೊಡೆಯರಿಗೂ ರಾಜವೊಡೆಯನ (೧೫೭೮-೧೬೧೭) ಕಾಲದಿಂದಲೂ ಯುದ್ಧಗಳು ನಡೆಯುತ್ತಲೇ ಇದ್ದವು. ರಾಜವೊಡೆಯ ಪಿರಿಯಾಪಟ್ಟಣಕ್ಕೆ ಸೇರಿದ್ದ ಸೆರೂರು ಮತ್ತು ಮನುತ್ತೂರುಗಳನ್ನು ವಶಪಡಿಸಿಕೊಂಡ.[47]ಕಂಠೀರವ ನರಸರಾಜ ಮೊದಲ ಮುತ್ತಿಗೆಯಲ್ಲಿ ಚಂಗಾಳ್ವರಿಗೆ ಸೇರಿದ ಅರಕಲಗೂಡು ಮತ್ತು ಬೆಟ್ಟದಪುರಗಳನ್ನು ವಶಪಡಿಸಿಕೊಂಡ.[48]ನರಸರಾಜನ ದಳವಾಯಿ ೧೬೪೪ ರಲ್ಲಿ ಪಿರಿಯಾಪಟ್ಟಣವನ್ನು ಮುತ್ತಿ ಹನ್ನೆರಡು ತಿಂಗಳುಗಳ ಕಾಲ ಸತತವಾಗಿ ಹೋರಾಡಿ ಪಿರಿಯಾಪಟ್ಟಣವನ್ನು ಮೈಸೂರಿನ ಅಧೀನಕ್ಕೆ ತೆಗೆದುಕೊಂಡ. ದಳವಾಯಿ ಮುತ್ತಿಗೆ ಹಾಕಿದಾಗ ಪಿರಿಯಾಪಟ್ಟಣವನ್ನು ಆಳುತ್ತಿದ್ದವನು ಚಂಗಾಳ್ವ ಅರಸ ವೀರರಾಜ. ಆದರೆ ಕಂಠೀರವ ನರಸರಾಜ ವಿಜಯದಲ್ಲಿ

"ಪಿರಿಯಾಪಟ್ಟಣದ ರಾಜ್ಯವನ್ನಾಳುವ ದುಷ್ಟ
ದುರದುಂಬಿ ನಂಜುಂಡ ರಾಜ ಕಪ್ಪವ
ಕೊಡದೆ ಕೂಟವ ಮಾಡದೆ ಮೇರೆ
ದಪ್ಪಿ ಚಂಡಿಸಿ ಬಲವಿಡಿದು
ಇಪ್ಪುದ ಕಂಡು ಕಂಠೀರವ ರಾಜ ಕಂ
ದಪ್ಪ ಸನ್ನಿಭ ಕೋಪಿಸಿದ" ***[49]***

ಎಂದು ಹೇಳಿದೆ. ಅಲ್ಲದೆ ತನ್ನ ದಳವಾಯಿ ನಂಜರಾಜನನ್ನು ಪಿರಿಯಾಪಟ್ಟಣವನ್ನು ಸೂರೆ ಮಾಡಿ ಬರಲು ಕಳಿಸಿದನೆಂಬ ವಿಷಯ ಪ್ರಸ್ತಾಪವಾಗಿದೆ. ಆದರೆ ತಿರುಮಲೆಯಾರ್ಯನ '*ಚಿಕ್ಕದೇವರಾಯ ವಂಶಾವಳಿ*'[50] ಹಾಗೂ ದೇವಚಂದ್ರ ವಿರಚಿತ 'ರಾಜಾವಳಿ ಕಥಾಸಾರ'[51]ಗಳಲ್ಲಿ ಚಂಗಾಳ್ವ ನಂಜುಂಡರಾಜನ ಹೆಸರಿಗೆ ಬದಲಾಗಿ ಮಲ್ಲರಾಜನ ಹೆಸರು ಬಂದಿದೆ. ಇದರಿಂದಾಗಿ ಶ್ರೀಕಂಠನಿಗೆ ಚನ್ನಯ್ಯ ಎಂಬ ಹೆಸರಿನೊಂದಿಗೆ ನಂಜರಾಜ ಎಂಬ ಮತ್ತೊಂದು ಹೆಸರಿತ್ತೆ? ನಂಜರಾಜಯ್ಯದೇವ ಅಥವಾ ನಂಜುಂಡದೇವನು ಶ್ರೀಕಂಠದೇವನ ಮೂರನೇ ಮಗನೆ? ಅಥವಾ ಕೃಷ್ಣರಾಜಯ್ಯ ಹಾಗೂ ನಂಜುಂಡ ಎಂಬ ಎರಡೂ ಹೆಸರುಗಳು ಒಬ್ಬನೇ ಅರಸನವೇ? ಕೃಷ್ಣರಾಜನೇ ಹರವೇ ಮಲ್ಲರಾಜಪಟ್ಟಣದ (ಪಿರಿಯಾಪಟ್ಟಣದ ಉತ್ತರಕ್ಕಿದ್ದ ಈ ಊರು ಈಗ ಹಾಳಾಗಿದೆ) ಸ್ಥಾಪಕನೆ? ಮಲ್ಲರಾಜ (ಕೃಷ್ಣಾರಾಜಯ್ಯದೇವ?) ವೀರರಾಜ (೧೬೧೯-೧೬೪೪) ಪಿರಿಯಾಪಟ್ಟಣದ ಪೇಟೆಯ ಉತ್ತರಕ್ಕಿದ್ದ ರಾಜಾಪುರದ ಸ್ಥಾಪಕ ಅಲ್ಲದೆ ಚಂದೆ ಅರಸು (ಜನಪದ ಕಾವ್ಯದಲ್ಲಿ ಮಾತ್ರ ಈ ಹೆಸರು ಬಂದಿದೆ)- ಈ ಮೂವರೂ ನಂಜುಂಡನ ಮೂವರು ಮಕ್ಕಳಿರಬಹುದೆ? ಎಂಬೆಲ್ಲ ಪ್ರಶ್ನೆಗಳಿಗೆ ಸದ್ಯಕ್ಕೆ ಸರಿಯಾದ ಉತ್ತರಗಳಿಲ್ಲ. ಚಂಗಾಳ್ವ ವಂಶದ ಕೊನೆಯ ಅರಸುಗಳ ಹೆಸರುಗಳು ಲಿಖಿತ

ರೂಪದಲ್ಲುಳಿಯದೆ ಇರುವುದರಿಂದ ಈ ಗೊಂದಲಕ್ಕೆ ಕಾರಣವಾಗಿದೆ. ಆದರೆ ಚಂಗಾಳ್ವ ವಂಶದ ಕಟ್ಟಕಡೆಯ ರಾಜ ವೀರರಾಜನೆಂಬುವುದರಲ್ಲಾಗಲಿ ಮೈಸೂರಿನ ದಳವಾಯಿ ಪಿರಿಯಾಪಟ್ಟಣವನ್ನು ಮೈಸೂರಿಗೆ ಸೇರಿಸಿಕೊಂಡ ವಿಚಾರದಲ್ಲಾಗಲಿ ಯಾವ ಅಸ್ಪಷ್ಟತೆಯೂ ಇಲ್ಲ. ಈ ಯುದ್ಧಕ್ಕೆ ಕಾರಣಗಳು ಮಾತ್ರ ಬಗೆಬಗೆಯಾಗಿದೆ.

ಮೈಸೂರು ಸೈನ್ಯ ಪಿರಿಯಾಪಟ್ಟಣವನ್ನು ಮುತ್ತಲು ಕಾರಣವೆಂದರೆ ಪಿರಿಯಾಪಟ್ಟಣದ ರಾಜ ಮೈಸೂರು ಅರಸನಿಗೆ ವಾರ್ಷಿಕ ಪೊಗದಿಯಾಗಿ ಮೂರು ಸಾವಿರ ವರಹಗಳನ್ನು ಕೊಡಬೇಕೆಂದು ತೀರ್ಮಾನವಾಗಿತ್ತು. ಈ ಒಪ್ಪಂದವನ್ನು ಪಿರಿಯಾಪಟ್ಟಣ ಅರಸರು ಒಪ್ಪದೆ ತಿರಸ್ಕರಿಸಿದ್ದರಿಂದ ಕಂಠೀರವ ನರಸರಾಜನಿಗೂ ಪಿರಿಯಾಪಟ್ಟಣದ ರಾಜನಿಗೂ ಯುದ್ಧ ನಡೆಯಿತೆಂದು ಇತಿಹಾಸ ಹೇಳುತ್ತಿದೆ.**[52]** ಈ ಯುದ್ಧವನ್ನು ಪ್ರೊನೆಜ ಎಂಬ ಪಾದ್ರಿಯು ಮೂಗುಗಳಿಗಾಗಿ ನಡೆದ ಯುದ್ಧವೆಂದು ವರ್ಣಿಸಿದ್ದಾನೆ. ಎದುರಾಳಿಗಳ ಮೂಗುಗಳನ್ನು ಕತ್ತರಿಸಬೇಕೆಂದು ಕಂಠೀರವ ನರಸರಾಜ ಆಜ್ಞೆ ಇತ್ತನೆಂಬುದು ಅವನ ಅಭಿಪ್ರಯ.**[53]** ಕಂಠೀರವ ನರಸರಾಜನು ಎದುರಾಳಿಗಳ ಮೂಗುಗಳನ್ನು ಕತ್ತರಿಸಿ ಅವರನ್ನು ವಿಕಾರಗೊಳಿಸುತ್ತಿದ್ದುದಲ್ಲದೆ ಅತ್ಯಂತ ಕ್ರೂರ ರೀತಿಯಲ್ಲಿ ಅವರು ನರಳಿ ಸಾಯುವಂತೆ ಮಾಡುತ್ತಿದ್ದನಂತೆ. ಬೆಟ್ಟದಪುರ, ಅರಕಲಗೂಡುಗಳನ್ನು ವಶಪಡಿಸಿಕೊಳ್ಳುವಲ್ಲಿ ಸ್ವತಃ ನರಸರಾಜನೇ ಯುದ್ಧಕ್ಕೆ ಬಂದಿದ್ದರೂ ಎರಡನೇ ಸಲ ದಳವಾಯಿಯೊಬ್ಬ ಪಿರಿಯಾಪಟ್ಟಣವನ್ನು ಮುತ್ತಿದಂತೆ ತಿಳಿದು ಬರುತ್ತದೆ. ಈ ರೌದ್ರಭೀಕರ ಯುದ್ಧದ ಘಟನಾವಳಿಗಳು ಜನಪದ ಸಾಹಿತ್ಯದಲ್ಲಿ ಉಳಿದು ಬಂದು ಜನಮನದಲ್ಲಿ ಹಚ್ಚಹಸುರಾಗಿ ಚಂಗಾಳ್ವರ ಹೆಸರನ್ನು ಚಿರವಾಗಿಸಿವೆ. ಪಿರಿಯಾಪಟ್ಟಣದ ಹೆಸರನ್ನು ಅಮರವಾಗಿಸಿವೆ.

೭

ಚಂಗಾಳ್ವರು ಮತಸಹಿಷ್ಣುಗಳು, ಮಹಾದಾನಿಗಳೂ, ಆಶ್ರಿತವತ್ಸರೂಕ, ಪರಾಕ್ರಮಿಗಳೂ ಆಗಿದ್ದರಲ್ಲದೆ ಉದಾರಾಶ್ರಯ ಕೊಟ್ಟವರೆಂದು ಅವರನ್ನು ಕೊಂಡಾಡಿದ ಶಾಸನಗಳಿಂದಲೂ ಕವಿಗಳ ವಾಣಿಗಳಿಂದಲೂ ತಿಳಿಯುತ್ತದೆ. 'ಕುಮಾರರಾಮ ಸಾಂಗತ್ಯ'ದ ಕಲ್ಲಹಳ್ಳಿ ನಂಜುಂಡ ಕವಿ, ಚಂದ್ರಪ್ರಭ ಸಾಂಗತ್ಯ ಹಾಗೂ ಭುಜಬಲಶತಕಗಳ (ಸಂಸ್ಕೃತ ಶತಕ) ಕರ್ತೃ ಪೆರಿಯಾ ಪಟ್ಟಣದ ದೊಡ್ಡಯ್ಯ ಕವಿ 'ರಾಮವಿಜಯ' ಕಾವ್ಯದ ರಾವಂದೂರು ದೇವಪ್ಪ 'ಗೀತರಾಘವ'ದ ರಾಮಕವಿ 'ಶಮಂತಕೋಪಾಖ್ಯಾನ'ದ ನಾಗರಾಜ ಕವಿ. *'ಕುಮುದೇಂದು ರಾಮಾಯಣ'ದ ಕುಮುದೆಂದು ಕವಿ, 'ನೇಮಿಜಿನೇಶಸಂಗತಿ' 'ಶ್ರೀಪಾಲಚರಿತೆ' 'ಪ್ರಭಂಜನ ಚರಿತ್ರೆ' 'ಜಯನೃಪಕಾವ್ಯ' 'ಸಮ್ಯಕ್ತ್ವಕೌಮುದಿ',* ಮತ್ತು *'ಸೂಪಶಾಸ್ತ್ರ'*ಗ್ರಂಥಗಳನ್ನೆಲ್ಲ ಬರೆದ ಮಂಗರಸ ಈ ಎಲ್ಲರೂ ಚಂಗಾಳ್ವ ಕವಿಗಳು ಅಥವಾ ಚಂಗಾಳ್ವರ ಆಶ್ರಯದಲ್ಲಿದ್ದ ಕವಿಗಳು. ಹೀಗೆ ಚಂಗಾಳ್ವರ ಸಾಹಿತ್ಯ ಸೇವೆಯು ಅನುಪಮ.


೮

ಚಂಗಾಳ್ವರು ಮೂಲತಃ ಜೈನರಾಗಿದ್ದರೂ ಅನಿವಾರ್ಯ ಪರಿಸ್ಥಿತಿಗಳು ಒದಗಿ ಬಂದ ಕಾರಣದಿಂದ ಚೋಳರಿಗೆ ಮಾಂಡಲಿಕರಾದಾಗ ಕಾಪಾಲಿಕ ಶೈವರಾಗಿದ್ದು, ಹೊಯ್ಸಳರ ಅಧೀನಕ್ಕೆ ಬಂದಾಗ ಅವರಂತೆಯೇ ಜೈನ ಧರ್ಮದ ಜೊತೆಗೆ ಶೈವ ಹಾಗೂ ವೈಷ್ಣವ ಧರ್ಮಗಳನ್ನು, ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಾಗ ವೀರಶೈವ ಹಾಗೂ ಶ್ರೀವೈಷ್ಣವ ಧರ್ಮಗಳನ್ನು ಅನುಸರಿಸಿಕೊಂಡು ಬಂದು ಸರ್ವಧರ್ಮ ಸಮನ್ವಯಿಗಳಂತೆ ಕಂಡರೂ ಕೊನೆಕೊನೆಗೆ ಕಟ್ಟುಗ್ರವೀರ ಶೈವರಾದಂತೆ ಕಾಣುತ್ತದೆ. ಆದರೆ ಅವರು ಜೈನಧರ್ಮಕ್ಕೆ ಕೊಟ್ಟಿದ್ದ ಪ್ರಾಮುಖ್ಯವನ್ನು ಚಂಗನಾಡಿನ ಚಿಕ್ಕ ಹನಸೋಗೆಯ ತ್ರಿಕೂಟ ಬಸದಿಯಾದ ಅಬ್ಬೆಯ ಜಿನಾಲಯವೆಂದೇ ಪ್ರಸಿದ್ಧವಾಗಿರುವ ಶಾಂತೀಶ್ವರ ಆದೀಶ್ವರ ಹಾಗೂ

ನೇಮೀಶ್ವರ ಬಸದಿಗಳು, ಕಲ್ಲಹಳ್ಳಿಯ ಆದಿದೇವ ಬಸದಿ, ಬೆಟ್ಟದತುಂಗದ ಆದಿನಾಥ ಬಸದಿ ಬೂವನ ಹಳ್ಳಿಯ ಚಂದ್ರನಾಥ ಬಸದಿ, ರಾವಂದೂರಿನ ಸುಮತಿ ತೀರ್ಥಂಕರ ಬಸದಿ, ಬ್ಯಾಡರ ಬೆಳಗುಲಿಯ ಶಾಂತಿನಾಥ ಬಸದಿ, ಆನವಾಳು ಗ್ರಾಮದ ಅನಂತನಾಥ ಬಸದಿ, ಸಾಲಿಗ್ರಾಮದ ಅನಂತನಾಥ, ಪಾರ್ಶ್ವನಾಥ ಬಸದಿಗಳು ಸಾರಿ ಹೇಳುತ್ತವೆ.

ಇಷ್ಟಾದರೂ ಅವರು ಶೈವ, ವೀರಶೈವ, ವೈಷ್ಣವ ಧರ್ಮಗಳನ್ನೆಲ್ಲ ಆದರಿಸಿ ಆಶ್ರಯ ಕೊಟ್ಟು ಮತ ಸಹಿಷ್ಣುಗಳೆನಿಸಿಕೊಂಡ ಉದಾರ ಹೃದಯಿಗಳು. ಹೀಗೆ ಚಂಗಾಳ್ವರು ಕಲಾರಾಧಕರಾಗಿ ಸಾಹಿತ್ಯ ಸೇವಕರಾಗಿ ಧರ್ಮಾಶ್ರಯದಾತರಾಗಿ ಇತಿಹಾಸದ ಪುಟಗಳಲ್ಲಿ ತಮ್ಮದೇ ಆದ ಸ್ಥಾನವನ್ನು ಪಡೆದಿದ್ದಾರೆ.





[1]ಎ.ಕ.ಸಂ. ೩ ಟಿ.ನರಸಿಪುರ ಸಂಖ್ಯೆ ೪೪.
[2] C.Hayavadana Rao. Mys Gaz II Pt ೨ P. ೬೪೪.
[3] Mys Gaz II Part ೨ ೧೩೭೯ ಎ.ಕ. ೫ ಮಂಜರಾಬಾದ್ ನಂ. ೭೬
[4]ಎ.ಕ. ೫ ಅರಕಲಗೂಡು ೭೬.
[5] Mys Gaz V PP ೬೪೪-೬೪೫.
[6]ಎ.ಕ. ಸಂ. ೮ ಅರಕಲಗೂಡು, ೧೦೧.
[7] B.R. Gopal ; Minor Dynasties of South India : Karnataka New Era Pubilication Madras (೧೯೮೨) P. 170
[8]ಎ.ಕ.ಸಂ. ೫ ಕೃಷ್ಣರಾಜನಗರ ೬೬.
[9]ಎ.ಕ.ಸಂ. ೪ ಪಿರಿಯಾಪಟ್ಟಣ ೧೩೭.
[10]ಎ.ಕ.ಸಂ. ೮ ಅರಕಲಗೂಡು ೧೪೦.
[11]ಎ.ಕ. ೫ (ರೈಸ್) ಅರಕಲಗೂಡು ೧೬೧ ಮತ್ತು ೧೬೨.
[12]ಅದೇ, ಹಾಸನ ೧೬೨.
[13] Derrett J.D.M. Op Cit Chaper III Section. ೨.
[14]ಎ.ಕ.ಸಂ. ೫ ಭಾಗ ೧ ಬೇಲೂರು ೧೭೮ (ಕ್ರಿ.ಶ. ೧೧೩೪)
[15]ಎ.ಕ.ಸಂ. ೫ ಪಿರಿಯಾಪಟ್ಟಣ ನಂ. ೩೭.

[16]ಎ.ಕ.ಸಂ. ೫ (Rice) ಚನ್ನರಾಯಪಟ್ಟಣ ೧೯೯ ಮತ್ತು ೨೦೦.
[17]ಎ.ಕ.ಸಂ. ೭ ನಾಗಮಂಗಲ ೬೪.
[18]ಎ.ಕ.ಸಂ. ೭ ನಾಗಮಂಗಲ ೨೯.
[19]ಎ.ಕ.ಸಂ. ೭ ಅರಸೀಕೆರೆ ೫೩.
[20]ಎ.ಕ. V (Rice) ಹಾಸನ ೧೪೩ ಕ್ರಿ.ಶ. ೧೧೫೦.
[21]ಅದೇ ಹಾಸನ ೬೯ ಕ್ರಿ.ಶ. ೧೧೫೫.
[22] M.A.R. ೧೯೦೯-೧೯೧೦. Para .೭೬
[23]ಎ.ಕ.೮ ಸೊರಬ ೩೪೫. (B.L.Rice Edition)
[24]ಎ.ಕ.೫ (Rice) No. ೧೧೪ of A.D. ೧೧೭೩ : Hayavadan Rao Mys. Gaz. vol II Part ೨ P. ೧೩೫೬
[25]ಎ.ಕ.೫ (Rice) ೪ x೨ ಬಲೂರು ೮೬
[26]ಎ.ಕ.೪ (Rice) ಹುಣಸೂರು ೨೦. ಕ್ರಿ.ಶ. ೧೧೭೩
[27]ಎ.ಕ.೬ (Rice) ಕಡೂರು ೫೨. ಕ್ರಿ.ಶ. ೧೧೭೨
[28]ಎ.ಕ.ಸಂ. ೪ ಹುಣಸೂರು. ನಂ. ೩೬
[29]ಎ.ಕ. (Rice) ಮೈಸೂರು ಜಿಲ್ಲೆ. Introduction ; C.Mayavadana Rao. Mys. Gaz. Vol II Part ೨. P. ೧೩೮೪
[30]ಎ.ಕ.೫. (Rice) ಅರಕಲಗೂಡು ೫೩ ಕ್ರಿ.ಶ. ೧೨೫೨
[31]ಎ.ಕ.ಸಂ. ೫. ಕೃಷ್ಣರಾಜನಗರ. ೯೩.
[32]ಎ.ಕ.ಸಂ. ೪ (Rice) ಭಾಗ ೨. Introduction.
[33]ಎ.ಕ.ಸಂ. ೧ ಪು. xxxiv
[34]ಎ.ಕ.ಸಂ.೪. ಪಿರಿಯಾಪಟ್ಟಣ. ನಂ. ೧೩೨. ಕ್ರಿ.ಶ. ೧೫೦-೦೪
[35] B.R.Gopal. ಪೂರ್ವೋಕ್ತ P. ೧೭೪.
[36]ಎ.ಕ.ಸಂ. ೪ ಶ್ರವಣಬೆಳಗೊಳ. ನಂ. ೩೨೯
[37]ಡಾ.ಜಿ.ವರದರಾಜರಾವ್, ಕುಮಾರರಾಮನ ಸಾಂಗತ್ಯಗಳು, ಪ್ರಸಾರಾಂಗ, ಮೈ.ವಿ.ವಿ.ಮೈಸೂರು. (೧೯೬೬) ಪು. ೨೦.
[38]ಎ.ಕ.ಸಂ. ೪, ಪಿರಿಯಾಪಟ್ಟಣ, ನಂ.೩೩.
[39]ರಾಮವಿಜಯ ಕಾವ್ಯ. ಸಂ.: ಟಿ. ಕೇಶವಭಟ್ಟ ಭಾರತೀಯ ಜ್ಞಾನಪೀಠ ಪ್ರಕಾಶನ ಕಲಕತ್ತಾ. (೧೯೬೯)
[40] C.Hayavadana Rao. Mys Gaz II Pt II
[41]ಎ.ಕ.ಸಂ. ೪ (Rice) ಹಾಸನ. ೨೪.
[42]ಎ.ಕ.ಸಂ: ೪ ಪಿರಿಯಾಪಟ್ಟಣ. ೧೨೧.
[43]ಎ.ಕ.೫ (Rice) ಅರಕಲಗೂಡು. ೪೪.
[44] C.Hayavadana Rao. Mys Gaz Vol. III P. 2125.
[45]ಎ.ಕ. ೪ ಪೀಠಿಕೆ. ೨೫.
[46]ಎ.ಕ. ೫, ಭಾಗ. ೨ (Rice) ಹಾಸನ. ೩೬. ೧೬೦೭
[47] Wilks. Mysore, Vol I PP. 53.54
[48]ಕನ್ನಡ ವಿಷಯ ವಿಶ್ವಕೋಶ (ಕರ್ನಾಟಕ ಸಂಪುಟ) ಕ.ಅ.ಸ.ಮೈ.ವಿ.ವಿ.ಮೈಸೂರು (೧೯೭೯) ಪು. ೧೨೦.
[49]ಗೋವಿಂದ ವೈದ್ಯನ 'ಕಂಠೀರವ ನರಸರಾಜ ವಿಜಯ' ಸಂ.ಡಾ.ಆರ್.ಶಾಮಾ ಶಾಸ್ತ್ರಿ, ಪ್ರಸಾರಾಂಗ. ಮೈ.ವಿ.ವಿ. ಮೈಸೂರು. ೧೯೭೧. ಸಂ. ೨೮, ೨೦, ೨೧.
[50]ತಿರುಮಲೆಯಾರ್ಯನ ಚಿಕದೇವರಾಯ ವಂಶಾವಳಿ. ಸಂ: ಎಂ.ಎ. ರಾಮಾನುಜಯ್ಯಂಗಾರ್. ಜಿ. ಟಿ.ವಿ.ಪ್ರಸ್. ೧೯೩೩. ಪು. ೬೨.
[51]ದೇವಚಂದ್ರನ ರಾಜಾವಳಿ ಕಥಾಸಾರ. ಸಂ.ಬಿ.ಎಸ್.ಸಣ್ಣಯ್ಯ. ಕ.ಅ. ಸಂಸ್ಥೆ. ಮೈ.ವಿ.ವಿ. ಮೈಸೂರು. ೧೯೮೮. ಪು. ೩೩೯
[52] C.Hayavadana Rao. History of Mysore. Vol. I 1943. P. iii

[53]ಕನ್ನಡ ವಿಶ್ವಕೋಶ. ಸಂ: ಮೂರು. ಕ.ಅ. ಸಂಸ್ಥೆ. ಮೈಸೂರು. ೧೯೭೦. ಪು. ೫೦೯.

ಮಲೆಕರ್ನಾಟಕದ ಅರಸು ಮನೆತನಗಳು: ೧೨. ಆರಗದ ಅರಸರು (೧)

ಹಿರಿಯ ಸಾಮ್ರಾಜ್ಯಗಳ ಅಧೀನದಲ್ಲಿ ಸಾಮಂತ ರಾಜ್ಯಗಳು ಆಡಳಿತ ನಡೆಸಿ ತಮ್ಮ ಸಾಮರ್ಥ್ಯವನ್ನು ಸಾಬೀತುಗೊಳಿಸಿವೆ. ವಿಸ್ತಾರ ಮತ್ತು ಸ್ವಾಯತ್ತತೆಯಲ್ಲಿ ಇವುಗಳ ಸ್ಥಾನ ಎತ್ತರಕ್ಕೆ ಬಾರದಿದ್ದರೂ ತಮ್ಮ ಸಮಕಾಲೀನ ಸಾರ್ವಭೌಮರ ಏಳು ಬೀಳುಗಳಲ್ಲಿ ಇವು ವಹಿಸಿದ ಪಾತ್ರವನ್ನು ಅಲಕ್ಷಿಸುವಂತಿಲ್ಲ. ಪ್ರಬಲ ರಾಷ್ಟ್ರಗಳು ದುರ್ಬಲ ರಾಜ್ಯಗಳನ್ನು ಆಕ್ರಮಿಸಿ ಸಾಮಂತರ ಮಟ್ಟಕ್ಕಿಳಿಸಿರುವ ದಾಖಲೆಗಳು ಇತಿಹಾಸದಲ್ಲಿ ತುಂಬಿಕೊಂಡಿವೆ. ಪ್ರಾದೇಶಿಕ ಇತಿಹಾಸವನ್ನು ಸೃಷ್ಟಿಸಿರುವ ಇಂತಹ ಅರಸೊತ್ತಿಗೆಗಳಿಂದ ಅಧ್ಯಯನಕ್ಕೆ ವಿಪುಲವಾದ ಮಾಹಿತಿಗಳು ದೊರೆಯುತ್ತವೆ.

ಪ್ರಸ್ತುತ ಆರಗವು ತೀರ್ಥಹಳ್ಳಿಯಿಂದ ೧೧ ಕಿ.ಮೀ. ದೂರದಲ್ಲಿರುವ ಒಂದು ಗ್ರಾಮವಾಗಿದೆ. ಅಪರೂಪದ ಅವಶೇಷಗಳಿಂದ ತುಂಬಿಕೊಂಡಿರುವ ಈ ಗ್ರಾಮದ ಬಳಿಯಲ್ಲಿ ಕುಶಾವತಿ ಮತ್ತು ಗೋಪಿನಾಥ ಎಂಬ ಎರಡು ಪುಟ್ಟ ನದಿಗಳೂ ಹರಿಯುತ್ತವೆ. ಆರಗವು ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿ ಕಂಪಣ ಎಂಬ ಒಂದು ಪ್ರತ್ಯೇಕ ಘಟಕವಾಗಿ ಒಂದು ರಾಜ್ಯದ ಸ್ಥಾನಮಾನವನ್ನು ಪಡೆದಿತ್ತು. ವಿಜಯನಗರದ ಅರಸರ ನಿರೂಪದಂತೆ ಅರಸು ಮನೆತನದವರು ಅಥವಾ ಅವರ ಬಂಧುಗಳು ಇಲ್ಲಿ ಆಡಳಿತ ನಡೆಸಿದರು. ಈ ದೃಷ್ಟಿಯಿಂದ ಇಲ್ಲಿ ಆಳಿದವರು ಸಾಮಂತರು ಅಥವಾ ಮಂಡಳಿಕರೆಂದು ಕರೆಸಿಕೊಂಡಿಲ್ಲ. ಇವರಿಗೆ ಪ್ರತ್ಯೇಕವಾದ ಪ್ರಶಸ್ತಿಗಳು ಇರಲಿಲ್ಲ.

ಆರಗದ ಚಾರಿತ್ರಿಕ ಅಂಶಗಳ ಹುಡುಕಾಟದಲ್ಲಿ ಮೊದಲು ಎದುರು ನಿಲ್ಲುವ ಸಾಮಗ್ರಿಗಳಲ್ಲಿ ಶಿಲಾಶಾಸನಗಳಿಗೆ ಅಗ್ರಸ್ಥಾನ. ಇವುಗಳ ಅಧ್ಯಯನ ನಡೆದಂತೆಲ್ಲಾ ಪ್ರಾದೇಶಿಕ ಇತಿಹಾಸದ ಮಹತ್ವವು ಅರಿವಾಗುತ್ತದೆ.

ಆರಗದ ಶಾಂತವೇರಿಯಿಂದ ಪೊಂಬುಚ ರಾಜ್ಯಕ್ಕೆ ಸಾನ್ತಳಿಗೆ ಎಂಬ ಹೆಸರು ಬಂದಿತೆಂದು ಐತಿಹಾಸಿಕ ಗ್ರಂಥಗಳಲ್ಲಿದೆ.[1] ಶಾಂತವೇರಿಗೆ ಹಿಂದೆ ಸಂತೇರಿ, ಸಂತವೇರಿ, ಸಂತರಿಗೆ ಎಂಬ ಹೆಸರಿನಿಂದ ಕರೆಯುತ್ತಿದ್ದರೆಂದು ಸ್ಥಳೀಯರು ಹೇಳುತ್ತಾರೆ. ಬಹುಶಃ ಇದು ಗಂಗರ ಕಾಲದಲ್ಲಿಯೇ ಜೈನರ ಒಂದು ನೆಲೆವೀಡಾಗಿದ್ದು ಇಲ್ಲಿ ಜಂಬಿಟ್ಟಿಗೆಯಲ್ಲಿ ಕಟ್ಟಿದ್ದ ಒಂದು ಬಸದಿ ಇದ್ದರಿಬೇಕು ಇದನ್ನು ಜಿನದತ್ತರಾಯನು ಶಿಲೆಯಲ್ಲಿ ಕಟ್ಟಿಸಿ ಚೈತ್ಯಾಲಯವನ್ನಾಗಿ ಮಾಡಿರಬೇಕು. ಈಗಿರುವ ಬಸದಿಯು ಮತ್ತೆ ಜೀರ್ಣೋದ್ಧಾರಗೊಂಡಿದೆ. ಹೀಗೆ ಪ್ರಾಚೀನ ಜೈನ ಕ್ಷೇತ್ರವಾಗಿದ್ದ ಸಂತರಿಗೆಯಿಂದ ಜಿನದತ್ತರಾಯನು ತನ್ನ ರಾಜ್ಯಕ್ಕೆ ಸಾನ್ತಳಿಗೆ ಎಂದು ಹೆಸರಿಟ್ಟಿರಬಹುದು. ಇದರಿಂದ ಇವನ ವಂಶಸ್ಥರಿಗೆ ಸಾನ್ತರರು ಎಂಬ ಹೆಸರು ಬಂದಿರಬೇಕು. ಆದರೂ ಸಾನ್ತರರು ಎಂಬ ಹೆಸರು ಬಂದಿದ್ದಕ್ಕೆ ಬೇರೆ ಬೇರೆ ಐತಿಹಾಸಿಕ ಕಾರಣಗಳನ್ನು ನೀಡಲಾಗಿದೆ.

ಸಾಂತಳಿಗೆ ಸಾವಿರವನ್ನು ಆಳುತ್ತಿದ್ದ ಹೊಯ್ಸಳರು ಆರಗವನ್ನು ಅನನ್ಯ ದೇಶ ಮತ್ತು ಮಲೆ ರಾಜ್ಯವೆಂದು ಕರೆದರು[2] ಆದರೂ ಇದನ್ನು ಒಂದು ಪ್ರತ್ಯೇಕ ಆಡಳಿತ ವಿಭಾಗವನ್ನಾಗಿ ಮಾಡಲಿಲ್ಲ. ಹಾಗೂ ರಾಜವಂಶದವರಾಗಲೀ ಅಥವಾ ಇವರಿಂದ ನೇಮಿಸಲ್ಪಟ್ಟಿದ್ದ ರಾಜ ಪ್ರತಿನಿಧಿಗಳಾಗಲೀ ಇಲ್ಲಿ ಆಡಳಿತ ನಡೆಸಿದ ದಾಖಲೆಗಳು ಲಭ್ಯವಾಗಿಲ್ಲ.

ಆರಗದ ಅರಸರು : ಮೊದಲ ಘಟ್ಟ

ಮಾರಪ್ಪ : ಆರಗದ ಅರಸೊತ್ತಿಗೆಯು ಮೊದಲ ಆರಂಭವಾದುದು ಮಾರಪ್ಪನಿಂದ, ಇವನು ವಿಜಯನಗರದ ದೊರೆ ಮೊದಲನೆಯ ಹರಿಹರನ ಸಹೋದರ. ಇವನು ಚಂದ್ರಗುತ್ತಿಯಲ್ಲಿದ್ದು ಆರಗದ ಸೀಮೆಯನ್ನು ಆಳುತ್ತಿದ್ದನು. ಮೊದಲನೆಯ ಹರಿಹರನು ಬಹುಶಃ ಮಾರಪ್ಪನನ್ನು ಚಂದ್ರಗುತ್ತಿಯ ಪ್ರಾಂತ್ಯದ ಆಡಳಿತಕ್ಕೆ ನೇಮಿಸಿರಬೇಕು.**[3]** ಮುಂದೆ ಚಂದ್ರಗುತ್ತಿ ಮತ್ತು ಆರಗದ ಕಂಪಣಗಳನ್ನು ಒಟ್ಟಾಗಿಯೂ ಕೆಲವು ಅರಸರು ಆಳಿದ್ದಾರೆ. ಮಾರಪ್ಪನು ಚಂದ್ರಗುತ್ತಿಯಲ್ಲಿ ಆಳುತ್ತಿದ್ದಾಗ ಮೊದಲನೆಯ ಹರಿಹರ (೧೩೩೬-೧೩೫೦)ನು ೧೩೪೭ ರಲ್ಲಿ ಆನೆಗೊಂದಿಯಲ್ಲಿ ಆಳುತ್ತಿದ್ದನು. ಚಂದ್ರಗುತ್ತಿಗೆ ಕಲ್ಲಾಸನ ಮತ್ತು ಗೋಮಂತ ಶೈಲ ಎಂಬ ಹೆಸರುಗಳಿತ್ತು ಎಂದು ಹೇಳಲಾಗಿದೆ.**[4]**

ಮಾರಪ್ಪನು ಚಂದ್ರಗುತ್ತಿಯಲ್ಲಿದ್ದಾಗ ಕದಂಬರಿಗೆ ಸೇರಿದ್ದ ಕೆಲವು ಸೀಮೆಗಳನ್ನು ಗೆದ್ದನು. ಮಾಧವ ಎಂಬ ಕಾಶ್ಮೀರಿ ಶೈವ ಬ್ರಾಹ್ಮಣನು ಇವನ ಮಂತ್ರಿಯಾಗಿದ್ದನು. ಮಾರಪ್ಪನು ಆಂಧ್ರದಿಂದ ಬಂದ ಬ್ರಾಹ್ಮಣ ಕುಟುಂಬಗಳಿಗೆ ೨೮ ವೃತ್ತಿಗಳನ್ನು ನೀಡಿ ಕುಂಚಾಪುರಿ ಎಂಬಲ್ಲಿ ನೆಲೆಗೊಳಿಸಿದನುಲ. ಕುಂಚಾಪುರಿಯು ಶಿಕಾರಿಪುರ ತಾಲ್ಲೂಕಿನ ಸಂಡ ಗ್ರಾಮವಾಗಿರಬಹುದು. ಇಲ್ಲಿರುವ ೧೩೮೧ನೆಯ ವರ್ಷದ ಮಹಾಸತಿ ಕಲ್ಲು ವಿಜಯನಗರದ ಇಮ್ಮಡಿ ಹರಿಹರನ ಕಾಲಕ್ಕೆ ಸಂಬಂಧಿಸಿದೆ. ಇದರಲ್ಲಿ ಆರಗದ ೧೮ ಕಂಪಣದೊಳಗಣ ನೆಲುವಳಿಗೆ ನಾಡು ಎಂದು ಹೇಳಿದೆ.**[5]**ಇದೇ ಗ್ರಾಮದ ಚಾಳುಕ್ಯ ಜಗದೇಕ ಮಲ್ಲನ ಇನ್ನೊಂದು ಶಾಸನವು ಇದನ್ನು ಆದಿಯ ಅಗ್ರಹಾರಂ ಸಂಡದ ಮೂವತಿರ್ಚ್ಛಾಸಿರಕ್ಕೆ ಎಂದು ಹೇಳಿದೆ. ಆದುದರಿಂದ ಮಾರಪ್ಪನು ಬ್ರಾಹ್ಮಣರನ್ನು ನೆಲೆಗೊಳಿಸಿದ್ದು ಇದೇ ಅನಾದಿ ಅಗ್ರಹಾರವಾಗಿರಬಹುದು. ಆದರೆ ಇಲ್ಲಿಯ ಯಾವ ಶಾಸನದಲ್ಲಿಯೂ ಮಾರಪ್ಪನು ಹೆಸರಿಟ್ಟ 'ಮಾರಪಪುರಿ' ಎಂಬ ಹೆಸರು ಕಂಡುಬಂದಿಲ್ಲ.

ಮಾರಪ್ಪನ ಕಾಲದ ಸೊರಬದ ಒಂದು ಶಾಸನದಲ್ಲಿ ಹೇಳಿರುವಂತೆ**[6]**ವಿಜಯನಗರ ರಾಜ್ಯಸ್ಥಾಪಕನಾದ ಹರಿಹರನು ಯಾದವವಂಶದ ಸಂಗಮನ ಮಗ. ಸಂಗಮನಿಗೆ ಐದು ಮಂದಿ ಮಕ್ಕಳು. ೧೩೪೬ ರಲ್ಲಿ ಈ ನಾಲ್ವರು ಸಹೋದರರು ಶೃಂಗೇರಿಯ ಜಗದ್ಗುರುಗಳವರಿಗೆ ನೀಡಿದ ದಾನ ಶಾಸನದಲ್ಲಿ ವೀರ ಹರಿಯಪ್ಪ ಒಡೆಯ, ಬುಕ್ಕಣ್ಣ ಒಡೆಯ, ಮಾರಪ್ಪ ಒಡೆಯ ಮತ್ತು ಮುದ್ದಪ್ಪ ಒಡೆಯ ಎಂಬ ನಾಲ್ಕು ಹೆಸರುಗಳಿದ್ದು ಐದನೆಯವನಾದ ಕಂಪಣ್ಣನು ಅದೇ ವೇಳೆಗೆ ಮೊದಲು ಮರಣ ಹೊಂದಿರಬಹುದು. ಇಮ್ಮಡಿ ಹರಿಹರರಾಯನ ಕಾಲದಲ್ಲಿ ಆರಗಕ್ಕೆ ಒಂದು ಆಡಳಿತ ಘಟಕದ ಸ್ಥಾನವನ್ನು ನೀಡಿ ಹದಿನೆಂಟು ಕಂಪಣವೆಂದು ವಿಭಾಗ ಮಾಡಲಾಯಿತು.**[7]**

ವೀರಹರಿಯಪ್ಪ ಒಡೆಯ : ಇವನನ್ನು ಹೊಸದಾಗಿ ರಚಿಸಿದ ೧೮ ಕಂಪಣಗಳ ಆಡಳಿತ ನಡೆಸಲು ನೇಮಿಸಲಾಯಿತು. ಇವನು ಕ್ರಿ.ಶ. ೧೩೪೭ ರಲ್ಲಿ ಆರಗದಿಂದ ಸಾನ್ತಳಿಗೆ ಸಾವಿರವನ್ನು ಸಹ ಆಳುತ್ತಿದ್ದನು. ಇದು ಸಾನ್ತಳಿಗೆ ರಾಜ್ಯದಲ್ಲಿ ಹೊಯ್ಸಳರ ಆಡಳಿತದ ಅಂತಿಮಘಟ್ಟದ ಕಾಲ. ಹೊಯ್ಸಳ ವಿರೂಪಾಕ್ಷ ಬಲ್ಲಾಳ (೧೩೪೨-೧೩೪೬) ಕ್ರಿ.ಶ. ೧೩೪೬ರಲ್ಲಿ ಮರಣಹೊಂದಿದನು. ಇವನು ಹೊಯ್ಸಳ ವಂಶದ ಕೊನೆಯ ದೊರೆ. ಇದೇ ವರ್ಷ ಸಾನ್ತಳಿಗೆ ಸಾವಿರವು ವಿಜಯನಗರ ಸಾಮ್ರಾಜ್ಯದಲ್ಲಿ ವಿಲೀನಗೊಂಡಿತು.

ಹಿಂದೆ ಹೇಳಿದ ೧೩೪೬ರ ಶ್ರಿಂಗೇರಿ ಶಾಸನದಂತೆ ಮೊದಲನೆಯ ಹರಿಹರನು ಶ್ರಿಂಗೇರಿ ಪೀಠಾಧಿಪತಿಗಳಾದ ಭಾರತ ತೀರ್ಥರಿಗೆ ಸಾಂತಳಿಗೆ ನಾಡಿನ ಕೆಳಭಾಗದ ಕೈಮೇಲೆ ಹೊಸವೂರು ಎಂಬ ಗ್ರಾಮವನ್ನು ದಾನವಾಗಿ ನೀಡಿದ್ದಾನೆ. ಇದೇ ಸಮಯದಲ್ಲಿ ಹೊಯ್ಸಳ ವೀರ ಬಲ್ಲಾಳನ ಹಿರಿಯ ಅರಸಿ ಕಿಕ್ಕಾಯಿ ತಾಯಿಯು ಸಾಂತಳಿಗೆ ನಾಡಿನ ಕೆಲವು ಸೀಮೆಗಳನ್ನು ಇದೇ ಮಠಕ್ಕೆ

ಇದೇ ಸಂದರ್ಭದಲ್ಲಿ ದಾನ ನೀಡಿರುವುದು ಗಮನಾರ್ಹವಾಗಿದೆ. ಇದರಿಂದ ಚಿಕ್ಕಾಯಿ ತಾಯಿಯು ಸಾಂತಳಿಗೆ ಮೇಲಿದ್ದ ಹರಿಹರನ ಪ್ರಭುತ್ವವನ್ನು ಒಪ್ಪಿಕೊಂಡಿದ್ದಳೆಂದು ತಿಳಿಯುತ್ತದೆ.

೧೩೬೦ರಲ್ಲಿ ಬುಕ್ಕರಾಯನ ಹಿರಿಯ ಮಗ ತಿಪ್ಪಣ್ಣನು ಆರಗ ಮತ್ತು ಮಂಗಳೂರು ಪ್ರಾಂತ್ಯದಲ್ಲಿ ರಾಜ್ಯವನ್ನು ವಿಸ್ತರಿಸುತ್ತಿದ್ದನೆಂದು ಬೆಳಗುತ್ತಿಯ ಕೈಫಿಯತ್ತಿನಲ್ಲಿದೆ. ಸೀವೆಲ್ಲನು **(Sewell)** ತಿಪ್ಪಣ್ಣನನ್ನು ಇಮ್ಮಡಿ ಹರಿಹರನೆಂದು ಹೇಳಿದ್ದಾನೆ.**[8]**೧೩೩೬ರಲ್ಲಿ ಮಾರರಸನು ಮಂಗಳೂರಿನ ರಾಜ್ಯಪಾಲನಾಗಿದ್ದನೆಂದು ಇದೇ ಕೈಫಿಯುತ್ತಿನಲ್ಲಿದೆ.

ವಿಜಯನಗರದ ದೊರೆ ಹರಿಹರನು ಸಾಂತಳಿಗೆ ಆಡಳಿತ ನಡೆಸಲು ಆಗ ಆರಗದಲ್ಲಿ ಆಳುತ್ತಿದ್ದ ತನ್ನ ವಂಶದ ವೀರ ಹರಿಯಪ್ಪ ಒಡೆಯನನ್ನು ನೇಮಿಸಿದಂತೆ ತಿಳಿಯುತ್ತದೆ. ಇವನ ಕಾಲದಲ್ಲಿ ಕ್ರಿ.ಶ. ೧೩೬೧ರಲ್ಲಿ ಬೆಳಗುತ್ತಿಯ ಅರಸು ಚೆಲುವರಂಗಪ್ಪನು ಆರಗದ ಬಳಿಯ ಕೌಲೆದುರ್ಗದಲ್ಲಿ ಕೋಟೆ ಕಟ್ಟಿಸಿದನೆಂದು ಬೆಳಗುತ್ತಿಯ ಕೈಫಿಯತ್ತಿನಲ್ಲಿದೆ.**[9]**ಇವನೂ ಸಹ ವಿಜಯನಗರದ ರಾಜವಂಶದ ಬಂಧುವಾಗಿದ್ದನು. ಇದೇ ವೀರ ಹರಿಯಪ್ಪ ಒಡೆಯನ ಕಾಲದಲ್ಲಿ ಕ್ರಿ.ಶ. ೧೩೬೩ರಲ್ಲಿ ಬುಕ್ಕರಾಯನ ಕುಮಾರ ವಿರೂಪಾಕ್ಷನು ಆರಗದ ಮದುವಂಕ ನಾಡಿನ ವಿರೂಪಾಕ್ಷಪುರದಲ್ಲಿ ಬ್ರಾಹ್ಮಣರಿಗೆ ಭೂದಾನ ನೀಡಿದ್ದಾನೆ.**[10]**ಇವನು ತನ್ನ ಹೆಸರಿನಲ್ಲಿ ಆರಗದಲ್ಲಿ ವಿರೂಪ ಸಮುದ್ರ ಎಂಬ ಕೆರೆಯನ್ನು ಕಟ್ಟಿಸಿದ್ದಾನೆ.

ವಿರುಪಂಣ ಒಡೆಯ : ಇವನು ಬುಕ್ಕರಾಯನ ಮಗ. ಇವನು ೧೩೬೮ ರಲ್ಲಿ ಆರಗವನ್ನು ಆಳುತ್ತಿದ್ದಾಗ ಕೌಲೆದುರ್ಗದ ಮೈಲಾರದೇವರ ಅಮೃತಪಡಿಗೆ**[11]** ಮತ್ತು ಇಲ್ಲಿಯ ವಿರಕ್ತಮಠಕ್ಕೆ**[12]** ಭೂದಾನ ನೀಡಿದ್ದಾನೆ. ಕೋಡೂರಿನ ದಾನ ಶಾಸನದಲ್ಲಿಯೂ ಇವನ ಪ್ರಸ್ತಾಪವಿದೆ**[13]** ವಿರುಪಂಣ ಒಡೆಯನ ಕಾಲದಲ್ಲಿ ಹೆದ್ದೂರು ನಾಡಿನ ಕಣಿಗ್ರಾಮದ ಪಾರ್ಶ್ವನಾಥ ಬಸದಿಗೆ ಆಬಾರಿಗಳು, ಸೂರಿಗಳು, ಮಹಾಪ್ರಧಾನ ನಾಗಂಣ, ಪ್ರಧಾನಿ ದೇವರಸ ಆರಗದ ಪಟ್ಟಣಸಾಮಿ ಮಾಚಿ ಸೆಟ್ಟಿ ಮತ್ತು ಗುಮ್ಮಟಸೆಟ್ಟಿಯು ಏಕತ್ರರಾಗಿ ಭೂದಾನ ನೀಡಿದರೆಂದು ಈ ಗ್ರಾಮದಲ್ಲಿರುವ ಶಾಸನದಲ್ಲಿದೆ.**[14]**ಇವನ ಕಾಲದಲ್ಲಿ ವೀರಪ್ಪ ಒಡೆಯರ ಕುಮಾರ ಸೋಮಂಣ ಒಡೆಯರು ಜಾಗಟಗಾರು ದೇವಣ್ಣ ಭಟ್ಟರಿಗೆ ಭೂದಾನ ನೀಡಿದ ಶಾಸನವಿದೆ.**[15]**ಇವನು ೧೩೪೭ರಲ್ಲಿ ಆರಗದಲ್ಲಿ ಆಳುತ್ತಿದ್ದ ವೀರ ಹರಿಯಪ್ಪ ಒಡೆಯನ ಮಗನಿರಬೇಕು.

ವೇದಗಿರಿ ವಿರುಪರಾಯ : ಇವನು ಬುಕ್ಕರಾಯ ಮತ್ತು ಪದುಮಲದೇವಿಯರ ಮಗ. ಅತ್ತಿಗಾರಿನ ಶಾಸನದಲ್ಲಿ ಇವನನ್ನು ಬುಕ್ಕರಾಯ ಕುಮಾರ ವೀರ ಉದಗಿರಿ ವಿರುಪಂಣ ಒಡೆಯ ಎಂದು ಉಲ್ಲೇಖಿಸಿದೆ.**[16]** ಇವನ ತಾಯಿ ಪದುಮಲ ದೇವಿಯು ವಾಸುಕಾರ ರಾಮದೇವನ ಮಗಳು. ಮಂಜಾದೇವಿಯು ವಿರುಪರಾಯನ ಪತ್ನಿ ಇವರಿಬ್ಬರೂ ಆರಗದ ವೀರಭದ್ರ ದೇವರಿಗೆ ವೈಭವದ ಉತ್ಸವ ನಡೆಸಿದರು. **(ಶಾಸನ ಅಸ್ಪಷ್ಟ)** ಕೊನೆಗೆ ವೇದಗಿರಿ ವಿರುಪಂಣ ಒಡೆಯರ ಕೂಡಿ ಮಂಜಾದೇವಿಯು ಸ್ವರ್ಗವನ್ನು ಸೂರೆಗೊಂಡಳೆಂದು ಹೇಳಿದೆ.**[17]**

ಚಿಕ್ಕರಾಜ ಒಡೆಯ : ಇವನು ಇಮ್ಮಡಿ ಹರಿಹರ ರಾಯನ ಮಗ. ಈಸರಾಪುರದ ಶಾಸನದಲ್ಲಿ ಮೊದಲ ಬಾರಿಗೆ ಇವನನ್ನು ಶ್ರೀಮನ್ಮಹಾಮಂಡಳೇಶ್ವರ ಎಂದು ಕರೆದಿದೆ.**[18]**ಇವನು ೧೩೭೬ ರಲ್ಲಿ ಚಂದ್ರುಗುತ್ತಿಯನ್ನು ಸಹ ಆಳುತ್ತಿದ್ದನು.

ಇವನ ಪಾದಪದ್ಮೋಪಜೀವಿಯಾದ ವೀರ ವಸಂತರಾಯನು ಮಹಾವೀರ. ಶಾಸನದಲ್ಲಿ ಇವನಿಗೆ "ಅರಿರಾಯ ಭಯಂಕರ ಮೂವರ ರಾಯರಗಂಡ, ತುರುಕದಳ ವಿಭಾಡ, ವೈರಿರಾಯ ಮಸ್ತಕಶೂಲ" ಮುಂತಾದ ಪ್ರಶಸ್ತಿಗಳನ್ನು ಹೇಳಿದೆ. ಇದರಿಂದ ಇಮ್ಮಡಿ ಹರಿಹರನು ಈ ಎರಡು

ಕಂಪಣಗಳ ರಕ್ಷಣೆ ಮತ್ತು ಚಿಕ್ಕರಾಜ ಒಡೆಯನಿಗೆ ಆಡಳಿತದಲ್ಲಿ ಸಹಾಯ ಮಾಡಲು ಇವನನ್ನು ನೇಮಿಸಿರಬೇಕು. ೧೩೭೮ರ ಈ ಶಾಸನದಲ್ಲಿ ಹೇಳಿರುವ ಬಸಪ್ಪನಾಯಕನು ಈಸರಾಪುರದ ಪೆರಗ್ಗಡೆ.

ಮಲ್ಲಪ್ಪ ಒಡೆಯ : ಇವನು ಇಮ್ಮಡಿ ಹರಿಹರ ರಾಯನ ವಂಶದವನು. ೧೩೯೦ರಲ್ಲಿ ಆರಗದಲ್ಲಿ ಆಳುತ್ತಿದ್ದಾಗ ನೆಲವಾಗಿಲು ಮೈಲಾರಲಿಂಗೇಶ್ವರ ದೇವಾಲಯಕ್ಕೆ ಭೂದಾನ ನೀಡಿದ್ದನೆಂದು ಇಲ್ಲಿರುವ ಶಾಸನದಲ್ಲಿದೆ.**[19]**

ವೀರಣ್ಣ ಒಡೆಯ : ೧೩೯೪ರಲ್ಲಿ ಆಡಳಿತ ನಡೆಸುತ್ತಿದ್ದ ಇವನು ಚಿಕ್ಕರಾಜ ಒಡೆಯನ ಮಗ. ಇವನಿಗೆ ವೀರ ಸೋಮಂಣ ಎಂಬ ಇನ್ನೊಂದು ಹೆಸರಿತ್ತು. ಇವನು ತೀರ್ಥಹಳ್ಳಿಯ ಬುಕ್ಕರಾಯಪುರದ ಮಹಾಜನಂಗಳಿಗೆ (ಬ್ರಾಹ್ಮಣರಿಗೆ) ಭೂದಾನ ನೀಡಿ ಶಿಲಾಪ್ರತಿಷ್ಠೆ ಮಾಡಿಸಿದನು.**[20]**ಇವನು ಆಳುತ್ತಿದ್ದಾಗ ೧೩೯೦ರಲ್ಲಿ ಮರಣ ಹೊಂದಿದ ಇಮ್ಮಡಿ ಹರಿಹರನಿಗೆ ಮುಕ್ತಿ ಸಿಗಲೆಂದು ಮುಕ್ತಿಹರಿಹರಪುರ ಎಂಬ ಅಗ್ರಹಾರವನ್ನು ಸ್ಥಾಪಿಸಿ ಬ್ರಾಹ್ಮಣರಿಗೆ ಸ್ಥಳ ವೃತ್ತಿಯನ್ನು ಕಲ್ಪಿಸಿದನು. ಈ ಶಾಸನದಲ್ಲಿ ಅಗ್ರಹಾರ ಸ್ಥಾಪನೆಯ ಕಾಲವನ್ನು ಹೇಳಿಲ್ಲ.**[21]** ರಾಮರಸನು ವೀರಣ್ಣ ಒಡೆಯನ ಮನೆಯ ಪ್ರಧಾನನೆಂದು ಹೇಳಿದೆ. ಬಹುಶಃ ಇವನು ರಾಜನ ಆಪ್ತ ಕಾರ್ಯದರ್ಶಿಯಾಗಿರಬಹುದು.**[22]**

ಜನ್ನಪ್ಪ ಒಡೆಯ : ಇವನು ೧೪೦೦ ರಲ್ಲಿ ಆರಗವನ್ನು ಆಳುತ್ತಿದ್ದಾಗ ಚಿಕ್ಕವಳ್ಳಿಯ ದೇವಾಲಯಕ್ಕೆ ದಾನ ನೀಡಿದ್ದಾನೆ.**[23]**ಇದರ ಹೊರತಾಗಿ ಇವನ ಬಗ್ಗೆ ವಿವರಗಳಿಲ್ಲ.

ರಾಯಪ್ಪಯ್ಯ ವೀರಪ್ಪಯ್ಯ ಒಡೆಯ : ೧೪೦೩ರಲ್ಲಿ ಆಡಳಿತ ಸೂತ್ರಧಾರಿಯಾದ ಇವನು ಸಂಕಪ್ಪರಾಯಪ್ಪನ್ವಯದವನೆಂದು ಹೇಳಲಾಗಿದೆ. ಇವನು ಅಬಿಪ್ಪಗಳ ಮಕ್ಕಳು ವಿಠಪ್ಪ ಎಂಬುವರಿಗೆ ಭೂದಾನ ನೀಡಿದ ದಾಖಲೆಯಿದೆ.**[24]**

ವಿಠಂಣ : ಇವನ ಹೆಸರಿನ ಮುಂದೆ ಒಡೆಯ ಎಂಬ ಉಪನಾಮವಿಲ್ಲ. ಇವನು ರಾಜ ಕುಟುಂಬದ ಬಂಧುವಾಗಿ ಬೇರೊಂದು ಅನ್ವಯಕ್ಕೆ ಸೇರಿದವನೆಂದು ತಿಳಿಯುತ್ತದೆ. ಇದರಂತೆ ಇವನನ್ನು ರಾಮಪ್ಪ ಒಡೆಯರ ಬೊಂಮಣಗಳ ಮಕ್ಕಳು ವಿಠಣ್ಣಗಳು ಎಂದು ಶಾಸನದಲ್ಲಿ ಉಲ್ಲೇಖಿಸಿದೆ. ೧೪೦೩ರಲ್ಲಿ ಇವನು ಆಳುತ್ತಿದ್ದಾಗ ಆರಗದ ಕಲಿನಾಥ ದೇವರಿಗೆ ಭೂದಾನ ನೀಡಿದ್ದಾನೆ. ಇವನಿಗೆ ಸಂಬಂಧಿಸಿದ ಆರಗದ ಇನ್ನೊಂದು ಶಾಸನದಲ್ಲಿ ಹೊಂನಗುತ್ತಿಗೆ ಸಲುವ ಭೂಮಿ ಎಂದು ಹೇಳಿದೆ.**[25]** ಇವನು ಆರಗದ ಹಿರಿಯಂಗಡಿ ಬನದೇವಿ ದೇವಾಲಯಕ್ಕೆ ಭೂದಾನ ನೀಡಿದ್ದಾನೆ.**[26]**

ಇಮ್ಮಡಿ ವೀರಣ್ಣ ಒಡೆಯ : ಇವನು ೧೪೦೫ ರಿಂದ ಆರಗದಲ್ಲಿ ಆಡಳಿತ ನಡೆಸಿದ್ದಾನೆ. ಇಲ್ಲಿಯ ಕಲಿನಾಥ ದೇವಾಲಯದ ಒಂದು ಶಾಸನದಲ್ಲಿ ೧೪೦೫ರಲ್ಲಿ ಬುಕ್ಕರಾಯನು ವಿಜಯನಗರವನ್ನು ಆಳುತ್ತಿದ್ದಾಗ, "ಸಂಕಪ್ಪರಾಯಪ್ಪಾನ್ವಯ ಬ್ರಂಹರಾಜಕುಮಾರ ವೀರಪ್ಪ ಒಡೆಯರು ಆರಗದಲ್ಲಿ ರಾಜ್ಯವಾಳುತಿರೆ ಮದುವಂಕನಾಡ ಸಮಸ್ತಗವುಡ ಪ್ರಭುಗಳು" ಸೇರಿ ಕಲಿನಾಥದೇವರಿಗೆ ಭೂದಾನ ನೀಡಿದ್ದಾರೆ.**[27]**ಇದೇ ಸ್ಥಳದ ಇನ್ನೊಂದು ಶಾಸನದಲ್ಲಿ ಬುಕ್ಕರಾಯನ ನಿರೂಪದಿಂದ "ಹೇಮಾದ್ರಿಪ್ರೋಕ್ತಸರಳ ದಾನ ದೀಕ್ಷಾಗುರು ಸಂಕಪ್ಪರಾಯ ಪ್ಪಾನ್ವಯ ಬ್ರಂಹರಾಜ ಕುಮಾರ" ಎಂದು ಕಾಣಿಸಿದೆ.**[28]** ಇಲ್ಲಿಯ ಮತ್ತೊಂದು ಶಾಸನದಲ್ಲಿ ಶ್ರೀಮತುಸುಭತೀರ್ಥ ಶ್ರೀ ಪಾದಂಗಳು ಆರಾಧಿಸುವ ಅಮೃತಪಡಿಗೆ ಅಯೋಧ್ಯಾಪುರವೆಂದು ರಾಯಪ್ಪಗಳ ಬೊಮ್ಮಣಗಳ ಮಗ ವೀರಂಣಗಳು ಸಹಿರಣ್ಯೋದಕ ದಾನ ಎಂದು ಓದಿಸಿಕೊಳ್ಳುತ್ತದೆ.**[29]**ಹೀಗೆ ಶಾಸನೋಕ್ತ ಹೇಳಿಕೆಗಳೆಲ್ಲಾ ವೀರಣ್ಣ ಒಡೆಯನಿಗೆ ಸಂಬಂಧಿಸಿವೆ. ಇವನು ಕೂಡಲಿ ಶ್ರೀಮಠದ ಯತಿಗಳಾಗಿದ್ದ ಅಕ್ಷೋಭ್ಯತೀರ್ಥರ ಸಮಕಾಲೀನನಾಗಿದ್ದನು. ಇವನಿಗೆ ಸರಳದಾನ ದೀಕ್ಷಾಗುರು ಎಂದು ಹೇಳಿದೆ.

ಈಚಲುಬಯಲು ಕ್ರಿ.ಶ. ೧೪೦೫ರ ಶಾಸನದಲ್ಲಿ ಆರಗದ ವೇಂಟೆಯ ಒಳಗಿನ ಸಾಂತಳಿಗೆ ಸಾವಿರ ಎಂದಿರುವುದರಿಂದ ಆಗ ಸಾಂತಳಿಗೆಯು ಆರಗದ ಆಡಳಿತದಲ್ಲಿತ್ತು ಎಂದು ತಿಳಿಯುತ್ತದೆ.[30]

ಸಿರಿಗಿರಿನಾಥದೇವ : ಆರಗದ ಒಂದು ಶಾಸನದಲ್ಲಿ ತಂಮಣ ಒಡೆಯರ ಮಕ್ಕಳು ಸಿರಿಗಿರಿನಾಥ ಒಡೆಯರು ಛತ್ರ ಕಟ್ಟಿಸಿ ಭೂದಾನ ನೀಡಿದರೆಂದು ಉಲ್ಲೇಖವಾಗಿದೆ. ಇವನು ವಿಜಯನಗರದ ಪ್ರಭು ಇಮ್ಮಡಿ ದೇವರಾಯ (೧೪೨೯-೧೪೪೬) ನ ಕಾಲದಲ್ಲಿ ೧೪೨೨ರಲ್ಲಿ ಆರಗದಲ್ಲಿ ಆಳುತ್ತಿದ್ದು ಇಲ್ಲಿಯ ಅಖಂಡೇಶ್ವರ ದೇವಾಲಯಕ್ಕೆ ಭೂದಾನ ನೀಡಿದ್ದಾನೆ.[31]

ಸಿರಿಯಮ್ಮ ಹೆಗ್ಗಡೆ : ಇವನು ವಿಜಯನಗರದ ರಾಜವಂಶದ ಬಂಧುವಾಗಿರಬಹುದು. ಹೊರಬೈಲಿನ ದೇವಾಲಯಕ್ಕೆ ನೀಡಿದ ದಾನ ಶಾಸನದಂತೆ ಇವನು ಆರಗದಲ್ಲಿ ೧೪೫೧ ರಲ್ಲಿ ಆಳುತ್ತಿದ್ದನೆಂದು ತಿಳಿಯುತ್ತದೆ.[32]

ದೇವಪ್ಪ ಡಣಾಯಕ : ಈವರೆಗೆ ಆರಗದಲ್ಲಿ ಆಳುತ್ತಿದ್ದ ರಾಜವಂಶದವರ ಆಡಳಿತ ಕಣ್ಮರೆಯಾದಂತೆ ತಿಳಿಯುತ್ತದೆ. ಬಹುಶಃ ಸೈನ್ಯಾಧಿಪತಿಯಾಗಿದ್ದ ದೇವಪ್ಪ ಡಣಾಯಕನು ೧೪೬೭ರಲ್ಲಿ ಆರಗದಲ್ಲಿ ಆಳುತ್ತಿದ್ದನೆಂದು ಇವನು ನಾಬಳದ ದೇವಾಲಯಕ್ಕೆ ನೀಡಿದ ದಾನ ಶಾಸನದಿಂದ ತಿಳಿಯುತ್ತದೆ.[33] ಮುಂದೆ ೧೫೦೯ ರವರೆಗೆ ಆಡಳಿತ ವಿವರ ದೊರೆತಿಲ್ಲ. ನಂತರ ಆರಗ ೧೮ ಕಂಪಣವು ಕೆಳದಿಯ ಸಂಸ್ಥಾನಕ್ಕೆ ಸೇರಿಕೊಂಡಿತು. ಇಲ್ಲಿಗೆ ಆರಗದ ರಾಜಕೀಯ ಇತಿಹಾಸದ ಮೊದಲ ಘಟ್ಟಕ್ಕೆ ತೆರೆಬಿದ್ದಿತು.

ಎರಡನೆಯ ಘಟ್ಟ

ಸದಾಶಿವನಾಯಕ : (೧೫೧೪-೧೫೩೭) ಇವನಿಂದ ಆರಗದ ರಾಜಕೀಯ ಚಟುವಟಿಕೆಯ ಎರಡನೆಯ ಘಟ್ಟ ಆರಂಭವಾಗುತ್ತದೆ. ವಿಜಯನಗರದ ದೊರೆ ಕೃಷ್ಣದೇವರಾಯನು (೧೫೦೯-೧೫೨೯) ಆರಗದ ೧೮ ಮಾಗಣೆಯ ಆಡಳಿತವನ್ನು ಕೆಳದಿಯ ಸದಾಶಿವನಾಯಕನಿಗೆ ವಹಿಸಿದನು.[34]ವಿಜಯನಗರದ ಸಾಮಂತನಾಗಿದ್ದ ಈ ಅರಸನು ಇಕ್ಕೇರಿಯಿಂದ ಆರಗದ ಆಡಳಿತವನ್ನು ನಿರ್ವಹಿಸಿದನು. ಇವನು ಆರಗದ ಸದಾಶಿವಪುರ ಅಗ್ರಹಾರದಲ್ಲಿ ವೈದಿಕರ ಪುನರ್ವಸತಿಗೆ ಆದ್ಯತೆ ನೀಡಿದನು.[35] ಹೀಗೆ ಆರಗ ಕೆಳದಿ ಅರಸರ ನೇರ ಆಡಳಿತಕ್ಕೆ ಒಳಪಟ್ಟಿತು.

ಆಸೇಸಪ್ಪ : ಇವನು ವಿಜಯನಗರದ ರಾಜಪ್ರತಿನಿಧಿಯಾಗಿ ೧೫೬೦ರಲ್ಲಿ ಆರಗವನ್ನು ಆಳುತ್ತಿದ್ದನೆಂದು ಒಳಗೋಡು ಶಾಸನದಿಂದ ತಿಳಿಯುತ್ತದೆ. ಹೆಚ್ಚಿನ ವಿವರಗಳು ದೊರೆತಿಲ್ಲ.[36] ವಿಜಯನಗರ ಕಾಲದಲ್ಲಿ ಆರಗವನ್ನು ಒಂದು ಪ್ರತ್ಯೇಕ ರಾಜ್ಯ ಘಟಕವನ್ನಾಗಿ ಮಾಡಲಾಯಿತೆಂದು ಹಿಂದೆಯೇ ಹೇಳಿದೆ. ಇದಕ್ಕೆ ಬೇರೆ ಬೇರೆ ಹೆಸರಿತ್ತು ಎಂದು ಶಾಸನದಲ್ಲಿದೆ.

೧. **ರಾಜ್ಯ :** ಎಂದು ಕರೆದಿರುವ ದಾಖಲೆಗಳು.
ಅ) ಆಸೇಸಪ್ಪನವರು ಆರಗರಾಜ್ಯವನ್ನು ಸುದರ್ಮದಲ್ಲಿ ಪಾಲಿಸುತ್ತಿರೆ.[37]
ಆ) ಆರಗ ರಾಜ್ಯಕ್ಕೆ ಸಲುವ ಮದುವಂಕನಾಡಸೀಮೆ.[38]

೨. **ಕಂಪಣ**
(೧) ಆರಗದ ೧೮ ಕಂಪಣದ ಒಳಗಿನ ನೆಲುವಳಿಗೆ ನಾಡು[39]
(೨) ಆರಗದ ವೇಂಟೆಗೆ ಸಲುವ ೧೮ ಕಂಪಣ[40]
(೩) ಆರಗದ ೧೮ ಕಂಪಣದ ಸಮಸ್ತ ನಾಡು[41]
(೪) ಆರಗದ ನಾಡ ೧೮ ಕಂಪಣ[42]

೩. ವೇಂಟೆ
(೧) ಆರಗದ ವೇಂಟೆ**[43]**
(೨) ಆರಗದ ವೇಂಟೆಗೆ ಸಲುವ**[44]**
(೩) ಆರಗದ ವೇಂಟೆಯ ಸೀಮೆ**[45]**

೪. ಸೀಮೆ
(೧) ಆರಗದ ಸೀಮೆಯ ಹೊಳೆಹೊನ್ನೂರು**[46]**
(೨) ಆರಗ ಗುತ್ತಿ ಸೀಮೆ**[47]**

೫. ಹೋಬಳಿ

(೧) ಆರಗದ ಹೋಬಳಿ**[48]**

೬. ಮಾಗಣೆ

(೧) ಆರಗರಾಜ್ಯವನು ಮಾಗಣೆಯಾಗಿ

ಆರಗ ರಾಜ್ಯದಲ್ಲಿ ನಿರ್ದಿಷ್ಟವಾಗಿ ಎಷ್ಟು ಸೀಮೆಗಳಿತ್ತು ಎಂಬ ಅಂಕೆ ಸಂಖ್ಯೆಗಳು ದೊರೆತಿಲ್ಲ ಶಾಸನದಲ್ಲಿ ಈ ಕೆಳಗಿನ ಸೀಮೆಗಳ ಹೆಸರು ಕಂಡು ಬಂದಿದೆ.

ಹೆರ್ದ, ಹೊಕ್ಕಳಿ, ಮದುವಂಕನಾಡು, ಗಾಜನೂರು, ಹೊಸ ಎಡತ್ತೊರೆ, ಮಂಡಗದ್ದೆ, ಹಣಗೇರಿ, ಹಲಸರ, ವಾಸದ, ದಾನಿವಾಸ, ಕೆಳದಿ ದೇವಸ್ಥಾನ, ಆರಗ ದೇವಸ್ಥಾನ, ಕಲ್ಲು ಕೊಡಗಿ, ಕಿರುವರಿಗೆ, ಗಡತ್ತಾರೆ, ಹೊನ್ನಾಳಿ, ಹಾರನಹಳ್ಳಿ, ಹೊಂಬುಜ, ಮತ್ತೂರು, ಉಡಗಣಿ, ಶಿವಪುರ, ಸೀತೂರು, ಮೊಸರೂರು, ಕುಪಟೂರು, ನೆಲವತ್ತಿ (ನ್ಯಾಮತಿ), ನಿಡುವಲ ಹೊನ್ನೆಕೊಪ್ಪ, ಹಲವುಸಾಲೆ, ನೇರ್ಲಕೊಪ್ಪ, ಕನ್ನಂಗಿ, ಮಾಳೂರು, ತುರುವಳ.

ಘಟಕದ ಸ್ವರೂಪ (ನಕಾಶೆ ನೋಡಿ)

ಆರಗದ ೧೮ ಕಂಪಣವನ್ನು ಇಚ್ಛೆ ೯ ಕಂಪಣ ಈಳೆ ೯ ಕಂಪಣ ಎಂದು ಪ್ರಮುಖವಾಗಿ ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ.**[49]** ಇಚ್ಛೆ ಮತ್ತು ಈಳೆ ಎಂಬುದು ಸ್ಥಳನಾಮವೆ ಅಥವಾ ಒಂದು ವಿಭಾಗದ ಹೆಸರಿರಬಹುದೆ ಎಂಬುದು ತಿಳಿಯುವುದಿಲ್ಲ. ಸಾಗರದ ಬಳಿ ಈಳಿ ಎಂಬ ಗ್ರಾಮವಿದೆ. ಇದನ್ನೇ ಈಳೆ ಎಂದು ಹೇಳಲು ಆಧಾರವಿಲ್ಲ. ಮೇಲೆ ಹೇಳಿದಂತೆ ಕಂಪಣ, ವೇಂಟೆ, ರಾಜ್ಯ, ನಾಡುಗಳನ್ನು ಒಟ್ಟಾಗಿಯೂ ಹೇಳಲಾಗಿದೆ. ಉದಾಹರಣೆಗೆ

೧) ೧೮ ಕಂಪಣದ ನಾಡು
೨) ಆರಗದ ಸೀಮೆ ವೇಂಟೆ
೩) ಆರಗದ ವೇಂಟೆಗೆ ಸಲುರ್ವ ಕಂಪಣ ಇತ್ಯಾದಿ

ಹೀಗೆ ಆರಗವು ಒಂದು ಕಂಪಣ, ರಾಜ್ಯ, ವೇಂಟೆ, ಸೀಮೆ, ಹೋಬಳಿ, ನಾಡು ಎಂದೆಲ್ಲ ಕರೆಸಿಕೊಂಡಿದೆ. ಇದರಲ್ಲಿ ೧೮ ಕಂಪಣಗಳು ೧೮ ಸೀಮೆಗಳಾಗಿದ್ದ ಸಾಧ್ಯತೆಯಿದೆ. ಆದರೂ ಈ ವಿಭಾಗಗಳ ವಿಸ್ತಾರವಾಗಲೀ ಇವುಗಳಲ್ಲಿದ್ದ ಗ್ರಾಮಗಳ ಸಂಖ್ಯೆಯಾಗಲೀ ತಿಳಿದಿಲ್ಲ.

ಆರಗವೇಂಟೆಯಲ್ಲಿ ಆರಗ, ಕೊಡಲೂರು (ಕೋಡೂರು) ಯಡೆಹಳ್ಳೀ, ಆವಿನಹಳ್ಳಿ, ಕಾರಲೂರು (ಕರೂರು) ಬಿದರೂರು, ಮೊಸರೂರು, ಮಾಳೇನಹಳ್ಳಿ ಎಂಬ ಎಂಟು

ಪೇಟೆಗಳಿತ್ತು ಎಂದು ಕೌಲೆದುರ್ಗದ ಒಂದು ಶಾಸನದಲ್ಲಿದೆ.[50]ಇನ್ನೊಂದು ಶಾಸನದಲ್ಲಿ ಆರಗದ ವೇಂಟೆಯ ರಾವಣದೊಳಗಣ ಎಂದು ಹೇಳಿದೆ.[51]ಇದನ್ನು ಸೀಮೆ ಎಂಬ ಅರ್ಥದಲ್ಲಿ ಹೇಳಿರಬಹುದು.

[1]ಹಂಪನಾಗರಾಜಯ್ಯ, ಸಾಂತರರು ಒಂದು ಅಧ್ಯಯನ ಪು ೧೩-

[2]ಎಫಿಗ್ರಾಫಿಯಾ ಕರ್ನಾಟಕಾ (ಎ.ಕ.)ಸಂ. ೮, (ರೈಸ್ ಸಂಪಾದಿತ) ಸೊರಬ ೩೭೫ ಸೊರಬ ೧೩೪೭

[3]ಕಪಟರಾಳು ಕೃಷ್ಣರಾವ್ ಕರ್ನಾಟಕ ಸಂಸ್ಕೃತಿಯ ಸಂಶೋಧನೆ ಪು ೨೪೪

[4]ಇದೇ ಪು ೨೫೦

[5]ಎ.ಕ. ೭ ಶಿಕಾರಿಪುರ ೧೮೭ ಕ್ರಿ.ಶ. ೧೩೮೧

[6]ಎ.ಕ.೮. ಸೊರಬ ೩೭೫

[7]ಎ.ಕ.೭. ಶಿಕಾರಿಪುರ ೧೮೭.

[8] Sewell R. Forgotten Empire Bukka had seven sons in 1360 AD. Bukka's eldest son was Spreading the rule of Vijayanagar Kingdom in Araga and Mangalore Rajya. He captured the fort of Uccangi. Sewell identifies this Thippanna with Harihara II. In 1361 Mararasa was goverining Mangalore. Z.

[9] Belaguthi kaifiat Q.J.M.S. (Quarterly Journal mythic society) Bangalore Vol XXXV AP 1945 P.67

[10]ಎ.ಕ. ೮ ತೀರ್ಥಹಳ್ಳಿ ೮ ಮಾಕೋಡು ೧೩೯೭

[11]ಇದೇ ೯೭ ಕವಲೆದುರ್ಗ ೧೩೭೬

[12]ಇದೇ ೩೦ ಮಿಟಲಗೋಡು ೧೩೬೮

[13]ಇದೇ ನಗರ ೭೩ ಕೋಡೂರು ೧೩೬೮

[14]ಇದೇ ತೀರ್ಥಹಳ್ಳಿ ೯೪ ಕಣಿಗ್ರಾಮ ೧೩೭೬

[15]ಇದೇ ೧೩೨ ಜಾಗಟಗಾರು ೧೩೬೯

[16]ಇದೇ ೨೮ ಅತ್ತಿಗರು ೧೩೭೬

[17]ಇದೇ

[18]ಎ.ಕ. ೭ ಹೊನ್ನಾಳಿ ೮೪ ಈಸರಾಪುರ ೧೩೭೯

[19]ಅದೇ ಶಿಕಾರಿಪುರ ೩೧೩ ಗೊಡ್ಡನಕೊಪ್ಪ ೧೩೯೦

[20]ಎ.ಕ. ೮ ತೀರ್ಥಹಳ್ಳಿ ೯೨ ಕುರುವಳ್ಳಿ ೧೩೯೪

[21]ಇದೇ ೧೬೪ ಮುಕ್ತ ಹರಿಹರಪುರ ಕ್ರಿ.ಶ. ?

[22]ಇದೇ ೧೨೫ ಹುತ್ತವಳ್ಳಿ ೧೩೭೬

[23]ಇದೇ ೩೧ ಚಿಕ್ಕಹಳ್ಳಿ ೧೪೦೦

[24]ಇದೇ ೧೩೩ ಕುರುವಳ್ಳಿ ೧೪೦೩

[25]ಇದೇ ೯ ಆರಗ ೧೪೦೩

[26]ಇದೇ ೧೩ ಆರಗ ೧೪೦೪

[27]ಇದೇ ೪ ಆರಗ ೧೪೦೫

[28]ಇದೇ ೧೨ ಆರಗ

[29]ಇದೇ ಬಾಳಗಾರು ನಂ. ೨೪

[30]ಇದೇ ೨೨ ಈಚಲಬೈಲು ೧೪೦೫

[31]ಇದೇ ೧೪ ಆರಗ ೧೪೨೨

[32]ಇದೇ ೧೫೨ ಹೊರಬೈಲು ೧೪೫೧

[33]ಇದೇ ೧೬೨ ನಾಬಳ ೧೪೬೭

[34]ವಚನ || ಮತ್ತವಾದಲ್ಲಿದಾ ಸದಾಶಿವರಾಯನಯಕನನಾರಗದ ಕುಶಾವತಿನಗರದ ನದಿತೀರದೊಳ್ ಸದಾಶಿವಪುರವೆಂಬ ಅಗ್ರಹಾರಂ ಕಟ್ಟಿಸಿ ಭೂಸುರಾರ್ಗೆ ಮತ್ತುತ್ತ ಮನಿವೇಶನ ವೃತ್ತಿ ತೇತ್ರುಂಗಳಂ ಕಲ್ಪಿಸಿ, ಶಿವಾರ್ಪಿತವಾಗಿ ಧಾರೆ ಎರೆದು ಸ್ಥಿರ ಶಾಸನಂ ಬರಸಿತ್ತ, ಕೆಳದಿನೃಪ ವಿಜಯ ಪು ೭೦

[35]ಇದೇ

[36]ಎ.ಕ. ೮ ತೀರ್ಥಹಳ್ಳಿ ೧೦೩ ಒಳಗೋಡು ೧೫೬೦

[37]ಇದೇ ನಗರ ೧೩೪ ಸಂಪಿಗೆ ಕೋಟೆ ೧೫೬೬

[38]ಇದೇ ತೀರ್ಥಹಳ್ಳಿ ೪ ಆರಗ ೧೬೪೦

[39]ಅಡಿಟಿಪ್ಪಣಿ ೫

[40]ಇದೇ ನಗರ ೧, ೩, ೪ ಸಂಪಿಗೆ ಕೋಟೆ ೧೫೬೬

[41]ಇದೇ ತೀರ್ಥಹಳ್ಳಿ ೯ ಆರಗ ೧೪೦೩

[42]ಇದೇ ೧೪ ಇದೇ ೧೪೨೨

[43]ಇದೇ ನಗರ ೭೩ ನಗರ ೧೫೫೧

[44]ಎ.ಕ. ೭ ಹೊನ್ನಾಳಿ ಕುರುವಗಡ್ಡೆ ೧೫೫೬

[45]ಎಂ.ಎ.ಆರ್. (ಮೈಸೂರು ಅರ್ಕಿಯಾಲಾಜಿಕಲ್ ರಿಪೋರ್ಟ್) ೧೯೨೩ ನಂ. ೧೩೮

[46]ಇದೇ ೧೪೨೨ ನಂ. ೫೭

[47]ಎ.ಕ. ೮ ತೀರ್ಥಹಳ್ಳಿ ೫ ತೀರ್ಥಹಳ್ಳಿ ೧೫೭೩

[48]ಇದೇ ತೀರ್ಥಹಳ್ಳಿ ೪೭ ಕವಲೆದುರ್ಗ ೧೭೦೯

[49]ಎಂ.ಎ.ಆರ್. ೧೯೪೩ ಪು ೩೦

[50]ಇದೇ ೧೯೩೦ ನಂ. ೪

[51]ಎ.ಕ. ೮ ತೀರ್ಥಹಳ್ಳಿ ೨೪ ಬಾಳಗಾರು ೧೬೭೪

ಮಲೆಕರ್ನಾಟಕದ ಅರಸು ಮನೆತನಗಳು: ೧೨. ಆರಗದ ಅರಸರು (೨)

ರಾಜ್ಯ ವಿಸ್ತಾರ

ಒಳಗೋಡಿನ ೧೫೬೦ರ ಒಂದು ಶಾಸನವು ಈ ರಾಜ್ಯದಲ್ಲಿ ೫೦ ನಾಡುಗಳಿವೆ ಎಂದು ಉಲ್ಲೇಖಿಸಿದೆ. ಕೊಡೂರಿನ ಶಾಸನವು ಆರಗ ೧೮ ಕಂಪಣ ಹೊಯ್ಸಳ ರಾಜ್ಯದ ಮೇಲೆ ಎಂದು ಹೇಳುತ್ತದೆ. ಇದರಲ್ಲಿರುವ ಹೊಯ್ಸಳ ರಾಜ್ಯದ ಮೇರೆ ಎಂದರೆ ಹೊಯ್ಸಳರ ಆಡಳಿತದಲ್ಲಿದ್ದ ಸಾಂತಳಿಗೆ ಸಾವಿರ ಮತ್ತು ಮಂಡಳಿ ಸಾವಿರ ಆಗುತ್ತದೆ. ಶಾಸನದ ಆಧಾರದಂತೆ ಆರಗದ ರಾಜ್ಯಕ್ಕೆ ತೀರ್ಥಹಳ್ಳಿ ತಾಲ್ಲೂಕಿನ ಕೆಲವು ಹಳ್ಳಿಗಳು ಹಾಗೂ ಕೊಪ್ಪ, ನರಸಿಂಹರಾಜಪುರದ ಹಲವು ಗ್ರಾಮಗಳು ಮತ್ತು ದಾನಿವಾಸದ ಸೀಮೆಯು ಸೇರಿದಂತೆ ತಿಳಿಯುತ್ತದೆ.

ಆಡಳಿತ ಪದ್ಧತಿ

ವಿಜಯನಗರದ ರಾಜವಂಶದವರು ಆರಗವನ್ನು ರಾಜಪ್ರತಿನಿಧಿಗಳಂತೆ ಆಳಿದರು. ಚಿಕ್ಕರಾಜ ಒಡೆಯನಿಗೆ ಮಾತ್ರ ಶಾಸನದಲ್ಲಿ ಶ್ರೀಮನ್ಮಹಾಮಂಡಳೇಶ್ವರ ಎಂದು ಸಂಬೋಧಿಸಿದೆ. ಆರಗದ ಪ್ರಭುತ್ವಕ್ಕೆ ಆಯ್ಕೆ ಮಾಡುವ ಪೂರ್ಣಸ್ವಾತಂತ್ರ್ಯ ವಿಜಯನಗರದ ಪ್ರಭುಗಳಿಗೆ ಮಾತ್ರ

ಮೀಸಲಾಗಿತ್ತು. ವಂಶಪಾರಂಪರ್ಯವು ಅರ್ಹತೆಯಾಗಿರಲಿಲ್ಲ. ಆದರೂ ಕೆಲವೊಮ್ಮೆ ಅದನ್ನು ಪರಿಗಣಿಸಿದ್ದರೆಂದು ಗಮನಿಸಬಹುದು.

ಆರಗದ ರಾಜ್ಯ ರಕ್ಷಣೆಗೆ ಪ್ರತ್ಯೇಕವಾದ ಸೈನ್ಯ ಆಡಳಿತಕ್ಕೆ ಸಚಿವರು ಮತ್ತು ಅಧಿಕಾರಿಗಳಿದ್ದರು. ಕಂದಾಯ ಮತ್ತು ತೆರಿಗೆಗಳನ್ನು ವಸೂಲು ಮಾಡುತ್ತಿದ್ದರು. ಮಿಕ್ಕೆಲ್ಲ ಕ್ಷೇತ್ರಗಳ ಆಡಳಿತದಲ್ಲೂ ವಿಜಯನಗರದ ಆಡಳೀತ ಕ್ರಮವನ್ನೇ ಅನುಸರಿಸಲಾಗಿತ್ತು.

ಮಾರಪ್ಪ ಮತ್ತು ವೀರಹರಿಯಪ್ಪನ ಕಾಲದಿಂದಲೇ ಸಚಿವಾಧಿಕಾರ ಸೂಚಕ ಉಲ್ಲೇಖಗಳಿವೆ. ಶಾಸನಗಳಲ್ಲಿ ಮಹಾಪ್ರಧಾನ ನಾಗಂಣ, ಪ್ರಧಾನಿ ದೇವರಸು ಮತ್ತು ಬೊಮ್ಮಣ್ಣ ಅಮಾತ್ಯರ ಸುತರಾದ ವಿಠಣ್ಣಗಳು ಎಂದು ಕಂಡುಬಂದಿದೆ.

ಗ್ರಾಮದ ಮುಖ್ಯಸ್ಥರನ್ನು ಗಉಡ ಪ್ರಭುಗಳು ಎಂದು ಕರೆಯಲಾಗಿದೆ. ಮಹಿಳೆಯಾಗಿದ್ದಲ್ಲಿ ಗಾವುಂಡಿ ಎಂದು ಕರೆದಿದೆ.[1]ಕುರುವಳ್ಳಿಯ ಶಾಸನದಲ್ಲಿ ರಾಯಸದ ಹರಿಯಪ್ಪಗಳು ಎಂದು ಹೇಳಿದೆ[2]ರಾಯಸ ಎಂದರೆ ಪತ್ರವನ್ನು ತರುವ ಒಬ್ಬ ವ್ಯಕ್ತಿ ಅಥವಾ ಅಧಿಕಾರಿ ಎಂದು ತಿಳಿಯುತ್ತದೆ. ಸೇನಬೋವ ಎಂಬುವನು ಗ್ರಾಮಲೆಕ್ಕಿಗ ಇವನಿಗೆ ಶಾನುಭೋಗ ಎಂದೂ ಕರೆಯುತ್ತಾರೆ. ಶಾಸನದಲ್ಲಿ "ಕಾರಗಡಿ ಗ್ರಾಮದ ಸೇನಬೋವ ವೀರಪ್ಪನಾಡಸೇನಬೋವ ನರಹರಿದೇವ" ಎಂದು ಕಂಡು ಬಂದಿದೆ.[3] ತಳವಾರನು ಗ್ರಾಮದ ಅಥವಾ ಊರಿನ ಕಾವಲುಗಾರ. ಆರಗದ ಶಾಸನದಲ್ಲಿ ತಳವಾರ ಜನ ಎರಡಕ್ಕೆ ಕೊಡವೀಸ ಎಂದು ಹೇಳಿದೆ.[4]

ಒಡೆಯರು, ಹೆಗ್ಗಡೆ, ಸಮಸ್ತ ಹಲರು

ಈ ಪದಗಳು ಅಧಿಕಾರದ ಸಂಕೇತವಲ್ಲ. ಸಾಮಾನ್ಯ ಅರ್ಥದಲ್ಲಿ ಒಡೆಯರು ಎಂದರೆ ಯಜಮಾನ, ಮಾಲಿಕ ಮತ್ತು ಗಣ್ಯವ್ಯಕ್ತಿ ಎಂದು ಪರಿಭಾವಿಸಬಹುದು. ಮಲೆನಾಡಿನಲ್ಲಿ ಒಡೇರು ಎಂಬ ಗ್ರಾಮ್ಯ ಶಬ್ದ ಬಳಕೆಯಲ್ಲಿದೆ.

ವಿಜಯನಗರದ ಸಂಗಮನ ಐದು ಮಕ್ಕಳ ಹೆಸರಿನೊಂದಿಗೆ ಒಡೆಯ ಎಂಬ ಉಪನಾಮವಿದೆ. ನಂತರ ಈ ಪದವು ಬಿಟ್ಟು ಹೋಗಿದೆ. ಸಾಮಾನ್ಯ ಕುಟುಂಬದಲ್ಲಿಯೂ ಒಡೆಯ ಎಂಬ ಪದದ ಬಳಕೆಯಿತ್ತು. ಆರಗದ ಒಂದು ಶಾಸನದಲ್ಲಿ ಮಳಿಗೆಯ ಸಂಕಪ್ಪ ಒಡೆಯರ ಮಕ್ಕಳು ತಂಮಣ್ಣ ಒಡೆಯರು ಎಂದಿದೆ. ತೀರ್ಥಹಳ್ಳಿಯ ವೈಷ್ಣವ ಮಠದ ಗುರುಗಳಿಗೂ ಸಹ ಅಮರೇಂದ್ರಪುರಿ ಒಡೆಯರ ಶಿಷ್ಯರು ದೇವೇಂದ್ರಪುರಿ ಒಡೆಯರು ಎಂದು ಹೇಳಿದೆ.[5] ಆರಗವನ್ನು ಆಳಿದ ಸಿರಿಯಮ್ಮನ ಮುಂದೆ ಹೆಗ್ಗಡೆ ಎಂದು ಸೇರಿಸಿದೆ. ಇದನ್ನು ಒಡೆಯ ಎಂಬ ಅರ್ಥದಲ್ಲಿ ಬಳಸಿರಬಹುದು. ಮಾಕೋಡು ಗ್ರಾಮದ ಒಂದು ಶಾಸನದಲ್ಲಿ ಮಹಾಜನ ಗಉಡ ಪ್ರಜೆಗಳು ಮದುವಂಕನಾಡ ಸಮಸ್ತ ನಾಡವರು ದೇವರ ಸನ್ನಿಧಿಯಲ್ಲಿ ಕುಳ್ಳಿರ್ದು ಎಂದು ಹೇಳಿದೆ.[6] ಹಾಗೆಯೇ ಇನ್ನೊಂದು ಶಾಸನವು 'ಆರಗದ ವೇಂಟೆಯ ಹದಿನೆಂಟು ಕಂಪಣದ ಸಮಸ್ತನಾಡು ಮೂರು ಪಟ್ಟಣದ ಸಮಸ್ತ ಹಲರು ಸರ್ವೈಕ್ಯಮತವಾಗಿ ಆರಗದ ಮೂಲಸ್ಥಾನ ಕಲಿನಾಥ ದೇವರ ಅಮೃತಪಡಿಗೆ ದಾನ'[7]ಎಂದು ಹೇಳಿದೆ. ಮೇಲಿನ ಎರಡು ಶಾಸನಗಳಲ್ಲಿ ಹಲರು ಎಂಬುದು ಹಲಬರು, ಹಲವರು ಎಂಬ ರೂಪದಲ್ಲಿಯೂ ಬಳಕೆಯಾಗಿದೆ. ಇಲ್ಲಿ ಸಮಸ್ತ ಹಲರು ಎಂದರೆ ಗಣ್ಯ ಪ್ರತಿನಿಧಿಗಳ ಸಮೂಹ ಅಥವಾ ಪ್ರತಿನಿಧಿಕ ಸಮುದಾಯ. ಈ ಪ್ರತಿನಿಧಿಗಳು ಯಾವ ಸ್ಥಳಕ್ಕೆ ಸೇರಿದವರೆಂಬುದನ್ನು ಸ್ಪಷ್ಟಪಡಿಸಲಾಗಿದೆ.

ರಾಜ್ಯಾದಾಯ ಮೂಲಗಳು

ಭೂಕಂದಾಯ, ತೆರಿಗೆ ಮತ್ತು ಸುಂಕವು ಆರಗ ರಾಜ್ಯದ ಸಂಪನ್ಮೂಲಗಳಾಗಿತ್ತು. ಮಾರುಕಟ್ಟೆಗಳಿಗೆ ಬರುವ ಪ್ರಮುಖ ಸರಕುಗಳ ಮೇಲೆ ಸುಂಕವನ್ನು ವಿಧಿಸಲಾಗಿತ್ತು. ಅಲ್ಲದೆ

ವೃತ್ತಿ ತೆರಿಗೆಯನ್ನು ವಸೂಲು ಮಾಡುತ್ತಿದ್ದ ದಾಖಲೆಗಳಿವೆ. ಹೊಂನು ಮತ್ತು ಗದ್ಯಾಣ ಚಲಾವಣೆಯಲ್ಲಿದ್ದ ನಾಣ್ಯಗಳು.

ಹೊಂನು : ಇದು ೧೦ ಹಣದ ಮೌಲ್ಯವಿದ್ದ ಚಿನ್ನದ ನಾಣ್ಯವೆಂದು ಹೇಳಲಾಗಿದೆ. ಇದನ್ನು "ಪೊನ್" ಎಂದೂ ಹೇಳುತ್ತಿದ್ದರು. ಇದು ಗದ್ಯಾಣಕ್ಕೆ ಸಮನಾದ ನಾಣ್ಯವೆಂದು ಪ್ರಚಲಿತವಿತ್ತು. ಗದ್ಯಾಣವೇ ದೊಡ್ಡ ವರಹವಾಗಿದ್ದು ಎಲ್ಲಕ್ಕಿಂತ ಹೆಚ್ಚಿನ ಮೌಲ್ಯದ ನಾಣ್ಯವಾಗಿತ್ತು.**[8]**

ಗದ್ಯಾಣ : ಆಖುಗದ ಬನಶಂಕರಿ ದೇವಾಲಯದ ಶಾಸನದಲ್ಲಿ ದೇವಾದಾಯ ಅಮೃತಪಡಿಗೆ ಗದ್ಯಾಣ ೨೪ ಎಂದು ಹೇಳಿದೆ**[9]** (ಈ ನಾಣ್ಯದ ಹೆಸರು ಶಾಸನಗಳಲ್ಲಿ ಕಂಡು ಬಂದಿದೆ) ಶ್ರೋತ್ರಿಯ ಗದ್ಯಾಣ ಇದು ಶ್ರೋತ್ರಿಯ ಬ್ರಾಹ್ಮಣರಿಗೆ (ವೇದಾಧ್ಯಯನ ಸಂಪನ್ನರಾದ) ಮಾತ್ರ ಕೊಡುವ ಕಾಣಿಕೆ. ಇದಕ್ಕೆ ಸಂವಾದಿಯಾಗಿ ಹೊಂಬುಚದ ಒಂದು ಶಾಸನದಲ್ಲಿ "ಕುಮಾರ ಗದ್ಯಾಣ" ಎಂದು ಹೇಳಿದೆ.**[10]**

ರೊಕ್ಕ : ರೊಕ್ಕ ಎಂದರೆ ನಗದು ಹಣ ಎಂದು ತಿಳಿಯುತ್ತದೆ. ಇದೊಂದು ಅನ್ಯಭಾಷೆಯ ಶಬ್ದ. "ರೊಕ್ಕ ಗದ್ಯಾಣ ಮೂರಕ್ಕೆ" ಎಂದು ಆರಗದ ಶಾಸನದಲ್ಲಿದೆ.**[11]**

ವರ್ತನೆ : ಆರಗದ ಒಂದು ಶಾಸನದಲ್ಲಿ ಆರಗದ ಕೋಟೆ ವರ್ತನೆ ಎಂದಿದೆ. ಇದು ರಕ್ಷಣೆಗೆ ಸಂಬಂಧಿಸಿದ್ದ ಪ್ರತಿ ವರ್ಷ ತಪ್ಪದೇ ನೀಡಬೇಕಾಗಿದ್ದ ತೆರಿಗೆಯಾಗಿತ್ತು.

ಬಿರಾಡ : ಇದು ಕೋಟೆಯನ್ನು ಸುಭದ್ರಗೊಳಿಸಲು, ರಿಪೇರಿ ಮಾಡಲು ಮತ್ತು ನಿರ್ವಹಣೆಗಾಗಿ ಆಕರಿಸುತ್ತಿದ್ದ ವಿಶೇಷ ತೆರಿಗೆಯಾಗಿತ್ತು. ಬಿರಾಡವಲ್ಲದೆ ವಿರಾಡ ಎಂಬ ಮತ್ತೊಂದು ಶಬ್ದವಿದೆ. ವಿರಾಡ ಎಂದರೆ ಮನೆಗಂದಾಯ. ಹೊಂಬುಚದ ೩೧ನೆಯ ಶಾಸನದಲ್ಲಿಯೂ ಇದನ್ನೂ ಹೇಳಿದೆ.

ಸಿದ್ದಾಯ : ಇದು ಅರಮನೆಗೆ ವಾರ್ಷಿಕವಾಗಿ ನೀಡಬೇಕಾಗಿದ್ದ ಹೊಂನಿನ ತೆರಿಗೆ. ಇದು ಸಂಸ್ಕೃತ ಪದ. ಇದು ಅನೇಕ ಶಾಸನಗಳಲ್ಲಿದೆ.**[12]**

ಕೊಡವೀಸ : ಇದು ವರ್ತಕರ ಸಂಘದ ಮೇಲೆ ಸರಕಾರವು ವಿಧಿಸುತ್ತಿದ್ದ ತೆರಿಗೆಯಾಗಿತ್ತು.

ವೃತ್ತಿ : ಇದು ವಿಶೇಷವಾಗಿ ಬ್ರಾಹ್ಮಣ ಕುಟುಂಬಗಳಿಗೆ ಅಗ್ರಹಾರದಲ್ಲಿ ನೀಡುತ್ತಿದ್ದ ಉಂಬಳಿ ಭೂಮಿ. ಇದರ ಚತುರ್ಗಡಿ ಮತ್ತು ಸ್ಥಳ ನಿರ್ದೇಶನವನ್ನು ಶಾಸನದಲ್ಲಿ ನಿರೂಪಿಸಿತ್ತು.

ತಳವೃತ್ತಿ : ಇದು ಆಯಾಯ ಸ್ಥಳಗಳಲ್ಲಿ ಬ್ರಾಹ್ಮಣ ಕುಟುಂಬಗಳಿಗೆ ನೀಡುತ್ತಿದ್ದ ಉಂಬಳಿ ಭೂಮಿ. ತಳ ಮತ್ತು ಸ್ಥಳ ಎಂಬ ಪದಗಳು ಶಾಸನಗಳಲ್ಲಿವೆ. ಆದರೆ ಪ್ರಮುಖವಾಗಿ ಇದು ದೇವಾಲಯದ ರಕ್ಷಣೆಗಾಗಿ ಬಿಟ್ಟು ಕೊಟ್ಟ ಭೂಮಿಯಾಗಿದೆ. ಇದನ್ನು ಹೊಂಬುಚದ ಒಂದು ಶಾಸನದಲ್ಲಿಯೂ ಹೇಳಿದೆ.**[13]**

ಪಂಚ ಕಾರುಕ : ಇದೊಂದು ವೃತ್ತಿ ತೆರಿಗೆ. ಬಹುಶಃ ಇದು ಐದು ಪ್ರಮುಖ ಉದ್ಯೋಗಗಳ ಮೇಲೆ ಆಕರಿಸುತ್ತಿದ್ದ ತೆರಿಗೆಯಾಗಿರಬೇಕು. ತೀರ್ಥಹಳ್ಳಿಯ ೯೩ನೆಯ ಶಾಸನದಲ್ಲಿ ಬೇಟೆಯಾಡುವ ಬೇಡರಿಂದ 'ಹುಂಬ ಕಾರುಕ' ಎಂಬ ತೆರಿಗೆಯನ್ನು, ಬೆಸ್ತರಿಮದ ಹುಡಿಕೆ ಕಾರುಕ ಎಂಬ ತೆರಿಗೆಯನ್ನು ವಸೂಲು ಮಾಡಲಾಗುತ್ತಿತ್ತು.

ಕುಳ : ಬೇಸಾಯ ಮಾಡುವ ರೈತನು ಸರಕಾರಕ್ಕೆ ಕೊಡಬೇಕಾಗಿದ್ದ ಕಂದಾಯಕ್ಕೆ "ಕುಳ" ಎಂಬ ಹೆಸರಿತ್ತು. ಇದನ್ನು ಹಣದ ರೂಪದಲ್ಲಿ ನೀಡಬೇಕಾಗಿತ್ತು. ಆರಗದ ಒಂದು ಶಾಸನದಲ್ಲಿ

ಎರಡು ಹೊಂನಿನ ಕುಳಕ್ಕೆ ಎಂದು ಹೇಳಿದೆ[14]ಇದಕ್ಕಾಗಿಯೇ ಈ ಶಾಸನದಲ್ಲಿ ಗದ್ಯಾಣ ೧೨ ಎಂದು ಗೊತ್ತುಪಡಿಸಿದ್ದು ತಿಳಿಯುತ್ತದೆ.

ನರಿವ್ರಿತ್ತಿ, ನರಿಮಾನಿ : ಆರಗದ ೧೯ನೆಯ ಶಾಸನದಲ್ಲಿ ಇದನ್ನು ಓದಬಹುದು. ಹೊಂಬುಚದ ೨೭ನೆಯ ಶಾಸನದಲ್ಲಿ ಇದನ್ನು ನರಿವ್ರಿತ್ತಿ ಎಂದು ಹೇಳಿದೆ. ಬಹುಶಃ ಇವೆರಡೂ ಒಂದೇ ಅರ್ಥದ ಪದಗಳಾಗಿರಬಹುದು. ಇದರ ಅರ್ಥ ತಿಳಿದಿಲ್ಲ.

ಕಮ್ಮ : ಬೆಳೆ ಬೆಳೆಯುವ ಭೂಮಿಯ ವಿಸ್ತೀರ್ಣವನ್ನು ಕಮ್ಮ ಎಂಬ ಉದ್ದಳತೆಯ ಮಾಪಕದಿಂದ ನಿರ್ಧರಿಸಲಾಗುತ್ತಿತ್ತು. ಶಾಸನಗಳಲ್ಲಿ ಇದನ್ನು ಕಂಬ, ಕಂಮ ಮತ್ತು ಕಮ್ಮ ಎಂದೂ ಬರೆದಿದೆ. ಕೆಲವು ಕಮ್ಮಗಳು ಸೇರಿ ಒಂದು ಮತ್ತರು ಆಗುತ್ತದೆ. ಆದರೆ ಒಂದು ಮತ್ತರಕ್ಕೆ ಎಷ್ಟು ಕಮ್ಮಗಳೆಂದು ತಿಳಿದಿಲ್ಲ. ಪೊಂಬುಚದ ಶಾಸನದಲ್ಲಿ ಕಂಮ ೫೦೦, ಕಂಮ ೫೨, ಕಂಮ ೨೫ ಎಂದು ಬರೆದಿದೆ.

ಮೊರಡಿ : ಮೊರಡಿ ಎಂದರೆ ದಿಣ್ಣೆ, ಆರಗದ ಶಾಸನಗಳಲ್ಲಿ ಮೊರಡಿ ಮತ್ತು ಮರಡಿ ಎಂಬ ಶಬ್ದಗಳಿವೆ. ಇದು ೯ನೆಯ ಶತಮಾನದಿಂದಲೂ ಬಳಕೆಯಲ್ಲಿದೆ.[15]

ಖಂಡುಗ : ಇದು ಆಹಾರ ಧಾನ್ಯದ ಅಳತೆಯ ಪ್ರಮಾಣ. ಹೆಚ್ಚಾಗಿ ಭತ್ತಕ್ಕೆ ಸಂಬಂಧಿಸಿದಂತೆ ಕಂಡುಗ, ಮತ್ತು ಖಂಡುಗ ಎಂದು ಹೇಳಿದೆ. ಒಂದು ಖಂಡುಗಕ್ಕೆ ೨೦ ಕೊಳಗವೆಂದು ಕೆಲವೆಡೆ ಹೇಳುತ್ತಾರೆ. ಪ್ರಮಾಣ ವ್ಯತ್ಯಾಸವಾಗಬಹುದು. ಇದೊಂದು ದೇಶ್ಯ ಶಬ್ದ.

ಗುತ್ತಿಗೆ : ಇದು ಹಿಡುವಳಿದಾರ ಹಾಗೂ ಕೃಷಿಕನ ನಡುವಿನ ಒಂದು ಒಪ್ಪಂದ. ಇದರಂತೆ ಭೂಸ್ವಾಮ್ಯ ಹೊಂದಿದವನು ಗೊತ್ತು ಪಡಿಸಿದ ದರದಲ್ಲಿ ವಾರ್ಷಿಕ ಗೇಣಿಯನ್ನು ಧಾನ್ಯ ಅಥವಾ ನಗದು ರೂಪದಲ್ಲಿ ನೀಡಬೇಕಿತ್ತು. ಇದನ್ನು ಶಾಸನದಲ್ಲಿ ಕೇಣಿ, ಖೇಣಿ ಮತ್ತು ಗೇಣಿ ಎಂದು ಸಮಾನಾರ್ಥದಲ್ಲಿ ಬಳಸಿದೆ. ಆರಗದ ಒಂದು ಶಾಸನದಲ್ಲಿ ೧೨ ಹೊಂನ ಸಲುವ ಗುತ್ತಿಗೆ ಭೂಮಿ ಎಂದಿದೆ.[16]

ಬಳಗೋಡು ಗ್ರಾಮದ ಒಟ್ಟು ಸಾಗುವಳಿ ಭೂಮಿಯ ಮೇಲೆ ಗುತ್ಇತಗೆ ನಿಗದಿಪಡಿಸಿದಂತಿದೆ. ಗದ್ಯಾಣವು ಕಂದಾಯವಾಗಿರಬಹುದು. ಗೇಣಿದಾರನು ಇದೇ ದರದಲ್ಲಿ ಗಡಿ ಭತ್ತ ಹಾಗೂ ಗದ್ಯಾಣವನ್ನು ತೆರಬೇಕಾಗಿತ್ತು. ಒಟ್ಟಿನಲ್ಲಿ ಆರಗರಾಜ್ಯದಲ್ಲಿ ಗೇಣಿ ಮತ್ತು ಗೇಣಿದಾರನ ಬಗ್ಗೆ ಸಾಕಷ್ಟು ಮಾಹಿತಿ ದೊರೆಯುತ್ತದೆ.

ಆರಗ ರಾಜಧಾನಿ

ಕ್ರಿ.ಶ. ಸು. ೮ನೆಯ ಶತಮಾನದಲ್ಲಿ ಆರಗದ ಉಲ್ಲೇಖ ಬರುತ್ತದೆ. ಇದು ಕ್ರಿ.ಶ. ಸು. ೧೦ ರಿಂದ ೧೭ನೇ ಶತಮಾನದವರೆಗೆ ವೇಂಟೆ, ಕಂಪಣ, ರಾಜ್ಯ, ಪುರ, ಪತ್ತನ ಮುಂತಾದ ಶೀರ್ಷಿಕೆಗಳನ್ನು ಹೊತ್ತು ಮಲೆರಾಜ್ಯದ ರಾಜಧಾನಿಯಾಗಿತ್ತು. ಒಂದಿಷ್ಟು ವರ್ಷಗಳ ಕಾಲ ಚಂದ್ರಗುತ್ತಿಯೊಂದಿಗೆ ಸೇರಿ ಆರಗ ಗುತ್ತಿರಾಜ್ಯವೆಂದು ಗುರುತಿಸಲ್ಪಟ್ಟಿತು.

ವಿಜಯನಗರದ ಅರಸು ವಂಶದವರು ಆರಗದಲ್ಲಿ ಆಡಳಿತ ನಡೆಸಿ ಅನುಭವ ಗಳಿಸಿಕೊಂಡರು. ಸ್ವಾಭಾವಿಕವಾಗಿ ಆರಗ ಮಲೆನಾಡಿನ ದೊಡ್ಡ ವ್ಯಾಪಾರ ಸ್ಥಳವಾಗಿ ಬೆಳೆಯಿತು. ಶಾಸನಗಳಲ್ಲಿ ಕಂಡು ಬಂದಿರುವ ಪಟ್ಟಣಶೆಟ್ಟಿ ಮತ್ತು ಶ್ರೇಷ್ಠಿಗಳು ಒಂದುಗೂಡಿ ನೀಡಿರುವ ದಾನಗಳು ಇವರ ಶ್ರೀಮಂತಿಕೆಯನ್ನು ಸಮರ್ಥಿಸುವಂತಿದೆ. ಆರಗದಲ್ಲಿ ಈ ವ್ಯಾಪಾರಿಗಳಿದ್ದ ಕೇರಿಗಳನ್ನು ಮತ್ತು ಮಾರುಕಟ್ಟೆಯ ಪಾಳು ನಿವೇಶನವನ್ನು ಈಗಲೂ ನೋಡಬಹುದು. ಆರಗವು ಎಂಟು ಮಾರುಕಟ್ಟೆಗಳಿಗೆ ಕೇಂದ್ರ ಸ್ಥಳವೆಮದು ಶಾಸನದಲ್ಲೂ ಸಹ ಉಲ್ಲೇಖವಿದೆ.

ದೇವಾಲಯಗಳು, ಅಗ್ರಹಾರ, ಬ್ರಹ್ಮಪುರಿ, ಸಂಧ್ಯಾಮಂಟಪ ವಿರೂಪ ಸಮುದ್ರವೆಂಬ ಕೆರೆ ಅದರಂಚಿನಲ್ಲಿ ಗ್ರಾಮದೈವಗಳ ಗುಡಿಗಳು ರಾಜಧಾನಿಯನ್ನು ಸುಂದರಗೊಳಿಸಿದ್ದವು. ನೆಲದುರ್ಗ, ಅಗಳ ಬಾಗಿಲು ಮತ್ತು ಮೂಡುಬಾಗಿಲಿನ ಮಹಾದ್ವಾರಗಳು ಹಾಗೂ ಕಂದಕಗಳು ಈಗ ಕೇವಲ ಅವಶೇಷಗಳು ಮಾತ್ರ. ಶಾಂತವೇರಿ, ಕಾಳಮ್ಮನಗುಡಿ, ಮುತ್ತಿನಕೇರಿ, ಕುಂಬಾರಕೇರಿ, ದಾಸನಗದ್ದೆ, ಎಕನಾಥಿ ಊರು, ಅಗ್ರಹಾರ ಮುಂತಾದ ಬೀದಿ ಬಡಾವಣೆಗಳು ಆರಗವು ಜನಭರಿತ ಪಟ್ಟಣವಾಗಿತ್ತೆಂದು ಹೇಳುತ್ತವೆ. ಕುದುರೆ ಮತ್ತು ಆನೆಯ ಲಾಯಗಳು ಮತ್ತು ಮದ್ದಿನ ಉಗ್ರಾಣಗಳು ಮಣ್ಣು ಮತ್ತು ಕಲ್ಲುಗಳ ರಾಶಿಯಲ್ಲಿ ಮರೆಯಾಗಿವೆ. ಇಲ್ಲಿ ಶೃಂಗೇರಿ ಮಠದ ಒಂದು ಶಾಖಾಮಠವಿತ್ತು.

ಕೆಳದಿಯ ಹಿರಿಯ ವೆಂಕಟಪ್ಪನಾಯಕನು ಕೆಲವು ಕಾಲ ಆರಗದಲ್ಲಿದ್ದು ಆಳಿದನೆಂದು ಆಗ ಆರಗವು ಸುಂದರವಾದ ಪಟ್ಟಣವಾಗಿತ್ತೆಂದು ಕೆಳದಿ ನೃಪವಿಜಯದಲ್ಲಿ ಹೇಳಿದೆ. ಅರಸರ ವಂಶದ ರಾಣಿ ಸಿದ್ದಮ್ಮಾಜಿಯ ಶ್ರಾದ್ಧವನ್ನು ಇಲ್ಲಿಯೇ ನಡೆಸಿ ಹದಿನೇಳು ಹೊಂನ ಗದ್ಯಾಣವನ್ನು ದಾನ ಮಾಡಲಾಯಿತೆಂದು ದಾಖಲೆಯಿದೆ.**[17]**

ಧಾರ್ಮಿಕ ಚಟುವಟಿಕೆಗಳು

ಧಾರ್ಮಿಕ ಪರಂಪರೆಯ ಆರಗದ ಅರಸರು ಸಮಕಾಲೀನರಂತೆ ದೇವಾಲಯ, ಮಠ ಮತ್ತು ಅಗ್ರಹಾರಗಳನ್ನು ಕಟ್ಟಿಸಿದರು ಮತ್ತು ಪೋಷಿಸಿದರು. ಆರಗದಲ್ಲಿ ವಿವಿಧ ಧರ್ಮೀಯರು ನೆಲಸಿದ್ದರು.

ಹರಿದಾಸ ಪರಂಪರೆಯು ಆರಗ ರಾಜ್ಯದಲ್ಲಿ ಮೊಟ್ಟಮೊದಲು ಉಗಮವಾಯಿತೆಂದು ಸಂಶೋಧಕ ಕಪಟರಾಳು ಕೃಷ್ಣರಾಯರು ಪುರಾವೆಗಳನ್ನು ನೀಡಿದ್ದಾರೆ.**[18]**ತೀರ್ಥಹಳ್ಳಿಯ ಭೀಮನ ಕಟ್ಟೆ ಮಠದ ಗರುಡವಾಹನ ತೀರ್ಥರು ಮತ್ತು ಕೂಡಲಿ ಅಕ್ಷೋಭ್ಯ ತೀರ್ಥರ ಮಠದ ಸುಲಭಾಚಾರ್ಯರಿಂದ ಪಶ್ಚಿಮದಲ್ಲಿ ದಾಸ ಸಾಹಿತ್ಯವು ಆರಂಭವಾಗಿ ಮುಂದೆ ಹಂಪೆ, ರಾಯಚೂರು ಮತ್ತು ಆದವಾನಿ ನಾಡುಗಳಲ್ಲಿ ಬೆಳೆದು ಬಂದಿದೆ. ಎಂದು ಶ್ರೀಯುತರು ಅನೇಕ ಆಧಾರಗಳನ್ನು ನೀಡಿದ್ದಾರೆ.

ಭೀಮನಕಟ್ಟೆ ಮಠಕ್ಕೆ ಮುನಿವೃಂದ ಎಂಬ ಹೆಸರಿದೆ. ಇದು ಮಧ್ವಾಚಾರ್ಯರಿಗೆ ಗುರುಗಳಾಗಿದ್ದ ಅಚ್ಯುತ ಪ್ರೇಕ್ಷಕರ ಸಂಸ್ಥಾನ. ಕೂಡಲಿ ಅಕ್ಷೋಭ್ಯ ಮತ್ತು ಬಾಳಿಗಾರು ಮಠಗಳು ಆರಗದ ರಾಜ್ಯದಲ್ಲಿರುವ ಮತ್ತೆರಡು ಪ್ರಾಚೀನ ಮಠಗಳಾಗಿವೆ. ಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ನರಹರಿ ತೀರ್ಥರು ಹರಿದಾಸ ಪರಂಪರೆಯಲ್ಲಿ ಮೊದಲಿಗರೆಂದು ವಿದ್ವಾಂಸರ ಅಭಿಮತ. ಈ ಮಠಗಳಿಗೆ ಸಂಬಂಧಿಸಿದಂತೆ ಹರಿದಾಸ ಭಾರತಿ**[19]** ಹಾಗೂ ವಿಜಯಾಂಕ ರತ್ನದಲ್ಲಿ ವಿವರವಾದ ಲೇಖನಗಳು ಪ್ರಕಟವಾಗಿವೆ.

ಸುಮಾರು ೧೨೫ ವರ್ಷಗಳ ಕಾಲ ಹರಿದಾಸರಿಗೆ ಸಂಬಂಧಿಸಿದ ಸಾಹಿತ್ಯ ರಚನೆಗಳು ಲಭ್ಯವಾಗಿಲ್ಲ. ಆದರೆ ಇದೇ ಅವಧಿಯಲ್ಲಿ ಆರಗದಲ್ಲಿ ಅರವತ್ತು ಮಂದಿ ಆದ್ಯರು ಮತ್ತು ಆರಾದ್ಯರು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೆಂದು ಗೊರಬಾಳು ಹನುಮಂತರಾಯರು ಬರೆದಿದ್ದಾರೆ. ಈ ಮಹನೀಯರು ಆರಗದ ಆದ್ಯರು ಮತ್ತು ಆರಾದ್ಯರು ರಚಿಸಿದ ೫೧ ಪದಗಳು ಮತ್ತು ೨೦ ಸುಳಾದಿಗಳನ್ನು ಹಾಗೂ ಉಗಾಭೋಗಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇದು ಸಮಗ್ರ ಸಂಗ್ರಹವೇ ಎಂಬುದು ತಿಳಿದಿಲ್ಲ. ವೈಷ್ಣವ ಗುರುಗಳ ಪಟ್ಟಿಯಲ್ಲಿ ಸಿರಿಪತಿ, ಸುಲಭ ತೀರ್ಥ ಮತ್ತು ಗರುಡ ವಾಹನ ತೀರ್ಥಂಕರ ಹೆಸರುಗಳಿವೆ. ತೀರ್ಥಹಳ್ಳಿಯ ೨೪ನೆಯ ಶಾಸನದಲ್ಲಿ “ಶ್ರೀಮತು ಸುಲಭ ತೀರ್ಥ ಶ್ರೀಪಾದಂಗಳು ಆರಾಧಿಸುವ” ಎಂದು ಹೇಳಿದೆ. ಶ್ರೀ ಸುಲಭ ತೀರ್ಥರು ಕೂಡ್ಲಿ ಅಕ್ಷೋಭ್ಯ ಮಠದ ಯತಿಗಳು ಹಾಗೆಯೇ ತೀರ್ಥಹಳ್ಳಿಯ ಭೀಮನಕಟ್ಟೆಯ ೧೫೭ನೆಯ ಶಾಸನದಲ್ಲಿ ಉಲ್ಲೇಖಿಸಿರುವ

ಗರುಡವಾಹನ ತೀರ್ಥರು ಭೀಮನಕಟ್ಟೆ ಮಠದ ಯತಿಗಳೂ. ಸುಳಾದಿಗಳನ್ನು ರಚಿಸಿದ ಆದ್ಯರು ಮತ್ತು ಆರಾಧ್ಯರನ್ನು ಆರಗದ ಶಾಸನಗಳಲ್ಲಿ

೧. ಹರಿಹರಾಧ್ಯ ಮಲ್ಲಾರಾಧ್ಯ ಕಲ್ಲಾರಾಧ್ಯ**[20]**

೨. ಕೃಷ್ಣಾರಾಧ್ಯ ನಾರಾಯಣರಾಧ್ಯ**[21]**

೩. ಭರತಾರಾಧ್ಯ, ಆರಾಧ್ಯದೇವ**[22]**

ಎಂದು ಉಲ್ಲೇಖಿಸಿದೆ. ಇವರೆಲ್ಲರೂ ವಿಜಯನಗರದ ಕಾಲದವರು. ಇವರ ರಚನೆಗಳು ಮತ್ತು ಉಗಾಭೋಗಗಳು ಪುರಂದರದಾಸರು ಮತ್ತು ಇತರ ದಾಸರ ರಚನೆಗಳ ಮೇಲೆ ಪ್ರಭಾವ ಬೀರಿದೆ. ಇವುಗಳ ತುಲನಾತ್ಮ ವಿವರಣೆಯನ್ನು ಮುಂದೆ ನೀಡಿದೆ.

ವಿಠಲಭಕ್ತಿ

ಆರಗವು ವಿಠಲ ಭಕ್ತಿಯ ನೆಲೆಯಾಗಿತ್ತು. ಈ ಪ್ರಾಂತ್ಯಗಳ ಅನೇಕ ಕುಟುಂಬಗಳಿಗೆ ವಿಠಲನೇ ಆರಾಧ್ಯದೈವ. ಶಾಸನದಲ್ಲಿ "ವಿಠಲ ಗದ್ಯಾಣ", "ವಿಠಲ ಪಂಡಗ" ಎಂಬುದು ಗಮನಾರ್ಹವಾದುದು. ಪಂಡ ಎಂದರೆ ಕ್ಷೇತ್ರಪುರೋಹಿತ ಎಂದು ಅರ್ಥ. ಆದುದರಿಂದ ಆರಗವು ವಿಠಲ ಕ್ಷೇತ್ರವಾಗಿತ್ತೆಂದು ಸ್ಪಷ್ಟವಾಗಿ ತಿಳಿಯುತ್ತದೆ. ಇದನ್ನು ಸಮರ್ಥಿಸುವ ಆರಗದ ಇನ್ನಷ್ಟು ಶಾಸನಗಳಲ್ಲಿ

೧.ಪಂಡರಂಗ ದೇವಗಳ ಶಂಕರಭಟ್ಟರಿಗೆ ಬಾವಿಕ್ಕೆಯಲ್ಲಿ ವೃತ್ತಿ**[23]**

೨. ಪಂಡರಿಭಟ್ಟರ ಕೋರಿನಾಥ ಭಟ್ಟರಿಗೆ ವೃತ್ತಿ**[24]**

೩.ವೈಷ್ಣವ ವಿಠಪಗಳಿಗೆ ವೃತ್ತಿ

೪.ನೀವಣೆ ವಿಠಲಭಟ್ಟರ ಪ್ರಪೌತ್ರರು ಸೂರಿಭಟರಿಗೆ ವೃತ್ತಿ. ಹೀಗೆ ಅನೇಕ ಮನೆತನಗಳು ವಿಠಲನ ಹೆಸರನ್ನು ಇಟ್ಟುಕೊಂಡಿದ್ದರು. ಆರಗದ ವೈಷ್ಣವರ ಹೆಸರಿನ ಮುಂದೆ 'ನಾಯಕ' ಎಂಬ ಉಪನಾಮವಿತ್ತು. ಉದಾಹರಣೆಗೆ ಜನ್ನಸ ಒಡೆಯರು ಆರಗ ರಾಜ್ಯವನ್ನು ಪಾಲಿಸುತ್ತಿದ್ದಲ್ಲಿ ಭಾರದ್ವಾಜ ಗೋತ್ರದ ದಾಮೋದರ ನಾಯಕರ ಮಗ ಕೇಸಪ್ಪಗಳಿಗೆ ಎಂದು ಆರಗದ ಶಾಸನದಲ್ಲಿದೆ.**[25]**

ಅಗ್ರಹಾರಗಳು

ವಿಜಯನಗರದ ಕಾಲದಿಂದ ಕೆಳದಿ ಅರಸರ ಕಾಲದವರೆಗೆ ಆರಗದ ಸುತ್ತಲೂ ನಿರ್ಮಾಣವಾದ ಅನೇಕ ಅಗ್ರಹಾರಗಳಿವೆ. ಒಳಗೋಡು, ಪದ್ಮಲಾಬಲುರ, ಲಕ್ಷ್ಮೀಗೋವಿಂದಪುರ, ಬುಕ್ಕರಾಯಪುರ, ಶಿವರಾಜಪುರ ಎಂದು ಸಂಖ್ಯೆಗಳು ಬೆಳೆಯುತ್ತಾ ಆರಗದಂಥ ಸಣ್ಣ ಕಂಪಣದಲ್ಲಿ ೨೨ ಕ್ಕಿಂತ ಹೆಚ್ಚು ಅಗ್ರಹಾರಗಳಿದ್ದುದು ಶಾಸನಗಳಲ್ಲಿದೆ ಈ ಅಗ್ರಹಾರಗಳ ವೈದಿಕರಿಗೆ, ವಿದ್ವಾಂಸರಿಗೆ ರಾಜ್ಯದ ಉದ್ದಗಲಕ್ಕೂ ಗ್ರಾಮಗಳಲ್ಲಿ ಭೂದಾನ ನೀಡಿ ವೃತ್ತಿ ಕಲ್ಪಿಸಿರುವ ಶಾಸನಗಳು ಸಿಗುತ್ತವೆ.

ಆಗರದ ಸದಾಶಿವಪುರ ಮತ್ತು ದೇವಾಲಯದಲ್ಲೂ ಒಂದು ವಿಶೇಷತೆಯಿದೆ. ಸದಾಶಿವಪುರದ ಶಿವಾಲಯವನ್ನು ವಿಜಯನಗರದ ಕಾಲದಲ್ಲಿಯೇ ಕಟ್ಟಲಾಗಿತ್ತು. ವಿಜಯನಗರದ ಸಾಮಂತ

ಕೆಳದಿ ಸದಾಶಿವ ನಾಯಕನ ಮಂತ್ರಿ ಮಾದಪ್ಪಯ್ಯನು ತನ್ನ ರಾಜನ ಹೆಸರಿನಲ್ಲಿ ನಿರ್ಮಿಸಿದ. ಸದಾಶಿವ ಅಗ್ರಹಾರವು ಪಾಳುಬಿದ್ದಿತು. ವಿಜಯನಗರದ ಚಕ್ರವರ್ತಿಯ ಆದೇಶದಂತೆ ಕೆಳದಿ ರಾಮರಾಜ ನಾಯಕನು ಪರಭಾರೆಯಾಗಿದ್ದ ವೃತ್ತಿಗಳನ್ನು ಬ್ರಾಹ್ಮಣರಿಗೆ ಮತ್ತೆ ಕೊಡಿಸಿ ಅಗ್ರಹಾರವನ್ನು ಅಭಿವೃದ್ಧಿಗೊಳಿಸಿದನು. ಅಲ್ಲಿಗೆ ಆರಗ ಗುತ್ತಿ ಸೀಮೆಯ ಎಲ್ಲ ಅಗ್ರಹಾರಗಳಿಗೆ ಈ ಅಗ್ರಹಾರವೇ ಯಜಮಾನನೆಂದು ಮನ್ನಣೆ ನೀಡಿದನು. ಇಲ್ಲಿಯ ದೇವಾಲಯ ಮತ್ತು ಅಗ್ರಹಾರದ ನಿರ್ವಹಣೆಯ ಉಸ್ತುವಾರಿಯನ್ನು ಆರಗದಲ್ಲಿದ್ದ ಚಿಂನ ಭಂಡಾರದ ರಾಮಕೃಷ್ಣಯ್ಯನವರಿಗೆ ವಹಿಸಿದನು. ಕೆಳದಿ ಅರಸು ಸದಾಶಿವ ನಾಯಕನು ಬ್ರಾಹ್ಮಣರಿಗೆ ಇನ್ನಷ್ಟು ವೃತ್ತಿಗಳನ್ನು ನೀಡಿದನು.

ಕ್ರಮೇಣ ಸದಾಶಿವ ದೇವಾಲಯ ತುಂಬಾ ಅಭಿವೃದ್ಧಿಗೆ ಬಂದಿತು. ಇದಕ್ಕೆ ಸಂಬಂಧಿಸಿದ ಇದೇ ಸ್ಥಳದ ಶಿಲಾಶಾಸನವು ಹಾಳಾಗಿದೆ. ಉಳಿದಷ್ಟೇ ಭಾಗದಲ್ಲಿ "ದ.ಸ.೩೧೪೦೦ ಸುವರ್ಣಾದಾಯದ ೫೯೫೯ (ಐವತ್ತೊಂಭತ್ತು ಆರು, ಒಂಬತ್ತು) ಖಂಡುಗ ಭತ್ತವನ್ನು ಕೊಟ್ಟು ಕೈನಾಯಕರು ಆರಗದ ಸದಾಶಿವಪುರದ ಯಜಮಾನರು, ಜನಂಗಳು ದೇವಸ್ಥಾನ ಮುಂತಾದ ಗ್ರಾಮ ಧರ್ಮಗಳಿಗೆ ಸಹಿರನ ದಾರಾ ಪೂರ್ವಕವಾಗಿ ಕೊಟ್ಟ ಜೀರ್ಣೋದ್ಧಾರ ಪುರಸ್ಸರ ಭೂಮಿ" ಎಂದಿದೆ. ಈ ಶಾಸನದಲ್ಲಿ ಅಗ್ರಹಾರದವರೇ ಇಷ್ಟೊಂದು ಉತ್ಪನ್ನದ ಭೂಮಿ ಭತ್ತ ಮತ್ತು ಕಾಣಿಕೆ ನೀಡಿರುವುದು ಸೋಜಿಗವೆನಿಸಿದೆ.

ಈ ದೇವಾಲಯದ ನಿತ್ಯಾರ್ಚನೆ ವಿಶೇಷ ಹಬ್ಬಗಳು ಹಾಗೂ ಉತ್ಸವಾದಿಗಳಿಗೆ ಪ್ರತಿಯೊಂದು ಕೈಂಕರ್ಯಕ್ಕೂ ವಿವರವಾಗಿ, ಇದನ್ನು ನಿರ್ವಹಿಸುವ ವ್ಯಕ್ತಿಗಳಿಗೆ ವಾರ್ಷಿಕ ಗದ್ಯಾಣ ರೂಪದಲ್ಲಿ ನೀಡುವಂತೆ ನಿಗದಿಗೊಳಿಸಿದೆ. ಇದರಿಂದ ಹಲವಾರು ವೈದಿಕರಿಗೆ ದೇವಾಲಯದ ಧರ್ಮಕಾರ್ಯಗಳಲ್ಲಿ ಪಾಲು ಸಿಕ್ಕಿದೆ. ಇದರೊಂದಿಗೆ ನಾಲ್ಕು ವೇದಗಳ ಅಧ್ಯಯನ ಮಾಡುವ ವಿದ್ಯಾರ್ಥಿಗಳ ವೆಚ್ಚವನ್ನು ಭರಿಸಲಾಗುತ್ತಿತ್ತು.

ವೈದಿಕೇತರರೂ ಸಹ ದೇವಾಲಯದ ಧಾರ್ಮಿಕ ಕಾರ್ಯದಲ್ಲಿ ಭಾಗಿಯಾಗಿದ್ದಾರೆ. ಬಾರಿಕೆ ಜನ, ಅಗಸ, ನಾಯಿಂದ, ದನಗಾಹಿಗಳಿಗೂ ಕಂಮುಗಳಿ, ನರಿಮಾನಿ, ಯೋಗೀಯದಂಡ ಮುಂತಾದವರಿಗೆ ವಾರ್ಷಿಕ ವೇತನವನ್ನು ನಗದಾಗಿ ಕೊಡುವ ವ್ಯವಸ್ಥೆ ಮಾಡಲಾಗಿತ್ತು. ಇವರಲ್ಲಿ ಕೊನೆಯ ಮೂವರು ಯಾರೆಂದು ತಿಳಿಯುವುದಿಲ್ಲ. ಇದರೊಂದಿಗೆ ದೇವಾಲಯದ ಹೂವಿನ ತೋಟದ ನಿರ್ವಹಣೆಯವರಿಗೆ, ದೇವಾಲಯದಲ್ಲಿ ಸೋರುವ ಸ್ಥಳದಲ್ಲಿ ವೊದಲ ಹೊದಿಸುವವರಿಗೆ (ಅಡಿಕೆಯ ಸೋಗೆ ಅಥವಾ ಹುಲ್ಲು ಇರಬಹುದೆ?) ಒಟ್ಟು ೧೬ ಜನಕ್ಕೆ ೨೪ ಖಂಡುಗ ಭತ್ತವನ್ನು ನೀಡಬೇಕೆಂದು ಗೊತ್ತುಪಡಿಸಿದೆ.

ದೇವಾಲಯದ ಉತ್ಪನ್ನದ ವಸೂಲಿಗಾಗಿ ಹಾಗೂ ಲೆಕ್ಕಪತ್ರಗಳನ್ನಿಡಲು ಸಹಾಯ ಮಾಡುವ ಗ್ರಾಮದ ಸೇನಬೋವ (ಶಾನುಭೋಗ)ರಿಗೂ ವಾರ್ಷಿಕ ಗದ್ಯಾಣ ರೂಪದಲ್ಲಿ ಗೌರವ ಧನ ನೀಡಲಾಗುತ್ತಿತ್ತು. ದೇವಾಲಯದ ನಿರ್ವಹಣೆಯನ್ನು ಪಾರುಪತ್ಯಗಾರನಿಗೆ ವಹಿಸಿ ಇವನಿಗೆ ವಾರ್ಷಿಕ ೧೮ ಗದ್ಯಾಣ ಗೌರವ ಧನ ನೀಡಲಾಗುತ್ತಿತ್ತು.

[1]ಇದೇ ೧೨೧ ಹಾದಿಗಲ್ಲು

[2]ಇದೇ ೯೧ ಕುರುವಳ್ಳಿ ೧೫೮೪

[3]ಇದೇ ೧೯ ಆರಗ ೧೫೭೩

[4]ಇದೇ

[5]ಇದೇ ತೀರ್ಥಹಳ್ಳಿ ೯೦ ಕುರುವಳ್ಳಿ ೧೫೮೪

[6]ಇದೇ ೮ ಮಾಕೊಡು ೧೩೯೭

[7]ಇದೇ ೯ ಆರಗ ೧೪೦೩

[8]ಇದೇ

[9]ಇದೇ ೧೩ ಆರಗ ೧೪೦೪

[10]ಇದೇ ನಗರ ೬ ಹೊಂಬುಚ

[11]ಇದೇ ತೀರ್ಥಹಳ್ಳಿ ೧೯ ಆಗಳಬಾಗಿಲು ೧೫೭೩

[12]ಇದೇ

[13]ಇದೇ ನಗರ ೧ ಹೊಂಬುಚ

[14]ಇದೇ ತೀರ್ಥಹಳ್ಳಿ ೧೨ ಆರಗ ೧೪೦೫

[15]ಎ.ಕ. ನಾಗಮಂಗಲ ೧೪೯ ಕ್ರಿ.ಶ. ೧೭೭೬

[16]ಎ.ಕ. ೮. ತೀರ್ಥಹಳ್ಳಿ ೧೯

[17]ಎಂ.ಎ.ಆರ್. ೧೯೪೩ ನಂ. ೩೧

[18]ಅಡಿಟಿಪ್ಪಣಿ ೩ ಪುಟ ೨೮೧

[19]ಹರಿದಾಸಭಾರತಿ ಸಂ. ೫ ಸಂ. ೧೨ ಅಕ್ಟೋಬರ್ ೧೯೫೫

[20]ಎ.ಕ. ೮ ತೀರ್ಥಹಳ್ಳಿ ೨೦೧ ಆರಗ ೧೩೯೫

[21]ಇದೇ ೧೬೩ ಇದೇ ೧೪೨೫

[22]ಇದೇ

[23]ವೆಂಕಟೇಶ ಜೋಯಿಸ, ಕೆಳದಿ ಅರಸರ ಶಾಸನ ಸಂಪುಟ, ಪು ೧೮೬

[24]ಇದೇ ಪು ೧೨೨

[25]ಎ.ಕ. ೮ ತೀರ್ಥಹಳ್ಳಿ ೩೧ ಚಿಕ್ಕಹಳ್ಳಿ ೧೪೦೦

ಮಲೆಕರ್ನಾಟಕದ ಅರಸು ಮನೆತನಗಳು: ೧೨. ಆರಗದ ಅರಸರು (೩)

ಗ್ರಾಮದೇವತೆಗಳು

ಆರಗದ ಪರಿಸರದಲ್ಲಿ ಹಿಂದಿನ ಕಾಲದಿಂದಲೂ ಗ್ರಾಮದೇವತೆಗಳ ಆರಾಧನೆ ನಡೆಯುತ್ತಿತ್ತು. ಬ್ರಾಹ್ಮಣರು ಈ ಬೂರಿ ದೈವಗಳ ಅರ್ಚಕರಾಗಿದ್ದು ಇದೇ ದೈವಗಳ ಹೆಸರನ್ನು ಇಟ್ಟುಕೊಂಡಿರುವುದು ಸೋಜಿಗವೆನಿಸಿದೆ.

ಗ್ರಾಮದೈವ	ಬ್ರಾಹ್ಮಣರ ಹೆಸರು	ಶಾಸನದ ಆಧಾರ
ಜಕ್ಕಣೆ	ಜಕ್ಕಂಬಟ್ಟ	ಎ.ಕ.ತೀರ್ಥಹಳ್ಳಿ ೨೦೮
ಬಾಗಮ್ಮ	ಬಾಗಿಭಟ್ಟ	ಎ.ಕ.ತೀರ್ಥಹಳ್ಳಿ ೧೩೬
ಸಿಂಗಾರಿ	ಸಿಂಗಾರಿಭಟ್ಟ	ಎ.ಕ.ತೀರ್ಥಹಳ್ಳಿ ೨೧೬
ಆಯಿ	ಆಯಿಭಟ್ಟ	ಎ.ಕ.ತೀರ್ಥಹಳ್ಳಿ ೨೦೮
ಚಂದಮ್ಮ	ಚಂದಪ್ಪಗಳು	ಎ.ಕ.ತೀರ್ಥಹಳ್ಳಿ ೧೩೧
ಲಕ್ಕಮ್ಮ	ಲಖಂಣ	ಎ.ಕ.ತೀರ್ಥಹಳ್ಳಿ ೧೪೮
ಪಾವು	ಪಾವುನಾತ್ಮಜ	ಎ.ಕ.ತೀರ್ಥಹಳ್ಳಿ ೨೦೯

ಮೇಲಿನಂತೆ ನೂರಾರು ಹೆಸರುಗಳೂ ಶಾಸನಗಳಲ್ಲಿವೆ. ಹೆಸರುಗಳೂ ಸಹ ವಿಚಿತ್ರವಾಗಿವೆ. ಕೆಲವು ಬ್ರಾಹ್ಮಣರ ಹೆಸರುಗಳು ಸೊಗಾನಿ, ಸಗಾಯಿ, ಕೋಡಿಭಟ್ಟ, ದಂಡಪ್ಪ, ಬೊಲ್ಲರ್ಸ, ಖೇಬರ್ಸ, ಮುಕ್ಕರ್ಸ, ಬೆಲ್ಲರ್ಸ, ಮಾದರ್ಸ, ಬಾಯಪ್ಪ, ಭರಣಿಭಟ್ಟ, ಅಂಕನಾಥ, ಚಿತ್ರಗುಪ್ತಭಟ್ಟ ಎಂದು ಮುಂತಾಗಿ ಶಾಸನದಲ್ಲಿವೆ.

ಆದರೆ ಇವರೆಲ್ಲರೂ ಕಾಶ್ಮೀರದ 'ಸಾವಾಸಿಗರು' ಎಂಬ ವೈದಿಕ ಕುಟುಂಬದವರೆಂದು ತಿಳಿದುಬಂದಿದೆ. ಇವರು ಕಾಶ್ಮೀರದಿಂದ ರಾಷ್ಟ್ರಕೂಟರ ದೊರೆ ಕನ್ನಡ (೯೪೫-೯೫೬) ನ ಕಾಲದಲ್ಲಿ ಕರ್ನಾಟಕಕ್ಕೆ ಬಂದು ನೆಲೆಸಿದರು. ಬೇಲೂರಿನ ಒಂದು ಶಾಸನದಲ್ಲಿ ಮಾಯಿಭಟ್ಟ, ಕೋಮಣಭಟ್ಟ, ಲಖ್ಖಣ ಎಂಬ ಹೆಸರಿದೆ ಇವರೂ ಸಹ ಸಾವಾಸಿಗರು. ವೀರಬಲ್ಲಾಳನು ತನ್ನ ತಂದೆ ನರಸಿಂಹನ ಹೆಸರಿನಲ್ಲಿ ತುಂಗಭದ್ರಾ ನದಿಯ ಪಶ್ಚಿಮ ದಂಡೆಯ ಬಳ್ಳೇಶ್ವರದಲ್ಲಿ ದೇವಾಲಯ ಕಟ್ಟಿಸಿ ಲಿಂಗ ಪ್ರತಿಷ್ಠೆ ಮಾಡಿದನು. ಇದೇ ದೇವಾಲಯದಲ್ಲಿ ಗೌತಮೇಶ್ವರ ಲಿಂಗ ಪ್ರತಿಷ್ಠೆ ಮಾಡಿದ ಮಹದೇವ ಮತ್ತು ಲಕ್ಷ್ಮೀನಾರಾಯಣನನ್ನು ಪ್ರತಿಷ್ಠಾಪಿಸಿದ ಅವನ ಸಹೋದರಿ ಮಾದಲದೇವಿಯರೂ ಸಹವಾಸಿ ಬ್ರಾಹ್ಮಣರು. ಹಾಸನದ ೧೨೧೭ರ ಶಾಸನದಂತೆ

[1]ಹೊಯ್ಸಳ ವೀರಬಲ್ಲಾಳನು ನಿಜಗಲ್ಲಿನಲ್ಲಿ ಆಳುತ್ತಿದ್ದಾಗ ಭದ್ರಾಹು ಗ್ರಾಮದಲ್ಲಿ ಜೈತನಾರಾಯಣ ದೇವರನ್ನು ಪ್ರತಿಷ್ಠೆ ಮಾಡಿದಿ ಜೈಭಟ್ಟಯ್ಯನು ಸಾವಾಸಿ ಬ್ರಾಹ್ಮಣನಾಗಿದ್ದಾನೆ.[2]ಸೊರಬದ ೨೬೫ನೆಯ ಶಾಸನದಲ್ಲಿರುವ ಕಾಮಯ್ಯ, ಸಾತಯ್ಯ ಎಂಬುವರು, ೧೨೨೯ ರ ಸೌಂದತ್ತಿ ಶಾಸನದ[3]ಮಾದಿರಾಜ ಎಂಬ ಕವಿಯೂ ಸಹ ನಿವಾಸಿಗಳೇ ಸಾವಾಸಿ ಬ್ರಾಹ್ಮಣರು ಹೊಯ್ಸಳರ ಕಾಲದಲ್ಲಿ ಆರಗಕ್ಕೆ ಅನೇಕ ಕುಟುಂಬಗಳು ಬಂದು ನೆಲೆಸಿ ತಾಂತ್ರಿಕ ಪೂಜಕರಾಗಿದ್ದರು.

ವೀರಶೈವ ಮಠಗಳು

ಕೆಳದಿಯ ಅರಸರ ಕಾಲದಲ್ಲಿ ಆರಗದ ಬಾವಿಕೈ ದಾಸನ ಗದ್ದೆಯಲ್ಲಿ ಕುಪಸ್ತ ಕಂತೆ ಹರೀಶ್ವರ ಮಲ್ಲಿಕಾರ್ಜುನದೇವರೆಂಬುವರು ವಶೀಕೃತ ಮಠವನ್ನು ಕಟ್ಟಿದರು.[4] ಇನ್ನೊಂದು ಶಾಸನದಲ್ಲಿ "ಆರಗದಲು ವಂಚಿದೇವರು ಕಪ್ಪಗಳಲೆ ಬಸವ ಕಟಿಸ್ತ ಮಠ" ಎಂದು ಹೇಳಿದೆ.[5]ಕೆಳದಿಯ ಅರಸು ಹಿರಿಯ ವೆಂಕಟಪ್ಪನಾಯಕನ ಕಾಲದಲ್ಲಿ ಆರಗದಲ್ಲಿ ಮಹತ್ತಿನ ಮಠ ನಿರ್ಮಾಣವಾಯಿತು[6]ವೀರಭದ್ರ ನಾಯಕ ಮತ್ತು ಸೋಮಶೇಖರ ನಾಯಕರೂ ಸಹ ಆರಗದಲ್ಲಿ ಮಹತ್ತಿನ ಮಠ ಕಟ್ಟಿಸಿದರು[7]ಈ ಎಲ್ಲಾ ಮಠಗಳಿಗೂ ಭೂದಾನ ನೀಡಲಾಗಿತ್ತು.

ಸಾಂಸ್ಕೃತಿಕ ಚಟುವಟಿಕೆಗಳು : ಮಾರಪ್ಪನ ಮಂತ್ರಿ ಮಾಧವನು ಸಮಸ್ತ ಶೈವಾಗಮಸಾರ ಸಂಗ್ರಹ ಎಂಬ ಗ್ರಂಥವನ್ನು ಬರೆದಿದ್ದಾನೆಂದು ತ್ರ್ಯಂಬಕದ ಒಂದು ಶಾಸನದಲ್ಲಿ ಹೇಳಿದೆ. ಈ ಗ್ರಂಥದ ಬಗ್ಗೆ ತಿಳಿದಿಲ್ಲ. ಇದಲ್ಲದೆ ಸೊರಬದ ೩೭೫ನೇ ತಾಮ್ರ ಶಾಸನವನ್ನು ಸಹ ಇವನೇ ಬರೆದಿದ್ದಾನೆ.[8]

ಆರಗದ ಆದ್ಯರು ಮತ್ತು ಆರಾಧ್ಯರು ರಚಿಸಿದ ಉಗಾಭೋಗಗಳು ಪುರಂದರದಾಸರು, ಶ್ರೀಪಾದರಾಯರು ಹಾಘೂ ವ್ಯಾಸರಾಯರ ರಚನೆಗಳ ಮೇಲೆ ಹೇಗೆ ಪ್ರಭಾವ ಬೀರಿವೆ ಎಂದು ಈ ಕೆಳಗಿನಂತೆ ನಮೂದಿಸಿದೆ.

ಆರಗದ ಅಚಲಾನಂದ ಆದ್ಯರ ಉಗಾಭೋಗಗಳು

೧. ಅತ್ತೆ ಸತ್ತಾರೆ ಸೊಸೆ ಅಳುವಳಂತೆ ಅತ್ತೆ,ಅತ್ತೆ, ಅತ್ತೆಂದತ್ತೆ ಅತ್ತೆ ಸತ್ತಾರೆ ಎನಗೆ ಹುಚ್ಚು ಹೋಯಿತು.

೨. ಬಲ್ಲವ ಉಳ್ಳವ ನೀನಿರುತಿರಲಿಕ್ಕೆ ಕ್ಷುಲ್ಲಕ ಮತವಿಡಿದು ಸುಖವ ಬಯಸುವ ಕುಂಟ.

೩. ಗಾಳಿಗಿಕ್ಕಿದ ದೀವಿಗೆಯಂತೆ ದೇಹವೆಂದು

ಪುರಂದರದಾಸರಉಗಾಭೋಗಗಳು

೧. ಅತ್ತೆ ಅತ್ತೆ ಅತ್ತೆಯಂದತ್ತೆ ಅತ್ತೆ ಸತ್ತಾರೆಸೊಸೆ ಅಳುವಂತೆ ಆಯಿತು. ಅತ್ತೆ ಸತ್ತರೆ ಸೊಸೆಗೆಬುದ್ಧಿಯಾಯಿತು.

ಶ್ರೀಪಾದರಾಯರು

ಬಲ್ಲವನು ಉಳ್ಳವನು ನೀನಿರಲು ಭಜಿಸದೆ; ಕ್ಷುಲ್ಲಕರ ಮತವಿಡಿದು ಸುಖವ ಬಯಸುವೆ ನಾನು.

ವ್ಯಾಸರಾಯರು

ಗಾಳಿಗಿಕ್ಕಿದ ದೀವಿಗೆಯಂತೆ ಈ ದೇಹ ವ್ಯಾಳ್ಯ ವ್ಯಾಳ್ಯಕ್ಕೆ ಶೃತಿ ಸಾರುತಿದೆ.

ಹೀಗೆ ಆದ್ಯರು ಮತ್ತು ದಾಸಕೂಟದ ರಚನೆಗಳಿಗೂ ಎಷ್ಟೊಂದು ಸಾಮ್ಯತೆ ಇದೆ ಎಂದು ತಿಳಿಯುತ್ತದೆ. ಆರಗದ ಅಚಲಾನಂದರ ಉಗಾಭೋಗದಲ್ಲಿ ಅಚಲಾನಂದ ವಿಠಲ, ಯೋಗೇಂದ್ರ ವಿಠಲ, ಬಲ್ಲಿದ ವಿಠಲ, ಸೊಬಲಗು ವಿಠಲ ಸಿರಿಪತಿ ವಿಠಲ ಮತ್ತು ರಾಮಕೃಷ್ಣ ವಿಠಲ ಎಂಬ ಮುದ್ರಿಕೆಗಳಿವೆ. ಹೀಗೆ ಆರಗವು ಪಂಡರಾಪುರದಂತೆ ಸುಪ್ರಸಿದ್ಧ ವಿಠಲ ಕ್ಷೇತ್ರವಾಗಿತ್ತೆಂದು ತೋರುತ್ತದೆ. ಮೇಲಿನ ಉಗಾಭೋಗಗಳನ್ನು ಕೆಲವು ಗ್ರಾಮದೈವಗಳ ಹೆಸರನ್ನು ಕಪಟರಾಳು ಕೃಷ್ಣರಾಯರ ಸಂಗ್ರಹದಿಂದ ಆಯ್ದುಕೊಂಡಿದೆ.

ಸಂಗೀತ ನೃತ್ಯ

ಆರಗದ ಬ್ರಾಹ್ಮಣರಿಗೆ ವೃತ್ತಿಯನ್ನು ನೀಡುವಾಗ ಆರಗದ ಒಂದು ಶಾಸನವು "ಭರತಶಾಸ್ತ್ರ ವಿಶಾರವತ್ ಸೋಮನಾತ್ಮಜ ಮಾಯಿ ಭಟ್ಟಗೆ" ಎಂದು ಉಲ್ಲೇಖಿಸಿದೆ. ೧೪೬೪ ರ ಇದೇ ಶಾಸನದಂತೆ ಸೋಮನಾಥ ಭಟ್ಟನ ಮಗ ಮಾಯಿಭಟ್ಟನು ಗೌತಮಗೋತ್ರದ ಋಗ್ವೇದ ಶಾಖೆಯ ಬ್ರಾಹ್ಮಣನಾಗಿದ್ದು ಭರತನಾಟ್ಯದಲ್ಲಿ ಅದ್ವಿತೀಯನೆಂದು ಹೇಳುತ್ತದೆ.**[9]**"ಸಂಗೀತ ವಿದ್ವಾಂಸನಾದ ಸೂರಪ್ಪನಿಗೆ ಭೂದಾನ" ಎಂದು ತೂದೂರಿನ ಶಾಸನದಲ್ಲಿದೆ.**[10]**ಹೀಗೆ ಆರಗದ ಅಗ್ರಹಾರವು ಸಾಹಿತ್ಯ ನೃತ್ಯ, ಸಂಗೀತಾದಿ ಕಲೆಗಳಲ್ಲಿಯೂ ಹೆಸರು ಗಳಿಸಿತ್ತು.

ಪುರಂದರದಾಸರು ಆರಗ

ಪುರಂದರದಾಸರು ತಾವು ಹುಟ್ಟಿದ ಸ್ಥಳವನ್ನು ಹೇಳಿಕೊಂಡಿಲ್ಲ. ಇವರು ಮಹಾರಾಷ್ಟ್ರ ಪುರಂದರಘಡದಲ್ಲಿ ಹುಟ್ಟಿದವರೆಂದು ವಿದ್ವಾಂಸರು ಹೇಳಿದ್ದಾರೆ. ಪುರಂದರ ಎಂಬುದು ಒಂದು ಸ್ಥಳನಾಮವೆ? ಆರಾಧ್ಯ ದೈವವೆ? ಅಥವಾ ಒಂದು ಮುದ್ರಿಕೆಯೆ? ಎಂಬುದು ಇನ್ನೂ ಚರ್ಚಾಸ್ಪದವಾಗಿಯೇ ಉಳಿದಿದೆ. ಈ ಕಗ್ಗಂಟನ್ನು ಈ ಕೆಳಗಿನ ಅಂಶಗಳಿಂದ ಸ್ವಲ್ಪಮಟ್ಟಿಗೆ ಸಡಿಲಗೊಳಿಸಬಹುದು.

ಸ್ಥಳನಾಮ

ಕಪಟರಾಳು ಕೃಷ್ಣರಾಯರು ಮತ್ತು ಆದ್ಯರಾಮಾಚಾರ್ಯರು ತಮ್ಮ ಕೃತಿಗಳಲ್ಲಿ ಪುರಂದರ ದಾಸರು ತೀರ್ಥ ಹಳ್ಳಿಯ ಘಟ್ಟದ ಪ್ರದೇಶದವರೆಂದು ಐತಿಹಾಸಿಕ ಆಧಾರಗಳನ್ನು ನೀಡಿದ್ದಾರೆ.

ಕಪಟರಾಳರು-

"ಭಾರತೆ ವಿದ್ಯತೆ ದೇಶ : ಪಶ್ಚಿಮವಾರ್ಧಿ ಪೂರ್ವತಟಗ :

ಶ್ರೀತೌಳವಾಖ್ಯೋಮಹಾನ್
ತಸ್ಮಿನ್ ಅಂಬುನದಿಸ ದಕ್ಷಿಣ ತಟೇ
ಶ್ರೀ ಪುಂಡ್ರುವದ್ಭಾಸತೆ ಶ್ರೀ ಕ್ಷೇಮಪುರಂ
ಪುರಂದರ ಪ್ರಖ್ಯಂ ಸ್ಪುರದ್ಗೋಪುರಮ್"

ಎಂದು ಹೇಳಿರುವ ಸಾಗರದ ೫೪ ನೆಯ ಶಾಸನವನ್ನು ಕುರಿತು ಆಲೋಚಿಸಿದ್ದಾರೆ. ಈ ಶಾಸನದಲ್ಲಿ ಹೇಳಿರುವ ಪಶ್ಚಿಮದಲ್ಲಿ ಹರಿಯುತ್ತಿರುವ ಅಂಬುನದಿ ಎಂಬುದು ಶರಾವತಿಯಾಗಿದೆ. ಇದರ ದಕ್ಷಿಣದಲ್ಲಿರುವ ಪುರಂದರಪುರ ಅಥವಾ ಕ್ಷೇಮಪುರವು ಸುಂದರ ಗೋಪುರಗಳಿಂದ ಕಂಗೊಳಿಸುತ್ತಿದೆ ಎಂದು ವರ್ಣಿಸಿದೆ. ಶಾಸನೋಕ್ತ ಪುರಂದರಪುರ

ಕ್ಷೇಮಪುರವು ಗೇರುಸೊಪ್ಪೆಯ ಇನ್ನೊಂದು ಹೆಸರು. ಈ ಶಾಸನವು ಸಾಗರ ತಾಲ್ಲೂಕು ಗೋವರ್ಧನಗಿರಿಯ ನೇಮಿನಾಥ ಚೈತ್ಯಾಲಯದ ಮಾನಸ್ಥಂಭದಲ್ಲಿದೆ. ಪುರಂದರದಾಸರು ತಮ್ಮ ಪದಗಳಲ್ಲಿ "ಸೃಷ್ಟಿಯೊಳಗೆ ಪುರಂದರವೆಂಬ ಪಟ್ಟಣದೊಳಗೊಬ್ಬ ವಿಠಲನೆಂಬ ಚಿನಿವಾರ ಇರಲಾತನಿಗೆ" ಎಂದು ಹೇಳಿದ್ದಾರೆ. ವಿಜಯದಾಸರು ಪುರಂದರದಾಸರನ್ನು ಕುರಿತು "ಜನವಾದರು ಪುರಂದರವೆಂಬ ನಗರಿಯಲಿ" ಎಂದು ಸ್ಪಷ್ಟಪಡಿಸಿದ್ದಾರೆ. ಶಾಸನದಲ್ಲಿ ಹೇಳಿರುವ ಪುರಂದರ ಎಂಬ ಸ್ಥಳಕ್ಕೆ ಅನ್ವಯಿಸಿಕೊಂಡಿರುವ ಮೇಲಿನ ಇಬ್ಬರು ವಿದ್ವಾಂಸರು ಇದನ್ನು ಗೇರುಸೊಪ್ಪೆ ಎಂದು ಸರಿಯಾಗಿ ಅರ್ಥೈಸಿಕೊಂಡಿಲ್ಲ. ಅಲ್ಲದೆ ಇಲ್ಲಿಯೇ ಹುಟ್ಟಿದರೆಂದು ಹೇಳಲು ಸದ್ಯಕ್ಕಂತೂ ಯಾವ ಆಧಾರವೂ ದೊರೆತಿಲ್ಲ.

ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆಗೂ ಪುರಂದರಪುರ, ಬಲಿಪುರ ಎಂಬ ಹೆಸರಿದೆ. ಇಲ್ಲಿ ದಾಸರು ಹುಟ್ಟಿದರೆಂದು ಹೇಳುವ ದಾಖಲೆಗಳಿಲ್ಲ.

ಕೋನೇರಿ : ಪುರಂದರದಾಸರ ಪದದಲ್ಲಿ "ಜಗದೊಡೆಯ ಮೂಡಲ ಗಿರಿಯ ಕೋನೇರಿ ತಿಮ್ಮ" ಎಂದು ಹೇಳಿದೆ. ಇಲ್ಲಿ ಕೋನೇರಿ ಎಂಬ ಪದವನ್ನು ಮಾತ್ರ ತೆಗೆದುಕೊಂಡರೆ ತೀರ್ಥಹಳ್ಳಿಯ ಒಂದು ಶಾಸನದಲ್ಲಿ "ಪಲಾಕೂರ ರಾಮಭಟರಿಗೆ ಕೋನೇರಿ ದೀಕ್ಷತನಿಂದ ಸ್ವಾಸ್ತೆ" ಎಂದಿದೆ.**[11]**ಕೋನೇರಿಯು ತೀರ್ಥಹಳ್ಳಿಯ ಒಂದು ಅಗ್ರಹಾರವೂ ಆಗಿತ್ತು.

ಆರಗ ವ್ಯಾಪಾರಿಗಳು

ಆರಗವು ದೊಡ್ಡ ವ್ಯಾಪಾರ ಕೇಂದ್ರುವಾಗಿದ್ದು ಎಂಟು ವೇಂಟೆಗಳ ಕೇಂದ್ರುಸ್ಥಾನವಾಗಿತ್ತು. ಎಂದು ಈಗಾಗಲೇ ಹೇಳಿದೆ. ಇಲ್ಲಿ ಇತರ ಸರಕುಗಳೊಂದಿಗೆ ಚಿನ್ನ, ಬೆಳ್ಳಿ ಮತ್ತು ಹರಳು ಕಲ್ಲುಗಳ ವ್ಯಾಪಾರ ನಡೆಯುತ್ತಿತ್ತು ಎಂದು ದಾಸರಪದಗಳಲ್ಲಿಯೂ ಗುರುತಿಸಬಹುದು. ಆರಗದಲ್ಲಿ ವರ್ತಕರ ಸಂಘವಿತ್ತು. ಪುರಂದರದಾಸರ ಪೂರ್ವಾಶ್ರಮದ ಶ್ರೀನಿವಾಸ ನಾಯಕರು ಮತ್ತು ಅವರ ಮನೆತನದವರು ವಿಜಯನಗರ, ಕೆಳದಿ ಮತ್ತು ದಕ್ಷಿಣ ಕನ್ನಡದಲ್ಲಿ ವ್ಯಾಪಾರ ನಡೆಸುತ್ತಿದ್ದ ಪೋರ್ಚುಗೀಸರೊಂದಿಗೆ ವ್ಯಾಪಾರ ಸಂಬಂಧ ಹೊಂದಿದ್ದರೆಂದು ಆದ್ಯರಾಮಾಚಾರ್ಯರು ತಮ್ಮ ಕೃತಿಯಲ್ಲಿ ಹೇಳಿದ್ದಾರೆ. ಹೀಗೆ ಶ್ರೀನಿವಾಸ ನಾಯಕರು ಆರಗದ ವ್ಯಾಪಾರಿಗಳಲ್ಲಿ ಒಬ್ಬರಾಗಿರಬಹುದು.

೫. ನಾಯಕ, ದಾಸ, ಆರಾಧ್ಯ, ಖೈಂಬಣ

ಆರಗದ ಅಗ್ರಹಾರದ ಬ್ರಾಹ್ಮಣರ ಹೆಸರಿನ ಮುಂದೆ ನಾಯಕ ಎಂಬ ಉಪನಾಮವಿದ್ದು ಚಿಕ್ಕಹಳ್ಳಿಯ ಶಾಸನದಲ್ಲಿ "ದಾಮೋದರ ನಾಯಕರ ಮಗ ಕೇನವ್ವಗಳಿಗೆ ವೃತ್ತಿ" ಎಂದೂ ಇನ್ನೊಂದು ಶಾಸನದಲ್ಲಿ ಮಾಧವದಾಸ ಎಂದೂ ಅಗ್ರಹಾರದವರು ಇಟ್ಟುಕೊಳ್ಳುತ್ತಿದ್ದ ಹೆಸರಿನಂತೆ ಪುರಂದರದಾಸರ ಒಬ್ಬ ಮಗನ ಹೆಸರು "ಖೈಂಬಣ" ಎಂದಿದೆ.

೬. ಸ್ಥಳೀಯ ದೈವಗಳು

ಪುರಂದರದಾಸರು ಆರಗದ ಪರಿಸರದಲ್ಲಿ ನಡೆಯುತ್ತಿದ್ದ ಮಾರಿ, ಮಸಣಿ, ಎಕನಾತಿ ಮುಂತಾದ ಅನೇಕ ದೈವಗಳ ಪೂಜೆ ಮತ್ತು ಬಲಿಯನ್ನು ಕಣ್ಣಾರೆ ಕಂಡಂತೆ ವರ್ಣಿಸಿ ಇದನ್ನು ಅತ್ಯಂತ ಪ್ರಬಲವಾಗಿ ಖಂಡಿಸಿದ್ದಾರೆ.

೭. ಸಾಮರಸ್ಯ

ವಿಜಯನಗರ ಕಾಲದಲ್ಲಿ ಆರಗದಲ್ಲಿ ವೀರಶೈವರು ಹೆಚ್ಚಾಗಿ ನೆಲಸಿದ್ದರು. ಎಲ್ಲರೊಡನೆ ಸಹಬಾಳ್ವೆ ನಡೆಸಲು "ಜಂಗಮರು ನಾವು ಲಿಂಗಾಂಗಿಗಳು, ಮಹಂತಿನ ಮಠದವರು" ಎಂದು ಪುರಂದರದಾಸರು ವೀರಶೈವರನ್ನು ಕುರಿತು ಹೇಳಿದಂತಿದೆ.

೮. ಪ್ರಾದೇಶಿಕ ಭಾಷೆ

ದಾಸರು ತಮ್ಮ ರಚನೆಗಳಲ್ಲಿ ಬಳಸಿರುವ ಸಣ್ಣನುಚ್ಚು, ಗೊಡ್ಡುಳಿ, ಸೀಸಾರು, ತೋಡುತುಪ್ಪ, ಬೋಳೇರು, ಬೂಚಿ, ಸಟಗ, ವಾತ, ಗುಳಿಗೆ, ಚಿಕ್ಕಣಿ ಅಡಿಕೆ, ಮುಂತಾದ ಅನೇಕ ಪದಗಳು ಮಲೆನಾಡಿನ ಪರಿಸರದ ಆಡು ಮಾತುಗಳಾಗಿವೆ.

೯. ಸಾಮಾಜಿಕ ಚಿತ್ರಣ

ಸಾಂಸಾರಿಕ ಕಲಹ, ವಿಧವೆಯರ ದುಸ್ಥಿತಿ, ಮಡಿವಂತಿಕೆ, ಬಡತನ, ಹಸಿವು, ಶ್ರೀಮಂತರ ಅಟ್ಟಹಾಸ, ಹಣದ ಮೇಲಿನ ಬಡ್ಡಿ ವ್ಯವಹಾರ, ಭಕ್ತಿಯಿಲ್ಲದ ಪೂಜೆ ಮುಂತಾದ ವಿಷಯಗಳನ್ನು ಕುರಿತು ಪುರಂದರದಾಸರು ಮನಮಿಡಿಯುವಂತೆ ವರ್ಣಿಸಿರುವುದು ಆರಗದ ಪ್ರಾಂತ್ಯಕ್ಕೂ ಅನ್ವಯಿಸುವಂತಿದೆ.

ಮೇಲಿನ ಅಂಶಗಳು ಪುರಂದರದಾಸರ ಜನ್ಮ ಸ್ಥಳದ ಬಗ್ಗೆ ಹುಡುಕಾಟ ನಡೆಸಲು ಕೆಲವು ಆಧಾರಗಳು ಮಾತ್ರ. ಇದು ದಾಸರನ್ನು ಆರಗದ ಘಟ್ಟ ಪ್ರದೇಶಕ್ಕೆ ತರುವಂತಿದ್ದರೂ ಇವರು ಇದೇ ಸ್ಥಳದವರೆಂದು ಹೇಳಲು ಶಾಸನಾಧಾರಗಳಿಲ್ಲ. ಸಂಶೋಧಕರಿಗೆ ಇದೊಂದು ಗ್ರಾಸವಾಗಬಲ್ಲದು.

ಶಿಲ್ಪಕಲೆ : ಕಲಾನಾಥೇಶ್ವರ : ಪ್ರಸ್ತುತ ಆರಗದಲ್ಲಿ ಉಳಿದು ಬಂದಿರುವ ದೇವಾಲಯಗಳು ಐದು ಮಾತ್ರ. ಈ ದೇವಾಲಯಗಳು ವಿಜಯನಗರ ಅಥವಾ ಕೆಳದಿ ಶಿಲ್ಪಶೈಲಿಯ ಪ್ರತೀಕಗಳು. ಕಲಾನಾಥ ದೇವಾಲಯವು ಊರಿಗೆಲ್ಲ ಎದ್ದು ಕಾಣುವ ಒಂದು ಸುಂದರಮಂದಿರ. ಶಾಸನದಲ್ಲಿ ಇದಕ್ಕೆ "ಕಲಿನಾಥ" ಎಂದು ಹೇಳಿದೆ. ಇದರ ಮಾಡಿನ ಅಂಚಿನಲ್ಲಿ ಇಳಿಜಾರದ ಕಪೋತವಿದೆ. ಶೃಂಗಾರಗೊಂಡಿರುವ ಎತ್ತರದ ಗೋಪುರ ಶಿಖರ, ಮತ್ತು ಅಲಂಕೃತವಾದ ಸ್ಥಂಭ ಬೋದಿಗೆಗಳು ವಿಜಯನಗರ ಶಿಲ್ಪಶೈಲಿಗೆ ಶೋಭೆ ತಂದಿದೆ. ಎದುರಿನ ಧ್ವಜಸ್ಥಂಭದ ತಳಭಾಗದ ಶಿಲ್ಪದಲ್ಲಿ ಪುರುಷನೋರ್ವನು ಒಂದು ಕಾಲು ಮಡಿಸಿ ನಿಂತಿದ್ದು ಅವನ ತಲೆಗೂದಲು ಬಲಕ್ಕೆ ಬಾಗಿದೆ.

ಅಖಂಡೇಶ್ವರ : ಈ ದೇವಾಲಯಕ್ಕೆ ಗರ್ಭಗೃಹ ಅಂತರಾಳ ಮತ್ತು ಮಂಟಪವಿದೆ. ಇಳಿಜಾರಾದ ಕಪೋತವಿದೆ. ಸ್ಥಂಭ ದ್ವಾರಪಟ್ಟಕ, ದ್ವಾರಪಾಲಕರ ಕೆತ್ತನೆಯ ಆಕರ್ಷಕ ವೆನಿಸುತ್ತದೆ. ಎತ್ತರವಾದ ಶಿವಲಿಂಗ ಇದರ ಇನ್ನೊಂದು ಆಕರ್ಷಣೆ. ಇಲ್ಲಿ ಅನ್ನ ಸತ್ರವು ನಡೆಯುತ್ತಿತ್ತು ಎಂದು ಶಾಸನದಲ್ಲಿದೆ.

ಬನಶಂಕರಿ : ಇದು ಪೂರ್ಣವಾಗಿ ಪಾಳು ಬಿದ್ದು ಮರಗಿಡಗಳು ಬೆಳೆದಿವೆ. ಆದರೂ ಆಯುಧಪಾಣಿಯಾದ ಬನಶಂಕರಿ, ಕಾಮಧೇನು, ನಟರಾಜ ಮತ್ತು ದ್ವಾರಪಾಲಕರ ಮೂರ್ತಿಗಳು ಉಳಿದಿವೆ.

ಸದಾಶಿವ : ಆರಗದಲ್ಲಿ ಹೆಚ್ಚು ಪ್ರಸಿದ್ಧಿಯಾದ ಈ ದೇಗುಲ ಅಗ್ರಹಾರದಲ್ಲಿದೆ. ಶಿಖರ ಪಾಳಾಗಿದೆ. ಈ ದೇವಾಲಯದಲ್ಲಿ ಗರ್ಭಗೃಹ, ಅಂತರಾಳ ಮತ್ತು ಮಂಟಪವಿದೆ. ನವಿಲು ವಾಹನದ ಕಾರ್ತಿಕೇಯನ ಶಿಲ್ಪವಲ್ಲದೆ ಮಾಡಿನ ಅಂಚಿನಲ್ಲಿ ರುಂಡಮಾಲೆಯಂಥಹ ಕೆತ್ತನೆಯಿದೆ.

ಕಾಳಮ್ಮನಗುಡಿ : ಆಯುಧಪಾಣಿಯಾದ ಈ ಮೂರ್ತಿಯು ಆಸೀನ ಭಂಗಿಯಲ್ಲಿದೆ. ಎದುರಿನ ಒಂದು ಸಾಲಿನ ಶಾಸನದಲ್ಲಿ ಕೆಳದಿ ದೊರೆ ಬಸಪ್ಪನಾಯಕನ ಸೇನಭೋವನಾಗಿದ್ದ ಎಲ್ಲಣ್ಣನ ನಮಸ್ಕಾರ ಎಂದಿದೆ.

ಕಪ್ಪಗೋಡು ದೇವಾಲಯ : ಆರಗದ ಸಮೀಪದ ಕಪ್ಪಗೋಡು (ದಾವಣೆಬೈಲು) ಎಂಬಲ್ಲಿರುವ ಈ ದೇವಾಲಯವು ಶಿವಾಲಯವೆಂದು ಪ್ರಚಲಿತವಿದ್ದರೂ ಇದರಲ್ಲಿ ಮೂರ್ತಿಯಿಲ್ಲ. ಇದು ಹೊಯ್ಸಳ ಶೈಲಿಯ ಬಹು ಸುಂದರವಾದ ದೇವಾಲಯ. ತರೀಕೆರೆ ಬಳಿಯ ಅಮೃತೇಶ್ವರ ದೇವಾಲಯವನ್ನು ಹೋಲುತ್ತದೆ. ಗರ್ಭಗುಂಡಿ, ಅಂತರಾಳ ಮತ್ತು ಮುಖಮಂಟಪವಿದೆ. ಮಂಟಪದಲ್ಲಿ ಶೃಂಗಾರಗೊಂಡ ಹದಿನಾರು ಸ್ಥಂಭಗಳಿವೆ. ಛಾವಣಿಯಲ್ಲಿ ೯ ಮೂಲೆಗಳ ಕಮಲದ ಕೆತ್ತನೆಯಿದೆ. ಎಡಬಲಗಳಲ್ಲಿ ಜಗತಿಯಿದೆ. ಕಪೋತವು ಇಳಿಜಾರಾಗಿದೆ. ದ್ವಾರ ಪಟ್ಟಿಕೆಗಳಲ್ಲಿ ಸುಂದರವಾದ ಕೆತ್ತನೆಗಳಿವೆ. ಹೊರಭಾಗದಲ್ಲಿ ಸುತ್ತಲೂ ಸೊಗಸಾದ ಗೋಪುರಾಕೃತಿಯ ತೆನೆಗಳ ಕೆತ್ತನೆಯಿದೆ.

ಜೈನ ಬಸದಿ : ಕಾಳಮ್ಮನ ಗುಡಿ ಬಳಿಯ ಜೈನ ಬಸದಿಯು ಪಾಳು ಬಿದ್ದಿದೆ. ಗರ್ಭಗುಡಿಯಲ್ಲಿ ಮೂಲ ದೇವತೆಯ ವಿಗ್ರಹವಿಲ್ಲ. ರಂಗ ಮಂಟಪದಲ್ಲಿ ನಾಲ್ಕು ಸ್ಥಂಭಗಳಿವೆ. ದ್ವಾರಪಟ್ಟಿಕೆಯ ಮೇಲೆ ತೀರ್ಥಂಕರರ ಮೂರ್ತಿಗಳಿವೆ. ಈ ಬಸದಿಯು ಕಾಲಕಾಲಕ್ಕೆ ಜೀರ್ಣೋದ್ದಾರಗೊಂಡಂತೆ ತಿಳಿಯುತ್ತದೆ. ಮರಗಿಡಗಳು ಬೆಳೆದು ಬಸದಿಯು ಮತ್ತೆ ಬೀಳುವ ಸ್ಥಿತಿಯಲ್ಲಿದೆ.

ಹಣೆಗಿರಿ : ಇದನ್ನು ಹಣ್ಣೆಗಿರಿ, ಹಣೆಗಿರಿ, ಅಣ್ಣಯ್ಯಗಿರಿ ಎಂದು ಕರೆಯುತ್ತಾರೆ. ಶಿವಲಿಂಗವಿರುವ ಈ ದೇವಾಲಯದಲ್ಲಿ ರಂಗನಾಥಸ್ವಾಮಿಯ ಮೂರ್ತಿಯಿದೆ. ಪುರಂದರದಾಸರು ಹಾಡಿರುವ "ಅರುಣಗಿರಿಯ ಈಶ" ಇದೇ ಇರಬೇಕೆಂದು ಅನಿಸಿಕೆ. ಆಯುಧಪಾಣಿಯಾದ ರಂಗನಾಥ ಸ್ವಾಮಿಯ ಮೂರ್ತಿ ಆಕರ್ಷಕವಾಗಿದೆ. ಪ್ರಾಯಶಃ ಇದು ವಿಜಯನಗರಕ್ಕಿಂತ ಪೂರ್ವದಲ್ಲಿ ಹೊಯ್ಸಳರ ಕಾಲದಲ್ಲಿ ಸ್ಥಾಪನೆಯಾಗಿರಬಹುದು. ಮೊದಲು ಇದು ಶಿವಾಲಯವಾಗಿತ್ತೆ ಎಂಬ ಸಂದೇಹವಿದೆ. ರಂಗಮಂಟಪದಲ್ಲಿ ಶ್ರೀದೇವಿ ಭೂದೇವಿ ಮುಂತಾದ ಮೂರ್ತಿಗಳಿವೆ.

ದೇವಾಲಯದಿಂದ ಮುಂದೆ ಬಂದರೆ ಎಡಭಾಗದಲ್ಲಿರುವ ಒಂದು ಪುಟ್ಟ ಮೂರ್ತಿಯು ಯಕ್ಷಿಯ ಶಿಲ್ಪವಾಗಿರಬಹುದು. ಗಿರಿಯ ತಳಭಾಗದಲ್ಲಿರುವ ಒಂದು ಗುಹೆಯ ಬಂಡೆಯ ಮೇಲ ಈಚೆಗೆ ಕೆತ್ತಲಾಗಿರುವ ಚಿತ್ರಗಳಿವೆ.

ವೀರಭದ್ರ ದೇವಾಲಯ ಸಮುಚ್ಚಯ : ಹಿಂದೆ ಈ ಸ್ಥಳದಲ್ಲಿ ವೀರಭದ್ರನದೆಂದು ಹೇಳಲಾಗುತ್ತಿದ್ದ ಗುಡಿಯು ಪಾಳು ಬೀಳುತ್ತಿದ್ದ ಕಾರಣ ಇದನ್ನು ಈಗ ಹೊಸದಾಗಿ ಕಟ್ಟಿದೆ. ಧ್ವಜಸ್ಥಂಭವು ಹಾಗೆಯೇ ಉಳಿದಿದೆ. ಈ ದೇವಾಲಯದ ಎರಡು ಶಿಲೆಗಳ ಮೇಲೆ ತೀರ್ಥಂಕರರು ಹಾಗೂ ಯಕ್ಷಯಕ್ಷಿಯರ ಕೆತ್ತನೆಯಿದೆ. ಇದನ್ನು ದೇವಾಲಯದ ಎದುರಿನಲ್ಲಿ ನಿಲ್ಲಿಸಿದೆ. ಇನ್ನೊಂದು ಶಿಲೆಯ ಮೇಲೆ ಆನೆಯ ಮೇಲೆ ಕುಳಿತು ಯುದ್ಧ ಮಾಡುವ ವೀರರು ಹಾಗೂ ಶಿವಲಿಂಗವಿದೆ.

ಇಲ್ಲಿರುವ ಒಂದು ವೀರಗಲ್ಲಿನಲ್ಲಿ ಖಡ್ಗಧಾರಿಗಳಾಗಿ ಕುದುರೆಯ ಮೇಲೆ ಕುಳಿತಿರುವ ಇಬ್ಬರು ಮಹಿಳೆಯರು ಮತ್ತು ನಿಂತಿರುವ ಇನ್ನೊಬ್ಬ ಮಹಿಳೆಯ ಕೆತ್ತನೆಯಿದೆ. ವೀರಗಲ್ಲಿನ ಒಂದು ಸಾಲಿನಲ್ಲಿ ನಿಂತಿರುವ ಪುರುಷನೊಬ್ಬನ ರುಂಡವು ಹಾರಿಹೋಗಿ ಅಲ್ಲಿ ನಿಂತಿರುವ ಮಹಿಳೆಯೊಬ್ಬಳ ಕೈಯಲ್ಲಿದೆ. ಮತ್ತೊಂದು ವೀರಗಲ್ಲಿನಲ್ಲಿ ಆರು ಭಾಗಗಳಿವೆ. ಈ ವೀರ ಗಲ್ಲುಗಳು ಯಾವ ಕಾಲಕ್ಕೆ ಸಂಬಂಧಿಸಿದ್ದು ಎಂದು ತಿಳಿದು ಬಂದಿಲ್ಲ. ತೀರ್ಥಹಳ್ಳಿಯ ೨೬ ನೆಯ ಶಾಸನದಲ್ಲಿ ಒಬ್ಬ ಸಿರಿಯಮನ ಸಾಹಸದ ವರ್ಣನೆಯಿದೆ.

ಇದೇ ದೇವಾಲಯದ ಸಮುಚ್ಚಯದಲ್ಲಿರುವ ಜೈನ ತೀರ್ಥಂಕರರ ಮೂರ್ತಿಗಳು ಕ್ರಿ.ಶ. ೮ನೆಯ ಶತಮಾನದ ಚೈತ್ಯಾಲಯಕ್ಕೆ ಸಂಬಂಧಿಸಿದ್ದಂತೆ ತೋರುತ್ತದೆ.

ಸೋಜಿಗದ ಶಿಲ್ಪಗಳು : ಆರಗದ ತುಂಬೆಲ್ಲ ಅನೇಕ ಶಿಲ್ಪಗಳು ತುಂಡು ತುಂಡಾಗಿ ಬಿದ್ದಿವೆ. ಅಗ್ರಹಾರದ ಹಾಸುಗಲ್ಲೊಂದು ಮೇಲೆ ನಾಲ್ಕು ಪಾದಗಳಿದ್ದು ಇದಕ್ಕೆ ಹಾವು ಸುತ್ತು ಹಾಕಿದೆ. ಇದರ ಎರಡು ಭಾಗಗಳಲ್ಲಿ ರುಂಡವಿಲ್ಲದ ಪುರುಷರು ಎರಡು ಕೈಗಳಲ್ಲಿ ರುಂಡವನ್ನು ಎತ್ತಿ ಹಿಡಿದಿದ್ದಾರೆ. ಇದರ ನಡುವೆ ಮತ್ತೆ ಮೂರು ರುಂಡಗಳಿವೆ. ಬಹುಶಃ ಈ ಸ್ಥಳದಲ್ಲಿ ಶಕ್ತಿದೇವತೆಯ ಆರಾಧಕರಾಗಿದ್ದ ಕಾಪಾಲಿಕರಿದ್ದ ಸಂಭವವಿದೆ.

ಅಗ್ರಹಾರದ ಒಂದು ಮರದ ಬುಡದಲ್ಲಿ ನಿಲ್ಲಿಸಿರುವ ಶಿಲೆಯಲ್ಲಿ ಕುಳಿತ ಮಹಿಳೆಯೊಬ್ಬಳ ಚಿತ್ರವಿದೆ. ಬಲಗೈಯನ್ನು ತೊಡೆಯ ಮೇಲೆ ಇಟ್ಟುಕೊಂಡಿದ್ದಾಳೆ. ಎಡಗೈಯಲ್ಲಿ ಯಾವುದೋ ವಸ್ತುವಿದೆ. ರಾಜವಂಶದ ಮಹಿಳೆಯಂತೆ ಕಾಣಿಸುತ್ತಾಳೆ.

ಅವಲೋಕನ : ಆರಗದ ಶಾಸನಗಳು ವಿಜಯನಗರದ ಪೂರ್ವೇತಿಹಾಸವನ್ನು ಸೂಚ್ಯವಾಗಿ ನಿವೇದಿಸಿವೆ. ಮಾರಪ್ಪನಿಗೆ ಸಂಬಂಧಿಸಿದ ಶಾಸನದಂತೆ ವಿಜಯನಗರ ಸ್ಥಾಪನೆಯ ಕಾಲದಲ್ಲಿ ೧೩೩೬ರಲ್ಲಿ ಮಾರಪ್ಪ ಮತ್ತು ಅವನ ಸಹೋದರರು ಬೇರೆ ಬೇರೆ ಕಡೆ ಆಡಳಿತ ನಡೆಸುತ್ತಿದ್ದರೆಂದು ತಿಳಿಯುತ್ತದೆ.

ವಿಜಯನಗರ ಕಾಲದಲ್ಲಿ ಗಂಗ ಮಂಡಳಿನಾಡು ಆರಗ ರಾಜ್ಯಕ್ಕೆ ಸೇರಿ ಗಾಜನೂರು ಸೀಮೆಯಲ್ಲಿ ವಿಲೀನಗೊಂಡಿತು**[12]**ಪೆನುಗೊಂಡೆಯಲ್ಲಿ ಆಳುತ್ತಿದ್ದ ವೆಂಕಟಪತಿರಾಯನು ಆರಗದಲ್ಲಿ ವಿರುಪಂಣನ ಮಗಳನ್ನು ಮದುವೆಯಾದನೆಂದು ಬಿ.ಎಲ್.ರೈಸ್‌ರವರು ತೀರ್ಥಹಳ್ಳಿಯ ೯೭ನೆಯ ಶಾಸನವನ್ನು ಉಲ್ಲೇಖಿಸಿ ಹೇಳಿದ್ದಾರೆ. ವಿರುಪಂಣನು ೧೩೭೮ ರಲ್ಲಿ ಆಳುತ್ತಿದ್ದು ವೆಂಕಟಪತಿರಾಯನು ೧೫೮೫ರಲ್ಲಿ ಆಳುತ್ತಿದ್ದ ಕಾರಣ ಕಾಲವು ಹೊಂದಿಕೆಯಾಗುವುದಿಲ್ಲ.**[13]** ತೀರ್ಥಹಳ್ಳಿಯ ೧೪೯ನೆಯ ಶಾಸನವು ವಿಜಯನಗರದ ದೊರೆ ಇಮ್ಮಡಿ ಹರಿಹರನ ಮರಣದ ದಿನಾಂಕವನ್ನು ಹೇಳಿರುವ ಕಾರಣ ಪ್ರಾಮುಖ್ಯತೆ ಪಡೆದಿದೆ.**[14]** ಆರಗದ ಅಗ್ರಹಾರದ ಮಹಾಜನರು ತಮಗೆ ಹಿಂದೆ ನೀಡಿದ್ದ ಭೂದಾನ ವೃತ್ತಿಯನ್ನು ಅಲ್ಲಿಯ ಸದಾಶಿವ ದೇವಾಲಯಕ್ಕೆ ಬಿಟ್ಟುಕೊಡಲು ಕಾರಣವೇನೆಂದು ತರ್ಕಿಸಬಹುದಾಗಿದೆ. ಆರಗದಲ್ಲಿ ಮಾತ್ರ ಭೂಮಾಲೀಕತ್ವದ ಬಗ್ಗೆ ಹೆಚ್ಚು ಪ್ರಕರಣಗಳನ್ನು ಗುರುತಿಸಬಹುದು.

ಆರಗದಲ್ಲಿ ವೈದಿಕರಲ್ಲದೆ ಜೈನ ಮತ್ತು ವೀರಶೈವ ಧರ್ಮೀಯರು ನೆಲಸಿದ್ದರು. ಅಲ್ಲದೆ ಲಾಕುಳಶೈವ (ಕಾಳಾಮುಖ) ಕಾಪಾಲಿಕ, ಗಾಣಪತ್ಯ, ಕಾಲಭೈರವ, ಗೊರವ ಮುಂತಾದ ಮತ ಪಂಗಡಗಳು ಸಹ ನೆಲೆಸಿ ತಮ್ಮ ತಮ್ಮ ಆಚರಣೆಗಳಲ್ಲಿ ನಿರತರಾಗಿದ್ದರು. ಹೀಗೆ ಒಂದೇ ಸ್ಥಳದಲ್ಲಿ ಈ ಪರಿಯ ಧಾರ್ಮಿಕ ಚಟುವಟಿಕೆಗಳು ನಡೆಯುತ್ತಿದ್ದುದು ಅಪರೂಪವೆನಿಸುತ್ತದೆ.

ಆರಗರಾಜ್ಯದ ಹಲವಾರು ತಾಮ್ರ ಪಟಗಳು ಪ್ರಾಮುಖ್ಯತೆ ಪಡೆದಿವೆ. ಆರಗದ ವಿರುಪಾಪುರದ ತಾಮ್ರ ಶಾಸನದಲ್ಲಿ ಇಮ್ಮಡಿ ಹರಿಹರನು ಶ್ರೀ ವಿರೂಪಾಕ್ಷ ಎಂದು ಸಹಿ ಮಾಡಿರುವುದು ತೀರ್ಥಹಳ್ಳಿಯ ೨೦೧ನೆಯ ತಾಮ್ರಪಟದಲ್ಲಿ ನೋಡಬಹುದು. ಇದೇ ರೀತಿ ಇಮ್ಮಡಿದೇವರಾಯನ ೨೦೦ನೆ ಸಂಖ್ಯೆಯ ತಾಮ್ರಶಾಸನದಲ್ಲಿ ಹಾಗೂ ತೀರ್ಥಹಳ್ಳಿಯ ಪುತ್ತಿಗೆ ಮಠದ ೨೦೬ನೆಯ ತಾಮ್ರ ಶಾಸನದಲ್ಲಿಯೂ ವಿರೂಪಾಕ್ಷ ಎಂದು ಕನ್ನಡದಲ್ಲಿ ರುಜು ಮಾಡಿರುವುದನ್ನು ನೋಡಬಹುದು. ಒಟ್ಟಿನಲ್ಲಿ ಆರಗ ರಾಜ್ಯವು ಇತಿಹಾಸಕ್ಕೆ ಮೌಲಿಕ ಕೊಡುಗೆ ನೀಡಿದೆ.

(ಆರಗದ ವ್ಯಾಪಕ ಕ್ಷೇತ್ರ ಕಾರ್ಯದಲ್ಲಿ ಸಹಕರಿಸಿದ ಕಾಳಮ್ಮನ ಗುಡಿಯ ಕೆ.ಎಂ.ಶ್ರೀನಿವಾಸ್, ಬಿ.ಎಸ್ಸಿ, ಎಲ್ (ಶಿವಮೊಗ್ಗ), ಪಿ.ವಿ.ಮಹಾಬಲೇಶ, ಪ್ರಗತಿ ಫೈನಾನ್ಸಿನ ಮಂಜುನಾಥ್,

ಹಿತ್ತಲಗದ್ದೆ ಶಿವಕುಮಾರ್, ಶಾಂತವೇರಿ ಸುರೇಶ್, ಯುವಕ ಸಂಘದ ಪದಾಧಿಕಾರಿಗಳು ಗ್ರಾಮಸ್ಥರು, ಹಾಗೂ ಅರುಣಗಿರಿಯ ದೇವಾಲಯದ ಅರ್ಚಕರಿಗೂ ಕೃತಜ್ಞತೆ ಸಲ್ಲಿಸುತ್ತೇನೆ.)

[1]ಎ.ಕ. ಹಾಸನ ೯ ಬೇಲೂರು
[2]ಇದೇ ೬೧ ಭದ್ರಾಹು ೧೨೧೭
[3]ಅಡಿಟಿಪ್ಪಣಿ ೩ ಪು ೨೯೩
[4]ಎಂ.ಎ.ಆರ್. ೧೯೪೩ ಸಂ. ೪೭
[5]ಎ.ಕ. ೮ ತೀರ್ಥಹಳ್ಳಿ ೫೯ ಕವಲೆದುರ್ಗ ೧೭೧೩
[6]ಕೆಳದಿ ನೃಪವಿಜಯ ಪು ೧೪೧
[7]ಇದೇ
[8]ಕಪಟರಾಳು ಕೃಷ್ಣರಾವ್, ಪೂರ್ವೋಕ್ತ ಪು ೨೫೨
[9]ಎ.ಕ. ೮ ತೀರ್ಥಹಳ್ಳಿ ೨೦೬ ಆರಗ ೧೪೬೪
[10]ಇದೇ ೧೮೨ ತೂದೂರು ೧೬೪೧
[11]ಇದೇ ೧೮೯
[12] Ganga Mandalinad was amalgamated with aRaga kingdom and merged in Gajanur Sime. Later Gangas. of Mandali 1000-page 13
[13] Venkatapathiraya was now on the Vijayanagar throne in Penugonda and Thirthahalli 166 discribes Venkatanayaka as ruling at Araga which was in Araga Desa. Thirthahally 97 says his wife was Virupanna Nayaka’s daugther without naming her: B.L. Rice Ec Shimoga Ec. Dt P 15 of introduction 94
[14] Thirthahalli 29 is of special inportance for fixing absolutely the date of the death of Harihara II.

ಮಲೆಕರ್ನಾಟಕದ ಅರಸು ಮನೆತನಗಳು: ೧೩. ಸಂತೆಬೆನ್ನೂರು ನಾಯಕರು (೧)

ವಿಜಯನಗರ ಅರಸೊತ್ತಿಗೆಯ ಕೊನೆಯ ಕಾಲದಲ್ಲಿ ಅನೇಕ ಪಾಳೇಪಟ್ಟುಗಳು ಅಸ್ತಿತ್ವಕ್ಕೆ ಬಂದವೆಂದು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಅದರಂತೆ ಕರ್ನಾಟಕದ ಅರೆ ಮಲೆನಾಡಿನ ಭಾಗವಾಗಿದ್ದ ಈಗಿನ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಬಸವಾಪಟ್ಟಣ, ಸಂತೇಬೆನ್ನೂರು ಹಾಗೂ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಗಳಲ್ಲಿ ೧೬ರಿಂದ ೧೮ನೇ ಶತಮಾನದವರೆಗೆ ಪಾಳೇಪಟ್ಟು ಕಟ್ಟಿ ಆಡಳಿತ ನಡೆಸಿದ ಒಂದು ರಾಜವಂಶಕ್ಕೆ ಬಸವಾಪಟ್ಟಣ, ಸಂತೇಬೆನ್ನೂರು, ತರೀಕೆರೆ, ಪಾಳೆಯಗಾರರೆಂದು ಕರೆಯಲಾಗಿದೆ. ಈ ಮೂರು ಪಾಳೇಪಟ್ಟಿನ ಆಡಳಿತಗಾರರು ಒಂದೇ ವಂಶದವರಾಗಿದ್ದು ಈ ಪಾಳೆಯಪಟ್ಟು ಬಸವಾಪಟ್ಟಣದಿಂದ ಆರಂಭವಾಗಿರುವುದಾಗಿ ದಾಖಲೆಗಳು, ಕೈಫಿಯತ್ತುಗಳಿಂದ ತಿಳಿದುಬರುತ್ತದೆ. ನಂತರ ಅವರು ಸಂತೇಬೆನ್ನೂರನ್ನು ಕೇಂದ್ರವಾಗಿಟ್ಟುಕೊಂಡು ವಿಜಯನಗರ ಅರಸರ ಅಧೀನರಾಗಿಯೂ, ಅನಂತರ ಸ್ವತಂತ್ರರಾಗಿಯೂ ಮುಂದೆ ತರೀಕೆರೆಗೆ ಹೋಗಿ ನೆಲೆನಿಂತು ಅಲ್ಲಿಯೂ ಸಹ ತಾವು ಸಂತೇಬೆನ್ನೂರು ನಾಯಕರೆಂದೇ ಹೇಳಿಕೊಂಡು ಆಡಳಿತ ನಡೆಸಿರುತ್ತಾರೆ. ಈಗ ಲಭ್ಯವಿರುವ ಅವರ ೫೦ ಶಾಸನಗಳಲ್ಲಿ ಅವರು ಬಸವಾಪಟ್ಟಣ,

ತರೀಕೆರೆಗಳಿಂದ ಹೊರಡಿಸಿರುವ ಶಾಸನಗಳಲ್ಲೂ ಸಹ ತಮ್ಮನ್ನು ಸಂತೇಬೆನ್ನೂರು ನಾಯಕರೆಂದೇ ಕರೆದುಕೊಂಡಿರುವುದರಿಂದಲೂ, ಅವರು ತಮ್ಮನ್ನು ಪಾಳೇಗಾರರೆಂದು ಹೇಳಿಕೊಳ್ಳದೇ ಇರುವುದರಿಂದಲೂ, ಅವರನ್ನು ಬಸವಾಪಟ್ಟಣ, ತರೀಕೆರೆ, ಸಂತೇಬೆನ್ನೂರು ಪಾಳೆಯಗಾರರೆಂದು ಪ್ರತ್ಯೇಕವಾಗಿ ಕರೆಯುವ ಬದಲು ಒಟ್ಟಿನಲ್ಲಿ ಅವರನ್ನು ಸಂತೇಬೆನ್ನೂರು ನಾಯಕರೆಂದೇ ಕರೆಯುವುದು ಸಮಂಜಸವಾಗಿದೆ. ವಿಶ್ವಕೋಶ**[1]**ದಲ್ಲಿ ಇವರನ್ನು ಸಂತೇಬೆನ್ನೂರು ಅರಸರೆಂದೇ ನಮೂದಿಸಲಾಗಿದೆ.

ಕರ್ನಲ್ ಮಕೆಂಜಿ, ಫ್ರಾನ್ಸಿಸ್ ಬುಕಾನನ್,, ಎಂ.ಎಸ್.ಪುಟ್ಟಣ್ಣನವರು, ವಿಶ್ವಕೋಶ ಗೆಜೆಟಿಯರ್ಗಳಲ್ಲಿ, ಚಿತ್ರದುರ್ಗ, ಬಖೈರ್ ಮುಂತಾದ ಇತ್ತೀಚನ ಸಂಪಾದನಾ ಕೃತಿಗಳಲ್ಲಿ ವಿಜಯನಗರೋತ್ತರದ ಚಿಕ್ಕಪುಟ್ಟ ಅರಸರನ್ನು ಪಾಳೆಯಗಾರರೆಂದೇ ಸಂಬೋಧಿಸಿರುವುದು ಕಂಡುಬರುತ್ತದೆ. ಶಾಸನಗಳು ಸಮಕಾಲೀನ ಅಧಿಕೃತ ದಾಖಲೆಗಳಾಗಿರುವುದರಿಂದ ಅದರಲ್ಲಿ ತಿಳಿಸಿರುವ ಪ್ರಕಾರ ಅವರುಗಳನ್ನು ನಾಯಕರೆಂದೇ ಕರೆಯುವುದು ಸೂಕ್ತವೆನಿಸುತ್ತದೆ. ಈ ಹಿನ್ನೆಲೆಯಲ್ಲಿ ನಾವು ಸಂತೇಬೆನ್ನೂರು ನಾಯಕರ ಶಾಸನವನ್ನು ಪರಿಶೀಲಿಸಿದಾಗ ಅವರು ಎಲ್ಲಿಯೂ ತಮ್ಮನ್ನು ಪಾಳೆಯಗಾರರೆಂದೂ, ತಮ್ಮ ರಾಜ್ಯವನ್ನು ಪಾಳೆಯಪಟ್ಟೆಂದೂ ಕರೆದುಕೊಂಡಿಲ್ಲ. ಈ ಆಧಾರದ ಮೇಲೆ ಇವರನ್ನು ಪಾಳೆಯಗಾರರೆಂದು ಕರೆಯದೆ ಸಂತೇಬೆನ್ನೂರು ನಾಯಕರೆಂದೂ, ಅವರ ರಾಜ್ಯವನ್ನು ಪಾಳೆಪಟ್ಟೆನ್ನದೆ ಸಂಸ್ಥಾನವೆಂದು ಕರೆಯುವುದು ಸಮಂಜಸವೆನಿಸುತ್ತದೆ.

ಈ ನಾಯಕರಿಗೆ ಸಂಬಂಧಿಸಿದಂತೆ ಈವರೆಗೆ ಸಮಗ್ರ ಅಧ್ಯಯನ ಯಾವುದೂ ನಡೆದಿಲ್ಲ. ಇತಿಹಾಸ ದಾಖಲೆಗಳು, ಕೈಫಿಯತ್ತುಗಳು, ಬಖೈರುಗಳು, ಗೆಜೆಟಿಯರುಗಳು, ವಿಶ್ವಕೋಶಗಳು, ಶಾಸನ ಸಂಪುಟಗಳು ಮತ್ತು ಈವರೆಗೆ ಪ್ರಕಟವಾದ ಕೆಲವು ಪುಸ್ತಕಗಳು, ಸ್ಮರಣ ಸಂಚಿಕೆಗಳು, ಪತ್ರಿಕೆಗಳು ಈ ನಾಯಕರ ಬಗ್ಗೆ ಅಲ್ಪಸ್ವಲ್ಪ ಮಾಹಿತಿ ಒದಗಿಸುತ್ತಿದ್ದರೂ, ಅವುಗಳಲ್ಲಿರುವ ಪರಸ್ಪರ ವಿರೋಧಾಭಾಸದ ನಿರೂಪಣೆಗಳಿಂದ ಅವರ ಇತಿಹಾಸ ಇನ್ನಷ್ಟು ಕಗ್ಗಂಟಾಗಿದೆ. ಮುಖ್ಯವಾಗಿ ಸಂತೇಬೆನ್ನೂರು ನಾಯಕರ ಇತಿಹಾಸವನ್ನು ಮೇಲ್ಕಂಡ ಆಕರಗಳಲ್ಲದೆ ಅವರ ಕಾಲದ ಶಿಲ್ಪಗಳು, ಸ್ಮಾರಕಗಳು, ದೇವಾಲಯಗಳು, ಕೊಳ, ಕೆರೆ-ಕಟ್ಟೆಗಳು, ಕೋಟೆ ಕೊತ್ತಲುಗಳು, ಉಪಯೋಗಿಸಿದ ನಾಣ್ಯಗಳು, ಅವರ ಕಾಲದ ಸಾಹಿತ್ಯ, ಲಾವಣಿ ಮತ್ತು ಜಾನಪದ ಕಲೆಗಳಿಂದ ತಿಳಿಯಬಹುದಾಗಿದೆ.

ವಂಶಾವಳಿ : ಈ ನಾಯಕರ ವಂಶಾವಳಿಯ ಬಗ್ಗೆ ಅನೇಕ ರೀತಿಯ ಗೊಂದಲಗಳಿವೆ. ಇದನ್ನು ತಯಾರಿಸಲು ಹೊರಟಾಗ ಉತ್ಸಂಗಿ ವೇಂಟಿಕೆ ಸಲ್ಲುವ ಸಂತೇಬೆನ್ನೂರು ಶೀಮೆ ಕೈಫಿಯತ್ತು**[2]** ಮತ್ತು ಈ ವಂಶದ ರಂಗಪ್ಪ ನಾಯಕರು ಬರೆಯಿಸಿದ ತರೀಕೆರೆ ಕೈಫಿಯತ್ತು**[3]**ಗಳಲ್ಲಿ ಒಂದೊಂದು ರೀತಿ ವಂಶಾವಳಿಗಳನ್ನು ಕಾಣಬಹುದು. ಈ ವಂಶದ ಇತಿಹಾಸದ ಕುರಿತಾದ ಸರಜಾ ಹನುಮೇಂದ್ರ ಯಶೋವಿಲಾಸಂ**[4]** ಕರ್ತೃ ಕೃಷ್ಣಶರ್ಮ ಇನ್ನೊಂದು ರೀತಿ ವಂಶಾವಳಿಯನ್ನು ಕೊಡುತ್ತಾನೆ. ತರೀಕೆರೆಯ ಪಾಳೆಯಗಾರರು**[5]** ಪುಸ್ತಕ ಬರೆದ ಪಿ.ಅಬ್ದುಲ್ ಸತ್ತಾರ್ ಒಂದು ಬಗೆಯ ವಂಶಾವಳಿ ಕೊಟ್ಟರೆ, ಹೊನ್ನ ಬಿತ್ತೇವು ಹೊಲಕೆಲ್ಲಾ**[6]** ಸ್ಮರಣ ಸಂಚಿಕೆಯಲ್ಲಿ ಮತಿಘಟ್ಟ ಕೃಷ್ಣಮೂರ್ತಿ ಇನ್ನೊಂದು ತರಹೆ ವಂಶಾವಳಿ ಸೂಚಿಸುತ್ತಾರೆ. ಸರ್ಕಾರಿ ಗೆಜೆಟಿಯರುಗಳು,**[7]** ವಿಶ್ವಕೋಶ**[8]**ಗಳಲ್ಲಿ ಬೇರೊಂದು ತರಹೆ ವಂಶಾವಳಿ ಬರೆಯಲಾಗಿದೆ. ಲಭ್ಯವಿರುವ ಅವರ**[9]** ಇನ್ನೊಂದು ತರಹೆ ವಂಶಾವಳಿಯನ್ನು ಒದಗಿಸುತ್ತವೆ. ಮೇಲ್ಕಂಡ ಎಲ್ಲಾ ದಾಖಲೆಗಳು, ಕೈಫಿಯತ್ತುಗಳು, ಶಾಸನಗಳನ್ನು ಅಧ್ಯಯನ ಮಾಡಿ ಹೆಚ್ಚಾಗಿ ಶಾಸನಾಧಾರಗಳಿಂದ ಈ ವಂಶದ ವಂಶವೃಕ್ಷವನ್ನು ನಾನು ಬೇರೆಯೇ ಗುರುತಿಸಿರುತ್ತೇನೆ. **(ಅನುಬಂಧ-೧ ನೋಡಿ)**

ವಂಶದ ಮೂಲ : ಈ ವಂಶದ ಮೂಲದ ಬಗೆಗೂ ಅನೇಕ ರೀತಿಯ ಭಿನ್ನಾಭಿಪ್ರಾಯವಿದೆ. ೧೬ನೇ ಶತಮಾನದ ಆದಿಭಾಗದಲ್ಲಿ ವಿಜಯನಗರ ಅರಸರ ಸೈನ್ಯ ಪಡೆಯ ಮುಖ್ಯಸ್ಥನಾಗಿದ್ದ ಧರ್ಮರಾಜನೆಂಬುವನು ಬೇಟೆಯಾಡುತ್ತಾ ಈಗಿರುವ ಬಸವಾಪಟ್ಟಣ ಪ್ರಾಂತ್ಯಕ್ಕೆ ಬಂದನೆಂದೂ, ಅಲ್ಲಿ ಓರ್ವ ಬೇಡರ ಯುವತಿಯನ್ನು ಕಂಡು ಆಕೆಯನ್ನು ಮದುವೆಯಾಗಲು ಬಯಸಿದನೆಂದೂ, ಆದರೆ ಆಕೆಯ ತಂದೆ ಬೇರೆ ಜಾತಿಗೆ ಸೇರಿದ ಈತನಿಗೆ ಮಗಳನ್ನು ಕೊಡಲು ಒಪ್ಪದೆ, ನಂತರ ಆಕೆಯಲ್ಲಿ ಹುಟ್ಟಿದ ಮಕ್ಕಳಿಗೆ ಮುಂದೆ ಆಡಳಿತ ವಹಿಸಿಕೊಟ್ಟಲ್ಲಿ ಮಾತ್ರ ಈ ಮದುವೆಗೆ ಸಮ್ಮತಿಸುವೆನೆಂದು ಹೇಳಿದ ಮೇರೆಗೆ ಆ ಕರಾರಿಗೆ ಒಪ್ಪಿ ಆತ ಆ ಬೇಡರ ಯುವತಿಯನ್ನು ಮದುವೆಯಾಗಿ ಬಸವಾಪಟ್ಟಣದಲ್ಲಿ ನೆಲೆನಿಂತು, ಅಲ್ಲಿ ಒಂದು ಪಾಳೇಪಟ್ಟು ಕಟ್ಟಿದನೆಂದು ಹೇಳಲಾಗುತ್ತದೆ. ಈತನಿಗೆ ಕೆಂಗಣ್ಣ ಮತ್ತು ರಾಮಪ್ಪ ಎಂಬ ಈರ್ವರು ಮಕ್ಕಳು ಹುಟ್ಟಿದರು. ಹೀಗೆ ಈ ವಂಶದ ಮೂಲಪುರುಷ ಧರ್ಮರಾಜನೆಂದು ವಿಶ್ವಕೋಶಗಳಲ್ಲಿ, ಗೆಜೆಟಿಯರುಗಳಲ್ಲಿ, ಪತ್ರಿಕೆಗಳಲ್ಲಿ ಉಲ್ಲೇಖವಿದ್ದರೆ, ಧರ್ಮರಾಜ ಈ ವಂಶದ ಮೂಲ ಪುರುಷ ಎನ್ನುವುದು ಒಂದು ಕಟ್ಟು ಕಥೆ ಎನ್ನುತ್ತಾರೆ.[10]ತರೀಕೆರೆಯ ಪಾಳೆಯಗಾರರು ಪುಸ್ತಕ ಬರೆದ ಪಿ.ಅಬ್ದುಲ್ ಸತ್ತಾರ್. ಪ್ರಾಯಶಃ ಈ ಪ್ರದೇಶದಲ್ಲಿ ದೂಮಗುಡ್ಡ ಹೆಸರಿನ ಒಂದು ಗುಡ್ಡವಿದ್ದುದರಿಂದ ಯಾರೋ ಇಂತಹ ಒಂದು ಕಟ್ಟು ಕಥೆ ಹರಡಿದ್ದಾರೆಂದು ಹೇಳುವ ಅವರು ಈ ವಂಶದ ಮೂಲ ಪುರುಷನ ಹೆಸರು ಐತಿಹಾಸಿಕವಾಗಿ ರಾಮಕೋಟೆ ಹನುಮಪ್ಪ ನಾಯಕನೆಂದೂ, ಆತ ಹುಚ್ಚಂಗಿ ದುರ್ಗದ ಕಡೆಯಿಂದ ಬಸವಾಪಟ್ಟಣ ಕಡೆಗೆ ಬಂದವನೆಂದೂ ತರೀಕೆರೆ ಕೈಫಿಯತ್ತಿ[11]ನಂತೆ ಅಭಿಪ್ರಾಯಪಡುತ್ತಾರೆ.

*ಉತ್ಸಂಗಿ ವೆಂಟಿಕೆ ಸಲ್ಲುವ ಸಂತೇಬೆನ್ನೂರು ಶೀಮೆ ಕೈಫಿಯತ್ತಿ*ನಲ್ಲಿ ಕೃಷ್ಣರಾಯರ ಅಳಿಯ ರಾಮರಾಯರು ಪೃಥ್ವಿ-ಸಾಮ್ರಾಜ್ಯ ಆಳುತ್ತಿರಲು ಹನುಮಪ್ಪ ನಾಯಕರಿಗೆ ಉತ್ಸಂಗಿ ವೆಂಟಿಕೆ ಸಲ್ಲುವ ಮದಕರಿ ನಾಡನ್ನು ಅಮರಮಾಗಣಿಯಾಗಿ ದಯಪಾಲಿಸಿದ್ದರಿಂದ ಈ ಹನುಮಪ್ಪ ನಾಯಕನು ಮದಕರಿ ನಾಡಿನ ಸ್ಥಳವಿನ ಚಿಕ್ಕಕೂಗಲ್ಲೂರುಯೆಂಬ ಸ್ಥಳದಲ್ಲಿದ್ದುಕೊಂಡುಯಿರಲಾಗಿ, ಅಲ್ಲಲ್ಲಿ ಹನುಮಂತದೇವರು ಆತಗೆ ನಿಜರೂಪ ತೋರಿದ್ದರಿಂದ ಯೀತನು ರೋಮ ಪುಳಕಿತನಾಗಿ, ಯೀ ದೇವರ ಕುಲದೇವತೆಯಾಗಿ ನಡಕೊಂಡ ಕಾರಣ ರೋಮಕೋಟಿ ಹನುಮಪ್ಪ ನಾಯಕ ಎಂದು ಕರೆಯಲ್ಪಟ್ಟಿತೆಂದೂ ಈ ಹನುಮಪ್ಪ ನಾಯಕನ ಮಕ್ಕಳು ಕೆಂಗಪ್ಪನಾಯಕ ಹುಚ್ಚಪ್ಪನಾಯಕರು ಬೇಟೆಯಾಡುತ್ತಾ ಮದಕರಿ ಶೀಮೆ ವಳಿತವಾದ ರಂಗಾಪುರ ಗ್ರಾಮದ ಬಳಿ ಬರಲು ಆ ಸ್ಥಳದಲ್ಲಿ ಮೊಲವು ಯೆದ್ದು (ಬೇಟೆ) ನಾಯಿ ಮೇಲೆ ತಿರುಗಿ ಬಿದ್ದು ಕಡಿದುದರಿಂದ ಯೀ ಸ್ಥಳವು ಗಂಡುಭೂಮಿ ಎಂಬುದಾಗಿ ಗುರುತು ಮಾಡಿಸಿ, ಅಲ್ಲಿಂದ ಮುಂದಕ್ಕೆ ಬೇಟೆ ಆಡುತ್ತಾ ಹೋಗುತ್ತಾ ಯಿದ್ದಲ್ಲಿ ವಿಶ್ರಮಿಸಿ ಕೊಂಡಾಗ ಆತನ ಕನಸಿನಲ್ಲಿ ವೃಷಬೇಶ್ವರರು ಕಾಣಿಸಿಕೊಂಡು, ಭವಿಷ್ಯೋತ್ತರ ಶುಭ ಸೂಚನೆ ಹೇಳಿ, ನಿಧಿಯಿರುವ ಸ್ಥಳ ಸೂಚಿಸಿದಲ್ಲದೆ, ವರವನ್ನು ಕೊಟ್ಟರು. ತಮ್ಮ ಸ್ವಪ್ನ ಸೂಚನೆಯಂತೆ ಮುಂದು ಗಂಡುಭೂಮಿ ಎಂದು ಗುರುತು ಮಾಡಿದ ಸ್ಥಳದಲ್ಲಿ ಕೋಟೆಕಟ್ಟಿಸಿ ರಂಗಾಪುರ ಎಂಬ ಸ್ಥಳಕ್ಕೆ ಸಂತೇಬೆನ್ನೂರು ಎಂದು ಹೆಸರಿಟ್ಟು ಅಲ್ಲಿ ರಾಮಚಂದ್ರಸ್ವಾಮಿ ದೇವಸ್ಥಾನವನ್ನು, ಅದರ ಮುಂದೆ ರಾಮತೀರ್ಥ ಎಂಬ ಸರೋವರವನ್ನು ಕಟ್ಟಿಸಿ ಧರ್ಮದಿಂದ ರಾಜ್ಯ ಸ್ಥಾಪನೆ ಮಾಡಿ ಶಾ.ಶಕ ೧೪೮೦ನೇ ಕಾಳಾಯುಕ್ತಿ ಸಂವತ್ಸರದಿಂದ ಶಾ.ಶಕ೧೪೮೯ನೇ ಪ್ರಭವ ಸಂವತ್ಸರದವರೆಗೆ ಆಳುತ್ತಾ ಬಂದನು. ಹೀಗೆ ಸಂತೇಬೆನ್ನೂರು ಕೈಫಿಯತ್ತು[12] ಈ ಪಾಳೇಪಟ್ಟಿನ ಉದಯದ ಕಥೆ ತಿಳಿಸುತ್ತದೆ. ತರೀಕೆರೆ ಕೈಫಿಯತ್ತಿನಲ್ಲಿ ಇದೇ ಕಥೆಯೇ ಪುನರಾವರ್ತಿತವಾಗಿದ್ದು ಅಲ್ಲಿ ಸಂತೇಬೆನ್ನೂರು ಬದಲು ಬಸವಾಪಟ್ಟಣ ಕಟ್ಟಿಸಿದ್ದಾಗಿ ಹೇಳಲಾಗಿದೆ. ಬಸವಾಪಟ್ಟಣವನ್ನು ಕ್ರಿ.ಶಕ ೧೫೫೨ರಲ್ಲಿ ಕಟ್ಟಿಸಿದ್ದಾಗಿ ಅದು ತಿಳಿಸುತ್ತದೆ.[13] ರಂಗಾಪುರವನ್ನು ಸಂತೇಬೆನ್ನೂರೆಂದು ಹೆಸರಿಟ್ಟಿದ್ದು ಕ್ರಿ.ಶ. ೧೫೬೪ರಲ್ಲಿ ಎಂದು ಸಂತೇಬೆನ್ನೂರು ಕೈಫಿಯತ್ತು ತಿಳಿಸುತ್ತದೆ. [14]

ಕವಿಕೃಷ್ಣಶರ್ಮ ತಮ್ಮ ಕೃತಿಯಲ್ಲಿ ಈ ವಂಶದ ಮೂಲಪುರುಷ ಕುಮಾರ ನರೇಂದ್ರ ಎಂದು ಉಲ್ಲೇಖಿಸಿದ್ದಾರೆ.[15]ತಮ್ಮ ಪ್ರಭುವಿನ ಹೊಗಳುವಿಕೆಯೇ ಮೂಲ ಉದ್ದೇಶವಾಗಿಟ್ಟುಕೊಂಡು ರಚಿಸಿದ ಕಾವ್ಯ ಇದಾಗಿರುವುದರಿಂದ ಕವಿ ಇದರಲ್ಲಿ ಕಲ್ಪನೆಗೆ ಹೆಚ್ಚು ಮಹತ್ವ ಕೊಟ್ಟಿರಬಹುದೆನ್ನಿಸುತ್ತದೆ.

ಶ್ರೀ ಕೂಡ್ಲಿ ಶೃಂಗೇರಿ ಮಠದ ಹಳೇ ಕಡತ[16]ದಲ್ಲಿ ಅನೇಕ ರಾಜವಂಶಗಳ ಕುರಿತು ಬರೆಯುತ್ತಾ 'ತರೀಕೆರೆ ಅರಸುಗಳ ಪೂರ್ವವಂಶ' ಎಂಬ ಶೀರ್ಷಿಕೆಯಲ್ಲಿ ಈ ವಂಶವನ್ನು ಹೀಗೆ ಉಲ್ಲೇಖಿಸುತ್ತಾರೆ. ರಾಮಕೋಟೆ ಹನುಮಪ್ಪನಾಯಕ, ಹುಚ್ಚಹನುಮಪ್ಪಾ ನಾಯಕ, ನಾಯಕ, ಕೆಂಚಣ್ಣ ನಾಯಕ, ಬಾಲಹನುಮಪ್ಪ ನಾಯಕ ಇವರು ಎಂಟು ಜನ ಅಣ್ಣ ತಮ್ಮಂದಿರು, ೫ನೇ ಹನುಮಪ್ಪ ನಾಯಕನಿಗೆ ಗಂಗಪ್ಪನೆಂಬ ಮಗ ಈ ಒಂಭತ್ತು ಜನಗಳು ರಾಜ ಭೀತಿಯಿಂದ ಗೋಪಮಂದಿರದಲ್ಲಿ ಅಡಗಿದ್ದರು. ಒಂದು ಸಂದರ್ಭದಲ್ಲಿ ಕೆಂಗಣ್ಣ ನಾಯಕ ಬೇಟೆಯಾಡಿ ದಣಿದು ಅರಣ್ಯದಲ್ಲಿ ಮಲಗಿದ್ದನು. ಅಲ್ಲಿದ್ದ ವೃಷಬೇಶ್ವರರು ಸ್ವಪ್ನದಲ್ಲಿ ಕಾಣಿಸಿಕೊಂಡು ತನ್ನ ಹೆಸರಿನಲ್ಲಿ ಒಂದು ಪಟ್ಟಣ ನಿರ್ಮಾಣ ಮಾಡಲು ಆಜ್ಞೆ ಇತ್ತರು. ಆಗ ಬಸವಾಪಟ್ಟಣ ನಿರ್ಮಾಣ ಮಾಡಿದರು. ಆಮೇಲೆ ಬಹು ರಾಜ್ಯ ಕಟ್ಟಿದರು. ಕೆಂಚಪ್ಪ ನಾಯಕರಿಗೆ ಇಮ್ಮಡಿ, ಮುಮ್ಮಡಿ ಎಂಬಿಬ್ಬರು ಮಕ್ಕಳು. ಇಮ್ಮಡಿಗೆ ರಾಮಕೃಷ್ಣ, ಲಕ್ಷ್ಮಣ, ನಿಚ್ಚ ಮದುವಣಿಗ, ಹನುಮಪ್ಪ ಎಂಬ ಐದು ಮಕ್ಕಳು; ಮಗ ಸರಜಾ ಹನುಮಪ್ಪ ನಾಯಕ, ಮಗ ವೀರ ಹನುಮಪ್ಪ ನಾಯಕ, ಮಗ ಸೀತಾರಾಮಪ್ಪ ನಾಯಕರು ಎಂದು ಬರೆಯಲಾಗಿದೆ. [17]

ನಮಗೆ ದೊರೆತ ಈ ನಾಯಕರ ಶಾಸನ ಕೂಡ್ಲಿ – ೪೭ರಂತೆ ಶಾ.ಶಕ ೧೪೪೦ (ಕ್ರಿ.ಶ. ೧೫೫೪) ರಲ್ಲಿ ಸಂತೇಬೆನ್ನೂರು ಯಿಮ್ಮಡಿ ಸೀತಾರಾಮಪ್ಪ ನಾಯಕರ ಪುತ್ರರಾದ ಹನುಮಪ್ಪ ನಾಯಕರು ಶೃಂಗೇರಿ ವಿದ್ಯಾರಣ್ಯ ಭಾರತಿ ಸ್ವಾಮಿಗಳಿಗೆ ಬರೆಸಿಕೊಟ್ಟ ಭೂದಾನ ಪಟ್ಟಿ ಎಂದು ಬರೆಯಲಾಗಿದೆ. ಇದರಂತೆ ಯಿಮ್ಮಡಿ ಸೀತಾರಾಮಪ್ಪ ಈ ವಂಶದ ಮೂಲ ನಾಯಕನೇ ಎಂದು ಸಂದೇಹ ಬರುತ್ತದೆ. ಇದೇ ಶಾಸನದಲ್ಲಿ ತಮ್ಮ ಹಿರಿಯರು ಕಟ್ಟಿಸಿಕೊಟ್ಟ ಕೂಡಲಿ-ಶೃಂಗೇರಿ ಮಠ ಧರ್ಮಕ್ಕೆಂದು ಇರುವುದರಿಂದ ಇವರಿಗಿಂತ ಹಿಂದೆ ಬೇರೆ ನಾಯಕರು ಆಡಳಿತ ನಡೆಸಿರಬೇಕೆಂದು ಕುರುಹು ಸಿಗುತ್ತದೆ.

ವಂಶ : ಈ ವಂಶದ ಬಗ್ಗೆ ಒಬ್ಬೊಬ್ಬರು ಒಂದೊಂದು ರೀತಿ ಅಭಿಪ್ರಾಯ ವ್ಯಾಖ್ಯಾನ ಮಂಡಿಸಿದ್ದು ಈ ವಂಶದ ಮೂಲದ ಬಗ್ಗೆ ಸ್ಪಷ್ಟವಾಗಿ ಗುರುತಿಸುವುದು ಕಷ್ಟವಾಗಿದೆ. ಕೂಡ್ಲಿ ೪೭[18]ಶಾಸನ ಶ್ರೀಮತ್ ಸಂತೇಬೆನ್ನೂರು ರಾಮಚಂದ್ರ ದೇವರ ಪಾದ ಪದ್ಮಾರಾಧಕರಾದ ಹನುಮಂತದೇವರ ನಿಜಭಕ್ತರಾದ, ವಾಲ್ಮೀಕಿ ಗೋತ್ರದ ಪೂವಾಲಾನ್ವಯ ಎಂದು ಈ ರಾಜವಂಶದ ಪ್ರವರವನ್ನು ತಿಳಿಸುತ್ತದೆ. ಚನ್ನಗಿರಿ-೬೨[19] ಶಾಸನ ಮತ್ತಿತರ ತರೀಕೆರೆ ಶಾಸನಗಳಲ್ಲಿ ಪೂವಲ ವಂಶೋದ್ಧಾರಕರೆಂದು ಕರೆದುಕೊಂಡಿದ್ದಾರೆ. ಇದರಿಂದ ಇವರು ಬೇಡರ ಕುಲದವರು ಎಂದು ತಿಳಿಯಬಹುದು. ಇವರ ಕುರಿತು ಒಂದು ಕೈ ಬರಹ ಹಳೇ ಪ್ರತಿಯಲ್ಲಿ 'ವಾಲ್ಮೀಕಿ ವರ್ಣಾಶ್ರಮ ಭಾಸ್ಕರ' ಎಂದು ನಿರೂಪಿಸಿದ್ದು ತಾವು ಪುರಾಣ ಪ್ರಸಿದ್ಧ ಆದಿಕವಿ ವಾಲ್ಮೀಕಿ ವಂಶಸ್ಥರೆಂದು ಹೇಳುತ್ತಾರೆ. ಪೌರಾಣಿಕ ಪ್ರಸಿದ್ಧಿ ಪಡೆದ ಬೇಡರ ಕಣ್ಣಪ್ಪ ಈ ವಂಶಸ್ಥನೆಂದು ಅವನಿಂದ ಬೆಳೆದ ಈ ವಂಶ ಅಭಿವೃದ್ಧಿಯಾಗಿ ೨೪ ಬೆಡಗುಗಳಾದವೆಂದೂ, ಇವುಗಳಲ್ಲಿ 'ಪುವ್ವಲ' ಎಂದರೆ ಬೆಡಗು ಅಂದರೆ ಶಾಖೆ ಎಂದೂ ಹೇಳಲಾಗುತ್ತದೆ. ಇನ್ನೊಂದು ಅರ್ಥದಲ್ಲಿ ಪುವ್ವಲ ಅಂದರೆ ' ಸುಂದರ' ಎಂದೂ ಅರ್ಥೈಸಲಾಗಿದೆ.[20] ಪೂವ್ವಲ ಎಂದರೆ ಸೂರ್ಯ ಎಂದೂ ಅರ್ಥವಿದೆ. ಇವರು ಸೂರ್ಯವಂಶದವರೆಂದು ಕೃಷ್ಣಶರ್ಮನ ಅಭಿಪ್ರಾಯ.[21]ರಾಜಭಕ್ತಿ ಪ್ರತೀಕವಾಗಿ ಈ ರೀತಿ ಕರೆದಿರಬಹುದೆಂದು ಸಂಪಾದಕಿ ವೈ.ಸಿ.ಭಾನುಮತಿ ಅಭಿಪ್ರುಯಪಡುತ್ತಾರೆ.[22]

ಕೆಲವು ಶಾಸನಗಳಲ್ಲಿ ಮಾವಲ ವಂಶೋದ್ಧಾರಕರೆಂದು ಬಂದಿದ್ದು ಇದು ಪುವ್ವಲದ ತದ್ಭವ ಎಂದು ಒಂದು ವಾದವಿದ್ದರೆ, ಮಾವಲ ದೇಶದ ಮೂಲದಿಂದ ಬಂದವರೆಂಬ ಅರ್ಥವೂ ಇದಕ್ಕೆ ಬರುತ್ತದೆಂದು ಇನ್ನೊಂದು ವಾದವಿದೆ. ಹೀಗೆ ವಾಲ್ಮೀಕಿ ಗೋತ್ರದ, ಬೇಡ ಜನಾಂಗದ ಬೇಟೆ, ಶಿಕಾರಿ ಮೂಲವೃತ್ತಿಯಾಗಿ ಮಾಡಿಕೊಂಡಿದ್ದ ಈ ಜನರು ಒಂದು ಕಡೆ ವರ್ಷಪೂರ್ತಿ ಇರುತ್ತಿರಲಿಲ್ಲ. ತಮ್ಮ ಅವಶ್ಯಕತೆಗೆ ಅನುಸಾರವಾಗಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಗುಳೇ ಹೋಗುವುದು ಈ ಜನಾಂಗದ ಪದ್ಧತಿ, ವಾಡಿಕೆ. ಹೀಗೆ ಈ ಜನಾಂಗದ ಮೂಲ ಪುರುಷ ಬಸವಾಪಟ್ಟಣಕ್ಕೆ ಬೇಟೆಗೆ ಬಂದಾಗ, ಈ ಪ್ರಾಂತ್ಯದಲ್ಲಿ ನೆಲೆನಿಂತು ಪಾಳೇಪಟ್ಟು ಕಟ್ಟಿರಬೇಕು ಎಂದು ಧಾರಾಳವಾಗಿ ಭಾವಿಸಬಹುದು. ಈ ಬೇಡರ ನಾಯಕ ಮುಂದಾಳುವಾಗಿ ಮುಂದೆ ತನ್ನನ್ನು ನಾಯಕನೆಂದು ಕರೆದುಕೊಂಡಿದ್ದಾನೆ.

ಮನೆದೈವ : ಇವರು ಹೊರಡಿಸಿದ ಅನೇಕ ಶಾಸನಗಳಲ್ಲಿ 'ಸಂತೇಬೆನ್ನೂರು ರಾಮಚಂದ್ರ ದೇವರ ಪಾದ ಪದ್ಮಾರಾಧಕರಾದ ಹನುಮಂತರ ದೇವರ ನಿಜಭಕ್ತರಾದ' ಎಂದು ಹೊಗಳಿ ತಮ್ಮ ಶಾಸನ ಬರೆಯಿಸಿರುತ್ತಾರೆ. ಕೈಫಿಯತ್ತಿನ**[23]**ಉಲ್ಲೇಖದಂತೆ ಇವರ ಮನೆದೈವ ಸಂತೇಬೆನ್ನೂರು ಶ್ರೀ ರಾಮಚಂದ್ರ ದೇವರೆಂದೂ, ಇವರು ಅದರ ಸಮೀಪ ಇರುವ ಚಿಕ್ಕಕೋಗಲೂರು ಹನುಮಂತ ದೇವರ ಭಕ್ತರೆಂದೂ ತಿಳಿದುಬರುತ್ತದೆ. ಇವರ ಕುರಿತು ಬರೆದ ಅನೇಕ ಗ್ರಂಥಗಳಲ್ಲಿ, ಗೆಜೆಟಿಯರ್ಗಳಲ್ಲಿ, ವಿಶ್ವಕೋಶದಲ್ಲಿ ಸಂತೇಬೆನ್ನೂರಲ್ಲಿ ಶ್ರೀರಂಗನಾಥ ಸ್ವಾಮಿ ದೇವಾಲಯವಿತ್ತು., ಅದು ಇವರ ಇಷ್ಟದೈವ ಎಂಬ ರೀತಿ ಬರೆಯಲಾಗಿದೆ.**[24]** ಆದರೆ ಇದು ತಪ್ಪೆಂದು ಅವರು ಶಾಸನ ಖಚಿತಪಡಿಸುತ್ತದೆ. ಇವರ ಕೈಫಿಯತ್ತಿನಂತೆ ತೊಪೇನಹಳ್ಳಿ ರಂಗನಾಥಸ್ವಾಮಿ, ದೇವರಹಳ್ಳಿ ಉಡಮರಡಿ ರಂಗನಾಥ ಸ್ವಾಮಿ ದೇವಾಲಯದ ಜೀರ್ಣೋದ್ಧಾರ ಇವರು ಮಾಡಿಸಿದ್ದಾಗಿಯೂ, ಸಂತೇಬೆನ್ನೂರ ರಾಮಚಂದ್ರ ದೇವಸ್ಥಾನ ಮುಂದೆ ಬಿಜಾಪುರ ಸುಲ್ತಾನರ ಕಡೆಯಿಂದ ನಾಶಮಾಡಲ್ಪಟ್ಟ ಮೇಲೆ ರಂಗನಾಥಸ್ವಾಮಿಯನ್ನು ಮನೆದೇವರಾಗಿ ಮಾಡಿಕೊಂಡಿರಬಹುದೆಂದು ತಿಳಿಯಬಹುದು. ಸಂತೇಬೆನ್ನೂರಿಂದ ಈ ನಾಯಕರು ತರೀಕೆರೆಗೆ ಹೋಗಿ ನೆಲೆನಿಂತ ಮೇಲೆ ಕಳಸಾಪುರದ ರಂಗನಾಥ ಸ್ವಾಮಿಯನ್ನು ಮನೆದೇವರಾಗಿ ಮಾಡಿಕೊಂಡಿದ್ದಾಗಿಯೂ ತಿಳಿದುಬರುತ್ತದೆ. ತರೀಕೆರೆಗೆ ಬಂದ ನಂತರ ಹೊರಕೆರೆ ರಂಗನಾಥ ಸ್ವಾಮಿಗೂ, ಅಲ್ಲದೆ ಯಗಟಿ ಮಲ್ಲಿಕಾರ್ಜುನ ಸ್ವಾಮಿಯನ್ನು ಆರಾಧಿಸಿ, ಪೂಜಿಸುತ್ತಿದ್ದುದಾಗಿ ತಿಳಿದುಬರುತ್ತದೆ. ಪ್ರಸಿದ್ಧ ಕದರ ಮಂಡಳಿಗೆಯ ಆಂಜನೇಯ ಸ್ವಾಮಿ ದೇವಸ್ಥಾನವಲ್ಲದೆ ಅನೇಕ ಆಂಜನೇಯ ಸ್ವಾಮಿ ದೇವಸ್ಥಾನಗಳಿಗೆ ದತ್ತಿ, ದಾನ, ನೀಡಿ ತಾವು ಹನುಮಂತನ ನಿಜಭಕ್ತರೆಂದು ತೋರಿಸಿಕೊಂಡಿದ್ದಾರೆ.

ರಾಜ್ಯಭಾರ : ಬಸವಾಪಟ್ಟಣ, ಸಂತೇಬೆನ್ನೂರು, ತರೀಕೆರೆಯ ನಾಯಕರೆಂದು ಕರೆಯಲ್ಪಟ್ಟು ಇವರು ೧೬ನೇ ಶತಮಾನದ ಆದಿಭಾಗದಲ್ಲಿ ವಿಜಯನಗರದ ಸಾಮಂತರಾಗಿದ್ದು, ಆ ಸಾಮ್ರಾಜ್ಯದ ಪತನಾನಂತರ, ತಾವೇ ಸ್ವತಂತ್ರರಾಗಿ, ನಂತರ ಬಿಜಾಪುರದ ಆದಿಲ್ ಷಾಹಿ, ಕೆಳದಿ, ಚಿತ್ರದುರ್ಗ ಪಾಳೇಗಾರರ ಹಾಗೂ ಕೆಲಕಾಲ ಹೈದರ್, ಟಿಪ್ಪು, ಮರಾಠ, ಮೈಸೂರು ಅರಸರ ಅಧೀನರಾಗಿ ನಂತರ ಬ್ರಿಟಿಷ್ ಆದಿಪತ್ಯ ಆರಂಭವಾದಾಗ ಅವರ ವಿರುದ್ಧವೂ ಹೋರಾಡಿ ತಮ್ಮ ಅಸ್ತಿತ್ವ ಕಳೆದುಕೊಂಡು ಮೂರು ಶತಮಾನಗಳ ಕಾಲ ನಮ್ಮ ನಾಡಿನಲ್ಲಿ ಈಗಿನ ದಾವಣಗೆರೆ, ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು, ತುಮಕೂರು, ಹಾಸನ, ಹಾವೇರಿ ಜಿಲ್ಲೆಗಳಿಗೆ ಒಳಪಟ್ಟ ಪ್ರದೇಶದಲ್ಲಿ ಆಳ್ವಿಕೆ ನಡೆಸಿದರೆಂದು ಶಾಸನಗಳನ್ನೊಳಗೊಂಡಂತೆ ಐತಿಹಾಸಿಕ ದಾಖಲೆಗಳಿಂದ ನಮಗೆ ತಿಳಿದುಬರುತ್ತದೆ.

ಬಸವಾಪಟ್ಟಣದಲ್ಲಿ ತಮ್ಮ ವಂಶದ ಪಾಳೇಪಟ್ಟು ಆರಂಭಿಸಿದ ಈ ನಾಯಕರು ತಮ್ಮ ಆಡಳಿತವನ್ನು ಅಲ್ಲಿ ಸುಮಾರು ೮೦ ವರ್ಷಗಳೂ, ನಂತರ ವಿಜಯನಗರ ಅರಸರಿಂದ ಮಾಗಣಿ ಪಡೆದ ಸಂತೇಬೆನ್ನೂರಿಂದ ಒಂದು ಶತಮಾನ ಕಾಲವೂ, ಅನಂತರ ತರೀಕೆರೆ,

ಬಾಣಾವರಗಳಿಗೂ ತಮ್ಮ ರಾಜಧಾನಿ ಬದಲಾಯಿಸಿ ತರೀಕೆರೆಯಿಂದ ೧೫೦ ವರ್ಷಕ್ಕೂ ಹೆಚ್ಚು ಕಾಲ ಆಡಳಿತ ನಡೆಸಿ ತಮ್ಮ ರಾಜ್ಯವನ್ನು ಪೂರ್ವದ ಚಿತ್ರದುರ್ಗದಿಂದ, ಪಶ್ಚಿಮದ ಈಗಿನ ತೀರ್ಥಹಳ್ಳಿ ತಾಲ್ಲೂಕು ಕಾವಲು ದುರ್ಗದವರೆಗೂ, ದಕ್ಷಿಣದ ಬಾಬಾ ಬುಡನ್ ಗಿರಿ ತಪ್ಪಲಿನಿಂದ ಉತ್ತರದ ಈಗಿನ ಹಾವೇರಿ ಜಿಲ್ಲಾ ಕದರಮಂಡಲಿಗೆ ವ್ಯಾಪ್ತಿವರೆಗೂ ರಾಜ್ಯ ವಿಸ್ತರಿಸಿ, ತಮ್ಮ ಆಡಳಿತ ನಡೆಸುತ್ತಿದ್ದರೆಂದು ಶಾಸನಾಧಾರಗಳಿಂದ ತಿಳಿದುಬರುತ್ತದೆ. **(ಅನುಬಂಧ -೩ ನೋಡಿ)**

ಸಂತೇಬೆನ್ನೂರು, ನಂತರ ತರೀಕೆರೆ ಕೇಂದ್ರವಾಗಿಟ್ಟುಕೊಂಡು ಅಲ್ಲಿ ನೆಲೆನಿಂತ ಈ ನಾಯಕರು ಹೈದರನ ದಂಡಯಾತ್ರೆವರೆಗೂ ಸ್ವತಂತ್ರರಾಗಿ ತಮ್ಮ ಆಡಳಿತ ನಡೆಸಿದರು. ಹೈದರ್ ತರೀಕೆರೆ ಗೆದ್ದು ಪೊಗದಿ ಕೊಡಲು ಒಪ್ಪಿದಾಗ ಇವರಿಗೆ ಆಡಳಿತ ಮರಳಿ ಬಿಟ್ಟುಕೊಟ್ಟನು. ಆದರೆ ಖಂಡಣಿ ಹಣವನ್ನು ಕ್ಲುಪ್ತ ಕಾಲಕ್ಕೆ ಪಾವತಿಸದೆ ಇದ್ದುದರಿಂದ ಹೈದರ್ ಇವರನ್ನು ಪದಚ್ಯುತಿಗೊಳಿಸಿ ಅವರ ಪ್ರಾಂತ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಹೀಗೆ ಇವರ ಸ್ವತಂತ್ರ ಸ್ಥಾನಮಾನಕ್ಕೆ ಚ್ಯುತಿ ಬಂದಿತು.

ಶಾಸನಗಳು : ಈ ನಾಯಕರು ಬರೆಯಿಸಿದ ಒಟ್ಟು ೨೬ ಶಾಸನಗಳನ್ನು ಬಿ.ಎಲ್.ರೈಸರು ತಮ್ಮ ಶಾಸನ ಸಂಪುಟಗಳಲ್ಲಿ**[25]**ದಾಖಲಿಸಿದ್ದು, ಈಚೆಗೆ ಪೂನಾದ ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯಲ್ಲಿ ಒಂದು ಶಾಸನ**[26]**ಇರುವುದನ್ನು ಸಂಶೋಧಕ ಕೆಳದಿ ಗುಂಡಾಜೋಯ್ಸರು ಪತ್ತೆ ಮಾಡಿದ್ದಾರೆ. ಹಾಗೆಯೇ ನೂತನ ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲ್ಲೂಕು ಕದರ ಮಂಡಳಿಗೆ ದೇವಸ್ಥಾನದ ಗರುಡಗಂಭದಲ್ಲಿಯೂ ಒಂದು ಶಾಸನ**[27]** ಇರುವುದು ಬೆಳಕಿಗೆ ಬಂದಿದೆ. ಇದಲ್ಲದೆ ಮೈಸೂರು ಪ್ರಾಚ್ಯ ಸಂಶೋಧನಾ ಇಲಾಖೆ ತನ್ನ ವಾರ್ಷಿಕ ವರದಿಯಲ್ಲಿ ೩ ಶಾಸನಗಳನ್ನು**[28]**ಪ್ರಕಟಿಸಿದೆ. ಶ್ರೀ ಕೂಡ್ಲಿ- ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹ ಸಂ. ೧ರಲ್ಲಿ ಈ ನಾಯಕರಿಗೆ ಸಂಬಂಧಿಸಿದ ೧೫ ಶಾಸನಗಳು**[29]** ಪ್ರಕಟಿಸಲ್ಪಟ್ಟಿವೆ. ಇವುಗಳಲ್ಲದೆ ಶ್ರೀ ಶೃಂಗೇರಿ ಮಠದ ಶಾಸನ ಸಂಪುಟದಲ್ಲಿ ಒಂದು ಶಾಸನ**[30]**ಈ ನಾಯಕರದ್ದು ಪ್ರಸಿದ್ಧಿಸಲ್ಪಟ್ಟಿದ್ದು ಶೃಂಗೇರಿ ಮಠದ ಕಡತಗಳಲ್ಲಿ ೩ ಶಾಸನ**[31]**ಇರುವುದನ್ನು ಸಂಶೋಧಕ ಎ.ಕೆ.ಶಾಸ್ತ್ರಿ ಇತ್ತೀಚೆಗೆ ಗುರುತಿಸಿದ್ದಾರೆ. ಹೀಗೆ ಈ ನಾಯಕರದೆನ್ನಲಾದ ಒಟ್ಟು ೫೦ ಶಾಸನಗಳು ಈಗ ಲಭ್ಯವಾಗಿದೆ.

ಈಗ ದೊರೆತಿರುವ ೫೦ ಶಾಸನಗಳಲ್ಲಿ ೨೦ ಶಿಲಾಶಾಸನಗಳೂ, ೧೦ ತಾಮ್ರ ಶಾಸನಗಳೂ ಆಗಿದ್ದು, ಉಳಿದ ೨೦ ಶಾಸನಗಳು ಕಾಗದದಲ್ಲಿ ಬರೆದ ಸನ್ನದುಗಳಾಗಿದೆ. ಬಿ.ಎಲ್.ರೈಸರು ಪ್ರಕಟಿಸಿರುವ ಈ ನಾಯಕರದೆನ್ನಲಾದ ೨೬ ಶಾಸನಗಳಲ್ಲಿ**[32]** ಶಿವಮೊಗ್ಗ ೧೦೭-೧೦೮**[33]**, ಹೊನ್ನಾಳಿ**[34]**, ಶಾಸನಗಳಲ್ಲಿ ಸಂತೇಬೆನ್ನೂರು ನಾಯಕರ ಹೆಸರನ್ನು ಹೋಲುವ ಹೆಸರುಗಳು ಬಂದಿದ್ದರೂ ಅವರೇ ಅಭಿಪ್ರಾಯಪಡುವಂತೆ ಅವು ಈ ನಾಯಕರ ಶಾಸನಗಳಾಗಿರುವುದು ಅನಮಾನ. ಆದ್ದರಿಂದ ಇವು ಕೂಟ ಶಾಸನಗಳೆಂದು ಧಾರಾಳವಾಗಿ ಹೇಳಬಹುದಾಗಿದೆ. ಇನ್ನು ಚನ್ನಗಿರಿ -೪೭**[35]**ಶಾಸನದಲ್ಲಿ ಸಂತೇಬೆನ್ನೂರು ನಾಯಕರ ಹೆಸರಾಗಲೀ, ಕಾಲವಾಗಲೀ ನಮೂದಾಗದೇ ಇದ್ದರೂ ರೈಸರು ಇದನ್ನು ಸಂತೇಬೆನ್ನೂರು ನಾಯಕರದೆಂದು ಹೇಗೆ ನಿರ್ಣಯಿಸಿದರೋ ತಿಳಿದು ಬಂದಿಲ್ಲ. ಇವ್ಯಾವೂ ಸಂತೇಬೆನ್ನೂರು ನಾಯಕರ ಶಾಸನಗಳಲ್ಲ. ಹಾಗೆಯೇ ತರೀಕೆರೆ ಶಾಸನ – ೨೪**[36]**, ಅದೇ ತರೀಕೆರೆ ಶಾಸನ – ೨೧**[37]**ರ ನಕಲೂ, ತರೀಕೆರೆ ಶಾಸನ-೨೩**[38]**-೨೨**[39]** ರ ನಕಲೂ ಆಗಿದೆ. ಮೇಲ್ಕಂಡ ಶಾಸನಗಳಿಂದ ಸಂತೇಬೆನ್ನೂರು ನಾಯಕರ ಕಾಲ, ಆಡಳಿತ ನಡೆಸಿದ ನಾಯಕರ ಹೆಸರು, ವಂಶಾವಳಿ, ಲಾಂಛನ, ಮುದ್ರೆ, ಅಂಕಿತ, ಕಟ್ಟಿಸಿದ ಮತ್ತು ಜೀರ್ಣೋದ್ಧಾರ ಮಾಡಿದ ದೇವಸ್ಥಾನ, ಕೊಳ, ಕೆರೆ ಮುಂತಾದವುಗಳೂ, ಕೊಟ್ಟ ದತ್ತಿ, ದಾನ, ಬಳಸಿದ ನಾಣ್ಯ, ಅಳತೆ, ತೂಕ, ಆಡಳಿತ ವ್ಯಾಪ್ತಿಗಳಲ್ಲದೆ ಇವರ ಅಧಿಕಾರಿಗಳು, ಮಂತ್ರಿಗಳು, ಕಾರ್ಯಕರ್ತರು, ಮುಂತಾದವರ ಹೆಸರುಗಳು ಹೀಗೆ ಅನೇಕ ವಿವರಗಳನ್ನು ಪಡೆಯಬಹುದಾಗಿದೆ. ಈ

ನಾಯಕರು ಬಸವಾಪಟ್ಟಣ, ಸಂತೇಬೆನ್ನೂರು, ತರೀಕೆರೆಯಿಂದ ಆಳ್ವಿಕೆ ನಡೆಸಿದರೂ, ಈ ಕೇಂದ್ರ ಸ್ಥಳಗಳಲ್ಲಿ ಅವರ ಒಂದು ಶಾಸನಗಳೂ ಇಲ್ಲದಿರುವುದು ಅಚ್ಚರಿಯ ಸಂಗತಿಯಾಗಿದೆ.

ಅವರ ಶಿಲಾ ಶಾಸನಗಳಿಗಿಂತ ತಾಮ್ರ ಶಾಸನಗಳು ಹೆಚ್ಚು ಸ್ಪಷ್ಟವಾಗಿ, ವಿವರವಾಗಿ ಬರೆಯಲ್ಪಟ್ಟಿವೆ. ಹೆಚ್ಚು, ಹಾಳೆ ಇರುವ ತಾಮ್ರ ಶಾಸನಗಳನ್ನು ವಿಜಯನಗರ ಅರಸರ ಲಾಂಛನವಾಗಿದ್ದ 'ವರಾಹ' ಬಳೆಯಿಂದಲೇ ಬಂಧಿಸಿದ್ದು,**[40]**ಅವರ ಅಧೀನರಾಗಿದ್ದ ಈ ನಾಯಕರೂ ಅವರ ಲಾಂಛನಗಳನ್ನು ಮುಂದುವರೆಸಿಕೊಂಡು ಬಂದಿದ್ದಾಗಿ ತಿಳಿದುಬರುತ್ತದೆ. ಅವರ ತಾಮ್ರ ಶಾಸನಗಳಲ್ಲಿ ತಮ್ಮ ಮನೆದೈವ 'ಶ್ರೀರಾಮ'**[41]**ಎಂಬ ಅಂಕಿತವನ್ನು ಉಪಯೋಗಿಸಿರುವುದು ಕಂಡುಬರುತ್ತದೆ. ಅವರ ಶಾಸನಗಳಲ್ಲಿ ಇಮ್ಮಡಿ, ಮುಮ್ಮಡಿ, ನಿಚ್ಚಮದುವಣಿಗ, ಸರಜಾ, ಕೆಂಗಾ ಎಂಬ ಹೆಸರು ಬಂದಿದ್ದು ಇವು ಅವರ ಬಿರುದುಗಳು ಎನ್ನಲಾಗಿದೆ. ಶಾಸನ-೨೧ರಲ್ಲಿ**[42]**ಶ್ರೀ ವೀರಪ್ರತಾಪ ಶ್ರೀವೆಂಕಟಪತಿ ದೇವರು ಸಿಂಹಾಸನಾ ರೂಢರಾದ ಕಾಲದಲ್ಲಿ ಅವರ 'ದಕ್ಷಿಣ ಭುಜದಂಡರಾದ' ಸಂತೇಬೆನ್ನೂರು ಪೂವರಿಕೆಂಗಪ್ಪ ನಾಯಕರ ಪುತ್ರರಾದ ಹಿರಿಯ ಹನುಮಪ್ಪ ನಾಯಕರ ಸಹೋದರ ಬಾಲಗಿರಿ ನಾಯಕರು ಎಂದು ಬಂದಿರುವುದರಿಂದ ಇದು ಅವರಿಗೆ ಸಂದ ಬಿರುದೆ**?** ಅಥವ ಅವರಿಗೆ ದೊರೆತ ಗೌರವವೇ**?** ಎಂಬ ಪ್ರಶ್ನೆ ಮೂಡುತ್ತದೆ. ವಿಶ್ವಕೋಶದಲ್ಲಿ ಸರ್ಜಾ ಎಂಬ ಬಿರುದು ಈ ನಾಯಕರಿಗೆ ಹೈದರಾಲಿ ಕೊಟ್ಟಿದ್ದಾಗಿ ನಮೂದಿಸಲಾಗಿದೆ. **[43]**ಇದು ತಪ್ಪು, ಹೈದರಾಲಿ ಕಾಲ ಕ್ರಿ.ಶ. ೧೭೬೧-೨ ಅದಕ್ಕಿಂತ ಪೂರ್ವದ ಶಾಸನಗಳಲ್ಲೆ ಈ ಸರ್ಜಾ ಬಿರುದು ಪ್ರಯೋಗವಾಗಿದೆ. **[44]** ಈ ಬಿರುದು ಬಿಜಾಪುರದ – ಆದಿಲ್ ಷಾಹಿ ಸುಲ್ತಾನರು ಸಂತೇಬೆನ್ನೂರು ನಾಯಕರಿಗೆ ಕೊಟ್ಟದ್ದಾಗಿ ಕೈಫಿಯತ್ತು ತಿಳಿಸುತ್ತದೆ.

ಈ ನಾಯಕರ ವಂಶದಲ್ಲಿ ಕೆಂಗಪ್ಪ ನಾಯಕ. ಕೆಂಗಾಹನುಮಪ್ಪ ನಾಯಕ, ಹನುಮ ನಾಯಕ, ಹನುಮಪ್ಪ ನಾಯಕ ಎಂಬ ಹೆಸರುಗಳು ಅನೇಕ ಸಾರೆ ಬಂದಿದ್ದು ಆ ಹೆಸರೇ ಒಬ್ಬನೇ ವ್ಯಕ್ತಿಯದಾಗಿರುವ ಸಾಧ್ಯತೆಯೂ ಇದೆ.

[1] *ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ*, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ಪುಟ. ೧೪೬೩ (ಕಕವಿವಿ)

[2] *ಕರ್ನಾಟಕ ಕೈಫಿಯತ್ತುಗಳು* : ಕನ್ನಡ ವಿಶ್ವವಿದ್ಯಾಲಯ ಹಂಪಿ, ಕಲಬುರ್ಗಿ ಎಂ.ಎಂ. ೧೯೯೪ (ಕ.ಕೈ)

[3]ಅಬ್ದುಲ್ ಸತ್ತಾರ್ ಪಿ. (ಸಂಗ್ರಹ) "ತರೀಕೆರೆ ಸಂಸ್ಥಾನದ ಕೈಫಿಯತ್ತು ತರೀಕೆರೆ ಪಾಳೆಗಾರರು' ಪುಟ – ೪೭ (ತ.ಕೈ)

[4]*ಸರಜಾ ಹನುಮೇಂದ್ರ ಯಶೋವಿಲಾಸಂ* ಮೈ.ವಿ. ಮೈಸೂರು ಪುಟ. ೪ (ಸಹಯವಿ)

[5]ಅಬ್ದುಲ್‌ಸತ್ತಾರ್. ಪಿ. ತರೀಕೆರೆಯ ಪಾಳೆಯಗಾರರು ಲೋಕಪಾವನಿ ಪ್ರಕಾಶನ – ಪಾಂಡರಪುರ – ವಂಶಾವಳಿ ಅನುಬಂಧ

[6]ಮತ್ತಿಘಟ್ಟ ಕೃಷ್ಣಮೂರ್ತಿ *ಹೊನ್ನಬಿತ್ತೇವು ಹೊಲಕ್ಕೆಲ್ಲಾ* ಸ್ಮರಣ ಸಂಚಿಕೆ – ತರೀಕೆರೆ – ೧೯೬೭ ತರೀಕೆರೆಯ ಪಾಳೆಯಗಾರರು (ತ.ಪಾ.) ಪುಟ. ೭೦

[7] *ರೈಸ್ ಗೆಜೆಟಿಯರ್ ಸಂಪುಟ*. ಪುಟ ೭

[8] *ಕ.ಕ.ವಿ.ವಿ.*

[9]ರೈಸರ *ಏಪಿಗ್ರಾಫಿಯಾ* ಕರ್ನಾಟಕದಲ್ಲಿ (ಎ.ಕ) ಪ್ರಕಟವಾದ ಮತ್ತಿತರ ಈ ನಾಯಕರ ಶಾಸನಗಳು

[10]*ತ.ಪಾ* ಪುಟ – ೫

[11]ತರೀಕೆರೆ ಸಂಸ್ಥಾನದ ಕೈಫಿಯತ್ತು ರಂಗಪ್ಪನಾಯ್ಕರು ಬರಿಸಿದ್ದು ತ.ಪಾ.

[12]ಕ.ಕೈ.

[13]ತರೀಕೆರೆ ಸಂಸ್ಥಾನದ ಕೈಫಿಯತ್ತು ರಂಗಪ್ಪನಾಯ್ಕರು ಬರಿಸಿದ್ದು ತ.ಪಾ.

[14]ಉತ್ಸಂಗಿ ವೆ..... ಸಲ್ವ ಸಂತೇಬೆನ್ನೂರು ಕೈಫಿಯತ್ತು ಕ.ಕೈ. ಪುಟ – ೪೨೫

[15]*ಸ.ಹ.ಯ.ವಿ.* ಪುಟ-೪

[16]*ಶ್ರೀ ಕೂಡ್ಲಿ -ಶೃಂಗೇರಿಮಠದ ಪ್ರಾಚೀನ ಶಾಸನ ಲೇಖನ ಸಂಗ್ರಹ ಭಾಗ-೧* ಕೂಡ್ಲಿ (ಪ್ರಕಟಣೆ ೧೯೬೫) (ಶ್ರೀ ಕೂಡ್ಲಿ ಶೃಂಗೇರಿ ಮಠದ ಶಾಶನಗಳು)

[17]ಅದೇ

[18]ಅದೇ

[19]*ಏ.ಕ.*ಸಂ. ೭ (ಶಿವಮೊಗ್ಗ ಭಾಗ-೧)

[20]*ತ.ಪಾ.* ಪುಟ-೯

[21]*ಸ.ಹ.ಯ.ವಿ.* ಪುಟ – ೩

[22]ಅದೇ ಪೀಠಿಕೆ XVIII

[23]ಉತ್ಸಂಗಿ ವೇಂಟಿಕೆ ಸಲ್ಲುವ ಸಂತೇಬೆನ್ನೂರು ಕೈಫಿಯತ್ತು ಕ.ಕೈ.ಹಂಪಿ.

[24]*ಕ.ಕ.ವಿ.ವಿ.* ಪು.೮

[25]*ಏ.ಕ.* ಸಂಪುಟಗಳು ೬.೭.೧೧.೧೨

[26]*ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ ತ್ರೈಮಾಸಿಕ ವರದಿ* ಸಂ. ೧೮

[27]*ಸೌತ್ ಇಂಡಿಯನ್ ಇನ್ಸ್ಕ್ರಿಪ್ಷನ್ಸ್* (ಸೌ.ಇಂ.ಇ.)

[28]*ಮೈಸೂರು ಪ್ರಾಚ್ಯ ಸಂಶೋಧನಾ ಇಲಾಖಾ ವರದಿ* ೧೯೨೫-೧೯೨೭

[29] *ಶ್ರೀ ಕೂಡ್ಲಿ ಶೃಂಗೇರಿ ಮಠದ ಶಾಸನಗಳು*

[30] *ಸೆಲಕ್ಷನ್‌ಫ್ರಂ ದಿ ರೆಕಾರ್ಡ್ಸ್ ಆಫ್‌ದಿ ಶೃಂಗೇರಿ ಮಠ* ಸಂ. ೧ (೧೯೨೭) ಶೃಂಗೇರಿ

[31] ಎ.ಕೆ.ಶಾಸ್ತ್ರಿ, ಶೃಂಗೇರಿ ಮಠದ ಕಡತಗಳು (ಕಡತ ೧೦೨, ೧೨೨, ೧೬೭)

[32] *ಎ.ಕ.* ಸಂ. ೬.೭.೧೧.೧೨

[33] *ಎ.ಕ.* ಸಂ.೭ (ಶಿವಮೊಗ್ಗ ಭಾಗ – ೧, ಶಿವಮೊಗ್ಗ ತಾ. ನಾಗಸಮುದ್ರ ಶಾಸನಗಳು)

[34] ಅದೇ (ಹೊನ್ನಾಳ್ಳಿ ತಾಲ್ಲೂಕು ದಾಸರಹಟ್ಟಿ ಶಾಸನ)

[35] ಅದೇ (ಚನ್ನಗಿರಿ ತಾಲೂಕು ಹಿರೇಮಾಡಾಳು ಶಾಸನ)

[36] *ಎ.ಕ.* ಸಂ. ೬ (ಕಡೂರು – ತರೀಕೆರೆ ತಾಲ್ಲೂಕು ತಾಮ್ರ ಶಾಸನ)

[37] *ಅದೇ*

[38] *ಅದೇ*

[39] *ಅದೇ*

[40] *ಅದೇ*

[41] *ಅದೇ*

[42] *ಅದೇ*

[43] *ಅದೇ*

[44] *ಕ.ಕ.ವಿ.ವಿ.* ಪುಟ – ೭೨೨

ಮಲೆಕರ್ನಾಟಕದ ಅರಸು ಮನೆತನಗಳು: ೧೩. ಸಂತೆಬೆನ್ನೂರು ನಾಯಕರು (೨)

ಕೈಫಿಯತ್ತುಗಳು : ಇತಿಹಾಸ ಬರವಣಿಗೆಯ ಸಂದರ್ಭದಲ್ಲಿ ದಾಖಲೆಗಳಾದ ಶಾಸನಗಳಿಗೆ ಪ್ರಥಮ ಸ್ಥಾನ, ಮಿಕ್ಕವುಗಳಿಗೆ ದ್ವಿತೀಯ ಸ್ಥಾನ ಸಲ್ಲುತ್ತದೆ. ಈ ದ್ವಿತೀಯ ಸ್ಥಾನದ ಆಧಾರ ಸಾಮಗ್ರಿಯಲ್ಲಿ ಕೈಫಿಯತ್ತುಗಳು ಪರಿಗಣಿತವಾಗುತ್ತವೆ. ಶಾಸನಗಳಂತೆ ಕೇವಲ ದಾನ ವೀರಘಟನೆಗಳನ್ನು ಹೇಳದೆ, ಕೈಫಿಯತ್ತುಗಳು ವಾಸ್ತವ ಜೀವನದ ವಿವರಗಳನ್ನು ಒದಗಿಸಿ, ಬದುಕಿನ ಮುಚ್ಚಿಹೋದ ಮುಖಗಳನ್ನು ಬಿಚ್ಚಿ ತೋರಿಸುತ್ತವೆ. ಕೈಫಿಯತ್ತುಗಳಲ್ಲಿ ಆಡಳಿತ ನಡೆಸಿದ ಆ ಸ್ಥಳದ ರಾಜರ, ಪಾಳೇಗಾರರ ಹೆಸರು, ಆಳ್ವಿಕೆ, ಕಾಲ, ಮನೆತನದ ಸಂಬಂಧಗಳಲ್ಲದೆ ಸಮಕಾಲೀನ ಅರಸರ ಬಗೆಗೂ, ಅವರ ಸಂಬಂಧ, ಯುದ್ಧ, ಕಟ್ಟಿಸಿ ಮತ್ತು

ಜೀರ್ಣೋದ್ಧಾರ ಮಾಡಿದ ಕೆರೆ, ಕೊಳ, ದೇವಸ್ಥಾನಗಳ ಬಗ್ಗೆಯೂ, ವ್ಯಾಪಾರ, ವ್ಯವಹಾರ, ಕೃಷಿ ಇತ್ಯಾದಿ ಅನೇಕ ವಿವರಗಳನ್ನೂ ಒದಗಿಸುತ್ತವೆ. ನಾಯಕರ ಜೊತೆಗೆ ನಾಗತಿಯರ ವಿವರವೂ ನಮಗೆ ತಿಳಿದು ಬರುವುದು ಕೈಫಿಯತ್ತಿನಿಂದ, ಕೈಫಿಯತ್ತನ್ನು ಪರಿಶೀಲಿಸಿದಾಗ ದೊರಕಿರುವ ಶಾಸನಗಳಿಗೂ ಕೈಫಿಯತ್ತಿನಲ್ಲಿ ಉಲ್ಲೇಖಿಸಿದ ಹೆಸರು, ಕಾಲಗಳಿಗೂ ಬಹಳಷ್ಟು ವ್ಯತ್ಯಾಸ ಕಂಡುಬರುತ್ತದೆ. ಶಾಸನಾಧಾರಗಳನ್ನು ಹೆಚ್ಚು ನಂಬಬಹುದಾಗಿದ್ದು ಕೈಫಿಯತ್ತಿನ ಉಲ್ಲೇಖಗಳು ಸಂದೇಹಕ್ಕೆ ಒಳಪಡುತ್ತವೆ. ಆದರೂ ಅವು ಸತ್ಯಕ್ಕೆ ಸಮೀಪವಾಗಿರುವುದರಿಂದ ಅವುಗಳೂ ಇತಿಹಾಸದ ಪ್ರಮುಖ ಆಕರ ಗ್ರಂಥಗಳಾಗಿವೆ.

ಸಂತೇಬೆನ್ನೂರು ನಾಯಕರ ಬಗ್ಗೆ ಈ ಕೆಳಕಂಡ ಕೈಫಿಯತ್ತಿನಲ್ಲಿ ನಮಗೆ ಮಾಹಿತಿ ದೊರೆಯುತ್ತದೆ.

೧. ಉತ್ಸಂಗಿ ವೆಂಟಿಕೆ ಸಲ್ಲುವ ಸಂತೆಬೆನ್ನುರು ಶೀಮೆ ಕೈಫಿಯತ್ತು
೨. ಹೊದಿಗೆರೆ ಶೀಮೆ ಕೈಫಿಯತ್ತು
೩. ಹೊಳೆಹೊನ್ನೂರು ಕೈಫಿಯತ್ತು
೪. ಹೈದರ್ ಕೈಫಿಯತ್ತು
೫. ಹಾರನಹಳ್ಳಿ ಕೈಫಿಯತ್ತು
೬. ಸೂಳೇಕೆರೆ ಶೀಮೆ ಕೈಫಿಯತ್ತು
೭. ಸಾಗರದ ಕೈಫಿಯತ್ತು
೮. ಯುಗಟೇ ಕೈಫಿಯತ್ತು
೯. ಮಲ್ಲೂರು ಸಾಸುವೆಹಳ್ಳಿ ಶೀಮೆ ಕೈಫಿಯತ್ತು
೧೦. ಕೈಫಿಯತ್ತು ತಾಲ್ಲೂಕು ಅಜಂಪುರ

೧೧. ಬೆಳಗುತ್ತಿ ಅರಸುಗಳ ವಂಶಾವಳಿ ವಿವರ ಕೈಫಿಯತ್ತು
೧೨. ತರೀಕೆರೆ ಕೈಫಿಯತ್ತು (ರಂಗಪ್ಪ ನಾಯಕರು ಬರೆಸಿದ್ದು)

ಸಂತೇಬೆನ್ನೂರು ನಾಯಕರ ಆಡಳಿತ

೧. ಮೂಲಪುರುಷ ಧೂಮರಾಜ : ಹನುಮನಾಯಕ (ಕ್ರಿ.ಶ. ೧೪೮೦-೧೫೦೦)

ಈ ವಂಶದ ಮೂಲ ಪುರುಷನ ಬಗ್ಗೆ ಭಿನ್ನಾಭಿಪ್ರಾಯವಿದ್ದು ಸರ್ಕಾರಿ ಗೆಜೆಟಿಯರುಗಳು, ವಿಶ್ವಕೋಶದಲ್ಲಿ ವಿಜಯನಗರದ ಪ್ರತಿನಿಧಿ ದೂಮರಾಜನೆಂದು ಹೇಳಲ್ಪಟ್ಟರೆ, ಈ ವಂಶದ ಕೈಫಿಯತ್ತಿನಲ್ಲಿ[1]ಈ ವಂಶದ ಮೂಲ ಪುರುಷ ರಾಮಕೋಟಿ ಹಣಮಪ್ಪ ನಾಯ್ಕರು ಎಂದೂ, ಈತನು ಹುಚ್ಚಂಗಿಯಿಂದ ಬಸವಾಪಟ್ಟಣಕ್ಕೆ ಬಂದು, ಪಾಳೆಯಪಟ್ಟು ಕಟ್ಟಿ ನೆಲೆಸಿದನೆಂದು ತಿಳಿಸಲಾಗಿದೆ. ಇನ್ನು ಕೆಲವು ದಾಖಲೆಗಳಲ್ಲಿ ಹನುಮಿನಾಯ್ಕನೆಂದು ಹೇಳಲಾಗಿದೆ. ಇವನು ಮೊದಲು ಈಗನ ಸಂತೇಬೆನ್ನೂರು ಸಮೀಪ ಇರುವ ಗೊಲ್ಲರ ಹಳ್ಳಿಗೆ ಬಂದು ನೆಲೆಸಿ ಅದರ ಹತ್ತಿರದ ಚಿಕ್ಕಕೋಗಲೂರು ಹನುಮಂತ ದೇವರನ್ನು ತನ್ನ ಕುಲದೈವವಾಗಿ ಮಾಡಿಕೊಂಡು ತನ್ನ ಕುಲದ ವೃತ್ತಿಯಾದ ಬೇಟೆ, ಶಿಕಾರಿ ಆಡುತ್ತಾ ನೆಲಸಿದನೆಂದು ತಿಳಿಸುತ್ತದೆ. ಬಹುಶಃ ಇವನ ಕಾಲ ೧೪೮೦-೧೫೫೦ ಎಂದು ತರೀಕೆರೆಯ ಪಾಳೇಗಾರರು[2]ಪುಸ್ತಕ ಬರೆದ ಪಿ.ಅಬ್ದುಲ್ ಸತ್ತಾರ್ ಅಭಿಪ್ರಾಯ ಪಡುತ್ತಾರೆ. ಮುಂದೆ ಈತ ಬಸವಾಪಟ್ಟಣದ ಬೇಡರ ಹೆಣ್ಣುಮಗಳನ್ನು ಮದುವೆಯಾಗಿ ಅಲ್ಲಿ ನೆಲೆನಿಂತ ಎನ್ನಲಾಗಿದೆ.

ನಮಗೆ ದೊರೆತ ಈ ನಾಯಕರ ಶಾಸನ ಕೂಡ್ಲಿ-೪೭ರಲ್ಲಿ[3]ಇಮ್ಮಡಿ ಸೀತಾರಾಮಪ್ಪ ನಾಯಕರ ಪುತ್ರ ಹನುಮಪ್ಪ ನಾಯಕ ಎಂದಿದ್ದು, ಈ ಶಾಸನದ ಕಾಲ ೧೫೫೮. ಈ ಶಾಸನದ ಹನುಮಪ್ಪ ನಾಯಕ, ಹನುಮಿ ನಾಯಕ ಒಬ್ಬನೇ ಎಂದಾದರೆ ಈತನ ತಂದೆ ಸೀತಾರಾಮಪ್ಪ ನಾಯಕ

ಯಾರು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದ್ದರಿಂದ ಮೂಲ ಪುರುಷ ಧೂಮರಾಜ ಅಥವಾ ಹನುಮಿ ನಾಯಕನ ಮಗ ಇಮ್ಮಡಿ ಸೀತಾರಾಮಪ್ಪ ನಾಯಕ ಒಬ್ಬನೇ ಇರಬೇಕು. ಅವನ ಮಗನೇ ಕೂಡ್ಲಿ-೪೭ರ ಶಾಸನದಲ್ಲಿ ಉಕ್ತವಾಗಿರುವ ಹನುಮಪ್ಪ ನಾಯಕನೆಂಬ ನಿರ್ಣಯಕ್ಕೆ ಬರಬೇಕಾಗುತ್ತದೆ. ಆದ್ದರಿಂದ ಈ ಧೂಮರಾಜ ಹನುಮಿನಾಯಕ ಕ್ರಿ.ಶ. ೧೪೮೦-೧೪೦೦ವರೆಗೂ ನಂತರ ಇಮ್ಮಡಿ ಸೀತಾರಾಮಪ್ಪ ನಾಯಕ ಕ್ರಿ.ಶ. ೧೫೦೦-೧೫೨೫ರವರೆಗೂ ಆಳಿರಬಹುದೆಂಬ ನಿರ್ಣಯಕ್ಕೆ ಬರಬಹುದು.

೨. ಮುಮ್ಮಡಿ ಹನುಮಪ್ಪ ನಾಯಕ (ಕ್ರಿ.ಶ. ೧೫೦೫-೧೫೫೦)

ಈತನ ಹೆಸರಿನಲ್ಲಿ ಚನ್ನಗಿರಿ ೩೫-೪೨[4] ಎರಡು ಶಾಸನಗಳು ದೊರೆತಿದ್ದು, ಈ ಶಾಸನದ ಕಾಲವನ್ನು ೧೬೨೫, ೧೬೦೧ ಎಂದು ರೈಸರು ಸೂಚಿಸಿದ್ದಾರೆ. ಬಹುಶಃ ಅದು ತಪ್ಪಾಗಿರಬೇಕು ಎನ್ನಿಸುತ್ತದೆ. ಈ ವಂಶದ ಕೈಫಿಯತ್ತುಗಳಲ್ಲಿ ಮುಮ್ಮಡಿ ಹನುಮಪ್ಪ ನಾಯಕನ ಹೆಸರಿಲ್ಲದಿರುವುದು ಅಚ್ಚರಿ ತರುತ್ತದೆ. ಚನ್ನಗಿರಿ ಶಾಸನ – ೨[5]ರಲ್ಲಿ ಉಲ್ಲೇಖವಾಗಿರುವ ನಿಂಗಾಭಟ್ಟರು ಚನ್ನಗಿರಿ-೪೨[6]ರಲ್ಲಿ ಉಲ್ಲೇಖವಾಗಿರುವ ಲಿಂಗಾಭಟ್ಟರು ಒಬ್ಬರೆಂದೇ ಕಾಣುತ್ತದೆ. ಈ ನಿರ್ಣಯದಂತೆ ಈ ಮುಮ್ಮಡಿ ಹನುಮಪ್ಪ ನಾಯಕ, ಕೆಂಗಪ್ಪ, ಬಿಲ್ಲಪ್ಪನಾಯಕರಿಗಿಂತ ಪೂರ್ವದಲ್ಲಿ ಆಳ್ವಿಕೆ ನಡೆಸುತ್ತಿದ್ದಿರಬೇಕು. ಕೂಡ್ಲಿ – ೪೭[7] ರ ಶಾಸನದಲ್ಲಿ ಉಕ್ತವಾಗಿರುವ ಹನುಮಪ್ಪ ನಾಯಕನೇ ಈ ಮುಮ್ಮಡಿ ಹನುಮಪ್ಪ ನಾಯಕನಾಗಿರುವ ಸಾಧ್ಯತೆಯೂ ಇದೆ. ಆದ್ದರಿಂದ ಈ ಶಾಸನಗಳನ್ನು ಕ್ರಿ.ಶ. ೧೫೦೫-೧೫೪೭ ಕಾಲದವು ಎಂದು ನಿರ್ಣಯಕ್ಕೆ ಬರಬಹುದಾಗಿದೆ. ಶಾಸನ-೪೨[8] ಹೊಸಳ್ಳಿ ಈಶ್ವರ ದೇವಸ್ಥಾನದ ಬಳಿ ಇದ್ದು ಸಿಂಹದ ಮಲ್ಲಭಟ್ಟರ ಮಕ್ಕಳು ನಿಂಗಣ್ಣ ಭಟ್ಟರಿಗೆ ಗದ್ದೆದಾನ ಕೊಟ್ಟ ವಿಚಾರ ತಿಳಿಸಿದರೆ, ಶಾಸನ – ೩೫[9] ವೆಂಕಟಯ್ಯಗೆ ಮಂಜಿರಗಟ್ಟ ಗದ್ದೆ ದಾನ ಕೊಟ್ಟ ಬಗ್ಗೆ ತಿಳಿಸುತ್ತದೆ.

೩. ಪಿಲ್ಲಪ್ಪ ನಾಯಕ (ಕ್ರಿ.ಶ. ೧೫೫೦-೧೬೬೫)

ಈತ ಹನುಮಿ ನಾಯಕನ ಮಗ. ಈತನ ಹೆಸರು ಚನ್ನಗಿರಿ ಶಾಸನ-೬೨[10]ರಲ್ಲಿ ಉಕ್ತವಾಗಿದೆ. ಶಾಸನದ ಕಾಲ ೧೫೬೩. ಈತನಿಗೆ ಬಿಲ್ಲಪ್ಪ, ಹುಚ್ಚಪ್ಪ ಎಂದೂ ಹೆಸರಿದ್ದುದಾಗಿ ತಿಳಿದುಬರುತ್ತದೆ. ಚನ್ನಗಿರಿ-೬೯[11]ರ ಶಾಸನದಲ್ಲಿ ವಿಜಯನಗರದ ವೀರಪ್ರತಾಪ ಶ್ರೀ ಸದಾಶಿವ ಮಹಾರಾಯರು ದುಮ್ಮಿ ಸೀಮೆಯನ್ನು ಮಲಕಲ್ಲೊಡೆಯರಿಗೆ ಅಮರ ಪಾಲಿಸಿದರು. ಆತನ ಠಾಣೆದಾರ ದಿಲಾವರನೆಂಬುದನು ಪ್ರಜೆಗಳಿಗೆ ಉಪಹತಿ ಮಾಡಲಾಗಿ ಸಂತೇಬೆನ್ನೂರ ಹನುಮಿನಾಯಕರ ಮಕ್ಕಳು ಪಿಲ್ಲಪ್ಪನಾಯ್ಕನನ್ನು ಕಳುಹಿಸಿ ದಿಲಾವರನನ್ನು ನಿಗ್ರಹಿಸಿದ್ದಕ್ಕೆ ಸಂತೇಬೆನ್ನೂರು ಪಿಲ್ಲಪ್ಪ ನಾಯ್ಕರಿಗೆ ದುಮ್ಮಿ ಸೀಮೆಯನ್ನು ಪಾಲಿಸಲು ಕೊಟ್ಟಿದ್ದಾಗಿಯೂ, ಈ ಸಂದರ್ಭದಲ್ಲಿ ಇವರಿಗೆ ಸಹಾಯ ಮಾಡಿದ ಚಿಕ್ಕಗಂಗೂರ ಗೌಡಯ್ಯನ ತಲೆಯನ್ನು ದಿಲಾವರ ತೆಗೆದ ಕಾರಣ ಅವನ ಮಕ್ಕಳಿಗೆ ನೆತ್ತರುಡುಗೆಯಾಗಿ ಚಿಕ್ಕಗಂಗೂರಿನಲ್ಲಿ ಎರೆಹೊಲ ಕೊಟ್ಟಿದ್ದಾಗಿಯೂ ತಿಳಿದುಬರುತ್ತದೆ. ಈ ಶಾಸನದಲ್ಲಿ ಆಗಲೇ ಸಂತೇಬೆನ್ನೂರ ಹನುಮಿ ನಾಯಕರೆಂದು ಪ್ರಯೋಗವಾಗಿರುವುದರಿಂದ ಆ ವೇಳೆಗಾಗಲೇ ಈ ನಾಯಕರು ಬಸವಾಪಟ್ಟಣದಿಂದ ಸಂತೇಬೆನ್ನೂರಿಗೆ ಬಂದು ನೆಲಸಿರಬೇಕು. ಆಗಲೇ ಸಂತೇಬೆನ್ನೂರು ಪಾಳ್ಯ ಅಸ್ತಿತ್ವದಲ್ಲಿರಬೇಕೆಂದು ಊಹಿಸಬಹುದಾಗಿದೆ. ಈ ಪಿಲ್ಲಪ್ಪ ನಾಯಕ ಕ್ರಿ.ಶ. ೧೫೫೦-೧೫೬೫ ರವರೆಗೂ ಆಳ್ವಿಕೆ ನಡೆಸಿರಬೇಕೆಂದು ತೋರುತ್ತದೆ. ಚನ್ನಗಿರಿ-೬೨[12]ಶಾಸನದಂತೆ ವಿಜಯನಗರದ ವೀರ ರಾಮ ದೇವರಾಯರ ಕಾರ್ಯಕರ್ತರಾಗಿದ್ದ ಸಂತೇಬೆನ್ನೂರು ಬಿಲ್ಲಪ್ಪನಾಯಕರು, ಕೆಂಗಪ್ಪನಾಯಕರು ಶ್ರೀವತ್ಸ ಗೋತ್ರದ ಲಿಂಗಣ್ಣಗೆ ಸಂತೇಬೆನ್ನೂರು ಶ್ರೀಮಸ್ಥಳದ ಸೇನಭೋವಿಕೆ, ಜೋತಿಷ್ಯ, ಪುರೋಹಿತ್ಯಕ್ಕೆ ಶಾಸನ ಬರೆಯಿಸಿ ಕೊಟ್ಟಿದ್ದಾರೆ. ಇದರಲ್ಲಿ ಉಕ್ತವಾಗಿರುವ ಬಿಲ್ಲಪ್ಪ ಹಾಗೂ ಶಾಸನ-೬೯ರ[13]ಪಿಲ್ಲಪ್ಪ ಒಬ್ಬನೇ ಆಗಿರಬೇಕು.

ಬಿಲ್ಲಪ್ಪ ಮತ್ತು ಕೆಂಗಪ್ಪ ಇಬ್ಬರೂ ಹನುಮಿ ನಾಯಕರ ಮಕ್ಕಳಾಗಿದ್ದು ಬಹುಶಃ ಒಟ್ಟಿಗೆ ರಾಜ್ಯಪಾಲನೆ ಮಾಡುತ್ತಿರಬೇಕು. ಹೀಗಾಗಿ ಇಬ್ಬರೂ ಸೇರಿ ಈ ಶಾಸನ ಬರೆಯಿಸಿ ಕೊಟ್ಟಿದ್ದಾರೆ.

೪. ಕೆಂಗಪ್ಪ ನಾಯಕ –I (ಕ್ರಿ.ಶ. ೧೫೫೮-೧೫೬೭)

ಈತನು ಪಿಲ್ಲಪ್ಪನ ಸಹೋದರ. ಚನ್ನಗಿರಿ-೬೭[14] ಶಾಸನದಲ್ಲಿ ಕೆಂಗಪ್ಪ ನಾಯಕನೋರ್ವನ ಹೆಸರು ಮಾತ್ರ ಉಲ್ಲೇಖವಾಗಿದೆ. ಬಹುಶಃ ಅಷ್ಟರಲ್ಲಿ ಪಿಲ್ಲಪ್ಪ ನಿಧನರಾಗಿರಬೇಕು. ಅವನ ಮರಣಾನಂತರ ಈತನೊಬ್ಬನೇ ಈ ಪಾಳೇಪಟ್ಟು ನಡೆಸಿರಬೇಕು. ಗೊಪ್ಪೇನಹಳ್ಳಿ ಆಂಜನೇಯ ದೇವಸ್ಥಾನದ ಪ್ರಾಕಾರದಲ್ಲಿರುವ ಈ ಶಾಸನದಂತೆ ಡೊಂಬರ ಕೆಂಗಪ್ಪಗೆ ಕೆಂಗಪ್ಪ ನಾಯಕ ಕೊಟ್ಟ ಊರು ಭೂಮಿ ಎಂದಿದೆ. ಈ ಶಾಸನ ಕಾಲ ರೈಸರು ಸೂಚಿಸಿದಂತೆ ಕ್ರಿ.ಶ. ೧೫೬೫. ಉತ್ಸಂಗಿ ವೆಂಟಕೆ ಸಲ್ಲುವ ಸಂತೇಬೆನ್ನೂರು ಕೈಫಿಯತ್ತಿ[15] ನಂತೆ ಕೆಂಗಪ್ಪ ಶಾಲಿವಾಹನ ಶಕ ೧೪೮೦ನೇ ಕಾಳಾಯುಕ್ತಿ ಸಂವತ್ಸರಿಂದ ಶಾ,ಶಕ ೧೪೮೯ನೇ ಪ್ರಭವ ಸಂವತ್ಸರದವರೆಗೆ ೯ ವರ್ಷ ಆಳ್ವಿಕೆ ನಡೆಸಿದ್ದಾನೆ. (ಕ್ರಿ.ಶ. ೧೫೫೮-೧೫೬೭) ಕೈಫಿಯತ್ತಿನಂತೆ ಕೆಂಗಪ್ಪ ನಾಯಕ ಒಮ್ಮೆ ಬೇಟೆ ನಿಮಿತ್ತ ಮದಕರಿ ಸೀಮೆಯ ವಳಿತವಾದ ರಂಗಾಪುರ ಗ್ರಾಮದ ಬಳಿ ಬರಲು ಆ ಸ್ಥಳದಲ್ಲಿ ಮೊಲವು ಬೇಟೆ ನಾಯಿಯ ವಿರುದ್ಧವೇ ತಿರುಗಿ ಬಿದ್ದುದನ್ನು ಕಂಡು, ಆ ಭೂಮಿ ಗಂಡುಭೂಮಿ ಎಂದು ಸ್ಥಳ ಗುರುತು ಮಾಡಿ ವಿಶ್ರಮಿಸಿಕೊಂಡಿರಲು ಆತನ ಸ್ವಪ್ನದಲ್ಲಿ ವೃಷಭೇಶ್ವರರು ಕಾಣಿಸಿಕೊಂಡು ಆ ಸ್ಥಳದಲ್ಲಿ ಕೋಟೆ ಕಟ್ಟಿ, ರಾಜ್ಯ ಸ್ಥಾಪಿಸಲು ಸೂಚಿಸಿದ್ದಲ್ಲದೆ ಅದಕ್ಕೆ ಬೇಕಾದ ಗುಪ್ತ ನಿಧಿಯನ್ನು ತೋರಿಸಿಕೊಟ್ಟದ್ದಾಗಿಯೂ, ಆ ಸ್ವಪ್ನ ಸೂಚನೆಯಂತೆ ನಿಧಿ ಪಡೆದು ಈಗಿರುವ ಸಂತೇಬೆನ್ನೂರು ಸ್ಥಳದಲ್ಲಿ ಕೋಟೆ, ಶ್ರೀರಾಮಚಂದ್ರ ದೇವಸ್ಥಾನ ಮತ್ತು ರಾಮತೀರ್ಥ ಎಂಬ ಸರೋವರವನ್ನು ಶಾಲಿವಾಹನ ಶಕ ೧೪೮೦ನೇ ಕಾಳಾಯುಕ್ತಿ ಸಂವತ್ಸರದಲ್ಲಿ ಕೆಂಗಪ್ಪನಾಯಕ ಕಟ್ಟಿಸಿದನೆಂದು ತಿಳಿದು ಬರುತ್ತದೆ. [16]

ಸಂತೇಬೆನ್ನೂರಲ್ಲಿ ಇವನು ಕಟ್ಟಿಸಿದ ಕೊಳ ೨೩೫x೨೪೫ ಅಗಲ ಧ್ವಜಾಯದಲ್ಲಿದ್ದು, ನಾಲ್ಕು ದಿಕ್ಕಿಗೂ ಸೋಪಾನಗಳೂ, ಎಂಟು ದಿಕ್ಕಿಗೆ ಎಂಟು ಮಂಟಪಗಳೂ, ಮಧ್ಯೆ ವಸಂತ ಮಂಟಪ, (೩೦'x೩೦ '೬೦') ಕೆಂಪು ಗ್ರಾನೈಟ್ನಲ್ಲಿ ಕಟ್ಟಿದ್ದು, ಇದಕ್ಕೆ ಕೊಷ್ಮಾಂಡು ಶೈಲಿಯ ಗೋಪುರ ನಿರ್ಮಿಸಿದ್ದಾನೆ. ಇದು ದಕ್ಷಿಣ ಭಾರತದಲ್ಲೇ ಬಹು ಸುಂದರವಾಗಿದ್ದು ಇದಕ್ಕೆ ಸರಿಸಾಟಿ ಬೇರೊಂದಿಲ್ಲ ಎಂದು ಸಂಶೋಧಕ ಡಾ. ಎಂ.ಚಿದಾನಂದಮೂರ್ತಿ ಅಭಿಪ್ರಾಯಪಟ್ಟಿದ್ದಾರೆ. [17] ಇದಲ್ಲದೆ ಚಿಕ್ಕ ಕೋಗಲೂರಿನ ದೇವಸ್ಥಾನವನ್ನು, ದೇವರಹಳ್ಳಿಯ ಉಡುಗಿರಿ ಶ್ರೀ ಲಕ್ಷ್ಮೀ ರಂಗನಾಥಸ್ವಾಮಿ ದೇವಸ್ಥಾನವನ್ನು ವಿಸ್ತಾರವಾಗಿ ಕಟ್ಟಿಸಿ ಜೀರ್ಣೋದ್ಧಾರ ಈತ ಮಾಡಿದ್ದಾಗಿ ತಿಳಿದು ಬರುತ್ತದೆ. ಇಲ್ಲಿ ಉಕ್ತವಾದ ರಂಗಾಪುರಕ್ಕೆ ಮೊದಲು ಬೆಂನೂರು ಎಂದು ಹೆಸರಿತ್ತೆಂದೂ ಮುಂದೆ ಅಲ್ಲಿ ನಡೆಯುತ್ತಿದ್ದ ಸಂತೆಯಿಂದಾಗಿ ಸಂತೇಬೆನ್ನೂರು ಆಯಿತೆಂದು ಗೆಜೆಟಿಯರ್‌ನಲ್ಲಿ[18] ಹೇಳಲಾಗಿದೆ. ಈ ಕೆಂಗಪ್ಪ ನಾಯಕನ ಪೂರ್ವದಲ್ಲಿ ಕೂಡ್ಲಿ-೪೭[19] ಶಾಸನ ಮತ್ತು ಚನ್ನಗಿರಿ-೬೯[20] ಶಾಸನದಲ್ಲಿ ಸಂತೇಬೆನ್ನೂರು ಹೆಸರು ಪ್ರಸ್ತಾಪವಾಗಿರುವುದರಿಂದ ಕೈಫಿಯತ್ತಿನ ಉಲ್ಲೇಖದಂತೆ ಸಂತೇಬೆನ್ನೂರು ನಿರ್ಮಾಣದ ಕಥೆಯನ್ನು ನಂಬುವುದು ಕಷ್ಟವಾಗುತ್ತದೆ. ಒಟ್ಟಿನಲ್ಲಿ ಈ ಕೆಂಗಪ್ಪನಾಯಕ ಬಹಳ ವೀರನಿದ್ದುದಾಗಿ ತಿಳಿದು ಬಂದಿದ್ದು ಈತನು ವಿಜಯನಗರದ ಅರಸರ ಅನೇಕ ಯುದ್ಧದಲ್ಲಿ ಭಾಗಿಯಾಗಿದ್ದನೆಂದು ತಿಳಿದುಬರುತ್ತದೆ. ಕ್ರಿ.ಶ. ೧೫೬೫ರ ತಾಳೀಕೋಟೆ ಯುದ್ಧದಲ್ಲಿ ಅವರಿಗೆ ಸಹಾಯಕರಾಗಿ ಹೋರಾಟ ಮಾಡಿದ್ದಕ್ಕಾಗಿ ಈ ನಾಯಕರಿಗೆ ಕೃಷ್ಣದೇವರಾಯನ ಅಳಿಯ ರಾಮರಾಯರಿಂದ ಸಂತೇಬೆನ್ನೂರು ಅಮರ ಮಾಗಣಿಯಾಗಿ ಕೊಡಲ್ಪಟ್ಟಿತೆಂದು ಇತಿಹಾಸ ದಾಖಲೆಗಳು ತಿಳಿಸುತ್ತವೆ. ಕೆಂಗಪ್ಪ ನಾಯಕ ಸಂತೇಬೆನ್ನೂರು ಕೊಳ, ಕೋಟೆ, ದೇವಸ್ಥಾನ ನಿರ್ಮಾಣ ಮಾಡಿದ ಎಂಬ ಬಗ್ಗೆ ಅನುಮಾನಗಳಿಲ್ಲ. ಕೊಳದ ಮಂಟಪಗಳಲ್ಲಿರುವ ನಾಯಕನ ಉಬ್ಬುಶಿಲ್ಪ ಅದನ್ನು ಕಟ್ಟಿಸಿದ ಕೆಂಗಪ್ಪ ನಾಯಕನದಿರಬೇಕೆಂದು ಸಂಶಧಕ ಕೆಳದಿ ವೆಂಕಟೇಶ ಜೋಯಿಸ್ ಅಭಿಪ್ರಾಯ ಪಟ್ಟಿದ್ದಾರೆ.

೫. ಇಮ್ಮಡಿ ಕೆಂಗಾ ಹನುಮಪ್ಪ ನಾಯಕ (ಕ್ರಿ.ಶ. ೧೫೬೭-೧೫೭೦)

ಈತ ಕೆಂಗಪ್ಪ ನಾಯಕನ ಮಗ. ಸಂತೇಬೆನ್ನೂರು ಕೈಫಿಯತ್ತಿನಂತೆ[21] ಈತ ಹಿರೇಕೋಗಲೂರು, ಸಂತೇಬೆನ್ನೂರು, ಮೆದಿಕೆರೆ, ತಣಿಗೆರೆ, ಸಿದ್ದನಮಠ ಗ್ರಾಮಗಳಲ್ಲಿ ಕೆರೆಗಳನ್ನು ಕಟ್ಟಿಸಿ ಶಾಲಿವಾಹನ ಶಕ ೧೪೯೨ನೇ ಪ್ರಮೋದೂತ ಸಂವತ್ಸರದವರೆಗೆ (೧೫೭೦) ೩ ವರ್ಷ ಧರ್ಮದಿಂದ ರಾಜ್ಯವಾಳಿದ ಹಾಫೆ ತಿಳಿದುಬರುತ್ತದೆ. ಈಗಿನ ದಾವಣಗೆರೆ ತಾಲ್ಲೂಕು ವಡೇರಹಳ್ಳ ಗ್ರಾಮದ ಕಲ್ಲೇಶ್ವರ ದೇವಾಲಯದ ಗೋಡೆಗೆ ಈತನ ಕಾರ್ಯಕರ್ತ ಆಡುಗೆರೆ ಮಲ್ಲಣ್ಣ ಹಾಕಿಸಿದ ಶಾಸನವಿದೆ.[22]

೬. ನಿಚ್ಚ ಮದುಮಣಿಗ ಕೆಂಗಾ ಹನುಮಪ್ಪ ನಾಯಕ (ಕ್ರಿ.ಶ. ೧೫೭೦-೧೫೮೦)

ಈತ ಇಮ್ಮಡಿ ಕೆಂಗಾ ಹನುಮಪ್ಪ ನಾಯಕನ ಮಗ. ಕೈಫಿಯತ್ತಿ[23] ನಂತೆ ಈತ ಶಾ.ಶಕ. ೧೫೦೨ ರ ವಿಕ್ರಮ ಸಂವತ್ಸರದವರೆಗೆ ೧೦ ವರ್ಷ ಆಳಿದನು. (೧೫೭೦-೧೫೮೦) ಈತನು ತನ್ನ ಆಳ್ವಿಕೆ ಕಾಲದಲ್ಲಿ ಬೆಳ್ಳಿಗನೂಡು, ಮತ್ತು ಕುಳೇನೂರು ಗ್ರಾಮದ ಕೆರೆಯನ್ನು ಕಟ್ಟಿಸಿದನು.[24] ಇವನು ಬಹಳ ರೂಪವಂತನಿದ್ದನೆಂದೂ, ಬಹಳ ಮದುವೆ ಮಾಡಿ ಕೊಂಡಿದ್ದನೆಂದೂ ಹೇಳಲಾಗುತ್ತದೆ. ಆದಕಾರಣ ಈತನಿಗೆ ನಿಚ್ಚ ಮದುವಣಿಗ ಎಂಬ ಅನ್ವರ್ಥನಾಮ ಬಂದಿರಬೇಕು. ಈತನು ತನ್ನ ರಾಜ್ಯ ವಿಸ್ತಾರಕ್ಕಾಗಿ ಚಿತ್ರದುರ್ಗದವರೊಂದಿಗೆ ಯುದ್ಧ ಮಾಡಿದ್ದಾಗಿ ತಿಳಿದು ಬರುತ್ತದೆ. ಈ ನಿಚ್ಚ ಮದುಮವಣಿಗ ಕೆಂಗಾ ಹನುಮಪ್ಪ ನಾಯಕನು ಕ್ರಿ.ಶ. ೧೬೪೭ರಲ್ಲಿ ಉಡುಪಿ ಸ್ವಾದಿಮಠದ ಸ್ವಾಮಿಗಳಿಗೆ ಕೂಡ್ಲಿಯಲ್ಲಿ ಮಠ ಕಟ್ಟಿಕೊಂಡು ಇರಲು ಕೋಡಮಗ್ಗೆ ಗ್ರಾಮದತ್ತಿ ಕೊಟ್ಟದ್ದಾಗಿ ಬೆಂಗಳೂರು -೧೨[25]ಶಾಸನ ತಿಳಿಸುತ್ತದೆ. ಈ ಶಾಸನದ ಕಾಲಕ್ಕೂ, ಕೈಫಿಯತ್ತಿನಲ್ಲಿ ನಮೂದಾದ ಈತನ ಕಾಲಕ್ಕೂ ವ್ಯತ್ಯಾಸ ಕಂಡುಬರುತ್ತದೆ. ಈತ ಬೆಳಗುತ್ತಿ ಅರಸರನ್ನು ಸೋಲಿಸಿದ್ದಾಗಿ ತಿಳಿದುಬರುತ್ತದೆ.

೭. ರಾಜಪ್ಪ ನಾಯಕ, ಬಾಲಗಿರಿ ನಾಯಕ, ದಳನಾಯಕ (ಕ್ರಿ.ಶ. ೧೫೭೦-೧೬೧೦)

ಈ ಮೂವರ ಹೆಸರಿನಲ್ಲಿ ಹೊಳಲ್ಕೆರೆ-೧೧೫, ೪೦,೯೨[26]ಶಾಸನಗಳಿವೆ. ಬಾಲಗಿರಿ ನಾಯಕರ ಹೆಸರು ತರಿಕೆರೆ-೨೧, ೨೪[27]ಶಾಸನಗಳಲ್ಲಿ ಬಂದಿದ್ದು ಅದರಲ್ಲಿ ಸಂತೇಬೆನ್ನೂರು ಕೆಂಗಪ್ಪ ನಾಯಕರ ಪುತ್ರರಾದ ಹಿರೇಹನುಮಪ್ಪ ನಾಯಕರ ಸಹೋದರರಾದ ಬಾಲಗಿರಿ ನಾಯಕರು ಎಂದು ಉಕ್ತವಾಗಿದೆ. ಆದರೆ ರಾಜಪ್ಪ ನಾಯಕ, ದಳ ನಾಯಕರ ಹೆಸರು ಅವರ ವಂಶದ ಕೈಫಿಯತ್ತುಗಳಲ್ಲಿ ಪ್ರಸ್ತಾಪವಾಗಿಲ್ಲ. ಮೇಲೆ ಸೂಚಿಸಿದ ಶಾಸನಗಳ ಕಾಲದಂತೆ ಇವರು ಸಮಕಾಲೀನರಾಗಿದ್ದು ಮೂವರು ಸಹೋದರರಾಗಿರಬೇಕೆಂದು ತೋರುತ್ತದೆ. ಇವರು ಸಂತೇಬೆನ್ನೂರು ಶೀಮೆಗೆ ಒಳಪಟ್ಟ ಸಣ್ಣ ಸಣ್ಣ ಪ್ರಾಂತ್ಯದ ಅಧಿಪತಿಗಳಾಗಿದ್ದು, ಕಾರ್ಯನಿರ್ವಹಿಸಿ ಶಾಸನ ಬರೆಯಿಸಿರಬೇಕು. ಹನುಮಪ್ಪ ನಾಯಕರ ಮಗ ರಾಜಪ್ಪ ಬಾಗೂರು ಲಕ್ಷ್ಮೀದೇವಿ ದೇವಸ್ಥಾನ ಜೀರ್ಣೋದ್ಧಾರ ಕ್ರಿ.ಶ. ೧೫೭೧ರಲ್ಲಿ ಮಾಡಿಸಿದ್ದಾಗಿ ತಿಳಿದು ಬಂದರೆ, ಹೊರಕರೆ ರಂಗನಾಥ ಸ್ವಾಮಿಗೆ ಬಾಲಗಿರಿ/ಬಾಲನಾಯಕ ದತ್ತಿ ಕೊಟ್ಟಿದ್ದಾಗಿಯೂ, ದಳ ನಾಯಕ ಕಲ್ಲೋಡು ಹನುಮಂತ ದೇವರಿಗೆ ಕುರುಬರಹಳ್ಳಿ ಗ್ರಾಮವನ್ನು ೧೬೦೫ರಲ್ಲಿ ದತ್ತಿ ಕೊಟ್ಟಿದ್ದಾಗಿ ಶಾಸನಗಳು[28]ತಿಳಿಸುತ್ತವೆ. ಆದ್ದರಿಂದ ಇವರ ಕಾಲವನ್ನು ಕ್ರಿ.ಶ. ೧೫೭೦ರಿಂದ ೧೬೧೦ ಎಂದು ನಿರ್ಣಯಿಸಬಹುದಾಗಿದೆ. ಇವರು ಹೊಳಲ್ಕೆರೆ, ಹೊಸದುರ್ಗ ಪ್ರಾಂತ್ಯ ಆಳುತ್ತಿದ್ದುದಾಗಿ ತಿಳಿದುಬರುತ್ತದೆ. ಇವರು ಕೆಂಗಾ ನಿಚ್ಚಮದುಮಣಿಗ, ಕೆಂಗಾ ಹನುಮಪ್ಪ ನಾಯಕರ ಸಹೋರರಾಗಿರುವ ಸಾಧ್ಯತೆಯೂ ಇದೆ.

೮. ಹಿರೇ ಕೆಂಗಾ ಹನುಮಪ್ಪ ನಾಯಕ (ಕ್ರಿ.ಶ. ೧೫೮೧-೧೬೩೮)

ನಿಚ್ಚ ಮದುಮಣಿಗ ಹನುಮಪ್ಪ ನಾಯಕರಿಗೆ ಹಿರೇ ಕೆಂಗಾ ಹನುಮಪ್ಪ ನಾಯಕ ಮತ್ತು ಚಿಕ್ಕ ಕೆಂಗಾ ಹನುಮಪ್ಪ ನಾಯಕ ಎಂಬ ಇಬ್ಬರು ಮಕ್ಕಳು. ತಂದೆಯ ನಿಧನದ ತರುವಾಯ ಹಿರೇ ಕೆಂಗಾ ಹನುಮಪ್ಪ ನಾಯಕ ರಾಜ್ಯದ ಆಡಳಿತ ವಹಿಸಿಕೊಳ್ಳುತ್ತಾನೆ. ಒಂದು ವರ್ಷ ಈರ್ವರೂ ಒಟ್ಟಿಗೆ ರಾಜ್ಯಾಡಳಿತ ನಡೆಸುತ್ತಾ ಇರಲಾಗಿ ಅಣ್ಣ ತಮ್ಮಂದಿರಿಗೆ ಮನಸ್ತಾಪ ಬಂದು ಚಿಕ್ಕ ಕೆಂಗಾಹನುಮಪ್ಪ ನಾಯಕ ಬಾಣಾವರಕ್ಕೆ ಹೋಗಿ ಅಲ್ಲಿ ತಾನೇ ಪ್ರತ್ಯೇಕ ಪಾಳೆಪಟ್ಟು ಕಟ್ಟಿಕೊಂಡು ಇರುತ್ತಾನೆ. ಹಿರೇ ಕೆಂಗಾ ಹನುಮಪ್ಪ ನಾಯಕ ಶಾಲಿವಾಹನ ಶಕ ೧೫೦೩ನೇ ವಿಶು ಸಂವತ್ಸರದಿಂದ ಶಾ.ಶಕ ೧೫೬೦ನೇ ಬಹುಧಾನ್ಯ ಸಂವತ್ಸರದವರೆಗೆ (ಕ್ರಿ.ಶ. ೧೫೮೧-೧೬೩೮) ಬಸವಾಪಟ್ಟಣ, ಸಂತೇಬೆನ್ನೂರು ಎರಡೂ ಪ್ರಾಂತ್ಯಗಳನ್ನು ಒಟ್ಟಿಗೆ ಆಳುತ್ತಾ ಇರುವ ಕಾಲದಲ್ಲಿ ಭಾಗನಗರದ (ಬಿಜಾಪುರದ) ದಂಡನಾಯಕ ರಣದುಲ್ಲಾಖಾನ್ ಭಾರೀ ದಂಡು ತೆಗೆದುಕೊಂಡು ಬಂದು ಸಂತೇಬೆನ್ನೂರು, ಬಸವಾಪಟ್ಟಣ ಕೋಟೆಗಳನ್ನು ತನ್ನ ವಶಕ್ಕೆ ತೆಗೆದುಕೊಂಡಿದ್ದಲ್ಲದೆ, ಸಂತೇಬೆನ್ನೂರು ನಾಯಕರ ಕುಲದೇವರಾದ ರಾಮಚಂದ್ರ ದೇವಸ್ಥಾನ, ಕಲ್ಲೇಶ್ವರ ದೇವಸ್ಥಾನವನ್ನು, ಹಿರೇಕೋಗಲೂರಿನ ಸುಖನೇಶ್ವರ, ಕಲ್ಲೇಶ್ವರ, ಮಲ್ಲೇಶ್ವರ ದೇವಸ್ಥಾನಗಳನ್ನು, ಸಿದ್ದನ ಮಠದ ರಾಮೇಶ್ವರ ದೇವಸ್ಥಾನ ತಣಿಗೆರೆಯ ಕಲ್ಲೇಶ್ವರ ದೇವಸ್ಥಾನವನ್ನು ಮುರಿದುದಲ್ಲದೆ ದೇವರಹಳ್ಳಿ ಉಡುಗಿರಿ ಲಕ್ಷ್ಮೀ ರಂಗನಾಥ ಸ್ವಾಮಿ ದೇವಸ್ಥಾನವನ್ನು ನಾಶ ಪಡಿಸಲು ಹೋದಾಗ ಜೇನು ಎದ್ದು ಹಿಮ್ಮೆಟ್ಟಬೇಕಾಯಿತೆಂದೂ, ನಂತರ ಸಂತೇಬೆನ್ನೂರಲ್ಲಿದ್ದ ೬೪ ಅಂಕಣದ ದೇವಸ್ಥಾನ ಇದ್ದ ಜಾಗದಲ್ಲಿ ಒಂದು ಮಸೀದಿ ಕಟ್ಟಿಸಲು ಜನರನ್ನು ನೇಮಿಸಿ, ಹಿರೇಕೆಂಗಾ ಹನುಮಪ್ಪ ನಾಯಕನನ್ನು ದಸ್ತಗಿರಿ ಮಾಡಿಕೊಂಡು ಬಿಜಾಪುರಕ್ಕೆ ಕರೆದುಕೊಂಡು ಹೋದನು.[29]ಹೀಗೆ ಸಂತೇಬೆನ್ನೂರು ಬಿಜಾಪುರ ಸುಲ್ತಾನರ ಆಡಳಿತಕ್ಕೆ ಒಳಪಟ್ಟಿತು. ದಾವಣಗೆರೆ-೧೪೪[30]ಶಾಸನ ಸಂತೇಬೆನ್ನೂರು ಹನುಮಪ್ಪ ನಾಯಕರ ಕಾರ್ಯಕರ್ತ ಮಾಯಕೊಂಡದ ಮೀಯಪ್ಪನಾಯಕ ವೀರೇಶ್ವರಗೆ ಅಮೃತಪಡಿಗೆ ಬುಳ್ಳಾಪುರ ಗ್ರಾಮ ದತ್ತಿ ಕೊಟ್ಟಿರುವುದಾಗಿ ತಿಳಿಸುತ್ತದೆ. ಚನ್ನಗಿರಿ-೨೫, ೪೮, ೪೯, ೬೩[31]ಹಾಗೂ ಕಡೂರು. ೨೪[32] ಚಿಕ್ಕನಾಯ್ಕನಹಳ್ಳಿ-೧೯[33] ಶಾಸನ ಈತನ ಕಾಲದ್ದಾಗಿರುವಂತೆ ಕಂಡು ಬರುತ್ತದೆ. ಚಿಕ್ಕನಾಯ್ಕನಹಳ್ಳಿ-೧೯ ಶಾಸನ ನಾಯಕರು ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಆಡಳಿತ ನಿರ್ವಹಿಸುತ್ತಿದ್ದ ಹೆಗ್ಗುರುತಾಗಿದ್ದು ಇದರಲ್ಲಿ ಈತನ ಪ್ರಧಾನಿ ಕಳಸಪ್ಪಯ್ಯನ ಹೆಸರು ನಮೂದಾಗಿರುವುದು ವಿಶೇಷ.

೯. ಚಿಕ್ಕ ಕೆಂಗಾ ಹನುಮಪ್ಪ ನಾಯಕ/ಸರ್ಜಾ ಹನುಮಪ್ಪ ನಾಯಕ (ಕ್ರಿ.ಶ. ೧೬೫೬-೧೬೬೨)

ಹಿರೇ ಕೆಂಗಾ ಹನುಮಪ್ಪ ನಾಯಕನ ತಮ್ಮ ಚಿಕ್ಕ ಕೆಂಗಾ ಹನುಮಪ್ಪ ನಾಯಕನು ತನ್ನ ಅಣ್ಣ ಹಿರೇ ಕೆಂಗಾ ಹನುಮಪ್ಪ ನಾಯಕನನ್ನು ರಣದುಲ್ಲಾಖಾನ್ ಬಿಜಾಪುರಕ್ಕೆ ಕರೆದುಕೊಂಡು ಹೋಗುವ ಸಮಯದಲ್ಲಿ ಬಾಣಾವರದಲ್ಲಿದ್ದನು. ತನ್ನ ಅಣ್ಣನನ್ನು ಬಿಜಾಪುರಕ್ಕೆ ಕರೆದುಕೊಂಡು ಹೋದ ವಿಚಾರ ತಿಳಿದು ಆತನೇ ಸ್ವತಃ ಬಿಜಾಪುರಕ್ಕೆ ಹೋಗಿ ಸಮಯ ಸಾಧಿಸಿ ಅಲ್ಲಿ ಸುಲ್ತಾನನು ಏರ್ಪಡಿಸಿದ್ದ ಹುಲಿಯ ಕಾಳಗದಲ್ಲಿ ಭಾಗವಹಿಸಿ, ಹುಲಿಯೊಡನೆ ಹೋರಾಡಿ, ಅದನ್ನು ಕೊಂದು ಬಾದ್ಷಹನ ಮೆಚ್ಚುಗೆ ಗಳಿಸಿದನು. ಅಲ್ಲದೆ ಚಿಕ್ಕ ಕೆಂಗಾ ಹನುಮಪ್ಪ ನಾಯಕನಿಗೆ ಬಿಜಾಪುರ ಸುಲ್ತಾನನು 'ಸರ್ಜಾ' ಎಂಬ ಕಿತ್ತಾಬುಕೊಟ್ಟು[34]ಹಸಿರು ಪಲ್ಲಕ್ಕಿ, ಹಸಿರು ಶಾಲು, ಹಗಲು ದೀವಟಿಗೆ ಕೊಟ್ಟು ಸನ್ಮಾನಿಸಿದ್ದಲ್ಲದೆ ಸಂತೇಬೆನ್ನೂರು ಮತ್ತು ಬಸವಾಪಟ್ಟಣ ಪ್ರಾಂತ್ಯದ ಆಡಳಿತವನ್ನು ಮರಳಿ ಈ ನಾಯಕರಿಗೆ ಬಿಟ್ಟುಕೊಟ್ಟನು. ಅಲ್ಲದೆ ತನ್ನ ಸೆರೆಯಲ್ಲಿದ್ದ ಹಿರೇ ಕೆಂಗಾ ಹನುಮಪ್ಪ ನಾಯಕನನ್ನು ಬಿಡಿಸಿ ಕಳುಹಿಸಿದನು. ಹೀಗೇ ತನ್ನ ಅಣ್ಣನನ್ನು ಬಿಜಾಪುರದಿಂದ ಬಿಡಿಸಿಕೊಂಡು ಬಂದ ಚಿಕ್ಕ ಕೆಂಗಾ ಹನುಮಪ್ಪ ನಾಯಕ ಸಂತೇಬೆನ್ನೂರಿಗೆ ಬಂದಾಗ ದೇವಸ್ಥಾನ ಇದ್ದ ಜಾಗದಲ್ಲಿ ಮಸೀದಿ ನಿರ್ಮಾಣ ಮಾಡಿರುವುದನ್ನು ಕಂಡು ಕೋಪೋದ್ರಿಕ್ತನಾಗಿ ಮಸೀದಿಯಲ್ಲಿ ಹಂದಿಯನ್ನು ಕೊಲ್ಲಿಸಿ,[35]ನಿರ್ಮಾಣ ಮಾಡಿದ್ದ ಮಿನಾರುಗಳನ್ನು, ಅಂಕಣಕ್ಕೆ ಒಂದೊಂದು ಕಲ್ಲನ್ನು

ಕೀಳಿಸಿ ಮಸೀದಿಯಲ್ಲಿ ಪ್ರಾರ್ಥನೆ ಮಾಡದಂತೆ ಅಪವಿತ್ರಗೊಳಿಸಿದನು. ಇದರಿಂದ ಚಿಕ್ಕ ಕೆಂಗಾ ಹನುಮಪ್ಪ ನಾಯಕನಿಗೆ ಪುಂಡ ಹನುಮಪ್ಪ ನಾಯಕನೆಂಬ ಹೆಸರೂ ಇದೆ. ಈ ಚಿಕ್ಕ ಕೆಂಗಾ ಹನುಮಪ್ಪ ನಾಯಕನು ಬಿಜಾಪುರ ಸುಲ್ತಾನರಿಂದ ಮರಳಿ ಸಂತೇಬೆನ್ನೂರನ್ನು ಪಡೆದು ಶಾಲಿವಾಹನ ಶಕ ೧೫೭೮ ದುರ್ಮುಖ ಸಂವತ್ಸರದಿಂದ ಶಾ.ಶಕ. ೧೫೮೪ ಶುಭಕೃತು ಸಂವತ್ಸರದವರೆಗೆ (೧೬೫೬-೧೬೬೨) ಆರು ವರ್ಷ ಆಳಿದನು. ಆ ಸಮಯದಲ್ಲಿ ಸರ್ಜಾಖಾನನು ಸಯ್ಯದ್ ಕಡೆಯಿಂದ ಬಂದು ಚಿಕ್ಕ ಕೆಂಗಾ ಹನುಮಪ್ಪ ನಾಯಕನನ್ನು ಮುತ್ತಲು ಹೆಚ್ಚಿನ ಬಲವಿಲ್ಲದೆ ಚಿಕ್ಕ ಕೆಂಗಾ ಹನುಮಪ್ಪ ನಾಯಕ ಸಂತೇಬೆನ್ನೂರನ್ನು ಅವನಿಗೆ ಒಪ್ಪಿಸಿ ತರೀಕೆರೆ ಪ್ರಾಂತ್ಯಕ್ಕೆ ಹೊರಟು ಹೋದನು. **[36]**ಅಲ್ಲಿಂದ ಮುಂದೆ ಸಂತೇಬೆನ್ನೂರು ಪ್ರಾಂತ್ಯ ಬಿಜಾಪುರ ಸುಲ್ತಾನರು, ಚಿತ್ರದುರ್ಗ ಪಾಳೇಗಾರರು, ಕೆಳದಿ ನಾಯಕರು, ಮೊಘಲರು, ಮರಾಠರು, ಹೈದರ್ ಮತ್ತು ಟಿಪ್ಪು ಸುಲ್ತಾನರು, ಮೈಸೂರು ಅರಸರ ಕೈ ಬದಲಾಯಿಸುತ್ತಾ ಕೊನೆಗೆ ಬ್ರಿಟಿಷ್ ಅಧಿಪತ್ಯಕ್ಕೆ ಸೇರಿದ ಮೈಸೂರು ಪ್ರಾಂತ್ಯದೊಂದಿಗೆ ವಿಲೀನವಾಯಿತು. ಚಿಕ್ಕ ಕೆಂಗಾ ಹನುಮಪ್ಪ ನಾಯಕ ತರೀಕೆರೆಗೆ ಹೋಗಿ ನೆಲೆನಿಂತ ನಂತರ ಇವರನ್ನು ತರೀಕೆರೆ ನಾಯಕರು (ತರೀಕೆರೆಯ ಪಾಳೆಯಗಾರರು) ಎಂದು ಕರೆಯಲಾಯಿತು. ಬಿಜಾಪುರ ಸುಲ್ತಾನ್ ಆದಿಲ್ ಶಾನ ಜೀವನ ಕಾಲದಲ್ಲಿ ಕ್ರಿ.ಶ. ೧೬೪೬ರಲ್ಲಿ ರಚಿತವಾದ ಪುತ್ ಹತ್‌ಇ-ಆದಿಲ್ ಶಾಹಿ ಗ್ರಂಥದಲ್ಲಿ (ಲೇಖಕ: ಘಝುನಿ ಅಸ್ತ್ರವಾದಿ) ಕಂಕಯ್ಯ ನಾಯಕನೆಂದು ಹೆಸರಿಸಿರುವ ನಾಯಕ ಈತನೇ ಇರಬೇಕೆಂದು ಆದಿಲ್ ಶಾಹಿ ಇತಿಹಾಸ ಪರಿಣಿತ ಡಾ. ಪಿ.ಎಂ. ಜೋಹೊ**[37]**ಅಭಿಪ್ರಾಯಪಡುತ್ತಾರೆ. ಮುಂದೆ ಚಿಕ್ಕ ಕೆಂಗಾ ಹನುಮಪ್ಪ ನಾಯಕ ಬಿಜಾಪುರ ಸುಲ್ತಾನರ ಅಧೀನ ಅರಸನಾಗಿ ಅವರೊಡನೆ ಕೆಳದಿ, ಚಿತ್ರದುರ್ಗ, ಸಿರಾ, ಹಾಗಲವಾಡಿ, ಬೆಂಗಳೂರು, ಮೈಸೂರು ಮುಂತಾದ ಹಲವಾರು ಯುದ್ಧದಲ್ಲಿ ಭಾಗವಹಿಸಿದ್ದನೆಂದು ತಿಳಿದುಬರುತ್ತದೆ.

[1]ತರೀಕೆರೆ ಕೈಫಿಯತ್ತು (ತ.ಪಾ.) ಪುಟ.೪೭

[2]*ತ.ಪಾ.* ಪುಟ.೧೩

[3]*ಶ್ರೀ ಕೂಡ್ಲಿ – ಶೃಂಗೇರಿ ಮಠದ ಶಾಸನಗಳು*

[4]*ಎ.ಕ.* ಸಂ.೭ ಶಿವಮೊಗ್ಗ ಭಾಗ -೧ (ಮಂಟರಗಟ್ಟ – ಹೊಸಳ್ಳಿ ಶಾಸನಗಳು)

[5]*ಅದೇ*ಚನ್ನಗಿರಿ ತಾಮ್ರಶಾಸನ

[6]*ಅದೇ*ಚನ್ನಗಿರಿ ತಾಲ್ಲೂಕು ಮಂಟರಗಟ್ಟ ಶಾಸನ

[7]*ಕೂಡ್ಲಿ – ಶೃಂಗೇರಿ ಮಠದ ಶಾಸನಗಳು*, ಬ್ಯಾಡಗಿ ಜಿಲ್ಲೆ.

[8]*ಎ.ಕ.* ಸಂ.೭ ಶಿವಮೊಗ್ಗ ಭಾಗ – ೧ ಚನ್ನಗಿರಿ ತಾ ಹೊಸಳ್ಳಿ ಶಾಸನ

[9]*ಅದೇ*ಚನ್ನಗಿರಿ ತಾಲ್ಲೂಕು ಮಂಟರಗಟ್ಟ ಶಾಶನ

[10]*ಅದೇ*ಚನ್ನಗಿರಿ ತಾಲ್ಲೂಕು ಶಾಸನ

[11]*ಅದೇ*ಚನ್ನಗಿರಿ ತಾಲ್ಲೂಕು ಚಿಕ್ಕಗಂಗೂರು ಶಾಸನ

[12] *ಅದೇ* ಚನ್ನಗಿರಿ ತಾಲ್ಲೂಕು ತಾಮ್ರ ಶಾಸನ

[13] *ಅದೇ* ಚನ್ನಗಿರಿ ಚಿಕ್ಕಕೋಗಲೂರು ಶಾಸನ

[14] *ಅದೇ* ಚನ್ನಗಿರಿ ತಾಲ್ಲೂಕು ಗೊಪ್ಪೇನಹಳ್ಳಿ ಶಾಸನ

[15] ಕ.ಕೈ. ಪುಟ.೨೫

[16] *ಅದೇ*

[17] *'ಹರತಿ ಸಿರಿ'* ಸ್ಮರಣ ಸಂಚಿಕೆ

[18] ರೈಸ್ ಗೆಜೆಟಿಯರ್ ಸಂ.೨ ಪುಟ. ೪೬೯

[19] *ಶ್ರೀ ಕೂಡ್ಲಿ – ಶೃಂಗೇರಿ ಮಠದ ಶಾಸನಗಳು*

[20] *ಎ.ಕ.* ಸಂ.೭ ಶಿವಮೊಗ್ಗ ಭಾಗ – ೧ ಚನ್ನಗಿರಿ ತಾಲ್ಲೂಕು ಚಿಕ್ಕಗಂಗೂರು ಶಾಸನ

[21] *ಕ.ಕೈ.* ಪುಟ. ೪೨೫

[22] *ಎ.ಕ.* ಸಂ. II (ಚಿತ್ರದುರ್ಗ – ದಾವಣಗೆರೆ – ೧೫೮ ಶಾಸನ ವಡೇರಹಳ್ಳಿ)

[23] *ಕ.ಕೈ.* ಪುಟ. – ೪೨೬

[24] *ಅದೇ*

[25] *ಎಂ.ಎ.ಆರ್.* – ೧೯೨೫ ಪುಟ – ೭

[26] *ಎ.ಕ.* ಸಂ.II ಚಿತ್ರದುರ್ಗ – ಹೊಳಲ್ಕೆರೆ ತಾಲ್ಲೂಕು ಬಾಗೂರು, ತಾಳ್ಯ, ಕೆಲ್ಲೋಡು ಶಾಸನಗಳು

[27] *ಎ.ಕ.* ಸಂ.೬ ಕಡೂರು ತರೀಕೆರೆ ತಾಮ್ರಶಾಸನ

[28] ಎ.ಕ. ಸಂ. II ಚಿತ್ರದುರ್ಗ (ಹೊಳಲ್ಕೆರೆ ಶಾಸನ) – ೯೨ ಕೆಲ್ಲೋಡು

[29] *ಕ.ಕೈ.* ಪುಟ – ೪೨೬

[30] ಎ.ಕ.ಸಂ. II ಚಿತ್ರದುರ್ಗ ದಾವಣಗೆರೆ ತಾಲ್ಲೂಕು ಬುಳ್ಳಾಪುರ ಶಾಸನ

[31] *ಎ.ಕ.* ಸಂ. ೭. ಶಿವಮೊಗ್ಗ ಭಾಗ I (ಚನ್ನಗಿರಿ ತಾಲ್ಲೂಕು ಹಿರೇಕೋಗಲೂರು ಹಿರೇಮಾಡಾಳು – ಅಂಣಾಪುರ ಶಾಸನಗಳು)

[32] *ಎ.ಕ.* ಸಂ.೬ ಕಡೂರು – ಆಲದಹಳ್ಳಿ ಶಾಸನ

[33]*ಎ.ಕ. ಸಂ.೧೨ ತುಮಕೂರು ಜಿಲ್ಲಾ ಚಿಕ್ಕನಾಯಕನಹಳ್ಳಿ ತಾಲ್ಲೂಕು ಗರಗ ಗ್ರಾಮ ಶಾಸನ*

[34]*ಕ.ಕೈ.* ಪುಟ ೪೨೭

[35]*ಅದೇ*

[36]*ಅದೇ*

[37]ದೀಕ್ಷಿತ್‌ಜಿ.ಎಸ್. *ಕೆಳದಿ ಐತಿಹಾಸಿಕ ನಿಬಂಧಗಳು ೧೯೮೩*, ಕೆಳದಿ ಪುಟ – ೪೯

ಮಲೆಕರ್ನಾಟಕದ ಅರಸು ಮನೆತನಗಳು: ೧೩. ಸಂತೆಬೆನ್ನೂರು ನಾಯಕರು (೩)

ತರೀಕೆರೆಯಲ್ಲಿ ಮುಂದುವರೆದ ಆಡಳಿತ

ತರೀಕೆರೆಗೆ ಬಂದು ನೆಲೆಸಿದ ಸಂತೇಬೆನ್ನೂರು ನಾಯಕರಲ್ಲಿ ಚಿಕ್ಕ ಕೆಂಗಾ ಹನುಮಪ್ಪ ನಾಯಕ ಮೊದಲನೆಯವನು. ಇವನಿಂದ ಮೊದಲ್ಗೊಂಡು ಇವರನ್ನು ತರೀಕೆರೆ ಪಾಳೆಯಗಾರರು ಎಂದು ಕರೆಯಲಾಗಿದ್ದರೂ ಇಲ್ಲಿಂದ ಹೊರಡಿಸಿದ ಶಾಸನಗಳಲ್ಲಿ ಅವರು ತಮ್ಮನ್ನು ಸಂತೇಬೆನ್ನೂರು ನಾಯಕರೆಂದೇ ಕರೆದುಕೊಂಡಿದ್ದಾರೆ. ಚಿಕ್ಕ ಕೆಂಗಾ ಹನುಮಪ್ಪ ನಾಯಕ ತರೀಕೆರೆಗೆ ಬಂದ ಮೇಲೆ ಒಂದು ಕೋಟೆ ಹಾಗೂ ಅರಮನೆಯನ್ನು ಕಟ್ಟಿಸಿದನು. ಅಲ್ಲದೆ ಅನೇಕ ದೇವಾಲಯಗಳನ್ನು ಕೆರೆ-ಕಟ್ಟೆಗಳನ್ನು ನಿರ್ಮಿಸಿದನು. ಇದರ ಜೊತೆಗೆ ಕಲ್ ದುರ್ಗ, ಹನುಮಯ್ಯನಗಿರಿ ದುರ್ಗ ಕಟ್ಟಿಸಿದನು. ಬಾಬಾ ಬುಡನ್ಗಿರಿ ಮೇಲಿದ್ದ ಕಾಮನದುರ್ಗವನ್ನು ದುರಸ್ತಿಗೊಳಿಸಿದನು. ಅದನ್ನು ಪ್ರಮುಖ ಸೇನಾ ಕೇಂದ್ರವಾಗಿ ಮಾಡಿದನು. ಕಡೂರು-೧೬೩[1]ಶಾಸನ ಕಲತಿ ವೀರಣ್ಣಗೆ ಆಲದಹಳ್ಳಿ ಗ್ರಾಮವನ್ನು ಚಿಕ್ಕಣ್ಣ ನಾಹಕ ಕ್ರಿ.ಶ. ೧೬೫೦ರಲ್ಲಿ ದತ್ತಿ ಕೊಟ್ಟದ್ದಗಿ ತಿಳಿಸುತ್ತದೆ. ಈ ಚಿಕ್ಕಣ್ಣ ನಾಯಕ ಮತ್ತು ಚಿಕ್ಕ ಕೆಂಗಾ ಹನುಮಪ್ಪ ನಾಯಕ ಒಬ್ಬನೇ ಇರಬೇಕು.

ಈ ಚಿಕ್ಕ ಕೆಂಗಾ ಹನುಮಪ್ಪ ನಾಯಕ ಬಿಜಾಪುರ ಸುಲ್ತಾನರಿಂದ ಸರ್ಜಾ ಎಂಬ ಬಿರುದು ಪಡೆದಿದ್ದುದರಿಂದ ಈತ ಮುಂದೆ ತನ್ನ ಹೆಸರನ್ನು ಸರಜಾ ಹನುಮಪ್ಪ ನಾಯಕ ಎಂದು ಶಾಸನದಲ್ಲಿ ಕರೆದುಕೊಂಡಿದ್ದಾನೆ. ತರೀಕೆರೆ ೨೧-೨೪[2] ಶಾಸನ, ಕೂಡ್ಲಿ ೪೮-೪೯-೫೦-೫೧-೫೨-೫೩[3]ಇದನ್ನು ಸ್ಪಷ್ಟಪಡಿಸುತ್ತವೆ. ಸಂತೇಬೆನ್ನೂರು ಮುಮ್ಮಡಿ ಹನುಮಪ್ಪ ನಾಯಕರ ಪುತ್ರ ನಿಚ್ಚ ಮದುವಣಿಗ ಹನುಮಪ್ಪ ನಾಯಕರ ಪುತ್ರ ಸರಜಾ ಹನುಮಪ್ಪ ನಾಯಕ ಎಂದು ಇವನು ಶಾಸನದಲ್ಲಿ ಕರೆದುಕೊಂಡಿದ್ದಾನೆ.

ಕೂಡ್ಲಿ-ಶೃಂಗೇರಿ ಮಠದ ಶ್ರೀ ವಿದ್ಯಾರಣ್ಯ ಭಾರತಿ ಸ್ವಾಮಿಗಳಿಗೆ ಸರಜಾ ಹನುಮಪ್ಪ ನಾಯಕ ೬ ಶಾಸನಗಳನ್ನು ಬರೆಯಿಸಿ ಕೊಟ್ಟಿದ್ದು ಶೆಟ್ಟಿಹಳ್ಳಿ, ಸನ್ಯಾಸಿ ಕೊಪ್ಪ, ಮಲವಗೊಪ್ಪ, ದಂದೂರು, ಜಾವಳ್ಳಿ ಹಾಗೂ ಹಂಗರಹಾಳು ಗ್ರಾಮಗಳನ್ನು ತಮ್ಮ ಹಿರಿಯರು ಕಟ್ಟಿಸಿಕೊಟ್ಟ ಕೂಡ್ಲಿ ಶೃಂಗೇರಿ ಮಠದ ಧರ್ಮಕ್ಕೆ ತಮ್ಮ ಮಾತಾ ಪಿತೃಗಳಿಗೆ ಅಕ್ಷಯ ಪುಣ್ಯ ಲೋಕವಾಗಲಿ ಎಂದು ವಿವಿಧ ಧಾರ್ಮಿಕ ಕಾರ್ಯಗಳಿಗೆ ದತ್ತಿ ಬಿಟ್ಟಿರುವುದಾಗಿ ತಿಳಿಸುತ್ತವೆ. ತರೀಕೆರೆ ೨೧-೨೪[4]ಶಾಸನದಂತೆ ಕೆಂಗಪ್ಪ ನಾಯಕರ ಪುತ್ರರಾದ ಹಿರೇ ಹನುಮಪ್ಪ ನಾಯಕರ ಸಹೋದರ ಬಾಲಗಿರಿ ನಾಯಕರು ಈ ಹಿಂದೆ ಭಾರಧ್ವಾಜ ಗೋತ್ರದ ಕೊನೇರಿ ಭಟ್ಟರಿಗೆ ಕೊಟ್ಟ ದಾನಪಟ್ಟಿ

ಶಿಥಿಲವಾದ ಕಾರಣ ಅವರ ವಂಶದ ಜಕ್ಕಾ ಭಟ್ಟರಿಗೆ ಮರಳಿ ಕಲತ್ತಿ ವೀರನ ಸನ್ನಿಧಿಯಲ್ಲಿ ಹಿರೇಕಾತೂರು, ಹಾದಿಕೆರೆ, ಕುಂಚಿನ ಮಡು, ಅಮೃತಾಪುರ, ದೋರನಾಳು, ತರೀಕೆರೆ, ಚಿಕ್ಕ ಕಾತೂರು, ದುಗ್ಗನಹಾಳ್, ಮತ್ತಿತರ ಹತ್ತು ಸ್ಥಳಕ್ಕೆ ಸಲ್ಲುವ ಗದ್ದೆ, ತೋಟ, ಹೊಲ, ಮನೆಯನ್ನು ಉಪಾದಿ ಜ್ಯೋತಿಷ್ಯಕ್ಕೆ ಕೊಡಲಾಗಿದೆ ಎಂದು ಬರೆದುಕೊಟ್ಟಿದ್ದಾನೆ.

೧೦. ಕೆಂಗಪ್ಪ ನಾಯಕ –II (ಕ್ರಿ.ಶ. ೧೫೮೧-೧೬೪೮)

ಕದರ ಮಂಡಳಿಗೆ ಶಾಸನ[5]ದಂತೆ ಚಿಕ್ಕ ಹನುಮಪ್ಪ ನಾಯಕನ ಮಗ ಕೆಂಗಪ್ಪ ನಾಯಕ ಚಂದ್ರುಗುತ್ತಿ ವೆಂಠೆಗೆ ಸಲ್ಲುವ ನೂರುಂಬಾಡದ ರಟ್ಟೇಹಳ್ಳಿ ಶೀಮೆಗೆ ಸಲ್ಲುವ ಬೆಂನೂರು ಸ್ಥಳದ ವಳಗಣ ಕದರ ಮಂಡಳಿಗೆ ಗ್ರಾಮವನ್ನು ಅಲ್ಲಿನ ಹನುಮಂತ ಸ್ವಾಮಿಯ ಅಮೃತಪಡಿ, ನಂದಾದೀಪ, ಅಂಗರಂಗ ವೈಭವಕ್ಕೆ ದಾನ ಕೊಟ್ಟಿರುವುದಾಗಿ ತಿಳಿಸುತ್ತದೆ. ಶಾಸನದ ಕಾಲ ೧೫೮೧ ಎಂದು ಸೂಚಿಸುತ್ತದೆ. ಈ ಕೆಂಗಪ್ಪ ನಾಯಕ ಚಿಕ್ಕ ಕೆಂಗಾ ಹನುಮಪ್ಪ ನಾಯಕನ ಮಗನೇ ಎಂಬ ಅನುಮಾನ ಉಂಟು ಮಾಡುತ್ತದೆ. ಬಹಳ ಮಾಡಿ ಶಾಸನದಲ್ಲಿ ಉಕ್ತವಾದಂತೆ ಇವನು ಚಿಕ್ಕ ಹನುಮಪ್ಪ ಅಂದರೆ ಚಿಕ್ಕ ಕೆಂಗಾ ಹನುಮಪ್ಪ ನಾಯಕನ ಮಗನೇ ಇರಬೇಕೆಂದು ತೋರುತ್ತದೆ. ತುಂಗಭದ್ರಾ ನದಿ ದಾಟಿ ಈಗಿರುವ ಹಾವೇರಿಯಲ್ಲಿ ರಾಣೆಬೆನ್ನೂರು ತಾಲ್ಲೂಕು ಕದರಮಂಡಳಿಗೆ ಗ್ರಾಮ ಸಂತೆಬೆನ್ನೂರು ನಾಯಕರಿಗೆ ಸೇರಿತ್ತಂದು ಈ ಶಾಸನದಿಂದ ಸ್ಪಷ್ಟವಾಘಿ ತಿಳಿದುಬರುತ್ತದೆ. ಆದರೆ ಈ ಬಗ್ಗೆ ಕೈಫಿಯತ್ತಿನಲ್ಲಿ ಉಲ್ಲೇಖ ಇಲ್ಲದಿರುವುದು ಆಶ್ಚರ್ಯ ತರುತ್ತದೆ.

ಸೀತಾರಾಮಪ್ಪ ನಾಯಕ II (ಕ್ರಿ.ಶ. ೧೬೪೮-೧೬೭೯)

ಸರ್ಜಾ ಹನುಮಪ್ಪ ನಾಯಕನ ನಿಧನಾನಂತರ ಆತನ ಮಗ ಸೀತಾರಾಮಪ್ಪ ನಾಯಕ ಅರಸನಾಗುತ್ತಾನೆ. ತರೀಕೆರೆ ಕೈಫಿಯತ್ತಿನಂತೆ[6]ಶಾ.ಶ. ೧೫೭೦ನೇ ಸರ್ವಧಾರಿ ಸಂವತ್ಸರದಿಂದ ಶಾಶ ೧೬೦೧ನೇ ಸಿದ್ಧಾರ್ಥ ಸಂವತ್ಸರದವರೆಗೆ (ಕ್ರಿ.ಶ. ೧೬೪೮-೧೬೭೯) ೩೧ ವರ್ಷ ಆಳ್ವಿಕೆ ನಡೆಸಿದನು.

ಚಿಕ್ಕಮಗಳೂರು ೧೧೪ ಶಾಸನ[7]ದಂತೆ ಬೆಂಡುಗ ಗ್ರಾಮದ ಒಂದು ಉಂಬಳಿ ಹೊಲ ಈತ ದಾನ ಬರೆಯಿಸಿ ಕೊಟ್ಟಿದ್ದಾನೆ. ಇದರಲ್ಲಿ ನಮೂದಾದ ಕಾಲ ತಪ್ಪಾದಂತಿದೆ. ತರೀಕೆರೆ-೩೯[8]ಶಾಸನದಂತೆ ಹುಲಿ ತಿಮ್ಮಪುರ ಗ್ರಾಮವನ್ನು ಕಾಮನ ದುರ್ಗದ ಚೆನ್ನಿಗರಾಯ ಸ್ವಾಮಿಗೆ ದಾನ ಕೊಟ್ಟದ್ದಾಗಿ ತಿಳಿದು ಬರುತ್ತದೆ.

ಅಲ್ಲದೆ ಕೂಡ್ಲಿ ೫೭, ೫೮, ೫೯ ೯೧[9]ಶಾಸನಗಳಂತೆ ಕೂಡ್ಲಿ-ಶೃಂಗೇರಿ ಭಾರತಿ ಸ್ವಾಮಿಗಳಿಗೆ ದೇವಲಾಪುರ ಗ್ರಾಮ ಹಾಗೂ ದಂದೂರು ಗ್ರಾಮವನ್ನು ದತ್ತಿ ಕೊಟ್ಟಿರುವುದಗಿ ತಿಳಿದು ಬರುತ್ತದೆ ಹಾಗೂ ಮೂಲ ಶೃಂಗೇರಿ ಮಠಕ್ಕೆ ಕೊಟ್ಟಿದ್ದ ದಂದೂರು ಗ್ರಾಮ ಮರಳಿ ಕೂಡ್ಲಿ ಶೃಂಗೇರಿ ಮಠಕ್ಕೆ ಸಲ್ಲುವಂತೆ ತಾವು ಅಧೀನರಾಗಿದ್ದ ಭಾಗನಗರದ ದಿವಾನ ಮಹದಾಜಿ ಪಂಡಿತರಿಗೆ ಸೀತಾರಾಮಪ್ಪ ನಾಯಕ ತಿಳಿಸಿರುವುದಾಗಿ ತಿಳಿದುಬರುತ್ತದೆ. ಉಲ್ಲೇಖಿತ ಶಾಸನಗಳು ಸೀತಾರಾಮಪ್ಪನ ಕಾಲವನ್ನು ಕ್ರಿ.ಶ. ೧೬೮೬ರ ವರೆಗೂ ಸೂಚಿಸಿರುವುದರಿಂದ ಕೈಫಿಯತ್ತಿನ ಉಲ್ಲೇಖ ತಪ್ಪಾಗಿರುವ ಸಾಧ್ಯತೆ ಇದೆ. ಕಡೂರು-೨೬ ಶಾಸನ[10]ಸೀತಾರಾಮಪ್ಪ ನಾಯಕರು ಕ್ರಿ.ಶ. ೧೭೪೩ ರಲ್ಲಿ ಅರಶಿನ ಗುಪ್ಪೆ ಗ್ರಾಮದಲ್ಲಿ ದೊಡ್ಡಯ್ಯ ಗೌಡಗೆ ಒಮದು ಗದ್ದೆ ದಾನ ಕೊಟ್ಟಿರುವುದಾಗಿ ತಿಳಿಸುತ್ತದೆ. ಹಾಗಾದರೆ ಈತನ ಜೀವಿತದ ಕಾಲ ಕ್ರಿ.ಶ. ೧೭೪೩ ವರೆಗೂ ವಿಸ್ತರಿಸಬಹುದು. ಕೂಡ್ಲಿ ದಾನ ಶಾಸನ ೫೪, ೫೫, ೫೬[11]ರಲ್ಲಿ ನಮೂದಾದ ಕಾಲದಂತೆ ಈ ಶಾಸನಗಳು ಸೀತಾರಾಮಪ್ಪ ನಾಯಕನ ಅವಧಿಯದಾಗಿದ್ದು ಅದರಲ್ಲಿ ನಮೂದಾದ ಹನುಮಪ್ಪ ನಾಯಕ ಇವನ ಮಗನೇ ಎಂಬ ಸಂದೇಹ ಉಂಟು ಮಾಡುತ್ತದೆ.

೧೨. ಹುಚ್ಚ ಹನುಮಪ್ಪ ನಾಯಕ (ಕ್ರಿ.ಶ. ೧೬೮೦-೧೭೧೬)

ಸೀತಾರಾಮಪ್ಪ ನಾಯಕನ ನಂತರ ಇವರ ಮಗ ಹುಚ್ಚ ಹನುಮಪ್ಪ ನಾಯಕ ಶಾ.ಶಕ ೧೬೦೨ ರೌದ್ರಿ ಸಂವತ್ಸರದಿಂದ ಶಾ.ಶಕ ೧೬೩೮ನೇ ಜಯ ಸಂವತ್ಸರದವರೆಗೆ (ಕ್ರಿ.ಶ. ೧೬೮೦-೧೭೧೬) ೩೬ ವರ್ಷ ಆಳ್ವಿಕೆಗೆ ನಡೆಸಿದ್ದಾಗಿ ಕೈಫಿಯತ್ತಿನಿಂದ[12]ತಿಳಿದುಬರುತ್ತದೆ. ಕೂಡ್ಲಿ-೬೦[13]ಶಾಸನದಲ್ಲಿ ಪ್ರಸ್ತಾಪಿತವಾದ ಹನುಮಪ್ಪ ಈತನೇ. ಈ ಶಾಸನದಂತೆ ಕೂಡ್ಲಿ, ಶೃಂಗೇರಿ ಶಂಕರಭಾರತಿ ಸ್ವಾಮಿಗಳಿಗೆ ದೇಮಾಪುರ ಗ್ರಾಮದಿಂದ ಆರೇರ ಪಟ್ಟಿ, ಮೊಗಲರ ಪಟ್ಟಿ, ವರ್ತನೆ, ವರಾಡ ಮುಂತಾಗಿ ಒಂದನ್ನು ತೆಗೆದುಕೊಳ್ಳದ ರೀತಿ ಕಟ್ಟಳೆ ಮಾಡಿ ನಿಸಪತ್ತಿ ಹೋಗದ ರೀತಿ ಬರೆಯಿಸಿ ಕೊಟ್ಟಿದ್ದಾನೆ. ಮೂಲ ಶೃಂಗೇರಿ ಮಠಕ್ಕೆ ಬರೆದುಕೊಟ್ಟ ಶೃಂಗೇರಿ ೪[14]ಶಾಸನ ಈತನದೇ ಆಗಿರಬೇಕು.

೧೩. ಪಟ್ಟಾಭಿನಾಯಕ (ಕ್ರಿ.ಶ. ೧೭೧೫-೧೭೧೭)

ಹುಚ್ಚ ಹನುಮಪ್ಪ ನಾಯಕನ ನಂತರ ಈತನ ಮಗ ಪಟ್ಟಾಭಿನಾಯಕ ಶಾ.ಶಕ ೬೩೭ನೇ ಮನ್ಮಥ ಸಂಚತ್ಸರದಿಂದ ಶಾ.ಶಕ ೧೬೩೯ನೇ ಹೇವಿಳಂಬಿ ಸಂವತ್ಸರದವರೆಗೆ (ಕ್ರಿ.ಶ. ೧೭೧೫-೧೭೧೭) ೭ ವರ್ಷ ಆಳಿದ್ದಾಗಿ ತರೀಕೆರೆ ಕೈಫಿಯತ್ತು ದಾಖಲೆ ತಿಳಿಸುತ್ತದೆ. ಇವನ ಕಾಲದಲ್ಲಿ ಸಿರಾದವರು ತರೀಕೆರೆಗೆ ಮುತ್ತಿಗೆ ಹಾಕಿದಾಗ ಈತ ಬಿದನೂರು ನಾಯಕರ ಸಹಾಯ ಪಡೆದು ಸಿರಾದವರನ್ನು ಹಿಮ್ಮೆಟ್ಟಿಸಿದ್ದಾಗಿ ತಿಳಿದು ಬರುತ್ತದೆ.

೧೪. ನಿತ್ಯ ಮದುವಣಿಗ ಹನುಮಪ್ಪ ನಾಯಕ (ಕ್ರಿ.ಶ. ೧೭೧೮-೧೭೬೪)

ಪಟ್ಟಾಭಿರಾಮಪ್ಪ ನಾಯಕರ ತರುವಾಯ ಇವರ ತಮ್ಮ ನಿತ್ಯಮದುವಣಿಗ ಹನುಮಪ್ಪ ನಾಯಕ ಶಾ.ಶಕ ೧೬೪೦ನೇ ವಿಳಂಬಿ ಸಂವತ್ಸರದಿಂದ ಶಾ.ಶಕ ೧೬೮೬ನೇ ತಾರಣ ಸಂವತ್ಸರದವರೆಗೆ (ಕ್ರಿ.ಶ. ೧೭೧೮-೧೭೬೪) ಅಂದರೆ ೪೬ ವರ್ಷ ಆಡಳಿತ ನಡೆಸಿದ್ದಾಗಿ ತಿಳಿದುಬರುತ್ತದೆ.

೧೫. ಇಮ್ಮಡಿ ಹನುಮಪ್ಪ ನಾಯಕ (ಕ್ರಿ.ಶ. ೧೭೬೫-೧೭೭೧)

ನಿತ್ಯ ಮದುವಣಿಗ ಹನುಮಪ್ಪ ನಾಯಕನ ತರುವಾಯ ಅವರ ಮಗ ಇಮ್ಮಡಿ ಹನುಮಪ್ಪ ನಾಯಕ ಅಧಿಕಾರ ವಹಿಸಿಕೊಂಡು ಶಾ.ಶಕ ೧೬೮೭ನೇ ಪಾರ್ಥಿವ ಸಂವತ್ಸರದಿಂದ ಶಾ.ಶಕ ೧೬೯೩ನೇ ಖರ ಸಂವತ್ಸರದವರೆಗೆ (ಕ್ರಿ.ಶ. ೧೭೭೧) ಅಧಿಕಾರ ನಡೆಸಿದ್ದಾಗಿ ತರೀಕೆರೆ ಕೈಫಿಯತ್ತು ತಿಳಿಸುತ್ತದೆ.

೧೬. ಸೀತಾರಾಮಪ್ಪ ನಾಯಕ III (ಕ್ರಿ.ಶ. ೧೭೭೨-೧೭೭೯)

ಇಮ್ಮಡಿ ಹನುಮಪ್ಪ ನಾಯಕನ ತರುವಾಯ ಅವರ ತಮ್ಮ ಸೀತಾರಾಮಪ್ಪ ನಾಯಕ ಶಾ.ಶಕ ೧೬೯೪ನೇ ಸಂವತ್ಸರದ ಲಾಗಾಯ್ತು ಶಾ.ಶಕ ೧೭೦೧ನೇ ವಿಕಾರಿ ಸಂವತ್ಸರದವರೆಗೆ (ಕ್ರಿ.ಶ, ೧೭೭೨-೧೭೭೯) ಒಟ್ಟು ೭ ವರ್ಷ ಆಳಿದನೆಂದು ತರೀಕೆರೆ ಕೈಫಿಯತ್ತಿನಂತೆ ತಿಳಿದು ಬರುತ್ತದೆ.

೧೭. ಸರ್ಜಾಹನುಮಪ್ಪ ನಾಯಕ – II (ಕ್ರಿ.ಶ. ೧೭೮೦-೧೭೮೧)

ಸೀತಾರಾಮಪ್ಪ ನಾಯಕನ ತರುವಾಯ ಅವರ ಮಗ ಸರ್ಜಾ ಹನುಮಪ್ಪ ನಾಯಕ ಶಾ.ಶಕ ೧೭೦೨ನೇ ಶಾರ್ವರಿ ಸಂವತ್ಸರದಿಂದ ಶಾ.ಶಕ ೧೭೦೩ ಪ್ಲವ ಸಂವತ್ಸರದವರೆಗೆ (ಕ್ರಿ.ಶ. ೧೭೮೦-೧೭೮೧) ಎರಡು ವರ್ಷ ಅಧಿಕಾರ ನಡೆಸಿದನು. ಇವರ ಪತ್ನಿ ಸುಬ್ಬಮ್ಮ ನಾಗತಿ. ಇವರಿಗೆ ಸರ್ಜಾ

ಕಾಗಣಪ್ಪ ನಾಯಕ ಮತ್ತು ಸರ್ಜಾ ಹನುಮಪ್ಪ ನಾಯಕ ಎಂಬ ಇಬ್ಬರು ಮಕ್ಕಳು. ಹೈದರಾಲಿ ಇವರನ್ನು ಜಯಿಸಿ ೧೮ ಸಾವಿರ ಪೊಗದಿ ಕೊಡಲು ನಿರ್ಣಯಿಸಿ ಮರಳಿ ರಾಜ್ಯ ಇವರಿಗೆ ಬಿಟ್ಟುಕೊಟ್ಟಿದ್ದನು. ಇದನ್ನೂ ಸಹ ಕೊಡಲು ಆಗದೆ ಇದ್ದುದರಿಂದ ೧೦೦ ಹೈದರಿ ವರಾಹ ಗೊತ್ತು ಮಾಡಿ ೧೭೮೨ ವರಹ ಸೀಮೆ ಜಹಗೀರ್ ಕೊಟ್ಟು ಮಂಜುರಾಬಾದು ಪ್ರಾಂತ್ಯ ಆಳಲು ಕಳುಹಿಸಿದನು. ಇವರು ತರೀಕೆರೆಯಿಂದ ಮಂಜುರಾಬಾದನ್ನು ಆಳುತ್ತಿದ್ದಾಗ ಹೆದರನಿಗೆ ಸಹಾಯ ಮಾಡಲು ಕೊಯಮತ್ತೂರು ಯುದ್ಧಕ್ಕೆ ಹೋದಾಗ ಅಲ್ಲಿ ನಿಧನರಾದರೆಮದು**[15]**ತಿಳಿದು ಬರುತ್ತದೆ.

೧೮. ಕೃಷ್ಣಪ್ಪ ನಾಯಕ (ಕ್ರಿ.ಶ. ೧೭೮೨-೧೮೦೪)

ಸರ್ಜಾ ಹನುಮಪ್ಪ ನಾಯಕನ ತರುವಾಯ ಇವನ ಮಗ ಕೃಷ್ಣಪ್ಪ ನಾಯಕ ಅಧಿಕಾರಕ್ಕೆ ಬಂದನು. ಇವನು ಶಕ ೧೬೬೫ನೇ ದುಂದುಭಿ ಸಂವತ್ಸರದ ಶ್ರಾವಣ ಬಹುಳ ಕೃಷ್ಣಾಷ್ಟಮಿಯಂದು ಜನಿಸಿದ್ದರಿಂದ ಇವನಿಗೆ ಕೃಷ್ಣಪ್ಪ ಎಂದು ನಾಮಕರಣ ಮಾಡಲಾಯಿತು ಎಂದು ತಿಳಿದು ಬರುತ್ತದೆ. ಇವನಿಗೆ ಲಕ್ಷ್ಮಮ್ಮ ನಾಗತಿ ಜೊತೆಗೆ ಶಾ.ಶಕ ೧೬೮೬ನೇ ಸ್ವಭಾನು ಸಂವತ್ಸರದಲ್ಲಿ ವಿವಾಹವಾಯಿತು. ಈತ ತನ್ನ ೪೧ನೇ ವಯಸ್ಸಿನಲ್ಲಿ ನಿಧನರಾದನು. ಕ್ರಿ.ಶ. ೧೮೦೪ರಲ್ಲಿ ಅವನನ್ನು ಬಂಧಿಸಿದಾಗ ಮೈಸೂರು ಅರಮನೆಯಲ್ಲಿ ಇವನು ನಿಧನನಾದನೆಂದು ಅಬ್ದುಲ್ ಸತ್ತಾರ್ ತಮ್ಮ ತರೀಕೆರೆ ಪಾಳೆಯಗಾರರು ಪುಸ್ತಕದಲ್ಲಿ ತಿಳಿಸುತ್ತಾರೆ. ಟಿಪ್ಪುವಿನ ವಿರೋಧಿ ಎಂದು ದಿವಾನ್ ಪೂರ್ಣಯ್ಯ ಈತನಿಗೆ ವಿಷವಿಕ್ಕಿ ಕೊಲ್ಲಿಸಿದನೆಂದು ಹೇಳಲಾಗುತ್ತದೆ. **[16]**

೧೯. ಸರ್ಜಾ ರಂಗಪ್ಪ ನಾಯಕ। (ಕ್ರಿ.ಶ. ೧೮೦೪-೧೮೩೦)

ಸರ್ಜಾ ಕೃಷ್ಣಪ್ಪ ನಾಯಕನ ನಂತರ ಅವನ ತಮ್ಮ ರಂಗಪ್ಪ ನಾಯಕ ಈ ಪಾಳೇಪಟ್ಟಿನ ಅಧಿಕಾರ ವಹಿಸಿಕೊಂಡನು. ಇವನಿಗೆ ಸೀತಮ್ಮ ನಾಗತಿ ಎಂಬ ಸಹೋದರಿ ಇದ್ದು ಅವಳನ್ನು ರಘುನಾಥ ನಾಯಕನೆಂಬುವನಿಗೆ ವಿವಾಹ ಮಾಡಿಕೊಡಲಾಗಿತ್ತು. ರಘುನಾಥ ನಾಯಕನು ಸಂತೇಬೆನ್ನೂರು ಶೀಮೆಗೆ ಒಳಪಟ್ಟ ಕೆಲ ಪ್ರಾಂತ್ಯದ ಆಡಳಿತ ನಡೆಸುತ್ತಿದ್ದುದಾಗಿ ತಿಳಿದು ಬರುತ್ತದೆ. ಸರ್ಜಾ ರಂಗಪ್ಪ ನಾಯಕನಿಗೆ ಕ್ರಿ.ಶ. ೧೭೯೧ರಲ್ಲಿ ತಿಮ್ಮಮ್ಮ ನಾಗತಿ ಎಂಬುವಳೊಡನೆ ವಿವಾಹವಾಗಿತ್ತು. ಇದಲ್ಲದೆ ಇನ್ನು ಈರ್ವರು ಪತ್ನಿಯರು ಇವನಿಗೆ ಇದ್ದರು.

ಸರ್ಜಾ ರಂಗಪ್ಪ ನಾಯಕನು ಮೈಸೂರು ಚರಿತ್ರೆಯಲ್ಲಿ ಬಹಳ ಪ್ರಾಮುಖ್ಯತೆ ಗಳಿಸಿದ್ದನು. ಇವರು ೩-೪ನೆ ಮೈಸೂರು ಯುದ್ಧದಲ್ಲಿ ಭಾಗವಹಿಸಿದ್ದನು. ಟಿಪ್ಪುವಿನ ಮರಣಾನಂತರ (೧೭೯೯) ಮೈಸೂರಿನ ರಾಜಕೀಯ ಚಿತ್ರದಲ್ಲಿ ಭಾರಿ ಬದಲಾವಣೆ ಕಂಡು ಬಂತು. ಬ್ರಿಟಿಷರು ಟಿಪ್ಪುವನ್ನು ಗೆದ್ದು ದೇಶದ ಕೆಲಭಾಗದ ಆಡಳಿತವನ್ನು ಮೈಸೂರು ಮಹಾರಾಜರಿಗೆ ವಹಿಸಿಕೊಟ್ಟರು. ಇದರಿಂದ 'ಕುಂಪಣಿ' ಸರ್ಕಾರದ ಪರಮಾಧಿಕಾರ ರಾಜ್ಯದಲ್ಲಿ ಸ್ಥಾಪಿತವಾಯಿತು. ಕುಂಪಣಿ ಸರ್ಕಾರ ಶ್ರೀರಂಗಪಟ್ಟಣದಲ್ಲಿ ಒಂದು ದಂಡನ್ನಿಟ್ಟಿತ್ತು. ಇದು ಟಿಪ್ಪುಸುಲ್ತಾನನ ಪರವಾಗಿದ್ದ ಪಾಳೆಯಗಾರರಿಗೆ ಸರಿ ಬರುತ್ತಿರಲಿಲ್ಲ. ಹಾಗಾಗಿ ದೊಂಢಿಯಾವಾಘ್, ವೂರಿನ ಕೃಷ್ಣಪ್ಪ, ನಗರದ ಬೂದಿ ಬಸಪ್ಪ, ಸರ್ಜಾ ರಂಗಪ್ಪ ಸೇರಿ ಬ್ರಿಟಿಷರ ವಿರುದ್ಧ ದೊಡ್ಡ ಬಂಡಾಯವನ್ನು ಹೂಡಿದರು. ಇದು' ರಂಗಪ್ಪ ನಾಹಕರ ಅಡಾವುಡಿ'**[17]**ಎಂದು ಹೆಸರಾಯಿತು. ಬ್ರಿಟಿಷರು ಈ ದಂಗೆ ಅಡಗಿಸಿ ಸರ್ಜಾ ರಂಗಪ್ಪ ನಾಯಕನನ್ನು ಶ್ರೀರಂಗಪಟ್ಟಣದಲ್ಲಿ ನಿರ್ಬಂಧದಲ್ಲಿ ಇಟ್ಟಿದ್ದರು. ರಂಗಪ್ಪನಾಯಕನು ಉಪಾಯದಿಂದ ತಪ್ಪಿಸಿಕೊಂಡು ತರೀಕೆರೆಗೆ ಬಂದು ಮೈಸೂರು ಸೈನ್ಯದಲ್ಲಿ ಬೇಡರ ಕಂದಾಚಾರ ಸೀಪಾಯಿಗಳನ್ನೆಲ್ಲ ಒಟ್ಟು ಮಾಡಿ ಬ್ರಿಟಿಷರ ವಿರುದ್ಧ ಮತ್ತೆ ಹೋರಾಟ

ಮಾಡಿದನು. ಕ್ರಿ.ಶ. ೧೮೩೨ರಲ್ಲಿ ಜಾಗರ ತರ್ಪು ಗೊಣಕಲ್ಲು ಸಮೀಪ ಶತ್ರುಗಳು ಹಿಡಿಯುವುದಕ್ಕೆ ಬಂದಾಗ ಯುದ್ಧ ಮಾಡುತ್ತಾ ರಂಗಪ್ಪನಾಯಕ ವೀರಸ್ವರ್ಗ ಸೇರಿದನು. [18]

ಕೂಡ್ಲಿ-೬೧ ಶಾಸನದಂತೆ[19]ಕ್ರಿ.ಶ. ೧೮೧೪ರಲ್ಲಿ ಕೂಡ್ಲಿ-ಶೃಂಗೇರಿ ಮಠದ ಶ್ರೀ ನರಸಿಂಹ ಭಾರತಿ ಸ್ವಾಮಿಗಳಿಗೆ ತರೀಕೆರೆ ಕೆರೆಯ ಹಿಂದಿನ ತೋಟವನ್ನು ಈತ ಚಂದ್ರಮೌಳೇಶ್ವರ ವಿದ್ಯಾಶಂಕರ ದೇವರ ಸಹಾಯಾರ್ಥವಾಗಿ ದತ್ತಿ ಕೊಟ್ಟಿರುವುದಾಗಿ ತಿಳಿದು ಬರುತ್ತದೆ.

೩೦. ಸರ್ಜಾ ಹನುಮಪ್ಪ ನಾಯಕ –III (ಕ್ರಿ.ಶ. ೧೮೩೦-೧೮೩೨)

ಸರ್ಜಾ ರಂಗಪ್ಪ ನಾಯಕನ ನಂತರ ಅವನ ಮಗ ಸರ್ಜಾ ಹನುಮಪ್ಪ ನಾಯಕ ಪಾಳೇಪಟ್ಟಿನ ಅಧಿಕಾರ ವಹಿಸಿಕೊಂಡನು. ಜನಪದ ಸಾಹಿತ್ಯದಲ್ಲಿ ಈತನನ್ನು ಸಾವಿರಾಳು ಶಕುತಿಯೋನು, ಮೂರಾನೆ ಬಲದೋನು' ಎಂದು ಬಣ್ಣಿಸಲಾಗಿದೆ. ಈತನಿಗೆ ಸರ್ಜಪ್ಪ ನಾಯಕ ಎಂಬ ಹೆಸರು ರೂಢಿಯಲ್ಲಿತ್ತು. ಸರ್ಜಾ ಹನುಮಪ್ಪ ನಾಯಕ ವೀರ, ದೀರ, ಛಲಗಾರ, ಗಂಭೀರ, ಆಂಜನೇಯನ ಪರಮಭಕ್ತ, ಬಡವರ ಬಂಧು, ಜನತೆಯ ಅಚ್ಚು ಮೆಚ್ಚಿನ ನಾಯಕ. ತಂದೆಯ ನಂತರ ಬಂಡಾಯವನ್ನು ನಿರ್ದೇಶಿಸಿ ಯುವಕರ ಪಡೆಯನ್ನು ಕಟ್ಟಿ ಸರ್ಕಾರದ ವಿರುದ್ಧ ನಿಂತು ಇರಸಾಲನ್ನು ದೋಚಿ ಬಡವರಿಗೆ ಹಂಚ ತೊಡಗಿದನು. ಇವನು ತನ್ನ ಕಾರ್ಯಾಚರಣೆಯನ್ನು ಕಾಮನ ದುರ್ಗದಿಂದ ನಡೆಸುತ್ತಿದ್ದನು. ಇವನ ಉಪಟಳ ನಿಯಂತ್ರಿಸಲು ಇವನ ಪ್ರೇಯಸಿ ರಂಗಮ್ಮನ ಸಹಾಯದಿಂದ ಈತನನ್ನು ಬಂಧಿಸಲಾಯಿತೆಂದು ತಿಳಿದುಬರುತ್ತದೆ. ಈತನನ್ನು ೧೮೩೨ರಲ್ಲಿ ಬೆಂಗಳೂರಿನ ಗಟ್ಟಹಳ್ಳಿ ವನಪ್ರದೇಶದಲ್ಲಿ ಗಲ್ಲಿಗೆ ಹಾಕಲಾಯಿತೆಂದು ದಾಖಲೆಗಳು ತಿಳಿಸುತ್ತವೆ. [20]

ಕಡೂರು-೨೬ ಶಾಸನ[21]ದಂತೆ ಈ ಹನುಮಪ್ಪನಿಗೆ ಬಾಳಪ್ಪ ಎಂಬ ಸಹೋದರನಿದ್ದನೆಂದೂ ಈ ಅಣ್ಣ ತಮ್ಮಂದಿರಿಬ್ಬರಿಗೂ ಒಟ್ಟಿಗೆ ಫಾಶಿ ಶಿಕ್ಷೆ ವಿಧಿಸಲಾಗಿತ್ತೆಂದೂ, ತಿಳಿದು ಬರುತ್ತದೆ. ಬಹುಶಃ ಈತನ ತಂದೆ ರಂಗಪ್ಪನಾಯಕ ಮಗನ ಫಾಶಿ ಶಿಕ್ಷೆ ಆದ ನಂತರ ನಿಧನರಾದ ಹಾಗೆ ತೋರುತ್ತದೆ. ಇವನ ನಂರ ಸಂತೇಬೆನ್ನೂರು ನಾಯಕರ ರಾಜ್ಯದ ಆಡಳಿತ ಅಂತ್ಯ ಕಂಡಿತು.

ಕೊನೆಯ ಸಂತತಿ: ಸರ್ಜಾ ಹನುಮಪ್ಪ ನಾಯಕನ ನಂತರ ಈ ಪಾಳೇಪಟ್ಟಿನ ರಾಜ್ಯದ ಆಡಳಿತ ಮುಕ್ತಾಯವಾಯಿತು. ನಂತರ ಪಟ್ಟಾಭಿ ರಾಮಪ್ಪ ನಾಯಕ -II (ಕ್ರಿ.ಶ. ೧೮೩೩-೪೦) ಸರ್ಜಾ ಹನುಮಪ್ಪ – IV (೧೮೪೦-೮೮) ಪಟ್ಟಾಭಿರಾಮಪ್ಪ -II (೧೯೯೯-೧೯೨೦) ಸರ್ಜಾ ಹನುಮಪ್ಪ ನಾಯಕ V (೧೯೨೦=೧೯೪೭) ಸಂಪ್ರದಾಯದಂತೆ ತಮ್ಮ ವಂಶವನ್ನು ನಡೆಯಿಸಿದರು. ಇವರಿಗೆ ಬ್ರಿಟಿಷ್ ಸರ್ಕಾರ ನಿವೃತ್ತಿ ವೇತನವನ್ನು ಕೊಡಮಾಡಿತ್ತು. ಕೊನೆಯ ಸರ್ಜಾ ಹನುಮಪ್ಪ ನಾಯಕರಿಗೆ ಮಕ್ಕಳಿಲ್ಲದ ಪ್ರಯುಕ್ತ ಅವರ ನಂತರ ಅವರ ೩ನೇ ಹೆಂಡತಿ ಯಶೋದಮ್ಮ ನಾಗತಿ ಈ ಪಾಳೆಪಟ್ಟಿನ ಅಧಿಕಾರ ವಹಿಸಿಕೊಂಡರು. ಅವರು ಒಬ್ಬ ಗಂಡು ಮತ್ತು ಓರ್ವ ಹೆಣ್ಣು ಮಗುವನ್ನು ದತ್ತು ತೆಗೆದುಕೊಂಡಿದ್ದರು. ಅವರು ಅಕಾಲ ಮರಣಕ್ಕೆ ತುತ್ತಾದ್ದರಿಂದ ವಾರಸುದಾರರಿಲ್ಲದೆ ಈ ಪಾಳೆಪಟ್ಟು ಅವಸಾನಗೊಂಡಿತ್ತು. ಯಶೋದಮ್ಮ ನಾಗತಿ ತಮ್ಮ ಅಂತ್ಯ ಕಾಲದಲ್ಲಿ ಮರಣಶಾಸನ ಬರೆದು ತಮ್ಮ ನಂತರ ಎಲ್ಲಾ ಆಸ್ತಿಯನ್ನು ಚಿತ್ರದುರ್ಗದ ಶ್ರೀ ಮರುಘರಾಜೇಂದ್ರ ಬೃಹನ್ಮಠಕ್ಕೆ ಸೇರುವಂತೆ ದಾನ ಕೊಟ್ಟು ನಿಧನರಾದರು. (೧೯೮೬). ಇವರ ನಿಧನದೊಂದಿಗೆ ಮೂರು ಶತಮಾನ ಕಾಲ ಆಳಿದ ಒಂದು ರಾಜವಂಶ ಅಂತ್ಯಗೊಂಡಿತು. ತರೀಕೆರೆಯಲ್ಲಿ ಅವರಿದ್ದ ಅರಮನೆ ಜಾಗದಲ್ಲಿ ಈಗ ಒಂದು ಪ್ರೌಢಶಾಲೆಯನ್ನು ಅವರ ಹೆಸರಿನಲ್ಲಿ ಚಿತ್ರದುರ್ಗದ ಬೃಹನ್ಮಠ ನಡೆಸುತ್ತಿದೆ. ಯಶೋದಮ್ಮ ನಾಗತಿಯವರು ತಮ್ಮ ಮನೆತನದ ವಿವಿಧ ವಿಚಾರಗಳನ್ನು ತಮ್ಮ ಕೈಬರಹದ ಒಂದು ಪುಸ್ತಕದಲ್ಲಿ ಬರೆದಿಟ್ಟಿದ್ದಾರೆ. ಇದರಲ್ಲಿ ಈ ನಾಯಕ ಸಂತತಿಯ ಅಂತಿಮ ಚಿತ್ರ ನಮಗೆ ತಿಳಿದು ಬರುತ್ತದೆ.

ನಾಗತಿಯರು : ಸಂತೇಬೆನ್ನೂರು ನಾಯಕರ ಬಗ್ಗೆ ತಿಳಿದಷ್ಟು ಸಂಗತಿಗಳು ಅವರ ಮನೆತನದ ಹೆಣ್ಣು ಮಕ್ಕಳ ಬಗ್ಗೆ ನಮಗೆ ತಿಳಿಯಬರುವುದಿಲ್ಲ. ಈ ಮನೆತನದ ಕೈಫಿಯತ್ತಿನಲ್ಲಿ, ಕೃಷ್ಣಶರ್ಮನ ಸರಜಾ ಹನುಮೇಂದ್ರ ಯಶೋವಿಲಾಸಂ ಕೃತಿಯಲ್ಲಿ ಹಾಗೂ ಜಾನಪದ ಸಂಗ್ರಹಗಳಲ್ಲಿ ಈ ವಂಶದ ಕೆಲವು ನಾಗತಿಯರ ಬಗ್ಗೆ ವಿವರಗಳು ದೊರೆಯುತ್ತವೆ.

ಬೇಡರ ಯುವತಿಯನ್ನು ಮದುವೆಯಾಗಿ ಬಸವಾಪಟ್ಟಣದಲ್ಲಿ ನೆಲೆನಿಂತ ವಿಜಯನಗರದ ಸೈನ್ಯಾಧಿಕಾರಿ ಧೂಮರಾಜ ಈ ಪಾಳೇಪಟ್ಟಿನ ಉಗಮನಕ್ಕೆ ಕಾರಣನಾದ ಎಂದು ತಿಳಿದು ಬರುತ್ತದೆ. ಅದರ ಪಕ್ಕದಲ್ಲಿರುವ ಕಂಚುಗಾರನಹಳ್ಳಿಯಲ್ಲಿ ಹನುಮಪ್ಪ ನಾಯಕನ ಹೆಂಡತಿ ಗಿರಿಯಪ್ಪ ನಾಗತಿ ಕ್ರಿ.ಶ. ೧೪೯೦ರಲ್ಲಿ ಒಂದು ಕೆರೆ ಕಟ್ಟಿಸಿದ್ದಾಗಿ ಸಾಸುವೆ ಹಳ್ಳಿ ಕೈಫಿಯತ್ತಿ[22]ನಿಂದ ತಿಳಿದು ಬರುತ್ತದೆ.

ಚಿತ್ರದುರ್ಗ ಪಾಳೇಗಾರರಿಗೂ ಇವರಿಗೂ ನೆಂಟಸ್ಥಿಕೆ ಇತ್ತೆಂದೂ ಸರ್ಜಾ ಹನುಮಪ್ಪ ನಾಯಕನ ಮಗ ಸೀತಾರಾಮಪ್ಪ ನಾಯಕನ ಮಗ ಪಟ್ಟಾಭಿರಾಮಪ್ಪ ನಾಯಕನಿಗೆ ದುರ್ಗದ ಭರಮಣ್ಣ ನಾಯಕನ ಮಗಳನ್ನು ಕೊಟ್ಟು ವಿವಾಹವಾಗಿತ್ತೆಂದು ಯಗಟಿ ಕೈಫಿಯತ್ತಿನಲ್ಲಿ[23] ಉಲ್ಲೇಖವಿದೆ.

ಕೃಷ್ಣಶರ್ಮನ *ಸರಜಾ ಹನುಮೇಂದ್ರ ಯಶೋ ವಿಲಾಸಂ*ನಲ್ಲಿ ಸರಜಾ ಹನುಮಪ್ಪ ನಾಯಕನ ಹೆಂಡತಿಯ ಹೆಸರು ಗಂಗಾಂಬಿಕೆಎ ಎಂಬುದಾಗಿ ತಿಳಿಸುತ್ತಾನೆ. ಕ.ರಾ.ಕೃ. ಸಂಗ್ರಹಿಸಿರುವ ರಂಗಪ್ಪನಾಯಕನ ಕುರಿತು ಪಾಳೇಗಾರರ ಪದಗಳು ಇದರಲ್ಲಿ ರಂಗಪ್ಪ ನಾಯಕನಿಗೆ ಕಾವೇರಮ್ಮ ಎಂಬ ಹೆಂಡತಿ, ಲಕ್ಷ್ಮವ್ವ ನಾಘತಿ ಎಂಬ ಮಗಳೂ, ಇವರ ಅಣ್ಣ ಹನುಮಪ್ಪ ನಾಯಕನಿಗೆ ತಿಮ್ಮಮ್ಮ ನಾಗತಿ ಎಂಬ ಮಗಳು ಇದ್ದು ಇವಳನ್ನು ಕುಪ್ಪಂ ಪಾಳೇಗಾರನಿಗೆ ೧೮೯೧ರಲ್ಲಿ ಮದುವೆ ಮಾಡಿಕೊಟ್ಟುದ್ದಾಗಿ ತಿಳಿದು ಬರುತ್ತದೆ.

ಹರಪನಹಳ್ಳಿ ಪಾಳೇಗಾರರ ಮೂಲ ಪುರುಷ ದಾದಾ ನಾಯಕ[24]ತರೀಕೆರೆ ನಾಯಕರ ಮಗಳು ಹನುಮ ನಾಗತಿಯನ್ನು ವಿವಾಹ ಮಾಡಿಕೊಂಡಿದ್ದಾಗಿಯೂ, ಹಾಗೆಯೇ ಚಿತ್ರದುರ್ಗ ಪಾಳೇಗಾರ ಚಿಕ್ಕಣ್ಣ ನಾಯಕನಿಗೆ ಹನುಮವ್ವ ನಾಗತಿ ಎಂಬುವವಳನ್ನೂ ಕೊಟ್ಟು ೧೬೭೯ರಲ್ಲಿ ಮದುವೆಯಾಗಿ[25]ಈರ್ವರ ನಡುವೆ ಇದ್ದ ಅಂತಃಕಲಹ ಶಮನವಾಗಿತ್ತೆಂದೂ ತಿಳಿದುಬರುತ್ತದೆ. ಸರ್ಜಾ ರಂಗಪ್ಪ ನಾಯಕನಿಗೆ ಸೀತಮ್ಮ ನಾಗತಿ ಎಂಬ ಸಹೋದರಿ ಇದ್ದು ಅವಳನ್ನು ರಘುನಾತ ನಾಯಕನೆಂಬುವವನಿಗೆ ಮದುವೆ ಮಾಡಿಕೊಡಲಾಗಿತ್ತು. ‘ಹೊನ್ನ ಬಿತ್ತೇವು ಹೊಲಕೆಲ್ಲಾ’ ಎಂಬ ಗ್ರಂಥದಲ್ಲಿ ಲೇಖಕ ಮತಿಘಟ್ಟ ಕೃಷ್ಣಮೂರ್ತಿ ಕೆಲ ನಾಗತಿಯರ ಹೆಸರನ್ನು ಉಲ್ಲೇಖಿಸುತ್ತಾರೆ. ಅದರಂತೆ ನಿಚ್ಚ ಮದುವಣಿಗ ಹನುಮಪ್ಪ ನಾಯಕನಿಗೆ (೧೭೨೧-೨೨) ಸುಬ್ಬಮ್ಮ ನಾಗತಿ ಎಂಬ ಹೆಂಡತಿ, ಅವನ ಮಗ ಸರ್ಜಾ ಕೃಷ್ಣಪ್ಪನಿಗೆ ಲಕ್ಷ್ಮವ್ವ ನಾಗತಿ ಎಂಬ ಪತ್ನಿ, ಸರ್ಜಾ ರಂಗಪ್ಪ ನಾಯಕನಿಗೆ ತಿಮ್ಮಮ್ಮ ನಾಗತಿ, ದೊಡ್ಡಮ್ಮ ನಾಗತಿ ಎಂಬೀರ್ವರು ಪತ್ನಿಯರು ಇದ್ದರು ಎಂದು ತಿಳಿಸುತ್ತಾರೆ. ಸರ್ಜಾ ರಂಗಪ್ಪ ನಾಯಕನ ಮೊಮ್ಮಗ ರಂಗಪ್ಪನಾಯಕನಿಗೆ ಭಾಗಮ್ಮ ಎಂಬ ಮಗಳಿದ್ದಳೆಂದೂ ಅವಳನ್ನು ಕೆಂಗುಂದಿ ಕುಪ್ಪಂ ಪಾಳೇಗಾರರಿಗೆ ಕೊಟ್ಟು ಮದುವೆ ಮಾಡಿಕೊಟ್ಟಿದ್ದರು. ಇದೇ ಕೆಂಗುಂದಿ ಕುಪ್ಪಂ ಮನೆತನದ ತಿಮ್ಮಾಜಮ್ಮ ಎಂಬ ಇಂಗ್ಲೀಷ್ ಕಲಿತ ಹೆಣ್ಣನ್ನು ಪಟ್ಟಾಭಿರಾಮಪ್ಪ ಮದುವೆ ಆಗಿದ್ದನು. ಪಟ್ಟಾಭಿರಾಮಪ್ಪನ ಮಗ ಸರ್ಜಾ ಹನುಮಪ್ಪ ನಾಯಕನ ಮೊದಲ ಪತ್ನಿ ಕುಪ್ಪಂನ ಸಾವಿತ್ರಮ್ಮ ನಾಗತಿ. ಆಕೆ ಮಕ್ಕಳಿಲ್ಲದೆ ನಿಧನಳಾದಳು. ಎರಡನೇ ಹೆಂಡತಿ ಶುಂಡಿಯ ನಾಗಮ್ಮ ನಾಗತಿ. ತೌರಿನಲ್ಲೇ ಇದ್ದಳು. ಮೂರನೇ ಹೆಂಡತಿ ಚಿತ್ರದುರ್ಗದ ಬಿಚ್ಚುಗತ್ತಿ ಮದಕರಿ ನಾಯಕನ ಮಗಳು ಯಶೋದಮ್ಮ ನಾಗತಿ ಇವರೇ ಈ ಪಾಳೇಪಟ್ಟಿನ ಕಡೆಯ ನಾಗತಿಯೂ ಹೌದು.

ಕೂಡ್ಲಿ-ಶೃಂಗೇರಿ ಮಠ ಮತ್ತು ಸಂತೇಬೆನ್ನೂರು ನಾಯಕರು

೮ನೇ ಶತಮಾನದಲ್ಲಿ ಆದಿ ಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಅಮ್ನಾಯ ಪೀಠಗಳಲ್ಲಿ ಶೃಂಗೇರಿಯೂ ಒಂದು. ಶೃಂಗೇರಿಯಲ್ಲಿ ಸ್ಥಾಪಿಸಿದ ಅದ್ವೈತ ಪೀಠವನ್ನು ಅವರ ಶಿಷ್ಯರಾದ ಸುರೇಶ್ವರಾಚಾರ್ಯರಿಂದ ಪ್ರಾರಂಭಿಸಿ ೨೧ನೇ ಪೀಠಾಧೀಶ್ವರರಾದ ರಾಮಚಂದ್ರ ಭಾರತಿ ಸ್ವಾಮಿಗಳ ಶಿಷ್ಯರಾದ ಶ್ರೀ ನರಸಿಂಹ ಭಾರತಿ ಸ್ವಾಮಿಗಳು ಮುಂದುವರೆಸಿಕೊಂಡು ಬಂದರು. ಅವರು ಮಹಾಯಾತ್ರೆ ಕೈಗೊಂಡು ಉತ್ತರದ ಬದರಿ, ಕಾಶೀಯಾತ್ರೆಗೆ ಹೋಗಿ ಬಹಳ ದಿನಗಳಾದರೂ ಹಿಂತಿರುಗಿ ವಾಪಾಸ್ಸು ಸ್ವಕ್ಷೇತ್ರಕ್ಕೆ ಬರಲೇ ಇಲ್ಲ. ಆಗ ಅವರ ಶಿಷ್ಯರು ಪೀಠವನ್ನು ಖಾಲಿ ಬಿಡುವುದು ಸರಿಯಲ್ಲ ಎಂದು ನಿರ್ಧರಿಸಿ ಬೇರೊಬ್ಬರನ್ನು ಶೃಂಗೇರಿ ಸಂಸ್ಥಾನದ ಪೀಠಾಧಿಕಾರಿಗಳಾಗಿ ಆರಿಸಿಕೊಂಡು ಎಲ್ಲಾ ಆಡಳಿತ ಅವರಿಂದ ಮುಂದುವರೆಸಿದರು. ಅವರನ್ನು ಅಭಿನವ ನರಸಿಂಹ ಭಾರತಿ ಸ್ವಾಮಿಗಳು ಎನ್ನಲಾಗಿದೆ. ಅನಂತರ ಕಾಶೀಯಾತ್ರೆಗೆ ಹೋಗಿದ್ದ ಶ್ರೀ ನರಸಿಂಹ ಭಾರತಿ ಸ್ವಾಮಿಗಳು ವಾಪಾಸ್ಸು ತಮ್ಮ ಯಾತ್ರೆ ಮುಗಿಸಿಕೊಂಡು ಕ್ರಿ.ಶ. ೧೫೪೭ರಲ್ಲಿ ಕೂಡಲ ಸಂಗಮ ಕ್ಷೇತ್ರಕ್ಕೆ ಬಂದು ಮುಕ್ಕಾಂ ಮಾಡಿದ್ದರು. ಆ ಸಮಯದಲ್ಲಿ ತಮ್ಮ ಆಡಳಿತಕ್ಕೊಳಪಟ್ಟಿದ್ದ ಕೂಡ್ಲಿ ಕ್ಷೇತ್ರಕ್ಕೆ ಭೇಟಿ ಕೊಟ್ಟಿದ್ದ ಸಂತೇಬೆನ್ನೂರು ನಾಯಕರು ಅವರನ್ನು ದರ್ಶನ ಮಾಡಿದಾಗ, ತಾವು ಪೀಠಾಧಿಕಾರಿಗಳಾಗಿದ್ದ ಶೃಂಗೇರಿ ಪೀಠಕ್ಕೆ ಬೇರೊಬ್ಬರನ್ನು ನೇಮಕ ಮಾಡಿರುವ ವಿಚಾರ ಅವರ ಗಮನಕ್ಕೆ ತಂದರು. ಸಂತೇಬೆನ್ನೂರು ನಾಯಕರು ಆ ಸ್ವಾಮಿಗಳಿಗೆ ಅವರು ಅಲ್ಲಿಯೇ ಒಂದು ಪ್ರತ್ಯೇಕ ಮಠ ಸ್ಥಾಪಿಸಿ ನೆಲಸುವಂತೆಯೂ, ಅದಕ್ಕಾಗಿ ಬೇಕಾದ ಸಹಾಯ, ಸಹಕಾರ, ಆರ್ಥಿಕ ನೆರವು ತಾವು ನೀಡುವುದಾಗಿ ಆಶ್ವಾಸನೆ ನೀಡಿ ಆ ಮಠಕ್ಕೆ ಒಂದು ಮಂದಿರವನ್ನು ಕಟ್ಟಿಸಿ ಕೊಟ್ಟಿದ್ದಲ್ಲದೆ ಹಲವು ದತ್ತಿ, ದಾನ, ಕೊಟ್ಟಿದ್ದಾಗಿ ತಿಳಿದು ಬರುತ್ತದೆ. ಸಂತೇಬೆನ್ನೂರು ನಾಯಕರ ಪ್ರೇರಣೆಯಂತೆ ಶ್ರೀ ನರಸಿಂಹ ಭಾರತಿಗಳು ಕೂಡಲಿ-ಶೃಂಗೇರಿ ಮಠ ಎಂಬ ಹೊಸ ಮಠವೊಂದನ್ನು ಸ್ಥಾಪಿಸಿ ಅಲ್ಲಿಯೇ ನೆಲೆ ನಿಂತರು. ಹೀಗೆ ಸಂತೇಬೆನ್ನೂರು ನಾಯಕರಿಂದ ಒಂದ ಹೊಸ ಗುರುಪರಂಪರೆ ಉದಯವಾಯಿತು. ಇದರ ದ್ಯೋತಕವಾಗಿ ಇಂದಿಗೂ ಶ್ರೀಕೂಡ್ಲಿ-ಶೃಂಗೇರಿ ಮಠದಲ್ಲಿ ಈ ನಾಯಕರ ಉಬ್ಬುಶಿಲ್ಪ ಒಂದಕ್ಕೆ ಮಠದಿಂದ ಈಗಲೂ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ.

*ಕೂಡ್ಲಿ ಶೃಂಗೇರಿ ಮಠದ ಪ್ರಾಚೀನ ಶಾಸನ ಲೇಖನ ಸಂಗ್ರಹ ಪುಸ್ತ*ಕದಲ್ಲಿ ಸಂತೇಬೆನ್ನೂರು ನಾಯಕರು ಆ ಮಠಕ್ಕೆ ಬರೆಯಿಸಿಕೊಟ್ಟ ೧೫ ಶಾಸನ, ಸನ್ನದುಗಳ ಉಲ್ಲೇಖವಿದೆ. ಈ ಶಾಸನಗಳಿಂದ ಸಂತೇಬೆನ್ನೂರು ನಾಯಕರು ಈ ಮಠದೊಂದಿಗೆ ಉತ್ತಮ ಸಂಬಂಧ ಹೊಂದಿದ್ದರೆಂಬುದಾಗಿಯೂ ಮತ್ತು ಅವರು ಈ ಮಠದ ಶಿಷ್ಯರಾಗಿ ನಡೆದುಕೊಳ್ಳುತ್ತಿದ್ದುದಾಗಿಯೂ ತಿಳಿದು ಬರುತ್ತದೆ. **[26]**

ಸಂತೇ ಬೆನ್ನೂರು ನಾಯಕರು ಕೂಡ್ಲಿ ಶೃಂಗೇರಿ ಮಠಕ್ಕಲ್ಲದೆ ಮೂಲ ಶೃಂಗೇರಿ ಮಠಕ್ಕೆ ಹಲವಾರು ದತ್ತಿ-ದಾನ ಕೊಟ್ಟಿದ್ದು ಇದಲ್ಲದೆ ಕೂಡ್ಲಿಯಲ್ಲಿದ್ದ ಆರ್ಯ ಅಕ್ಷೋಭ್ಯತೀರ್ಥ ಸ್ವಾಮಿ ಮಠಕ್ಕೂ, ಸ್ವಾದೆ ಮಠಕ್ಕೂ**[27]** ಹಲವು ಜಮೀನು ದಾನ ಬಿಟ್ಟಿರುವುದಾಗಿ ತಿಳಿದು ಬರುತ್ತದೆ. ಸಂತೇಬೆನ್ನೂರಿನಲ್ಲಿದ್ದ ಮಹಂತಮಠ, ಸಿದ್ಧಲಿಂಗಮಠ**[28]**ಮುಂತಾದ ವೀರಶೈವ ಮಠಗಳಿಗೂ ಈ ನಾಯಕರು ದತ್ತಿ ಬಿಟ್ಟ ಬಗ್ಗೆ ಉಲ್ಲೇಖಗಳಿವೆ.

[1] *ಎ.ಕ.* ಸಂ.೬ ಕಡೂರು ತಾಲ್ಲೂಕು ಆಲದಹಳ್ಳಿ ಶಾಸನ

[2] *ಅದೇ* ತರೀಕೆರೆ ತಾಲ್ಲೂಕು ತಾಮ್ರಶಾಸನ

[3]*ಶ್ರೀ ಕೂಡ್ಲಿ ಶೃಂಗೇರಿ ಮಠದ ಶಾಸನಗಳು*

[4]ಎ.ಕ.ಸಂ. ೬ ಕಡೂರು ಜಿಲ್ಲಾ ತರೀಕೆರೆ ತಾಲ್ಲೂಕು ತಾಮ್ರಶಾಸನ

[5]*ಸೌ. ಇಂ. ಇ.* XVIII ಧಾರವಾಡ ೪೨, ೭೭ ಪುಟ ೧೮೮

[6]*ತ. ಪಾ* ಪುಟ – ೫೦

[7]ಎ.ಕ. ಸಂ. – ೬ ಕಡೂರು ಜಿಲ್ಲಾ ಚಿಕ್ಕಮಗಳೂರು ತಾಲ್ಲೂಕು ಬೆಂಡುಗ ಶಾಸನ

[8]*ಅದೇ* ತರೀಕೆರೆ ತಾಲ್ಲೂಕು ಹುಲ್ಲಿ ತಿಮ್ಮಾಪುರ ಶಾಸನ

[9]*ಶ್ರೀ ಕೂಡ್ಲಿ – ಶೃಂಗೇರಿ ಮಠದ ಶಾಸನಗಳು*

[10]*ಎಂ.ಎ. ಆರ್.* – ೧೯೨೭ ಕಡೂರು ಜಿಲ್ಲಾ ಅರಸಿನ ಗುಪ್ಪೆ ಗ್ರಾಮಶಾಸನ

[11]*ಶ್ರೀ ಕೂಡ್ಲಿ ಶೃಂಗೇರಿ ಮಠದ ಶಾಸನಗಳು*

[12]*ತರೀಕೆರೆ ಕೈಫಿಯತ್ತು*

[13]*ಶ್ರೀ ಕೂಡ್ಲಿ ಶೃಂಗೇರಿ ಮಠದ ಶಾಸನಗಳು*

[14]*ಶೃಂಗೇರಿ ಮಠದ ಕಡತ*

[15]*ತ.ಪಾ.* – ಪುಟ.೫೨

[16]*ಕರ್ನಾಟಕ ಪರಂಪರೆ* ಸಂ. ೨ ಕರ್ನಾಟಕ ಸರಕಾರ ಬೆಂಗಳೂರು ಪುಟ .೨೦೨

[17]*ತ.ಪಾ.* ಪುಟ – ೩೯

[18]*ಹೊನ್ನ ಬಿತ್ತೇವು ಹೊಲಕ್ಕೆಲ್ಲಾ* (ಜಾನಪದ ಸಾಹಿತ್ಯ ಸಮ್ಮೇಳನ ತರೀಕೆರೆ) ಸ್ಮರಣ ಸಂಚಿಕೆ ಪುಟ.೨೪

[19]*ಕೂಡ್ಲಿ – ಶೃಂಗೇರಿ ಮಂಠದ ಶಾಸನಗಳು*

[20]*ತಪಾ* – ಪುಟ ೪೨

[21]*ಎಂ.ಎ.ಆರ್.* – ೧೯೨೫ ಕಡೂರು ಜಿಲ್ಲಾ ಶಾಸನಗಳು (ಕೋಲಾರ ವೆಂಕಟರಾಯರಲ್ಲಿದ್ದು ಸನ್ನದಿನಂತೆ)

[22]*ಕಕೈ* ಪುಟ. ೧೦೨

[23]*ಅದೇ*

[24]ಕುಂ.ಬಾ. ಸದಾಶಿವಪ್ಪ *ಹರಪನಹಳ್ಳಿ ಪಾಳೆಯಗಾರರು,* ಬೆಂಗಳೂರು ೧೯೯೬, ಪುಟ – ೧೩

[25]ಎಂ.ಎಸ್.ಪುಟ್ಟಣ್ಣ *ಚಿತ್ರದುರ್ಗ ಪಾಳೆಯಗಾರರು,* ಮೈಸೂರು ೧೯೯೭, ಪುಟ. ೪೧

[26]*ಶ್ರೀ ಕೂಡ್ಲಿ ಶೃಂಗೇರಿ ಮಠದ ಶಾಸನಗಳು*

[27]*ಎಂ.ಎ.ಆರ್.* – ೧೯೭೫ (ಶಾಸನ ಬೆಂಗಳೂರು – ೧೨)

[28]*ಎ.ಕ.* ಸಂ.೭ (ಶಿವಮೊಗ್ಗ ಶಾಸನ ಚನ್ನಗಿರಿ – ೨೫ ಹಿರೇಕೋಗಲೂರು ಶಾಸನ)

ಮಲೆಕರ್ನಾಟಕದ ಅರಸು ಮನೆತನಗಳು: ೧೩. ಸಂತೆಬೆನ್ನೂರು ನಾಯಕರು (೪)

ಸಂತೇಬೆನ್ನೂರು ನಾಯಕರ ಕಾಲದ ಸಾಹಿತ್ಯ

ಸಂತೇಬೆನ್ನೂರು ನಾಯಕರ ಆಡಳಿತ ಬಾಷೆ ಕನ್ನಡವಾಗಿತ್ತು. ಅವರ ಎಲ್ಲಾ ಶಾಸನಗಳೂ ಕನ್ನಡದಲ್ಲಿಯೇ ಇವೆ. ಎರಡು ಶಾಸನಗಳಲ್ಲಿ ಮಾತ್ರ ನಾಗರೀ ಲಿಪಿ ಬಳಸಿರುತ್ತಾರೆ.

ಕನ್ನಡದ ಪ್ರಮುಖ ಚಾರಿತ್ರಿಕ ಕಾವ್ಯಗಳಾದ ಕೆಳದಿನೃಪವಿಜಯ, ಕಂಠೀರವ ನರಸರಾಜ ವಿಜಯ, ಚಿಕ್ಕ ದೇವರಾಜ ವಿಜಯಗಳಲ್ಲಿ ಈ ನಾಯಕರ ಕುರಿತು ಹಲವು ಮಾಹಿತಿಗಳು ದೊರೆಯುತ್ತವೆ. ೧೭ನೇ ಶತಮಾನದ ಉತ್ತರಾರ್ಧದಲ್ಲಿದ್ದ ಕೃಷ್ಣಶರ್ಮ ಎಂಬ ಭಾರದ್ವಾಜ ಗೋತ್ರದ ಬ್ರಾಹ್ಮಣ ಕವಿ 'ಸರಜಾ ಹನುಮೇಂದ್ರ ಯಶೋವಿಲಾಸಂ' ಎಂಬ ಕಂದ-ವೃತ್ತ-ಷಟ್ಪದಿ-ಸಾಂಗತ್ಯ ಗದ್ಯಗಳಿಂದ ಕೂಡಿದ ವಿಶಿಷ್ಟ ಚಂಪೂ ಶೈಲಿಯಲ್ಲಿ ಈ ನಾಯಕರ ವಂಶಾವಳಿ ಕುರಿತು ಒಂದು ಗ್ರಂಥ ಬರೆದಿದ್ದಾನೆ. ಈ ಕಾವ್ಯವು ತರೀಕೆರೆ ಎರಡನೇ ಸರಜಾ ಹನುಮನ ಕುರಿತಾಗಿದೆ. ಕಾವ್ಯಕ್ಕೆ ಹೆಚ್ಚು ಇಂಬುಕೊಟ್ಟು ಈ ಗ್ರಂಥ ಚಾರಿತ್ರಿಕ ಇತಿಹಾಸಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಟ್ಟಿಲ್ಲ. ಇದು ಕಲ್ಪನೆ ಹಾಗೂ ಇತಿಹಾಸ ಮಿಶ್ರಿತವಾದ ಕಾವ್ಯ. ಕವಿ ತರೀಕೆರೆಯಲ್ಲಿ ನೆಲೆಸಿದ್ದು ಆ ನಾಯಕನ ಆಸ್ಥಾನದಲ್ಲಿ ಕೆಲಕಾಲ ಇದ್ದು ತನ್ನ ಕಣ್ಣಳತೆಗೆ ಸಿಕ್ಕಿದ ಅನುಭವಗಳನ್ನು ಕಾವ್ಯದಲ್ಲಿ ದಾಖಲಿಸಿದ್ದಾನೆ. ಇದನ್ನು ಮೈಸೂರು ವಿಶ್ವವಿದ್ಯಾನಿಲಯ ಈಚೆಗೆ ಪ್ರಕಟಿಸಿದ್ದು

[1] ಇದರ ಮೂರು ಮೂಲ ಪ್ರತಿಗಳು ಮೈಸೂರಿನಲ್ಲಿವೆ. [2]
ಈ ಕಾವ್ಯದಲ್ಲಿ ಕಂದ ವೃತ್ತಗಳು ವಿರಳವಾಗಿಯೂ, ಸಾಂಗತ್ಯ ಪ್ರಮುಖವಾಗಿಯೂ ಕಾಣಿಸಿಕೊಂಡಿದೆ. ಇದರಲ್ಲಿ ೫ ಆಶ್ವಾಸಗಳಿವೆ. ಮೊದಲ ಆಶ್ವಾಸದಲ್ಲಿ ಸರಜಾ ಹನುಮಪ್ಪ ನಾಯಕನ ವಂಶಾವಳಿಯ ಮೂಲ ಹಾಗೂ ಅವರ ಸಾಹಸ. ದ್ವಿತೀಯ ಆಶ್ವಾಸದಲ್ಲಿ ಹನುಮಪ್ಪ ನಾಯಕ, ಆತನ ಪತ್ನಿ ಗಂಗಾಬಿಕೆ, ಬಗ್ಗೆ ವರ್ಣನೆ, ತೃತೀಯ ಆಶ್ವಾಸದಲ್ಲಿ ರಾಜಪರಿವಾರದ ಬೇಟೆಯ ವರ್ಣನೆ, ಚತುರ್ಥ ಆಶ್ವಾಸದಲ್ಲಿ ಸರಜಾ ಹನುಮ ಯಗಟಿ ಮಲ್ಲಿಕಾರ್ಜುನ ಜಾತ್ರೆಗೆ ಹೋದ ವಿವರ, ಪಂಚಮ ಆಶ್ವಾಸದಲ್ಲಿ ರಾಜ್ಯಭಾರ ವರ್ಣನೆ ಇದ್ದು ಈ ಕೃತಿಯು ಆ ಕಾಲದ ಚಾರಿತ್ರಿಕ, ಸಾಹಿತಿಕ ಸಂಗತಿ ತಿಳಿಸುತ್ತಿದ್ದು ತನ್ನದೇ ಆದ ಸ್ಥಾನವನ್ನು ಕನ್ನಡ ಐತಿಹಾಸಿಕ ಕಾವ್ಯಗಳ ಸಾಲಿನಲ್ಲಿ ಪಡೆಯುತ್ತದೆ. ಕವಿಯ ಕಾಲ ಸು. ೧೭೦೦ ಎಂದು ಕವಿ ಚರಿತೆಕಾರರು ನಿರ್ಣಯಿಸಿದ್ದಾರೆ. ಕವಿಯ ಪಿತಾಮಹ ಅಪ್ಪಾಜಿ ಮೈಸೂರು ಅರಮನೆಯ

ದ್ವಾರಾಧ್ಯಕ್ಷನಾಗಿದ್ದನೆಂದೂ, ಅವರು ಮೂಲ ತಮಿಳುನಾಡಿನ ಅಚ್ಚ ವೆಂಗಿ ಪುರದವರೆಂದು ತಿಳಿದು ಬರುತ್ತದೆ.

ಫ್ರಾನ್ಸಿಸ್ ಬುಕಾನನ್ ಹಾಗೂ ಕರ್ನಲ್ ಮೆಕೆಂಜಿಯವರು ಈ ನಾಯಕರ ಬಗ್ಗೆ ಹಲವಾರು ಮಾಹಿತಿಗಳನ್ನು ಕಲೆಹಾಕಿ ತಮ್ಮ ಪ್ರವಾಸಿ ಕಥನ,[3] ಕೈಫಿಯತ್ತು ಸಂಗ್ರಹ[4]ಗಳಲ್ಲಿ ಪ್ರಕಟಿಸಿದ್ದಾರೆ. ಬಿ.ಎಲ್.ರೈಸ್ರವರು ತಮ್ಮ ಶಾಸನ ಸಂಪುಟದಲ್ಲಿ ಈ ನಾಯಕರ ೨೬ ಶಾಸನ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಇವುಗಳಿಂದ ಆಗಿನ ಕಾಲದ ಆಡಳಿತ, ಕೃಷಿ ಪದ್ಧತಿ, ವಾಣಿಜ್ಯ, ವ್ಯವಹಾರ, ಜನಜೀವನ, ಧಾರ್ಮಿಕ-ಜೀವನ, ಸಾಹಿತ್ಯ ಕಲೆ ಇತ್ಯಾದಿ ವಿವರ ತಿಳಿಯಬಹುದಾಗಿದೆ.

ಈ ವಂಶದ ರಂಗಪ್ಪನಾಯಕ ಮತ್ತು ಆತನ ಮಗ ಸರ್ಜಪ್ಪ ನಾಯಕನ ಕುರಿತು ಅನೇಕ ಲಾವಣಿಗಳು, ಜಾನಪದ ಕಥೆಗಳು ಜನರ ಬಾಯಲ್ಲಿ ಈಗಲೂ ಇದ್ದು, ಇವುಗಳಲ್ಲಿ ಕೆಲವನ್ನು ಪಾಳೇಯಗಾರರ ಪದಗಳು ಕೃತಿಯಲ್ಲಿ ಖ್ಯಾತ ಜನಪದ ಸಂಗ್ರಾಹಕ ಕ.ರಾ.ಕೃ. ಅವರೂ, ಗೀತೆಗಳು ಹಾಗೂ ನಾಡಪದಗಳು ಎಂಬ ಪುಸ್ತಕಗಳಲ್ಲಿ ಖ್ಯಾತ ಜಾನಪದ ಸಂಗ್ರಾಹಕ ಮತಿಘಟ್ಟ ಕೃಷ್ಣಮೂರ್ತಿ ಅವರೂ ಪ್ರಕಟಿಸಿರುವುದಲ್ಲದೆ 'ಹೊನ್ನ ಬಿತ್ತೇವು ಹೊಲಕೆಲ್ಲಾ' ಸ್ಮರಣ ಸಂಚಿಕೆಯಲ್ಲಿ ಮತಿಘಟ್ಟ ಕೃಷ್ಣಮೂರ್ತಿ ಕೆಲವು ಲಾವಣಿಗಳನ್ನು ಪ್ರಕಟಿಸಿದ್ದಾರೆ. ಡಾ. ಚಂದ್ರಶೇಖರ ಕಂಬಾರರು 'ಮಾಸಾಮಿಧೀರ' ಎಂತ ತಮ್ಮ ಸಂಗ್ರಹದಲ್ಲಿ ಈ ನಾಯಕರ ಒಂದು ಲಾವಣಿ ಸಂಪಾದಿಸಿ ಪ್ರಕಟಿಸಿದ್ದಾರೆ.

ಸಮಾಜ ಮತ್ತು ಆಡಳಿತ

ಇವರಲ್ಲಿ ಬಹುಪತ್ನಿತ್ವ ರೂಢಿಯಲ್ಲಿತ್ತು. ಹಾಗೆಯೇ ಸಹಗಮನ ಪದ್ಧತಿಯೂ ಇತ್ತು. ಆದರೆ ಇದು ಕಡ್ಡಾಯವಾಗಿರಲಿಲ್ಲ. ಇವರು ಮೃತರಾದಾಗ ವೈದಿಕ ಪದ್ಧತಿಯಂತೆ ಶವವನ್ನು ಸುಡುವ ಪದ್ಧತಿ ಇತ್ತು. ಸಂತೆಬೆನ್ನೂರು ನಾಯಕರಿಗೆ ಸಂಬಂಧಿಸಿದಂತೆ ವೀರಗಲ್ಲು-ಮಾಸ್ತಿಕಲ್ಲುಗಳು ಇರುವುದು ಗಮನಕ್ಕೆ ಬಂದಿಲ್ಲ.

ಅಳತೆ-ನಾಣ್ಯ-ತೂಕ : ಇವರು ವಿಜಯನಗರದ ಅಳತೆ, ನಾಣ್ಯ, ತೂಕವನ್ನು ಅನುಸರಿಸುತ್ತಿದ್ದರು. ಅವರು ವರಹ, ಗದ್ಯಾಣ, ಫಣ, ಹಣ, ಕಾಸು, ನಾಣ್ಯಗಳು ಖಂಡುಗ, ಕೊಳಗ, ಬಳ್ಳ, ಸೊಲಗ, ಮಣ, ಮಾನ ಧಡಿಯ ಪಂಚೇರು ಇತ್ಯಾದಿ ಅಳತೆ ತೂಕದ ಮಾನಗಳನ್ನು ಅನುಸರಿಸುತ್ತಿದ್ದರು.

ಭೂ ಕಂದಾಯವನ್ನು ಆದಾಯದ ೧/೬ ಭಾಗದಷ್ಟು ವಸೂಲಿ ಮಾಡುತ್ತಿದ್ದರು. ಪ್ರಜಾಭಿಪ್ರಾಯಕ್ಕೆ ವಿರೋಧವಾಗಿ ನಡೆಯದೆ, ಗ್ರಾಮಾಡಳಿತವನ್ನು 'ಬಾರಬಲೂತಿ' ಪದ್ಧತಿಯಂತೆ ನಡೆಸುತ್ತಿದ್ದರು. ಅನೇಕ ಕೆರೆ-ಕಟ್ಟೆಗಳು, ದೇವಾಲಯ, ಛತ್ರಗಳನ್ನು ನಿರ್ಮಿಸಿದ್ದರು. ಈ ನಾಯಕರು ದೈನಂದಿನ ಆಡಳಿತ ವ್ಯವಹಾರ ನಡೆಸಲು ಒಳ್ಳೆ ಮಂತ್ರಿ ಮಂಡಳ ಹೊಂದಿದ್ದರು. ಪ್ರಧಾನಿ, ಮಂತ್ರಿ, ಭಂಡಾರಿ, ದಂಡನಾಯಕ, ದಳವಾಯಿ, ಕಾರ್ಯಕರ್ತ, ಪಟ್ಟಣಶೆಟ್ಟಿ, ರಾಯಸದವ, ಶಾನುಭೋಗ, ಪಟೇಲ, ಗೌಡ, ತಳವಾರ ಇತ್ಯಾದಿ ಅಧಿಕಾರಿಗಳು ಇದ್ದರು. ಉತ್ತಮ ಸೈನ್ಯ ಪಡೆ ಇವರದಾಗಿತ್ತು.

ರಾಜ್ಯವನ್ನು ವೇಂಠೆ, ನಾಡು, ಶೀಮೆ, ಹೋಬಳಿ, ಗ್ರಾಮ, ಇತ್ಯಾದಿಯಾಗಿ ವಿಂಗಡಿಸಿ ರಾಜ್ಯಪಾಲನೆ ಮಾಡಿದರು. ಇವುಗಳಿಗೆ ಸಂಬಂಧಿಗಳನ್ನು ಹಾಗೂ ಅರಸು ಮನೆತನದವರನ್ನು ಮುಖ್ಯಸ್ಥರನ್ನಾಗಿ ನೇಮಕ ಮಾಡಿ ಆಡಳಿತ ನಿರ್ವಹಣೆ ನಡೆಸುತ್ತಿದ್ದರು.

ಸಮಾರೋಪ : ವಿಜಯನಗರ ಸಾಮ್ರಾಜ್ಯದ ಪತನಾನಂತರ ಅಸ್ತಿತ್ವಕ್ಕೆ ಬಂದ ಸಂಸ್ಥಾನಗಳಲ್ಲಿ ಸಂತೇಬೆನ್ನೂರು ಸಂಸ್ಥಾನವೂ ಒಂದಾಗಿದ್ದು, ಬಸವಾಪಟ್ಟಣ, ಸಂತೇಬೆನ್ನೂರು, ತರೀಕೆರೆಗಳನ್ನು ರಾಜಧಾನಿ ಮಾಡಿಕೊಂಡು ಸುಮಾರು ಮೂರುನೂರು ಸಂವತ್ಸರಗಳ ಅವಧಿಯಲ್ಲಿ ಕೆಲಕಾಲ ಸ್ವತಂತ್ರವಾಗಿಯೂ ಅಲ್ಲದೆ, ವಿಜಯನಗರ, ಆದಿಲ್ ಶಾಹಿ, ಮರಾಠರು, ಮೊಗಲರು, ಕೆಳದಿ, ಚಿತ್ರದುರ್ಗ, ಹೈದರ್‌ಟಿಪ್ಪು ರವರ ಅಧೀನವಾಗಿಯೂ ಆಳಿದ ಈ ವಂಶ ಬ್ರಿಟೀಷರು ಈ ನೆಲದೊಳಗೆ ಬಂದ ಮೇಲೆ ತನ್ನ ಅಸ್ತಿತ್ವವನ್ನು ಕಳೆದುಕೊಂಡಿತು. ಸುಮಾರು ೨೫ ನಾಯಕರು**[5]** ಈ ಸಂಸ್ಥಾನದಲ್ಲಿ ಆಡಳಿತ ನಡೆಸಿ ಅನೇಕ ಜನೋಪಕಾರಿ ಕೆಲಸ ಮಾಡಿದ್ದಾರೆ.

ಸಮಕಾಲೀನ ಅರಸರು, ಸುಲ್ತಾನರು, ಪೇಶ್ವೆಗಳು, ಪಾಳೇಗಾರರೊಂದಿಗೆ ಯುದ್ಧ ಮಾಡಿ ಸೋತ ಈ ನಾಯಕರು ಮುಂದೆ ಅವರ ಅಧೀನರಾಗಿ ರಣದುಲ್ಲಾಖಾನ್ ಜೊತೆಗೆ, ಮರಾಠರು, ಕೆಳದಿ, ಚಿತ್ರದುರ್ಗ, ಹರಪನಹಳ್ಳಿ, ಹಾಗಲವಾಡಿ, ಐಗೂರು, ಕೊಡಗು, ಬೆಂಗಳೂರು, ಮೈಸೂರು ಮುಂತಾದ ಆಡಳಿತದವರೊಂದಿಗೆ ನಡೆದ ಯುದ್ಧದಲ್ಲಿ ಅವರ ಪರವಾಗಿ ಭಾಗವಹಿಸಿದ್ದಾಗಿ ತಿಳಿದು ಬರುತ್ತದೆ. ಇವರು ಸೋತ ಅನೇಕ ಕಡೆ ಬಾಂಧವ್ಯ ಬೆಳೆಸಿ ತಮ್ಮ ಅಸ್ತಿತ್ವ ಮುಂದುವರೆಸಿಕೊಂಡು ಬಂದಿರುವುದನ್ನು ಕಾಣಬಹುದು.

ಹೀಗೆ ಉತ್ತಮ ರಾಜಕೀಯ ವ್ಯವಸ್ಥೆ ಸ್ಥಾಪಿಸಿ, ಕರ್ನಾಟಕದ ಸಮನ್ವಯ ಸಂಸ್ಕೃತಿಯನ್ನು ಮತ್ತು ಸಾಮಾಜಿಕ ವೈವಿಧ್ಯತೆಯನ್ನು ಪೋಷಿಸುತ್ತಾ ಕಲೆ ಮತ್ತು ಸಾಹಿತ್ಯ, ಮಾಧ್ಯಮವನ್ನು ಪ್ರೋತ್ಸಾಹಿಸಿ ತಮ್ಮ ಇತಿ-ಮಿತಿಯೊಳಗೆ ದೇಶಕ್ಕಾಗಿ ಉತ್ತಮ ಕಾಣಿಕೆ ನೀಡಿ ಒಂದು ಕಾಲದಲ್ಲಿ ವೈಭವವಾಗಿ ಮೆರೆದ ಸಂತೇಬೆನ್ನೂರು ನಾಯಕರ ಸಂಸ್ಥಾನ ಈಗ ನಾಮ ಮಾತ್ರ ಪಳೆಯುಳಿಕೆಯಾಗಿ ನಿಮ್ಮ ಮುಂದೆ ನಿಂತಿದೆ.



* ಈ ವಂಶವೃಕ್ಷವನ್ನು ಸಂತೇಬೆನ್ನೂರು ನಾಯಕರ ಶಾಸನಗಳು, ಸಂತೇಬೆನ್ನೂರು ಮತ್ತು ತರೀಕೆರೆ ಕೈಫಿಯತ್ತುಗಳು, ಕುಟುಂಬದ ಕುಲ ಪುರೋಹಿತ ಮೂಲಗಳು, ಸರಜಾ ಹನುಮೇಂದ್ರ ಯಶೋವಿಲಾಸ ಹಾಗೂ ಇನ್ನಿತರ ಈ ವಂಶದ

ದಾಖಲೆಗಳನ್ನು ಸಮನ್ವಯಗೊಳಿಸಿ ರಚಿಸಲಾಗಿದೆ. ಈ ವಂಶಾವಳಿಯನ್ನು ಇನ್ನಷ್ಟು ವ್ಯಾಪಕ ಸಂಶೋಧನೆ ಮತ್ತು ಅಧ್ಯಯನಗಳಿಂದ ಗಟ್ಟಿಗೊಳಿಸಿದಲ್ಲಿ ಇದು ಬದಲಾವಣೆಗೊಳಪಡುವ ಸಾಧ್ಯತೆಯೂ ಇದೆ.

** ಇದಲ್ಲದೆ ಇನ್ನೂ ಈ ಸಂತತಿಗೆ ಸೇರಿದ ಹಲವಾರು ನಾಯಕರ ಹೆಸರುಗಳು ಶಾಸನಗಳಲ್ಲಿ ಕೈಫಿಯತ್ತುಗಳಲ್ಲಿ ಉಲ್ಲೇಖವಾಗಿದ್ದರೂ ಅವರುಗಳೂ ಸಹ ಈ ಪಾಳೇಪಟ್ಟಿನ ಬೇರೆ ಬೇರೆ ಸ್ಥಳಗಳಿಂದ ಆಡಳಿತ ನಡೆಸಿರುವುದಾಗಿ ತಿಳಿದು ಬರುತ್ತದೆ. ಉದಾ: ತಿಮ್ಮಣ್ಣ ನಾಯಕ, ಪ್ರಾಣಪ್ಪನಾಯಕ, ಕಿಟ್ಟಪ್ಪನಾಯಕ, ನಾಗಪ್ಪನಾಯಕ, ನಂಜಪ್ಪನಾಯಕ, ಇತ್ಯಾದಿ, ಇವರುಗಳ ಅವಧಿ ಮತ್ತು ಆಡಳಿತಗಳ ಬಗ್ಗೆ ಇನ್ನಷ್ಟು ಸಂಶೋಧನೆ ಆಗಬೇಕಿದೆ.

*** ಒಂದೇ ಕಾಲದಲ್ಲಿ ಈರ್ವರು ನಾಯಕರ ಹೆಸರು ನಮೂದಾಗಿದ್ದರೆ ಅವರು ಬೇರೆ ಬೇರೆ ಪ್ರಾಂತ್ಯದಿಂದ ಆಳ್ವಿಕೆ ನಡೆಸುತ್ತಿದ್ದಾರೆಂದು ಭಾವಿಸಬೇಕು.

ಅನುಬಂಧ-೨

1. ಸಂತೇಬೆನ್ನೂರು ನಾಯಕರು ಕಟ್ಟಿಸಿದ ಮತ್ತು ಜೀರ್ಣೋದ್ಧಾರ ಮಾಡಿಸಿದ ದೇವಾಲಯಗಳು

೧. ಸಂತೇಬೆನ್ನೂರು ಶ್ರೀರಾಮಚಂದ್ರ ದೇವಸ್ಥಾನ
೨. ಚಿಕ್ಕ ಕೋಗಲೂರು ಆಂಜನೇಯಸ್ವಾಮಿ ದೇವಸ್ಥಾನ
೩. ಬಾಗೂರು ಲಕ್ಷ್ಮೀದೇವರ ದೇವಸ್ಥಾನದ ಜೀರ್ಣೋದ್ಧಾರ
೪. ಹೊರಕೇರಿ ದೇವರಪುರದ ರಂಗನಾಥ ಸ್ವಾಮಿ ದೇವಾಲಯ
೫. ಬುಳ್ಳಾಪುರ ಆಂಜನೇಯ ಸ್ವಾಮಿ ದೇವಸ್ಥಾನ
೬. ಕದರ ಮಂಡಳಿಗೆ ಹನುಮಂತ ದೇವರ ದೇವಸ್ಥಾನ ಜೀರ್ಣೋದ್ಧಾರ
೭. ಕಲ್ಲೋಡು ಹನುಮಂತ ದೇವರ ದೇವಸ್ಥಾನ
೮. ಹಿರೇಮಾಡಾಳ ಮಲ್ಲೇಶ್ವರ ದೇವಾಲಯ
೯. ಕಲ್ಲತ್ತನಗಿರಿ ಕಲ್ಲತ್ತಿವೀರನ ದೇವಸ್ಥಾನ
೧೦. ಹನುಮಸಾಗರದ ಸದಾಶಿವಸ್ವಾಮಿ ದೇವಸ್ಥಾನ (ಪ್ರಧಾನಿ ಕಳಸಪ್ಪಯ್ಯ)
೧೧. ತೀರ್ಥರಾಜಪುರ ವೆಂಕಟೇಶ್ವರ ಸ್ವಾಮಿ ದೇವಸ್ಥಾನ (ತೀರ್ಥಹಳ್ಳಿ)
೧೨. ದೇವರಹಳ್ಳಿ ರಂಗನಾಥಸ್ವಾಮಿ ದೇವಸ್ಥಾನದ ಜೀರ್ಣೋದ್ಧಾರ
೧೩. ಕಾಮನದುರ್ಗದ ಚಿನ್ನರಾಯಸ್ವಾಮಿ ದೇವಸ್ಥಾನ
೧೪. ಯಗಟಿ ಮಲ್ಲಿಕಾರ್ಜುನ ಸ್ವಾಮಿ ದೇವಸ್ಥಾನ

II. ಸಂತೇಬೆನ್ನೂರು ನಾಯಕರು ಕಟ್ಟಿಸಿದ ಕೆರೆಗಳು

೧. ಸಂತೇಬೆನ್ನೂರು ಪುಷ್ಕರಣಿ ೨. ಸಂತೇಬೆನ್ನೂರು ಕೆರೆ ೩. ಹಿರೇಕೋಗಲೂರು ಕೆರೆ ೪. ತಣಗೆರೆ ಕೆರೆ ೫. ಸಿದ್ದನಮಠದ ಕೆರೆ ೬. ಪುದಿಕೆರೆ ಕೆರೆ ೭. ಬೆಳ್ಳಿಗನೂಡು ಕೆರೆ ೮. ಕುಳೇನೂರು ಕೆರೆ ೯. ಕಂಚುಗಾರನಹಳ್ಳಿ ಕೆರೆ ೧೦. ಸಾಸ್ವೆಹಳ್ಳಿ ಕೆರೆ ೧೧. ಹೊಸಹಳ್ಳಿ ಕೆರೆ ೧೨. ಅಮರಗಿರಿ ಕೆರೆ ೧೩. ಹೊದಿಗೆರೆ ಕೆರೆ ೧೪. ಹಾರ್ನಳ್ಳಿ ಕೆರೆ

III. ಸಂತೇಬೆನ್ನೂರು ನಾಯಕರು ಕಟ್ಟಿಸಿದ ಕೋಟೆಗಳು

೧. ಬಸವಾಪಟ್ಟಣ ಕೋಟೆ ೨. ಸಂತೇಬೆನ್ನೂರು ಕೋಟೆ ೩. ತರೀಕೆರೆ ಕೋಟೆ ೪. ಅಜ್ಜಂಪುರ ಕೋಟೆ ೫. ಹರಿಹರ ಕೋಟೆ ೬. ಕಾಮನದುರ್ಗ ೭. ರಂಗಯ್ಯನಗಿರಿ ೮. ಹನುಮಯ್ಯನದುರ್ಗ

ಇವುಗಳಲ್ಲದೆ ಇನ್ನು ಅನೇಕ ದೇವಾಲಯಗಳು ಕೆರೆ ಕಟ್ಟೆಗಳು ಕೋಟೆ ಗಿರಿ ದುರ್ಗವನ್ನು ಜೀರ್ಣೋದ್ಧಾರ ಮಾಡಿಸಿ ಕಟ್ಟಿಸಿದ್ದಾಗಿ ತಿಳಿದು ಬರುತ್ತದೆ.

IV. ಸಂತೇಬೆನ್ನೂರು ನಾಯಕರು ಆಳಿದ ಸೀಮೆಗಳು

೧. ಬಸವಾಪಟ್ಟಣ ೨. ಸಂತೇಬೆನ್ನೂರು ೩. ತರೀಕೆರೆ ೪. ದುಮ್ಮಿ ೫. ಹೊಳೆಹೊನ್ನೂರು ೬. ಮಹಾದೇವಪುರ ೭. ಯರಗುಪ್ಪ ೮. ಯಡತೊರೆ ೧೦. ಕಾತೂರು ೧೧. ಆಯನೂರು ೧೨.ಗಾಜನೂರು ೧೩. ವಿಭೂತಿಪುರ ೧೪. ಬೆಂಡುಗ ೧೫. ರಟ್ಟೇಹಳ್ಳಿ ೧೫. ಹೊಳಲ್ಕೆರೆ ೧೭. ಹೊಸದುರ್ಗ ೧೮. ಮಂಜುರಾಬಾದ್

V. ಈ ನಾಯಕರು ಬರೆಸಿದ ಶಾಸನಗಳು ಇರುವ ಸ್ಥಳಗಳು

೧. ಮಂಟರಘಟ್ಟ ೨. ಹೊಸಳ್ಳಿ ೩. ಚಿಕ್ಕಗಂಗೂರು ೪. ಗೊಪ್ಪೇನಹಳ್ಳಿ ೫. ಬಾಗೂರು ೬. ವಡೆಯರಹಳ್ಳಿ ೭. ತಾಳ್ಯ ೮. ಬುಳ್ಳಾಪುರ ೯. ಕದರ ಮಂಡಲಗಿ ೧೦. ಕಲ್ಲೋಡು ೧೧. ಹಿರೇಕೋಗಲೂರು ೧೨. ಅಣ್ಣಾಪುರ ೧೩. ಹಿರೇಮಾಡಾಳ್ ೧೪. ಗರಗ ೧೫. ಆಲದಹಳ್ಳಿ ೧೬. ಬೆಂಡುಗ ೧೭. ಹುಲಿತಿಮ್ಮಾಪುರ ೧೮. ಅರಸಿನ ಕೊಪ್ಪ ೧೯. ತಾಳೀಕಟ್ಟೆ

VI. ಈ ನಾಯಕರು ದಾನ ಕೊಟ್ಟ ಹಳ್ಳಿಗಳು

೧. ಹರಕೆರೆ ಹೋಬಳಿ ಪಂಚಗ್ರಾಮ ೨. ಸನ್ಯಾಸಿ ಕೊಪ್ಪ ೩. ದಂದೂರು ೪. ದೇಮಾಪುರ ೫. ಹಿರೇಕಾತೂರು ೬. ಚಿಕ್ಕಕಾತೂರು ೭. ಹಾದಿಕೆರೆ ೮. ಕುಂಟನ ಸ್ಥಳ ೯. ಅಮೃತಾಪುರ ೧೦. ದೋರನಾಳ್ ೧೧. ದುಗ್ಗನಹಾಳ್ ೧೨. ಮಲವ್ ಗೊಪ್ಪ ೧೩. ಜಾವಳ್ಳಿ ೧೪. ಭಾರತೀಪುರ ೧೫. ಗರಗ ೧೬. ಹಂಗರ ಹಾಳ್ ೧೭. ಗೋವಿಂದಾಪುರ ೧೮. ತೀರ್ಥರಾಜಪುರ ೧೯. ತಿಮ್ಮಾಪುರ ೨೦. ರಾಮಚಂದ್ರಾಪುರ

ಅನುಬಂಧ – ೩

ಗ್ರಂಥ ಋಣ
ಶಾಸನಗಳು

೧. ರೈಸ್ ಬಿ.ಎಲ್., *ಎಪಿಗ್ರಾಫಿಯಾ ಕರ್ನಾಟಕ* ಸಂ. ೬.೭.೧೧.೧೨ – ೧೯೦೨
೨. *ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್* ಸಂ. ೧೮
೩. *ಮೈಸೂರು ಪುರಾತತ್ವ ಇಲಾಖೆಯ ವಾರ್ಷಿಕ ವರದಿ* ೧೯೦೮ ರಿಂದ ೧೯೫೬
೪. ಭಾರತೀಯ ಇತಿಹಾಸ ಸಂಶೋಧನಾ ಮಂಡಳಿ ಪೂನಾ ತ್ರೈಮಾಸಿಕ ಅಕ್ಟೋಬರ್ ೧೯೩೭
೫. *ಶ್ರೀ ಮಜ್ಜಗದ್ಗುರು ಶ್ರೀ ಕೂಡ್ಲಿ – ಶೃಂಗೇರಿ ಸಂಸ್ಥಾನದ ಪ್ರಾಚೀನ ಶಾಸನ ಲೇಖನ ಸಂಗ್ರಹ* ಭಾಗ.೧-೧೯೬೫
೬. ***Selections from the Records of The sringeri Mutt*** **Vol.I. (1927)**

ಸಮಕಾಲೀನ ಕೃತಿಗಳು

೧. ಗೋವಿಂದ ವೈದ್ಯ : *ಕಂಠೀರವ ನರಸರಾಜ* ವಿಜಯಂ
ಸಂ. ಶಾಮಶಾಸ್ತ್ರಿ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು – ೧೯೭೧

೨. ತಿರುಮಲಾಚಾರ್ಯ – *ಚಿಕ್ಕದೇವರಾಯ ವಂಶಾವಳಿ*
ಸಂ. ಮ.ಬಾ.ಬೋಯಿ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು – ೧೯೯೯

೩. ತಿ.ತಾ.ಶರ್ಮ *ಕಂಠೀರವ ನರಸರಾಜ ವಿಜಯ*
ಮೈಸೂರು ವಿಶ್ವವಿದ್ಯಾನಿಲಯ ಮೈಸೂರು ೧೯೭೪

೪. ಲಿಂಗಣ್ಣ ಕವಿ *ಕೆಳದಿ ನೃಪ ವಿಜಯಂ*
ಸಂ.ಆರ್.ಶಾಮಾಶಾಸ್ತ್ರಿ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು – ೧೯೭೩

೫. ಕೃಷ್ಣಶರ್ಮ : *ಸರಜಾ ಹನುಮೇಂದ್ರ ಯಶೋ ವಿಲಾಸಂ*
ಸರಿ. ವೈ.ಸಿ. ಭಾನುಮತಿ – ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೧೯೯೬

ವಿಶ್ವಕೋಶಗಳು – ಕೈಫಿಯತ್ತುಗಳು

೧. ನಾಯಕ ಹಾ.ಮಾ. (ಸಂ) *ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ*
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ೧೯೭೯

೨. ನಾಯಕ ಹಾ.ಮಾ. (ಸಂ) *ಕನ್ನಡ ವಿಶ್ವಕೋಶ*ಸಂಪುಟ

೩. ಕಲಬುರ್ಗಿ ಎಂ.ಎಂ., (ಸಂ) *ಕರ್ನಾಟಕ ಕೈಫಿಯತ್ತುಗಳು* ಕನ್ನಡ ವಿ.ವಿ. ಹಂಪಿ – ೧೯೯೭

Gazeteers/Travelers Report

೧. **Rice B.L.:** ***Mysore Gazetteer*** **vol. ೧ & ೨ London – z೨.**

೨. **Hayavadana Rao C :** ***Mysore Gazetteer*** **Vol. V. Bangalore – ೧೯೩೦ z೩.**

೩. **Abishankar K. :** ***Shimoga Gazetteer, Chikkamagalur Gazetteer, Tummkur Gazetteer***- ೧೯೬೯

೪. **Suryanatha Kamanth –** ***Karnataka State Gazetter*** **–** ೧೯೮೪

೬. ಸೂರ್ಯನಾಥ ಕಾಮತ್ – ಕರ್ನಾಟಕ ರಾಜ್ಯ – *ಗ್ಯಾಝೆಟಿಯರ್*

೭. **Francis Buchanan –** ***A Journey from Madras throught countries*** **of Mysore Coorg and Malabar in Vol. Madras (**೧೯೮೮ **edition)**

ಸ್ಮರಣ ಸಂಚಿಕೆಗಳು

೧. *ಹೊನ್ನಬಿತ್ತೇವು ಹೊಲಕೆಲ್ಲ*
ಜಾನಪದ ಸಾಹಿತ್ಯ ಸಮ್ಮೇಳನ : ತರೀಕೆರೆ

೨. ಲಕ್ಷ್ಮಣ ತೆಲಗಾವಿ : *ಹರತಿ ಸಿರಿ*
ಹೆಚ್.ವಿ.ವೀರನಾಯಕ ನೆನಪಿನ ಸಂಪುಟ
ಹರತೀಕೋಟೆ (೧೯೮೭)

೩. *ಇತಿಹಾಸ ದರ್ಶನ ಸಂಪುಟಗಳು*
ಕರ್ನಾಟಕ ಇತಿಹಾಸ ಅಕಾಡೆಮಿ
ಬೆಂಗಳೂರು

ವಂಶಾವಳಿ ಚರಿತ್ರೆಗಳು

೧. ಪಿ. ಅಬ್ದುಲ್‌ಸತ್ತಾರ್: ತರೀಕೆರೆಯ ಪಾಳೆಯಗಾರರು
ಶ್ರೀ ಲೋಕ ಪಾವತಿ ಪ್ರಕಾಶನ ಪಾಂಡವರಪುರ (೯೭)

೨. ಎಂ.ಎಸ್. ಪುಟ್ಟಣ್ಣ : *ಚಿತ್ರದುರ್ಗದ ಪಾಳೆಯಗಾರರು*
ಕಾವ್ಯಾಲಯ : ಮೈಸೂರು (೧೯೯೭)

೩. ಕುಂ.ಬಾ. ಸದಾಶಿವಪ್ಪ : *ಹರಪನಹಳ್ಳಿ ಪಾಳೆಯಗಾರರು*
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು (೧೯೯೬)

೪. ಡಿ.ಎನ್.ಯೋಗೀಶ್ವರಪ್ಪ – *ಹಾಗಲವಾಡಿ ನಾಯಕರು*
ಕನ್ನಡ ವಿಶ್ವವಿದ್ಯಾನಿಲಯ, ಹಂಪಿ (೧೯೯೯)

೫. ಕೆಳದಿ ಗುಂಡಾಜೋಯ್ಸ : ಕೆಳದಿ ಅರಸರು
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು (೧೯೮೦)

ಕನ್ನಡ ಕೃತಿಗಳು

೧. ಕೃಷ್ಣರಾವ್ ಎಂ.ವಿ. *ಕರ್ನಾಟಕ ಇತಿಹಾಸ ದರ್ಶನ*
ಬೆಂಗಳೂರು (೧೯೭೧)

೨. ದೀಕ್ಷಿತ್ ಜಿ.ಎಸ್.(ಸಂ). *ಕೆಳದಿ ಐತಿಹಾಸಿಕ ನಿಬಂಧನಗಳು*
ಕೆಳದಿ ವಸ್ತುಸಂಗ್ರಹಾಲಯ (೧೯೮೯) ಕೆಳದಿ

೩. ವೆಂಕಟೇಶ ಜೋಯಿಸ್ ಕೆ.ಜಿ. *ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ*
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು (೧೯೯೬)

೪. ನಂಜುಂಡ ಸ್ವಾಮಿ ವಿ.ಎಸ್. *ಕರ್ನಾಟಕ ಪಾಳೆಗಾರರು ಮತ್ತು ಒಡೆಯರ ಇತಿಹಾಸ*
ಸಮಾಜ ಪುಸ್ತಕ ಭಂಡಾರ, ಧಾರವಾಡ (೧೯೮೬)

೫. ಶಾಸ್ತ್ರಿ ಬಿ.ಎನ್. *ಕರ್ನಾಟಕದ ಪರಂಪರೆ*ಕರ್ನಾಟಕ ಸರ್ಕಾರ, ಬೆಂಗಳೂರು (೧೯೭೦)

ಜಾನಪದ

೧. ಕ.ರಾ.ಕೃ. ಪಾಳೆಯಗಾರರ ಪದಗಳು
ಜನಪದ ಸಾಹಿತ್ಯ ಅಕಾಡೆಮಿ

೨. ಮತಿಘಟ್ಟ ಕೃಷ್ಣಮೂರ್ತಿ – *‘ಗೀತೆಗಳು’*

೩. ಮತಿಘಟ್ಟ ಕೃಷ್ಣಮೂರ್ತಿ – ‘*ನಾಡಪದಗಳು*’
ಗುರುಮೂರ್ತಿ ಪ್ರಕಾಶನ, ಬೆಂಗಳೂರು (೧೯೭೫)

ಅಪ್ರಕಟಿತ ಹಸ್ತಪ್ರತಿಗಳು

೧. ಯಶೋದಮ್ಮ ನಾಗತಿ ಸ್ವಹಸ್ತದ ಕೈ ಬರೆಹ ಪುಸ್ತಕ

೨. *ಸಂತೇಬೆನ್ನೂರು ಇತಿಹಾಸ* ಸಂತೇಬೆನ್ನೂರು ನಾಡಿಗ್ ವಂಶಸ್ಥರಲ್ಲಿರುವ ಕೈಬರಹ ಪುಸ್ತಕ

೩. *ಶೃಂಗೇರಿ ಮಠದ ಕಡತಗಳು*

ಇತರೆ

೧. ಶ್ರೀನಿವಾಸರಾವ್ ಕೊರಟೆ : *ಮೂರು ಹಿಡಿ ಹೂ*

೨. ನರಸಿಂಹಾಚಾರ್ ಆರ್. *ಕರ್ನಾಟಕ ಕವಿ ಚರಿತ್ರೆ* ಸಂ. ೨
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು (೧೯೭೩)

(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)

[1]*ಸ.ಹ.ಯ.ವಿ.*
[2]೧. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಸ್ತಭಂಡಾರ ಪ್ರತಿ ಕೆ.ಬಿ.-೫೩
೨. ಶ್ರೀ ಮನ್ಮಹಾರಾಜರ ಸಂಸ್ಕೃತ ಭಂಡಾರದ ಓಲೆ ಪ್ರತಿ ಡಿ. ೧೧೬೩

೩. ಶ್ರೀ ಮನ್ಮಹಾರಾಜರ ಸಂಸ್ಕೃತ ಭಂಡಾರದ ಕಾಗದ ಪ್ರತಿ ಡಿ. ೧೧೬೪

[3]ಪ್ರಾನ್ಸಿಸ್ ಬುಕಾನನ್, ಎ ಜರ್ನಿ ಫ್ರಂ ಮದ್ರಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು ಕೂರಗ್ ಅಂಡ್ ಮಲಬಾರ್ ೧೯೮೮, (ಪುನ ಮುದ್ರಣ) ಏಶಿಯನ್ ಪಬ್ಲಿಷರ್ಸ್
[4]ಮೆಕೆಂಜಿ ಸಂಗ್ರಹದ ಕೈಫಿಯತ್ತುಗಳು, *ಕರ್ನಾಟಕ ಕೈಫಿಯತ್ತುಗಳು*,ಕನ್ನಡ ವಿಶ್ವವಿದ್ಯಾಲಯ ಹಂಪಿ
[5]ವಂಶವೃಕ್ಷ (ಈ ಲೇಖನದ ಅನುಬಂಧ ೧ ನೋಡಿ)

ಮಲೆಕರ್ನಾಟಕದ ಅರಸು ಮನೆತನಗಳು: ೧೪. ದಾನಿವಾಸ ಒಡೆಯರು

ಬಯಲು ನಾಡಿನಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದ ಮೇಲೆ ಮಲೆನಾಡು ಜಿಲ್ಲೆಗಳ ಇತಿಹಾಸದಲ್ಲಿ ಒಂದು ಹೊಸ ಯುಗವೇ ಆರಂಭವಾಯಿತು. ಆ ಭಾಗದಲ್ಲಿ ಬಹಳ ಶತಮಾನಗಳ ಕಾಲದಿಂದ ಆಳ್ವಿಕೆ ಮಾಡಿಕೊಂಡು ಬಂದಿದ್ದ ಹೊಯ್ಸಳರ, ಆಳುಪರ, ಸಾಂತರರ, ತರ್ಯಲ್ಲರ, ಸೇನಾವಾರರ ಕಣ್ಮರೆ ಮತ್ತು ಅವರ ಸ್ಥಾನದಲ್ಲಿ ವಿಜಯನಗರದ ಅರಸರ ಪ್ರತಿನಿಧಿಗಳ ಆಳ್ವಿಕೆ ಹಾಗೂ ಹಲವು ಚಿಕ್ಕ ಪುಟ್ಟ ಹೊಸ ರಾಜಮನೆತನಗಳ ಉದಯ, ಇವುಗಳೇ ವಿಜಯನಗರ ಆಳ್ವಿಕೆಯಲ್ಲಿ ಮಲೆನಾಡು ಪ್ರದೇಶಗಳ ಮೇಲೆ ಆದ ಮುಖ್ಯ ರಾಜಕೀಯ ಪರಿಣಾಮಗಳಾಗಿವೆ. ವಿಜಯನಗರ ಚಕ್ರವರ್ತಿಗಳ ಪ್ರತಿನಿಧಿಗಳ ನೇಮಕ ಮತ್ತು ಅವರ ಆಡಳಿತಗಳು ಈ ಪ್ರದೇಶದಲ್ಲಿ ವಿಜಯನಗರದ ರಾಜಕೀಯ ಮೌಲ್ಯದ ಬೆಳವಣಿಗೆಗೆ ಕಾರಣವಾದವು. ಹೀಗೆ ಕೇಂದ್ರೀಕರಣ ಮತ್ತು ವಿಕೇಂದ್ರೀಕರಣ ಸಮತೋಲನ ರಾಜಕೀಯ ವ್ಯವಸ್ಥೆ ಆ ಭಾಗದಲ್ಲಿ ಬಳಕೆಗೆ ಬಂದಿತು. ಈ ಹಿನ್ನೆಲೆಯ ವಿಕೇಂದ್ರೀಕರಣ ವ್ಯವಸ್ಥೆಯಲ್ಲಿ ಅನೇಕ ರಾಜ ಮನೆತನಗಳು ಈ ಭಾಗದಲ್ಲಿ ಉದಯವಾದವು. ಅವುಗಳಲ್ಲಿ ಬಹಳ ಪ್ರಮುಖವಾದುದು ಕೆಳದಿನಾಯಕರ ಮನೆತನ. ಇದಲ್ಲದೆ, ಕಳಸ – ಕಾರ್ಕಳ ಪ್ರಭುಗಳು (ಕ್ರಿ.ಶ. ೧೧೫೪-೧೨೯೭ ಮೊದಲ ಹಂತ ಹಾಗೂ ಕ್ರಿ.ಶ. ೧೪೧೯-೧೬೦೯ ಎರಡನೇ ಹಂತ), ಬಲಂನಾಯಕರು (ಬೇಲೂರು), ದಾನಿವಾಸ ಒಡೆಯರು, ಬಂಗವಾಡಿಯ ಬಂಗರು, ಪುತ್ತಿಗೆ ಬಲ್ಲಾಳರು, ಮೂಡಬಿದಿರೆಯ ಚೌಟರು, ವೇಣೂರಿನ ಅಜಿಲರು, ಮೂಲಿಕೆಯ ಸಾಮಂತರು, ಸುರಾಲಿನ ತೋಳಹರ, ಸಂಗೀತಪುರ ಮತ್ತು ಗೇರು ಸೊಪ್ಪೆಯ ಸಾಳ್ವರನ್ನೂ ಹೆಸರಿಸಬಹುದು. ಈ ಅರಸು ಮನತನಗಳಲ್ಲಿ ಕೆಲವರು ಪ್ರಬಲವಾಗಿ ರಾಜ್ಯವಾಳಿ ಕ್ರಿ.ಶ. ೧೫೬೫ರ ನಂತರ ಸ್ವತಂತ್ರರಾದರು. ಇನ್ನೂ ಕೆಲವರು ಈ ಸ್ವತಂತ್ರ ರಾಜಮನೆತನಗಳ ಅಧೀನಕ್ಕೆ ಒಳಪಟ್ಟರು. ಈ ಹಿನ್ನೆಲೆಯಲ್ಲಿ ಈ ರಾಜ ಮನೆತನಗಳ ರಾಜಕೀಯ ಇತಿಹಾಸವನ್ನು ಪರಾಮರ್ಶಿಸಿದಾಗ ದಾನಿವಾಸ ಒಡೆಯರನ್ನು ಆರಂಭದಿಂದ ಅಂತ್ಯದವರೆಗೆ ಸ್ವತಂತ್ರವಾಗಿ ಆಡಳಿತ ಮಾಡದ ಗುಂಪಿಗೆ ಸೇರಿಸಬಹುದು.

ದಾನಿವಾಸವು ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲೂಕಿನಲ್ಲಿದೆ. ಚಿಕ್ಕಮಗಳೂರಿನ ವಾಯುವ್ಯಕ್ಕೆ ೮೮ ಕಿ.ಮೀ. ತರೀಕೆರೆಯ ಪಶ್ಚಿಮಕ್ಕೆ ೫೪ ಕಿ.ಮೀ., ಭದ್ರಾವತಿಯ ದಕ್ಷಿಣಕ್ಕೆ ೪೨ ಕಿ.ಮೀ. ದೂರದಲ್ಲಿದೆ. ನರಸಿಂಹರಾಜಪುರದ ಸನಿಹವೆ ಇರುವ ೪೦೦ ವರ್ಷಗಳ ಹಿಂದಿನ ದಾನಿವಾಸವನ್ನು ಹಳೆದಾನಿವಾಸ ಎಂದು ಕರೆಯುವರು. ಆದರೆ ಈಗ ಅದು ನೀರಿನಲ್ಲಿ ಮುಳುಗಿಹೋಗಿದೆ. ಹಲವು ಶತಮಾನಗಳ ಹಿಂದೆ ದಾನಿವಾಸವು ಒಂದು ಚಿಕ್ಕ ಮನೆತನದ ಆಡಳಿತ ಕೇಂದ್ರವಾಗಿದ್ದು ಹೊಯ್ಸಳ ವಿಜಯನಗರ – ಕೆಳದಿ ನಾಯಕರಿಗೆ ಅಧೀನವಾಗಿ ಆಡಳಿತ ನಡೆಸಿದ್ದ ಘಟಕವಾಗಿ ಕಂಡುಬರುತ್ತದೆ. ಇಂತಹ ಚಿಕ್ಕ ಮನೆತನದ ಇತಿಹಾಸವನ್ನು ರಚಿಸಲಿಕ್ಕೆ ಆಧಾರಗಳ ಕೊರತೆ ಕಂಡು ಬರುತ್ತದೆ. ಇವರ ಸಮಕಾಲೀನರಾಗಿ ಆಡಳಿತ ನಡೆಸುತ್ತಿದ್ದ ಕೆಳದಿ ನಾಯಕರ ಇತಿಹಾಸದಲ್ಲಾಗಲೀ ಅಥವಾ ಇನ್ನಿತರೆ ಸಮಕಾಲೀನ ಮನೆತನಗಳ ಚರಿತ್ರೆಯಲ್ಲಾಗಲೀ ಇವರ ಉಲ್ಲೇಖ ಕಂಡುಬಂದಿಲ್ಲ. ಆದಾಗ್ಯೂ ಈ ಮನೆತನಕ್ಕೆ ಸಂಬಂಧಿಸಿದ ಮೂರು ಶಿಲಾ ಶಾಸನಗಳು ಹಾಗೂ ಆರು ತಾಮ್ರ ಶಾಸನಗಳು ಕ್ರಮವಾಗಿ ರೈಸರ *ಎಪಿಗ್ರಾಫಿಯಾ ಕರ್ನಾಟಿಕಾದ* ಆರನೇ ಸಂಪುಟದಲ್ಲೂ ಮತ್ತು *ಎಂ.ಎ.ಆರ್.* ೧೯೩೧ರ ಸಂಪುಟದಲ್ಲೂ ಪ್ರಕಟವಾಗಿವೆ. ಈ ಶಾಸನಗಳನ್ನು ಹೊರತು ಪಡಿಸಿದರೆ ಕೆಳದಿ ಅರಸರ ಕೆಲಶಾಸನಗಳಲ್ಲಿ ದಾನಿವಾಸ ಹೆಸರಿನ ಉಲ್ಲೇಖ ಅಲ್ಲಲ್ಲಿ ಕಂಡುಬರುತ್ತದೆ. ಮತ್ತು ಹೊಳೆಹೊನ್ನೂರು ಕೈಫಿಯತ್ತು, ಶೃಂಗೇರಿ ಕೈಫಿಯತ್ತಿನಲ್ಲಿ ದಾನಿವಾಸದ ಹೆಸರು ಉಲ್ಲೇಖವಾಗಿದೆ. ಸಮಕಾಲೀನ ಸಾಹಿತ್ಯದಲ್ಲಿ ಎಲ್ಲಿಯೂ ಕೂಡಾ ಇವರ ಇತಿಹಾಸ ದಾಖಲಾಗಿಲ್ಲ. ಆದುದರಿಂದ ಇವರ ಒಂಭತ್ತು ಶಾಸನಗಳ ಆಧಾರದಿಂದ ಈ ಮನೆತನದ ಹುಟ್ಟು, ಪ್ರಗತಿ ಮತ್ತು ಅಂತ್ಯವನ್ನು ಗುರ್ತಿಸಲು ಪ್ರಯತ್ನಿಸಲಾಗಿದೆ. ಈ ಒಂಭತ್ತು ಶಾಸನಗಳಲ್ಲಿ ಮೂರು ತಾಮ್ರಶಾಸನಗಳು ನಂಬಿಕೆಗೆ ಅರ್ಹವಾಗಿಲ್ಲದಿರುವುದು ತಿಳಿಯುತ್ತದೆ.

*ಎಪಿಗ್ರಾಫಿಯಾ ಕರ್ನಾಟಿಕ*ಆರನೇ ಸಂಪುಟದ ಕೊಪ್ಪ ತಾಲೂಕಿನ ೨೧ನೇ ಶಾಸನವು ಶಾಲಿವಾಹನ ಶಕ ೧೩೫೫ ಶುಕ್ಲ, ಸಂವತ್ಸರ ಚೈತ್ರಶುದ್ಧ ೨ ಗುರುವಾರ ಎಂದು ಆರಂಭವಾಗುತ್ತದೆ. ಆದರೆ ಶಾಲಿವಾಹನ ಶಕ ೧೩೫೫ರಲ್ಲಿ ಪ್ರಮೋದಿನ್ ಸಂವತ್ಸರವು ಇದ್ದು, ಉಲ್ಲೇಖವಾಗಿರುವ ಶುಕ್ಲ ಸಂವತ್ಸರವು ಶಾಲಿವಾಹನ ಶಕ ೧೩೭೧ಕ್ಕೆ ಸರಿಹೊಂದುತ್ತದೆ.

ಕೊಪ್ಪ ೨೨ನೇ ಸಂಖ್ಯೆಯ ಶಾಸನವು ಶಾ.ಶಕ. ೧೪೦೭ ಪ್ರಜೋತ್ಪತ್ತಿ ಸಂವತ್ಸರ ಚೈತ್ರ ಬಹುಳ ೭ ಆದಿವಾರದಲ್ಲಿ ಹುಟ್ಟಿದೆ. ಶಾ.ಶಕ ೧೪೦೭ ರಲ್ಲಿ ವಿಶ್ವಾವಸು ಸಂವತ್ಸರವಿದ್ದು ಶಾ.ಶಕ ೧೪೩೩ಕ್ಕೆ ಪ್ರಜೋತ್ಪತ್ತಿ ಸಂವತ್ಸರ ಬರುತ್ತದೆ. ಅದೇ ರೀತಿ ಕೊಪ್ಪ ೨೩ನೇ ಶಾಸನದಲ್ಲಿ ಶಾ.ಶಕ. ೧೪೦೫ ಶುಕ್ಲ ಸಂವತ್ಸರವಿದ್ದು ಆ ವರ್ಷ ಶೋಭನ ಸಂವತ್ಸರ ಬರುತ್ತದೆ. ಶುಕ್ಲ ಸಂವತ್ಸರವು ೧೪೩೧ಕ್ಕೆ ಸರಿಹೊಂದುತ್ತದೆ. ಆದುದರಿಂದ ಕೊಪ್ಪ ತಾಲ್ಲೂಕಿನ ೨೧, ೨೨ ಹಾಗೂ ೨೩ನೇ ಸಂಖ್ಯೆಯ ಶಾಸನಗಳು ಕಾಲ, ಸಂವತ್ಸರ, ವಾರ, ತಿಥಿಗಳಲ್ಲಿ ಬಹಳ ವ್ಯತ್ಯಾಸ ಕಂಡುಬರುವುದರಿಂದ ಇವುಗಳ ನಂಬಿಕೆಗೆ ಅರ್ಹವಲ್ಲ ಎಂದು ತೀರ್ಮಾನಿಸಬಹುದು.

ಈ ಮನೆತನದ ಉಗಮವು ಅಸ್ಪಷ್ಟವಾಗಿದೆ. ಆದಾಗ್ಯೂ, ಕೊಪ್ಪ ತಾಲೂಕು ಲಿಂಗಾಪುರ ಗ್ರಾಮದ ಶಿಲಾಶಾಸನವು ಸ್ವಲ್ಪ ಬೆಳಕನ್ನು ಚೆಲ್ಲುತ್ತದೆ. ಇದರಲ್ಲಿ

*"ಹಳೇಬೀಡ ಶ್ರೀ ವೀರ ಹೊಯಿಸಳ ಬಲ್ಲಾಳ ಮಹಾರಾಯರು ನಮಗೆ ವಂಶಾನ್ವಯವಾಗಿ ನಾಯಕತನಕೆ ಪಾಲಿಸಿದ ದಾನಿವಾಸ ಸೀಮೆ."***[1]**

ಹೊಯ್ಸಳರ ಆಡಳಿತವನ್ನು ನೋಡಿದಾಗ ಅವರ ರಾಜ್ಯಾಡಳಿತವು ಒಂದು ಏಕೀಕೃತ ರಾಜ್ಯಕ್ಕಿಂತ, ಊಳಿಗಮಾನ್ಯ ಒಕ್ಕೂಟ ರಚನೆಯನ್ನು ಹೊಂದಿದ್ದು ಮಾಂಡಳಿಕ ವ್ಯವಸ್ಥೆಗೆ ಹೆಚ್ಚಿನ ಒತ್ತುಕೊಟ್ಟಿತು.**[2]**ಈ ಹಿನ್ನೆಲೆಯನ್ನಿಟ್ಟುಕೊಂಡು ನೋಡಿದಾಗ ದಂಡನಾಯಕರು ಮತ್ತು ಮನ್ನೆಯರು ಭೂಮಿಕಾಣಿಕೆಯನ್ನು ಅನುವಂಶಿಕವಾಗಿ ಪಡೆಯುತ್ತಿದ್ದರು.**[3]**ಆದುದರಿಂದ ಮೇಲಿನ ಶಾಸನದಲ್ಲಿ ತಿಳಿಸಿದಂತೆ ದಾನಿವಾಸ ಒಡೆಯರಿಗೆ ಹೊಯಿಸಳ ವೀರಬಲ್ಲಾಳನಿಂದ ದಾನಿವಾಸ ಸೀಮೆಯು ಪ್ರಾಪ್ತವಾಯಿತೆಂದು ಸ್ಪಷ್ಟವಾಗುತ್ತದೆ. ಅನುವಂಶಿಕವಾಗಿ ಈ ಸೀಮೆಯನ್ನು ಪಡೆಯಬೇಕಾದರೆ ಒಡೆಯರ ಪೂರ್ವಜರು ಹೊಯ್ಸಳರ ರಾಜ್ಯಾಡಳಿತದಲ್ಲಿ ಅಧಿಕಾರಿಗಳಾಗಿಯೊ ಅಥವಾ ದಂಡನಾಯಕರಾಗಿಯೊ ಸೇವೆಯನ್ನು ಸಲ್ಲಿಸಿರಬೇಕು. ಹೀಗೆ ಹೊಯ್ಸಳ ದೊರೆ ವೀರಬಲ್ಲಾಳನಿಂದ ದಾನಿವಾಸ ಸೀಮೆಯನ್ನು ಪಡೆದುಕೊಂಡ ಇವರು ಆ ಸಾಮ್ರಾಜ್ಯ ಪತನಹೊಂದಿದ ನಂತರ ಸ್ವತಂತ್ರರಾಗಿ ಆ ಸೀಮೆಯಲ್ಲಿ ಕೆಲಕಾಲ ಆಳ್ವಿಕೆ ನಡೆಸಿರಬಹುದು. ಇದನ್ನು ಹೊರತುಪಡಿಸಿದರೆ ಕ್ರಿ.ಶ. ೧೫೫೩ರ ವರೆಗೆ ಆಧಾರಗಳ ಕೊರತೆಯಿಂದ ಏನನ್ನೂ ಹೇಳಲು ಸಾಧ್ಯವಾಗುವುದಿಲ್ಲ.

ವಿಜಯನಗರದವರು ಮಲೆನಾಡು ಭಾಗದಲ್ಲಿ ಪ್ರಭಾವಶಾಲಿಗಳಾದಾಗ ದಾನಿವಾಸ ಸೀಮೆಯಲ್ಲಿ ಆಳ್ವಿಕೆ ಮಾಡುತ್ತಿದ್ದ ಒಡೆಯರು ಅವರಿಗೆ ನಿಷ್ಠರಾಗಿ ನಡೆದುಕೊಳ್ಳಲಾರಂಭಿಸಿದರು ಎಂಬುದನ್ನು ಶಾಸನವೊಂದು ದಾಖಲಿಸುತ್ತದೆ.**[4]**

"ಶಾಲಿವಾಹನ ಶಕೆ ೧೪೭೪ನೇ ಸಂದ ವರ್ತಮಾನ ಪರಿಧಾವಿ ಸಂವತ್ಸರ ಪಾಲ್ಗುನ ಶುದ್ಧ ೧೦ ಗುರುವಾರದಲು ಶ್ರೀ ಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ ಶ್ರೀ ವೀರ ಪ್ರತಾಪ ಶ್ರೀ ಸದಾಶಿವ ಮಹಾರಾಯರು ಹಂಪೆ ನೆಲೆವೀಡಿನ ಸುಕ್ಷೇತ್ರದ ವಿದ್ಯಾನಗರೀ ಸಿಂಹಾಸನದಲಿ ಸಾಮ್ರಾಜ್ಯವಾಳುವ ಕಾಲದಲಿ ಶ್ರೀಮತ್ ದಾನಿವಾಸದ ವಿರೂಪಾಕ್ಷರಸರ ಮಗ ಚಿಂನರಾಯ ವಡೆಯರ ಮಗ ಲಿಂಗಣ ನಾಯಕರು ಮಾಡಿದ ದೇವತಾ ಪ್ರತಿಷ್ಠೆ ಬ್ರಾಹ್ಮರ ಸತ್ರ ಧರ್ಮ ಪ್ರತಿಪಾಲನ ಶಾಸನ."

ಇದನ್ನಾಧರಿಸಿ ಹೇಳುವುದಾದರೆ ಹೊಯ್ಸಳರು ನೀಡಿದ ಗ್ರಾಮ ಕಾಣಿಕೆಯನ್ನು ವಿಜಯನಗರದ ಚಕ್ರವರ್ತಿಗಳು ಮುಂದುವರಿಸಿದರು ಮತ್ತು ದಾನಿವಾಸ ಒಡೆಯರು ವಿಜಯನಗರದ ಚಕ್ರವರ್ತಿಗಳಿಗೆ ದೈಹಿಕವಾಗಿ ಸೈನಿಕ ಸೇವೆ ಮತ್ತು ಪೊಗದಿ ಕೊಡುತ್ತಾ ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದರು.

ಹೀಗೆ ಪ್ರಗತಿಯತ್ತ ಸಾಗುತ್ತಿದ್ದ ದಾನಿವಾಸ ಒಡೆಯರಿಗೆ ಹಣಕಾಸಿನ ಬಿಕ್ಕಟ್ಟು ತಲೆದೋರಿತು. ಅದನ್ನು ನಿವಾರಿಸಿಕೊಳ್ಳಲು ಅವರು ಬಾಳೇಹಳ್ಳಿ ಮಠದಿಂದ ೧೨೦೦೦ ವರಹಗಳನ್ನು ಸಾಲವಾಗಿ ಪಡೆದರು. ಈ ಸಾಲದ ಪತ್ರವು ಕೊಪ್ಪದ ಬಸವಯ್ಯನಲ್ಲಿರುವುದು ಕಂಡು ಅದನ್ನು ದಾನಿವಾಸ ಒಡೆಯನಾದ ಚಂನವೀರಣ್ಣ ನಾಯಕನು ಅವನಿಂದ ಪಡೆದುಕೊಂಡು ತಮ್ಮ ಪೂರ್ವಜರು ಮಾಡಿದ ಸಾಲಕ್ಕೆ ಪ್ರತಿಯಾಗಿ ಆ ಮನೆತನಕ್ಕೆ ಸೇರಿದ ಲಿಂಗಣ್ಣನಾಯಕ, ಮಲ್ಲಣ್ಣನಾಯಕ, ಚಿಕ್ಕಮಲ್ಲಣ್ಣನಾಯಕ ಹಾಗೂ ಪ್ರಜೆಗಳೊಡಗೂಡಿ ಬಾಳೆಹಳ್ಳಿ ಮಠಕ್ಕೆ ತಮ್ಮ ಸೀಮೆಯೊಳಗಣ ಮೂರು ಗ್ರಾಮಗಳನ್ನು ಬಿಟ್ಟುಕೊಟ್ಟರು.**[5]**ಈ ಶಾಸನದಲ್ಲಿ ಉಲ್ಲೇಖವಾಗಿರುವ ಚಂನವೀರಣ್ಣ ನಾಯಕ, ಲಿಂಗಣ್ಣನಾಯಕ, ಮಲ್ಲಣ್ಣನಾಯಕ ಮತ್ತು ಚಿಕ್ಕಮಲ್ಲಣ್ಣನಾಯಕ ಈ ಮನೆತನಕ್ಕೆ ಸೇರಿದ ಸಹೋದರರಾಗಿದ್ದು ಇವರು ತಮ್ಮ ಪೂರ್ವಜರಾದ ವಿರೂಪಾಕ್ಷ ಒಡೆಯರ್, ಚಂನರಾಯ ಒಡೆಯರ್, ಅರಸಪ್ಪ ಒಡೆಯರ್ಮಾಡಿದ ಸಾಲಕ್ಕೆ ತಾವು ಹೊಣೆಯಾಗಿ ಅದನ್ನು ತೀರಿಸುವುದರ ಮುಖಾಂತರ ಋಣಮುಕ್ತರಾದರು. ಇದರಿಂದ ಮಠಗಳು ಕೂಡಾ ಆ ಕಾಲದಲ್ಲಿ ಸಾಲ ಕೊಡುವ ಕೇಂದ್ರಗಳಾಗಿದ್ದವು ಮತ್ತು ಅವುಗಳು ಇಂದಿನ ಕಾಲದ ಬ್ಯಾಂಕುಗಳಂತೆ ಕಾರ್ಯವನ್ನು ನಿರ್ವಹಿಸುತ್ತಿದ್ದವೆಂದು ಹೇಳಬಹುದು ಹಾಗೂ ಬಾಳೆಹಳ್ಳಿ ಮಠವು ಅತ್ಯಂತ ಶ್ರೀಮಂತ ಮಠವಾಗಿತ್ತೆಂದು ಇದರಿಂದ ಗೊತ್ತಾಗುತ್ತದೆ.

ದಾನಿವಾಸ ಒಡೆಯರ ವಂಶಾವಳಿ (ಶಾಸನಗಳ ಆಧಾರದಿಂದ)

ವಿರೂಪಾಕ್ಷರಸರು
|
ಚಂನರಾಯ ಒಡೆಯರ್
|
ಲಿಂಗಣ ನಾಯಕ (ಕ್ರಿ.ಶ. ೧೫೫೩)
|
ಅರಸಪ್ಪ ಒಡೆಯರ್ (ಕ್ರಿ.ಶ. ೧೫೭೦)
|
ಚಂನವೀರಣ ನಾಯಕ (೧೫೭೦) ಲಿಂಗನಾಯಕ ಮಲ್ಲಣ್ಣ ನಾಯಕ
ಚಿಕ್ಕಮಲಂಣ ನಾಯಕ
|
ಚಿಕ್ಕವೀರಪ್ಪ ಒಡೆಯರ್
|
ಚಂನವೀರಪ್ಪ ಒಡೆಯರ್ (ಕ್ರಿ.ಶ. ೧೫೮೮)

ದಾನಿವಾಸ ಒಡೆಯರು ರಾಜಕೀಯವಾಗಿ ಅತ್ಯಂತ ಪ್ರಬಲ ಶಕ್ತಿಯಾಗಿ ಮೆರೆಯದಿದ್ದರೂ ಸಾಂಸ್ಕೃತಿಕವಾಗಿ ಪ್ರಗತಿ ಸಾಧಿಸಿದ್ದರೆಂದು ಹೇಳಬಹುದು. ಇವರು ಮೂಲತಃ ಶೈವ, ವೀರಶೈವರಾಗಿದ್ದು ಆ ಧರ್ಮದ ಪ್ರಗತಿಗೆ ಸೇವೆ ಸಲ್ಲಿಸಿರುವುದು ಕಂಡು ಬರುತ್ತದೆ. ಉದಾಹರಣೆಗೆ: ತುಮಕೂರು ಜಿಲ್ಲೆ, ಕುಣಿಗಲ್ ತಾಲೂಕು ಎಡೆಯೂರು ಮಠದ ಆವರಣದಲ್ಲಿ ಸಿದ್ದಲಿಂಗ ಶಿವಯೋಗಿಗಳ ಕೀರ್ತಿಯನ್ನು ಉದ್ಘೋಷಿಸುವ ಶಾಸನದಲ್ಲಿ**[6]**ದಾನಿವಾಸ ಒಡೆಯರು ಸಿದ್ದಲಿಂಗೇಶ್ವರರನ್ನು

ಜ್ಞಾನಕ್ರಿಯಾಸ್ವರೂಪನೂ ಸರ್ವಾಂಗಲಿಂಗಿ ಷಟ್ಸ್ಥಲಗ್ನಾನಿ ಸರ್ವಾಚಾರ ಸಂಪನ್ನ ಪಾದೋದಕ ಪ್ರಸಾದ ಪ್ರತಿಷ್ಠಾಚಾರ್ಯರೂ ಅಷ್ಟಾವರಣಾಲಂಕರಣ ದ್ವೈತಾದ್ವೈತಿ ತಿಮಿರಮಾರ್ತ್ತಂಡನುಂ ಯಿಂತಪ್ಪ ದಿವ್ಯಶಿವಯೋಗಿ ಸಿದ್ದಲಿಂಗೇಶ್ವರ

ಎಂದು ಕೊಂಡಾಡಿದ್ದಾರೆ. ಆ ವರ್ಣನೆ ಸಿದ್ದಲಿಂಗ ಯತಿಗಳ ವ್ಯೋಮಸದೃಶ ವ್ಯಕ್ತಿತ್ವವನ್ನು ಅಭಿವ್ಯಕ್ತಗೊಳಿಸುತ್ತದೆ.

ತೋಂಟದ ಸ್ವಾಮಿಯ ಪಾದ ಪದ್ಮಾರಾಧಕರಾದ ದಾನಿವಾಸ ನಿವಾಸಿಗಳಾದ ಚಂನರಾಯ ಒಡೆಯರು. ಚಂನರಾಯ ವಡೆಯರ ಮಕ್ಕಳು ಲಿಂಗಪ್ಪ ವಡೆಯರು ಲಿಂಗಪ್ಪ ವಡೆಯರ ಮಕ್ಕಳು ಪಾದೋದಕ ಪ್ರಸಾದ ಸಂಪನ್ನರಾದ ಚಂನವೀರಪ್ಪ ವಡೆಯರು ಅವರ ಸತಿ ಪಾರ್ವತಮ್ಮ ದಂಪತಿಗಳು ತೋಂಟದ ಸ್ವಾಮಿಗೆ ಕಲ್ಲುಮಟವನ್ನು ಕಟ್ಟಿಸಬೇಕೆಂದು... ಯೆಡೆಯೂರಿಗೆ ಬಿಜಂಗೆಯಿದು

ಎಂಬ ವಿವರದಿಂದ**[7]**ದಾನಿವಾಸದ ಅರಸ ಚಂನವೀರಪ್ಪ ಒಡೆಯ ತೋಂಟದ ಸಿದ್ದ ಲಿಂಗೇಶ್ವರರ ಪರಮಭಕ್ತನಾಗಿದ್ದು ಆ ಸ್ವಾಮಿಗೆ ಕಲ್ಲಿನಿಂದಲೇ ಮಠವನ್ನು ಕಟ್ಟಿಸಿ ಕೊಡುವುದರ ಮುಖಾಂತರ ತನ್ನ ಜೀವನವನ್ನು ಸಾರ್ಥಕಗೊಳಿಸಿ ಕೊಂಡಿರುವುದು ಸ್ಪಷ್ಟವಾಗುತ್ತದೆ. ಅಲ್ಲದೆ ಸ್ವಾಮಿಯ ಪೂಜೆಗೆ ಸೀಮೆಯ ಮೇಲೆ ಸಂಗ್ರಹಿಸಿದ ನಂದಾದೀಪದ ಕಾಣಿಕೆಯನ್ನು ಅರ್ಪಿಸಿರುವುದು. ಮಠಕ್ಕೆ ಬಂದ ಭಕ್ತರಿಗೆ ದಾಸೋಹ ವ್ಯವಸ್ಥೆಗಾಗಿ ಅಡಿಗೆ ಮನೆ, ಉಗ್ರಾಣ ಮುಂತಾದುವನ್ನು ನಿರ್ಮಿಸಿ ಅನುಕೂಲ ಕಲ್ಪಿಸಿರುವುದು ತಿಳಿದು ಬರುತ್ತದೆ.**[8]**ಈ ರೀತಿ ಅರಸರು ಸಮಾಜದಲ್ಲಿ ಉತ್ತಮಸ್ಥಾನವನ್ನು ಗಳಿಸಿಕೊಂಡು ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು ತಮ್ಮಲ್ಲಿ ಹುದುಗಿದ್ದ ಪಾಪ ಪುಣ್ಯೆಯನ್ನು ನಿವಾರಿಸಿಕೊಳ್ಳುವುದಕ್ಕ ಇಂತಹ ಧಾರ್ಮಿಕ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿರುವುದು ಆ ಕಾಲದ್ಲಿ ಸರ್ವೇಸಾಮಾನ್ಯವಾದ ಸಂಗತಿಗಳಾಗಿದ್ದವು.**[9]**

ರಾಜರು ಯಾವುದೇ ಒಂದು ಧರ್ಮದ ಪಕ್ಷಪಾತಿಯಾದರೆ ಸಮಾಜದಲ್ಲಿ ಅನಿಷ್ಟ ಪರಿಣಾಮಗಳುಂಟಾಗುತ್ತವೆ. ಆದ್ದರಿಂದ ಸಾರ್ವಜನಿಕ ಹಿತಾಸಕ್ತಿಯಿಂದ ಮತ್ತು ಆಡಳಿತ ದೃಷ್ಟಿಯಿಂದ ಅವರು ತಮ್ಮ ಒಲವು ಎತ್ತಕಡೆಗಿದೆಯೋ ಆ ಕಡೆಗಾಗಲೀ, ಯಾವ ವರ್ಗವು ಪ್ರಧಾನವಾಗಿದೆಯೋ ಆ ಕಡೆಗಾಗಲಿ ನಿಲ್ಲುತ್ತಿರಲಿಲ್ಲ. ಇದರ ಫಲವಾಗಿ ವಿಶೇಷವಾದ ಧಾರ್ಮಿಕ ಸಹಿಷ್ಣುತೆಯ ನೀತಿ ಹಲವಾರು ಶತಮಾನಗಳಿಂದ ಸಾಗಿ ಬಂದಿದೆ. ಸರ್ಕಾರದ ಸಂಪನ್ಮೂಲವನ್ನು ಆಯಾ ಧರ್ಮಗಳಿಗೆ ನಿಗದಿಪಡಿಸುವುದರ ಮೂಲಕ ಪೂಜಾಸ್ಥಳದ ನಿರ್ಮಾಣ ಮತ್ತು ಅವುಗಳ ಪಾಲನೆಗಾಗಿ ದತ್ತಿಗಳ ನೀಡುವಿಕೆ ಸರ್ವೇಸಾಮಾನ್ಯವಾದ ಸಂಗತಿಗಳು. ಈ ಹಿನ್ನೆಲೆಯನ್ನು ಪರಿಶೀಲಿಸಿದಾಗ ದಾನಿವಾಸ ಒಡೆಯರು ಇಂತಹ ಪರಂಪರೆಯನ್ನು ಮುಂದುವರಿಸಿದ್ದರು.

ತಾತ್ವಿಕ ದೃಷ್ಟಿಯಿಂದ ವೀರಶೈವಧರ್ಮ ದೇವಾಲಯ ನಿರ್ಮಾಣವನ್ನು ನಿರಾಕರಿಸಿದರೂ ಕೂಡ ವೀರಶೈವರಾಗಿದ್ದ ದಾನಿವಾಸ ಒಡೆಯರು ದೇವಾಲಯ ನಿರ್ಮಾಣವನ್ನು ತಿರಸ್ಕರಿಸಲಿಲ್ಲ. ಉದಾರ ದೃಷ್ಟಿಯಿಂದ ಅವುಗಳಿಗೂ ಪ್ರೋತ್ಸಾಹ ನೀಡಿ ಬೆಳೆಸಿದರು. ಜೀವನದಲ್ಲಿ ಒಂದಾದರೂ ಗುಡಿಯನ್ನು ಕಟ್ಟಿಸಬೇಕು ಇಲ್ಲವೆ ಕಟ್ಟಿಸಿದ ಗುಡಿಗಳಿಗೆ ದಾನವನ್ನಾದರೂ ಮಾಡಬೇಕು ಎಂಬುದು ಅವರ ಭಾವನೆಯಾಗಿತ್ತು. ಆದ್ದರಿಂದ ಅವರು ತಮ್ಮ ರಾಜಧಾನಿಯಾದ ದಾನಿವಾಸದಲ್ಲಿ ದೇವಾಲಯ ನಿರ್ಮಿಸಿರುವುದು ಶಾಸನದಲ್ಲಿ ಉಲ್ಲೇಖವಾಗಿದೆ.

ಉದಾ: ದಾನಿವಾಸದ ಲಿಂಗಣ ನಾಯಕನು ಕ್ರಿ.ಶ. ೧೫೫೭ರಲ್ಲಿ ದಾನಿವಾಸ ಪಟ್ಟಣದಲ್ಲಿ ವಿರೂಪಾಕ್ಷ ಲಿಂಗ ಪ್ರತಿಷ್ಠೆಯನ್ನು ಮಾಡಿಸಿ ಬ್ರಾಹ್ಮಣರ ಸತ್ರಕ್ಕೆ ಗುಳ್ಳದ ಮಾನಿಯ

ಗ್ರಾಮದೊಳಗೆ ಹಾನಂಬಿಯಿದ ಪಡುವಣ ೨೫ ಖಂಡುಗದ ಭೂಮಿಯನ್ನು ಬಿಟ್ಟನು.[10]ಮತ್ತು ಅಲ್ಲಿಯೇ ಬಸವೇಶ್ವರ ದೇವರ ಗುಡಿಯನ್ನು ಕೂಡಾ ಕಟ್ಟಿಸಿದನು.[11]

ಇಂತಹ ದೇವಾಲಯಗಳಲ್ಲಿ ಅನೇಕ ರೀತಿಯ ಸೇವೆಗಳು ನಡೆಯುತ್ತಿದ್ದವು. ಜಾತ್ರೆಗಳು, ಉತ್ಸವಗಳು ಆಚರಿಸಲ್ಪಡುತ್ತಿದ್ದವು. ಮತ ಧರ್ಮಗಳನ್ನು ಜೀವಂತವಾಗಿ ಇಡಲು ದೇವಾಲಯ ಮತ್ತು ಅದರ ಆವರಣದ ಒಳಗೆ, ಹೊರಗೆ, ಇಂತಹ ಧಾರ್ಮಿಕ ಕ್ರಿಯೆಗಳು ಅತ್ಯಾವಶ್ಯಕವಾಗಿದ್ದವು. ಉದಾ: ಅಮೃತಪಡಿ ಸೇವೆ[12], ನಂದಾದೀಪದ ಸೇವೆ[13]ಇತ್ಯಾದಿ.

ಈ ಸೇವೆಗಳಿಗೆ ದಾನಿಗಳು ಹಣವನ್ನು ನಿಗದಿಗೊಳಿಸುತ್ತಿದ್ದರು. ಉದಾಹರಣೆಗೆ : ದಾನಿವಾಸ ಒಡೆಯರು ವಿರೂಪಾಕ್ಷದೇವರ ಅಮೃತಪಡಿ ಸೇವೆಗೆ ೧೦ ಖಂಡುಗ ಭೂಮಿಯನ್ನು, ಬಸವೇಶ್ವರ ದೇವರ ಅಮೃತಪಡಿ ಮತ್ತು ನಂದಾದೀಪದ ಸೇವೆಗೆ ೫೦ ಖಂಡುಗ ಭೂಮಿಯನ್ನು ಬಿಟ್ಟರು.[14]ಇದರ ಜೊತೆಗೆ ಸಮಾಜದಲ್ಲಿನ ಜನರಿಗೆ ಉಪಯುಕ್ತವಾದ ಕಾರ್ಯಕ್ಕೆ ಹಣವನ್ನು ತೊಡಗಿಸುವುದು ಧರ್ಮವೆಂದು ಭಾವಿಸಿದ್ದರು. ಉದಾಹರಣೆಗೆ : ಕೆರೆಗಳ ನಿರ್ಮಾಣ. ಇವರು ದಾನಿವಾಸದಲ್ಲಿ ಕೆರೆಯೊಂದನ್ನು[15]ನಿರ್ಮಿಸಿ ಪಟ್ಟಣದ ನೀರಿನ ತೊಂದರೆಯನ್ನು ನಿವಾರಿಸಿದ್ದರು.

ಇವರು ಪರಂಪರಾನುಗತವಾಗಿ ಸಮಾಜದಲ್ಲಿದ್ದ ನಂಬುಗೆಗಳನ್ನು ಉಳಿಸಿಕೊಂಡರು. ಸಮಾಜದಲ್ಲಿ ಪಾಪ-ಪುಣ್ಯ, ಸ್ವರ್ಗ ನರಕದ ಕಲ್ಪನೆ ಬಹು ಪ್ರಾಚೀನ ಕಾಲದಿಂದಲೂ ಬೆಳೆದುಬಂದಿದೆ. ಇವರ ಅನೇಕ ಶಾಸನಗಳ ಕೊನೆಯಲ್ಲಿ ಭೂದಾನವನ್ನು ಕೊಟ್ಟವನು ಸ್ವರ್ಗಕ್ಕೆ ಹೋದರೆ, ಅದನ್ನು ರಕ್ಷಿಸಿದವನು ದೇವರ ಬಳಿಯೇ ಹೋಗುತ್ತಾನೆ. ಹಾಗೆಯೇ ದಾನವನ್ನು ಅಪಹರಿಸುವುದು ಮಹಾಪಾಪ. ಅವನಿಗೆ ಸ್ತ್ರೀ ಹತ್ಯೆ ಮತ್ತು ಗೋವುಗಳನ್ನು ಕೊಂದಷ್ಟು ಪಾಪ ಬರುತ್ತದೆ.[16]ಆದುದರಿಂದ ದಾನಿವಾಸ ಒಡೆಯರು ದಾನವನ್ನು ಒಂದು ಪ್ರಮುಖ ಮೌಲ್ಯವನ್ನಾಗಿ ತಮ್ಮ ಸಾಮಾಜಿಕ ಜೀವನದಲ್ಲಿ ಅಳವಡಿಸಿಕೊಂಡಿದ್ದರು.

ದಾನಿವಾಸ ಒಡೆಯರ ಸೀಮೆಯ ವ್ಯಾಪ್ತಿಯಲ್ಲಿ ನಷ್ಟಸಂತಾನ ಜಮೀನುಗಳೇನಾದರೂ ಇದ್ದರೆ ಅಂಥವುಗಳನ್ನು ಅರಮನೆಯವರು ತೆಗೆದುಕೊಳ್ಳುವ ಪರಿಪಾಠವಿತ್ತು. ಉದಾಹರಣೆಗೆ :

ಬಾಳೆ ಪಾಲ ಬಂದಪ್ಪನ ಮಗ ಲಿಂಗಣನು ನಷ್ಟ ಸಂತಾನ ವಾಹೋದ ಸಂಮಂಧ ಆತನ ಭೂಮಿ ನಾಗಲಾಪುರದ ಗ್ರಾಮದೊಳಗೆ ತೆಂಗಿನ ಹಿತ್ತಲಗದ್ದೆ ಖಂಡುಗ ವಂಭತ್ತು ಭೀಜವರಿ | ಅ ಭೂಮಿ ನಂಮ ಅರಮನೆಗೆ ಹರವರಿಯಾಗಿ ಬಂದ ಸಂಬಂಧ.[17]ಬಾಳೆ ಪಾಲ ತಂಮಯನ ಮಗ ನರಸಪ್ಪನು ನಷ್ಟಸಂತಾನವಾಗಲು ಹೋದ ಸಂಮಂಧ ಎಂಟು ಖಂಡುಗ ಬಿಜವರಿ ಭೂಮಿ ನಂಮ ಅರಮನೆಗೆ ಹರವರಿಯಾಗಿ ಬಂಧ ಸಂಮಂಧ.[18]

ಈ ರೀತಿ ಪಡೆದುಕೊಂಡ ಭೂಮಿಯಿಂದಲೂ ದಾನಿವಾಸದ ಒಡೆಯರು ತಮ್ಮ ಆದಾಯವನ್ನು ಹೆಚ್ಚಿಸಿಕೊಂಡು ಖಜಾನೆಯನ್ನು ಭರ್ತಿ ಮಾಡಿಕೊಳ್ಳುತ್ತಿದ್ದರು. ಪ್ರಾಯಶಃ ಪರಿಸ್ಥಿತಿಯ ಒತ್ತಡದಿಂದ ತಾವು ಸಂಕಷ್ಟಕ್ಕೆ ಸಿಲುಕಿಕೊಂಡಾಗ ಅದನ್ನು ಪರಿಹರಿಸಿಕೊಳ್ಳಲು ತಮ್ಮಲ್ಲಿದ್ದುದನ್ನು ಶ್ರೀಮಂತರಿಗೋ ಅಥವಾ ಮಠಗಳಿಗೋ ಮಾರುತ್ತಿದ್ದರು. ಇಂತಹ ಪರಿಪಾಠ ಚಿಕ್ಕಪುಟ್ಟ ಮನೆತನಗಳಲ್ಲಿ ಸರ್ವೇಸಾಮಾನ್ಯವಾದ ಸಂಗತಿಯಾಗಿದೆ. ಉದಾಹರಣೆಗೆ : ತುಮಕೂರು ಜಿಲ್ಲೆಯಲ್ಲಿ ೨೫೦ ವರ್ಷಗಳ ಸುದೀರ್ಘ ಆಳ್ವಿಕೆ ನಡೆಸಿದ ಹಾಗಲವಾಡಿ ನಾಯಕರು ತಮ್ಮ ಕೊನೆಯ ದಿನಗಳಲ್ಲಿ ಹೈದರಾಲಿಯ ಒತ್ತಡಕ್ಕೆ ಸಿಲುಕಿ ಹಣವನ್ನು ನೀಡಬೇಕಾಗಿ ಬಂದಾಗ ಈ ಪರಿಸ್ಥಿತಿ ತಲೆದೋರಿತ್ತು. ಇದೇ ರೀತಿ ದಾನಿವಾಸ ಒಡೆಯರು ಕೂಡಾ ನಷ್ಟ ಸಂತಾನದಿಂದ ವಶಪಡಿಸಿಕೊಂಡಿದ್ದ ಭೂಮಿಯನ್ನು ಶ್ರೀಮಂತರಾಗಿದ್ದ ಗೇರುಸೊಪ್ಪೆಯ ಜೈನಮಠದ ಸಮಂತ ಭದ್ರದೇವರ ಶಿಷ್ಯ ಗುಣಭದ್ರದೇವರು ಇವರ ಶಿಷ್ಯ ವೀರಸೇನದೇವರಿಗೆ ಕ್ರಯಕ್ಕೆ ನೀಡಿದ ಸಂಗತಿ ನಾಲ್ಕು

ಶಾಸನಗಳಲ್ಲಿ ದಾಖಲಾಗಿದೆ. ಹೀಗೆ ದಾನಿವಾಸದ ಚಂನವೀರಪ್ಪ ಒಡೆಯರು ಬೇರೆ ಬೇರೆ ಕಾಲಗಳಲ್ಲಿ ಒಟ್ಟು ೩೭ ಖಂಡುಗದ ಭೂಮಿಯನ್ನು ೧೪೨ ವರಹಗಳಿಗೆ ಗೇರುಸೊಪ್ಪೆಯ ವೀರಸೇನ ದೇವರಿಗೆ ಮಾರಾಟ ಮಾಡಿ ತಮ್ಮ ಹಣಕಾಸಿನ ಬಿಕ್ಕಟ್ಟನ್ನು ಬಗೆಹರಿಸಿಕೊಂಡರು.[19]ಇದು ಈ ಮನೆತನ ರಾಜಕೀಯವಾಗಿ ಹಾಗೂ ಆರ್ಥಿಕವಾಗಿ ಅವನತಿಯತ್ತ ಸಾಗುತ್ತಿರುವುದರ ಸ್ಪಷ್ಟ ಸೂಚನೆಯಾಗಿದೆ.

ಇವರ ಪ್ರಮುಖ ಆದಾಯ ಕೃಷಿಯಿಂದ ಬರುತ್ತಿತ್ತು. ತಮ್ಮ ಸೀಮೆಯ ವ್ಯಾಪ್ತಿಯ ಸಮಸ್ತ ಭೂ ಒಡೆತನ ಇವರಿಗೆ ಸೇರಿತ್ತು. ಆದರೆ ವಾಸ್ತವವಾಗಿ ಅವರು ಖಾಸಗಿ ಒಡೆತನವನ್ನು ರಕ್ಷಿಸುತ್ತಿದ್ದರು. ಮತ್ತು ಅದಕ್ಕೆ ಮನ್ನಣೆಕೊಟ್ಟಿದ್ದರು ಎಂಬುದಕ್ಕೆ ಉದಾಹರಣೆಯಾಗಿ ಗೇರುಸೊಪ್ಪೆ ಜೈನಮಠದ ವೀರಸೇನದೇವರಿಗೆ ಭೂಮಿಯನ್ನು ನೀಡಿ ನಿಧಿ, ನಿಕ್ಷೇಪ, ಜಲ, ಪಾಷಾಣ, ಅಕ್ಷೀಣಿ, ಆಗಾಮಿ, ಸಿದ್ಧ, ಸಾಧ್ಯಗಳೆಂಬ ಅಷ್ಟ ಭೋಗ ತೇಜ ಸ್ವಾಮ್ಯವನ್ನು ಅನುಭವಿಸಿಕೊಂಡು ಹೋಗಬಹುದೆಂದು ಉಲ್ಲೇಖವನ್ನು ನೋಡಬಹುದು.[20]

ದಾನಿವಾಸ ಒಡೆಯರು ಹೊಯ್ಸಳರ ಕಾಲದಲ್ಲಿ ಒಂದು ಸೀಮೆಯ ನಾಯಕತ್ವವನ್ನು ವಹಿಸಿಕೊಂಡು ವಿಜಯನಗರದ ಅರಸರ ಕಾಲದಲ್ಲಿ ಅವರಿಗೆ ನಿಷ್ಠರಾಗಿ ಸಾಕಷ್ಟು ಪ್ರಗತಿಯ ಜೊತೆಗೆ ಕಷ್ಟ ನಷ್ಟಗಳನ್ನು ಅನುಭವಿಸಿದರು. ಕ್ರಿ.ಶ. ೧೫೫೮ ನಂತರ ತಮ್ಮ ಸೀಮೆಯನ್ನು ಕಾಪಾಡಿಕೊಳ್ಳಲು ಸಾಧ್ಯವಾಗಲಿಲ್ಲವೆಂದು ತೋರುತ್ತದೆ. ಆ ವೇಳೆಗೆ ಅವರ ರಾಜ್ಯದ ಪಶ್ಚಿಮದಲ್ಲಿ ತರೀಕೆರೆ ನಾಯಕರು ಪ್ರಬಲರಾಗಿದ್ದರು. ಉತ್ತರದಲ್ಲಿ ಕೆಳದಿ ನಾಯಕರು ಸದೃಢವಾಗಿ ಬೆಳೆದು ತಮ್ಮ ರಾಜ್ಯವನ್ನು ಕರಾವಳಿವರೆಗೂ ವಿಸ್ತರಿಸಿದ್ದರು. ತಾಳೀಕೋಟೆಯ ಕದನದ ನಂತರ ಸ್ವತಂತ್ರರಾದ ಕೆಳದಿಯವರು ಗೇರುಸೊಪ್ಪೆಯ ಭೈರವರಾಣಿ, ಸ್ವಾದಿ ಅರಸರು, ಸಂತೆ ಬೆನ್ನೂರು ನಾಯಕರು ಮುಂತಾದವರನ್ನು ಸೋಲಿಸಿ ತಮ್ಮ ಶಕ್ತಿ ಸಾಮರ್ಥ್ಯವನ್ನು ಪ್ರದರ್ಶಿಸಿದ್ದರು. ಇಂತಹ ದೊಡ್ಡ ಅರಸು ಮನೆತನಗಳೇ ಕೆಳದಿಯವರ ಪಾಲಾದಾಗ ಚಿಕ್ಕ ಮನೆತನವಾದ ದಾನಿವಾಸದವರ ಬಗೆಗೆ ಹೇಳುವುದೇನಿದೆ. ಈ ಮನೆತನದ ಕೊನೆಯ ಒಡೆಯನಾದ ಚಂನವೀರಪ್ಪನು ಕೆಳದಿಯ ಹಿರಿಯ ವೆಂಕಟಪ್ಪ ನಾಯಕನಿಗೆ ತನ್ನ ಸೀಮೆಯನ್ನು ಒಪ್ಪಿಸಿರಬಹುದು. ಏಕೆಂದರೆ ಹಿರಿಯ ವೆಂಕಟಪ್ಪ ದಾನಿವಾಸ ಸೀಮೆಯಿಂದ ೧೦೦೦ ವರಹಗಳನ್ನು ಸಂಗ್ರಹಿಸಿದ್ದಾನೆಂದು ಅಂಶ ಹೊಳೆಹೊನ್ನೂರು ಕೈಫಿಯತ್ತಿನಿಂದ ತಿಳಿಯುತ್ತದೆ.[21]ಆದ್ದರಿಂದ ಹಿರಿಯ ವೆಂಕಟಪ್ಪ ನಾಯಕನೇ ದಾನಿವಾಸವನ್ನು ಆಕ್ರಮಿಸಿಕೊಂಡನೆಂದು ಹೇಳಲು ಸಾಧ್ಯವಾಗುತ್ತದೆ. ಕ್ರಿ.ಶ. ೧೬೦೭ರ ನಂತರ ಸುಮಾರು ೧೦೦ ವರ್ಷಗಳ ಕಾಲ ಕೆಳದಿ ಅರಸರ ಹಲವಾರು ಶಾಸನಗಳು[22]ದಾನಿವಾಸ ಕೆಳದಿರಾಜ್ಯದ ಒಂದು ಪ್ರಮುಖ ಆಡಳಿತ ಭಾಗ ಎಂದು ಹೇಳುತ್ತವೆ. ಆದ್ದರಿಂದ ಕೆಳದಿಯವರಿಗೆ ರಾಜ್ಯವನ್ನು ಒಪ್ಪಿಸಿದ ದಾನಿವಾಸದವರು ಕ್ರಮೇಣ ಯಾವುದೇ ಸ್ವತಂತ್ರ ನಿರ್ಧಾರದ ರಾಜಕೀಯ ಅಧಿಕಾರವಿಲ್ಲದೆ ಜೀವನ ಸಾಗಿಸಿರಬಹುದು ಎಂದು ಹೇಳಲು ಅವಕಾಶ ಉಂಟು.

ಒಟ್ಟಿನಲ್ಲಿ ಹೇಳುವುದಾದರೆ, ದಾನಿವಾಸ ಒಡೆಯರ ಮನೆತನ ಅತಿ ಚಿಕ್ಕದಾದರೂ ಅವರ ಉದಾರ ನೀತಿಯಂದ, ಉದಾತ್ತ ಧರ್ಮವನ್ನು ಸ್ವೀಕರಿಸಿ ಅದಕ್ಕೆ ನಿಷ್ಠರಾಗಿ ಬದುಕಿ ಕರ್ನಾಟಕದ ಸಣ್ಣ ಪ್ರಾದೇಶಿಕ ಮನೆತನವೊಂದರ ಇತಿಹಾಸದಲ್ಲಿ ತಮ್ಮದೇ ಆದ ನೆರಳನ್ನು ಬಿಟ್ಟುಹೋಗಿದ್ದಾರೆ. ಬಲಾಢ್ಯವೆನಿಸಿದ 'ವಿಜಯನಗರದಂತಹ ಸಾಮ್ರಾಟರ ಸಾಂಸ್ಕೃತಿಕ ಪರಂಪರೆಯನ್ನು ಭದ್ರಗೊಳಿಸುತ್ತಾ ಆ ಪರಂಪರೆಯನ್ನು ಸಂಘಟಿಸುವಲ್ಲಿ ಅತಿ ಕಿರಿಯ ಮನೆತನವಾದರೂ ಶ್ರಮಿಸಿ ಆ ಭಾಗದಲ್ಲಿ ಸಮನ್ವಯ ಸಂಸ್ಕೃತಿಯನ್ನು ಸಾಧ್ಯವಾಗಿಸಿದ ಕೀರ್ತಿ ಇವರಿಗೆ ಸಲ್ಲುತದೆ. ವೀರಶೈವರಾಗಿದ್ದ ಇವರು ಎಡೆಯೂರ ಸಿದ್ದಲಿಂಗೇಶ್ವರರ ಪರಮ ಭಕ್ತರಾಗಿದ್ದು ಎಡೆಯೂರಿನಲ್ಲಿ ಕಲ್ಲುಮಠವನ್ನು ಕಟ್ಟಿಸಿ, ತಮ್ಮ ಸೇವೆಯನ್ನು ಚಿರಸ್ಥಾಯಿಯಾಗಿಸಿದ್ದಾರೆ. ಅತಿ ಶ್ರೀಮಂತ ರಾಜಮನೆತನವಾಗದಿದ್ದರೂ ಕೂಡ ತನ್ನ ಇತಿ

ಮಿತಿಯಲ್ಲಿ ಇದು ಮಲೆನಾಡ ಸಂಸ್ಕೃತಿಗೆ ತನ್ನದೇ ಆದ ಕೊಡುಗೆ ಸಲ್ಲಿಸಿರುವುದು ಗಮನಾರ್ಹ.

(ಈ ಮನೆತನದ ಬಗ್ಗೆ ಮೊದಲು ಮಾಹಿತಿ ನೀಡಿದ ತುಮಕೂರಿನ ವೈದ್ಯರಾದ ಡಾ. ಬಿ. ನಂಜುಂಡಸ್ವಾಮಿಯವರಿಗೆ ವಂದನೆಗಳು.)

[1]*ಎ.ಕ.* **(ಎಪಿಗ್ರಾಫಿಯಾ ಕರ್ನಾಟಕ) VI ಕೊಪ್ಪ ೧೭. ಲಿಂಗಾಪುರ.**

[2]ಷೇಖ್ ಅಲಿ (ಸಂ) – ಹೊಯ್ಸಳರ ರಾಜ್ಯಾಡಳಿತ, *ಕರ್ನಾಟಕ ಚರಿತ್ರೆ* **ಸಂ. ೨. ಪು.೧೩೯ ಕನ್ನಡ ವಿ.ವಿ. ಪ್ರಸಾರಾಂಗ. ಹಂಪೆ.**

[3]ಎ.ಕ. ೫ (ಹೊಸ) ಮೈ, ೧೩೦ ತಿ.ನ.೮೮.

[4]*ಎ.ಕ.* **VI ಕೊಪ್ಪ ೧೭.**

[5]*ಎ.ಕ.* **VI ಕೊಪ್ಪ ೫.**

[6]*ಎ.ಕ.* **೧೨ ಹೊಸ ಆವೃತ್ತಿ, ಕುಣಿಗಲ್ ೪೯.**

[7]*ಅದೇ.*

[8]*ಅದೇ.*

[9]ಕೆ.ಎನ್. ಚಿಟ್ನಿಸ್ *ವೀರಶೈವ ಮಠಾಸ್ ಇನ್ ಕೆಳದಿ ಕಿಂಗ್‌ಡಂ* **ಪು. ೨-೪.**

[10]*ಎ.ಕ.* **VI ಕೊಪ್ಪ ೧೭.**

[11]*ಅದೇ.*

[12]*ಅದೇ.*

[13]*ಅದೇ.*

[14]*ಅದೇ.*

[15]*ಅದೇ.*

[16]*ಎಂ.ಎ.ಆರ್.* **೧೯೩೧ ಪು.೧೦೫, ೧೦೯, ೧೧೧.**

[17]*ಎಂ.ಎ.ಆರ್.* **೧೯೩೧ ಪು.೧೦೫, ೧೦೯.**

[18]ಅದೇ ಪು. ೧೦೮.

[19]*ಎಂ.ಎ.ಆರ್.* ೧೯೩೧ ಪು.೧೦೪, ೧೦೫, ೧೦೮, ೧೧೦.

[20]ಅದೇ ಪು. ೧೦೫, ೧೦೯, ೧೧೧.

[21]ಕಲಬುರ್ಗಿ ಎಂ.ಎಂ. (ಸಂ) – *ಕರ್ನಾಟಕ ಕೈಫಿಯತ್ತುಗಳು* ಪು. ೨೧೯.

[22]ನೋಡಿ ವೆಂಕಟೇಶ ಜೋಯಿಸ ಕೆಳದಿ (ಸಂ) – *ಕೆಳದಿ ಅರಸರ ಶಾಸನ ಸಂಪುಟ.*

ಮಲೆಕರ್ನಾಟಕದ ಅರಸು ಮನೆತನಗಳು: ೧೫. ಬೇಲೂರು ನಾಯಕರು (೧)

ಆಕರಗಳು

ಬೇಲೂರು (ಬಲಂ) ನಾಯಕರನ್ನು ಕುರಿತು *ಕೆಳದಿ ನೃಪ ವಿಜಯ, ಶಿವತತ್ವರತ್ನಾಕರ,* ಶಾಸನ ಸಂಪುಟಗಳು, *ಸರಜಾ ಹನುಮೇಂದ್ರ ಯಶೋವಿಲಾಸಂ, ಗೆಜೆಟೀರ್‌ಗಳು,* ಮೆಕಂಜೀ ಸಂಗ್ರಹಗಳು, ಶ್ರೀ ಕೃಷ್ಣದೇವರಾಯನ ದಿನಚರಿ

[1] ಹಾಗೂ *ವೇಲ್‌ಪುರೀ ಕೇಶವನೇತಿ ಗೀತಾ*[2]ಮಿಥಿಕ್ ಸೊಸೈಟಿಯ L VIII ಮತ್ತು L VII ಸಂಚಿಕೆಗಳು, *ಚಿಕ್ಕದೇವರಾಯ ವಂಶಾವಳಿ, ಚಿಕ್ಕದೇವರಾಯ ವಿಜಯ, ಮೈಸೂರು ದೊರೆಗಳ ಪೂರ್ವಾಭ್ಯುದಯ,* ಹಯವದನರಾಯರ *ಮೈಸೂರು ಚರಿತ್ರೆ,* ಮೈಸೂರು ಅರಮನೆಯ ಪ್ರಕಟಣೆಗಳು, ವಿಜಯನಗರದ ಇತಿಹಾಸಗಳು, ಸೂರ್ಯಾಂಕ ವಿರಚಿತ *ಕವಿ ಕಂಠಾಭರಣ,* ಶಾಮರಾಯರ ಮೈಸೂರಿನ ಇತಿಹಾಸ, **Letters and Despatches of Duke of Wellington,** ಹೊಯ್ಸಳ ವಾಸ್ತುಶಿಲ್ಪ ಮುಂತಾದ ಮೂಲ ಸಾಮಗ್ರಿಗಳು ಇತಿಹಾಸವನ್ನು ರೂಪಿಸಲು ಸಹಕಾರಿಯಾಗಿವೆ.

ಬೇಲೂರು ಬಲಂ ನಾಯಕರ ಪ್ರಾಚೀನತೆ

ಸ್ಥಳ ಪುರಾಣದ ಮೇರೆಗೆ ಬೇಲೂರಿಗೆ "ಮೇಲಾಪುರ" ಹಾಗೂ "ಬೇಲುಹೂರು" ಎಂಬ ಹೆಸರಿತ್ತು. *ಶಿವತತ್ವರತ್ನಾಕರ*ದಲ್ಲಿ ಕೆಳದಿ ಬಸವರಾಜನು.

ವೇಲಾಪುರಾಖ್ಯಂ ಪ್ರಾಕಾರಂ ಸಹಸಾ ಸ್ವಯಮಗ್ರಹೀತ್ /
ತತೋಗ್ರಹೀತ್ಕರೇಣೈವರಿಪುಂ ತನ್ಮಧ್ಯವರ್ತಿನಮ್ //
ಶ್ರೀ ರಂಗ ಸಾರ್ವಭೌಮಸ್ತಂ ಶೃತ್ವೋದಂತಂ ಪ್ರಹರ್ಷಿತಃ /
ವೇಲಾಪುರಂ ಸಮಾಯತಃ ಶಿವಭೂಪದಿದೃಕ್ಷಯಾ //

ಎನ್ನುವಲ್ಲಿ ಅದನ್ನು "ವೇಲಾಪುರ" ವೆಂಬುದಾಗಿ ಉಲ್ಲೇಖಿಸಿದ್ದಾನೆ. [3]

ಬೇಲೂರಿನ ಪ್ರಸಿದ್ಧ ಕೇಶವ ದೇವಾಲಯದ ಶಾಸನದಲ್ಲಿ ಉಕ್ತವಾಗಿರುವಂತೆ "ಅಭಿನವಕ್ಷೋಣಿ ವೈಕುಂಠ", "ದಕ್ಷಿಣವಾರಣಾಸಿ" ಎಂಬುದಾಗಿ ವರ್ಣಿಸಲಾಗಿದೆ. ಬೇಲೂರಿಗೆ "ಸೌಭಾಗ್ಯಪುರ" ಎಂಬ ಹೆಸರೂ ಇದ್ದುದು ಕಂಡು ಬರುತ್ತದೆ.[4] ಕ್ರಿ.ಶ. ೧೩೯೭ ರಲ್ಲಿ ವಿಜಯನಗರ ಚಕ್ರವರ್ತಿಯ ಅಧೀನದಲ್ಲಿ ಬಲಂ (ಈಗಿನ ಮಂಜಿರಾಬಾದ್) ಪ್ರಾಂತವಾಗಿದ್ದು, ಅನಂತರ ಐಗೂರು ಪಾಳೆಯ ಪಟ್ಟಿಗೆ ಸೇರಿತು. ಹೊಯ್ಸಳ ಸಾಮ್ರಾಜ್ಯದ ಕಣ್ಮಣಿಯಾಗಿದ್ದ ಬೇಲೂರಿನ

ಮೇಲೆ ವಿಜಯನಗರದವರಿಗೆ ವಿಶೇಷ ಆಸಕ್ತಿಯುಂಟಾಯಿತು. ಬಲಂ ಪಾಳೆಯಗಾರ ಮಂಚಯ್ಯನಾಯಕನ ಪುತ್ರ ಹಿರಿಯಸಿಂಗಪ್ಪನಾಯಕನು "ಮಣಿನಾಗಪುರ"**[5]** ಎಂಬ ಅಭಿಧಾನದಿಂದ ಕೂಡಿದ ಐಗೂರು ಸಂಸ್ಥಾನಕ್ಕೆ ಅಧಿಪತಿಯಾದನು. 'ಬಲಂ' ಅಂಕಿತವು ಹೊಯ್ಸಳ 'ಬಲ್ಲಾಳ'ದ ಮೂಲ ಸ್ವರೂಪವಿರಬಹುದಾಗಿ ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ. ಹದಿನೆಂಟನೇ ಶತಮಾನದಲ್ಲಿದ್ದ ವೆಂಕಟಪ್ಪನಾಯಕನ ಸಚಿವನಾದ ಸೂರ್ಯಾಂಕ ವಿರಚಿತ ಕವಿ ಕಂಠಾಭರಣ ಕೃತಿಯಲ್ಲಿ ಉಲ್ಲೇಖವು ಕಂಡು ಬಾರದಿದ್ದರೂ ಶ್ರೀಮನ್ಮಹಾರಾಜರ ವಂಶಾವಳಿಯಲ್ಲಿ 'ಬಲ್ಲಾ ಐಗೂರು' ಹಾಗೂ 'ಬಳ್ಳಂ' ಎಂದರೆ ಮಂಜರಾಬಾದಿನ ಐಗೂರು ಎಂಬುದಾಗಿ ಕರೆಯಲಾಗಿದೆ. ಕೆಳದಿ ಸಂಶೋಧನಾಲಯದಲ್ಲಿ ಲಭಿಸಿದ೧೬೨೫ರ ಹಳೆಯ ಮೈಸೂರು ಸಂಸ್ಥಾನದ ನಕ್ಷೆಯಲ್ಲಿ 'ಬಾಲಂ ಐಗೂರು' ಎಂಬುದಾಗಿ ಉಲ್ಲೇಖಗೊಂಡಿವೆ. **The Mysore Letters and Dispatches of The Duke of Wellington** (೧೭೯೯-೧೮೦೫) ನಲ್ಲಿರುವ **(Extract of a letter from Lient, colonel Meignan, to the Honourable Colonel Wellesley, Mangalore Dated April 19th 1800)** ಪತ್ರದಲ್ಲಿಯೂ "ಬಲ್ಲಂ ರಾಜಾ" **(Bullum Rajah)** ಎಂಬುದಾಗಿ ಹೆಸರಿಸಿದೆ.**[6]** ಮೈಸೂರಿನ ಇತಿಹಾಸಕಾರ ಎಂ. ಶಾಮರಾಯರು ತಮ್ಮ **Modern Mysore** ಕೃತಿಯಲ್ಲಿ **Among the refractory Palegars against whom military operations now became necessary was the Palegar Aigur or Manjarabad or Ballam Raja as he was varionsly called-** ಈ ರೀತಿ ನಿರೂಪಿಸಿದ್ದಾರೆ. ಕರ್ನಾಟಕದ ಕೈಫಿಯತ್ತುಗಳಲ್ಲಿ ಮೆಕಂಜೀ ಸಂಪುಟ ೩೩೨ನೆ ವಸುಧಾರೆ ಗ್ರಾಮದ ಕೈಫಿಯತ್ತು ಮತ್ತು ೩೫೩ ನೆಯ ಮರದಾಳ ಕೈಫಿಯತ್ತಿನಲ್ಲಿಯೂ ಈ ಕುರಿತು ಹಲವು ಅಸ್ಪಷ್ಟ ಮಾಹಿತಿಗಳು ಕಂಡುಬರುತ್ತವೆ.**[7]**

ಬೇಲೂರು ಪಾಳೆಯಪಟ್ಟು

೩೩೨ ನೆಯ ಮೆಕಂಝಿ ಸಂಪುಟದ ವಸುಧಾರೆ ಗ್ರಾಮದ ಕೈಫಿಯತ್ತಿನಲ್ಲಿ.

......ಆಮೇಲೆ ರಾಮರಾಯರ ಪ್ರಭುತ್ವದಲ್ಲಿಯೂ ಬೇಲೂರು ಶೀಮೆಯು ಅಮರ ಮಾಗಣಿಯಾಗಿ ವಬ್ಬಕ್ಷತ್ರಿಯರ ವಿಕ್ರಮರಾಯನು ಆನೆಗೊಂದೀ ಸಂಸ್ಥಾನದಲ್ಲಿ ಬಹಳ ದಿವಸಾ ಕಾದುಕೊಂಡು ಯಿದ್ದದರಿಂದ ಯೀತಗೆ ತುಂಟರು ಯೀ ವಿಕ್ರಮರಾಯನು ರಾಮರಾಯನ ಕೆಳಗೆ ಪ್ರಭುತ್ವ ಮಾಡಿ ಆಮೇಲೆ ಸ್ವರ್ಗಸ್ಥನಾದನು. ಇವನಿಗೆ ಸಂತಾನವಿಲ್ಲವಾದ್ದರಿಂದ ಶೀಮೆಯಾವತ್ತು ಆನೆಗೊಂದಿಯವರು ಜಪ್ತಿ ಮಾಡಿಕೊಂಡರು. ಆಮೇಲೆ ಆನೆಗುಂದಿ ಸಂಸ್ಥಾನದಲ್ಲಿ ಸಂಗೀತಗಾರ ಬಿಕಾರಿ ರಾಮಪ್ಪ ಎಂಬುವನು ವಿಧ್ಯದಲ್ಲಿ ಅರಸುಗಳಿಗೆ ಮೆಚ್ಚಿಸಿದ್ದರಿಂದ ಅರಸುಗಳು ಯಿವನಿಗೆ ಬೇಲೂರು ಪೈಕಿ ಕಸಬಾ ಬೇಲೂರು ೪ಂ ಸಾವಿರದ ಅಮರ ಮಾಗಣಿಯಾಗಿ ಕೊಟ್ಟರು. ಅವನು..... ವರುಷ ಪ್ರಭುತ್ವವನ್ನು ಮಾಡಿದನು. ಇವನಿಗೆ ಇಬ್ಬರು ಹೆಂಡತಿಯರು. ಇದರಲ್ಲಿ ಒಬ್ಬಳು ನಗರದ ಸಂಸ್ಥಾನದ ಪ್ರಧಾನಿ ಮಗಳು ೧.**[8]** ಯರಡನೆ ಯವಳು ವೈಗುರು (ಐಗೂರು) ಗೋಪಾಲನಾಯಕ ಯಂಬವನು ಅರಸು ಪ್ರಧಾನಿ ಮಗಳು ೨. ಯೀ ಮೇರಿಗೆ ಇರುವಾಗೆ ಬಿಕಾರಿ ರಾಮಪ್ಪಯ್ಯನು ಮೃತವಾದ ಮೇಲೆ ವೈಗೂರು (ಐಗೂರು) ಗೋಪಾಲ ನಾಯಕ ಯಂಬವನು ಶೀಮೆ ಯಾವತ್ತು ತಂನ ಸ್ವಾಧೀನ ಮಾಡಿಕೊಂಡು ೧ ವಂದು ವರುಷ ಪ್ರಭುತ್ವ ಮಾಡಿದನು....

ಬೇಲೂರು ನಾಯಕರ ಕುರಿತು ಶಾಸನಾಧಾರಗಳು

೧೫೬೫ರ ವಿಜಯನಗರ ಪತನದ ಅನಂತರ ಕರ್ನಾಟಕದ ಬಹು ಪ್ರದೇಶಗಳು ವಿವಿಧ ಪ್ರಾಂತ್ಯಾಡಳಿತದ ದೆಸೆಯಿಂದ ಪುಂಡರ ಧಾಳಿಗಳಿಗೆ ತುತ್ತಾದವು. ಆಯಾ ಸ್ಥಾನಿಕ ಬಲಾಢ್ಯ ಗುಂಪಿನವರು ರೈತರನ್ನೇ ಸೈನಿಕರನ್ನಾಗಿ ಪರಿವರ್ತಿಸಿಕೊಂಡು ಹೋರಾಟ ನಡೆಸುತ್ತಾ ಪ್ರಬಲರಾಗಿದ್ದರು. ಇವರು ತಮಗಿಂತ ಬಲಿಷ್ಟರು ಮೇಲೇರಿದಂತೆಲ್ಲಾ ಶರಣಾಗತರಾಗಿದ್ದುಕೊಂಡು ಅವರಿಗೆ ಕಪ್ಪ ಕಾಣಿಕೆಯಿತ್ತು ಅಧೀನರಾಗಿರುತ್ತಿದ್ದರು. ಬೇಲೂರು ಪ್ರಾಂತ್ಯವೂ ಈ

ಸರಣಿಯಲ್ಲಿ ವಿಜಯನಗರದ ಅನಂತರ ಕೆಳದಿಯ ಸಾಮಂತವಾಗುಳಿಯಿತು. ಬೇಲೂರ ಪಾಳೆಯ ಪಟ್ಟು ಕುರಿತು ಮೂಲ ಇತಿಹಾಸದಲ್ಲಿ ಹಲವಾರು ಜಿಜ್ಞಾಸೆಗಳಿವೆ. ಶ್ರೀ ಮನ್ಮಹಾರಾಜರ ವಂಶಾವಳಿಯಲ್ಲಿ ಬಾಲಂ ಪಾಳೆಯಗಾರ ಮಂಚಯ್ಯ ನಾಯಕನ ಮಗ ಹಿರಿಯ ಸಿಂಗಪ್ಪನಾಯಕನು 'ಮಣಿನಾಗಪುರ' ನಾಮಾಂಕಿತದಲ್ಲಿ ಐಗೂರು ಸಂಸ್ಥಾನವನ್ನು ಆಳಿದವನೆಂದು ಹೇಳಿದೆ. ಈ ಪಾಳೆಯಪಟ್ಟಿಗೆ "ಬಲ್ಲಾ ಐಗೂರು" ಎಂಬುದಾಗಿಯೂ ಉದ್ಧರಿಸಿದೆ.[9]ಸಂಖ್ಯೆ ೩೩೨ನೇ ಮೆಕಂಜೀ ಸಂಪುಟ ಹಾಗೂ ಎ.ಕ.V (*ಎಪಿಗ್ರಾಫಿಯಾ ಕರ್ನಾಟಿಕಮೊದಲ* ಆವೃತ್ತಿ) ಸಂಪುಟದಲ್ಲಿ ಪ್ರಸ್ತಾಪಿಸಿದಂತೆ ರಾಮದಾಸನೆಂಬ ವಿಜಯನಗರದ ಸಂಗೀತ ವಿದ್ವಾಂಸನನಿಲ್ಲಿ ಮೂಲ ಪುರುಷನನ್ನಾಗಿಸಿದೆ.[10] ಈ ಕುರಿತ ವಂಶವೃಕ್ಷವನ್ನೂ ಅನುಬಂಧದಲ್ಲಿ ನೀಡಲಾಗಿದೆ. ಕೆಳದಿ ನೃಪವಿಜಯದಲ್ಲಿ ಕವಿ ಲಿಂಗಣ್ಣನು ೧೧ನೇ ಆಶ್ವಾಸದಲ್ಲಿ ಬೇಲೂರು ನಾಯಕರ ಕುರಿತು ಮಾಹಿತಿಗಳನ್ನು ಉಲ್ಲೇಖಿಸಿದ್ದಾನೆ. ಅಡಪ (ಹಡಪ) ಬಯ್ಯಪ್ಪನ ಮಗ ಎರ್ರ ಕೃಷ್ಣಪ್ಪ ನಾಯಕನು ಈ ಪಾಳೆಯ ಪಟ್ಟಿನ ಮೂಲ ಸಂಸ್ಥಾಪಕನೆಂಬುದಾಗಿ ಪ್ರಸ್ತಾಪಿಸಲಾಗಿದೆ. ಶ್ರೀರಂಗಪಟ್ಟಣದಲ್ಲಿ ನನ್ನ ಸಮೀಕ್ಷಾ ಸಂಶೋಧನೆಯಲ್ಲಿ ಲಭಿಸಿದ ಕೃಷ್ಣದೇವರಾಯನ ದಿನಚರಿ ಓಲೆಗರಿ ಹಸ್ತಪ್ರತಿಯಲ್ಲಿಯೂ ಬಯ್ಯಪ್ಪನಾಯಕನ ಸಂಗತಿಯು ಬಂದಿದೆ.

ಶಾಸನಾಧಾರದಲ್ಲಿ ಬೇಲೂರು ಬಲಂ ನಾಯಕರನ್ನು ಕುರಿತು ಅರಕಲಗೂಡು ಶಾಸನ ಸಂ.೨೦ ರಲ್ಲಿ "ಮಣಿನಾಗ ಪುರವರಾಧೀಶ್ವರ ಸಿಂಧುಗೋವಿಂದ ಧವಳಾಂಕಭೀಮ ದಿನಕರಗಂಡ ಬರೀದ ಸಪ್ತಾಂಗ ಹರಣ ಸಂಗ್ರಾಮ ಧನಂಜಯ ಸಾಹಸ ವಿಕ್ರಮಾರ್ಕ ದೀನರಾಧೇಯೇತ್ಯಾದಿ ಬಿರುದರಾಜಿ ವಿರಾಜಮಾನರಾದ" ಎಂಬುದಾಗಿ ವರ್ಣಿಸುತ್ತದೆ. ಹೊಳಲ್ಕೆರೆ ೨೧ನೇ ಶಾಸನದ ಮೇರೆಗೆ ಎರ್ರ ಕೃಷ್ಣಪ್ಪನಾಯಕನ ಮಗ ವೆಂಕಟಾದ್ರಿನಾಯಕನು ಹಡಪದವನಾಗಿದ್ದು ಅಮರ ಮಾಗಣಿಯಾಗಿ ಬಾಗೂರು ಸೀಮೆಯನ್ನು ಪಡೆದುಕೊಂಡನು. ಎ.ಕ. V ಹಾಸನ ೭; ಪರಿಷ್ಕೃತ VIII ಹಾಸನ ೯; ಎ.ಕ. V ಹಾಸನ ೨; ಪರಿಷ್ಕೃತ VIII ಹಾಸನ ೨ ರಲ್ಲಿ ಉಲ್ಲೇಖಿಸಿದ ಅಡಪ್ಪನ ಬಯ್ಯಪ್ಪ ಎಂಬುದರಲ್ಲಿ "ಅಡಪ್ಪ" ಎಂಬುದು "ಹಡಪ" ಎಂಬುದಾಗಿ ಡಾ. ಬಿ.ಆರ್. ಗೋಪಾಲ್‌ರವರು ಅಭಿಪ್ರಾಯಪಟ್ಟಿದ್ದಾರೆ. ಇದೇ ಶಾಸನಗಳಲ್ಲಿ ಹಾಸನ ಸೀಮೆಯನ್ನು ಕೃಷ್ಣಪ್ಪನಾಯಕನಿಗೆ "ಅಮರನಾಯಕತನ" ವಾಗಿ ನೀಡಿದ ಸಂಗತಿಯಿದೆ. ಎ.ಕ. V ಬೇಲೂರು ೧೨ IX ಪರಿಷ್ಕೃತ ಬೇಲೂರು ೬೬೮ ಶಾಸನದಲ್ಲಿ 'ಹಡಪ' ಪ್ರಸ್ತಾಪವಿದ್ದು ವೆಂಕಟಾದ್ರಿ ನಾಯಕನ ತಾತ ಪೋತನಾಯಕನೆಂದು ಉದ್ಧರಿಸಿದೆ. ಈ ಆಧಾರದಿಂದ ವಂಶವು ಈ ರೀತಿ ವ್ಯಕ್ತಪಡುತ್ತದೆ.

ಪೋತನಾಯಕ
|
ಎರ್ರ ಕೃಷ್ಣಪ್ಪನಾಯಕ
|
ವೆಂಕಟಾದ್ರಿನಾಯಕ

ಎ.ಕ.V ಹಾಸನ ೭; ಪರಿಷ್ಕೃತ VIII ಹಾಸನ ೯; ಎ.ಕ. ಹಾಸನ ೨; ಪರಿಷ್ಕೃತ VIII ಹಾಸನ ೨ ಎರ್ರ ಕೃಷ್ಣಪ್ಪನಾಯಕನನ್ನು ಬಯ್ಯಪ್ಪನಾಯಕನ ಮಗನೆಂದು ಉದ್ಧರಿಸಿ, ಎ.ಕ. ಪರಿಷ್ಕೃತ VIII ಹಾಸನ ೪೭೮ರ ಹೊಳೇನರಸೀಪುರದ ತಾಮ್ರ ಶಾಸನ (ಕಾಲ ೧೫೬೩) ದ ಪ್ರಕಾರ ಕೃಷ್ಣಪ್ಪನಾಯಕನ ವಂಶವು ಈ ರೀತಿಯಾಗಿದೆ.

ಗಿರಿಯಪ್ಪನಾಯಕ
|
ತಿಮ್ಮಪ್ಪನಾಯಕ
|

ಬಯ್ಯಪ್ಪನಾಯಕ
|
ಕೃಷ್ಣಪ್ಪನಾಯಕ

ಎ.ಕ.V ಬೇಲೂರು ೨೨ IV ಪರಿಷ್ಕೃತ ಬೇಲೂರು ೧೪೩ರ ಶಾಸನದಿಂದ ಕೃಷ್ಣಪ್ಪನಾಯಕನ ಪುತ್ರ ವೆಂಕಟಾದ್ರಿನಾಯಕನನ್ನು ಕುರಿತು ಹಲವಾರು ಸಂಗತಿಗಳು ೧೫೮೦ರ ಕಾಲಮಾನದ ವ್ಯತ್ಯಾಸದಲ್ಲಿ ಸುಮಾರು ೫೦ ವರ್ಷಗಳ ಅಂತರವು ಗೋಚರಿಸುತ್ತಿದ್ದು, ನಿರ್ಧಾರಕ್ಕೆ ಬರಲು ಅಸಾಧ್ಯವಾಗಿರುವುದರಿಂದ ಕ್ರಿ.ಶ. ೧೫೫೯ರ ಶಾಸನದಲ್ಲಿ ಉಕ್ತವಾಗಿರುವಂತೆ ಹಾಗೂ ಇದೇ ಪ್ರಥಮವಾಗಿದ್ದು ೧೫೫೫ ರಲ್ಲಿ ಬೇಲೂರು ನಾಯಕರ ವಂಶಪರಂಪರೆ ಆರಂಭಗೊಂಡಿತೆಂದು ಗೊತ್ತು ಮಾಡಬಹುದಾಗಿದೆ. ಎ.ಕ.V ಹಾಸನ ೪೧; VIII ಪರಿಷ್ಕೃತ ಆಲೂರು ೧ ವೆಂಕಟಾದ್ರಿ ನಾಯಕನ ಮಗ ಕೃಷ್ಣಪ್ಪನಾಯಕನನ್ನು ಹೆಸರಿಸಿದೆ. ಕೆಳದಿ ಶಿವಪ್ಪನಾಯಕನಿಂದ ವಿಜಯನಗರ ಶ್ರೀರಂಗರಾಯನಿಗೆ ಸಕ್ಕರೆಪಟ್ಟಣದ ಆಧಿಪತ್ಯ ನೀಡಿದಾಗ ಈತನ ಅಧೀನದಲ್ಲಿದ್ದಾಗಲೇ ದತ್ತವಾದ ಶಾಸನವಿರಬಹುದಾಗಿದೆ. ಎ.ಕ. V ಬೇಲೂರು ೨೨; IX ಬೇಲೂರು (ಪರಿಷ್ಕೃತ) ೧೪೬ರ ಶಾಸನದಲ್ಲಿ ಕೃಷ್ಣಪ್ಪನಾಯಕನ ಮಗ ವೆಂಕಟಾದ್ರಿನಾಯಕನು ೧೫೮೦ ರವರೆಗೆ ಆಳಿದನೆಂದು ಹೇಳಿದೆ. ಇದರಿಂದ ಯರ್ರ ಕೃಷ್ಣಪ್ಪನಾಯಕನ ಪುತ್ರ ವೆಂಕಟಾದ್ರಿನಾಯಕ ಹಾಗೂ ಈತನ ಮಗನೇ ಇಮ್ಮಡಿ ಕೃಷ್ಣಪ್ಪನಾಯಕ ಮತ್ತು ಈತನ ಮಗ ಇಮ್ಮಡಿ ವೆಂಕಟಾದ್ರಿ ನಾಯಕನೆಂಬುದಾಗಿಯೂ ವ್ಯಕ್ತವಾಗುತ್ತದೆ. ೧೬೨೨ ಮತ್ತು ೧೬೨೫ರ ಎ.ಕ. (ಪರಿಷ್ಕೃತ) ಹಾಸನ ೨೦೫ ಮತ್ತು ಅರಕಲಗೂಡು ೬ನೇ ಸಂಖ್ಯೆಗಳ ಶಾಶನಗಳಲ್ಲಿಯೂ ಇದರ ಪ್ರಸ್ತಾಪಗಳಿವೆ. ಈ ಕಾರಣದಿಂದ ಎ.ಕ. ಬೇಲೂರು ೨೨ ಮತ್ತು IV ಪರಿಷ್ಕೃತ ೧೪೬ (ಕ್ರಿ.ಶ. ೧೬೨೬) ರ ಶಾಸನಗಳಲ್ಲಿರುವ ಕೃಷ್ಣಪ್ಪನ ಪುತ್ರ ವೆಂಕಟಾದ್ರಿಯು ಇಮ್ಮಡಿ ಕೃಷ್ಣಪ್ಪ ನಾಯಕನಾಗಿದ್ದು ೧೬೨೫ರ ವರೆಗೂ ಇದ್ದುದ್ದರಿಂದ ಈ ತರುವಾಯ ಇಮ್ಮಡಿ ವೆಂಕಟಾದ್ರಿ ನಾಯಕನು ಉತ್ತರಾಧಿಕಾರಿಯಾಗಿ ಆಳಿದ್ದು ಕಂಡುಬರುತ್ತದೆ. ಎ.ಕ. V ಅರಕಲಗೂಡು ೮೩ VIII ಪರಿಷ್ಕೃತ ೮ ಇದಕ್ಕೆ ಸಮರ್ಥನೆ ನೀಡುವುದರಿಂದ ಎ.ಕ. V ಹಾಸನ ೪೧ VIII ಪರಿಷ್ಕೃತ ಆಲೂರು ೧ ರಲ್ಲಿ ಉಲ್ಲೇಖಿಸಿದ ಕೃಷ್ಣಪ್ಪನಾಯಕನೇ ಇಮ್ಮಡಿ ಕೃಷ್ಣಪ್ಪನಿರಬೇಕು. ಎ.ಕ. V ಅರಕಲಗೂಡು ೫೭ VIII ರಿವಿಜನ್ ಅದೇ ೭೯ ರಲ್ಲಿ ಕೃಷ್ಣಪ್ಪನಾಯಕನ ಪುತ್ರ ಲಕ್ಷ್ಮಪ್ಪನಾಯಕನ ಪುತ್ರ ನರಸಿಂಹನಾಯಕ ಎಂದಿದೆ. ಈತನಿಗೆ ರಂಗಪ್ಪನಾಯಕನೆಂಬ ಹಿರಿಯ ಸಹೋದರನಿರುವುದೂ ಕಂಡುಬರುತ್ತದೆ. ಹಾಸನ ಶಾಸನ ನಂ ೨೦೫; ಅರಕಲಗೂಡು ೬ರ ಲಕ್ಷ್ಮೀಪುರದ ಶಾಸನವು ೧೬೦೩ ರಲ್ಲಿ ಲಕ್ಷ್ಮಪ್ಪನಾಯಕನ ನಾಮಾಂಕಿತದಲ್ಲಿ ಹೊಸ ಗ್ರಾಮವಿರುವುದನ್ನು ಹೇಳುತ್ತದೆ, ಈತನು ನರಸಿಂಹನಾಯಕ ಪುತ್ರನಿರಬಹುದಾಗಿದೆ. ಎ.ಕ. XV ಹಾಸನ ೭೨ ಪರಿಷ್ಕೃತ VIII ಹಾಸನ ೫೫ರ ಮೇರೆಗೆ ರಂಗಪ್ಪನಾಯಕನ ಮಗ ನರಸಿಂಹ ನಾಯಕನು ಗ್ರಾಮವೊಂದನ್ನು ನೀಡಿದ ಉಲ್ಲೇಖವಿದೆ. ಉಪಲಬ್ಧವಿರುವ ಶಾಸನದಿಂದ ಬೇಲೂರು ನಾಯಕರ ವಂಶಾವಳಿ ಈ ಕೆಳಗಿನಂತೆ ಕಂಡುಬರುತ್ತದೆ.



ಎ.ಕ. (ಪರಿಷ್ಕೃತ) **VIII**

ಅರಕಲಗೂಡು ೧೬ರ ಹೆಬ್ಬಾಳೆ ಶಾಸನವು ಇದನ್ನು ಸಮರ್ಥಿಸುತ್ತದೆ. ಈ ನಾಯಕರು ಕಾಶ್ಯಪಗೋತ್ರದ ಆಪಸ್ತಂಭ ಸೂತ್ರದವರೆಂದು ಹೇಳಿಕೊಂಡಿದ್ದಾರೆ. ಶಾಸನಗಳಲ್ಲಿ ‘ಚಂದ್ರಶೇಖರ ಪ್ರಸನ್ನ’, ‘ವೆಂಕಟಾದ್ರಿ’, ‘ಶ್ರೀ ಕೃಷ್ಣ’ ಎಂಬ ಅಂಕಿತಗಳಿವೆ.

ಖಚಿತ ಆಕರಗಳು ಸಂಶೋಧನೆಯಲ್ಲಿ ಕಂಡು ಬರುವವರೆಗು ಪ್ರಕೃತ ಎ.ಕ. ಸಂಪುಟ ೫ ಹಾಗೂ ತುಲನಾತ್ಮಕ ವಿವರಣೆಗಳೊಂದಿಗೆ ಬೇಲೂರು ಪಾಳೆಯ ಪಟ್ಟಿನ ಇತಿಹಾಸವನ್ನು ಸಿದ್ದಪಡಿಸಲಾಗಿದೆ. ಎರ್ರ ಕೃಷ್ಣಪ್ಪನಾಯಕನ ರಾಜಕೀಯ ಇತಿಹಾಸಗಳು ಅಸ್ಪಷ್ಟವಾಗಿವೆ, ಈತನ ಅನಂತರ ೧೫೬೬ ರಿಂದ ೧೫೮೪ರವರೆಗೆ ವೆಂಕಟಾದ್ರಿನಾಯಕನೂ ಆಳಿದನು. ಹಲವು ಮೂಲಗಳು ಈತನಿಗೆ ಕೃಷ್ಣಪ್ಪನಾಯಕ ಹಾಗೂ ಚಿಕ್ಕನಾಯಕನೆಂಬ ಇಬ್ಬರು ಮಕ್ಕಳಿರುವುದನ್ನು ಹೇಳುತ್ತವೆ,[11] ಕ್ರಿ.ಶ. ೧೫೮೮ ರಿಂದ ೧೬೨೫ರ ವರೆಗೆ ಆಡಳಿತ ನಡೆಸಿದ ಕೃಷ್ಣಪ್ಪನಾಯಕನ ಕಾಲದಲ್ಲಿ ಮೈಸೂರಿನ ಅರಸರೊಂದಿಗೆ ವೈಮನಸ್ಸುಂಟಾಯಿತು. ೧೫೭೮ ರಿಂದ ೧೬೧೭ರವರೆಗೆ ಮೈಸೂರು ರಾಜ ಒಡೆಯರ ಅಧೀನದಲ್ಲಿತ್ತು. ೧೬೦೮ರಲ್ಲಿ ಬೇಲೂರಿನ ಕೃಷ್ಣಪ್ಪನಾಯಕ, ಗ್ರಾಮದ ವೀರರಾಜಯ್ಯ, ಮೂಗೂರು ಬಾಲಲೋಚನ, ಯಳಂದೂರು ಇಂಮ್ಮಡಿ ರಾಜನಾಯಕ ಮತ್ತು ಉಮ್ಮತ್ತೂರು ಮಲ್ಲರಾಜಯ್ಯ ಮುಂತಾದವರು ಸೇನೆಯೊಂದಿಗೆ ಶ್ರೀರಂಗಪಟ್ಟಣವನ್ನು ಸಾಧಿಸಲು ಕುಣಿಗಲ್‌ನಲ್ಲಿ ಸೇರಿಕೊಂಡು ಪಿತೂರಿ ನಡೆಸಿದ್ದು, ರಾಜ ಒಡೆಯರು ಇದನ್ನು ಎದುರಿಸಿ ಹಿಮೆಟ್ಟಿಸಿದ್ದರಿಂದ ಬೇಲೂರು ಗ್ರಾಮ ಇವರ ಸ್ವಾಧೀನವಾಯಿತು.[12] *ಶ್ರೀಮನ್ಮಹಾರಾಜರ ವಂಶಾವಳಿ ಭಾಗ* **I** ಪುಟ ೪೪; ಇತರ ಮೂಲವೊಂದರಲ್ಲಿ ೧೬೪೦ ರವರೆಗೂ ಬೇಲೂರು ಬಿಜಾಪುರದ ಆಧೀನದಲ್ಲಿರುವುದು ಕಂಡು ಬರುತ್ತದೆ. ೧೬೨೬-೧೬೪೩ ರಲ್ಲಿದ್ದ ವೆಂಕಟಾದ್ರಿನಾಯಕನನ್ನು “ತುರುಕದಳ ಮಿರಾಡ” ಎಂದು ಕರೆಯಲಾಯಿತು. ೧೬೩೪ ರಲ್ಲಿ ಮೈಸೂರಿನ ಚಿಕ್ಕದೇವರಾಯ ಒಡೆಯರು ಐಗೂರು ಕೃಷ್ಣಪ್ಪನಾಯಕ ಹಾಗೂ ಬೇಲೂರು ವೆಂಕಟಾದ್ರಿನಾಯಕನನ್ನು ನಿಗ್ರಹಿಸಿದ ಸಂಗತಿ ಇದೆ.

ಕೆಳದಿ ನೃಪವಿಜಯದಲ್ಲಿ ಬೇಲೂರು

೧೬೪೩-೧೬೫೪ ರಲ್ಲಿದ್ದ ಕೃಷ್ಣಪ್ಪನಾಯಕನ ಕಾಲದಲ್ಲಿ ೧೬೪೫-೧೬೬೦ ರವರೆಗೆ ಕೆಳದಿ ರಾಜ್ಯದ ಶಿವಪ್ಪನಾಯಕನನ್ನು ಕುರಿತು *ಕೆಳದಿ ನೃಪವಿಜಯದಲ್ಲಿ* ಕವಿ ಲಿಂಗಣ್ಣನೇ ನಿರೂಪಿಸಿದಂತೆ.

ವಸುಧಾರೆಯ ಕೋಂಟೆಯನಾ
ವಸುಧೀಶಂ ಕೊಂಡು ಸಕ್ಕರೆಯ ಪಟ್ಟಣಮಂ
ಮಿಸುಗುವ ಹಾಸನ ಬೇಲೂ
ರಸದೃಶಕೋಂಟೆಗಳನಾನೃಪಂ ವಶಗೈದು
ಮಾಯಾವಾದಿಗಳಧಿಕ ಸ
ಹಾಯದೆ ಬಹು ಸೈನ್ಯಸಹಿತಿದಿರ್ಚಿದ ರಣಗಾಂ
ಗೇಯ ಬೇಲೂರ ಕೃಷ್ಣಪ
ನಾಯಕನಂ ಯುದ್ದ ರಂಗದೊಳ್‌ಸೋಲಿಸಿದಂ
ಮಗುಳಾ ಕೃಷ್ಣಪ್ಪರಾಯನ
ಮಗನೆನಿಸುವ ವೆಂಕಟಾದ್ರಿನಾಯಕನುರ್ವಿ
ಮಿಗೆ ಕೈಗೈಯಲ್ಕಂ ಪಿಡಿ
ದಗಣಿತ ತತ್ಸೈನ್ಯ ಜಾಲಮಂ ನೋಯಿಸಿದಂ

ಕ್ರಿ.ಶ. ೧೬೪೩ ರಿಂದ ೧೬೫೪ ರವರೆಗೆ ಕೃಷ್ಣಪ್ಪನಾಯಕನೂ ೧೬೫೫ ರಿಂದ ೧೬೭೦ ರವರೆಗೆ ವೆಂಕಟಾದ್ರಿನಾಯಕನೂ ಇರುವುದು ವ್ಯಕ್ತಪಡುತ್ತದೆ. *ಕೆಳದಿ ನೃಪವಿಜಯ* 'ಕ' ಪ್ರತಿಯಲ್ಲಿ ಸರ್ವಜಿತ್ಸಂವತ್ಸರದಿಂ ಸಾಹಸಂಗೈದು ಖರ ಸಂವತ್ಸರದಿ ಮತ್ತು ಹೇವಿಳಂಬಿ ಸಂವತ್ಸರದೊಳ್‌ಎಂಬುದಾಗಿಯೂ ಕಾಲಮಾನದ ಉಲ್ಲೇಖವಿದೆ. ಕೆ.ನೃ.ವಿ.ದಲ್ಲಿ ಉಕ್ತಿಸಿದ ಶಿವಪ್ಪನಾಯಕನ ಪಟ್ಟಾಭಿಷೇಕ ಕಾಲ ಶಾಲಿವಾಹನ ಶಕ ೧೫೬೮ ಪಾರ್ಥಿವ ಸಂವತ್ಸರವಾಗುತ್ತದೆ. ಇಲ್ಲಿಂದ ಗಣನೆಗೆ ತೆಗೆದುಕೊಂಡಲ್ಲಿ ಸರ್ವಜಿತ್‌ಸಂವತ್ಸರ ಕ್ರಿ.ಶ. ೧೬೪೮, ಖರ ಸಂವತ್ಸರ ೧೬೫೨, ಹೇವಿಳಂಬಿ ಸಂ, ೧೬೫೮ ಆಗುತ್ತದೆ. ಇದರ ಮೇರೆಗೆ ೧೬೪೮ ರಿಂದ ೧೬೫೨ ರವರೆಗೆ ಕೃಷ್ಣಪ್ಪನಾಯಕನನ್ನು ಕೆಳದಿ ಅರಸು ಸೋಲಿಸಿದ್ದು (ಸಕ್ಕರೇ ಪಟ್ಟಣ, ಹಾಸನ ಬೇಲೂರನ್ನು ಅಧೀನಪಡಿಸಿಕೊಂಡು) ೧೬೫೮ ರಲ್ಲಿ ವೆಂಕಟಾದ್ರಿ ನಾಯಕನನ್ನು ಜಯಿಸಿರುವುದು ಕಂಡುಬರುತ್ತದೆ.

ಶಿವತತ್ವರತ್ನಾಕರದಲ್ಲಿ ಶಿವಪ್ಪನಾಯಕನ ಮೈಸೂರು ದಂಡಯಾತ್ರೆ

ಪ್ರಸಿದ್ಧ ವಿಶ್ವಕೋಶ ಹಾಗೂ ಕೆಳದಿ ಅರಸು ಬಸವರಾಜ ವಿರಚಿತ *ಶಿವತತ್ವರತ್ನಾಕರದಲ್ಲಿ* -

ಶಾಸ್ತ್ರಲೋಕಾಗತ್ಯೈರೇವ ಮುಪಾಯ್ಯೈಶ್ಶಿವಭೂಪತಿಃ ।।೧೦೨।।
ವೇಲಾಪುರಾಖ್ಯಂ ಪ್ರಾಕಾರಂ ಸಹಸಾ ಸ್ವಯಮಗ್ರಹೀತ್ ।
ತತೋऽಗ್ರಹೀತರೇಣ್ಯೈವ ರಿಪುಂ ತನ್ಮಧ್ಯವರ್ತಿನಮ್ ।।೧೦೩।।
ಶ್ರೀರಂಗಸಾರ್ವಭೌಮಸ್ತಂ ಶ್ರುತ್ವೋದಂತಂ ಪ್ರಹರ್ಷಿತಃ ।
ವೇಲಾಪುರಂ ಸಮಾಯಾತಃ ಶಿವಭೂಪದಿದೃಕ್ಷಯಾ ।।೧೦೪।।
ತತಸ್ಸಮಾಗತಸ್ತೇನ ಪ್ರಾಪ್ಯ ತದ್ದರ್ಶನೋತ್ಸವಮ್ ।
ಸಂತೋಷಿತ: ಪರಾಕ್ರಾಂತಃ ಸ್ಥಾನಪ್ರತ್ಯರ್ಪಣಾದ್ಬಹು ।।೧೦೫।।
ಆದಿಶದ್ಬಿರುದಾನ್ಯಸ್ಮೈ ಸಾರ್ವಭೌಮೋ ಮಹೀಭೃತೇ ।
ರಾಮಬಾಣಭಿಧಾನಂ ಚ ವಾರಣಂ ಪರವಾರಣಮ್ ।। ೧೦೬ ।।
ಅಮೂಲ್ಯಮಿಂದ್ರನೀಲಸ್ಯ ಕರ್ಣಾಭರಣಮೇವಚ ।
ಮುಕ್ತಾಫಲಮನರ್ಘಂ ಚ ಬಿರುದೇ ಶಂಕ ಚಕ್ರಕೇ ।। ೧೦೭ ।।

ಜಗಜ್ಜುಂಪಾಭಿಧಂ ಛತ್ರಂ ಶಾತ್ರವಂ ಚಾಪಿ ಮಸ್ತಕಮ್ |
ಏವಮಾದೀನಿ ಬಿರುದಾನ್ಯರ್ಪಯಯಿತ್ವಾಂ ಶುಕಾದಿಭಿಃ || ೧೦೮ ||
ಬಹುಧಾ ಮಾನಯಾಮಾಸ ಶಿವಭೂಪಂ ಮಹೀಪತಿಃ |
ಕೀರ್ತ್ಯಾ ಶಿವಮಹೀಪಾಲಃ ಸ್ಥಾನಪುತ್ರ್ಯರ್ಪಣೋತ್ಥಯಾ || ೧೦೯ ||
ಸಾರ್ವಭೌಮಃ ಪರಾಕ್ರಾಂತ ನಿಜಸ್ಥಾನಾದಿಕಸ್ತಥಾ |
ತೌಚ ಸ್ವಸ್ವೇಪ್ಸಿತಾವಾಪ್ತ್ಯಾ ತದಾಭೂತಂ ಪ್ರಹರ್ಷಿತೌ || ೧೧೦ ||[13]

ಲಿಂಗಣ್ಣ ಕವಿಯ ಕೆಳದಿ ನೃಪವಿಜಯದಲ್ಲಿ

ವ|| ಇಂತು ನೆಗಳ್ತೆವೆತ್ತ ಭುಜಬಲಪ್ರತಾಪಾತಿಶಯದಿಂದ ಸದ್ಧರ್ಮದಿಂ ರಾಜ್ಯವ ನಾಳುತಿರ್ದಾ ಶಿವಪ್ಪನಾಯಕಂ ವಿಕಾರಿಸಂವತ್ಸರದಲ್ಲಿ ರಾಯಸಂಸ್ಥಾನವನು ದೂರಿಸಲ್ವೇಳ್ಕುಂದು ಮನಂದಂದು ಸೋದೆ ಬಿಳಿಗೆ ತರಿಕೆರೆ ಹರಪುರ ಮುಂತಾದ ನಾಡದೊರೆಗಳ ಸೈನ್ಯ ಸ್ವಸೈನ್ಯಂ ವೆರಸು ತೆರಳ್ದು ಬೇಲೂರಂ ತೆಗೆದುಕೊಂಡು ಶ್ರೀರಂಗರಾಯರ್ಗಿತ್ತು ರಾಯಸಂಸ್ಥಾನಮಂ ನೆಲೆಗೊಳಿಸಿ ನಿಲಿಸಿ ತದ್ರಾಯರಿಂ ಶಂಖ ಚಕ್ರ ಸ್ಥೂಲ ನೀಲ ಪರಿಶೋಭಿತ ವಜ್ರ ಖಚಿತ ಕರ್ಣಾಭರಣಂ ಮುಂತಾದ ಬಿರುದುಗಳಂ ಪಡೆದು ರಾಮಬಾಣನೆಂಬಾನೆಯಂ ಕೊಡಲದಂ ಪರಿಗ್ರಹಿಸಿ ನಿಲಿಸಿ ಪಟ್ಟಣದ ಮುಖಕ್ಕೆ ದಂಡಂ ತೆರಳ್ಚೈದಿಗ್ರಾಮದ ಸಮೀಪಮಂ ಸಾರ್ದು ಪಾಳೆಯವನಿಳಿದಿರಲಾ ಪ್ರಸ್ತಾವದೊಳ್.

ಚಂ|| ಮಾ|| ಘನತರದುರ್ಮದಾಂಧ ಮಹಿಸೂರ ಮಹೀಪನ ನೇಮದಿಂ
ವನದಿ ಯುಗಾಂತದೊಳ್ ಕವಿವವೊಲ್ ಬಹುಸೈನ್ಯ ಸಮೇತನಾಗಿ ಭೋಲಿಕೆ ನೊದವಿ
ತನ್ನುವಂ ಪಿಡಿಯಲ್ಕೈದಿದ ತ್ವಳವಾಯಿ ಹಂಪವ
ರ್ಯನನೆಸೆವಾಜಿಯೊಳ್ ಪಿಡಿದು ತಾಂ ಜಯಲಕ್ಷ್ಮಿಯನಾಂತನಾ ನೃಪ. ಕೆ.ನೃ.ವಿ. [14]

*ಶಿವತತ್ವರತ್ನಾಕರ*ಹಾಗೂ *ಕೆಳದಿ ನೃಪವಿಜಯದಲ್ಲಿ* ಪ್ರಸ್ತಾಪಿಸಿದಂತೆ ಬೇಲೂರನ್ನು ಕುರಿತು ಹಲವು ಮಾಹಿತಿ ಸಿಕ್ಕುತ್ತವೆ. ಕೆ.ನೃ.ವಿ.ನಲ್ಲಿ ಹೇಳಿದ ವಿಕಾರಿ ಸಂವತ್ಸರ ಅದೇ ಕೃತಿಯಲ್ಲಿರುವ ಮಾಹಿತಿಯಂತೆ ಕ್ರಿ.ಶ. ೧೬೬೦ ಆಗುತ್ತದೆ. ಪ್ರಸಿದ್ಧ ಅಧಿಪತಿ ಶಿವಪ್ಪನಾಯಕನು ವಿಜಯನಗರದಿಂದ ಆಶ್ರಯ ಪಡೆಯಲು ಕೆಳದಿ ಅಧಿಪತಿಗೆ ಮೊರೆ ಹೊಕ್ಕ ಶ್ರೀರಂಗರಾಯನಿ ಗೋಸುಗವೇ ಬೇಲೂರನ್ನು ಸ್ವಾಧೀನಪಡಿಸಿಕೊಂಡು ಸಕ್ಕರೆಪಟ್ಟಣದ ಆಧಿಪತ್ಯ ನೀಡಿರುವುದು ಕಂಡು ಬರುತ್ತದೆ, ಎ, ಕ, V ಬೇಲೂರು ೮೧-೮೨ರ ಶಾಸನಗಳಲ್ಲಿಯೂ ಈ ಕುರಿತು ಮಾಹಿತಿ ಲಭಿಸುತ್ತದೆ,[15] ಕೆ.ನೃ.ವಿ. "ಗಮ" ಪ್ರತಿಯಲ್ಲಿಯೂ ಇದಕ್ಕೆ ಸಮರ್ಥನೆಯಿದೆ. *ಶ್ರೀಮನ್ಮಹಾರಾಜನ ವಂಶಾವಳಿಯಲ್ಲಿ* ೧೬೬೪ರಲ್ಲಿ ಮೈಸೂರಿನ ದೊಡ್ಡದೇವರಾಯ ಒಡೆಯನು ಕೆಳದಿ ಶಿವಪ್ಪನಾಯಕನಿಂದ ಹಾಸನ, ಸಕ್ಕರೇಪಟ್ಟಣ, ವಸ್ತಾರೆಗಳನ್ನು ಜಯಿಸಿ ಖಂಡಣಿ ಹಣ ಬರುವಂತೆ ಏರ್ಪಡಿಸಿದನೆಂದು ಹೇಳುತ್ತದೆ. ಆದರೆ ಲಭಿಸಿದ ಆಕರಗಳು ೧೬೬೦ರಲ್ಲಿ ಬೇಲೂರು ಹಾಗೂ ಮೈಸೂರನ್ನು ಶಿವಪ್ಪನಾಯಕನು ಸಾದಿಸಿರುವುದಕ್ಕೆ ಸಮರ್ಥನೆ ನೀಡುತ್ತವೆ. ಲಂಡನ್ ಪ್ರತಿ ಹೊರತಾಗಿ "ಮ" ಪ್ರತಿಯೂ ಇದನ್ನು ದೃಢೀಕರಿಸುತ್ತದೆ. *ದಿ ಆನಲ್ಸ್ ಆಫ್ ಮೈಸೂರ್ ರಾಯಲ್ ಫ್ಯಾಮಿಲಿಯಲ್ಲಿ* ದಳವಾಯಿ ಕುಮಾರಯ್ಯನು ಶಿವಪ್ಪನನ್ನು ಸೋಲಿಸಿದನೆಂದು ಹೇಳುತ್ತದೆ. ಕುಮಾರಯ್ಯನ ಹೆಸರು ಎಲ್ಲಿಯೂ ಕಂಡುಬರುವುದಿಲ್ಲವೆಂದು *ಮೈಸೂರು ಪುರಾತತ್ವ ವರದಿ ೧೯೪೨* ತಿಳಿಸುತ್ತದೆ. ಹಲವು ಇಂಗ್ಲೀಷ್ ದಾಖಲೆಗಳು ನೀಡಿದ ಸಮರ್ಥನೆಯೂ ಗಮನಾರ್ಹವಾಗಿದೆ[16] ಅದೇ ಕೆ.ನೃ.ವಿ.ದಲ್ಲಿ ಈ ಕೆಳಗಿನಂತೆ ಇದೆ.

..........ಪಟ್ಟಣದವರ್ ಮೇರೆವರಿದೆಡೆಯಾಡದಂತು ಶ್ರೀರಂಗರಾಯರ ಸಮೀಪದೊಳ್ ಗಡಿಮುಖದೊಳ್ ಸೈನ್ಯ ಸಹಿತಮಳಿಯ ಶಿವಲಿಂಗನಾಯಕನಂ ನಿಲಿಸಿ ಪರಾಕ್ರಮಾತಿಶಯದಿಂ ರಾಜ್ಯಂಗೆಯ್ಯುತಿರ್ದನಂತುಮಲ್ಲದೆಯುಂ

ಇದರಿಂದ ವಿಜಯನಗರ ಶ್ರೀರಂಗರಾಯನಿಗೆ ಮೈಸೂರು ಅರಸರಿಂದ ಉಪಟಳವಾಗದಂತೆ ಕೆಳದಿ ಇಮ್ಮಡಿ ವೆಂಕಟಪ್ಪನಾಯಕನ್ನು ಶಿವಲಿಂಗನಾಯಕನ ಮುಖಾಂತರ ೧೬೬೧-೬೨ ರಲ್ಲಿ ಗಡಿಯಲ್ಲಿ ಭದ್ರುತಾ ಪಡೆಯನ್ನಿಟ್ಟಿದ್ದನು. ೧೬೬೪ ರಲ್ಲಿ ಬೇಲೂರಿನ ರಕ್ಷಣೆಗಾಗಿ ಕೆಳದಿ ಸೋಮಶೇಖರನಾಯಕನು ಮೈಸೂರವರನ್ನು ಹಿಮ್ಮೆಟ್ಟಿಸಿದನು.

ಬೇಲೂರು ಕೃಷ್ಣಪ್ಪನಾಯಕ IV (?)

೧೬೮೨-೮೩ ರಲ್ಲಿ ಬೇಲೂರು ಕೃಷ್ಣಪ್ಪನಾಯಕನು ಮೈಸೂರು ಅರಸರನ್ನು ಕಡೆಗಣಿಸಿ ಚಿಕ್ಕದೇವರಾಜನು ಮರಾಠರೊಡನೆ ಯುದ್ದಕ್ಕೆ ತೊಡಗಿದಾಗ ಕೆಳದಿ ಅರಸರೊಂದಿಗೆ ಸೇರಿ ಮೈಸೂರು ಸೈನ್ಯವನ್ನು ಎದುರಿಸಿದನು. ೧೬೯೮ರಲ್ಲಿ ಚಿಕ್ಕ ದೇವರಾಜನಿಂದ ಬೇಲೂರ ತಿರುಗಿ ಆಧೀನಕ್ಕೆ ಬಂದಿತು. ಅಂತೆಯೇ ೧೬೯೩ ರಲ್ಲಿ ಮೈಸೂರಿನ ಹಲವು ಪ್ರದೇಶಗಳೊಂದಿಗೆ ಬಾಲಂ ನಾಯಕರ ಆಧೀನದಲ್ಲಿದ್ದ ೭೦೦೦ ಸೀಮೆ ಪ್ರದೇಶವು ಚಿಕ್ಕದೇವರಾಜ ಒಡೆಯರು ಹಾಗೂ ಕೊಡಗಿನ ದೊಡ್ಡವೀರಪ್ಪ ಒಡೆಯರ ಧಾಳಿಗೆ ತುತ್ತಾಯಿತು. ೧೬೯೪ ರಲ್ಲಿ ಕೆಳದಿ ಮತ್ತು ಮೈಸೂರಿನ ಒಡೆಯರಿಂದ ಬಾಲಂ ನಾಯಕರಿಗೆ ಆರುನಾಡುಗಳು ಒಪ್ಪಂದದ ಮುಖಾಂತರ ಲಭಿಸಿದುವು.[17]

ಕವಿ ಲಿಂಗಣ್ಣನ ಕೃತಿಯಲ್ಲಿ ಬೇಲೂರು ಅರಕಲಗೂಡು ಇತಿಹಾಸಗಳು

ಕೆಳದಿ ನೃಪವಿಜಯ ದಶಮಾಶ್ವಾಸದಲ್ಲಿ –

ಇಂತು ಬೇಲೂರ ಸಂಸ್ಥಾನದೊಳುನ್ಮದಾವಸ್ಥೆಯಿಂದ ವ್ಯವಸ್ಥಿತವಾಗಿ ವರ್ತಿಸುತಿರ್ದ ವೆಂಕಟದ್ರಿನಾಯಕನಂ ಕದಲ್ಚಿ ತದನುಜ ಗೋಪಾಲನಾಯಕನಂ ಸಂಸ್ಥಾನದೊಳ್ ನಿಲಿಸಲ್ ತದೀಯನಿಯೋಗಿ ಮಲ್ಲಪನ ಕುಮುಂತ್ರದಿಂದೈದಿದಮಾಯಾವಿಗಳ ಸೈನ್ಯಮಂ ಕೂಡಿಕೊಂಡೈದಿದ ಸುಬ್ಬರಾಯನೆಂಬ ಸೇನಾಧಪತಿಯಂ ಅರಾಯಪಾಳ್ಯದ ಚನ್ನವೀರಪ್ಪನ ಮುಖದಿಂ ರಣರಂಗದದೊಳ್ಪಿಂದೆಗೆಸಿ ಗೋಪಾಲನಾಯಕನಂ ಸಂಸ್ಥಾನದೊಳ್ ನಿಲಿಸೆ ಪರಮ ಪ್ರಖ್ಯಾತಿಯಂ ಪಡೆದನಂತುಮಲ್ಲದೆಯುಂ[18] ಕೆಳದಿ ನೃಪವಿಜಯದಲ್ಲಿ ಪ್ರಸ್ತಾಪಿಸಿದ ಬೇಲೂರು ಗೋಪಾಲನಾಯಕನು ವೆಂಕಟಾದ್ರಿನಾಯಕನ ಅನುಜನಾಗಿರುವುದು ವ್ಯಕ್ತಪಡುತ್ತದೆ. ಶಾಸನಗಳಲ್ಲಿ ಕಂಡುಬಾರದಿರುವ ಈತನು ಕ್ರಿ.ಶ. ೧೭೦೮-೧೭೫೧ ರಲ್ಲಿದ್ದಿರಬಹುದೆಂದು ತೋರುತ್ತದೆ. ಈತನ ಹೆಸರು ವಂಶಾವಳಿಯಲ್ಲಿಯೂ ಬಾರದಿರುವುದು ಗಮನಾರ್ಹವಾಗಿದೆ.

ಏಕಾದಶಾಶ್ವಾಸದಲ್ಲಿ :

ವರನಾನಾಜೀರಾಯನ
ನಿರೂಪದಿಂದಧಿಕಮಾದ ಸೈನ್ಯಸಮೂಹಂ /
ವೆರಸು ಗೋಪಾಲರಾಯಂ
ತೆರಳ್ದೈತಂದೊಡನೆ ನಿಲಲವಂ ಗಡಿಮುಖದೊಳ್ // ೭೫ //

ವರ ಮೈಸೂರು ಮುಖಕ್ಯಂ
ಮೆರೆವಾ ಗೋಪಾಲರಾಯನಂ ಬಲಸಹಿತಂ /

ತೆರಳಿಸಿ ನಿಜರಾಜ್ಯವನಂ
ದುರೆ ರಕ್ಷಿಸಿ ಜಸವನಾಂಕನಾ ನೃಪತಿಲಂ **//** *೭೯* **//**

ಇಂತು ದಾಳಿಯಿಡುತ್ತೈದಿದ ಗೋಪಾಲರಾಯನಂ
ಹೊರದೆಗೆಸಿ ರಾಜ್ಯಂಗೆಯ್ಯುತ್ತಿರ ಲೊಂದವಸರದೊಳ್ **//**
ಬೇಲೂರು ಕೃಷ್ಣಪೇಂದ್ರಂ

ಮೂಲಚ್ಯುತನಾಗಿ ಬಂದು ಕೊಡಗಿನ ದೆಸೆಯಿಂ **/**
ಮೇಲಹ ಕಳಸದ ಕೋಟೆಯೊ
ಳಾಲೋಚಿಸುತಲ್ಲಿ ನಿಂದು ತನ್ನಯ ಕಥೆಯಂ **//** *೮೧* **//**

ಚನ್ನಬಸವೇಂದ್ರನೆಡೆಗಂ
ಬಿನ್ನಪವಂ ಬರೆದು ನಿಮ್ಮ ಪೊಂದಿದ ಸುತನಾ **/**
ದೆನ್ನಂ ಸಂಸ್ಥಾನದೊಳಂ
ಚೆನ್ನಾಗಿರೆ ನಿಲಿಸೆ ಪೊರೆಯಬೇಹುದೆನುತ್ತುಂ **//** *೮೨* **//**

ಬಿನ್ನವಿಸಿ ಕಳುಪೆ ಲಾಲಿಸಿ
ತನ್ನಂ ಮರೆವೊಕ್ಕನಾವನಾಗಿರಲವನಂ **/**
ನನ್ನಿಯುದ್ಧರಿಪುದಿದು ನೃಪ
ರನ್ನರ್ಗ ನೀತಿಯೆಂದು ನಿಶ್ಚಯಿಸುತ್ತುಂ **//** *೮೩* **//**

ಇಂತೆಂದು ನಿಶ್ಚಯಂಗೆಯ್ದೊಡನೆ ರಾಯಸದ ಶಂಕರನಾರಾಯಣಯ್ಯನೊಡನೆ ಭೂರಿ ಸೈನ್ಯಮಂ ತೆರಳ್ಚಿಸಿ ಕಳುಹಿ ಬಲಮಂ ವೇಢೈಸಿದ ಕೊಡಗ ಸೈನ್ಯಮಂ ಪಿಂದೆಗೆಸಿಯಾ ಕೊಡಗರ ವೀರರಾಜನಂ ನಾನಾ ವಿಧ ನಯ ಭಯೋಕ್ತಿಗಳಿಂದೊಡಬಡಿಸಿ ಕುಮಾರ ಕೃಷ್ಣಪ್ಪನಾಯಕನಂ ಭಲ್ಯದಿಂ ಹೊರದೆಗೆಸಿ ತಮ್ಮಂ ಮರೆವೊಕ್ಕ ಕೃಷ್ಣಪ್ಪನಾಯಕನಂ ಬೇಲೂರ ಸಂಸ್ಥಾನದ ರಾಜತ್ವಕ್ಕೆ ನಿಲಿಸೆ ಪರಮ ಪ್ರಖ್ಯಾತಿಯಂ ಪಡೆದನಂತುಮಲ್ಲದೆಯುಂ**[19]**

ಬೇಲೂರು ಪಾಳೆಯಪಟ್ಟಿನ ಅಂತ್ಯ

ಕ್ರಿ.ಶ. ೧೬೭೨-೧೬೯೨ ರಲ್ಲಿ ಬೇಲೂರು ನಾಯಕರು ಕೆಳದಿ ರಾಣಿ ಚೆನ್ನಮ್ಮಾಜಿ ಹಾಗೂ ಗೋಲ್ಕೊಂಡ, ಬಿಜಾಪುರದವರೊಂದಿಗೆ ಕೂಡಿಕೊಂಡು ವಸುಧಾರೆ ಮತ್ತು ಹಲವು ಪ್ರಾಂತಗಳನ್ನು ಮೈಸೂರಿಂದ ವಶಪಡಿಸಿಕೊಂಡರು.**[20]** ೧೬೯೩-೧೭೦೦ ರಲ್ಲಿ ಬೇಲೂರಿಗೆ ಸೇರಿದ ೭೦೦೦ ಸೀಮೆಗಳು**[21]** ಹಾಗೂ ಶನಿವಾರಸಂತೆ ಹೋಬಳಿಯು ಮೈಸೂರು ಹಾಗೂ ಕೊಡಗಿನ ಸೈನ್ಯದ ಧಾಳಿಗೆ ತುತ್ತಾಯಿತು. ೧೬೯೪ರಲ್ಲಿ ಕೆಳದಿ ಮತ್ತು ಮೈಸೂರಿನ ಒಪ್ಪಂದದಲ್ಲಿ ಬಾಲಂ ನಾಯಕರಿಗೆ ಆರು ನಾಡುಗಳು ಲಭಿಸಿದುವು. ೧೬೮೫ ರಿಂದ ೧೬೯೨ ರವರೆಗೆ ಕೃಷ್ಣಪ್ಪನಾಯಕನೂ ೧೭೦೮ ರಿಂದ ೧೭೫೧ ರವರೆಗೆ ವೆಂಕಟಾದ್ರಿನಾಯಕನೂ ಅದಿಕಾರ ನಡೆಸಿದರು. ೧೭೬೩ ರಲ್ಲಿ ೭೦೦೦ ಸೀಮೆಯ ಭಾಗವೊಂದು ಬೇಲೂರಿನ ಕೈಬಿಟ್ಟು ಹೈದರನ ವಶವಾಯಿತು. ಈ ನಾಯಕರು ನವಾಬಹೈದರನಿಗೆ ವಾರ್ಷಿಕವಾಗಿ ೫೦೦೦ ಪಗೋಡ ಪೊಗದೆ ಸಲ್ಲಿಸುವಂತಾಯಿತು. ೧೭೯೨ ರಲ್ಲಿ ಕೃಷ್ಣಪ್ಪನಾಯಕನು ಟಿಪ್ಪು ವಿರುದ್ಧವಾಗಿ ಪರಶುರಾಂ ಭಾವೋನೊಂದಿಗೆ ಸೇರಿ ಕಾರನ್ ವಾಲೀಸ್ ಪರವಾಗಿ ಸಮರತಂತ್ರಕ್ಕೆ ಒಳಗಾಗಬೇಕಾಯಿತು. ಈ ಕಾರಣ ನಾಯಕನು ಭಯದಿಂದ ಕೊಡಗಿಗೆ ಓಡಿಹೋಗಿದ್ದರಿಂದ ಅನಾಯಕತ್ವ ವುಂಟಾಯಿತು. ಕಾಲಕ್ರಮೇಣ ಬ್ರಿಟೀಷ್ ಹಾಗೂ ಟಿಪ್ಪುವಿನ ಒಪ್ಪಂದದಲ್ಲಿ ನಾಯಕನಿಗೆ ತಿರುಗಿ ಕೆಲವೇ ಪ್ರಾಂತ್ಯದ ಆಡಳಿತ ಲಭಿಸಿತು. ಟಿಪ್ಪುವು ಬಾಲಂನ ಉಳಿದ

ಪ್ರಾಂತವನ್ನು ತನ್ನ ಅಧೀನದಲ್ಲಿರಿಸಿಕೊಂಡು ಕೋಟೆಯನ್ನು ನಿರ್ಮಿಸಿ ಅದಕ್ಕೆ "ಮಂಜಿರಾಬಾದ್" ಎಂಬುದಾಗಿ ನಾಮಕರಣ ಮಾಡಿದನು.

ಐಗೂರು ವೆಂಕಟಾದ್ರಿನಾಯಕ

ದಿ ೧೦-೯-೧೮೦೦ ರಲ್ಲಿ ಶ್ರೀರಂಗಪಟ್ಟಣ ಪತನವಾದ ನಂತರ ಬ್ರಿಟೀಷರ ವಿರೋಧಿಯಾಗಿದ್ದ ಧೋಂಡಿಯಾ ವಾಘನ ತರುವಾಯ ೧೮೦೨ ರಲ್ಲಿ ಕೃಷ್ಣಪ್ಪನಾಯಕನ ಮಗ ವೆಂಕಟಾದ್ರಿನಾಯಕನು ಐಗೂರನ್ನು ಕೇಂದ್ರವನ್ನಾಗಿಸಿಕೊಂಡು ಬ್ರಿಟೀಷ್ ಪ್ರಭುತ್ವವನ್ನು ಎದುರಿಸಿ ಮಂಜರಾಬಾದಿನ ಸಮೀಪ ಅರಣ್ಯ ಮಧ್ಯದಲ್ಲಿರುವ ಅರಕೆರೆ ಕೋಟೆಯನ್ನು ಭದ್ರಪಡಿಸಿ ಅಲ್ಲಿಯೇ ನಿಂತನು. ಲೆಫ್ಟಿನೆಂಟ್ ಕರ್ನಲ್ ಮಾಂಟ್ರೆಗ್ಯೂರನು ದಂಡೆತ್ತಿ ಅರಕೆರೆ ಕೋಟೆಯನ್ನು ಹಿಡಿದು ಅದನ್ನು ನಾಶಪಡಿಸಿದನು. ಆದರೂ ನಾಯಕನು ಪುನಹ ಕೋಟೆಯನ್ನು ವಶಪಡಿಸಿಕೊಂಡನು, ಕರ್ನಲ್ಆರ್ಥರ್‌ವೆಲ್ಲಸ್ಲಿಯು ಈತನನ್ನು ಸೆರೆಹಿಡಿಯಲು ನಿರ್ಧರಿಸಿ ಮೈಸೂರಿನ ಒಡೆಯರೊಂದಿಗೆ ನಾಯಕನನ್ನು ಹುಡುಕಿಸಿ ಅವನ ಕಡೆಯ ಹಲವು ಸೈನಿಕರನ್ನು ಕೈಸೆರೆ ಹಿಡಿದನು.**[22]** ಇದರಿಂದ ನಾಯಕನಿಗೆ ದಿಕ್ಕು ತೋಚದಂತಾಗಿ ಕಾಡಿಗೆ ಓಡಿಹೋದನು. ೧೮೦೨ನೇ ಫೆಬ್ರುವರಿಯಲ್ಲಿ ಒಂದು ದಿನ ಹಳ್ಳಿಯೊಂದರಿಂದ ತನಗೆ ಬೇಕಾದುದನ್ನು ತರಿಸಲು ನಾಯಕನು ತನ್ನವರನ್ನು ಕಳುಹಿಸಿದ್ದನು. ಈ ಸುಳಿವನ್ನು ತಿಳಿದ ಶತ್ರುಗಳು ನಾಯಕನನ್ನು ಹಾಗೂ ಅವನ ಕಡೆಯವರನ್ನು ಸೆರೆ ಹಿಡಿದು ಪೂರ್ಣಯ್ಯನ ಸಲಹೆ ಮೇರೆ ಉಗ್ಗಿಹಳ್ಳಿಯಲ್ಲಿ ಗಲ್ಲಿಗೇರಿಸಿ ೧೦-೨-೧೮೦೨ ರಂದು ವೆಂಕಟಾದ್ರಿನಾಯಕನ ಪ್ರಾಣಹರಣ ಮಾಡಿದರು.

[1]ಕೆಳದಿ ಸಂಶೋಧನಾಲಯದ ಅಂಗವಾಗಿ ಪ್ರಾಚೀನ ಹಸ್ತಪ್ರತಿ ಸರ್ವೇಕ್ಷಣೆಯಲ್ಲಿ ಡಾ. ವಿ.ಎಸ್.ಎಸ್. ಆಚಾರ್ಯರವರಿಂದ ಇದರ ಓಲೆಗರಿ ಹಸ್ತಪ್ರತಿ ನನಗೆ ಲಭಿಸಿದ್ದು, ಇದನ್ನು ಪ್ರೊ. ಎಂ.ವಿ. ಸೀತಾರಾಮಯ್ಯನವರಲ್ಲಿ ಪ್ರಸ್ತಾಪಿಸಿದಾಗ ತುಂಬಾ ಸಂತೋಷದಿಂದ ಪ್ರಕಟಣೆಗೆ ಒಪ್ಪಿದ್ದರಿಂದ ಪ್ರಕಟವಾಯಿತು. ಇದಕ್ಕೆ ಅವರಿಗೆ ಕೃತಜ್ಞತೆಗಳು.
[2]ಕೆಳದಿ ಇತಿಹಾಸ ಸಂಶೋಧನಾಲಯದಲ್ಲಿ ಈ ಕುರಿತು ಓಲೆಗರಿ ಹಸ್ತಪ್ರತಿಯೊಂದಿದ್ದು ಹಲವು ಕೀರ್ತನೆಗಳು ತಿರುಪತಿಯಿಂದ ಪ್ರಕಟವಾಗು 'ಸಪ್ತಪದಿ'ಯಲ್ಲಿ ಪ್ರಕಟವಾಗಿವೆ.
[3]ಕೆಳದಿ ಬಸವರಾಜ ಸಂಕಲಿಸಿದ "ಆ ೭;ತ೧೪; ಶ್ಲೋ ೧೦೩ ಮತ್ತು ೧೦೪, ಕನ್ನಡ ಅನುವಾದ ಪ್ರಸಾರಾಂಗ; ಕನ್ನಡ ವಿಶ್ವವಿದ್ಯಾನಿಲಯ, ಹಂಪಿ ೧೯೯೯ ಮತ್ತು **Shiva Tatwa Ratnakara Critical Study; Keladi Musehum VHRB.**
[4]ಎಂ.ಎ.ಆರ್. (ಮೈಸೂರ್ ಅರ್ಕಿಯಾಲಾಜಿಕಲ್ ರಿಪೋರ್ಟ್) ೧೯೨೬ ಪುಟ. ૩೮; **EC.Vol.V P II P.**
[5] "ಸಿಂಧು ಗೋವಿಂದ ಹಿಮಕರಗಂಧ ಧವಲಾಂಕ ಭೀಮ "ಮಣಿನಾಗಪುರವರಾಧೀಶ್ವರ ಬಲೀಯದ ಸಪ್ತಾಂಗಹರಣ" (ಕನಕ ಸಿರಿ, ಪು.೫೫೦. "ಕೊಡಗಿನ ಶಾಸನ ಸಂಪತ್ತು"; ಶ್ರೀ **M.G.** ನಾಗರಾಜ್ ಲೇಖನ)
[6] The Mysore Letters and Dispatches of the Duke of Wellington ೧೯೯೯-೧೮೦೫; ಪುಟ ೬೪-೬೫.
[7]ಡಾ. ಎಂ.ಎಂ. ಕಲ್ಬುರ್ಗಿ: ಕರ್ನಾಟಕ ಕೈಫಿಯತ್ತುಗಳು; ಸಂ: ಕನ್ನಡ ವಿಶ್ವವಿದ್ಯಾಲಯ ಹಂಪಿ: ಪು ೧೧೯ ಮತ್ತು ೩೫೫.
[8]ಅದೇ 'ಪು.೧೧೯; ಇಲ್ಲಿ ಹೇಳಿದ ನಗರ ಸಂಸ್ಥಾನ ಕೆಳದಿ ಸಂಸ್ಥಾನವಾಗಿದ್ದ ಈ ಸಂಗತಿ ಆಸಕ್ತಿಯುಂಟು ಮಾಡಿದೆ.೮ ಇಲ್ಲಿ ಹೇಳಿದ ಬಿಕಾರಿ ರಾಮಪ್ಪನಿಗೆ ವೀಣೆರಾಮಪ್ಪನೆಂತಲು ಹೆಸರಿರುವುದು ಕಂಡು ಬರುತ್ತದೆ.
[9]ಶ್ರೀ ಮನ್ಮಹಾರಾಜರ ವಂಶಾವಳಿ ಪು.೨೩೦; (ಬಳ್ಳಂ ಎಂದರೆ ಮಂಜರಾಬಾದಿನ ಐಗೂರು; ಭಾಗ ೨ ಪು. ೧೪;) ಎ.ಕ. **xv** ಬೇಲೂರು ಶಾ. ನಂ. ೫೭ ಮತ್ತು **IX** ಪರಿಷ್ಕೃತ ಬೇಲೂರು ೧೧ ರ

ಶಾಸನದಲ್ಲಿಯೂ ಈತನ ಉಲ್ಲೇಖವಿದ್ದು ಮಂಚಯ್ಯನಾಯಕನು ಕೃಷ್ಣದೇವರಾಯನ ಮಗನೆಂದು ಹೇಳಿದೆ.

[10] Ramadas a descendant of the famous scholar, Musiciam and poet Vanikuntadasa of Belur
(ಪು. ೮೦, ಎಂ.ಎ.ಆರ್. ೧೯೩)

[11]ಎ.ಕ. (ಎಪಿಗ್ರಾಫಿಯಾ ಕರ್ನಾಟಿಕಾ) V

[12] Hayavadan Rao; History of Mysore Vol. I

[13]ಶಿವತತ್ವರತ್ನಾಕರ ೭ನೆಯ ಕಲ್ಲೋಲ ೧೪ನೆ ತರಂಗ.

[14]ಕೆ.ನೃ.ವಿ. VII ಆಶ್ವಾಸ;

[15]ಸಕ್ಕರೆಪಟ್ಟಣದ ಶ್ರೀರಂಗನಾಥದೇವರಿಗೆ ಕೆಳದಿ ಅರಸರು ಮಾಡಿಸಿಕೊಟ್ಟ ಆಭರಣಗಳು ತಾಲ್ಲೂಕು ಖಜಾನೆಯಲ್ಲಿರುವುದನ್ನು ಕನ್ವಿನರ್ ನನಗೆ ತಿಳಿಸಿದ್ದಾರೆ.

[16] Poenzya's Letter in The Nayakas of Madhura P.90; Transcripts cited in Foster – English Factories in India, (1651-54) Intro PP XXV-XXXIII.

[17]ಶ್ರೀಮನ್ಮಹಾರಾಜರ ವಂಶಾವಳಿಯಲ್ಲಿ ಪ್ರಮೋದತ ಸಂ. ೮ ಆಷಾಢ ಶುದ್ದ ೮ (೧೬೯೦) ರಲ್ಲಿ ಶವಪ್ಪನಾಯಕನಿಂದ ಸಕ್ಕರೆಪಟ್ಟಣ, ಶ್ರಾವಣ ಶು ೩ರಲ್ಲಿ ಬೇಲೂರು, ಆಶ್ವಯುಜ ಶು ೫ ರಲ್ಲಿ ಶಾಸನವನ್ನು ಸಾಧಿಸಿದರು ಎಂದಿದೆ, ಆದರೆ ಶಿವಪ್ಪನಾಯಕನು ೧೬೬೧ರಲ್ಲಿಯೇ ಶಿವಸಾಯುಜ್ಯ ಹೊಂದಿದ್ದನು.

[18]ಕೆ.ನೃ.ವಿ X ಆಶ್ವಾಸ.

[19]ಕೆ.ನೃ.ವಿ. ಕೃತಿಯ ಏಕಾದಶಾಶ್ವಾಸದ ಕುಂಟ ಪಂಕ್ತಿಯಲ್ಲಿ ಅರಕಲಗೂಡು ಹಾಗೂ ಬೇಲೂರು ಕುರಿತ ಇತಿಹಾಸದ ಉಲ್ಲೇಖಗಳು. ಈ ಲೇಖನದ ಕೊನೆಯಲ್ಲಿರುವ ಅನುವಾದ ನೋಡಿ.

[20]ಕೆ.ನೃ.ವಿ. IX ಆಶ್ವಾಸ; ರಾಮರಾಜೀಯಮು (ಎಸ್.ಕೆ.ಅಯ್ಯಂಗಾರ್ ಪು. ೩೧೨)

[21]೭೦೦೦ ವರಹ ರೇವನ್ನೂ ಆದಾಯ ಪ್ರದೇಶಗಳಿಗೆ ೭೦೦೦ ಸೀಮೆ ಎಂದು ಹೆಸರುಂಟಾಗಿದೆ. ಸಾರಂಗ ಶ್ರೀ ವೀರಶೈವ ಅರಸುಮನೆತನಗಳ ಅಧ್ಯಯನದಲ್ಲಿರುವ ಶ್ರೀ M. G. ನಾಗರಾಜ್ ರವರ "ಕೊಡಗಿನ ಹಾಲೇರಿ ಅರಸು ಮನೆತನ" ಲೇಖನವನ್ನೂ ನೋಡಿರಿ.

[22]ಅರ್ಥರ್‌ವೆಲ್ಲಸ್ಲಿಯ ೧೦-೪-೧೮೦೦ರ ಪತ್ರವೊಂದರಲ್ಲಿ ಬೇಲೂರು ಕೃಷ್ಣಪ್ಪನಾಯಕನನ್ನು ಕುರಿತ ಪ್ರಸ್ತಾಪವು ಗಮನಾರ್ಹವಾಗಿದೆ. ಅನುಬಂಧ ನೋಡಿರಿ.

ಮಲೆಕರ್ನಾಟಕದ ಅರಸು ಮನೆತನಗಳು: ೧೫. ಬೇಲೂರು ನಾಯಕರು (೨)

ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳು

ಡಾ. ಸೂರ್ಯನಾಥ ಕಾಮತರ ಅಭಿಪ್ರಾಯದಂತೆ ಬೇಲೂರು ಬಲಂ ನಾಯಕರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಇತಿಹಾಸ ರಚನೆಗೆ ಶಾಸನಗಳು, ಡಾಬ್ಸ್ ನೆನಪುಗಳು, ಮೆಕೆಂಜೀ ಸಂಗ್ರಹಗಳು

[1] ಕೊಡಗಿನ ನೆನಪುಗಳು ಸಹಕಾರ ನೀಡುತ್ತವೆ. ರಾಜಕೀಯ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಇರುವ ಅಲ್ಪ ಕಾಲಾವಧಿಯಲ್ಲಿಯೇ ಸಾಧಿಸಿದ ಈ ನಾಯಕರ ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳು ಗಮನಾರ್ಹವಾದುದು. ಈ ಪಾಳೆಯ ಪಟ್ಟಿನ ಶಾಸನಗಳ ಮೇರೆಗೆ ೧೫೬೩ರಲ್ಲಿ ವೆಂಕಟಾದ್ರಿನಾಯಕನು ನಾಗನಾಯಕನ ಮಂಟಪದ ಮುಂದಿನ ಗರುಡಗುಡಿಯನ್ನೂ ಹಾಗೂ ೧೫೮೦ ರಲ್ಲಿ ವಸಂತೋತ್ಸವಕ್ಕಾಗಿ ಉಯ್ಯಾಲೆ ಮಂಟಪವನ್ನು ನಿರ್ಮಿಸಿದನು.ಹೊಳಲ್ಕೆರೆ ೧೧೨ ನೆಯ ಶಾಸನದ ಮೇರೆಗೆ ಎರ್ರ ಕೃಣಪ್ಪನಾಯಕನ ಪ್ರತಿನಿಧಿಯು ೧೫೦೪ ರಲ್ಲಿ ಬೇಗೂರಿನ ಹೊರಪೇಟೆ ನಿರ್ಮಿಸಿ ಅದಕ್ಕೆ 'ಕೃಷ್ಣಾಪುರ' ಎಂದು

ನಾಮಕರಣ ಮಾಡಿದನು. ಜಗಳೂರು ಶಾಸನ ನಂ.೨ರ ಪ್ರಕಾರ ಎರ್ರ ಕೃಷ್ಣಪ್ಪನಾಯಕನು ತನ್ನ ಆಳ್ವಿಕೆಗೆ ಒಳಪಟ್ಟಿದ್ದ ಜಗಳೂರು ಸೀಮೆಯ ಬಿಳಿಚೋಡು ಗ್ರಾಮದ ಕುರುಬರು ನೀಡಬೇಕಾಗಿದ್ದ “ಕುರಿದೆರೆ” (ಕುರಿಗಳ ಮೇಲೆ ವಿಧಿಸಿದ ತೆರಿಗೆ)ಯನ್ನು ೧೫೫೪ ರಲ್ಲಿ ತೆಗೆದು ಹಾಕಿದನು. ಲಕ್ಷ್ಮಪ್ಪನಾಯಕನು ತಾಯಿ ಪದ್ಮಾಜಮ್ಮಗೆ ಪುಣ್ಯವಾಗಲೆಂದು ದಿ ೮-೫-೧೬೦೫ ರಲ್ಲಿ ಲಕ್ಷ್ಮೀಪುರದ ಅಮ್ಮನವರಿಗೆ ಲಕ್ಷ್ಮೀಪುರ ಗ್ರಾಮವನ್ನು ನಿರ್ಮಿಸಿದ ಬಗ್ಗೆ ಹೊಳೆ ನರಸೀಪುರದ ೧೪೫ ನೆಯ ಶಾಸನವು ಹೇಳಿದೆ.

ಧಾರ್ಮಿಕ ಕೊಡುಗೆಗಳು

೧೫೫೮ ರಲ್ಲಿ ಇಮ್ಮಡಿ ಕೃಷ್ಣಪ್ಪನು ಕಾಮಸಮುದ್ರದ ವೀರಭದ್ರದೇವರ ಪೂಜೆಗೆ ಭೂಮಿಯನ್ನು (ಚಳ್ಳಕೆರೆ ಶಾ.ನಂ.೪೭), ೧೫೯೯ ರಲ್ಲಿ ಇಮ್ಮಡಿ ವೆಂಕಟಾದ್ರಿಯು ಗುಂಡೇರಿ ಚೆನ್ನಕೇಶವ ದೇವರಿಗೆ ನರಸಾಪುರ (ವೆಂಕಟಪುರ)ವನ್ನೂ (ಹೊಲ್ಲಕೆರೆ ಶಾ.ನಂ. ೨೧), ೧೫೬೧ ರಲ್ಲಿ ವೆಂಕಟಾದ್ರಿಯ ಮಗ ಮುಮ್ಮಡಿ ಕೃಷ್ಣಪ್ಪನಾಯಕನು ದಾವಣಗೆರೆ ತಾಲೂಕಿನ ಕಾಡಜ್ಜಿ ಗ್ರಾಮವನ್ನು ಹರಿಹರೇಶ್ವರ ದೇವಾಲಯದ ಛತ್ರಕ್ಕೂ (ದಾವಣಗೆರೆ ಶಾ.ನಂ. ೧೮), ಹರಿಹರ ದೇವಾಲಯದ ಲಕ್ಷ್ಮಿ ಮತ್ತು ಪಾರ್ವತಿ ದೇವಿಯರ ರಥೋತ್ಸವಕ್ಕೆ ಗಂಗನರಸಿ ಗ್ರಾಮವನ್ನು, ೧೫೬೨ ರಲ್ಲಿ ನೀರ್ಥಡಿ ಅಹೋಬಳನರಸಿಂಹ (ರಂಗನಾಥ ದೇವಾಲಯ) ದೇವರಿಗೆ ಭೂಮಿಯನ್ನು ದತ್ತಿ ನೀಡಿದರು. ೧೫೮೮ ರಲ್ಲಿ ರಂಗನಾಥ ಹಾಗೂ ಏಣಿ ನರಸಿಂಹ ವಿಗ್ರಹಗಳಿಗೆ ಒರಟಾದ ಗುಡಿ ಇದ್ದುದನ್ನು ತೆಗೆಸಿ ಹಾಕಲಾಯಿತು. ೧೬೨೬ ರಲ್ಲಿ ವೆಂಕಟಾದ್ರಿಯ ಕಾಲದಲ್ಲಿ ೨೬ ಅಂಕಣದ ಕೈಸಾಲೆ ಮಂಟಪವನ್ನು ಉತ್ತರ ಪ್ರಾಕಾರದ ಹತ್ತಿರ ನಿರ್ಮಿಸಲಾಯಿತು. ಬೇಲೂರಿನ ಹೊನ್ನಾಜಿಯಮ್ಮನು ವಿಜಯನಗರ ಚಕ್ರವರ್ತಿ ಶ್ರೀರಂಗರಾಯನ ಆಳ್ವಿಕೆಯಲ್ಲಿ ೧೬೭೨ ರಲ್ಲಿ ಕಲ್ಲಿನ ಮಂಚವನ್ನು ದಾನ ಮಾಡಿದಳು. ಚನ್ನರಾಯಪಟ್ಟಣದ ಗದ್ದೆ ರಾಮೇಶ್ವರಗುಡಿ, ಗೊರೂರಿನಲ್ಲಿ ತ್ರಿಕೂಟಾಚಲ ವಾಸುದೇವ ದೇವಸ್ಥಾನದ ನದಿಯ ಸನಿಹದಲ್ಲಿರುವ ನರಸಿಂಹ ದೇವಾಲಯಗಳು ೧೫೮೩ ರಲ್ಲಿ ಈ ಪಾಳೆಯಗಾರರಿಂದ ನಿರ್ಮಿಸಲ್ಪಟ್ಟಿರುವುದು ವ್ಯಕ್ತಪಡುತ್ತದೆ. ೧೬೭೫ ರಲ್ಲಿ ವೆಂಕಟಾದ್ರಿನಾಯಕನು ಬೇಲೂರು ಸೀಮೆಯ ಲಕುಂದ ನಾಡಿನ ಗುಮ್ಮನ ಹಳ್ಳಿಯನ್ನು ಪುಟ್ಟಯ್ಯನಿಗೆ ನೀಡಿದ ಬಗ್ಗೆ ದಾನ ಶಾಸನವೊಂದಿದೆ. ಕೊಡಗಿನ ೧೮ನೆಯ ಶಾಸನದಲ್ಲಿ ೧೬೯೩ ರಲ್ಲಿ ನಾಲ್ಕನೆಯ ಕೃಷ್ಣಪ್ಪನಾಯಕನು ಯೋಗಪ್ಪೈಯನಿಗೆ ಹಿರುಮನಹಳ್ಳಿ, ಕಟ್ಟೆಪುರ ಗ್ರಮಗಳನ್ನು ನೀಡಿದುದನ್ನು ಹೇಳಿದೆ. ೯೪ನೆಯ ಶಾಸನವು ೫ನೆ ಕೃಷ್ಣಪ್ಪನಾಯಕನು ಕೈವಲ್ಯಯೋಗಿಗೆ ಮೂದ್ರುವಳ್ಳಿ ಗ್ರಾಮ ಹಾಗೂ ಆನೆಯನ್ನು ನೀಡಿದ ಉಲ್ಲೇಖವಿದೆ. ೧೭೩೬ ರಲ್ಲಿ ವೆಂಕಟಾದ್ರಿನಾಯಕನು ಬೇಲೂರಿನ ಚೆನ್ನಕೇಶವ ದೇವಾಲಯಕ್ಕೆ ಗೋಪುರ ನಿರ್ಮಿಸಿ ಶಿಖರ (ಕಳಸ) ಸ್ಥಾಪಿಸಿರುವುದನ್ನು ಬೇಲೂರಿನ ೬೪ನೆ ಶಾಸನ ಉಲ್ಲೇಖಿಸುತ್ತದೆ. ೧೭೦೫-೧೭೩೪ರಲ್ಲಿ ಶೃಂಗೇರಿಯ ಶ್ರೀ ಸಚ್ಚಿದಾನಂದ ಭಾರತಿಗಳು ಬೇಲೂರು ಮಂತ್ರಿಗಳ ವಿಶೇಷ ಆಹ್ವಾನದಂತೆ ಸುಬ್ರಹ್ಮಣ್ಯಕ್ಕೆ ಹೋಗುವ ಮಾರ್ಗದಲ್ಲಿ ಭೇಟಿಯಿತ್ತುದು ಕಂಡುಬರುತ್ತದೆ. ನಂ. ೭೯ರ ಶಾಸನದಲ್ಲಿ ಸುಬ್ರಮಣ್ಯ ಮಠಕ್ಕೆ ದಾನ ಶಾಸನ ನೀಡಿದ ವಿವರವಿದೆ. ಹೊಳೆನರಸಿಪುರ ೨೦ರ ಶಾಸನದಲ್ಲಿ ಹೊಳೆನರಸೀಪುರದ ಗರುಡಸ್ವಾಮಿ ದೇವಾಲಯ ಪ್ರತಿಷ್ಠೆ, ಹಾಸನ ೨೧೪ನೇ ಶಾಸನದಲ್ಲಿ ವಿರೂಪಾಕ್ಷ ದೇವರಿಗೆ ಬಿಟ್ಟ ಉಂಬಳಿ ಹಾಗೂ ಶಾಸನ ೨೯೯ನೆಯ ಶಾಸನದಲ್ಲಿ ದಿ. ೧೨-೬-೧೭೭೪ ರಲ್ಲಿ ಕೃಷ್ಣಪ್ಪನಾಯಕನು ಅಗಚೀಗದ್ದೆಮಾನಿಯಲ್ಲಿ ವಿರಕ್ತ ಮಠ ನಿರ್ಮಿಸಿದ ವಿವರಗಳಿವೆ.

ಕ್ರಿ.ಶ. ೧೬೨೬ ರಿಂದ ೧೬೪೩ ರವರೆಗೆ ಆಳಿದ ವೆಂಕಟಾದ್ರಿನಾಯಕನ ಕಾಲದಲ್ಲಿ ಕರಣಿಕ ತಿಮ್ಮ ಮಂತ್ರಿಯ ಮಗ ಸೂರ್ಯನು ಕವಿ ಕಂಠಹಾರ ಕನ್ನಡ ನಿಘಂಟನ್ನು ರಚಿಸಿದ್ದಾನೆ. ಈತನಿಗೆ “ಉಭಯ ಭಾಷಾ ಕವಿತಾನೂತನ ಪದರಚನಾ ವಿಖ್ಯಾ” ಎಂಬ ಬಿರುದು ಇತ್ತು.[2]

ಉಪಸಂಹಾರ

ಮಧ್ಯಕಾಲೀನ ಭಾರತದ ದೇಶೀಯ ಸಂಸ್ಥಾನದ ಪಾಳೆಯಪಟ್ಟಿನ ಇತಿಹಾಸದಲ್ಲಿ ಬೇಲೂರೂ ಒಂದಾಗಿದೆ. ಈ ಇತಿಹಾಸದ ಅಧ್ಯಯನ ನಡೆಸಲು ಅರಕಲಗೂಡು, ಕೊಡಗು, ಕೆಳದಿ ಹಾಗೂ ಮೈಸೂರಿನ ಸಮಗ್ರ ಇತಿಹಾಸಗಳನ್ನು ಅರಿಯುವುದು ಅತ್ಯಗತ್ಯ. ಈ ಇತಿಹಾಸದ ಮೂಲಪುರುಷರ ಕುರಿತು ಹಡಪದ, ಎರ್ರ, ಬಾಲಂ ಐಗೂರು ಮುಂತಾದ ನಾಮಾಂಕಿತವೂ ಜಿಜ್ಞಾಸೆಗೊಳಪಡುತ್ತವೆ. ಮೆಕೆಂಜಿ ಸಂಪುಟ ೩೩೨ನೆಯ ವಸುಧಾರೆ ಗ್ರಾಮದ ಕೈಫಿಯತ್ತು ಬೇಲೂರು ನಾಯಕರು ಮೂಲ ತೆಲುಗ ಬಣಜಿಗರು ಎಂದು ಹೇಳಿದೆ.**[3]** *ಕೆಳದಿ ನೃಪವಿಜಯ*ದಲ್ಲಿ ಕವಿ ಲಿಂಗಣ್ಣನು ಉಲ್ಲೇಖಿಸಿದಂತೆ ಕೆಳದಿ ಅರಸರು ತಮ್ಮ ಶತ್ರುಗಳನ್ನು ಅವರು ಯಾರೇ ಆಗಿದ್ದರೂ ಮೊರೆ ಹೊಕ್ಕಾಗ ರಕ್ಷಿಸುವಂತೆ ಬೇಲೂರನ್ನು ರಕ್ಷಿಸಿ ಅಧಿಕಾರವನ್ನಿತ್ತು ಕಾಪಾಡಿದುದು ಗಮನಾರ್ಹವಾದುದು.**[4]** ಹಲವು ಸಂಗತಿಗಳು ಬೇಲೂರಿನ ಮೂಲಪುರುಷ ರಾಮದಾಸನೆಂದು ಹೇಳುತ್ತವೆ. ೧೯೩೧ರ *ಮೈಸೂರ್ ಪುರಾತತ್ವ ವರದಿ*ಯಲ್ಲಿಯೂ ಇದರ ಪ್ರಸ್ತಾಪವಿದ್ದು ಇವರ ವಂಶೀಕರಾದ ರಾಮದಾಸರವರಲ್ಲಿ ಅಪಾರವಾದ ಪುರಾತನ ಸಾಹಿತ್ಯ ಸಾಮಗ್ರಿಗಳಿದ್ದುದನ್ನು ಹೇಳಲಾಗಿದೆ.

ಕೆಳದಿ ಇತಿಹಾಸ ಸಂಶೋಧನಾಲಯದಲ್ಲಿಯೂ 'ವೇಲ್‌ಪುರಿ ಕೇಶವನೀತಿ ಗೀತಾ' ಎಂಬ ಓಲೆಗರಿ ಹಸ್ತ ಪ್ರತಿಯೊಂದು ನನ್ನ ಓಲೆಗರಿ ಸಮೀಕ್ಷಾ ಸಂಶೋಧನೆಯಲ್ಲಿ ಚಿಕ್ಕನಾಯಕನ ಹಳ್ಳಿಯಲ್ಲಿ ಲಭಿಸಿದ್ದು ಪರಿಶೋಧನೆಯಲ್ಲಿದೆ.**[5]**

ಸಂಸ್ಥಾನದ ಇತಿಹಾಸದಲ್ಲಿ ಜನಸಾಮಾನ್ಯರನ್ನು ಕುರಿತು ತಿಳಿಯಲು ಪಾಳೆಯಪಟ್ಟಿನ ಇತಿಹಾಸಾಧ್ಯಯನವು ಜರೂರು ಅಗತ್ಯಗಳಲ್ಲಿ ಒಂದಾಗಿದೆ. ಪಿ.ಹೆಚ್.ಡಿ. ಮಟ್ಟದಲ್ಲಿ ಸಶಾಸ್ತ್ರೀಯವಾಗಿ ಬೇಲೂರು ನಾಯಕರ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಕೈಗೊಳ್ಳಲು ಅವಕಾಶಗಳಿವೆ. ಈ ದಿಸೆಯಲ್ಲಿ ಕ್ಷೇತ್ರ ಕಾರ್ಯವೂ ಅಗತ್ಯ. ಈ ಇತಿಹಾಸಕ್ಕೆ ಆಕರಗಳಿರುವ *ಕೆಳದಿ ನೃಪವಿಜಯ, ಶಿವತತ್ವರತ್ನಾಕರ, ಮೆಕೆಂಜಿ ಸಂಗ್ರಹ*ಗಳನ್ನು ಈ ವರೆಗೆ ವಿದ್ವಾಂಸರು ಬಳಸಿಕೊಳ್ಳದಿರುವುದು ಕಂಡುಬರುತ್ತದೆ. ಇದಕ್ಕೆ ಪೂರಕವೆಂಬಂತೆ ಬೇಲೂರು ಪಾಳೆಯಪಟ್ಟಿಗೆ ಸೇರಿದ ಅವಶೇಷಗಳೂ ಕಣ್ಮರೆಯಾಗುತ್ತಿದ್ದು ಪುಟ್ಟಣದ ಮ್ಯೂಜಿಯಂಗಳಲ್ಲಿ ಸೇರಿವೆ. ಸಾಕಷ್ಟು ಪೂರ್ವದಲ್ಲಿನ ತಜ್ಞರಾದ ಎಂ.ಎಸ್. ಪುಟ್ಟಣ್ಣನವರ ಸಂಶೋಧನೆಯಲ್ಲಿ ಬೇಲೂರು ಕೈಬಿಟ್ಟಿರುವುದು ಆಶ್ಚರ್ಯವೇ ಸರಿ!

ಅನುಬಂಧ – ೧

ಮೆಕೆಂಜೀ ಸಂಗ್ರಹದಲ್ಲಿ ಬೇಲೂರು ನಾಯಕ ಪರಂಪರೆ

ನಂ.	ಮೆಕೆಂಜಿ ಸಂಪುಟ ಸಂಖ್ಯೆ	ಕೈಫಿಯತ್ತುಗಳು
೧.	೧೬೨	ಅಂಕನಾಥಪುರದ ಅರ್ಕೇಶ್ವರಸ್ವಾಮಿ ಕೈಫಿಯತ್ತು
೨.	೧೬೧	ಚಿಕ್ಕಮಗಳೂರು ಕೈಫಿಯತ್ತು
೩.	೩೩೨	ವಸುಧಾರೆ ಗ್ರಾಮದ ಕೈಫಿಯತ್ತು
೪.	ಕೆ.ಎ.೪೦೦/೫	ಹಳೇಬೀಡ ಕೈಫಿಯತ್ತು
೫.	೩೫೧	ಜಮಲಾಬಾದು ಕೈಫಿಯತ್ತು
೬.	೩೫೩	ಮರದಾಳ ಕೈಫಿಯತ್ತು

ಆಕರ : *ಕರ್ನಾಟಕದ ಕೈಫಿಯತ್ತುಗಳು* ಸಂ : ಪ್ರೊ. ಎಂ.ಎಂ. ಕಲ್ಬುರ್ಗಿ

ಅನುಬಂಧ – ೨

ಲೆಟರ್ಸ್‌ಆಂಡ್‌ಡಿಸ್ಪ್ಯಾಚೆಸ್ ಆಫ್‌ಡ್ಯೂಕ್‌ಆಫ್ ವೆಲ್ಲಿಂಗ್ ಟನ್‌ನಲ್ಲಿ ಬೇಲೂರು ನಾಯಕರ ಕುರಿತು ಪತ್ರ ಆರ್ಥರ್ ವೆಲ್ಲೆಸ್ಲಿಯಿಂದ

Tellicherry
April 10th, 1800

My dear Colonel,

I received last night the accounts of colonel Tolfrey's defeat, and sent off expresses ot make the following arrangement to remedy it. The flank companies of the 77th are on their march towards chiltledroog, and as they are nearest to the Bal country, and have all their equipments prepared, I have ordered them to Quscota. I have ordered from Seringapatam, Arrack, Provisions, and ammunition Grain, and, and I have desired that the 4 companies of the 4th Regiment under Major Capper many be sent with these articles as an escort. I have no doubt but that the Europeans will settle all matters without difficulty, and from the accounts received I am at a loss to guess from what cause they failed in forcing a Barrier to which they could march in three columns, one of them in companies and upon which they could bring their guns to bear. Colonel Tolfrey has quited Munserabad, and if he has not thrown into it a proper supply of provisions for the garrison, that fort will be lost; as it may be depended upon that Kistnapah Naig1 will occupy all the barriers between Munserabad and Ouscota, which it will not be am easy matter to force after what has happened, and I dont expect that the Europeans will reach Onscota till the 20th at soonest.

The Post at Arrakeery, at which Col. Tolfrey failed, does not lie towards The Bissolee Ghant but is situated on the right of the road from Onscota to munserabad, and is apparently between the road, and the Hyawuthy. The Co-operation from Kanara Therefore, if it were possible, would ot answer for some time, at least not till the post at Arakeery shall be forced, and the detachment from this side shall be prepared toforce the post which Kistnapah Naig2 has on the Bissolee Ghaut. But the fact is that there is not a soldier either in Canara or Malabar who can be moved. There are 300 Sepoys and 120 Europeans at Mangalore; of the latter there will be 400 more in about tendays, when they will have reached that place from Rence. I will order them forward to the Sobramany Pagoda;3 and when the Bissolee Ghat comes to be attacked on our side, they can operate from theirs. There is nothing at cannanore nothing here, not nearer to Mangalore than calicut. They can march thither sooner than they can go by sea at this time of the year, and if they could move immediately the rains would set in before they would arrive at the scene of operations. We must make the best of it and depend upon the bayonets of the Europeans; but I acknowledge myself to be much disappointed and vexed at this failure of 1000 Sepoys and 1,600 of the Rajah's Troops, against not a larger number of Ryots, in a country by no means difficult, and from which the same people were driven llike sheep, and their Fort taken from Them, in September last by a simmilar body of troops.

I went this morning to Cotaparmba which is a neat little mud redoubt about miles from Rhence, It contains buildings which will hold a large quantity of provisions and ammunitions with which please God they shall be filled in a few days. The road making goes on well and has not been interrupted. On the day after tomorrow I shalloccupy Pyche fort, On the Montana Road and Monanderry Pagoda4 On that leading to Canonte, and I hope in a few days afterwards to be able to take possession of the posts which will be constructed at Montans and Canonte.


I propose to return to Caunannore on the day after tomorrow, Mr. Spencer comes here in the mornign which detains me till and I shall be at Seringapatam I hopeon the 22nd,

Believe me, yours most Sincerely, Arthur Wellesley,

Lt Col Close,

Col, Montresor will join the Detachment with the Flank Companies of the 77th and will command it; and after what has happened I don't Think That will do us any harm.

ಅನುಬಂಧ-೩



೧. ಈತನಿಗೆ ಕ್ರಿ. ೧೭೧೫-೧೭೪೦ ರಲ್ಲಿ ಕೆಳದಿ ಇಮ್ಮಡಿ ಸೋಮಶೇಖರನು ಬೇಲೂರು ಪಾಳೆಯಪಟ್ಟಿಗೆ ನಾಯಕನ್ನಾಗಿ ನಿಯಮಿಸಿದನು.

೨. ಈತನು ಕುಟುಂಬ ಸಹಿತನಾಗಿ ಕೊಡಗರ ವೀರರಾಜರ ಮೇಲು ಪರಾಂಬರಿಕೆಯ ಮೇಲೆ ಮೈಸೂರದ ಸೀಮೆಯಲ್ಲಿದ್ದ ಮೊಳಲಿ ಮಟ್ಟಿಸಾಗರ ಎಂಬ ಸ್ಥಳದಲ್ಲಿದ್ದನು.

೩. ಈತನಿಗೆ ಉನ್ಮಾದಾವಸ್ಥೆಯಿದ್ದುದರಿಂದ ಕೆಳದಿ ಸೋಮಶೇಖರನಾಯಕನು ನಾಯಕನ ಆರೈಕೆಯ ಬಗ್ಗೆ ಬಿದನೂರಿನ ಅರಮನೆಯಲ್ಲಿರಿಸಿದ್ದನು.

೪. ಈತನು ಕುಹಕಿಗಳ ದುರ್ಬೋಧೆಗೊಳಗಾಗಿ ಮೈಸೂರು ಒಡೆಯರಲ್ಲಿ ಸೇರಿಕೊಂಡು ಕೆಳದಿ ಮೇಲೆ ವಿರೋಧವುಂಟು ಮಾಡಿದನು. ಈ ವಿರೋಧದಲ್ಲಿ ಆನೆಯನ್ನು ತಿರುಗಿ ಕೊಡಲಿಲ್ಲವೆಂಬ ಕಾರಣದಿಂದ ೩ ವೆಂಕಟಾದ್ರಿನಾಯಕನು ಮೈಸೂರವರಿಂದ ಕೊಲ್ಲಲ್ಪಟ್ಟನು.

೫. ಕೃಷ್ಣಪ್ಪನಾಯಕನು ಕೊಡಗರ ಉಪಟಳದಿಂದ ನೊಂದು ಕೆಳದಿಯ ಮೊರೆ ಹೋಗಲಾಗಿ ಈತನನ್ನು ರಕ್ಷಿಸಲು ರಾಯಸದ ಶಂಕರ ನಾರಾಯಣನೊಂದಿಗೆ ಸೈನ್ಯ ಕಳುಹಿಸಿ ಕೊಡಗಿನ ವೀರರಾಜನನ್ನು ನಯಭಯೋಕ್ತಿಗಳಿಂದ ಒಡಂಬಡಿಸಿ ಈತನನ್ನು ಬೇಲೂರು ಸಂಸ್ಥಾನದ ರಾಜತ್ವಕ್ಕೆ ಕೆಳದಿ ಅರಸನು ನಿಲ್ಲಿಸಿದನು.

ಬೇಲೂರು ನಾಯಕರ ವಂಶಾವಳಿ

ಅನುಬಂಧ-೩

ಅರಕಲಗೋಡ ಕೃಷ್ಣಪ್ಪನಾಯಕನ ಕುಮಾರ ವೆಂಕಟಾದ್ರಿನಾಯಕನ ಪತ್ನಿ ಗೊಣವೂರ ಲಿಂಗಮ್ಮ ನೆಂಬಾಕೆಗೆ ಗೃಹೀತ ಪುತ್ರನಾದ ಮೂಲಪುರುಷ, ಬೇಲೂರು ವೆಂಕಟಾದ್ರಿನಾಯಕನ ಪಟ್ಟದ ಪ್ರಥಮ ಸ್ತ್ರೀಯಲ್ಲು ಜನಿಸಿದ ಕೃಷ್ಣಪ್ಪನಾಯಕನ ಕುಮಾರನಾದ ಕುಮಾರ ವೆಂಕಟಪ್ಪರಸರ ಪುತ್ರನಾದ ಕುಮಾರ ಕೃಷ್ಣಪ್ಪನಾಯಕನು ವಾರೆದೆಗೆಸೆ ಮೂಲಪುರುಷ ಬೇಲೂರ ವೆಂಕಟಾದ್ರಿನಾಯಕನ ತೃತೀಯ ಸ್ತ್ರೀಯಲ್ಲು ಜನಿಸಿದ ರಂಗಪ್ಪನಾಯಕನ ಕುಮಾರನಾದ ದೊಡ್ಡಯ್ಯರಸನ ಪುತ್ರನಾದ ಕೃಷ್ಣಪ್ಪನಾಯಕನು ಬೇಲೂರ ಸಂಸ್ಥಾನದ ರಾಜತ್ವಕ್ಕೆ ನಿಲಿಸಿದಂ.

ಇನ್ನು ವೆಂಕಟಾದ್ರಿನಾಯಕನ ಪತ್ನಿಯಾದ ಗೊನವೂರ ಲಿಂಗಮ್ಮಗೆ ಗೃಹೀತ ಪುತ್ರನಾದ ಕುಮಾರ ಕೃಷ್ಣಪ್ಪನೆಂದೊಡಾರೆಂಬುದಂ ವಿವರಣಮಾಗಿ ಪೇಳ್ವೆನದೆಂತೆಂದೊಡೆ: ಮೂಲಪುರುಷ ಬೇಲೂರ ವೆಂಕಟಾದ್ರಿನಾಯಕರಿಗೆ ಮೂವರ್ ಸ್ತ್ರೀಯರ್, ಅವರೊಳ್ ಪಟ್ಟದ ಪ್ರಥಮ ಸ್ತ್ರೀಯಲ್ಲಿ ಜನಿಸಿದ ಪುತ್ರನ ಹೆಸರು ಕೃಷ್ಣಪ್ಪನಾಯಕ; ಆ ಕೃಷ್ಣಪ್ಪನಾಯಕನ ಮಗ ಕುಮಾರ ವೆಂಕಟಪ್ಪರಸರು; ಆ ಕುಮಾರ ವೆಂಕಟಪ್ಪರಸರ ಮಗನ ಹೆಸರು ಕುಮಾರ ಕೃಷ್ಣಪ್ಪನಾಯಕ; ಆ ಕುಮಾರ ಕೃಷ್ಣಪ್ಪನಾಯಕನು ಕುಟುಂಬ ಸಮೇತನಾಗಿ ಕೊಡಗರ ವೀರರಾಜನ ಮೇಲುಪರಾಂಬರಿಕೆಯ ಮೇಲೆ ಮೈಸೂರವರ ಸೀಮೆಯೊಳಗಣ ಮೊಳವಿ ಮಟ್ಟಿಸಾಗರವೆಂಬ ಸ್ಥಳದಲ್ಲಿ ಇರುತ್ತಿರ್ದರು; ಇನ್ನು ಬೇಲೂರು ವೆಂಕಟಾದ್ರಿನಾಯಕನ ದ್ವಿತೀಯ ಸ್ತ್ರೀಯಲ್ಲಿ ಜನಿಸಿದ ಕುಮಾರನ ಹೆಸರು ಅರಕಲಗೋಡ ಕೃಷ್ಣಪ್ಪನಾಯಕ, ಆ ಕೃಷ್ಣಪ್ಪನಾಯಕಗೆ ಮೂವರು ಕುಮಾರರು, ಅವರಾರೆಂದೊಡೆ ಜೇಷ್ಠಪುತ್ರ ವೆಂಕಟಾದ್ರಿನಾಯಕ, ದ್ವಿತೀಯ ಪುತ್ರನ ಹೆಸರು ಗೋಪಾಲನಾಯಕ, ತೃತೀಯ ಪುತ್ರನ ಹೆಸರು ಬೇಲೂರಯ್ಯ; ಹಾಗೆ ಮೂವರು ಪುತ್ರರು; ಆ ಮುವ್ವರು ಕುಮಾರರೊಳಗೆ ಗೋಪಾಲ ನಾಯಕ ಬೇಲೂರಯ್ಯನೆಂಬ ಇಬ್ಬರಿಗೂ ಸಂತಾನವಿಲ್ಲ; ಈ ಇಬ್ಬರೊಳಗಾ ಗೋಪಾಲ ನಾಯಕನೆಂಬಾತನಂ ಹಿರಿಯ ಬಸವಪ್ಪನಾಯಕರ ಜ್ಯೇಷ್ಠಪುತ್ರನಾದ ಸೋಮಶೇಖರ ನಾಯಕರು ಬೇಲೂರ ರಾಜಾಧಿಕಾರಕ್ಕೆ ನಿಲಿಸೆ ಆತನ ಅಣ್ಣ ವೆಂಕಟಾದ್ರಿನಾಯಕನು ಉನ್ಮದಾವಸ್ಥೆಯಿಂದ ವರ್ತಿಸುತ್ತಿರಲಾಗಿ ಆತನಂ ಬಿದರೂರಿಗೆ ಕರೆಸಿಕೊಂಡು ಇಟ್ಟುಕೊಂಡು

ಈ ಪ್ರಕಾಮಿರುತ್ತು ಮಿರಲಾಗಿ ಅರಕಲಗೂಡ ಚೌಡಯ್ಯನ ಅಳಿಯ ಮಲ್ಲಣ್ಣನೆಂಬಾತನು ಆ ವೆಂಕಟಾದ್ರಿನಾಯಕನ ಕಿರಿಯ ತಮ್ಮನಾದ ಬೇಲೂರಯ್ಯ ನೆಂಬಾತನಂ ಕೂಡಿಕೊಂಡು ಮೈಸೂರವರ ಬಳಿಗೆ ಹೋಗಿ ಬೇಲೂರಯ್ಯನ ಕಾಣಿಸಿಕೊಟ್ಟು ಆತನಂ ಅವರ ಬಳಿಯಲ್ಲಿ ಇಟ್ಟು ತಾನು ವೇಣುಪುರದಲ್ಲು ಇದ್ದ ವೆಂಕಟಾದ್ರಿನಾಯಕನ ಬಳಿಗೆ ಬಂದು ನಿನಗೆ ರಾಜ್ಯ ಪಟ್ಟಮಂ ಕಟ್ಟಿಸುತ್ತೇನೆ ನೀನು ಸುಮ್ಮನೆ ಈ ಸ್ಥಳದಲ್ಲಿ ಯಾಕೆ ಇರುತ್ತಿದ್ದೀಯೆಂದು ಕುಬೋಧೆಯಂ ಬೋಧಿಸಿ ರಜತ್ವದ ದುರಾಸೆಯಂ ಪುಟ್ಟಿಸಿಪಟ್ಟಣಕ್ಕೆ ತೆರಳಿಸಿಕೊಂಡು ಹೋಗಿ, ಅರಸನಂ ಕಾಣಿಸಿ ಕೆಳದಿ ದೊರೆಗಳು ರಾಜತ್ವಕ್ಕೆ ನಿಲಿಸಿದ ಗೋಪಾಲನಾಯಕನಂವಾರೆದೆಗೆಸಿ ಪಿರಿಯನಾದ ಈ ವೆಂಕಟಾದ್ರಿನಾಯಕನನ್ನೇ ರಾಜಾಧಿಕಾರಕ್ಕೆ ನಿಲಿಸಿಕೊಡಬೇಕೆಂದು ಬಹು ವಿಧದಿಂದ ಮೈಸೂರವರ ನೊಡವಡಿಸಿ, ಆ ಮಲ್ಲಣ್ಣನು ವೆಂಕಟಾದ್ರಿನಾಯಕನೊಡನೆ ಮೈಸೂರವರ ಪೌಜುಸುಬೇದಾರ ಕೋಣನೂರ ಸುಬ್ಬರಾಯನೆಂಬಾತನಂ ಸಹ ತೆರಳಿಸಿಕೊಂಡು ಬಂದು ಐಗೂರ ಸಮೀಪದಲ್ಲು ಕೊಡಲಿಪೇಟೆ ಎಂಬ ಸ್ಥಳದಲ್ಲು ಪಾಳ್ಯವನಿಳಿದು ಮಸಲತಿಯಾದಲ್ಲಿ ಆ ವರ್ತಮಾನವನ್ನು ಗೋಪಾಲ ನಾಯಕಂ ಬಿನ್ನಹವಂ ಮಾಡಿ ಕಳುಪಲಾಗಿ ಆಗ ಗೋಪಾಲನಾಯಕಗೆ ಸಹಾಯವಾಗಿ ರಾಯಪಾಳ್ಯದ ಬೈದೂರ ಚನ್ನವೀರಪ್ಪನ ಸಂಗಡ ಸೈನ್ಯಮಂ ಕೊಡಿಸಿ ತೆರಳ್ಚಿಸಿ ಕಳುಪಲಾಗಿ ಆ ಉಭಯ ಸೈನ್ಯಕ್ಕೂ ಕೈಗಲಸಿ ಮಸಲತ್ತಿಯಲ್ಲು ಸಹಾಯಕ್ಕೆ ಬಂದ ಮಾಯಾವಿಗಳ ಸೈನ್ಯವು ಪಲಾಯನಂ ಬಿಡೆದು ಹೋಗಲಾಗಿ ಆಗಲಾ ವೆಂಕಟಾದ್ರಿನಾಯಕ ಮಲ್ಲಣ್ಣನೆಂಬವ ಸಹಾ ಮೈಸೂರವರ ಸೀಮೆಯೊಳಗಣ ಗೊರವೂರೆಂಬ ಸ್ಥಳದಲ್ಲು ಇರುತ್ತಿದ್ದಲ್ಲಿ, ವೆಂಕಟಾದ್ರಿಯನಾಯಕನ ಹವಾಲೆಯಲ್ಲು ಇರುವೆ ಹೀಗೆ ಮಾಯಾವಿಗಳು ಒಂದು ಆನೆಯ ಹಾಕಿ ಕೊಟ್ಟದ್ದರು, ಹೀಗಿರುತ್ತಿದ್ದು ಕೆಲವು ದಿವಸದ ಮೇಲೆ ತಾವು ಹವಾಲೆಗೆ ಹಾಕಿಕೊಟ್ಟ ತಮ್ಮ ಬಹ ಆನೆಯನ್ನು ತಿರುಗಿ ತರಹೇಳಿ ಗುರು ಮನುಷ್ಯರ ಕಳುಹಲಾಗಿ ವೆಂಕಟದ್ರಿನಾಯಕನು ಆ ಆನೆಯಂ ಕೊಡದೆ ಚಂಡಿಸಲಾಗಿ ಆ ವೆಂಕಟಾದ್ರಿನಾಯಕನಂ ಕೋವಿ ಗುಂಡಿನಲ್ಲು ಇಡಿಸಿ ಕೊಲಿಸಿ ತಮ್ಮ ಬಗೆ ಆನೆಯನ್ನು ತೆಗೆದುಕೊಂಡು ಹೋಗಲಾಗಿ ಆಗ ಮಾಯಾವಿಗಳು ಈ ವತ್ಮಾನಮಂ ಕೇಳ್ದು ಈ ವೆಂಕಟಾದ್ರಿನಾಯಕನು ಹೇಗಾದರೂ ತಮ್ಮ ಹೊಂದಿದವನು ಈತನು ದುರ್ಬೋಧೆ ಕೇಳಿ ದುರ್ಬುದ್ಧಿಯಿಂ ಮೃತವಾದನು, ಈಕೆಗೆ ಸಂತಾನವಿಲ್ಲವೆಂಬುದಂ ತಿಳಿದು ಆ ವೆಂಕಟಾದ್ರಿನಾಯಕನ ಪತ್ನಿ ಗಣಗೂರ ಲಿಂಗಮ್ಮನೆಂಬಾಕೆಗೆ ಒಳಗೆ ಬರೆದ ವಿವರ ಪ್ರಕಾರ ಮೂಲಪುರುಷ ಬೇಲೂರ ವೆಂಕಟಾದ್ರಿನಾಯಕನ ಪಟ್ಟದ ಸ್ತ್ರೀಯಲ್ಲು ಜನಿಸಿದ ಕೃಷ್ಣಪ್ಪ ನಾಯಕನ ಮೊಮ್ಮಗನಾದ ಕುಮಾರ ಕೃಷ್ಣಪ್ಪನಾಯಕನೆಂಬಾತನಂ ಗಣಗೂರು ಲಿಂಗಮ್ಮಗೆ ಸಾಕು ಕೊಡಿಸಿ ಆಕೆಗೆ ಗೃಹೀತ ಪುತ್ರನಂ ಮಾಡಿಸಿ ಮೇಲುಪರಾಂಬರಿಕೆ ಮೇಲೆ ಇಟ್ಟುಕೊಂಡು ಇದ್ದರು. ಇನ್ನು ಮೂಲಪುರುಷ ಬೇಲೂರು ವೆಂಕಟಾದ್ರಿನಾಯಕನ ತೃತೀಯ ಪತ್ನಿಯಲ್ಲು ಜನಿಸಿದ ಪುತ್ರನ ಹೆಸರು ರಂಗಪ್ಪನಾಯಕ; ಈ ರಂಗಪ್ಪನಾಯಕನು ಉಚ್ಚಂಗಿಯೆಂಬ ಸ್ಥಳದಲ್ಲು ಮಸಲತಿಯನ್ನು ಕೋವಿಗುಂಡಿನ ಗಾಯದಿಂದ ಮೃತನಾದನು. ಆ ರಂಗಪ್ಪನಾಯಕನ ಮಕ್ಕಳ ಹೆಸರು, ಹಿರಿಯ ಮಗನ ಹೆಸರು ದೊಡ್ಡಯ್ಯರಸು ಕಿರಿಯ ಮಗನ ಹೆಸರು ವೆಂಕಟಾದ್ರಿನಾಯಕ; ಆ ರಂಗಪ್ಪನಾಯಕಗೆ ಹಾಗೆ ಇಬ್ಬರು ಮಕ್ಕಳು; ಆ ಇಬ್ಬರೊಳಗೆ ವೆಂಕಟಾದ್ರಿನಾಯಕಗೆ ಸಂತಾನವಿಲ್ಲ. ಈ ವೆಂಕಟಾದ್ರಿನಾಯಕನ ಅಣ್ಣನಾದ ದೊಡ್ಡಯ್ಯರಸನ ಮಕ್ಕಳ ಹೆಸರು, ಹಿರಿಯಮಗನ ಹೆಸರು ಕೃಷ್ಣಪ್ಪನಾಯಕ ಚಿಕ್ಕ ಮಗನ ಹೆಸರು ಕುಮಾರಸ್ವಾಮಿ; ದೊಡ್ಡಯ್ಯರಸಗೆ ಹೀಗೆ ಇಬ್ಬರು ಜನಿಸಿ ಬಲವಂತರಾಗಿ ಇರುತ್ತ ಭಲ್ಯದಲ್ಲು ಇದ್ದು ರಾಜ್ಯಂಗೆಯ್ಯುತ್ತಿರ್ಪ ಗೋಪಾಲನಾಯಕಂ ಬಹು ಮೂತ್ರವ್ಯಾಧಿಮೂಲದಿಂ ಮೃತನಾಗಲಾಗಿ ಆ ತರುವಾಯ ರಂಗಪಪ್ನಾಯಕನ ಕನಿಷ್ಠ ಪುತ್ರನಾದ ವೆಂಕಟಾದ್ರಿ ನಾಯಕನುರಾಜ್ಯಾಧಿಕಾರಮಂ ವಹಿಸಿ ಭಲ್ಯದಲ್ಲು ಇರುತ್ತಿದ್ದಲ್ಲಿ ಆ ವೆಂಕಟಾದ್ರಿನಾಯಕನ ಅಣ್ಣ ದೊಡ್ಡಯ್ಯರಸಿನ ಕುಮಾರನಾದ ಕೃಷ್ಣಪ್ಪನಾಯಕನು ಧಾತು ಸಂವತ್ಸರದ ಭಾದ್ರಪದ ಬಹುಳದಲ್ಲು ತನ್ನ ಚಿಕ್ಕಪ್ಪನಾದ ವೆಂಕಟಾದ್ರಿನಾಯಕನ ಕಯ್ಯಾರ ಘಾತವ ಮಾಡಿ ತಾನು ತನ್ನ ತಮ್ಮ ಕೃಷ್ಣಸ್ವಾಮಿ ಸಹಾ ಭಲ್ಯದಲ್ಲು ರಾಜತ್ವಕ್ಕೆ ನಿಲ್ಲಲಾಗಿ ಈ

ವರ್ತಮಾನಮಂ ಕೊಡಗಿನ ವೀರರಾಜಂ ಕೇಳ್ದು ಈ ಕೃಷ್ಣಪ್ಪನಾಯಕಂ ಸ್ವಾಮಿದ್ರೋಹಿ ಇವನಂ ವಾರೆದೆಗಿಸೆ ಮೂಲಪುರುಷ ಬೇಲೂರ ವೆಂಕಟಾದ್ರಿನಾಯಕನ ಪಟ್ಟದ ಸ್ತ್ರೀ ಸಂತಾನ ಪರಂಪರೆಯಲ್ಲು ಜನಿಸಿದ ಗಣಗೂರ ಲಿಂಗಮ್ಮಗೆ ಗೃಹೀತ ಪುತ್ರನಾಗಿ ಇರುತ್ತಮಿದ್ದ ಕುಮಾರ ಕೃಷ್ಣಪ್ಪನಾಯಕನಂ ರಾಜತ್ವಕ್ಕೆ ನಿಲಿಸಬೇಕೆಂದಾಳೋಚಿಸಿ ಭಲ್ಯಮಂ ವೇಡೈಪುದೆಂದು ಸೈನ್ಯಮಂ ಕಳುಪಿ ಈ ಪ್ರಕಾರ ಪ್ರಯತ್ನಮಂ ಮಾಡುತ್ತಿರಲಾಗಿ ಆ ಕೃಷ್ಣಪ್ಪನಾಯಕನು ಭಲ್ಯದಲ್ಲು ವಿಸ್ತರಿಸಲಾರದೆ ಪಲಾಯನಂಬಡೆದು ಬಂದು ಕುಟುಂಬ ಸಹ ಕಳಸಿದ ಕೋಟೆಯಲ್ಲು ನಿಂತು ತನ್ನ ವೃತ್ತಾಂತಮಂ ಚನ್ನಬಸವಪನಾಯಕರ್ಗೆ ರಾಯಸಮಂ ಬರೆಸಿ ನಿಮ್ಮ ಹೊಂದಿದ ಪುತ್ರಮನೆತನದವನಾದೆನ್ನಂ ರಾಜತ್ವಕ್ಕೆನಿಲ್ಲಿಸಬೇಕೆಂದು ಬಿನ್ನವಿಸಿ ಕಳುಪಲ್ತಮ್ಮ ಮರೆಪೊಕ್ಕವನು ಅವನೆಂತವನಾಗಿರ್ದೊಡಂ ಅವನ ಉದ್ಧಾರ ಮಾಡಬೇಕೆಂದು ಆಳೋಚಿಸಿ ರಾಯಸದ ಶಂಕರನಾರಣಯ್ಯನೊಡನೆ ಭೂರಿ ಸೈನ್ಯಮಂ ಕಳುಪಿ ಭಲ್ಯಮಂ ವೇಡೈಸಿದ ಕೊಡಗು ಸೈನ್ಯಮಂ ವಾರೆ ದೆಗೆಸಿ ಕೊಡಗಿನ ವೀರರಾಜನಂ ನಯಭಯೋಕ್ತಿಗಳಿಂದೊಡಂಬಡಿಸಿ ಕುಮಾರ ಕೃಷ್ಣಪ್ಪನಾಯಕನಂ ಭಲ್ಯದಿಂ ಹೊರದೆಗಿಸಿ ತಮ್ಮಂ ಮರೆವೊಕ್ಕ ಕೃಷ್ಣಪ್ಪನಾಯಕನಂ ಬೇಲೂರ ಸಂಸ್ಥಾನದ ರಾಜತ್ವಕ್ಕೆ ನಿಲಿಸಿ ಪರಮಪ್ರಖ್ಯಾತಿಯಂ ಪಡೆದ ನಂತುಮಲ್ಲದೆಯುಂ.

ಆಕರ ಗ್ರಂಥಗಳು

೧. *ಕೆಳದಿ ನೃಪವಿಜಯ* ಲಿಂಗಣ್ಣಕವಿ (ಅನುವಾದ: ಕೆ.ಗುಂ.ಜೋ. ಕ.ಸ.ಪ. ೧೯೭೭)

೨. *ಶಿವತತ್ವರತ್ನಾಕರ*– ಕೆಳದಿ ಬಸವರಾಜ ಅನುವಾದ: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಪ್ರಕಟಣೆ: ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯. **Critical study in English, Dr. Radhakrishna Murthy, Pune, keladi' Museum and Historical Research, Keladi'.., Karnataka st.**

೩. ಲ್ಯೂಯಿ ರೈಸ್‌ರವರ *ಎಫಿಗ್ರಾಫಿಯ ಕರ್ನಾಟಕ ಶಾಸನ*ಸಂಪುಟ **V** ಭಾಗ **II** ಹಾಗೂ ಪುನರ್ಮುದ್ರಣ ಸಂಪುಟನೆಗಳು.

೪. *ಕರ್ನಾಟಕ ಕೈಫಿಯತ್ತುಗಳು.* ಸಂ : ಪ್ರೊ.ಎಂ.ಎಂ.ಕಲ್ಬುರ್ಗಿ. ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೪.

೫. ***Vijayanagara Inscriptions***; **Dr. B.R.Gopal, 3 Volumes; Directorate of Archacology and Museums, Mysore, 1985**

೬. *ಕನಕಸಿರಿ*, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೯೯.

೭. *ಸಾರಂಗಶ್ರೀ*: ವೀರಶೈವ ಅರಸುಮನೆತನಗಳ ಅಧ್ಯಯನ.

೮. ***History of Mysore***; **Hayavadana Rao, 3 Volumes.**

೯. ***Letters and Despatches of Duke of Wellington*** **(**೧೭೦-೧೮೦೫**)**

೧೦. **Karnataka *Gazetteer* (Hassan)**

೧೧. **QJMS. Quarterly Journal of Mythic Society LVII** ಮತ್ತು **VIII** ಸಂಚಿಕೆಗಳು.

೧೨. *Modern Mysore* by M. Shama Rao.

೧೩. ಶ್ರೀಮನ್ಮಹಾರಾಜರವರ ವಂಶಾವಳಿ ಭಾಗ I : ಬಿ. ರಾಮಕೃಷ್ಣರಾವ್ (ಅರಮನೆ) ೧೯೧೬.

೧೪. ತಿರುಪತಿ '*ಸಪ್ತಪದಿ*' ಸಂಚಿಕೆಗಳು

೧೫. ಕಹವಸೂ, ಮೈಸೂರು ವಿಶ್ವವಿದ್ಯಾಲಯ ಸಂ. I

೧೬. Bulletin of The Deccan Collage Research Institute Vol XXXI, Poona Pt. ೧೯೭-೭೧ PtII ೧೯೭-೭೨ ಲೇಖನ : ಚಿಟ್ನೀಸ್, ಪೂನಾ.

ಬೇಲೂರು ನಾಯಕರನ್ನೊಳಗೊಂಡ ಶಾಸನಗಳ ಅನುಸೂಚಿ

ವೇಲಾಪುರ

(1) MAR 1934 No. 34;
(2) MAR 1933 No. 29;
(3) MAR 1934 No. 35;
(4) ECHn 40; VIII (Rev) A1 26;
(5) EC V B1 3; ARISE 1909 2 Nos 5-55; EC IX (Rev)
(6) EC B1 56; IX (Rev) B1 10;
(7) MAR 1937 No 22; EC IX (Rev) B 1 93.
(8) EC XV B1 57; IX (Rev) B1 11.
(9) EC V B1 22; IX (Rev) B1 146.
(10) EC V/XV B1 80; IX (Rev) B1 173
(11) EC XI. B1 294; IX (Rev) B1 176
(12) EC XI B1 296; (14) EC V B1 196.
(15) EC V Hn 39 VIII (Rev) A1 47.

ಹಡಪದ ಬಯ್ಯಪ್ಪನಾಯಕ

(1) EC XI Kd 26;
(2) EC XI Dg 18; Hd No 42;
(3) EC XI Dg 30; DD No 43;
(4) EC XI HK 49;
(5) EC XI HK 48;
(6) EC XI HK 21
(7) EC XI HK 11-114;
(8) EC XI HK 132
(9) EC V B1 4; IX (Rev) B1 37;
(10) EC V B1 12; IX (Rev) B1 66.
(11) EC V B1 68 IX (Rev) B1 66.
(12) EC V (Rev 1976) Kn 104 IV (1 Iedn,) Yd 59.
(13) MAR 1932., No.2.

ಯರ್ರ ಕೃಷ್ಣಪ್ಪನಾಯಕ

(1) EC 11 C1 37; (2) EC XI Dg 18; (3) EC XI Dg 83; (4) EC XI Dg 18; HD. No. 42;(5) E.C. XI Dg 30; HD.No. 43; (6) EC XI J1 2; (7) EC V Hn 41; VIII (Rev) A1 1. (8) EC V Ag 9; (9) EC V Ag 83; VIII (Rev) Ag 8. (10) EC V Ag 57; VIII (Rev) Ag 79. (11) EC V B1 4; IV (Rev) B1 37; (12) EC V B1 22; IX (Rev) B1 146 (13) EC XV B1 237; IX (Rev) B1 180 (14) MAR 1934 No.3. (15) EC V Hn 7; VIII (Rev) Hn 9 (16) Ec V Hn 2; VIII (Rev) Hn 2. (17) EC V Hn 103; VIII (Rev) Hn 77; (18) MAR 1935 1935 No. 8; EC VIII (Rev) Hn 79; (19) EC V Hn 15; VIII (Rev) Hn 122 (20) Ec V Hn2; (21) EC V Mj 9 (22) EC VI Cm 79; (23) EC XI CI 47 47 (24) EC XI Dg 22; HD No 41; (25) EC VI Cm 124; (26) EC VI TK 91 (27) EC XI HK 21L (28) EC XI HK 110 : (29) MAR 1932 No 2; (30) ARSIE 1904 No 85; SII IX Pt II No 641; SII XVII No 96 (31) ARSIE 1918 No 260 SII IX Pt II No. 626 (32) ARSIE 1918 No 270; SII IX Pt II No 666 (33) ARSIE 1906 No 71; SII IX Pt II No 640; SII XVII No 79; (34) ARSIE 1925 No 305 and 306; SII IX Pt II No. 647.

ವೆಂಕಟಾದ್ರಿನಾಯಕ
(1) EC IX HK 21; (2) EC V Hn 41; VIII (Rev) A1 1 (3) EC V Ag 9 (4) EC V Ag 83; VIII (Rev) Ag 8 (5) EC V B1 128; IX (Rev) B1 128; IX (Rev) B1 128; (6) EC V B1 1 ; IX (Rev) B1 109 (7) EC V B1 12 ; IX (Rev) B1 66. (8) EC V B1 22; IX (Rev) B1 146 ; (9) EC XV B1 237 ; IX (Rev) B1 180 ; (10) EC V Hn 2 ; (11) EC V Mj 9

***

MAR : Mysore Archaeological Reports
EC : Epigraphia Carnatica

—-
(ಸಂಖ್ಯಾಗೊಂದಲ / ಚುಕ್ಕಿ ಚಿಹ್ನೆಯ ಗೊಂದಲ ಇರುವುದರಿಂದ ಈ ಅಧ್ಯಾಯದ ಕೆಲವು ಅಡಿಟಿಪ್ಪಣಿಗಳನ್ನು ನಮೂದಿಸಿಲ್ಲ)

[1]ಶಾಸನಗಳು ಹಾಗೂ ಮೆಕೆಂಜೀ ಸಂಗ್ರಹಗಳನ್ನು ಅನುಬಂಧದಲ್ಲಿ ಪ್ರತ್ಯೇಕವಾಗಿ ನೀಡಲಾಗಿದೆ.
[2]ಕ.ಕ.ಚ. ಸಂ. II ಪು. ೩೨೪-೩೨೫; ಕಹವಸೂ ಸಂ. I ಪು ೨೬೪.
[3]ಡಾ. ಎಂ.ಎಂ.ಕಲ್ಬುರ್ಗಿ: ಸಂ: ಕರ್ನಾಟಕ ಕೈಫಿಯತ್ತುಗಳು, ಪು. ೧೧೮.
[4]ಇಂತಹ ಉದಾಹರಣೆಗಳು ಕೆಳದಿ ಅರಸರ ಚರಿತ್ರೆಯಲ್ಲಿ ಸಾಕಷ್ಟಿವೆ.
[5]ಹಲವು ಕೀರ್ತಿನೆಗಳು ತಿರುಪತಿ 'ಸಪ್ತಗಿರಿ'ಯಲ್ಲಿ ಪ್ರಕಟವಾಗಿವೆ. ಇದರಲ್ಲಿ ಬೇಲೂರು ವೈಕುಂಠದಾಸರ ಕೀರ್ತಿನೆಗಳೂ ಸಮ್ಮಿಳಿತಗೊಂಡಿವೆ.

ಮಲೆಕರ್ನಾಟಕದ ಅರಸು ಮನೆತನಗಳು: ೧೬. ಹಾಲೇರಿ ಅರಸರು (೧)

ಹಾಲೇರಿ ವಂಶದ ಬಗ್ಗೆ ಪ್ರಥಮ ಬಾರಿ ಪ್ರಸ್ತಾಪಿಸಿದ ಗ್ರಂಥ *ರಾಜೇಂದ್ರನಾಮೆ,*ಹಾವೇರಿ ವಂಶದ ದೊಡ್ಡ ವೀರರಾಜೇಂದ್ರ ಒಡೆಯನು ಈ ಗ್ರಂಥವನ್ನು ೧೮೦೭ರಲ್ಲಿ ಬರೆಯಿಸಿದನು. ಹಾಲೇರಿ ಅರಸರ ಬಗ್ಗೆ ಉಲ್ಲೇಖ ಮತ್ತು ಚರ್ಚೆ ಮಾಡಿರುವ ಗ್ರಂಥಗಳಲ್ಲಿ ಮುಖ್ಯವಾದುದು ಕಾನರ್ ೧೮೧೭ರಲ್ಲಿ ಬರೆದ ***ಮೆಮ್ಮೈರ್ ಆಫ್ ದಿ ಕೊಡಗು ಸರ್ವೆ,*** ೧೮೫೫ರಲ್ಲಿ ಮೋಗ್ಲಿಂಗನು ಬರೆದ ***ಕೂರ್ಗ್ ಮೈಮ್ಮೈರ್,*** ೧೮೭೭ರಲ್ಲಿ ರಿಕ್ತರನು ಬರೆದ ***ಕೂರ್ಗ್***

ಗೆಜೆಟಿಯರ್, ೧೮೭೮ರಲ್ಲಿ ಲೀವೀಸ್‌ರೈಸ್‌ನು ಬರೆದ ***ಮೈಸೂರ್ ಆಂಡ್ ಕೂರ್ಗ್‌ಗೆಜೆಟಿಯರ್,*** ೧೯೦೯ರಲ್ಲಿ ಲೀವೀಸ್ ರೈಸ್ ಪ್ರಕಟಿಸಿದ ***"ಮೈಸೂರು ಆಂಡ್ ಕೂರ್ಗ್‌ಫ್ರಂದಿ ಇನಸ್ಕ್ರಿಪ್ಷನ್ಸ್",*** ೧೯೨೪ರಲ್ಲಿ ನಡಿಕೇರಿಯಂಡ ಚಿಣ್ಣಪ್ಪ ಬರೆದ ಪಟ್ಟೋಲೆ ಪಳಮೆ ಹಾಗೂ ೧೯೭೪ ರಲ್ಲಿ ಡಿ.ಎನ್. ಕೃಷ್ಣಯ್ಯ ಬರೆದ ***ಕೊಡಗಿನ ಇತಿಹಾಸ.*** ಕ್ರಿ.ಶ. ೧೬೦೦ ರಿಂದ ೧೮೩೪ರ ತನಕ ಅಂದರೆ ಸುಮಾರು ಇನ್ನೂರು ವರ್ಷಗಳ ಕಾಲ ಹಾಲೇರಿ ಅರಸರು ಕೊಡಗಿಗೆ ಒಂದು ಭೌಗೋಳಿಕ ಸ್ವರೂಪ ಕೊಟ್ಟರು. ಭಿನ್ನ ಭಿನ್ನ ಭೂ ಭಾಗಗಳನ್ನು ಒಂದು ಕಡೆ ಸೇರಿಸಿ ರಾಜ್ಯವ್ಯವಸ್ಥೆಯನ್ನು ಬಲಪಡಿಸಿದರು. ಪ್ರಸ್ತುತ ಪ್ರಬಂಧವು ಹಾಲೇರಿ ಅರಸರು ಯಾವ ರೀತಿಯಲ್ಲಿ ಹಾಗೂ ಯಾವ ಸಂದರ್ಭದಲ್ಲಿ ರಾಜ್ಯ ವ್ಯವಸ್ಥೆಯನ್ನು ಕ್ರೋಢೀಕರಿಸಿ ಕೊಡಗಿನ ರಾಜ್ಯಾಧಿಕಾರವನ್ನು ಒಂದು ಶಕ್ತಿಯನ್ನಾಗರಿಸಿದರು ಎಂಬುದರ ಬಗ್ಗೆ ಚರ್ಚೆ ಮಾಡುತ್ತದೆ.

"ಕೊಡಗು" ಎನ್ನುವ ಪ್ರಾಂತ್ಯ ಬ್ರಿಟಿಷರು ಆಡಳಿತ ವಹಿಸಿಕೊಳ್ಳುವವರೆಗೂ ಒಂದೇ ರೀತಿಯ ಭೂ ಪ್ರದೇಶವನ್ನು ಹೊಂದಿರಲಿಲ್ಲ. ಬೇರೆ ಬೇರೆ ಕಾಲಘಟ್ಟದಲ್ಲಿ ಕೊಡಗು ಬೇರೆ ಬೇರೆ ರೀತಿಯ ಭೌಗೋಲಿಕ ಅಸ್ತಿತ್ವವನ್ನು ಹಾಗೂ ರಾಜಕೀಯ ಹಿನ್ನೆಲೆಯನ್ನು ಹೊಂದಿತ್ತು. ಪ್ರಾಚೀನ ಕಾಲದಿಂದ ಬ್ರಿಟಿಷರವರೆಗೆ ಕೊಡಗಿನ ಬೇರೆ ಬೇರೆ ಭೂ ಭಾಗಗಳು ಗಂಗ, ಚೋಳ, ಕದಂಬ, ಹೊಯ್ಸಳ, ಚಾಲುಕ್ಯ ಹಾಗೂ ವಿಜಯನಗರ ಅರಸರ ಸಾಮಂತ ಮಹಾಶಯರ ಆಳ್ವಿಕೆಗೆ ಒಳಪಟ್ಟಿತ್ತು. ಕೊಂಗಾಳ್ವ ಮತ್ತು ಚೆಂಗಾಳ್ವರೂ ಕೊಡಗನ್ನು ಆಳಿದರು. ಇವರ ಕಾಲದಲ್ಲಿ ಈಗಿನ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಕೊಡಗಿನ ಭೂಪಟದಲ್ಲಿತ್ತು. ಹಾಲೇರಿ ಲಿಂಗಾಯಿತ ಅರಸರ ಕಾಲದಲ್ಲಿ ಕೊಡಗು ಭೂ ಪ್ರದೇಶಕ್ಕೆ ಏಳುಸಾವಿರ ಸೀಮೆ ಪ್ರದೇಶಗಳು (ಈಗಿನ ಸೋಮವಾರಪೇಟೆ ತಾಲೂಕು) ಸೇರಿತು. ೧೮ನೇ ಶತಮಾನದ ಅಂತ್ಯದಲ್ಲಿ ಹೈದರ್‌ಅಲಿ ಮತ್ತು ಟಿಪ್ಪುಸುಲ್ತಾನರು ಕೂಡ ಕೊಡಗನ್ನು ಆಳಿದರು. ೧೮೩೪ಕ್ಕಿಂತ ಮೊದಲು ಕೊಡಗು ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ-ಪುತ್ತೂರಿನವರೆಗೂ ಚಾಚಿತ್ತು. ೧೮೩೪ರಲ್ಲಿ ಬ್ರಿಟಿಷರು ಕೊಡಗನ್ನು ಆಕ್ರಮಿಸಿಕೊಂಡ ನಂತರ ಸುಳ್ಯ, ಪುತ್ತೂರು ಮುಂತಾದ ಪ್ರದೇಶಗಳನ್ನು ಮದ್ರಾಸ್ ಪ್ರೆಸಿಡೆನ್ಸಿಯ ಆಡಳಿತಾಂಗಕ್ಕೆ ಹಸ್ತಾಂತರಿಸಿದರು. ಈಗ ನಾವು ಕಾಣುತ್ತಿರುವ ಕೊಡಗು ೧೮೩೪ರಲ್ಲಿ ಬ್ರಿಟಿಷರು ತಮ್ಮ ನೇರ ಆಳ್ವಿಕೆಗೆ ವಶಪಡಿಸಿಕೊಂಡ ಭೂಭಾಗವೇ ಆಗಿದೆ.

ಹಾಲೇರಿ ಅರಸರು ಈಗಿನ ಶಿವಮೊಗ್ಗ ಜಿಲ್ಲೆಯಲ್ಲಿರುವ ಇಕ್ಕೇರಿಗೆ ಸೇರಿದವರೆಂದು ಹೇಳಲಾಗಿದೆ. ಸುಮಾರು ೧೬ನೇ ಶತಮಾನದ ಮಧ್ಯಭಾಗದಲ್ಲಿ ಕೆಳದಿ ಚೌಡಪ್ಪನಾಯಕನ ಮಗ ಸದಾಶಿವನಾಯಕನು ವಿಜಯನಗರದ ಚಕ್ರವರ್ತಿಯಾಗಿದ್ದ ಸದಾಶಿವರಾಯನಿಂದ ಬಾರಕೂರು, ಮಂಗಳೂರು ಮತ್ತು ಚಂದ್ರಗುತ್ತಿಗಳ ಮೇಲಿನ ಅಧಿಕಾರವನ್ನು ಪಡೆದನು. ವಿಜಯನಗರದ ಅರಸರು ದಖ್ಖನ್ನಿನ ಸುಲ್ತಾನರಿಂದ ಸೋಲಿಸಲ್ಪಟ್ಟ ಮೇಲೆ ಇಕ್ಕೇರಿ ಅರಸರು ಉತ್ತರಕನ್ನಡದ ಹೊನ್ನಾವರದಿಂದ ದಕ್ಷಿಣಕನ್ನಡದ ಚಂದ್ರಗಿರಿ ನದಿಯವರೆಗೆ ಪಶ್ಚಿಮ ಘಟ್ಟಗಳನ್ನೆಲ್ಲಾ ತಮ್ಮ ಆಳ್ವಿಕೆಗೆ ಒಳಪಡಿಸಿದರು. ಕ್ರಿ.ಶ. ೧೫೮೨ ರಿಂದ ೧೬೨೯ ರವರೆಗೆ ಈ ಭಾಗಗಳನ್ನೆಲ್ಲಾ ವೆಂಕಟಪ್ಪನಾಯಕ ತನ್ನ ಕೈಗೆತ್ತಿಕೊಂಡನು. ಈಗ ಕೊಡಗಿನಲ್ಲಿರುವ "ಹಾಲೇರಿ"ಗೆ ಇಕ್ಕೇರಿಯ ಲಿಂಗಾಯಿತ ಜಂಗಮ ಅರಸರ ವಂಶಸ್ಥರು ಬಂದದ್ದೂ ಈ ಕಾಲದಲ್ಲಿಯೇ.

ಸುಮಾರು ೧೬ನೇ ಶತಮಾನದ ಕೊನೆಯ ಭಾಗದಲ್ಲಿ ಅಥವಾ ೧೭ನೇ ಶತಮಾನದ ಆರಂಭದಲ್ಲಿ ಈಗಿನ ಮಡಿಕೇರಿ ಮತ್ತು ವಿರಾಜಪೇಟೆ ತಾಲೂಕಿನ ಭಾಗಗಳನ್ನು ಬಹಳ ಸಡಿಲವಾದ ಅರ್ಥದಲ್ಲಿ ಕೊಡಗೆಂದು ಕರೆಯಲಾಗುತ್ತಿತ್ತು. ಈಗ ಮಡಿಕೇರಿಯೆಂದು ಕರೆಯಲಾಗುತ್ತಿರುವ ಭೂಭಾಗದಲ್ಲಿ ನಿಬಿಡವಾದ ಕಾಡುಗಳಿದ್ದವು ಹಾಗೂ ಜನರ ವಸತಿಯೇ ಇರಲಿಲ್ಲ ಎಂದು ಡಿ.ಎನ್. ಕೃಷ್ಣಯ್ಯನವರು ಬರೆಯುತ್ತಾರೆ. ಆ ಕಾಲದಲ್ಲಿ ಈ ಭೂ


ಭಾಗಗಳನ್ನು ಸಣ್ಣಪುಟ್ಟ ನಾಯಕ ಪಾಳೇಗಾರರು ಆಳುತ್ತಿದ್ದರು. ದಕ್ಷಿಣದ ಅಂಜಿಗೇರಿ ನಾಡನ್ನು ಚಿಟ್ಟಪ್ಪ ನಾಯಕನು ಆಳಿದರೆ, ಭಾಗಮಂಡಲ ಅಥವಾ ತಾವುನಾಡಿನಲ್ಲಿ ಕರ್ಣಂಬಾಹು ಎನ್ನುವ ನಾಯಕನು ಆಳುತ್ತಿದ್ದನು. ಪಕ್ಕದ ಮಲೆಯಾಳ ಪ್ರದೇಶದಿಂದ ಬಂದು ತಾವುನಾಡನ್ನು ವಶಪಡಿಸಿಕೊಂಡ ಇವನು ನಾಯಕರ ಸಂತತಿಯವನು. ಈ ಸಂದರ್ಭದಲ್ಲಿ ಇಕ್ಕೇರಿಯಿಂದ ಜಂಗಮನೊಬ್ಬನು ಮಡಿಕೇರಿಯಿಂದ ಏಳು ಮೈಲುಗಳ ದೂರದಲ್ಲಿರುವ ಪ್ರದೇಶಕ್ಕೆ ಬರುವನು. ತನ್ನ ಸಣ್ಣ ಪರಿವಾರದೊಂದಿಗೆ ಬಂದ ಈತನ ಹಾಗೂ ಈತನ ಸಂಗಡಿಗರ ಖರ್ಚಿಗೋಸ್ಕರ ಒಕ್ಕಲು ಕಣದಿಂದ ಪತ್ತಾಯಕ್ಕೆ ಹಾಕಿ ಕೊನೆಯಲ್ಲಿ ಉಳಿದಿದ್ದ ಭತ್ತವನ್ನು ತಾವಾಗಿಯೇ ಕೊಡುವುದಕ್ಕೆ ಪ್ರಾರಂಭಿಸಿದರು. ಇದನ್ನು "ಧೂಳಿ ಭತ್ತತೆರಿಗೆ" ಎಂದು ಕರೆಯಲಾಯಿತು. ಈ ಜಂಗಮನ ಹೆಸರು ವೀರರಾಜ. ತನ್ನ ಪ್ರಭಾವವು ಹೆಚ್ಚಿದ ಕೂಡಲೆ ವೀರರಾಜನು ಜನರು ತಮ್ಮಿಚ್ಛೆಯ ಮೇರೆಗೆ ಕೊಡುತ್ತಿದ್ದ ಧೂಳಿ ಭತ್ತದ ಬದಲಾಗಿ ಪ್ರತಿ ಮನೆಗೂ ವರ್ಷ ವಂದಕ್ಕೆ ಒಂದೂವರೆ ಭಟ್ಟಿ ಅಕ್ಕಿ ಮತ್ತು ಒಂಭತ್ತು ಆಣೆ ಎಂಟು ಪೈಸೆ ಹಣವನ್ನು "ಕಂದಾಯವಾಗಿ" ನಿಗದಿ ಮಾಡಿದನು. ಆ ಹೊತ್ತಿಗೆ ಇವನು ಕೊಡಗಿನ ಪಾಡಿನಾಲ್ಕು ನಾಡಿನಲ್ಲಿ ಪ್ರಭಾವಶಾಲಿಯಾಗಿದ್ದ ಮಲೆಯಾಳಂ ಪ್ರದೇಶದ ಜನರನ್ನು, ತಾವುನಾಡು, ಚೆಂಗುನಾಡು ಮತ್ತು ಸೂರ್ಲಬ್ಬಿ ಮುತ್ತ ನಾಡುವಿನಲ್ಲಿ ಪ್ರಭಾವಶಾಲಿಯಾಗಿದ್ದ ತುಳು ಗೌಡ ಹಾಗೂ ಬಂಟರನ್ನು ತನ್ನೆಡೆಗೆ ಸೆಳೆದುಕೊಂಡನು. ಇನ್ನುಳಿದಂತಿರುವವರು ಕೊಡವರು. ರಿಕ್ತರನು ಇವರನ್ನು "ಮಿಶ್ರ ಜನಾಂಗೀಯ" (ಮಿಕ್ಸೆಡ್‌ರೇಸ್) ಪಂಗಡದವರೆಂದು ಕರೆದಿದ್ದಾನೆ. ಎತ್ತರ ಮತ್ತು ಬಣ್ಣಗಳಲ್ಲಿ ಬಹಳಷ್ಟು ವ್ಯತ್ಯಾಸಗಳನ್ನು ಹೊಂದಿರುವ ಈ ಪಂಗಡವು ಕಾಕಸೀಯನ್ ಮತ್ತು ಮಂಗೋಲಿಯನ್ ಗುಣಲಕ್ಷಣಗಳನ್ನೂ ಹೊಂದಿವೆಯೆಂದು ಬರೆದಿದ್ದಾನೆ. ವಿವಿಧ ಹಿನ್ನೆಲೆಯ ಈ ಬುಡಕಟ್ಟು ಜನರ ಒಕ್ಕದ (ಅವಿಭಕ್ತ ಕುಟುಂಬ) ಹೆಸರುಗಳು ಮೈಸೂರು, ತಮಿಳು, ಮಲೆಯಾಳಂ ಹಾಗೂ ತುಳು ಮೂಲಗಳನ್ನು ಹೊಂದಿವೆಯೆಂದು ತಿಳಿದುಬರುತ್ತದೆ. ಬಹಳ ಜನರ "ಅಪರಿಚಿತರು" ಕೊಡವರಾಗಿ ಪರಿವರ್ತಿತರಾಗುತ್ತಿದ್ದರೆಂಬ ಅಂಶವನ್ನು ರಿಕ್ತರ್ ಬರೆಯುತ್ತಾನೆ. ಇವರನ್ನು ಕೂಡ ವೀರರಾಜ ಒಲಿಸಿಕೊಂಡು ರಾಜ್ಯಾಧಿಕಾರಕ್ಕೆ ಭದ್ರ ಬುನಾದಿಯನ್ನು ಹಾಕಿದನು.

ಇವನು ನೆಲೆಸಿದ ಪ್ರದೇಶವನ್ನು ಹಾಲೇರಿ ಎಂದು ಕರೆಯುತ್ತಾರೆ. ಹಾಲೇರಿಯು ಇವನ ರಾಜಧಾನಿಯಾದ್ದರಿಂದ ಇವನ ವಂಶದ ಅರಸರಿಗೆ ಹಾಲೇರಿ ಅರಸರು ಎಂದು ಕರೆಯುತ್ತಾರೆ. ಈ ಅರಸರು ತಮ್ಮ ಕೆಲವು ಶಾಸನಗಳಲ್ಲಿ ಹಾಲೇರಿಯನ್ನು ಸಂಸ್ಕೃತದಲ್ಲಿ "ಕ್ಷೀರಸಾಗರ" ಎಂದು ಕರೆದಿದ್ದಾರೆ ಎನ್ನುವ ಅಂಶವು ಲೇವಿಸ್ ರೈಸ್ ಅವರ ***"ಮೈಸೂರು ಆಂಡ್ ಕೂರ್ಗ್‌ಫ್ರಂ ದಿ ಇನ್‌ಸ್ಕ್ರಿಪ್ಷನ್ಸ್‌ದಲ್ಲಿ"*** ಉಲ್ಲೇಖವಾಗಿದೆ. ವೀರರಾಜನು ಹಾಲೇರಿಯಲ್ಲಿದ್ದ ತನ್ನ ಮನೆಯಲ್ಲಿ ಪಹರೆ ಕಾಯುವುದಕ್ಕೆ ಹದಿನೈದು ದಿನಗಳಿಗೊಂದು ತಂಡದಂತೆ ತಿಂಗಳಿಗೆ ಪಹರೆ ಕಾಯುವುದಕ್ಕೆ ಎರಡು ತಂಡಗಳ ಜನರನ್ನು ಏರ್ಪಡಿಸಿಕೊಂಡನು. "ಮೈ ತುಂಬ ಬೂದಿ ಬಡಿದುಕೊಂಡು ಸನ್ಯಾಸಿಯಂತೆ ನಟಿಸಿಕೊಂಡಿದ್ದ" ಇವನನ್ನು "ಬೂದಿಚಾವಡಿಸ್ವಾಮಿ" ಎಂದು ಕರೆಯುತ್ತಿದ್ದರೆಂದು ನಡಿಕೇರಿಯಂಡ ಚಿಣ್ಣಪ್ಪನವರು ೧೯೨೪ರಲ್ಲಿ ತಮ್ಮ *ಪಟ್ಟೋಲೆ-ಪಳಮೆ* ಯಲ್ಲಿ ಬರೆದಿದ್ದಾರೆ. ಬೂದಿಚಾವಡಿಸ್ವಾಮಿ ವಾಸಿಸುತ್ತಿದ್ದ ಸ್ಥಳಕ್ಕೆ "ಚಾವಡಿ" ಎಂಬ ಹೆಸರಿದೆ. ಅಲ್ಲಿ ಪಹರೆ ಮಾಡುತ್ತಿದ್ದವರನ್ನು "ಚಾವಡಿಕಾರರು" ಎಂದು ಕರೆಯುತ್ತಾರೆ. ಈ ಚಾವಡಿಕಾರರು ೧೮ನೆಯ ಶತಮಾನದ ಕೊನೆಯ ಭಾಗದಲ್ಲಿ "ಜಮ್ಮ" ಎನ್ನುವ ಭೂ ಹಿಡುವಳಿಯನ್ನು ಹೊಂದಿದ್ದರು. ೧೮೧೧ ರಲ್ಲಿ ಲಿಂಗರಾಜನು ಹೊರಡಿಸಿದ ಹುಕುಂನಾಮಗಳ ಪ್ರಕಾರ ಜಮ್ಮ ಹಿಡುವಳಿದಾರರು ಮಾಡುತ್ತಿದ್ದ ಇಂಥ ಸೇವೆಯನ್ನು "ಅರಮನೆ ಚಾಕ್ರಿ" ಎಂದು ಕರೆಯಲಾಗುತ್ತಿತ್ತು. ಈ ಅರಮನೆ ಚಾಕ್ರಿ ಮಾಡುತ್ತಿದ್ದವರಿಗೆ ನೀಡಿದ ಜಮ್ಮ ಸನ್ನದು ನಿರೂಪಗಳು (ಜಮ್ಮ ಭೂ ಹಿಡುವಳಿಯನ್ನು ನ್ಯಾಯ ಸಮ್ಮತಗೊಳಿಸುವ ರಾಜ ಮುದ್ರೆಯಿರುವ ದಾಖಲೆ) ಇದನ್ನು "ಹಿಟ್ಟಿ ಬಿಟ್ಟಿ ಚಾಕ್ರಿ" ಎಂದು ವಿವರಿಸುತ್ತವೆ. ನಂತರದ ದಿನಗಳಲ್ಲಿ ಪಹರೆಯ ಸೈನಿಕರನ್ನೆಲ್ಲಾ ಚಾವಡಿಕಾರರೆಂದೇ ಕರೆಯಲಾಗುತಿತ್ತು. ಇವರ ಸಮವಸ್ತ್ರವು ಮೊಣಕಾಲಿನವರೆಗಿನ

ಕರಿಕುಪ್ಪಸ ಮತ್ತು ಬೇಸಿಗೆಯಲ್ಲಿ ಖಾಕಿ ಬಣ್ಣದ ಕುಪ್ಪಸ, ಕರಿದಟ್ಟಿ ಮತ್ತು ತಲೆಗೆ ಕರಿಬಣ್ಣದ ರುಮಾಲನ್ನು ಒಳಗೊಂಡಿತ್ತು ಎಂದು ಡಿ.ಎನ್. ಕೃಷ್ಣಯ್ಯನವರು ವಿವರಿಸಿದ್ದಾರೆ. ಒಂದು ರಾಜ್ಯ ವ್ಯವಸ್ಥೆಯನ್ನು ಹುಟ್ಟು ಹಾಕುವುದರ ಮೂಲಕ ಹಾಲೇರಿ ಅರಸನು ತಾನು ಕೊಡಗಿನ ರಾಜನೆಂದು ಘೋಷಿಸಿಕೊಂಡನು. ತಾವು ನಾಡಿನ ಮಲೆಯಾಳಿ ಮೂಲದ ಕರ್ಣಂಬಾಹುವು ಹಾಗೂ ಇತರ ಸಣ್ಣಪುಟ್ಟ ನಾಯಕರು ಹಾಲೇರಿ ಅರಸನಿಗೆ ತಮ್ಮ ತಮ್ಮ ನಾಡುಗಳಿಂದ ದೊರೆಯುವ ಕಂದಾಯದಲ್ಲಿ ನಾಲ್ಕರಲ್ಲಿ ಒಂದಂಶ ಕೊಡುವ ಮತ್ತು ನಾಲ್ಕರಲ್ಲಿ ಮೂರಂಶ ತಾವು ಇಟ್ಟುಕೊಳ್ಳುವ ಶರತ್ತಿನ ಮೇಲೆ ಶರಣಾಗತರಾದರು. ವೀರರಾಜನ ಪ್ರಾಬಲ್ಯವು ಹೆಚ್ಚಾಗುತ್ತಾ ಬಂದ ಹಾಗೆ ಈ ನಾಯಕರುಗಳ ಅಧಿಕಾರವು ಅಳಿದುಹೋಯಿತು. ಹೀಗೆ ಕ್ರಿ.ಶ. ಸುಮಾರು ೧೬೦೦ ಸಮಯಕ್ಕೆ ವಿವಿಧೆಡೆಗಳಲ್ಲಿ ಹರಡಿದ್ದ ಭೂ ಭಾಗಗಳನ್ನು ಒಂದು ಆಡಳಿತದ ಕೆಳಗೆ ತರಲಾಯಿತು. ಇದನ್ನು ಕೊಡಗು ಸೀಮೆಯೆಂದು ಕರೆಯಲಾಯಿತು. ೧೮೩೪ರವರೆಗೆ ಈ ಇಡೀ ಪ್ರದೇಶದ ಅಧಿಪತ್ಯವನ್ನು ಹಾಲೇರಿ ಅರಸರು ವಹಿಸಿಕೊಂಡರು.

ಹಾಲೇರಿ ಅರಸುಮನೆತನದ ಹದಿಮೂರು ಮಂದಿ ಕೊಡಗನ್ನು ಆಳಿದರು ಮತ್ತು ಅವರಲ್ಲಿ ಚಿಕ್ಕಪ್ರಾಯದ ಒಬ್ಬ ಮಹಿಳೆಯೂ ಇದ್ದಳು ಎಂದು ಡಿ.ಎನ್. ಕೃಷ್ಣಯ್ಯನವರು ಬರೆಯುತ್ತಾರೆ. ಆದರೆ, ೧೭೭೪-೭೫ರಲ್ಲಿ ಕೊಡಗನ್ನು ಒಂದು ವರ್ಷ ಆಳಿದ ಅಪ್ಪಾಜಿರಾಜನ ಆಳ್ವಿಕೆಯನ್ನು ಗಣನೆಗೆ ತೆಗೆದುಕೊಂಡರೆ ಕೊಡಗನ್ನು ಆಳಿದವರ ಸಂಖ್ಯೆ ಹದಿನಾಲ್ಕಾಗುತ್ತದೆ. ಹಾಲೇರಿ ಅರಸರ ವಂಶಾವಳಿ ಪಟ್ಟಿಯ ವಿವರಗಳು ಹೀಗಿವೆ:

ಹಾಲೇರಿ ರಾಜವಂಶ



ಪ್ರಸ್ತುತ ಪ್ರಬಂದವು ಕೊಡಗು ರಾಜ್ಯದ ಉಗಮ ಹೇಗಾಯಿತು ಮತ್ತು ಅದು ಯಾವ್ಯಾವ ಶಕ್ತಿಗಳಿಂದ ಬಲಿಷ್ಠವಾಯಿತೆಂಬುದನ್ನು ಚರ್ಚಿಸುತ್ತದೆ. ಹಾಗೆಯೇ ಕೊಡಗು ಭೌಗೋಳಿಕವಾಗಿ ತನ್ನ ನಕಾಶೆಯನ್ನು ಏಳುಸಾವಿರ ಸೀಮೆಯಿಂದ (ಈಗಿನ ಸೋಮವಾರಪೇಟೆ ತಾಲೂಕು) ಅಮರ ಸುಳ್ಯದವರೆಗೆ-ಪಂಚೆ-ಬೆಲ್ಲಾರೆಯವರೆಗೆ ವಿಸ್ತರಿಸಿದ ಬಗೆಗಳನ್ನು ವಿವರಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ೧೭೭೫ ರಿಂದ ೧೭೭೯ ರವರೆಗೆ ವೈನಾಡಿನ ಕಲ್ಪಾತಿ ಪ್ರದೇಶಗಳೂ ಕೊಡಗಿನ ಕೆಳಗೇ ಇತ್ತೆಂಬ ವಿವರಗಳನ್ನು ಇಲ್ಲಿ

ಚರ್ಚಿಸಲಾಗುವುದು. ಇಕ್ಕೇರಿಯ ರಾಜಕೀಯದಿಂದ ದೂರಬಂದು ಹಾಲೇರಿಯಲ್ಲಿ ಜಂಗಮ ಅರಸನು ರಾಜ್ಯವನ್ನು ಸ್ಥಾಪಿಸಿ ಅಲ್ಲಿಂದ ದೂರ ಬಂದರೂ ಅವನನ್ನು ಇಕ್ಕೇರಿಯ ರಾಜಕೀಯವು ಬಿಡಲಿಲ್ಲ. ಕೊಡು-ತೆಗೆದುಕೊಳ್ಳುವ ಸಂಬಂಧ ಮುಂದುವರಿಯಿತು. ಡಿ.ಎನ್. ಕೃಷ್ಣಯ್ಯನವರು ಇಕ್ಕೇರಿ ನಾಯಕರ ಚರಿತ್ರೆಯನ್ನು ಉಲ್ಲೇಖಿಸುತ್ತಾ ಅದರಲ್ಲಿ ಕೊಡಗಿನ ಅರಸರಿಗೂ ಹಾಗೂ ಕ್ರಿ.ಶ. ೧೫೮೨ರಿಂದ ೧೬೨೯ ರವರೆಗೆ ಆಳಿದ ಇಕ್ಕೇರಿಯ ಆರನೆಯ ನಾಯಕನಾದ ಮೊದಲನೆಯ ವೆಂಕಟಪ್ಪ ನಾಯಕನಿಗೂ ಇರುವ ಸಂಬಂಧವನ್ನು ವಿವರಿಸಿದ್ದಾರೆ. ಈಗಿನ ದಕ್ಷಿಣಕನ್ನಡ ಜಿಲ್ಲೆಯ ವಿವಿಧ ಭಾಗಗಳನ್ನು ವಶಪಡಿಸಿಕೊಂಡು ದೇವರ ದರ್ಶನಕ್ಕೆ ಸುಬ್ರಹ್ಮಣ್ಯ ಕ್ಷೇತ್ರಕ್ಕೆ ನಾಯಕ ಬಂದ ಸಂದರ್ಭದಲ್ಲಿ ಕೊಡಗನ್ನು ವಶಪಡಿಸಿಕೊಳ್ಳಲು ತನ್ನ ಸೈನ್ಯವನ್ನು ಕಳಿಸಿ ಕೊಡುತ್ತಾನೆ. ಆಗ ಕೊಡಗನ್ನು ಆಳುತ್ತಿದ್ದ ಅಪ್ಪಾಜಿರಾಜನು ವೆಂಕಟಪ್ಪನಾಯಕನಿಗೆ ಕಪ್ಪಕಾಣಿಕೆಗಳನ್ನು ಕೊಟ್ಟು ಅವನ ಅಧಿಪತ್ಯವನ್ನು ಒಪ್ಪಿಕೊಂಡನು. ಇದಾದ ನಂತರ ಕ್ರಿ.ಶ. ೧೬೨೯ರಿಂದ ೧೬೪೫ರವರೆಗೆ ಇಕ್ಕೇರಿಯ ವೀರಭದ್ರ ನಾಯಕನ ಸೇನಾಪತಿ ಶಿವಪ್ಪನಾಯಕನು ಕಾರ್ಕಳದ ಭೈರರಸರನ್ನು ಸೋಲಿಸಿ, ನೀಲೇಶ್ವರ ನದಿಯನ್ನು ದಾಟಿ ಮಲೆಯಾಳಿ ಅರಸನ ವಿರುದ್ಧ ಯುದ್ಧ ಸಾರಿದನು. ಈ ಸಂದರ್ಭದಲ್ಲಿ ಕೊಡಗಿನ ಅರಸ ಮುದ್ದುರಾಜನು ಮಲೆಯಾಳಿ ಅರಸನಿಗೆ ಸಹಾಯ ಮಾಡುವನು. ನಾಯಕನು ಇವರಿಬ್ಬರನ್ನು ಸೋಲಿಸುವನು. ನಂತರ ಶಿವಪ್ಪನಾಯಕನು ಕೊಡಗನ್ನು ಸುಲಿಗೆ ಮಾಡಿ ರಾಜನನ್ನು ಬಂಧಿಸುವನು. ಆಗ ರಾಜನ ಪತ್ನಿಯು ಅರ್ಕಲಗೂಡಿನಲ್ಲಿ ಆಳುತ್ತಿದ್ದ ಬೇಲೂರಿನ ಕೃಷ್ಣಪ್ಪನಾಯಕನ ಸಹಾಯದಿಂದ ಶಿವಪ್ಪನಾಯಕನಲ್ಲಿ ಬೇಡಿಕೊಂಡು ತನ್ನ ಪತಿಯನ್ನು ಉಳಿಸಿಕೊಂಡಳು. ಅವನು ಇಕ್ಕೇರಿಗೆ ಕಪ್ಪ ಕಾಣಿಕೆ ಕೊಡುವುದಾಗಿ ಒಪ್ಪಿಕೊಂಡನು.

೧೬೪೫ರಲ್ಲಿ ಶಿವಪ್ಪನಾಯಕನು ಇಕ್ಕೇರಿಯ ದೊರೆಯಾದ ಸಂದರ್ಭದಲ್ಲಿ ಮುದ್ದರಾಜನು ಅವನನ್ನು ಸಂದರ್ಶಿಸಲು ಅವನ ರಾಜಧಾನಿ ಬಿದನೂರಿಗೆ ಹೋಗಿದ್ದನು. ಆ ಸಂದರ್ಭದಲ್ಲಾದ ಪ್ರತೀತಿಯನ್ನು ಡಿ.ಎನ್. ಕೃಷ್ಣಯ್ಯನವರು ಬರೆಯುತ್ತಾರೆ. ಶಿವಪ್ಪನಾಯಕನು ಮುದ್ದುರಾಜನಿಗೆ ಏನಾದರೂ ಅನುಗ್ರಹ, ಸಹಾಯ ಕೇಳಬಹುದೆಂದಾಗ ಮುದ್ದು ರಾಜನು ಎಲ್ಲವೂ ನನ್ನ ಬಳಿ ಇದೆ ಎಂದನು. ಆದರೂ ನಾಯಕನ ಒತ್ತಾಯದಿಂದ ತನಗೆ ಪುತ್ರನಿಲ್ಲದಿರುವ ಕೊರತೆಯನ್ನು ತಿಳಿಸುವನು. ಆಗ ಶಿವಪ್ಪನಾಯಕನು ತನ್ನ ವಂಶದ ಕುಲದೈವವಾದ ಕೆಳದಿಯ ರಾಮೇಶ್ವರನನ್ನು ಧ್ಯಾನಿಸಿ ಒಂದು ಚಿನ್ನದ ಕಾಲು ದೀಪವನ್ನು ಮಾಡಿಸಿದನು. ಆ ಮೇಲೆ ಆ ದೀಪಕ್ಕೆ ಹಸುವಿನ ತುಪ್ಪವನ್ನು ಹಾಕಿ ಬತ್ತಿಯನಿಟ್ಟು ಅದನ್ನು ಉರಿಸಿ ಆ ದೀಪವನ್ನು ಒಂದು ವರ್ಷ ಮತ್ತು ಒಂದು ದಿವಸ ಉರಿಕೆಡದಂತೆ ನೋಡಿಕೊಂಡರೆ ದೇವರು ಪುತ್ರನನ್ನು ಅನುಗ್ರಹಿಸುವನೆಂದು ತಿಳಿಸುವನು. ಮುದ್ದು ರಾಜನು ಹಾಗೆಯೇ ಮಾಡಿದನು ಹಾಗೂಪುತ್ರನನ್ನು ಪಡೆದನು ಶಿವಪ್ಪನಾಯಕನು ತನ್ನ ಪ್ರಾರ್ಥನೆಯಂತೆ ಮುದ್ದು ರಾಜನಿಗೆ ಒಬ್ಬ ಪುತ್ರನ ಜನನವಾದುದನ್ನು ತಿಳಿದು ಬಹಳ ಸಂತೋಷಪಟ್ಟು ಆ ಮಗುವಿಗೆ (ದೊಡ್ಡವೀರಪ್ಪ) ಹಾಲು-ಬೆಣ್ಣೆ ಒದಗಿಸುವದಕ್ಕೋಸ್ಕರವೆಂದು ತನ್ನ ಸ್ವಾಧೀನದಲ್ಲಿದ್ದ ದಕ್ಷಿಣಕನ್ನಡ ಜಿಲ್ಲೆಯ ಪಶ್ಚಿಮ ಗಟ್ಟಗಳಿಗೆ ಮುಟ್ಟಿಕೊಂಡಿದ್ದ ಕೆಲವು ಗ್ರಾಮಗಳನ್ನು ಬಹುಮಾನವಾಗಿ ಕೊಟ್ಟನು. ಹಾಲು ಅಥವಾ ಅಮೃತಕ್ಕೆಂದು ಕೊಟ್ಟ ಆ ಗ್ರಾಮಗಳ ಗುಂಪಾದ ಮಾಗಣೆಗೆ ಅಮೃತ ಮಾಗಣೆಯೆಂದು ಹೆಸರಾಯಿತು. ಈ ಅಮೃತ ಮಾಗಣೆಯೇ ಜನರ ಬಾಯಲ್ಲಿ ಅಮರ ಮಾಗಣೆಯಾಯಿತು ಎಂದು ಡಿ.ಎನ್. ಕೃಷ್ಣಯ್ಯ ತಿಳಿಸುತ್ತಾರೆ.

ಮುದ್ದುರಾಜನ ಕಾಲಾವಧಿಯಲ್ಲಿ (೧೬೩೩-೧೬೮೭) ರಾಜಧಾನಿಯು ಹಾಲೇರಿಯಿಂದ ಕೊಡಗಿನ ಮಧ್ಯಭಾಗದಲ್ಲಿರುವ ಸ್ಥಳಕ್ಕೆ ಬದಲಾವಣೆಯಾಯಿತು. ಹಾಲೇರಿಯನ್ನು ಶತ್ರುಗಳು ಸುಲಭವಾಗಿ ಪ್ರವೇಶಿಸಲು ಸಾಧ್ಯವಿರುವುದರಿಂದ ರಾಜನಿಗೊಂದು ಆಯಕಟ್ಟಿನ ಪ್ರದೇಶದ ಅಗತ್ಯ ಬಹಳಷ್ಟಿತ್ತು. ಈ ಸಂದರ್ಭದಲ್ಲಿ ಬಹುತೇಕ ಎಲ್ಲಾ ರಾಜವಂಶದ ಮೂಲಕ್ಕೆ

ಸಂಬಂಧಿಸಿದಂತಿರುವ ಸಾಮಾನ್ಯ ಕಥೆ ಪ್ರತೀತಿ ಇಲ್ಲಿ ಕೂಡ ನಾವು ನೋಡಬಹುದು. ಮುದ್ದುರಾಜ ಈಗ ಮಡಿಕೇರಿ ಇರುವ ಜಾಗದಲ್ಲಿ ದಟ್ಟ ಅರಣ್ಯಗಳ ಮಧ್ಯೆ ತನ್ನ ಬೇಟೆ ನಾಯಿಗಳನ್ನು ಕಾಡು ಪ್ರಾಣಿಗಳ ಮೇಲೆ ಛೂ ಬಿಟ್ಟನು. ಆದರೆ ಒಂದು "ಗಂಡು" ಮೊಲವು ಬೇಟೆ ನಾಯಿಯನ್ನು ಬೆದರಿಸಿಕೊಂಡು ಬಂದಿತು. ಇದನ್ನು ಆಶ್ಚರ್ಯಚಕಿತನಾಗಿ ನೋಡಿದ ಮುದ್ದುರಾಜನು ಇದು "ಗಂಡು" ನೆಲವೆಂದು ಇಲ್ಲಿಯೇ ಕೋಟೆ ಮತ್ತು ಅರಮನೆಯನ್ನು ಕಟ್ಟಿಸುವನು. ಗುಡ್ಡದ ಮೇಲ್ಭಾಗವನ್ನು ಸಮತಟ್ಟು ಮಾಡಿ ಕಲಿಸಂದ ೪೭೮೫ನೇ ದುರ್ಮತಿ ಸಂವತ್ಸರದಲ್ಲಿ ಎಂದರೆ ಕ್ರಿ.ಶ. ೧೬೮೧ರಲ್ಲಿ ಮಣ್ಣಿನಿಂದ ಕೋಟೆಯನ್ನು ಕಟ್ಟಿಸಿ ಅದರ ಸುತ್ತಲೂ ಕಂದಕ ತೆಗೆಸಿ ಒಳಗೆ ಅರಮನೆಯನ್ನು ಕಟ್ಟಿಸಿದನು. ಈ ಪ್ರದೇಶವನ್ನು ಜನರು ಮುದ್ದುರಾಜಕೇರಿ ಎಂದು ಕರೆದರು. ನಂತರ ಅದು ಮಡಿಕೇರಿಯಾಯಿತು. ನಂತರ ಅವನ ಚಾವಡಿಕಾರರು, ಪರಿವಾರದವರು, ಅರಮನೆ ಉದ್ಯೋಗಸ್ಥರು, ವ್ಯಾಪಾರಸ್ಥರು ಮಡಿಕೇರಿಗೆ ಬಂದು ನೆಲೆ ನಿಂತರು. ಕೋಟೆಯ ಮುಂಭಾಗದ ಕಣಿವೆಯಲ್ಲೂ, ದಕ್ಷಿಣ ಭಾಗದ ಕಣಿವೆಯಲ್ಲೂ ಮನೆಗಳನ್ನು ಕಟ್ಟಿ ಜನರು ನೆಲಸಿದರು. ಹೀಗೆ ಮಡಿಕೇರಿಯ ಸ್ಥಾಪನೆ ೧೬೮೧ರಲ್ಲಿ ಆಯಿತು. ಆದರೂ ಈ ಕಾಲದಲ್ಲಿ ಕೊಡಗಿನ ದಕ್ಷಿಣ ಭಾಗದಲ್ಲಿರುವ ಕಿಗ್ಗಟ್ಟು ನಾಡಿನ ಅಂಜಿಗೇರಿ ನಾಡಿನಲ್ಲಿ ಕಟ್ಟೇಮನೆ ಚಿಟ್ಟಪ್ಪನಾಯಕ, ಹತ್ತುಗಟ್ಟು ನಾಡಿನಲ್ಲಿ ಮಾಚಂಗಳ ನಾಯಕ, ಮತ್ತೂರಿನಲ್ಲಿ ಮುಕ್ಕಾಟಿ ನಾಯಕರು ಅಧಿಕಾರ ನಡೆಸಿಕೊಂಡಿದ್ದರು ಮತ್ತು ಪರಸ್ಪರ ಕಚ್ಚಾಡಿ ಕೊಂಡಿದ್ದರು. "ಕೊಡಗು" ಎನ್ನುವ ರಾಜ್ಯದ ಕಲ್ಪನೆಯಿಲ್ಲದ ಕಾಲವದು.ಆದರೆ ಅಂತಹ ಒಂದು ರಾಜ್ಯವನ್ನು ಹಂತ ಹಂತವಾಗಿ ಕಟ್ಟುತ್ತಿದ್ದ ಹಾಲೇರಿ ಅರಸರು ನಂತರದ ದಿನಗಳಲ್ಲಿ ಹತ್ತಿಪ್ಪತ್ತು ಕಿ.ಮೀ. ಗೊಬ್ಬ ಇದ್ದ ಪಾಳೇಗಾರರನ್ನು ಇಲ್ಲದಂತೆ ಮಾಡಿ ಕೇಂದ್ರಿಕೃತ ವ್ಯವಸ್ಥೆಗೊಂದು ಅಡಿಪಾಯ ಹಾಕಿದರು.

ಪ್ರಬಂಧದ ಈ ಭಾಗವು ಹಾಲೇರಿ ವಂಶದ ಕೊಡಗಿನ ಅರಸರು ತಮ್ಮ ನೆರೆಯ ರಾಜ್ಯಗಳೊಂದಿಗೆ ಹೊಂದಿದ್ದ ರಾಜತಾಂತ್ರಿಕ ಸಂಬಂಧಗಳನ್ನು ವಿವರಿಸುತ್ತದೆ. ಕೊಡಗಿನ ಅರಸು ಗಾದಿಗೆ ಹಾಲೇರಿ ವಂಶದ ಅನೇಕ ಅರಸರ ಕಣ್ಣೀರುತ್ತದೆ. ಎಲ್ಲಾ ರಾಜ್ಯಗಳಲ್ಲೂ ಅಧಿಕಾರಕ್ಕಾಗಿ ನಡೆದ ಹೋರಾಟ ಇಲ್ಲಿ ಕೂಡಾ ನಡೆಯುತ್ತದೆ. ಈ ಸಂದರ್ಭಗಳಲ್ಲಿ ಬ್ರಿಟಿಶರನ್ನೊಳಗೊಂಡಂತೆ ಹೈದರ್-ಟಿಪ್ಪು ಮೊದಲಾದ ಅರಸರನ್ನು ಉಪಯೋಗಿಸಿ ಕೊಡಗಿನ ತಮ್ಮ ಶತ್ರುಗಳನ್ನು ನಿಗ್ರಹಿಸಲು ಪ್ರಯತ್ನ ಪಟ್ಟಿರುವುದನ್ನು ನಾವು ನೋಡಬಹುದು "ಭಾರತೀಯ" ಎನ್ನುವ ಅಥವಾ "ಕರ್ನಾಟಕ" ಅಥವಾ ಇನ್ಯಾವುದೇ "ರಾಷ್ಟ್ರೀಯತೆ" ಯ ಪ್ರಶ್ನೆಗಳು ಉದ್ಭವಿಸದ ಸುಮಾರು ೩೦೦ ವರ್ಷಗಳ ಹಿಂದೆ ಈ ರೀತಿಯ ಸಂಕೀರ್ಣ ಹೋರಾಟಗಳ ಮಾದರಿಗಳನ್ನು ನಾವಿಲ್ಲಿ ಅವಲೋಕಿಸಬಹುದು. ಈ ಎಲ್ಲದರ ಮಧ್ಯೆ ರಾಜ್ಯಾಧಿಕಾರವು ಕೊಡಗಿನಲ್ಲಿ ಒಂದು ವ್ಯವಸ್ಥೆಯಾಗಿ ಬೆಳೆದುದನ್ನು ಈ ಭಾಗದಲ್ಲಿ ಚರ್ಚಿಸಲು ಪ್ರಯತ್ನಿಸಲಾಗಿದೆ. ಇದನ್ನೊಂದು ವ್ಯವಸ್ಥೆಯಾಗಿ ರೂಪಿಸಲು ನೆರೆಯ ಬಲಿಷ್ಠ ರಾಜ್ಯಗಳೊಂದಿಗಿನ ಸಂಕೀರ್ಣ ಸಂಬಂಧಗಳೇ ಪ್ರಮುಖ ಕಾರಣಗಳಾಗಿದ್ದುದನ್ನು ನಾವು ಅವಲೋಕಿಸಬಹುದು. ಹೀಗಾಗಿ ಕೊಡಗಿನ ಲಿಂಗಾಯಿತ ಜಂಗಮ ಅರಸರು ಮೈಸೂರು ಅರಸರೊಂದಿಗೆ (೧೬೭೨ ರಿಂದ ೧೭೦೪ರವರೆಗೆ ಆಳಿದ ಚಿಕ್ಕ ದೇವರಾಜ ಅರಸನಿಂದ ೧೮೪೯ ರಲ್ಲಿ ಬ್ರಿಟಿಶರಿಂದ ಅರಸರೊಂದಿಗೆ ಹಾಗು ಬ್ರಿಟಿಷ್‌ರೊಂದಿಗೆ ಹೊಂದಿದ್ದ ರಾಜಕೀಯದ ಹಾವು ಏಣಿ ಆಟವು ಇಲ್ಲಿ ಮುಖ್ಯವಾಗುತ್ತದೆ. ಪ್ರಸ್ತುತ ಪ್ರಬಂಧದ ವ್ಯಾಪ್ತಿಯಲ್ಲಿ ಬರುವ ಕೆಲವೊಂದು ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ವಸಾಹತು ಪೂರ್ವ ಕಾಲದ (ಮಧ್ಯಯುಗೀನೋತ್ತರ) ರಾಜಕೀಯ ಸಂಬಂಧಗಳನ್ನು ವಿವರಿಸಲು ಇಲ್ಲಿ ಯತ್ನಿಸಿದ್ದೇನೆ.

ಹಾಲೇರಿಯಿಂದ ಮಡಿಕೇರಿಗೆ ರಾಜಧಾನಿಯನ್ನು ಬದಲಾಯಿಸಿದ ಮುದ್ದುರಾಜನು ತನ್ನ ಮೊದಲನೆಯ ಮಗ ದೊಡ್ಡ ವೀರಪ್ಪನಿಗೆ ಯುವರಾಜ ಪಟ್ಟ ಕಟ್ಟಿದನು. ತನ್ನ ಎರಡನೆಯ ಮಗ ಅಪ್ಪಾಜಿರಾಜನನ್ನು ಹಾಲೇರಿ ಅರಮನೆಯಲ್ಲಿರಿಸಿ ಆ ನಾಡನ್ನು ಅವನಿಗೆ ಜಹಗೀರು ನೀಡಿದನು. ಹಾಗೆಯೇ ಮೂರನೆಯ ಮಗ ನಂದರಾಜನಿಗೆ ಹೊರ ಮಲೆನಾಡಿನಲ್ಲಿ ಅರಮನೆ

ಕಟ್ಟಿಸಿ ಆ ನಾಡನ್ನು ಅವನಿಗೆ ಜಹಗೀರು ನೀಡಿದನು. ಹೀಗೆ ಹಾಲೇರಿ ಅರಸರು ಮಡಿಕೇರಿ ಮತ್ತು ಹೊರಮಲೆಗಳಲ್ಲೂ ತಮ್ಮ ಅಧಿಕಾರವನ್ನು ವಿಸ್ತರಿಸಿದರು. ದೊಡ್ಡ ವೀರಪ್ಪನ ಕಾಲದಲ್ಲಿಯೇ ಹಾಲೇರಿ ಮೂಲದ ಕೊಡಗಿನ ರಾಜ್ಯದ ಬಾಹ್ಯ ಹಾಗೂ ಆಂತರಿಕ ಶತ್ರುಗಳನ್ನು ಹದ್ದು ಬಸ್ತಿಗೆ ತರಲಾಯಿತು.

ಕ್ರಿ.ಶ. ೧೬೭೨ರಿಂದ ೧೭೦೪ ರವರೆಗೆ ಮೈಸೂರಿನ ಅರಸನಾಗಿದ್ದ ಚಿಕ್ಕ ದೇವರಾಜನಿಗೂ ಹಾಗೂ ಕೊಡಗಿನ ದೊಡ್ಡ ವೀರಪ್ಪನಿಗೂ ನಡೆದ “ಪಾಲುಪರೆ ಯುದ್ದ” ವು ಕೊಡಗಿನ ರಾಜಕೀಯ ಚರಿತ್ರೆಯಲ್ಲಿ ನಿರ್ಣಾಯಕವಾದ ಅಂಶವಾಗಿದೆ. ಚಿಕ್ಕದೇವರಾಜನು ಕೊಯಂಬತ್ತೂರು ಹಾಗೂ ಮೈಸೂರಿನ ಉತ್ತರದ ಸೀಮೆಗಳನ್ನು ಗೆದ್ದು ಕೊಡಗನ್ನು ವಶಪಡಿಸಿಕೊಳ್ಳಲು ಕೊಡಗಿನ ಆಗ್ನೇಯ ದಿಕ್ಕಿನಲ್ಲಿರುವ ಬಾಳೆಲೆಯ ಬಳಿಯಿರುವ ಪಾಲುಪರೆಯ ಮೈದಾನದಲ್ಲಿ ತನ್ನ ಸೈನ್ಯವನ್ನು ನಿಲ್ಲಿಸಿದನು. ಅನಿರೀಕ್ಷಿತವಾಗಿ ಬೆಳಗಿನ ಜಾವದಲ್ಲೇ ಕೊಡಗಿನ ಸೈನಿಕರು ಮೈಸೂರಿನ ಸೈನಿಕರ ಮೇಲೆ ಆಕ್ರಮಣ ಮಾಡಿ ಸುಮಾರು ೧೫೦೦ ಸೈನಿಕರನ್ನು ಕೊಂದುಬಿಟ್ಟರು. ಪಾಲಪರೆ ಯುದ್ದದಿಂದಾಗಿ ಕೊಡಗಿನ ಅರಸನಿಗೆ ತನ್ನ ಅಧಿಕಾರವನ್ನು ವಿಸ್ತರಿಸಲು ಸಾಧ್ಯವಾಯಿತು.

ಹಾಲೇರಿ ಅರಸರು ಲಿಂಗಾಯಿತರಾದರೂ ತಮ್ಮ ಹೆಣ್ಣು ಮಕ್ಕಳಿಗೆ ಕೊಡಗಿನವರನ್ನೇ ಮದುವೆ ಮಾಡಿಕೊಡುತ್ತಿದ್ದದ್ದು ವಾಡಿಕೆಯಲ್ಲಿತ್ತು. ಚೆಪ್ಪು ನಾಡಿನ ಸಾಮಾನ್ಯ ಕುಟುಂಬದಿಂದ ಬಂದ ಉತ್ತು ಎಂಬ ವೀರನಿಗೆ ಮುದ್ದುರಾಜನು ತನ್ನ ಮಗಳು ನೀಲಮ್ಮಾಜಿಯನ್ನು ವಿವಾಹ ಮಾಡಿ ಲಿಂಗಾಯಿತ ದೀಕ್ಷೆ ನೀಡಲಾಯಿತು. ಅವನಿಗೆ ಚಿಪ್ಪು ನಾಡಿನ ಉಸ್ತುವಾರಿಯನ್ನು ನೀಡಲಾಯಿತು. ತೀರಾ ಸಾಮಾನ್ಯ ವಂಶದಿಂದ ಬಂದ ಅವನನ್ನು ಚೆಪ್ಪು ನಾಡಿನ ಕೊಡಗರು ಮುಖ್ಯಸ್ಥನೆಂದು ಒಪ್ಪಿಕೊಳ್ಳದ್ದರಿಂದ ಅವನು ದೌರ್ಜನ್ಯದಿಂದ ಆಳಲು ಆರಂಭಿಸಿದನು. ತನಗೆ ವಿರೋಧವಾಗಿದ್ದ ಐಚೆಟ್ಟಿ, ಬಾಚೆಟ್ಟಿ ಕುಟುಂಬಗಳ ‘ಐನ್’ ಮನೆಗಳನ್ನು (ಅವಿಭಕ್ತ ಕುಟುಂಬದ ಮನೆ) ಈತ ಸುಟ್ಟು ಹಾಕಿ ಬಿಟ್ಟನು. ವಿರೋಧಿಗಳ ನಾಶದಲ್ಲಿ ನಿರತನಾಗಿದ್ದ ಈತನಿಗೆ ಈತನ ಭಾವ ದೊಡ್ಡ ವೀರಪ್ಪ ಹೇಳಿದ ಎಚ್ಚರಿಕೆ ಮಾತುಗಳು ರುಚಿಸಲಿಲ್ಲ. ಪರಿಣಾಮವಾಗಿ ಉತ್ತುನಾಯಕನು ಮಲೆಯಾಳಿ ಕೋಟಂಗದ ವೀರವರ್ಮನೊಂದಿಗೆ ಸೇರಿದನು. ಇವರಿಬ್ಬರು ಮೈಸೂರಿನ ಚಿಕ್ಕದೇವರಾಜ ಕೊಡಗನ್ನು ಆಕ್ರಮಿಸಬೇಕೆನ್ನುವ ಹೊತ್ತಿನಲ್ಲಿ ದೊಡ್ಡವೀರಪ್ಪನನ್ನು ಸೋಲಿಸಲು ಯತ್ನಿಸಿ ವಿಫಲರಾದರು. ಪರಿಣಾಮವಾಗಿ ವೀರವರ್ಮ ಅವನ ಸೈನಿಕರೊಡನೆ ಸತ್ತರೆ ಉತ್ತನಾಯಕನು ಕೇರಳದ ಬೈತೂರಿಗೆ ಓಡಿಹೋಗುತ್ತಾನೆ. ಇವನ ಮರಣದ ನಂತರದ ಎಷ್ಟೋ ವರ್ಷಗಳ ನಂತರ ಇವನ ವಂಶಜರು ಮತ್ತೆ ಚೆಪ್ಪುನಾಡಿನ ಅರಮೇರಿಗೆ ಬಂದು ನೆಲಸಿದರು. ಇವರು ನಾಯಕನ ಸಂತತಿಯವರಾದ್ದರಿಂದ ಇವನ್ನು “ನಾಯಕಂಡ” ಮನೆಯವರೆಂದು ಕರೆಯುತ್ತಾರೆ.

ಉತ್ತುನಾಯಕನ ರೀತಿಯ ಕೊಡಗಿನ ಸ್ಥಳೀಯ ನಾಯಕರ ಸಾಲಿನಲ್ಲಿ ಸೇರುವವರಲ್ಲಿ ಅಂಜಿಗೇರಿ ನಾಡಿನ ಅಚ್ಚುನಾಯಕ ಹಾಗೂ ಕಡಿ ಮತ್ತು ನಾಡಿನ ಕೊಳ್ಳಕೊಂಗಿ ನಾಯಕರು ಪ್ರಮುಖರು. ಇವರು ದೊಡ್ಡ ವೀರಪ್ಪನಿಗೆ ಕಪ್ಪ ಕೊಡದೆ “ಸ್ವತಂತ್ರ” ರಾಗಿರಲು ಇಷ್ಟ ಪಟ್ಟವರು. ಈ ಸಂದರ್ಭದಲ್ಲಿ ಕಲಿಸಂದ ೪೮೮೯ನೆ ಚಿರ ಸಂವತ್ಸರ (ಕ್ರಿ.ಶ. ೧೭೨೮ ನೇ ಇಸವಿ)ದಲ್ಲಿ ನಾಲ್ಕುನಾಡು ನಾಲಡಿ ಗ್ರಾಮದ ಪರದಂಡ ಪೊನ್ನಪ್ಪ ಎಂಬ “ಕಾರ್ಯಕಾರನ” (ಸೇನಾಪತಿ) ನೇತೃತ್ವದಲ್ಲಿ ದೊಡ್ಡ ವೀರಪ್ಪನು ಸೈನ್ಯವೊಂದನ್ನು ಕಳಿಸಿ ಅಚ್ಚುನಾಯಕ ಕೊಡಗು ರಾಜನ ಕೈಲಿ ಹತನಾದರೆ, ಅಚ್ಚುನಾಯಕನಿಗೆ ಕಾರಾಗೃಹದ ಶಿಕ್ಷೆಯಾಗುವುದು. ಕಾರ್ಯಕಾರ ಪೊನ್ನಪ್ಪ ಇದರಿಂದಾಗಿ ರಾಜನ ದಿವಾನನಾಗುವನು. ಹಾಗೆಯೇ ಚೆಪ್ಪು ನಾಡು ಕುಂಜಲಗೇರಿ ಗ್ರಾಮದಲ್ಲಿ ಕೊಳ್ಳಕೊಂಗಿ ನಾಯಕನಿಗೆ ಸೇರಿದ ಐನೂರು ಭಟ್ಟಿ ಭೂಮಿ (ನೂರು ಭಟ್ಟಿ ಭೂಮಿ ಎಂದರೆ ಎನ್ನುವ ವಂಶದ ಕುಲಕ್ಕೆ ಸೇರಿದ ಸಾವಿರ ಭಟ್ಟಿ ಭೂಮಿಯನ್ನು ದಿವಾನನ ಕೋರಿಕೆಯಂತೆ ರಾಜನು ಅವನಿಗೆ ನೀಡುವನು. ಇದಲ್ಲದೆ ಈ ಭೂಮಿಯನ್ನು

ಸಾಗುವಳಿ ಮಾಡುವುದಕ್ಕೆ ಹತ್ತು ಕುಟುಂಬ ಜಮ್ಮದ ಹೊಲೆಯರಿಗೆ, ನೂರು ವರಹ ಕಂಠೀರಾಯ ಹಣವನ್ನು ನೀಡಿದನು (ಈ ಪದ್ಧತಿಯ ಬಗ್ಗೆ ಈ ಪ್ರಬಂಧದ ಮುಂದಿನ ಭಾಗದಲ್ಲಿ ಚರ್ಚಿಸಲಾಗಿದೆ). ಮುಕ್ಕಾಟಿರ ಭೂಮಿಯಲ್ಲಿ ಇವರು ನೆಲೆ ನಿಂತದ್ದರಿಂದ ಪರದಂಡ ಮನೆಗೆ ಸೇರಿದ ಪೊನ್ನಪ್ಪನವರ ಕುಟುಂಬದವರನ್ನು ನಂತರ "ಮುಕ್ಕಾಟಿರ" ಮನೆಯವರೆಂದು ಕರೆಯಲಾಯಿತು ಎಂದು ಡಿ.ಎನ್.ಕೃಷ್ಣಯ್ಯ ಅವರು ಬರೆಯುತ್ತಾರೆ. ಕೊಳ್ಳಕೊಂಗಿ ನಾಯಕನ ಅಳಿದುಳಿದ ಸಂತತಿಯವರನ್ನು ಅವರು ನಾಯಕರ ಸಂತತಿಗೆ ಸೇರಿದ ಕಾರಣಕ್ಕಾಗಿ "ನಾಯಕಂಡ" ಮನೆಯವರೆಂದು ಕರೆಯುತ್ತಾರೆ. ಉತ್ತುನಾಯಕನ ಸಂತತಿಯವರಿಗೂ "ನಾಯಕಂಡ" ಮನೆ ಹೆಸರಿದ್ದರೂ, ಅದಕ್ಕೂ ಮತ್ತು ಕೊಳ್ಳಕೊಂಗಿ ನಾಯಕನ ಸಂತತಿಗೂ ಸಂಬಂಧವಿಲ್ಲ ಎಂದು ಡಿ.ಎನ್. ಕೃಷ್ಣಯ್ಯ ವಿಶ್ಲೇಷಿಸಿದ್ದಾರೆ:

ಕೊಡಗಿನ ಒಳಗಿನ ಹಾಗೂ ಹೊರಗಿನ ತನ್ನ ಶತ್ರುಗಳನ್ನು ಹದ್ದು ಬಸ್ತಿಗೆ ತಂದನಂತರ ದೊಡ್ಡ ವೀರಪ್ಪನ ಚಟುವಟಿಕೆ ಕೊಡಗನ್ನು ವಿಸ್ತರಿಸುವುದಕ್ಕೆ ಮೀಸಲಾಯಿತು. ಕೊಡಗಿನ ನೆರೆ ರಾಜ್ಯವಾಗಿದ್ದ ಬೇಲೂರು ನಾಯಕರ ಏಳುಸಾವಿರ ಸೀಮೆ (ಇದು ಹೆಚ್ಚು ಕಡಿಮೆ ಈಗಿನ ಸೋಮವಾರಪೇಟೆ ತಾಲೂಕು)ಯನ್ನು ವಶಪಡಿಸಿಕೊಳ್ಳಲು ಮೈಸೂರು ಅರಸ ಚಿಕ್ಕ ದೇವರಾಜ ಹೊಂಚು ಹಾಕುತ್ತಿದ್ದನು. ಆ ಹೊತ್ತಿಗೆ ದೊಡ್ಡ ವೀರಪ್ಪನೆ ಏಳುಸಾವಿರ ಸೀಮೆಯನ್ನು ಗೆದ್ದು ತನ್ನ ತೆಕ್ಕೆಗೆ ಸೇರಿಸಿಕೊಂಡನು. ಮೈಸೂರು ಅರಸನು ಬೇಲೂರಿನ ಉತ್ತರಭಾಗವನ್ನು ಗೆದ್ದುಕೊಂಡನು. ಆದರೆ ಏಳು ಸಾವಿರ ಸೀಮೆಗೆ ಸಂಬಂಧಿಸಿದಂತೆ ಕೊಡಗಿನ ಮತ್ತು ಮೈಸೂರಿನ ಅರಸರ ನಡುವೆ ಮತ್ತೆ ವೈಷಮ್ಯ ಬಂದಿತು. ಈ ವೈಮನಸ್ಸುಗಳ ನಡುವೆಯೂ ಈ ಇಬ್ಬರು ಅರಸರು ಒಂದು ಒಮ್ಮತಕ್ಕೆ ಬಂದರು. ಇದರ ಪ್ರಕಾರ ಏಳುಸಾವಿರ ಸೀಮೆ ಅಧಿಕಾರವು ಮೈಸೂರು ಅರಸನಿಗೆ ಕೊಡಬೇಕಿತ್ತು. ಹೀಗೆ ದೊಡ್ಡ ವೀರಪ್ಪನ ಕಾಲದಲ್ಲಿ ಕೊಡಗಿನ ವಿಸ್ತೀರ್ಣ ದೊಡ್ಡದಾಗುತ್ತಾ ಹೋಯಿತು. ಕೊಡಗು ಒಂದು ವ್ಯವಸ್ಥಿತ ರಾಜ್ಯವ್ಯವಸ್ಥೆಯ ಆಳ್ವಿಕೆಗೆ ಬಂದಿತು.

ಕೆಳದಿರಾಜರ ಚರಿತ್ರೆ ಪ್ರಕಾರ ಅಮರ ಸುಳ್ಯ ಮಾಗಣೆಯು ದೊಡ್ಡವೀರಪ್ಪನ ಜನನದ ಸಂತೋಷದಿಂದ ಇಕ್ಕೇರಿ ಅರಸರು ಮುದ್ದುರಾಜನಿಗೆ ಬಳುವಳಿ ನೀಡಿದ್ದರೆಂಬುದನ್ನು ನಾನು ಈಗಾಗಲೇ ವಿವರಿಸಿದ್ದೇನೆ. *ರಾಜೇಂದ್ರನಾಮೆಯು* ಕೂಡ ಅಮರ ಸುಳ್ಯನ್ನು ಇಕ್ಕೇರಿ ಅರಸರೇ ನೀಡಿದರೆಂದು ವಿರಿಸಿದರೂ ಚಾರಿತ್ರಿಕ ಹಿನ್ನಲೆಗಳು ಮತ್ತು ಘಟನೆಗಳೇ ಬೇರೆ ಇರುವುದನ್ನು ನಾವು ನೋಡಬಹುದು. ಇದರ ಪ್ರಕಾರ ೧೭೧೪ ರಿಂದ ೧೭೩೯ ರವರೆಗೆ ಇಕ್ಕೇರಿಯಲ್ಲಿ ಆಳಿದ ಎರಡನೆಯ ಸೋಮಶೇಖರ ಮಲಬಾರಿನ ಉತ್ತರ ಭಾಗದಲ್ಲಿದ್ದ ಚರಕಲೆ ರಾಜ್ಯವನ್ನು ವಶಪಡಿಸಿಕೊಳ್ಳಲು ಸೈನ್ಯ ತಂದನು. ಚರಕಲೆ ರಾಜ್ಯದ ಅರ್ಧಭಾಗವನ್ನು ವಶಪಡಿಸಿಕೊಂಡು ಮುಂದೆ ಸಾಗುತ್ತಿದ್ದಾಗ ಚರಕಲೆ ಅರಸ ವೀರವರ್ಮನು ಕೊಡಗಿನ ದೊಡ್ಡವೀರಪ್ಪನ ಮಧ್ಯಸ್ಥಿಕೆಯನ್ನು ಕೋರಿದನು. ದೊಡ್ಡ ವೀರಪ್ಪ ಹಾಗೂ ಇಕ್ಕೇರಿಯ ಅರಸರಿಬ್ಬರೂ "ಸ್ವಕೀಯಸ್ಥ" (ಲಿಂಗಾಯಿತ) ರಾಗಿದ್ದರಿಂದ ಇದು ಸಾಧ್ಯ ಎಂದು ದೊಡ್ಡವೀರಪ್ಪನಿಗೆ ವೀರವರ್ಮ ಮನವರಿಕೆ ಮಾಡಿದನು. ಈಗಾಗಲೇ ಬಹಳಷ್ಟು ಸೈನ್ಯ ಮತ್ತು ಹಣ ಕಳೆದುಕೊಂಡಿದ್ದರಿಂದ ಸೋಮಶೇಖರನು ವೀರವರ್ಮ ೧೮ ಲಕ್ಷ ರೂಪಾಯಿ ಕೊಡುವುದಾದರೆ ಮತ್ತು ಅದಕ್ಕೆ ದೊಡ್ಡ ವೀರಪ್ಪ ಜಾಮೀನು ನಿಲ್ಲುವುದಾದರೆ ಒಪ್ಪಂದ ಸಾಧ್ಯವೆಂದು ದೊಡ್ಡವೀರಪ್ಪನಿಗೆ ತಿಳಿಸುವನು, ಹಾಗೆಯೇ, "ಮಲೆಯಾಳದ ರಾಜರು ಮೋಸಗಾರರು, ಆಡಿದ ಮಾತು ಕೊಟ್ಟ ನಂಬಿಕೆಗೆ ಸರಿಯಾಗಿ ನಡೆಸುವವರಲ್ಲ. ಅವರ ಕರಾರುನಾಮೆಯನ್ನು ನಂಬಿ ಈ ಹಣಕ್ಕೆ ನೀವು ಹೊಣೆಯಾಗಬೇಡಿ" ಎಂದು ಕೂಡ ದೊಡ್ಡವೀರಪ್ಪನನ್ನು ಎಚ್ಚರಿಸುವನು. ಆರಂಭದಲ್ಲಿ ಅರ್ಧ ಹಣವನ್ನು ವೀರವರ್ಮನು ಸಂದಾಯ ಮಾಡಿದರೂ ಉಳಿದರ್ಧ ಹಣನೀಡಲು ಸತಾಯಿಸಿ ಕೊಡಗು ರಾಜನನ್ನು ಈತ ಮೋಸ ಮಾಡಿಬಿಟ್ಟನು. ಇದರಿಂದ ನೊಂದ ದೊಡ್ಡ ವೀರಪ್ಪ ಆಡಿದ ಮಾತಿಗಾಗಿ ತನ್ನ ಖಜಾನೆಯಿಂದ ಉಳಿದ ಒಂಭತ್ತು ಲಕ್ಷ ರೂಪಾಯಿಗಳನ್ನು ಸೋಮಶೇಖರನಿಗೆ ನೀಡುತ್ತಾನೆ.

ಸೋಮಶೇಖರನು ದೊಡ್ಡವೀರಪ್ಪನ ಪ್ರಾಮಾಣಿಕತೆಯನ್ನು ಮೆಚ್ಚಿ ಅಮರಮಾಗಣೆಯನ್ನು ಉಚಿತವಾಗಿ ಕೊಟ್ಟನೆಂದು ರಾಜೇಂದ್ರನಾಮೆ ತಿಳಿಸುತ್ತದೆ. ಕಾವೇರಿಯಮ್ಮನ ಪೂಜೆಗೆ ಕೊಡಗಿನಲ್ಲಿ ತೆಂಗಿನ ಕಾಯಿಯಿಲ್ಲದ್ದರಿಂದ ಭಾಗಮಂಡಲಕ್ಕೆ ಸಮೀಪವಿರುವ ಸುಳ್ಯ ಮಾಗಣೆಯನ್ನು ಕಾವೇರಮ್ಮನ ದೇವಸ್ಥಾನದ ಭಂಡಾರದಿಂದ ದೊಡ್ಡವೀರಪ್ಪನು ಇಕ್ಕೇರಿ ಅರಸನಿಂದ ಕ್ರಯಕ್ಕೆ ತೆಗೆದುಕೊಳ್ಳುವನು. ಹೀಗೆ ಕೊಡಗಿಗೆ ಅಮರ ಸುಳ್ಯ ಮಾಗಣೆಯು ಸೇರಿತು. ದೊಡ್ಡ ವೀರಪ್ಪ "ಹುಟ್ಟಿದ" ಕಾರಣಕ್ಕಾಗಿ ಈ ಭಾಗಗಳು ಕೊಡಗಿಗೆ ಸೇರಿತೊ ಅಥವಾ ದೊಡ್ಡವೀರಪ್ಪನ "ಪ್ರಾಮಾಣಿಕತೆಗಾಗಿ" ಈ ಭಾಗಗಳು ಕೊಡಗಿಗೆ ಸೇರಿತೊ ಎನ್ನುವುದಕ್ಕಿಂತ ಕೊಡಗಿನ ರಾಜಕೀಯ ಭೂಪಟದಲ್ಲಿ ಅಮರ ಸುಳ್ಯಭಾಗವು ಸೇರಿದ್ದು ಕೊಡಗಿನ ರಾಜಕೀಯ ಚರಿತ್ರೆಯ ಮುಖ್ಯ ಮೈಲುಗಲ್ಲೆಂದು ನಾವು ಹೇಳಬಹುದು.

೧೭೩೬ ರಲ್ಲಿ ತೀರಿಹೋದ ದೊಡ್ಡ ವೀರಪ್ಪನ ನಂತರ ೧೭೬೬ ರವರೆಗೆ ಅವನ ಮೊಮ್ಮಗ ಚಿಕ್ಕವೀರಪ್ಪ ಒಡೆಯನು ಕೊಡಗಿನ ರಾಜನಾದನು (ದೊಡ್ಡವೀರಪ್ಪನ ಮಗ ಅಪ್ಪಾಜಿರಾಜನು "ಸಾಮಾನ್ಯ ಸ್ತ್ರೀ" ಯ ಸಂಪರ್ಕ ಮಾಡಿದ್ದರಿಂದ ಆತನ ಪಟ್ಟದರಾಣಿ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡ ಕಾರಣಕ್ಕಾಗಿ ಆತನಿಗೆ ೧೨ ವರ್ಷ ಕಾರಾಗೃಹವಾಗುತ್ತದೆ. ಅಪ್ಪಾಜಿರಾಜ ಕಾರಾಗೃಹದಲ್ಲೇ ಸತ್ತು ಹೋಗುವನು). ಚಿಕ್ಕ ವೀರಪ್ಪನ ಕೊನೆಯ ವರ್ಷಗಳಲ್ಲಿ ಅಂದರೆ ೧೭೬೧ರಲ್ಲಿ ಮೈಸೂರಿನಲ್ಲಿ ನವಾಬ ಹೈದರಾಲಿಖಾನನು ಮೈಸೂರು ಒಡೆಯರ್ ಅರಸರನ್ನು ಓಡಿಸಿ ತಾನೇ ಅರಸನಾದನು. ಸಣ್ಣ ಪುಟ್ಟ ಪಾಳೇಗಾರರನ್ನೂ ಸುಲಭವಾಗಿ ಸೋಲಿಸಿದ ಹೈದರ್ ಕೊನೆಗೆ ಇಕ್ಕೇರಿ ಸಂಸ್ಥಾನವನ್ನು ವಶಪಡಿಸಿಕೊಳ್ಳುವನು. ಸಹಜವಾಗಿಯೇ ಇಕ್ಕೇರಿಯೊಂದಿಗೆ ಒಳ್ಳೆಯ ಸಂಬಂಧವಿಟ್ಟುಕೊಂಡಿದ್ದ ಕೊಡಗು ಸಂಸ್ಥಾನವು ಬಲಹೀನವಾಯಿತು. ಈ ಹಿನ್ನಲೆಯಲ್ಲೇ ಹೈದರನು ಕೊಡಗು ಮತ್ತು ಮೈಸೂರು ರಾಜರಿಬ್ಬರಿಗೂ ತೆರಿಗೆ ಸಲ್ಲುತ್ತಿದ್ದ ಏಳುಸಾವಿರ ಸೀಮೆಯ ಮೇಲೆ ತಗಾದೆ ತೆಗೆದನು. ಆ ಸೀಮೆಯ ಭೂ ಭಾಗಗಳು ಮೈಸೂರಿಗೂ ಸೇರಬೇಕೆಂದ ನವಾಬನ ಮಾತನ್ನು ಮನ್ನಿಸಿ ಕೊಡಗು ರಾಜನು ಬೆಮ್ಮತ್ತಿ, ಮಲ್ಲಿಪಟ್ಟಣ, ಹೊಸೂರು ಎಂಬ ಪ್ರದೇಶಗಳನ್ನು ನವಾಬನಿಗೆ ನೀಡುವನು. ಆದರೆ ತನಗೆ ಹಣವೂ ಬರಬೇಕೆಂದು ತನ್ನ ಸೈನ್ಯಾಧಿಕಾರಿ ಫಜರುಲ್ಲಾಖಾನನನ್ನು ಕೊಡಗು ಸಂಸ್ಥಾನದ ಮೇಲೆ "ಜಗಳ"ಕ್ಕೆ ಕಳಿಸಿದನು. ೧೭೬೫ ರಲ್ಲಿ ಕೊಡಗಿದ್ದ ಉಬ್ಬರ್‌ಗಂಡಿ ಮಾಳದಲ್ಲಿ ನಡೆದ ಸಣ್ಣ ಯುದ್ಧದಲ್ಲಿ ಖಾನನು ಸೋತು ಕೊಡಗಿನ ಉತ್ತರದಲ್ಲಿರುವ ಐಗೂರು ಸೀಮೆಗೆ ಓಡಿಹೋದನು. ಪರಿಣಾಮವಾಗಿ ಹೈದರನು ಶಾಂತಿ ಒಪ್ಪಂದಕ್ಕೆ ಬಂದು ಉಚ್ಚಂಗಿ ಸಂಸ್ಥಾನವನ್ನು ಕೊಡಗಿಗೆ ಬಿಟ್ಟು ಕೊಡುವುದಾಗಿ ಮಾತುಕೊಟ್ಟನು. ಆದರೆ ಈ ಒಪ್ಪಂದವು ಅನುಷ್ಠಾನಕ್ಕೆ ಬರುವ ಮೊದಲೇ ಅಂದರೆ ೧೭೬೬ರಲ್ಲಿ ಚಿಕ್ಕ ವೀರಪ್ಪ ತೀರಿ ಹೋಗುತ್ತಾನೆ. ಅವನಿಗೆ ಮಕ್ಕಳಿಲ್ಲದ್ದರಿಂದ ಹಾಲೇರಿಯ ಅಪ್ಪಾಜಿರಾಜನ (ದೊಡ್ಡವೀರಪ್ಪನ ತಮ್ಮ) ಮಗ ಮುದ್ದುರಾಜ ಮತ್ತು ಹೊರಮಲೆ ನಂದರಾಜನ (ದೊಡ್ಡವೀರಪ್ಪನ ತಮ್ಮ) ಮಗ ಮುದ್ದಯ್ಯ ಇವರುಗಳು ಜಂಟಿಯಾಗಿ ೧೭೬೬ ರಿಂದ ೧೭೭೦ ರವರೆಗೆ ಕೊಡಗನ್ನು ಅನ್ಯೋನ್ಯವಾಗಿ ಆಳಿದರು. ಇವರ ಕಾಲದಲ್ಲಿ ಹೈದರ್‌ನನ್ನು ತಮಗೆ ಕೊಡಬೇಕಾಗಿದ್ದ ಉಚ್ಚಂಗಿ ಸಂಸ್ಥಾನವನ್ನು ಕೇಳಿದರೂ ಹೈದರನು ಅದನ್ನು ಕೊಡಲೊಪ್ಪಲಿಲ್ಲ. ಆಗ ಅಪ್ಪಾಜಿರಾಜನ ಎರಡನೆಯ ಮಗ ಲಿಂಗರಾಜ (ಮುದ್ದುರಾಜನ ತಮ್ಮ) ಏಳುಸಾವಿರ ಸೀಮೆಯಲ್ಲಿ ಫಜಲ್‌ಉಲ್ಲಾಖಾನನನ್ನು ಸೋಲಿಸಿದನು. ಆದರೆ ಈ ಯುದ್ಧದಲ್ಲಿ ಕೊಡಗು ರಾಜನ ದಳವಾಯಿಗಳಾಗಿದ್ದ ಕನ್ನಂಡ ದೊಡ್ಡಯ್ಯ ಮತ್ತು ಅಪ್ಪಚ್ಚಿರ ಮಂದಣ್ಣನವರು ಸತ್ತುಹೋಗುತ್ತಾರೆ. ಅಪಾರವಾದ ಶಸ್ತ್ರಾಸ್ತ್ರಗಳನ್ನು, ಸೈನ್ಯವು ಬಿಟ್ಟುಹೋದ ಸಾಮಾನು ಸರಂಜಾಮು, ಪಣದೊಂದಿಗೆ ಕೊಡಗಿನ ಸೈನಿಕರು ವಾಪಾಸ್ಸಾಗುತ್ತಾರೆ. ಹೈದರನು ಶಾಂತಿಯನ್ನು ಬಯಸಿದ ಪರಿಣಾಮವಾಗಿ ಅವನು ನಗರ ಪ್ರಾಂತ್ಯಕ್ಕೆ ಹೊಂದಿಕೊಂಡಿದ್ದ ಪಂಜೆ ಮತ್ತು ಬೆಳ್ಳಾರೆ ಪ್ರದೇಶಗಳನ್ನು ಕೊಡಗಿಗೆ ಬಿಟ್ಟುಕೊಟ್ಟನು. ಈ ಸಂದರ್ಭದಲ್ಲಿ ಕೊಡಗು ಏಳುಸಾವಿರಸೀಮೆ, ಅಮರಸುಳ್ಯಮಾಗಣೆ ಹಾಗೂ ಪಂಜೆ-ಬೆಳ್ಳಾರೆಯನ್ನು ಹೊಂದಿದ್ದ ವಿಶಾಲವಾದ ಪ್ರಬಲ ರಾಜ್ಯವಾಗಿತ್ತೆಂದರೆ ತಪ್ಪಾಗಲಾರದು. ಸುಮಾರು ೧೫೦

ವರ್ಷಗಳ ಕಾಲ ಯಾವುದೇ ಅಡೆತಡೆಗಳಿಲ್ಲದೆ ಹೆಚ್ಚು ಕಡಿಮೆ ಸ್ವತಂತ್ರರಾಗಿ ಕೊಡಗು ಅರಸರು ಆಳ್ವಿಕೆ ಮಾಡಿದರೂ ರಾಜಕೀಯ ಚದುರಂಗಾಟದಲ್ಲಿ ಇವರು ಹಿನ್ನಡೆಯನ್ನು ಅನುಭವಿಸಬೇಕಾಯಿತು. ಅದು ೧೭೭೫ರಲ್ಲಿ ಹೈದರ್‌ಅಲಿಯ ರಾಜಕೀಯ ಆಟದಿಂದ ಆರಂಭವಾಗಿ ೧೮೩೪ರಲ್ಲಿ ಕೊಡಗು ಬ್ರಿಟಿಷರ ಕೈ ಸೇರುವವರೆಗೂ ನಡೆಯಿತು. ಹೈದರ್ ಅಥವಾ ಟಿಪ್ಪುವನ್ನು "ಭಾರತದ ಸ್ವಾತಂತ್ರ್ಯ ಹೋರಾಟಗಾರರೆಂದು" ಹೇಳುವ ಹೊತ್ತಿನಲ್ಲೇ ೧೮ ನೇ ಶತಮಾನದ ಕೊಡಗಿಗೆ ಅವರು ಬ್ರಿಟಿಷರಷ್ಟೇ ಪರಕೀಯರಾಗಿದ್ದರು. ಹೈದರ್‌ಟಿಪ್ಪುವಾಗಲಿ ಅಥವಾ ಬ್ರಿಟಿಷರಾಗಲಿ ಕೊಡಗು ಅರಸರಿಗೆ ತಮ್ಮ ಆಂತರಿಕ ರಾಜಕೀಯ ಪ್ರಶ್ನೆಗಳನ್ನು ಇತ್ಯರ್ಥ ಮಾಡಿಕೊಳ್ಳಲು ಇದ್ದ ರಾಜಕೀಯ ಶಕ್ತಿಗಳೇ ವಿನಹ ಭಾರತೀಯ ಅಥವಾ ಕರ್ನಾಟಕದ ರಾಷ್ಟ್ರೀಯತೆಯ ಪ್ರಶ್ನೆಗಳಾಗಿ ಉಳಿದಿರಲಿಲ್ಲ. ಹಾಲೇರಿ ಮೂಲದ ಕೊಡಗು ಅರಸರ ಆಳ್ವಿಕೆಯ ಅಧಿಕಾರ ಮೋಹ ಹಾಗೂ ಗೊಂದಲಗಳು ಒಂದು ವಿಶಿಷ್ಟ ಬಗೆಯ ಸಂಕೀರ್ಣತೆಯನ್ನು ಹುಟ್ಟುಹಾಕಿದವು. ಈ ಹಿನ್ನೆಲೆಯಲ್ಲಿ ಚರಿತ್ರೆಯ ಕೆಲವು ವಿವರಗಳನ್ನು ಇಲ್ಲಿ ಚರ್ಚಿಸಲಾಗಿದೆ.

ವಿಶಾಲವಾದ ಭೌಗೋಳಿಕ ಪ್ರದೇಶಗಳನ್ನು ಏಳುಸಾವಿರ ಸೀಮೆಯಿಂದ ಪಂಜೆ-ಬೆಳ್ಳಾರೆಯವರೆಗೆ ವಿಸ್ತರಿಸಿದ್ದ ಹಾಲೇರಿ ಅರಸರಾದ ಮುದ್ದು ರಾಜ ಮತ್ತು ಹೊರಮಲೆ ಅರಸರಾದ ಮುದ್ದಯ್ಯನವರು ೧೭೭೦ ರಲ್ಲಿ ತೀರಿಹೋದರು. ಈ ಘಟ್ಟದಿಂದ ಪೂರ್ಣ ಪ್ರಮಾಣದ ದಾಯಾದಿ ಕಲಹ ಆರಭವಾಗುತ್ತದೆ. ಹಾಲೇರಿಯ ಲಿಂಗರಾಜನಿಗೆ ಅವನ ಅಣ್ಣಮುದ್ದುರಾಜನ ಮಗನನ್ನು ಕೊಡಗಿನ ಗಾದಿಗೆ ಕೂರಿಸಬೇಕೆಂದಿದ್ದರೆ, ಹೊರಮಲೆ ಅರಸ ಮುದ್ದಯ್ಯನ ಮಗ ಮಲ್ಲಯ್ಯನು ತನ್ನ ಮಗ ದೇವಪ್ಪರಾಜನನ್ನು ಮುಂದಿನ ರಾಜನನ್ನಾಗಿ ಮಾಡಬೇಕೆಂದು ಆಸೆಪಟ್ಟನು. ದೇವಪ್ಪರಾಜನಿಗೆ ಜನರ ಬೆಂಬಲ ಹೆಚ್ಚಿದ್ದರಿಂದ ಅವನೇ ಕೊಡಗಿನ ರಾಜನಾದನು. ಈ ಘಟ್ಟದಿಂದ ದ್ವೇಷಾಸೂಯೆಗಳು ಪ್ರಖರವಾಗಿ ಆರಂಭವಾದವು. ಉಳಿದವರ ಮೇಲೆ ರಾಜನ ನಿರ್ಬಂಧಗಳು ಹೆಚ್ಚಾದೊಡನೆ ಲಿಂಗರಾಜನು ತನ್ನ ಮಗ ವೀರರಾಜ ಹಾಗೂ ತನ್ನ ಅಣ್ಣನ ಮಗ ಅಪ್ಪಾಜಿಯನ್ನು ಕರೆದುಕೊಂಡು ಪಕ್ಕದ ಐಗೂರು ಸೀಮೆಗೆ ಪಲಾಯನ ಮಾಡಿದನು. ಮಡಿಕೇರಿಯ ಸಿಂಹಾಸನವನ್ನು ಪಡೆಯಲು ಹೈದರನ ಸಹಾಯವನ್ನು ಲಿಂಗರಾಜನು ಕೇಳಿದನು. ಹೈದರನು ತನಗೆ ಸಿಕ್ಕ ಅವಕಾಶವನ್ನು ಬಿಡಲಿಲ್ಲ. ಪರಿಣಾಮವಾಗಿ, ಲಿಂಗರಾಜನು ತನ್ನ ಮಕ್ಕಳೊಡನೆ ಶ್ರೀರಂಗಪಟ್ಟಣಕ್ಕೆ ಹೋಗಿ ಹೈದರನ ಆಶ್ರಯವನ್ನು ಪಡೆದನು. ಹಾಗೆಯೇ ಲಿಂಗರಾಜನು ಹೈದರಾಲಿಯ ಸೈನಿಕರ ಜೊತೆಗೆ ಕೊಡಗಿನ ಗಡಿ ಬಾಳೆಲೆಗೆ ದಂಡೆತ್ತಿ ಹೋದನು. ಕ್ರಿ.ಶ. ೧೭೭೩ರಲ್ಲಿ ಹೈದರಾಲಿ-ಲಿಂಗರಾಜರ ಸೈನ್ಯ ಸೋತು ಪಕ್ಕದ ಅರಕಲಗೋಡಿಗೆ ಹಿಮ್ಮೆಟ್ಟಿತ್ತು. ಈ ಸಂದರ್ಭದಲ್ಲಿ ಲಿಂಗರಾಜನು ಕಿಗಟ್ಟುನಾಡಿನ ಕೊಡಗರೊಂದಿಗೆ ಗುಪ್ತ ಒಪ್ಪಂದವನ್ನುಮಾಡಿಕೊಂಡು ಅವರೆಲ್ಲರೂ ತನ್ನ ಪರವಹಿಸುವಂತೆ ಮಾಡಲು ಸಫಲನಾದನು. ಬಲದಿಂದ ಸಾಧಿಸಲಿಕ್ಕಾಗದ್ದನ್ನು ಬೆನ್ನಿಗೆ ಇರಿಯುವ ಮೂಲಕ ಸಾಧಿಸಲಾಯಿತೆಂದು ರಿಕ್ತರನು ಈ ಸಂದರ್ಭವನ್ನು ಉಲ್ಲೇಖಿಸಿ ಬರೆಯುವನು. ಸಹಜವಾಗಿಯೇ ಹೈದರಾಲಿ-ಲಿಂಗರಾಜನ ಸೈನ್ಯವು ಯಾವುದೇ ಪ್ರತಿರೋಧವಿಲ್ಲದೆ ಮಡಿಕೇರಿಯನ್ನು ಪ್ರವೇಶಿಸುತ್ತದೆ. ಈಗ ಕೊಡಗು ಬಿಟ್ಟು ಓಡುವ ಸರದಿ ದೇವಪ್ಪರಾಜನದಾಗುತ್ತದೆ. ಇವನ ಜೀವ ಉಳಿಸಲು ಮಲೆಯಾಳದ ಕೋಟೆ ರಾಜನ ಬಳಿಗೆ ಓಡಿ ಹೋಗುತ್ತಾನೆ. ಆದರೆ ದೊಡ್ಡ ವೀರಪ್ಪನ ಬಗ್ಗೆ ಬಹಳ ದ್ವೇಷ ಇಟ್ಟುಕೊಂಡಿದ್ದ ಕೋಟೆ ರಾಜನು ದೇವಪ್ಪರಾಜನಿಗೆ ತನ್ನಲ್ಲಿರುವ ದುಡ್ಡು ಕೊಟ್ಟರೆ ಜೀವ ಸಹಿತ ಬಿಡುವೆನೆಂದು ಆಗ್ರಹಿಸುವನು. ಬಡಪಾಯಿ ದೇವಪ್ಪ ರಾಜನು ತನ್ನಲ್ಲಿದ್ದ ೪೦,೦೦೦ ರೂಪಾಯಿಗಳನ್ನು ಕೋಟೆ ರಾಜನಿಗೆ ಕೊಟ್ಟು ಮರಾಠರ ಸೀಮೆಯಲ್ಲಿ ಆಶ್ರಯ ಪಡೆಯಲು ಓಡಿಹೋಗುತ್ತಿದ್ದಾಗ ಹೈದರಾಲಿಯ ಸೈನಿಕರಿಗೆ ತುಂಗಭದ್ರಾ ನದಿಯ ಬಲದಂಡೆಯಲ್ಲಿದ್ದ ಹರಿಹರದಲ್ಲಿ ಸಿಕ್ಕಿ ಬೀಳುವನು. ಕ್ರಿ.ಶ. ೧೭೭೪ರಲ್ಲಿ ಹೈದರಾಲಿಯು ದೇವಪ್ಪ ರಾಜನನ್ನು ಮತ್ತು ಅವನ ಕುಟುಂಬದ ಎಲ್ಲಾ ಸದಸ್ಯರನ್ನು ಶ್ರೀರಂಗಪಟ್ಟಣದಲ್ಲಿ ಕೊಂದುಬಿಡುವನು. ದೇವಪ್ಪರಾಜನ ಮರಣದೊಂದಿಗೆ ಹೊರಮಲೆ ವಂಶ ನಾಶವಾಗುತ್ತದೆ. ಈಸಂದಭ್ದಲ್ಲಿ ಹೈದರಾಲಿಯು ತನ್ನ

ಯುದ್ಧವೆಚ್ಚವನ್ನು ತುಂಬಿಕೊಡಲು ವರ್ಷಂಪ್ರತಿ ೨೪,೦೦೦ ರೂಪಾಯಿಗಳನ್ನು ಕೊಡಗು ರಾಜನಿಂದ ತೆಗೆದುಕೊಳ್ಳುವ ಒಪ್ಪಂದ ಮಾಡಿಕೊಳ್ಳುತ್ತಾನೆ. ಕೊಡಗಿನ ಬೊಕ್ಕಸ ಬರಿದಾದ ಕಾರಣವನ್ನು ಮುಂದೊಡ್ಡಿ ಬಹಳ ಕಾಲದ ಹಿಂದೆ ಕೈತಪ್ಪಿದ ವೈನಾಡಿನ ಕಲ್ಪಾತಿ ಪ್ರದೇಶವನ್ನು ಕೊಡಗಿಗೆ ಮತ್ತೆ ಸೇರಿಸಿಕೊಳ್ಳುವುದಾದರೆ ಅದರಿಂದ ಬರುವ ತೆರಿಗೆಯಿಂದ ೨೪,೦೦೦ ರೂಪಾಯಿಗಳನ್ನು ಭರಿಸಬಹುದೆಂದು ಲಿಂಗರಾಜನು ಹೈದರನಿಗೆ ತಿಳಿಸುತ್ತಾನೆ. ಅಂತೆಯೇ ೧೭೭೪ರಲ್ಲಿ ಲಿಂಗರಾಜನು ಅಪ್ಪಾಜಿರಾಜನಿಗೆ ಅಧಿಕಾರ ವಹಿಸಿ, ಮೂರುಸಾವಿರ ಸೈನಿಕರೊಂದಿಗೆ ಕಲ್ಪಾತಿಯನ್ನು ವಶಪಡಿಸಿಕೊಂಡು, ಅಲ್ಲಿ ಒಂದು ಕೋಟೆ ಕಟ್ಟಿ, ಅಲ್ಲೇ ಒಂದು ವರ್ಷ ಇದ್ದು ಮರಳಿದನು. ಆನಂತರ ಆ ಕೋಟೆಯಲ್ಲಿ ಕಗ್ಗೋಡು ನಾಡಿನ ಬಂಟ ಸಮುದಾಯದ ಅಣ್ಣಪ್ಪನ ಅಪ್ಪಯ್ಯನೆಂಬ ಸರದಾರನ ಕೆಳಗೆ ಎರಡುಸಾವಿರ ಸೈನಿಕರನ್ನಿರಿಸಿ, ಕೋಟೆಯ ಯಜಮಾನ್ಯವನ್ನು ಎಡೆನಾಲ್ಕುನಾಡಿನ ಮಂಜುಡ ಅಪ್ಪಯ್ಯನಿಗೆ ವಹಿಸಿ ಉಳಿದವರೊಂದಿಗೆ ಕೊಡಗಿಗೆ ಬಂದನು. ಆ ಹೊತ್ತಿನಲ್ಲಿ ಅಂದರೆ ೧೭೭೫ ರಲ್ಲಿ ಅಪ್ಪಾಜಿರಾಜನು ನಿಧನ ಹೊಂದಿದ್ದರಿಂದ ಲಿಂಗರಾಜನೇ ಆಡಳಿತ ವಹಿಸಿಕೊಂಡು ಕೊಡಗಿನ ಅರಸನಾದನು. ಕ್ರಿ.ಶ. ೧೭೭೫ ರಿಂದ ೧೭೭೯ರವರೆಗೆ ಕಲ್ಪಾನೆ ಪ್ರದೇಶ ಕೊಡಗಿನರಸನ ಕೆಳಗಿರುತ್ತದೆ. ೧೭೭೯ರಲ್ಲಿ ಅದನ್ನು ಮತ್ತೆ ಮಲೆಯಾಳಿ ಅರಸರು ವಶಪಡಿಸಿಕೊಳ್ಳುತ್ತಾರೆ. ಅದನ್ನು ಮರುವಶಮಾಡಲು ಅಪ್ಪಾಜಿರಾಜನ ಇಬ್ಬರು ಮಕ್ಕಳನ್ನು ಕಳಿಸಿದರೂ ಪ್ರಯೋಜನವಾಗಲಿಲ್ಲ. ಬದಲಿಗೆ ಆ ಇಬ್ಬರು ಮಕ್ಕಳೂ ಕೋಟೆರಾಜನಿಂದ ಹತರಾಗುವರು. ೧೭೭೫ರಲ್ಲಿ ಅಪ್ಪಾಜಿರಾಜನ ಮರಣ ಹಾಗೂ ೧೭೭೯ ರಲ್ಲಿ ಅವನಿಬ್ಬರ ಮಕ್ಕಳ ಹತ್ಯೆ ಕಾಕತಾಳೀಯ ಎಂದೆನ್ನಿಸಿದರೂ ಅಂತಿಮವಾಗಿ ಅದರಿಂದ ಲಿಂಗರಾಜನ ವಂಶವೇ ಕೊಡಗಿನ ವಾರಸುರದಾರರಾಗಲು ಸಾಧ್ಯವಾಯಿತು.

ಮಲೆಕರ್ನಾಟಕದ ಅರಸು ಮನೆತನಗಳು: ೧೬. ಹಾಲೇರಿ ಅರಸರು (೨)

ಲಿಂಗರಾಜನಿಗೆ ಸೀಮೆಗಳು ಹೆಚ್ಚಾದವು ಎಂಬ ಭೀತಿ-ಅಸೂಯೆಯಿಂದ ಅವನನ್ನು ಗಾದಿಗೆ ಕೂರಿಸಿದ ಹೈದರನು ಕೊಡಗಿನ ಆಳ್ವಿಕೆಯಲ್ಲಿದ್ದ ಅಮರಸುಳ್ಯ, ಪಂಜ, ಬೆಳ್ಳಾರೆ, ಮಾಗಣೆಗಳನ್ನು, ಏಳುಸಾವಿರ ಸೀಮೆಯನ್ನು ತನ್ನ ವಶಕ್ಕೆ ತೆಗೆದುಕೊಂಡನು. ಇದೇ ಹೊತ್ತಿನಲ್ಲಿ ಅಂದರೆ ಕ್ರಿ.ಶ. ೧೭೮೦ರಲ್ಲಿ ಲಿಂಗರಾಜನು ತೀರಿಹೋಗುವನು. ಇವನು ಸಾಯು ಹೊತ್ತಿಗೆ ಇವನಿಗೆ ೧೬ ವರ್ಷದ ವೀರರಾಜೇಂದ್ರ ಹಾಗೂ ಅವನ ತಮ್ಮ ಲಿಂಗರಾಜ ಎಂಬ ಸಣ್ಣ ಮಕ್ಕಳಿದ್ದದ್ದು ಹೈದರನಿಗೆ ತನ್ನ ಆಕಾಂಕ್ಷೆಗಳನ್ನು ಪೂರ್ಣಮಾಡಿಕೊಳ್ಳಲು ಸಾಧ್ಯವಾಯಿತು. ಆ ಇಬ್ಬರು ಮಕ್ಕಳನ್ನು ಹೈದರನು ಗೊರೂರಿಗೆ ಸಾಗಿಸಿ ಸುಬ್ಬರಸಯ್ಯ ಎಂಬ ಬ್ರಾಹ್ಮಣನನ್ನು ಅಮಲ್ದಾರ್ (ಕಮಿಷನರ್)ನಾಗಿ ಕೊಡಗನ್ನು ಉಸ್ತುವಾರಿ ಮಾಡಲು ನೇಮಿಸಿದನು. ಮಡಿಕೇರಿ ಕೋಟೆಯಲ್ಲಿ ತನ್ನ ಸೈನ್ಯವನ್ನು ಇಟ್ಟನು. ಇದನ್ನು ಪ್ರತಿಭಟಿಸಿದ ಕೊಡಗರ ದಂಗೆಯನ್ನು ಸದೆಬಡಿದನು. ಆದರೆ ದಂಗೆ ಸಂಪೂರ್ಣವಾಗಿ ಶಮನವಾಗಲಿಲ್ಲ. ೧೭೮೨ರಲ್ಲಿ ಹೈದರನು ಇಂಗ್ಲಿಶ್ ಅಧಿಕಾರಿ ಕೂಟ್‌ನ ನೇತೃತ್ವದಲ್ಲಿನ ಸೈನ್ಯವನ್ನು ಎದುರಿಸಲು ಆರ್ಕಾಟಿಗೆ ಹೋಗುವ ಹೊತ್ತಿಗೆ ಕೊಡಗಿನವರು ಹೈದರನ ಸೈನಿಕರ ಠಾಣ್ಯವನ್ನು ಮುತ್ತಿ ಅವರನ್ನು ದೋಚಿದರು. ಅದೇ ವರ್ಷ ಹೈದರನು ಕಾಯಿಲೆಯಿಂದ ಆರ್ಕಾಟಿನಲ್ಲೇ ಮರಣ ಹೊಂದಿದನು. ಆರ್ಕಾಟಿನ ಯುದ್ಧವು ಮುಗಿಯದ್ದರಿಂದ ಹೈದರನ ಮಗ ಟಿಪ್ಪುವಿಗೆ ಕೂಡಲೆ ಕೊಡಗಿಗೆ ಬರಲಾಗಲಿಲ್ಲ. ಹೀಗಾಗಿ ಒಂದೆರಡು ವರ್ಷ ಟಿಪ್ಪುವು ಕೊಡಗಿನ ಮೇಲೆ ಹತೋಟಿಯನ್ನು ಕಳೆದುಕೊಳ್ಳುವನು. ೧೭೮೩ರಲ್ಲಿ ಗೊರೂರಿನಲ್ಲಿದ್ದ ರಾಜಮನೆತನದವರನ್ನು ಹಾಗೂ ರಾಜಕುಮಾರರ ಪಿರಿಯಾಪಟ್ಟಣದಲ್ಲಿಟ್ಟು ಅವರ ಖರ್ಚಿಗೆ ವರ್ಷವೊಂದಕ್ಕೆ ಮುನ್ನೂರು ಪಗೋಡ (ಸುಮಾರು ಸಾವಿರದ ಇನ್ನೂರು ರೂಪಾಯಿ)ಗಳನ್ನು

ಕೊಟ್ಟನು. ರಾಜಕುಮಾರರ ತಾಯಿ ದೇವಾಂಬಿಕೆ ಸೇರಿದಂತೆ ಅನೇಕರು ಸಿಡುಬುರೋಗದಿಂದ ಅಲ್ಲೇ ಮರಣ ಹೊಂದಿದರು. ವೀರರಾಜನ ದೊಡ್ಡಪ್ಪ ಅಪ್ಪಾಜಿರಾಜನ ಪುತ್ರಿ ದೇವಮ್ಮಾಜಿ ಹಾಗೂ ತಂಗಿ ನೀಲಮ್ಮಾಜಿಯನ್ನು ಟಿಪ್ಪುವು ತನ್ನ ಜನಾನಕ್ಕೆ ಸೇರಿಸಿದನು.

೧೭೮೩ ಮತ್ತು ೧೭೮೪ರಲ್ಲಿ ಇಂಗ್ಲಿಷರು ಜನರಲ್ ಮ್ಯಾಥ್ಯೂಸ್‌ನ ನೇತೃತ್ವದಲ್ಲಿ ಹಿಡಿದುಕೊಂಡಿದ್ದ ನಗರದ ಕೋಟೆಯನ್ನು, ಮಂಗಳೂರಿನ ಕೋಟೆಯನ್ನು ಮುತ್ತಿಗೆ ಹಾಕಿ ವಶಮಾಡಿಕೊಂಡ ಟಿಪ್ಪುವಿನೊಂದಿಗೆ ೧೭೮೫ರಲ್ಲಿ ಬ್ರಿಟಿಶರು ಶಾಂತಿ ಒಪ್ಪಂದವನ್ನು ಮಾಡಿಕೊಂಡರು. ವಾಪಾಸ್ಸು ಕೊಡಗಿನ ಮಾರ್ಗವಾಗಿ ಬರುವಾಗ ಹೈದರನ ಕಾಲದಲ್ಲಿದ್ದಂತೆ ಕೊಡಗಿನ ಜನ ನಡೆದುಕೊಳ್ಳದಿದ್ದರೆ ಮತಾಂತರ ಮಾಡುವುದಾಗಿ ಕೊಡಗರನ್ನು ಬೆದರಿಸಿದನು. ಈ ಸಂದರ್ಭದಲ್ಲೇ ಮಣ್ಣಿನಲ್ಲಿ ಕಟ್ಟಲಾಗಿದ್ದ ಮಡಿಕೇರಿಯ ಕೋಟೆಯನ್ನು ಕಲ್ಲಿನಿಂದ ಕಟ್ಟಲು ಏರ್ಪಾಡು ಮಾಡಿದನು. ಕೋಟೆಯ ಯಜಮಾನಿಕೆಯನ್ನು ಜಾಫರ್ ಕುಲಿಬೇಗ್ ಎಂಬ ಸರದಾರನಿಗೆ ವಹಿಸಿ, ಮಡಿಕೇರಿಯನ್ನು ಜಾಫರ್‌ಬಾದ್ ಎಂದು ಕರೆದನು. ಹಾಗೆಯೇ ಚೆಪ್ಪುನಾಡಿನ ಅರಮನೆಗೇರಿ, ಕುಶಾಲನಗರ ಮತ್ತು ಭಾಗಮಂಡಲಗಳಲ್ಲಿ ಕೋಟೆಗಳನ್ನು ಕಟ್ಟಿ ತನ್ನ ಸೈನ್ಯದ ತುಕಡಿಗಳನ್ನಿಟ್ಟನು. ಆದರೂ ಕೊಡಗಿನ ಜನರು ೧೭೮೫ರಲ್ಲಿ ಬಂಡೆದ್ದರು. ಟಿಪ್ಪುವಿನ ಸರದಾರ ಜಮಲಾಬ್ದೀನನ ನೇತೃತ್ವದಲ್ಲಿ ಕೊಡಗಿನ ಜನರ ಬಂಡಾಯವನ್ನು ಅಡಗಿಸಲು ಟಿಪ್ಪುವು ವಿಫಲಯತ್ನ ನಡೆಸಿದನು. ಆದಕಾರಣ, ಟಿಪ್ಪುವು ತಾನೇ ಸ್ವತಃ ಸೇನೆ ತೆಗೆದುಕೊಂಡು ಕೊಡಗಿಗೆ ಪ್ರವೇಶಿಸಿದನು. ಈ ಬಾರಿ ಅವನು ಫ್ರೆಂಚ್ ಅಧಿಕಾರಿ ಲಾಲಿಯನ್ನು ಪಶ್ಚಿಮದ ಮತ್ತು ದಕ್ಷಿಣದ ಮೂಲಕ್ಕೆ ಮಲೆನಾಡುಗಳಿಗೂ, ಹುಸೇನ್ ಅಲಿಬಾದ್ ಭಕ್ಷಿಯನ್ನು ಉತ್ತರ ಕೊಡಗಿಗೂ, ಮೀರ್‌ಮಹಮ್ಮದ್‌ನನ್ನು ಭಾಗಮಂಡಲನಾಡಿಗೂ ಹಾಗೂ ಇಮಾಮ್‌ಖಾನನ್ನು ಕುಶಾಲನಗರದ ಕಡೆ ಕಳಿಸಿ ಕಾಡುಮೇಡುಗಳಲ್ಲಿದ್ದ ಜನರನ್ನು ಅಯ್ಯಂಗೇರಿ ಗ್ರಾಮದಲ್ಲಿರುವ ದೇವರುಪರಂಬಿನಲ್ಲಿ ಸೇರಿಸುವ ಏರ್ಪಾಡು ಮಾಡುತ್ತಾನೆ. ಅಲ್ಲಿ ಅವರನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡುತ್ತಲೇ ಅವರೆಲ್ಲರನ್ನು ಸಾಮೂಹಿಕ ಮತಾಂತರ ಮಾಡಿ ಶ್ರೀರಂಗಪಟ್ಟಣಕ್ಕೆ ಎತ್ತಿಕೊಂಡು ಹೋಗುವನು. ಜಿ. ರಿಕ್ತರನು ಮತಾಂತರ ಹೊಂದಿದ ಕೊಡಗಿನ ಜನರ ಸಂಖ್ಯೆ ೮೫,೦೦೦ ಎಂದರೆ ಎಂ.ಎನ್. ಶ್ರೀನಿವಾಸ್ ಹಾಗೂ ಕೆ.ಕೆ. ಸುಬ್ಬಯ್ಯನವರು ಆ ಸಂಖ್ಯೆ ೧೨,೦೦೦ ಎಂದಿದ್ದಾರೆ ಎನ್ನುವುದು ಗಮನಾರ್ಹವಾಗಿದೆ. ನಂತರ ಕೊಡಗಿನಲ್ಲಿ ಪಾಳು ಬಿದ್ದ ವ್ಯವಸಾಯ ಕ್ಷೇತ್ರಗಳನ್ನು, ಭೂ ಹಿಡುವಳಿಗಳನ್ನು ಮೈಸೂರು ಮೂಲದ ಮುಸಲ್ಮಾನರಿಗೆ ಜಹಗೀರು ನೀಡಿದನು. ಹಾಗೆಯೇ ಕೊಡಗರ ಭೂಮಿ ವ್ಯವಸಾಯ ಮಾಡುತ್ತಿದ್ದ ಹೊಲೆಯರನ್ನು (ಜಮ್ಮದಾಳು) ಅವರಿಗೆ ಕೊಟ್ಟನು. ಕೃಷಿ ಕಾರ್ಮಿಕರ ಸಂಖ್ಯೆ ಕಡಿಮೆ ಇದ್ದ ಕಾರಣ ಬಳ್ಳಾರಿಯ ಅದವಾನಿ ಸೀಮೆಯಿಂದ ರೈತರನ್ನು ಕರೆಸಿ ಇಲ್ಲಿಯ ಭೂಮಿಯನ್ನು ಸಾಗುವಳಿ ಮಾಡಲು ವ್ಯವಸ್ಥೆ ಮಾಡಿದನು. ಈ ಬಾರಿಗೆ ಕೊಡಗಿನ ಉಸ್ತುವಾರಿಯನ್ನು ನೋಡಲು ನಾಗಪ್ಪಯ್ಯ ಎಂಬ ಬ್ರಾಹ್ಮಣನನ್ನು (ಇವನು ಹೈದರನ ಅಮಲ್ದಾರನಾಗಿದ್ದ ಸುಬ್ಬರಸಯ್ಯನ ಸೋದರ ಸಂಬಂಧಿ) ಎಂಬವನನ್ನು ನೇಮಿಸಿದನು. ಆದರೆ ನಾಗಪ್ಪಯ್ಯ ಅವನನ್ನು ವಂಚಿಸಿ ಟಿಪ್ಪುವಿನ ಸೈನಿಕರಿಂದ ತಪ್ಪಿಸಿಕೊಂಡು ಮಲಬಾರಿನ ಕೋಟೆ ರಾಜನ ಬಳಿ ಆಶ್ರಯಕ್ಕಾಗಿ ಓಡಿ ಹೋಗುವನು.

ಈ ಎಲ್ಲಾ ಘಟನೆಗಳ ನಡುವೆ ಇಸ್ಮಾಯಿಲ್‌ಖಾನ್ ಹಾಗೂ ಹೊಂಬಾಳೆ ನಾಯಕ ಎನ್ನುವ ಟಿಪ್ಪುವಿನ ಸರದಾರರ ನೆರವಿನಿಂದ ೧೭೮೮ ರಲ್ಲಿ ವೀರರಾಜ ತನ್ನ ಪತ್ನಿ, ಇಬ್ಬರು ತಮ್ಮಂದಿರಾದ ಲಿಂಗರಾಜ ಹಾಗೂ ಅಪ್ಪಾಜಿ ಇವರೊಂದಿಗೆ ಪಿರಿಯಾಪಟ್ಟಣದಿಂದ ಕೊಡಗಿಗೆ ತಪ್ಪಿಸಿಕೊಂಡು ಹೋಗುತ್ತಾನೆ (ವೀರರಾಜ ಅಧಿಕಾರವನ್ನು ಮತ್ತೆ ಗಳಿಸಿಕೊಂಡ ಮೇಲೆ ಹೊಂಬಾಳೆ ನಾಯಕನಿಗೆ ಅಳಿದು ಹೋದ ಬೋನಿಕ ಮುತ್ತಣ್ಣನ ಎರಡುಸಾವಿರ ಭಟ್ಟಿಭೂಮಿಯನ್ನು ಕಾಂತೂರು ಮೂರ್ನಾಡುವಿನಲ್ಲಿ ನೀಡಿ ಅವನನ್ನು ತನ್ನ ದಿವಾನನ್ನಾಗಿ ನೇಮಿಸಿಕೊಂಡನು. ಇಸ್ಮಾಯಿಲ್ ಖಾನನಿಗೆ ಚೆವ್ವತ್ತುನಾಡು ಕುಂದಗ್ರಾಮದಲ್ಲಿ ಸಾವಿರ ಭಟ್ಟಿ

ಭೂಮಿಯನ್ನು ಜಹಗೀರಾಗಿ ನೀಡಿದನು). ಮತ್ತೆ ಅಧಿಕಾರವನ್ನು ಪಡೆಯುವ ಸಂದಭ್ದಲ್ಲಿ ವೀರರಾಜನು ತನ್ನ ಪರಿವಾರದವರ ಸುರಕ್ಷತೆಗಾಗಿ ನಾಲ್ಕು ನಾಡಿನಲ್ಲಿ "ಅರಮನೆ"ಯೊಂದನ್ನು ಕಟ್ಟುವನು. ಟಿಪ್ಪು ಮತ್ತು ವೀರರಾಜನ ನಡುವಣ ಯುದ್ಧವನ್ನು ೧೯ನೇ ಶತಮಾನದ ರಿಕ್ತರಿನಿಂದ ೨೦ನೇ ಶತಮಾನದ ಐ.ಮಾ. ಮುತ್ತಣ್ಣನವರೆಗಿನ ಹೆಚ್ಚಿನ ವಿದ್ವಾಂಸರು "ಹಿಂದು-ಮುಸ್ಲಿಂ" ಹೋರಾಟವೆಂದೇ ಕರೆದದ್ದನ್ನು ನಾವಿಲ್ಲಿ ಗಮನಿಸಬೇಕು. ಹೈದರ ಮತ್ತು ಟಿಪ್ಪುವು ಕೊಡಗಿನ ಆಡಳಿತ ನೋಡಿಕೊಳ್ಳಲು ಸುಬ್ಬರಸಯ್ಯ ಮತ್ತು ನಾಗಪ್ಪಯ್ಯ ಎಂಬವರನ್ನು ನೇಮಿಸಿದ್ದು ಅಥವಾ ವೀರರಾಜನು ಬಂದೀಖಾನೆಯಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡಿದ ಇಸ್ಮಾಯಿಲ್‌ಖಾನನ ಪ್ರಕರಣ ಇಲ್ಲಿ ಮುಖ್ಯವಾಗುತ್ತದೆ. (ಹೈದರ್‌ಟಿಪ್ಪುವಿಗೆ ಪೂರ್ಣಯ್ಯ ಪಂಡಿತ ಎನ್ನುವ ಬ್ರಾಹ್ಮಣ ಪ್ರಧಾನಿಯಾಗಿದ್ದ ಕಥೆಯೂ ಇಲ್ಲಿ ಮುಖ್ಯವಾಗಿದೆ) ಏಕೆಂದರೆ ಹೈದರ್-ಟಿಪ್ಪು ಮುಸಲ್ಮಾನರಾದರೂ ಬ್ರಾಹ್ಮಣರನ್ನೇ ಆಡಳಿತಾತ್ಮಕ ವಿಚಾರಗಳಿಗೆ ಸಂಬಂಧಿಸಿದಂತೆ ನೆಚ್ಚಿಕೊಂಡಿರುವುದು ಕಂಡುಬರುತ್ತದೆ. ಒಂದು ವೇಳೆ ಮುಸ್ಲಿಂ-ಹಿಂದೂ 'ದ್ವೇಷ' ಇದ್ದದ್ದೇ ಆಗಿದಿದ್ದರೆ ಇಸ್ಮಾಯಿಲ್ ಖಾನ ವೀರರಾಜನಿಗೆ ಸಹಾಯ ಮಾಡುವುದಾಗಲಿ ಅಥವಾ ವೀರರಾಜ ಅವನಿಗೆ ಜಹಗೀರು ಕೊಡುವುದಾಗಲಿ ಸಾಧ್ಯವಿರಲಿಲ್ಲ. ೧೭೮೮ರಿಂದ ೧೭೯೦ ರವರೆಗೆ ವೀರರಾಜನನ್ನು ಬಂಧಿಸುವ ಪ್ರಯತ್ನವನ್ನು ಟಿಪ್ಪುವಿನ ಸೈನಿಕರು ಮಾಡಿದರೂ ಅದರಲ್ಲಿ ಟಿಪ್ಪುವು ಸಫಲನಾಗಲಿಲ್ಲ. ಆದರೆ ವೀರರಾಜನು ೧೭೮೯ ರಲ್ಲಿ ಕುಶಾಲನಗರದ ಕೋಟೆಯನ್ನು ಹಾಗೂ ಚೆಪ್ಪುನಾಡಿನ ಕೋಟೆಯನ್ನು ವಶಪಡಿಸಿಕೊಂಡು ತನ್ನ ಬಲವರ್ಧಿಸತೊಡಗಿದನು. ೧೭೯೦ರಲ್ಲಿ ವೀರರಾಜನು ಭಾಗಮಂಡಲದ ಕೋಟೆಯನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಸಫಲನಾದನು. ವೀರರಾಜೇಂದ್ರನು ಇದೇ ಸಮಯದಲ್ಲಿ ಹೊಂಬಾಳೆ ನಾಯಕನ ಮೂಲಕ ಟಿಪ್ಪುವಿನ ಕೈಯಲ್ಲಿದ್ದ ತುಳುಸೀಮೆಯ ಭಾಗಗಳನ್ನು ವಶಪಡಿಸಿಕೊಂಡನು. ಹಾಗೆಯೇ ಮಂಡೆಪಂಡ ಅಪ್ಪಯ್ಯ ಹಾಗೂ ನಗರಹಳ್ಳಿ ಪುಟ್ಟೇಗೌಡನ ಮೂಲಕ ಮಂಜರಾಬಾದ್ ಸೀಮೆಯ ಕೆಲವು ಭಾಗಗಳನ್ನು ವಶಪಡಿಸಿಕೊಂಡನು. ಮಂಜರಾಬಾದ್ ಬಳಿಯ ಅರಕೆರೆಯಲ್ಲಿ ಒಂದು ಮಣ್ಣು ಕೋಟೆ ಕಟ್ಟಿಸಿ, ಆ ಠಾಣ್ಯದ ಸರದಾರನಾಗಿ ನಗರಹಳ್ಳಿ ಪುಟ್ಟೇಗೌಡನನ್ನು ರಾಜನು ನೇಮಿಸಿದನು. ಆ ಸೀಮೆಯ ಗಡಿಭದ್ರತೆಯನ್ನು ನೋಡಿಕೊಳ್ಳಲು ಮಂಡೇಪಂಡ ಅಪ್ಪಯ್ಯನನ್ನು ಇವನು ನೇಮಿಸಿದನು.

೧೭೯೧ರ ಏಪ್ರೀಲ್‌ನ ವೇಳೆಗೆ ಮಡಿಕೇರಿ ಕೋಟೆಯೊಂದು ಬಿಟ್ಟು ಮಿಕ್ಕ ಕೋಟೆಗಳೆಲ್ಲವೂ ವೀರರಾಜನ ವಶವಾಗಿದ್ದವು. ಮಡಿಕೇರಿಯನ್ನು ವಶಪಡಿಸಿಕೊಳ್ಳಲು ವೀರರಾಜನು ಮುತ್ತು ಭಟ್ಟ ಎಂಬವನನ್ನು ಕುದುರೆಗಳನ್ನು ಹಾಗೂ ಮತ್ತಿತರ ಸಾಮಾನುಗಳನ್ನು ಖರೀದಿಸಲು ತಲಚೇರಿಗೆ ಕಳಿಸಿದನು. ಆ ಸಂದರ್ಭದಲ್ಲಿ ತಲಚೇರಿಯ ಮುಖ್ಯಾಧಿಕಾರಿಯಾಗಿದ್ದ ರಾಬರ್ಟ್‌ಟೇಲರನು ಮುತ್ತುಭಟ್ಟನ ಮೂಲಕ ಟಿಪ್ಪುವಿನ ವೈರಿಯಾದ ವೀರರಾಜನನ್ನು ಸ್ನೇಹ ಒಪ್ಪಂದಕ್ಕೆ ಹೇಳಿಕಳಿಸುತ್ತಾನೆ. ವೀರರಾಜನಿಗೆ ಬೇಕಾದ ಸರಂಜಾಮುಗಳೆಲ್ಲವನ್ನು ಬ್ರಿಟಿಷರು ಕೊಡಲು ಕೂಡ ಒಪ್ಪಿಕೊಳ್ಳುತ್ತಾರೆ. ಇದಕ್ಕೆ ವೀರರಾಜನು ಸ್ಪಂದಿಸಿ "ಸೂರ್ಯ ಚಂದ್ರ" ಇರುವ ತನಕ ಈ ಮಿತ್ರತ್ವ ಸ್ಥಿರವಾಗಿರುತ್ತದೆ ಎಂದು ಉತ್ತರಿಸುವನು.

ಈ ಹೊತ್ತಿಗಾಗಲೆ ಟಿಪ್ಪುವಿಗೆ ತಿರುವಾಂಕೂರು ರಾಜ, ಮರಾಠ ಅರಸರು ಮತ್ತು ನಿಜಾಮ ಇವರೆಲ್ಲರೂ ಶತ್ರುಗಳಾಗಿದ್ದರು. ಬೊಂಬಾಯಿ ಸೈನ್ಯವೂ ಹಡಗಿನಲ್ಲಿ ತಲಚೇರಿಗೆ ಬಂದಿಳಿದು ಕೊಡಗನ್ನು ಹಾದು ಮೈಸೂರಿಗೆ ಹೋಗಬೇಕಾಗಿದ್ದರಿಂದ ಕೊಡಗು ಬ್ರಿಟಿಷರಿಗೆ ಅನಿವಾರ್ಯವಾದ ಸ್ಥಳವಾಗಿತ್ತು. ಈ ಸಂದರ್ಭದಲ್ಲೇ ವೀರರಾಜನನ್ನು ತಲಚೇರಿಗೆ ಕರೆಸಿ ರಾಬರ್ಟ್‌ಟೈಲರನು ಸನ್ಮಾನವನ್ನು ಮಾಡುವನು. ತಲಚೇರಿಯಲ್ಲಿ ಕೊಡಗು ರಾಜನಿಗೂ ಹಾಗೂ ಬ್ರಿಟಿಷರಿಗೆ ಮೈತ್ರಿ ಒಪ್ಪಂದವಾಯಿತು. ೧೭೯೦ನೇ ಇಸವಿ ಅಕ್ಟೋಬರ್ ೧೬ರಂದು ಈ ಮೈತ್ರಿಗೆ ಉಭಯ ಕಡೆಗಳಿಂದಲೂ ಸಹಿ ಹಾಕಲಾಯಿತು.

ವೀರರಾಜನ ಮುಂದೆ ಇದ್ದಂತಹ ಒಂದೇ ಒಂದು ಗುರಿ ಎಂದರೆ ಅದು ಮಡಿಕೇರಿಯನ್ನು ವಶಮಾಡಿಕೊಳ್ಳುವುದೇ ಆಗಿತ್ತು. ಈ ಕಾರಣದಿಂದ ಅವನು ಜಾಫರ್ ಕುಲಬೇಗನ ನೇತೃತ್ವದಲ್ಲಿದ್ದ ಮಡಿಕೇರಿ ಕೋಟೆಗೆ ಆಹಾರ ಧಾನ್ಯಗಳು ಹೋಗದಂತೆ ತಡೆಯುವನು. ಇಂಥಹ ಸಂದರ್ಭದಲ್ಲಿ ಟಿಪ್ಪುವು ಖಾದರ್‌ಖಾನನ ಕೈಸಗಿ ಎಂಬ ಸೈನ್ಯಾಧಿಕಾರಿ ಜೊತೆಗೆ ಸೈನ್ಯವನ್ನು, ಆಹಾರವನ್ನು ಮಡಿಕೇರಿಗೆ ಕಳಿಸುವನು. ರಸ್ತೆಯಲ್ಲೇ ವೀರರಾಜನ ಸೈನಿಕರು ಅವನನ್ನು ತಡೆಯುವ ಸಂದರ್ಭದಲ್ಲಿ ಖಾನನು ತನನ್ ೫೦೦ ಸಂಗಡಿಗರನ್ನು ಕಳೆದುಕೊಳ್ಳುವನು. ವೀರರಾಜನ ಸೈನಿಕರು ಖಾದರ್‌ಖಾನನ್ನು ಬಂಧಿಸುವರು. ಯಾವುದೇ ಕಾರಣಕ್ಕೂ ಖಾದರ್‌ಖಾನನನ್ನು ಕೊಲ್ಲಬಾರದೆಂದು ವೀರರಾಜನು ತನ್ನ ಸೈನಿಕರಿಗೆ ತಾಕೀತು ಮಾಡಿದ್ದನು. ಅದಕ್ಕೊಂದು ಬಲವಾದ ಕಾರಣವೂ ಇದ್ದಿತು. ಟಿಪ್ಪುವು ವೀರರಾಜನ ಕುಟುಂಬದವರನ್ನು ಗೊರೂರಿನಿಂದ ಪಿರಿಯಾಪಟ್ಟಣ ಕೋಟೆಗೆ ಸಾಗಿಸುವ ಸಂದರ್ಭದಲ್ಲಿ ವೀರರಾಜನ ಮೂವರು ಸಹೋದರಿಯನ್ನು ತನ್ನ ಜನಾನಕ್ಕೆ ಕಳಿಸುವನು. ಅವರಲ್ಲಿ ದೇವಮ್ಮಾಜಿಗೆ ಮೆಹ್ತಾಬ್ (ಚಂದ್ರ) ಎಂದೂ ಹಾಗೂ ನೀಲಮ್ಮಾಜಿಗೆ ಅಫ್ತಾಬ್(ಸೂರ್ಯ) ಎಂದೂ ನಾಮಕರಣ ಮಾಡಿದ. ಮೂರನೆಯವಳನ್ನು ತನ್ನ ಆಪ್ತ ಖಾದರ್‌ಖಾನನಿಗೆ ಬಹುಮಾನವಾಗಿ ನೀಡಿದನು. ಆದರೆ ಖಾದರ್‌ಖಾನನು ಅವಳನ್ನು ಬಹಳ ಗೌರವದಿಂದ ಕಂಡು, ಅವಳ ಜಾತಿಯವಳನ್ನೇ ಪರಿಚಾರಿಕೆಯನ್ನಾಗಿ ನೇಮಿಸಿದನು. ವೀರರಾಜನು ಪಿರಿಯಾಪಟ್ಟಣದಿಂದ ತಪ್ಪಿಸಿಕೊಂಡು ಹೋದ ಸಂದರ್ಭದಲ್ಲಿ ಖಾದರ್‌ಖಾನನು ರಹಸ್ಯವಾಗಿ ವೀರರಾಜನ ತಂಗಿಯನ್ನು ವೀರರಾಜನ ಬಳಿಗೆ ಕಳಿಸಿಕೊಡುವನು. ತನ್ನ ತಂಗಿಯ "ಮಾನ" ಉಳಿಸಿದ ಖಾದರ್‌ಖಾನನಿಗೆ ಜೀವಭಿಕ್ಷೆ ದೊರೆತದ್ದು ಹೀಗೆ. ಬರಿಗೈಯಲ್ಲಿ ವಾಪಾಸ್ಸು ಹೋದರೆ ಸುಲ್ತಾನ ತನ್ನನ್ನು ಮತ್ತು ತನ್ನ ಪರಿವಾರದವರನ್ನು ಕೊಂದುಬಿಡುವನು ಎಂದು ರಾಜನಲ್ಲಿ ವಿನಂತಿಸಿದಾಗ ಖಾದರ್‌ಖಾನನನ್ನು ತನ್ನ ಆಹಾರ -ಸರಂಜಾಮು ಸಮೇತ ಮಡಿಕೇರಿಗೆ ಕಳಿಸಿಕೊಡುವನು. ಆಹಾರ ಸಾಮಗ್ರಿಗಳು ಮುಗಿದ ನಂತರ ಮಡಿಕೇರಿ ಕೋಟೆಯ ಕಿಲ್ಲೇದಾರ ಜಾಫರ್‌ಕುಲಿಬೇಗನು ಸುಲ್ತಾನ ಸಾಮಾನು ಸರಂಜಾಮು, ಯುದ್ಧೋಪಕರಣಗಳನ್ನು ರಾಜನಿಗೆ ಒಪ್ಪಿಸಿ ಶ್ರೀರಂಗಪಟ್ಟಣಕ್ಕೆ ವಾಪಾಸ್ಸು ಹೊಡುವರು. ಆ ಹೊತ್ತಿನಲ್ಲಿ ಮೂರು ತಿಂಗಳಿಂದ ಸಂಬಳವಿಲ್ಲದೆ ಪರದಾಡುತ್ತಿದ್ದ ಟಿಪ್ಪುವಿನ ಸೈನಿಕರಿಗೆ ಒಂದು ಸಾವಿರ ವರಹವನ್ನು ಇನಾಮ್‌ಆಗಿ ವೀರರಾಜನು ನೀಡಿದ್ದು ಗಮನಾರ್ಹವಾಗಿದೆ. ಹೀಗೆ ಅನಾಯಾಸವಾಗಿ ಮಡಿಕೇರಿ ಕೋಟೆ ವೀರರಾಜನ ಕೈವಶವಾಯಿತು. ಟಿಪ್ಪುವಿನ ಮರಣಾನಂತರ ವೀರರಾಜನು ೧೮೦೫ನೇ ಇಸವಿಯಲ್ಲಿ ಖಾದರ್‌ಖಾನನ ಕೈಸಗಿಗೆ ಅಮ್ಮತ್ತಿನಾಡು ಬಳಗುಂದ ಗ್ರಾಮದಲ್ಲಿ ೨೫೦೦ ಭಟ್ಟಿ ಭೂಮಿ (ನೂರ ಭಟ್ಟಿಯು ಮೂರು ಎಕರೆಗೆ ಸಮ)ಯನ್ನು ಹಾಗೂ ೫೦೦ ರೂಪಾಯಿ ಮಾಶಾಸನವನ್ನು ನೀಡುವನು. ರೂ. ೧೨೦ ಅನ್ನು ಕುದುರೆ ವೇತನವನ್ನು ಆತ ನೀಡುತ್ತಿದ್ದನು. ಈ ವೇತನಗಳನ್ನು ೧೯೨೧ನೇ ಇಸವಿಯವರೆಗೂ ಸಲ್ಲುತ್ತಿದ್ದವೆಂದು ಡಿ.ಎನ್. ಕೃಷ್ಣಯ್ಯನವರು ಬರೆದಿದ್ದಾರೆ. ಖಾದರ್‌ಖಾನನಿಗೆ ತೋರಿಸಿದ ಔದಾರ್ಯ ಪ್ರಸಂಗವು ಬ್ರಿಟಿಷರಿಗೆ ವೀರರಾಜನ ಬಗ್ಗೆ ಸಂಶಯ ಉಂಟು ಮಾಡಿತು. ಆದರೆ ವೀರರಾಜನು ಬ್ರಿಟಿಷರನ್ನು ಸಮಾಧಾನ ಪಡಿಸಿ ಅವರ ವಿಶ್ವಾಸವನ್ನು ಸಂಪಾದಿಸುವಲ್ಲಿ ಸಫಲನಾಗುವನು.

ಮಡಿಕೇರಿಯನ್ನು ವಶಪಡಿಸಿಕೊಂಡ ವೀರರಾಜನಿಗೆ ಇದ್ದ ಇನ್ನೊಂದು ಜವಾಬ್ದಾರಿ ಏನೆಂದರೆ ತನಗೆ ಸಹಾಯ ಮಾಡಿದ ಬ್ರಿಟಿಷರೊಂದಿಗೆ ಸೇರಿಕೊಂಡು ಟಿಪ್ಪುವನ್ನು ಕೊನೆಗೊಳಿಸುವುದೇ ಆಗಿತ್ತು. ಈ ಕಾರಣದಿಂದ ಬೊಂಬಾಯಿಯಿಂದ ತಲಚೇರಿ ಮೂಲಕ ಸೈನ್ಯ ತಂದ ಅಬರ್‌ಕ್ರಾಂಟಿಯು ಕೊಡಗಿನ ಮೂಲಕ ಮೈಸೂರಿಗೆ ಹಾದು ಹೋಗಲು ಹೆಗ್ಗಳದ ಘಟ್ಟವನ್ನು ಸರಿಪಡಿಸಿ, ಬ್ರಿಟಿಷರಿಗೆ ಎಲ್ಲಾ ರೀತಿಯಲ್ಲೂ ಸಹಕರಿಸುವನು. ಫಿರಂಗಿ ಎಳೆಯಲು ಎತ್ತುಗಳು ಬೇಕಾದಾದ್ದರಿಂದ ಟಿಪ್ಪುವಿನ ರಾಜ್ಯದಿಂದ ಎತ್ತುಗಳನ್ನು ಲೂಟಿ ಮಾಡಿ ಬ್ರಿಟಿಷರಿಗೆ ನೀಡುವನು. ಅಂಥ ಗಟ್ಟಿಮುಟ್ಟಾದ ಸಾವಿರದ ನೂರ ಹನ್ನೊಂದು ಎತ್ತುಗಳನ್ನು ಅವನು ತಲಚೇರಿಗೆ ಕಳಿಸಿದನು. ಈ ಕಡೆಯಿಂದ ಅಬರ್‌ಕ್ರಾಂಟಿಯು ಪಿರಿಯಾಪಟ್ಟಣದ ಮೂಲಕ

ಶ್ರೀರಂಗಪಟ್ಟಣದ ಮೂಲಕ ದಾಳಿ ಮಾಡಲು ಪ್ರಯತ್ನಿಸಿದರೆ ಆ ಕಡೆಯಿಂದ ಕಾರ್ನವಾಲಿಸನು ಬೆಂಗಳೂರು ಕಡೆಯಿಂದ ದಾಳಿ ಮಾಡಲು ಯತ್ನಿಸುವನು. ೧೭೯೧ ರಲ್ಲಿ ಈ ಹೊತ್ತಿನಲ್ಲಿ ಮಳೆಗಾಲ ಆರಂಭವಾದ್ದರಿಂದ ಅಬರ್‌ಕ್ರಾಂಟಿಯು ತಲಚೇರಿಯಲ್ಲಿ ತನ್ನ ಸೈನ್ಯವನ್ನು ಬಿಟ್ಟು ಬೊಂಬಾಯಿಗೆ ಹಿಂದುರಿಗಿದನು. ೧೭೯೧ರಲ್ಲಿ ಅಬರ್‌ಕ್ರಾಂಟಿಯು ಕೊಡಗಿನ ಬೇಟೋಳಿ-ಮಗ್ಗುಲ ಗ್ರಾಮಗಳು ಸಂಧಿಸುವ ಮೈದಾನದಲ್ಲಿ ಇಳಿದುಕೊಂಡ ಸಂದರ್ಭದಲ್ಲಿ ವೀರರಾಜನು ಅವನನ್ನು ಭೇಟಿ ಮಾಡಿದ್ದನು. ಆ ನೆನಪಿಗೆ ೧೭೯೨ ರಲ್ಲಿ ವೀರರಾಜನು ತನ್ನ ಹೆಸರಿನಲ್ಲಿ ಪೇಟೆಯೊಂದನ್ನು ಅಲ್ಲಿ ಕಟ್ಟಿ ಅದನ್ನು ವೀರರಾಜೇಂದ್ರಪೇಟೆ ಎಂದು ಕರೆದನು. ಈಗ ಆ ಸ್ಥಳವನ್ನು ಜನರು ವಿರಾಜಪೇಟೆ ಎಂದು ಕರೆಯುತ್ತಾರೆ. ಇದೇ ಸಂದರ್ಭದಲ್ಲಿ ಟಿಪ್ಪುವು ವೀರರಾನನ್ನು ಒಲಿಸಿಕೊಳ್ಳಲು ತಾನೇ ಸಹಿಹಾಕಿದ ಪತ್ರವೊಂದನ್ನು ಕಳಿಸಿದನು. ತನ್ನ ಮಂತ್ರಿಗಳಾದ ಮೀರ್ ಸಾದಕ ಹಾಗೂ ಪೂರ್ಣಯ್ಯನವರಿಂದ ಕೂಡ ಪತ್ರಗಳನ್ನು ಬರೆಸಿದನು. ಈ ಮಧ್ಯೆ ಖಾದರ್‌ಖಾನ್‌ಖೈಸಗೆಯನ್ನು ಟಿಪ್ಪುವು ರಾಯಭಾರ ಮಾಡಲು ಕಳಿಸಿದರೂ ವೀರರಾಜನು ಟಿಪ್ಪುವಿನ ಆಹ್ವಾನವನ್ನು ತಿರಸ್ಕರಿಸುತ್ತಾನೆ.

೧೭೯೨ ರಲ್ಲಿ ಜನರಲ್ ಅಬರ್‌ಕ್ರಾಂಟಿಯು ಶ್ರೀರಂಗಪಟ್ಟಣದ ಬಳಿ ಟಿಪ್ಪುವನ್ನು ಸೋಲಿಸಿದನು. ಶ್ರೀರಂಗಪಟ್ಟಣದ ಮೇಲೆ ಇನ್ನೇನು ಅಂತಿಮ ಆಕ್ರಮಣ ಮಾಡಬೇಕೆನ್ನುವ ವೇಳೆಗೆ ಟಿಪ್ಪುವು ಕಾರ್ನವಾಲಿಸ, ಪೇಶ್ವೆ ಹಾಗೂ ನಿಜಾಮ ಇವರ ಬಳಿ ಶಾಂತಿ ಒಪ್ಪಂದವನ್ನು ಮಾಡಿಕೊಂಡನು. ತಾನು ಗೆದ್ದುಕೊಂಡ ಪ್ರದೇಶಗಳನ್ನು, ಕೋಟ್ಯಾಂತರ ರೂಪಾಯಿಗಳನ್ನು ಯುದ್ಧ ಖಚಿಗಾಗಿ ಬ್ರಿಟಿಷ್‌ಮಿತ್ರ ಕೂಟಗಳಿಗೆ ಕೊಡಬೇಕೆಂದೂ, ಸೆರೆಯಾಳಾಗಿರುವ ವಿರೋಧಿ ರಾಜರ ಸೈನಿಕರನ್ನು ಬಿಡಬೇಕೆಂದು ಹಾಗೂ ಅಂತಿಮವಾಗಿ ಈ ಶರತ್ತುಗಳನ್ನು ಪೂರೈಸುವ ಭರವಸೆಗಾಗಿ ತನ್ನಿಬ್ಬರು ಗಂಡುಮಕ್ಕಳಾದ ಮಾಯುಜುದ್ದೀನ್ ಹಾಗೂ ಅಬ್ದುಲ್ ಖಾಲಿಬ್ ಅವರನ್ನು ಒತ್ತೆಯಿಡುವ ೧೭೯೨ರ ಒಪ್ಪಂದಕ್ಕೆ ಟಿಪ್ಪುವು ಒಪ್ಪಿಕೊಳ್ಳುತ್ತಾನೆ. ಈ ಶರತ್ತಿನಲ್ಲಿ ಕೊಡಗಿನ ಪ್ರಸ್ತಾಪ ಇಲ್ಲದ್ದನ್ನು ವೀರರಾಜನು ಆಕ್ಷೇಪಿಸುತ್ತಾನೆ. ವೀರರಾಜನ ಆಕ್ಷೇಪವನ್ನು ಸಹಾನುಭೂತಿಯಿಂದ ಅಬರ್‌ಕ್ರಾಂಟಿಯು ಕಾರ್ನವಾಲಿಸನಿಗೆ ತಿಳಿಸುವ. ಆಗ ಕಾರ್ನವಾಲಿಸನು ಕೊಡಗಿನ ರಾಜನ ಜೊತೆಗೆ ಯುದ್ಧ ಮಾಡದೆ ಸ್ನೇಹದಿಂದಿರಬೇಕೆಂದು ಟಿಪ್ಪುವಿಗೆ ತಾಕೀತು ಮಾಡುವನು. ಆದರೆ ಟಿಪ್ಪುವು ಇದಕ್ಕೆ ಒಪ್ಪದಿದ್ದಾಗ ಕಾರ್ನವಾಲಿಸನು ಟಿಪ್ಪುವಿನ ಕೋಟೆಯನ್ನು ಮುತ್ತಲು ಆರಂಭಿಸಿದನು. ಆಗ ಟಿಪ್ಪು ಸುಲ್ತಾನನು ಮತ್ತೊಮ್ಮೆ ಶಾಂತಿ ಒಪ್ಪಂದಕ್ಕೆ ಒಪ್ಪಿಕೊಳ್ಳುತ್ತಾನೆ. ಆದರೆ ಈ ಒಪ್ಪಂದವು ಬಹಳ ಕಾಲದವರೆಗೆ ನಿಲ್ಲಲಿಲ್ಲ. ಕೊಡಗಿನ ರಾಜನು ಯಾವ ಕಾಲದಲ್ಲಾದರೂ ಬ್ರಿಟಿಷರೊಡನೆ ಸೇರಿ ನನಗೆ ಮುಳುವಾಗುವನೆಂದು ಭಾವಿಸಿದ ಟಿಪ್ಪುವು ತನ್ನ ನಾಲ್ಕು ಜನ ಭಂಟರನ್ನು ವೀರರಾಜೇಂದ್ರನನ್ನು ಕೊಲ್ಲಿಸಲು ಕಳಿಸಿದನು. ಈ ನಾಲ್ವರಲ್ಲಿ ಒಬ್ಬನಾದ ಮುಸ್ಲಿಂ ಯುವಕನು ಈ ವಿಚಾರವನ್ನು ವೀರರಾಜೇಂದ್ರನಿಗೆ ಮೊದಲೇ ತಿಳಿಸಿದ್ದರಿಂದ ಕೊಲೆಗಡುಕರನ್ನು ಮುಂಚಿತವಾಗಿಯೇ ಬಂಧಿಸಲು ಸಾಧ್ಯವಾಯಿತು. ಬದುಕುಳಿದ ವೀರರಾಜೇಂದ್ರನನ್ನು ಇಂಗ್ಲೆಂಡಿನಲ್ಲಿದ್ದ ಈಸ್ಟ್ ಇಂಡಿಯಾ ಕಂಪನಿಯ ಡೈರೆಕ್ಟರುಗಳು ಶ್ಲಾಘಿಸಿರುವುದು ಗಮನಾರ್ಹ. ಇದರೊಂದಿಗೆ ಟಿಪ್ಪುವಿನ ಫ್ರೆಂಚ್ ಸಂಬಂಧಗಳು ಸೇರಿದಂತೆ ಟಿಪ್ಪುವಿನ “ಬ್ರಿಟಿಷ್ ವಿರೋಧಿ” ಚಟುವಟಿಕೆಗಳ ಹಿನ್ನೆಲೆಯಲ್ಲಿ ನಾಲ್ಕನೆಯ ಮೈಸೂರು ಯುದ್ಧವು ನಡೆದು ೧೭೯೯ರಲ್ಲಿ ಟಿಪ್ಪುವು ಮರಣ ಹೊಂದುನು.

ಟಿಪ್ಪುಸುಲ್ತಾನನ ಮರಣಾನಂತರ ಕೊಡಗಿನ ರಾಜನು ತಮಿಳುನಾಡಿನಲ್ಲಿ ಮತ್ತು ಮಹಾರಾಜದುರ್ಗದಿಂದ ಹೆಗ್ಗಡದೇವನ ಕೋಟೆಯವರೆಗೆ ಹಿಡಿದುಕೊಂಡ ಸೀಮೆಗಳನ್ನು ಕಂಪನಿ ಸರಕಾರಕ್ಕೂ ಹಾಗೂ ಮೈಸೂರ್ ರಾಜನಿಗೂ ವಹಿಸಿಕೊಟ್ಟನು. ಆ ಸಂದರ್ಭದಲ್ಲಿ ತನ್ನ ರಾಜ್ಯಕ್ಕೆ ಪರಿಯಾಪಟ್ಟಣ, ಬೆಟ್ಟದಪುರ ಮತ್ತು ಅರ್ಕಲಗೋಡು ಸೀಮೆಗಳನ್ನು ಸೇರಿಸಿ ಹೊಸ ಸರಹದ್ದನ್ನು ನಿರ್ಮಿಸಿಕೊಳ್ಳಬಹುದೆಂದು ಯೋಚಿಸಿದ್ದನು. ಹಾಗೆಯೇ ತುಳುನಾಡಿನಲ್ಲಿ ಹಿಂದೆ ತನ್ನ ರಾಜ್ಯಕ್ಕೆ ಸೇರಿದ್ದ ಅಮರಸುಳ್ಯ ಮಾಗಣೆಗಳ ಜತೆಗೆ ಬೆಳ್ಳಾರೆ

ಮತ್ತು ಮಂಗಳೂರು ತಾಲೂಕಿನವರೆಗಿನ ಸೀಮೆಗಳನ್ನು ಬಿಟ್ಟುಕೊಡಬಹುದೆಂದು ಭಾವಿಸಿದ್ದನು. ಆದರೆ ಅವನ ಅಪೇಕ್ಷೆಯು ಈಡೇರಲಿಲ್ಲ. ಬದಲಿಗೆ ಬೆಳ್ಳಾರೆ ಸುತ್ತಮುತ್ತಲಿರುವ ಹತ್ತಾರು ಗ್ರಾಮಗಳು ಮಾತ್ರ ವೀರರಾಜೇಂದ್ರನ ವಶಕ್ಕೆ ಬರುತ್ತವೆ.

೧೭೯೯ರಲ್ಲಿ ಟಿಪ್ಪುವಿನ ಮರಣದೊಂದಿಗೆ ತುಳು ಪ್ರದೇಶದ ಅನೇಕ ಭಾಗಗಳನ್ನು ವೀರರಾಜೇಮದ್ರನು ವಶಪಡಿಸಿಕೊಂಡನಾದರೂ ಅಲ್ಲೆಲ್ಲಾ ಅವನ ಅಧಿಪತ್ಯವೂ ಮುಂದುವರಿಯಲಿಲ್ಲ. ಆದರೆ ಬ್ರಿಟೀಷರು ವೀರರಾಜನನ್ನು ಪೂರ್ಣ ಪ್ರಮಾಣದ ರಾಜನನ್ನಾಗಿ ಅಂಗೀಕರಿಸಿ, ಅವನನ್ನು ಗೌರವಿಸಿದರು. ಟಿಪ್ಪುವಿನ ಮರಣಾನಂತರ ಅವನ ಮಂತ್ರಿ ಪೂರ್ಣಯ್ಯ ಬ್ರಿಟಿಷರ ಆಳ್ವಿಕೆಯಲ್ಲಿದ್ದ ಮೈಸೂರಿನ ದಿವಾನನಾದನು. ಒಂದರ್ಥದಲ್ಲಿ ವೀರಶೈವನಾದ ವೀರರಾಜನಿಗೂ ಈ ಬ್ರಾಹ್ಮಣ ದಿವಾನನಿಗೂ ಸಂಬಂಧ ಹಿಂದಿನಿಂದಲೇ ಒಳ್ಳೆಯದಿರಲಿಲ್ಲ. ಈ ಕಾರಣಕ್ಕಾಗಿ ಟಿಪ್ಪುವಿನ ಮರಣಾನಂತರ ಕೊಡಗಿಗೆ ದಕ್ಕಬೇಕೆಂದುಕೊಂಡಿದ್ದ ಪಿರಿಯಾಪಟ್ಟಣವು ಮೈಸೂರಿನ ಪಾಲಾಯಿತು. ಇವೆಲ್ಲದರ ನಡುವೆ ವೀರರಾಜನು ೧೭೯೯ರಿಂದ ೧೮೦೯ ರವರೆಗೆ ಕೊಡಗಿನ ಆಡಳಿತಕ್ಕೆ ಒಂದು ಸ್ವರೂಪವನ್ನು ಕೊಟ್ಟನು. ೧೮೦೧ರಲ್ಲಿ ತನ್ನಮೊದಲನೆಯ ಹೆಂಡತಿಯಿಂದ ಪಡೆದ ರಾಜಮ್ಮಾಜಿಯನ್ನು ಗೋವೆಯ ಸೋದೆರಾಜ ಬಸವಲಿಂಗನಿಗೆ ಮದುವೆ ಮಾಡಿಕೊಟ್ಟನು. ೧೮೦೪ರ ವೇಳೆಯಲ್ಲಿ ಬ್ರಿಟಿಷರು ವೀರರಾಜನು ಬ್ರಿಟಿಷ್ ತಮಗೆ ಮಾಡಿದ ಸೇವೆಗೆ ಪ್ರತಿಫಲವಾಗಿ ಮಂಗಳೂರು ಪ್ರದೇಶಕ್ಕೆ (ತುಳು) ಸೇರಿದ ಕೆಲವು ಭಾಗಗಳನ್ನು ಹಿಂದಿರುಗಿಸಿದರು.

ವೀರರಾಜನಿಗೆ ಗಂಡುಮಕ್ಕಳಿರಲಿಲ್ಲ. ಅವನ ಎರಡನೆಯ ಹೆಂಡತಿಗೆ ೪ ಮಂದಿ ಹೆಣ್ಣುಮಕ್ಕಳಿದ್ದರು. ಹೀಗಾಗಿ ಉತ್ತಾರಾಧಿಕಾರಿಯ ಚಿಂತೆ ಅವನನ್ನೂ ಕಾಡತೊಡಗಿತು. ರಾಜಶೇಖರಪ್ಪ, ಶಿಶುಶೇಖರಪ್ಪ ಹಾಗೂ ಚಂದ್ರಶೇಖರಪ್ಪ ಎಂಬ ಮೂರು ಗಂಡುಮಕ್ಕಳು ವೀರರಾಜನು “ಇಟ್ಟುಕ್ಕೊಂಡವಳ” ಪುತ್ರರಾಗಿದ್ದರಿಂದ ಅವರಿಗೆ ರಾಜ್ಯಾಧಿಕಾರ ಸಿಗುವಂತಿರಲಿಲ್ಲ. ಹೀಗಾಗಿ ಆತನೊಂದು ‘ವಿಲ್’ ಬರೆಯುತ್ತಾನೆ. ಅದರ ಪ್ರಕಾರ ನಾಲ್ಕು ಮಂದಿ ಹೆಣ್ಣುಮಕ್ಕಳಲ್ಲಿ ಕಿರಿಯವಳಾದ ದೇವಮ್ಮಾಜಿಯು ತನ್ನ ಮರಣದ ನಂತರ ರಾಣಿಯಾಗಬೇಕು. ಅವಳಿಗೆ ಜನಿಸುವ ಪುತ್ರನಿಗೆ “ವೀರರಾಜ” ಎಂದು ಹೆಸರಿಡಬೇಕು. ಒಂದು ವೇಳೆ ಅವಳಿಗೆ ಗಂಡುಮಕ್ಕಳಿಲ್ಲದಿದ್ದರೆ ಉಳಿದ ಮೂವರು ಪುತ್ರಿಯರಲ್ಲಿ ಹುಟ್ಟು ‘ಗಂಡು’ ರಾಜ್ಯದ ಉತ್ತರಾಧಿಕಾರಿಯಾಗಬೇಕು ಎಂದಿತ್ತು. ಅವನ ಪ್ರೀತಿಯ ರಾಣಿ ಮಹದೇವರಾಣಿ ೧೮೦೭ರಲ್ಲಿ ನಿಧನ ಹೊಂದಿದ್ದರಿಂದಾಗಿ ಅವನು ‘ವಿಲ್’ ಬರೆದನು. ಈ ‘ವಿಲ್’ಗೆ ಬ್ರಿಟಿಷ್ ಅಧಿಕಾರಿಗಳಾದ ಮೈಸೂರಿನ ರೆಸಿಡೆಂಟನಾದ ಕೋಲ್ ಹಾಗೂ, ರಾಜನ ಆರೋಗ್ಯವನ್ನು ನೋಡಿಕೊಳ್ಳುತ್ತಿದ್ದ ಡಾ. ಇಂಗ್ಲೆಡ್ಯೂ ಅವರ ಸಮ್ಮತಿಯಿತ್ತು. ೧೮೦೭ರಿಂದ ೧೮೦೯ರವರೆಗೆ ಅಂದರೆ ವೀರರಾಜನು ಸಾಯುವವರೆಗೆ ತನ್ನ ಅಧಿಕಾರಕ್ಕೆ ಸಂಚಕಾರ ತರುತ್ತಾರೆ ಎಂದು ಸಂಶಯಿಸಿದ ನೂರಾರು ಜನ ಕೊಡಗರನ್ನು ಹಾಗೂ ತನ್ನ ಬಂಧುಗಳನ್ನು ಸಾಯಿಸಿಬಿಡುತ್ತಾನೆ. ತನ್ನ ತಮ್ಮ ಲಿಂಗರಾಜನನ್ನು ಆತ ನಂಬುತ್ತಿರಲಿಲ್ಲ. ಆದರೆ ಲಿಂಗರಾಜನು ವೀರರಾಜನು ಬದುಕಿರುವವರೆಗೂ ವಿಧೇಯನಾಗಿದ್ದನು. ೧೮೦೯ರಲ್ಲಿ ವೀರರಾಜನ ನಿಧನದ ನಂತರ ೧೦ ವರ್ಷದ ಅವನ ಮಗಳು ದೇವಮ್ಮಾಜಿ ಕೊಡಗಿನ ಸಿಂಹಾಸನವನ್ನೇರುವಳು. ೧೮೦೯ರಿಂದ ೧೮೧೧ ರವರೆಗೆ ಲಿಂಗರಾಜನು ಅವಳಿಗೆ ‘ಗಾರ್ಡಿಯನ್’ ಆಗಿ ರಾಜ್ಯದ ಯೋಗಕ್ಷೇಮ ನೋಡಿಕೊಂಡನು. ೧೮೧೧ರ ವೇಳೆಗೆ ಆತನು ಬ್ರಿಟಿಶ್ ಅಧಿಕಾರಿಗಳ ಮನವೊಲಿಸಿ ತಾನೇ ಪೂರ್ಣಪ್ರಮಾಣದ ರಾಜನಾಗುತ್ತಾನೆ. ಹಾಗೆಯೇ ರಾಜ್ಯದ ಆಂತರಿಕ ಆಡಳಿತಕ್ಕೆ ಹೊಸ ರೂಪರೇಖೆಯನ್ನು ನೀಡಿದನು. ೧೮೨೦ರಲ್ಲಿ ಈತನ ಮರಣದ ನಂತರ ಈತನ ಮಗ ಚಿಕ್ಕವೀರರಾಜನು ಕೊಡಗಿನ ರಾಜ್ಯದ ಉತ್ತಾರಾಧಿಕಾರಿಯಾಗುತ್ತಾನೆ. ಆದರೆ, ಇವನಿಗೆ ದೇವಮ್ಮಾಜಿ ಹಾಗೂ ಅವಳ ಗಂಡ ಚೆನ್ನ ಬಸವನ ಮೇಲೆ ಅತೀವ ಸಂಶಯವಿತ್ತು. ಏಕೆಂದರೆ ಎಂದಾದರೂ ಅವರು ತನ್ನ ರಾಜ್ಯಕ್ಕೆ ವಾರಸುದಾರರಾದರೆ ಎನ್ನುವ ಚಿಂತೆ ಅವನನ್ನು ಬಾಧಿಸತೊಡಗಿತ್ತು. ಚೆನ್ನಬಸವ ಮೂಲತಃ

ಸ್ಥಳೀಯ ಕೊಡಗನಾಗಿದ್ದ. ದೇವಮ್ಮಾಜಿಯನ್ನು ಮದುವೆಯಾದ ಮೇಲೆ ಆತ ಲಿಂಗಾಯಿತನಾದ. ಕೊನೆಗೊಂದು ದಿನ ಇವರಿಬ್ಬರನ್ನು ನಾಶಮಾಡಬೇಕೆಂದು ತೀರ್ಮಾನ ತೆಗೆದುಕೊಂಡ ಚಿಕ್ಕವೀರರಾಜನ ವಿಚಾರವು ಈ ದಂಪತಿಗಳಿಗೆ ತಿಳಿಯುತ್ತದೆ. ಹೀಗಾಗಿ ೧೮೩೩ರ ವೇಳೆಗೆ ಈ ದಂಪತಿಗಳು ಕೊಡಗಿನಿಂದ ತಪ್ಪಿಸಿಕೊಂಡು ಬ್ರಿಟಿಷರ ಆಶ್ರಯ ಪಡೆಯುತ್ತಾರೆ. ಬ್ರಿಟಿಷರೂ ಈ ಅವಕಾಶವನ್ನು ಚೆನ್ನಾಗಿ ಉಪಯೋಗಿಸಿಕೊಂಡರು. ಹಳೇ ಒರಿಯಂಟಲಿಸ್ಟರು **(Orientalist)** ಹಾಗೂ ಸಾಮ್ರಾಜ್ಯಶಹಿ ಚರಿತ್ರೆಕಾರರು ವರ್ಣಿಸಿದ ಹಾಗೆ "ಲಿಂಗರಾಜನು ಕ್ರೂರಿಯಾಗಿದ್ದನು; ಕಾಮುಕನಾಗಿದ್ದನು; ಹೆಂಗಸರ ಮೊಲೆ ಹಾಲನ್ನು ಕುಡಿಯುತ್ತಿದ್ದನು; ವ್ಯಭಿಚಾರಿಯಾಗಿದ್ದನು". ಎನ್ನುವ ಕಾರಣಗಳಿಂದಾಗಿ ಕೊಡಗನ್ನು "ಕತ್ತಲಿನಿಂದ" ಪಾರು ಮಾಡಲು ಬ್ರಿಟಿಷರು ತೀರ್ಮಾನಿಸಿದರು.

೧೮೩೪ರ ಏಪ್ರಿಲ್೪ರಂದು ಕೊಡಗನ್ನು ಮುತ್ತಿಗೆ ಹಾಕಲು ಬ್ರಿಗೇಡಿಯರ್ ಲಿಂಡ್ಸೆ ಹಾಗೂ ಅವನ ಸಹಾಯಕ ಕರ್ನಲ್ ಫ್ರೇಸರನ ನೇತೃತ್ವದಲ್ಲಿ ಬ್ರಿಟಿಶರ ಸೈನ್ಯ ಹೊರಡುತ್ತದೆ. ಕೊಡಗಿನ ಸೈನ್ಯವು ಯಾವುದೇ ಹೋರಾಟವಿಲ್ಲದೆ ಶರಣಾಗತವಾಯಿತು. ರಾಜನ ಸುತ್ತಮುತ್ತಲಿದ್ದ ೮-೧೦ ಮಂದಿ ಸತ್ತದ್ದು ಬಿಟ್ಟರೆ ಇದೊಂದು ರಕ್ತರಹಿತ ಬದಲಾವಣೆಯೇ ಸರಿ. ಏಪ್ರಿಲ್ ೫ರಂದು ರಾಜನ ದಿವಾನನಾದ ಅಪ್ಪಾರಂಡ ಬೋಪುವು ತನ್ನ ೪೦೦ ಜನ ಕೊಡಗಿನ ಸೈನಿಕರನ್ನು ಕರೆದುಕೊಂಡು ಕರ್ನಲ್ ಫ್ರೇಸರನಿಗೆ ಶರಣಾಗುವನು. ಹಾಗೆಯೇ ಬ್ರಿಟಿಶ್ ಸೈನ್ಯವನ್ನು ರಾಜಧಾನಿ ಮಡಿಕೇರಿಗೆ ಕರೆದುಕೊಂಡು ಬರುವನು. ಬ್ರಿಟಿಶರು ವೀರರಾಜನನ್ನು ಅವನ ಪತ್ನಿಯರು, ದಾಸಿರಯರೊಂದಿಗೆ ಕಾಶಿಗೆ ಗಡೀಪಾರು ಮಾಡುವರು. ಬ್ರಿಟಿಶರ ಅರಸೊತ್ತಿಗೆ ಶುರುವಾದದ್ದೇ ಹೀಗೆ. ಕರ್ನಲ್ ಫ್ರೇಸರನ ಫರ್ಮಾನಿನೊಂದಿಗೆ ಬ್ರಿಟಿಷರ ಆಡಳಿತ ಅಧಿಕೃತವಾಗಿ ಆರಂಭವಾಗುತ್ತದೆ. ಕೊಡಗಿನ ಮೊದಲ ಬ್ರಿಟಿಷ ಆಡಳಿತಾಧಿಕಾರಿ ಲೆಫ್ಟಿನೆಂಟ್ ಕರ್ನಲ್ ಫ್ರೇಸರನ ಫರ್ಮಾನು ೧೮೩೪ ರ ಮೇ ೭ ರಂದು ಘೋಷಿಸಲ್ಪಟ್ಟಿತು. ಅದರ ಪ್ರಕಾರ "ಕೊಡಗಿನ ಮೂಲನಿವಾಸಿಗಳ ಸರ್ವಸಮ್ಮತವಾದ ತೀರ್ಮಾನದಂತೆ ಕೊಡಗನ್ನು ರಕ್ಷಿಸಲೋಸುಗ ಬ್ರಿಟಿಶರು ಕೊಡಗನ್ನು ತಮ್ಮ ಕಕ್ಷೆಗೆ ತೆಗೆದುಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಇಲ್ಲಿಯವರೆಗೆ ರಾಜ್ಯವಾಳುತ್ತಿದ್ದ ವೀರರಾಜೇಂದ್ರ ಒಡೆಯನ ಅಧಿಕಾರವು ಗೌರವಾನ್ವಿತ ಕಂಪನಿಯ ಕೈಗೆ ಹಸ್ತಾಂತರವಾಗಿದೆ. ಯಾವುದೇ ಕಾರಣಕ್ಕೂ ಮುಂದೆ ಎಂದೆಂದಿಗೂ ಸ್ಥಳೀಯ ಆಡಳಿತಕ್ಕೆ ಅಧಿಕಾರವನ್ನು ಹಸ್ತಾಂತರಿಸುವುದಿಲ್ಲ ಎಂಬುದನ್ನು ಮೂಲನಿವಾಸಿಗಳಿಗೆ ಈ ಮೂಲಕ ಮನದಟ್ಟು ಮಾಡುತ್ತಿದ್ದೇವೆ. ಹಾಗೆಯೆ ಇಲ್ಲಿನ ಜನ ದೈನಂದಿನ (ಸಿವಿಲ್) ಹಾಗೂ ಧಾರ್ಮಿಕ ಆಚರಣೆಗಳನ್ನು ಗೌರವಿಸಲಾಗುತ್ತದೆ. ಇದರೊಂದಿಗೆ ಇಲ್ಲಿನ ಜನರ ರಕ್ಷಣೆ, ಹಿತರಕ್ಷಣೆ ಮತ್ತು ಸಂತೋಷವನ್ನು ಕಾಪಾಡಲು ಬ್ರಿಟಿಶ್ ಸರಕಾರ ಕಟಿಬದ್ಧವಾಗಿದೆ". ಇದರೊಂದಿಗೆ "ಗೋಹತ್ಯೆ"ಯನ್ನು "ನಿಷೇಧ" ಮಾಡಲು ಬ್ರಿಟಿಶರು ಒಪ್ಪಿಕೊಳ್ಳುತ್ತಾರೆ. ಇದರಿಂದಾಗಿ ಸ್ಥಳೀಯರಿಗೆ ಒಂದು ರೀತಿಯ "ಸ್ವಾತಂತ್ರ್ಯ" ಹಾಗೂ ಮನ್ನಣೆ ಸಿಕ್ಕಿತು ಎಂದು ಬಿ.ಡಿ. ಗಣಪತಿಯವರಂಥ ಇಪ್ಪತ್ತನೆ ಶತಮಾನದ ಅನೇಕ ಲೇಖಕರು ಬರೆದಿದ್ದಾರೆ. ಈ ಸಂದರ್ಭದಲ್ಲಿ, ಕೊಡಗಿನಲ್ಲಿ ಆ ಕಾಲದಲ್ಲಿ ನೆಲೆಸಿದ್ದ ಮೋಗ್ಲಿಂಗ್ ಎಂಬ ವಿದ್ವಾಂಸ ಹಾಗೂ ಪಾದ್ರಿಯು ೧೮೫೬ನೆಯ ಇಸವಯಲ್ಲಿ ಕಲ್ಕತ್ತಾ ರಿವ್ಯೂ ಎಂಬ ಜರ್ನಲಿನಲ್ಲಿ ಕೊಡಗಿನ ಚರಿತ್ರೆಗೆ ಸಂಬಂಧಿಸಿದಂತೆ ಕೆಲವು ಉಲ್ಲೇಖಗಳನ್ನು ಮಾಡಿದ್ದಾನೆ. ಅವುಗಳಲ್ಲೊಂದು "ಗೋಹತ್ಯೆ ನಿಷೇಧ" ಕುರಿತದ್ದಾಗಿದೆ. ಆ ಬರಹವು ಗೋಹತ್ಯೆ ನಿಷೇಧವು ಆ ಹೊತ್ತಿನಲ್ಲಿ ಕೇವಲ ಮಡಿಕೇರಿಯಲ್ಲಿ ಚಾಲ್ತಿಯಲ್ಲಿತ್ತು ಎಂದು ತಿಳಿಸುತ್ತದೆ. ಗೋಮಾಂಸಕ್ಕಾಗಿ ಯಾವಾಗಲೂ ಹಾತೊರೆಯುತ್ತಿದ್ದ ಯೂರೋಪಿಯನ್ ಸೈನಿಕರ ಹೊಟ್ಟೆಗೆ ಗೋಮಾಂಸವನ್ನು ಮಡಿಕೇರಿಯಿಂದ ಇಪ್ಪತ್ತು ಮೈಲು ದೂರವಿದ್ದ ಫ್ರೇಸರ್‌ಪೇಟೆಯಿಂದ ಪೂರೈಸಲಾಗುತ್ತಿತ್ತು ಎಂದು ಮೋಗ್ಲಿಂಗ್ ಬರೆದಿದ್ದಾರೆ. ಹೀಗಾಗಿ "ಗೋಹತ್ಯೆ ನಿಷೇಧ"ವು ಅನುಷ್ಠಾನಗೊಳ್ಳಲಿಲ್ಲ. ಜನರು ಕೂಡ ಇದನ್ನು ಕಂಡು ಕಾಣದಂತೆ ಒಪ್ಪಿಕೊಂಡರು. ಒಟ್ಟಿನಲ್ಲಿ ಹಾಲೇರಿ ಅರಸರ ಆಳ್ವಿಕೆ ಒಂದು ತೆರೆ ಬಿದ್ದಿತು. ೧೮೩೪ರ ನಂತರ ಕೊಡಗರ ಹಾಗೂ ಬ್ರಿಟಿಷರ ಸಾರಥ್ಯದಲ್ಲಿ ರಾಜ್ಯಾಧಿಕಾರವು ಮುಂದುವರಿಯಿತು. ಕೊಡಗು ರಾಜ್ಯವು ಬೆಂಗಳೂರಿನಲ್ಲಿ ಕೇಂದ್ರ

ಕಚೇರಿಯಲ್ಲಿ ಹೊಂದಿದ್ದ ಚೀಫ್ ಕಮಿಷನರ್‌ನ ನೇರ ಆಳ್ವಿಕೆಯಲ್ಲಿತ್ತು. ಅವನ ಆಜ್ಞಾವರ್ತಿಯಾಗಿ ಮಡಿಕೇರಿಯಲ್ಲಿ ನೆಲೆಸಿದ್ದ ಯುರೋಪಿಯನ್‌ಕಮಿಷನರ್‌ಇರುತ್ತಿದ್ದ. ಇವನಿಗೆ ಇಬ್ಬರು ಅಸಿಸ್ಟೆಂಟ್ ಕಮಿಷನರ್‌ಗಳಿದ್ದರು. ಇವರಿಬ್ಬರೂ ಕೊಡಗಿನ ಆಂತರಿಕ ವ್ಯವಹಾರವನ್ನು ನೋಡಿಕೊಳ್ಳಲು ಸಹಕಾರಿಯಾಗಿದ್ದರು. ಇವರನ್ನು ಮೊದಲನೆಯ ಹಾಗೂ ಎರಡನೆಯ ಅಸಿಸ್ಟೆಂಟ್ ಕಮಿಷನರ್‌ಗಳೆಂದು ಕರೆಯಲಾಗುತ್ತಿತ್ತು. ಮೊದಲನೆಯ ಅಸಿಸ್ಟೆಂಟ್ ಕಮಿಷನರಾಗಿ ಯಾವಾಗಲೂ ಒಬ್ಬ ಯುರೋಪಿಯನ್ ಇರುತ್ತಿದ್ದನು. ಆದರೆ ಎರಡನೆಯ ಅಸಿಸ್ಟೆಂಟ್ ಕಮಿಷರನ್ನಾಗಿ ಒಬ್ಬ "ಕೊಡವ"ನೇ ಆಗಿರಬೇಕೆಂಬ ಒಪ್ಪಂದವು ಭಾರತವು ಸ್ವಾತಂತ್ರ್ಯ ವಾಗುವವರೆಗೂ ಚಾಲ್ತಿಯಲ್ಲಿತ್ತು.

* * *

ವೀರರಾಜನ ಗಡೀಪಾರಿನ ನಂತರ ಕೊಡಗಿನ ಗದ್ದುಗೆಯ ಬಗ್ಗೆ ಆಸೆ ಇರಿಸಿಕೊಂಡವರಲ್ಲಿ ಪ್ರಮುಖನಾದವನು ಚೆನ್ನಬಸವ. ರಾಜನ ಗಡೀಪಾರು ಆಗುವವರೆಗೆ ತನ್ನ ಪತ್ನಿಯೊಂದಿಗೆ ಬೆಂಗಳೂರಿನಲ್ಲಿದ್ದ ಚೆನ್ನಬಸವನು ಅಪ್ಪಂಗಳದಲ್ಲಿದ್ದ ತನ್ನ 'ಅರಮನೆ' ವಾಪಾಸ್ಸಾಗುವನು. ಅರಸನ ವಂಶಜರಲ್ಲಿ ಉಳಿದುಕೊಂಡವರಲ್ಲಿ ತಾನೊಬ್ಬನೇ ಎಂದುಕೊಂಡ ಅವನು ತನ್ನನ್ನು 'ಅರಸು' ಎಂದೇ ಕರೆದುಕೊಳ್ಳಲಾರಂಭಿಸಿದನು. ಅಪ್ಪಂಗಳದಲ್ಲಿರುವ ತನ್ನ ಅರಮನೆ 'ಕೊಟ್ಟಿಗೆ'ಯ ರೀತಿಯಲ್ಲಿರುವುದರಿಂದ ತನಗೆ ಮಡಿಕೇರಿ, ಹಾಲೇರಿ ಅಥವಾ ನಾಲ್ಕು ನಾಡಿನಲ್ಲಿರುವ ಅರಮನೆಗಳಲ್ಲೊಂದನ್ನು ನೀಡಬೇಕೆಂದು ಬ್ರಿಟಿಷರನ್ನು ಬೇಡಿಕೊಂಡನು. ಹಾಗೆಯೇ ಈ ಹಿನ್ನಲೆಯಲ್ಲಿ ತನ್ನನ್ನು ರಾಜನನ್ನಾಗಿ ಮುಂದುವರಿಸಬೇಕೆಂದೂ ಬ್ರಿಟಿಷರನ್ನು ಗೋಗರೆಯತೊಡಗಿದನು. ಆದರೆ ಬ್ರಿಟಿಷರ ಹಿಂದೆ ನಿಂತ ಕೊಡವ ಮುಖಂಡರು ಚೆನ್ನಬಸವನಿಗೇನಾದರೂ ಈ ರೀತಿಯ ಸ್ಥಾನಮಾನ ನೀಡಿದರೆ ರಾಜ್ಯದಲ್ಲಿ ಮತ್ತೆ "ಕ್ಷೋಭೆ" ಉಂಟಾಗುವುದು ಖಂಡಿತಾ ಎಂದು ಬ್ರಿಟಿಷರ ಮನ ಒಲಿಸುವಲ್ಲಿ ಸಫಲರಾದರು.

ಚಿಕ್ಕವೀರರಾಜನಿಗೆ ಬಹಳ ಆಪ್ತನಾಗಿದ್ದ "ಕುಂಟ" ಬಸವ ಎನ್ನುವ ದಿವಾನ ಕೊಡವರ ನಡುವೆ ಅಪ್ರಿಯನಾಗಿದ್ದನು. ಇವನು ಕೆಳಜಾತಿಯಿಂದ ಬಂದ ನಾಯಿ ನೋಡುವ ಹುಡುಗನಾಗಿದ್ದವನು. ನಂತರ ಬೇರೆ ಬೇರೆ ಹಂತಗಳಲ್ಲಿ ಮೇಲೇರಿ, ಕೊನೆಗೆ ರಾಜನಿಗೆ ಆಪ್ತನಾಗಿ ರಾಜ್ಯಾಧಿಕಾರದ ಪ್ರಮುಖ ಬಿಂದುವಾಗಿದ್ದವನು. ಈ ಹಿನ್ನೆಲೆಯಿಂದಾಗಿ ಪ್ರಬಲ ಜಾತಿಗಳಿಗೆ ಸೇರಿದ ದಿವಾನರಾದ ಬೋಪು ಹಾಗೂ ಪೊನ್ನಪ್ಪ ಅವರುಗಳಿಗೆ ಬಸವನನ್ನು ಕಂಡರೆ ಅಷ್ಟಕಷ್ಟೆ ಇತ್ತು. ಬ್ರಿಟಿಷರು ಕೊಡಗನ್ನು ಆಕ್ರಮಣ ಮಾಡುವ ಹೊತ್ತಿಗೆ ಇವನ ಕೊಲೆಯಾಗುತ್ತದೆ. ಚಿಕ್ಕವೀರರಾಜನೇ ಅವನನ್ನು ಕೊಲೆಮಾಡಿದನೆಂಬ ಪ್ರತೀತಿ ಕೂಡ ಇದೆ. ಬ್ರಿಟಿಷರು ಬಂದ ಮೇಲೆ ಬೋಪು ಮತ್ತು ಪೊನ್ನಪ್ಪ ಇವರುಗಳು ದಿವಾನರಾಗಿಯೆ ಮುಂದುವರಿದು, ಸಕಲ ಅಧಿಕಾರಗಳನ್ನು ಹಾಗೂ ಆಸ್ತಿಪಾಸ್ತಿಗಳನ್ನು ಗಳಿಸಿಕೊಳ್ಳುತ್ತಾರೆ. ಬದುಕಿ ಉಳಿದಿದ್ದ ಬ್ರಾಹ್ಮಣ ಸಮುದಾಯದ ಲಕ್ಷ್ಮೀನಾರಾಯಣ ಎನ್ನುವ ದಿವಾನನಿಗೆ ಈ ಸಂದರ್ಭದಲ್ಲಿ ಯಾವ ಅಧಿಕಾರವೂ ಸಿಗುವುದಿಲ್ಲ. ಹೀಗಾಗಿ ಅವನು ಸುಳ್ಯ-ಪುತ್ತೂರಿನ "ಗೌಡರನ್ನು ಬ್ರಿಟಿಶರ ವಿರುದ್ಧ ಎತ್ತಿ ಕಟ್ಟಿದ" ಎಂದು ರಿಕ್ತರ್ ಬರೆದಿದ್ದಾರೆ.

ವಾಸ್ತವವಾಗಿ, ಬ್ರಿಟಿಶರು ಕೊಡಗನ್ನು ಆಕ್ರಮಿಸಿಕೊಂಡ ಮೇಲೆ ಕೊಡಗಿಗೆ ಸೇರಿದ್ದ ಅಮರಸುಳ್ಯ ಪುತ್ತೂರು ಮತ್ತು ಬಂಟ್ವಾಳವನ್ನು ಮಂಗಳೂರಿನ ಬ್ರಿಟಿಶರ ವಶಕ್ಕೆ ಒಪ್ಪಿಸುವರು. ಸಮಸ್ಯೆ ಆರಂಭವಾದದ್ದೇ ಇಲ್ಲಿಂದ ಎನ್ನುವುದು ನಾನು ಹೇಳಲಿರುವ ಅಮರ ಸುಳ್ಯ "ದಂಗೆ"ಗೆ ಪೂರಕವಾದ ಕಾರಣವಾಗಿದೆ. ಕೊಡಗಿನ ಆಡಳಿತದಲ್ಲಿ ಈ ಭಾಗದ ರೈತರು ಎಲ್ಲರಂತೆ ತಮ್ಮಲ್ಲಿರುವ ವಸ್ತು-ಆಹಾರ ಧಾನ್ಯಗಳನ್ನು ಕಂದಾಯವೆಂದು ಪಾವತಿಸುತ್ತಿದ್ದರು. ಆದರೆ ಮಂಗಳೂರಿನ ಆಡಳಿತವು ಅವರಿಂದ "ಹಣ"ದ ರೂಪದಲ್ಲಿ "ಕಂದಾಯ" ಪಡೆಯುತ್ತಿತ್ತು. ಅದು ಕೂಡ ಬಹಳ ದೊಡ್ಡ ಮೊತ್ತವಾಗಿತ್ತು. ಇದರ ವಿರುದ್ಧ ಅನೇಕ ಬಾರಿ ಅಧಿಕಾರಿಗಳಿಗೆ ಪುಕಾರು ನೀಡಿದರೂ, ಸರಕಾರ ನಿರ್ಲಿಪ್ತವಾಗಿತ್ತು. ಕೊನೆಗೊಂದು ದಿನ ಇಲ್ಲಿನ

ರೈತರು ದಂಗೆಯೆದ್ದರು. ದಂಗೆಯ ಪರಿಣಾಮವಾಗಿ, ೧೮೩೭ರಲ್ಲಿ ಸುಮಾರು ಒಂದು ವಾರಗಳ ಕಾಲ ಮಂಗಳೂರು ನಗರ ರೈತರ ಕೈಯಲ್ಲಿತ್ತು. ಬ್ರಿಟಿಷ್ ಬರಹಗಾರರು ಇವೆಲ್ಲಾ "ಗೌಡರ ದಂಗೆ" ಎಂದು ಬಣ್ಣಿಸಿದ್ದುಂಟು. ಬ್ರಿಟಿಷ್ ಅರಸರು ಈ ಪ್ರತಿಭಟನೆಯನ್ನು ಕೊಡವ ಮತ್ತು ಗೌಡರ ನಡುವಿನ ಹೋರಾಟ ಎನ್ನುವ ರೀತಿಯಲ್ಲಿ ಬಿಂಬಿಸಿ, ತಮ್ಮ ರಾಜಕೀಯ ಚದುರಂಗಾಟದಲ್ಲಿ ಸಫಲರಾದರು. ಈ ಪ್ರತಿಭಟನೆಯನ್ನು ದಿವಾನ್ ಬೋಪು ಹಾಗೂ ಕೊಡಗಿನ ಜಮ್ಮ ರೈತರು ಬ್ರಿಟಿಷರ ಸಹಾಯದಿಂದ ಹತ್ತಿಕ್ಕಿದರು. ಇದನ್ನು ಹತ್ತಿಕ್ಕಲು ಇವರಿಗೆ ಇನ್ನೊಂದು ಮುಖ್ಯವಾದ ಕಾರಣವೂ ಇತ್ತು. ಅದೇನೆಂದರೆ, ಇದು ವಾಸ್ತವವಾಗಿ ಸುಳ್ಯ-ಪುತ್ತೂರಿನ ರೈತರ ಹೋರಾಟವಾದರೂ, ಈ ಹೋರಾಟಕ್ಕೆ ಹಾಲೇರಿ ಅರಸರ ವೀರಶೈವ ಲಿಂಗಾಯಿತ ಸಂಬಂಧಿಗಳ ಬೆಂಬಲವಿತ್ತು. ಒಂದು ವೇಳೆ ಮಂಗಳೂರನ್ನು ಗೆದ್ದ ಹಾಗೆ ಇವರು ಕೊಡಗನ್ನು ಗೆದ್ದು ಬಿಟ್ಟರೆ ತಮ್ಮ ಸ್ಥಾನಕ್ಕೆ ಸಂಚಕಾರ ಬರಬಹುದೆಂಬ ಅವ್ಯಕ್ತ ಭಯ ಈ ದಿವಾನರಿಗೆ ಇತ್ತು. ಹೀಗಾಗಿ ಇವರು ಜೀವವಿಟ್ಟು ಈ ಹೋರಾಟವನ್ನು ಹತ್ತಿಕ್ಕಿದರು ಎಂಬ ರೀತಿಯ ವಿವರಣೆಯನ್ನು ನಾವು ಮೋಗ್ಲಿಂಗ್‌ನ ಬರವಣಿಗೆಯಲ್ಲಿ ನೋಡಬಹುದು. ಪರಿಣಾಮವಾಗಿ, ಹೋರಾಟದ ನೇಪತ್ಯದಲ್ಲಿದ್ದ ಚಿಕ್ಕವೀರರಾಜನ ಸಂಬಂಧಿಕರಾದ ಸ್ವಾಮಿ ಅಪರಂಪಾರ, ಕಲ್ಯಾಣ ಬಸವ ಮತ್ತು ಪುಟ್ಟಬಸವ ಮುಂತಾದ ಹಾಲೇರಿ ವಂಶಜರು ಕೊಡಗನ್ನು ಮತ್ತೆ ವಶಪಡಿಸಿಕೊಳ್ಳುವಲ್ಲಿ ವಿಫಲರಾದರು. "ದಿವಾನ್"ನಾಗಿದ್ದ ಲಕ್ಷ್ಮೀನಾರಾಯಣನನ್ನೂ ಬೆಂಗಳೂರಿನ ಸೆರೆಮನೆಗೆ ಕಳಿಸಲಾಯಿತು. ಕೆದಂಬಾಡಿ ರಾಮೇಗೌಡ, ಚೆಟ್ಟಿಕುಡಿಯ, ಗುಡ್ಡೇಮನೆ ಅಪ್ಪಯ್ಯ ಮುಂತಾದ ಗೌಡ ಹಾಗೂ ಕುಡಿಯ ಸಮುದಾಯಗಳ ರೈತ ಮುಖಂಡರು ಭಿನ್ನಭಿನ್ನ ಜಾತಿಗಳಿಗೆ ಸೇರಿದ ರೈತರು ಬ್ರಿಟಿಷರಿಂದ ಹತರಾಗುತ್ತಾರೆ. ಹಾಲೇರಿ ಅರಸರ ಆಳ್ವಿಕೆಯೂ ಈ ಮೂಲಕ ಕೊನೆಗೊಳ್ಳುತ್ತದೆ.

ಮಲೆಕರ್ನಾಟಕದ ಅರಸು ಮನೆತನಗಳು: ೧೭. ಪ್ರಾದೇಶಿಕ ಕಿರು ಅರಸುಮನೆತನಗಳ ಅಧ್ಯಯನದ ಪ್ರಸ್ತುತತೆ

ಸೂಕ್ಷ್ಮ ಅಧ್ಯಯನಗಳಿಗೆ ಒತ್ತು ಕೊಡುತ್ತಿರುವ ಇಂದಿನ ಶೈಕ್ಷಣಿಕ ಸಂದರ್ಭದಲ್ಲಿ ಪ್ರಾದೇಶಿಕ ಅಧ್ಯಯನವು ಸಾಕಷ್ಟು ಮಹತ್ವವನ್ನು ಪಡೆದಿದೆ. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಭೌಗೋಲಿಕ ಮತ್ತು ರಾಜಕೀಯ ಪರಿಸರದ ಕನಿಷ್ಟ ಜ್ಞಾನವಾದರೂ ಇರುವುದು ಅತ್ಯಗತ್ಯ. ಒಬ್ಬ ವ್ಯಕ್ತಿ ಮೊದಲು ತನ್ನ ಆವರಣದಲ್ಲಿ ನೆಲೆಯೂರಿ ನಂತರ ಯಾವ ವಿಶಾಲ ಪ್ರದೇಶದ ಭಾಗ ತಾನಾಗಿರುವನೋ ಅದನ್ನು ಅರಿಯಲು ತೊಡಗಬೇಕಾಗುತ್ತದೆ.

ಅದಕ್ಕೂ ಮಿಗಿಲಾಗಿ ಒಬ್ಬನ ಐತಿಹಾಸಿಕ ಗ್ರಹಿಕೆಗಳು ನಿಜ ಸುಳ್ಳುಗಳ ಸಮ್ಮಿಶ್ರಣವಾಗಿರದೇ ಸರಿಯಾದ ರೀತಿಯಲ್ಲಿ ಇರಬೇಕಾದದ್ದು ಕೂಡ ಅತ್ಯವಶ್ಯ. ಸ್ಥಾನಿಕ ಅಧ್ಯಯನಗಳು ನಮ್ಮ ಐತಿಹಾಸಿಕ ಬೇರುಗಳನ್ನು ಅರ್ಥೈಸಲು ಹಾಗೂ ಇದನ್ನು ಒಂದು ಪ್ರದೇಶದ ಸಾಮಾಜಿಕ, ರಾಜಕೀಯ ಹಾಗೂ ಸಾಂಸ್ಕೃತಿಕ ವಿಕಾಸದ ಹಿರಿಯ ಆಯಾಮಕ್ಕೆ ಜೋಡಿಸಲು ಅನುವು ಮಾಡಿಕೊಡುತ್ತವೆ. ಈ ಅರ್ಥದಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾಲಯ ಹಾಗೂ ಶಿವಮೊಗ್ಗದ ಇತಿಹಾಸ ವೇದಿಕೆಗಳು ಸೇರಿ ಸಂಘಟಿಸಿದ ಮಲೆನಾಡಿನ ಸ್ಥಾನಿಕ ಅರಸರುಮನೆತನಗಳ ಕುರಿತ ಈ ಎರಡು ದಿನಗಳ ವಿಚಾರ ಸಂಕಿರಣವು ಹೊಸ ರೀತಿಯ ಸಂಶೋಧನೆಯನ್ನು ಬೆಳೆಸುವಲ್ಲಿ ಹಾಗೂ ಈ ಪ್ರದೇಶದ ಮತ್ತು ಜನರ ವಿಭಿನ್ನ ಅಂಶಗಳ ಕುರಿತು ಬೆಳಕು ಚೆಲ್ಲುವಲ್ಲಿ ಬಹುಕಾಲ ಉಳಿಯಬಲ್ಲ ತನ್ನ ಸಾಧನೆಯನ್ನು ಮಾಡಿದ.

ಆದರೆ ಪ್ರಾದೇಶಿಕ ರಾಜಕೀಯ ಮತ್ತು ಸಾಂಸ್ಕೃತಿಕ ಅಧ್ಯಯನಗಳು ಸಾಂಪ್ರದಾಯಿಕ ಮಿತಿಗಳನ್ನು ಬಿಟ್ಟು ಮೇಲೆ ಏರಬೇಕಾದದ್ದು ಅವಶ್ಯಕ. ಈ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಸಾಧಾರಣವಾಗಿ ಪುರಾಣಗಳು ದಂತಕಥೆಗಳು ಹಾಗೂ ಸ್ಥಾನಿಕ ಅರಸರ ಶೌರ್ಯದ ವೈಭವೀಕರಣಗಳೇ ತುಂಬಿರುತ್ತವೆ. ಸ್ಥಾನಿಕ ರಾಜರನ್ನು ವೈಭವೀಕರಿಸುವುದು ಹಾಗೂ ಕಲೆ ಮತ್ತು ವಾಸ್ತುಶಿಲ್ಪಗಳನ್ನು ತೀರ ಆಧ್ಯಾತ್ಮಿಕವಾದ ನೆಲೆಯಲ್ಲೇ ಸರಳೀಕರಿಸುವದು ಇವೆಲ್ಲ ಇಂದಿನ ಇತಿಹಾಸದ ಅಧ್ಯಯನದಲ್ಲಿ ನಾವೆಲ್ಲಾ ಸಾಮಾನ್ಯವಾಗಿ ಮಾಡುತ್ತಿರುವ ಹಾಗೂ ಪಡೆಯುತ್ತಿರುವ ಶಿಕ್ಷಣಕ್ಕೆ ಅನುಗುಣವಾಗಿಯೇ ಇದೆ. ಇದು ಒಂದು ಹಂತದವರೆಗೆ ಸ್ಥಾನಿಕ ಇತಿಹಾಸಕ್ಕೆ ಅಗತ್ಯ ಎಂದು ಕಂಡರೂ ಇದರಲ್ಲಿ ಪ್ರಾದೇಶಿಕ ಭಾವನೆಗಳು ಸೇರಿಕೊಂಡಿರುವುದರಿಂದ ವ್ಯಕ್ತಿನಿಷ್ಟ ಪೂರ್ವಾಗ್ರಹ ಇದರಲ್ಲಿ ಸೇರಿಕೊಂಡು ಕೆಲವೊಮ್ಮೆ ಅತಿಯಾಗಿಬಿಡಬಹುದು.

ಸಂಪೂರ್ಣ ವಸ್ತುನಿಷ್ಟತೆ ಕೂಡ ಅಸಾಧ್ಯವಾದ ಕಲ್ಪನೆಯೇ ಆದರೂ ತಮ್ಮ ವಿಷಯದ ಕುರಿತು ಆದಷ್ಟು ನಿಷ್ಪಕ್ಷಪಾತೀ ಹಾಗೂ ತಟಸ್ಥ ಧೋರಣೆಯನ್ನು ವಿದ್ವಾಂಸರು ತಳೆಯಬೇಕು. ಅದರಲ್ಲೂ ಪ್ರಾದೇಶಿಕ ಇತಿಹಾಸ ತಜ್ಞರಿಗೆ ಇಂಥ ಪೂರ್ವಾಗ್ರಹಗಳಿಂದ ತಪ್ಪಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ಇಲ್ಲಿ ಪ್ರಸ್ತುತ ಸಂದರ್ಭದಲ್ಲಿ ವ್ಯಕ್ತಿ ನಿಷ್ಠತೆ ಹಾಗೂ ವಸ್ತುನಿಷ್ಠತೆಗಳ ಕುರಿತು ಚರ್ಚಿಸುವುದು ಅಷ್ಟು ಸೂಕ್ತವಲ್ಲ, ಆದರೂ ಹೊಸ ಸಾಧ್ಯತೆಗಳನ್ನು ಸೃಷ್ಟಿಸುವ ಪೂರ್ವದಲ್ಲಿ ಪ್ರಾದೇಶಿಕ ಇತಿಹಾಸದ ಕೆಲ ಮಿತಿಗಳನ್ನು ಗುರುತಿಸುವುದು ಸೂಕ್ತವಾಗಿದೆ.

ಸ್ಥಾನಿಕ ಇತಿಹಾಸಗಳಿಗೆ ತಮ್ಮದೇ ಆದ ಸಮಸ್ಯೆಗಳು ಹಾಗೂ ಸಾಧ್ಯತೆಗಳು ಇವೆ. ಈ ಇತಿಹಾಸಕ್ಕೆ ತನ್ನದೇ ಆದ ಅನ್ವೇಷಣಾ ವಿಧಾನಗಳು ಹಾಗೂ ಸಂಶೋಧನಾ ತಂತ್ರಗಳು ಇವೆ. ಯಾರು ಹೇಗೆ ಇದನ್ನು ಅನುಸರಿಸುತ್ತಾರೆ ಎಂಬುದು ಅವರವರ ಒಲವಿಗೆ ಬಿಟ್ಟಿದ್ದು. ಈ ಕುರಿತು ಗಂಭೀರವಾಗಿ ಆಲೋಚಿಸುವವರಿಗೆ ಇತಿಹಾಸದ ಹೊಸ ಸಂಶೋಧನಾತಂತ್ರಗಳು ಆವಿಷ್ಕಾರವಾಗಿ ಹೊಸ ಸಾಧ್ಯತೆಗಳು ತೆರೆದಿವೆ. ಸಬಾಲ್ಟರ್ನ ಅಧ್ಯಯನ ಇದರಲ್ಲಿ ಒಂದು ವಿಧವಾದರೆ ಮೌಖಿಕ ಇತಿಹಾಸವು ಸ್ಥಾನಿಕ ಅಧ್ಯಯನಗಳ ನಿಟ್ಟಿನಿಂದ ಮತ್ತೊಂದು ಮಾರ್ಗದರ್ಶಕವಾಗಿದೆ. ಇಂತಹ ಹೊಸ ಬೆಳವಣಿಗೆಗಳು ಪ್ರಾದೇಶಿಕ ಇತಿಹಾಸಕ್ಕೆ ಅಪಾರ ಅವಕಾಶ ವನ್ನು ಸೃಷ್ಟಿಸಿವೆ. ಈ ಹೊಸ ಬೆಳವಣಿಗೆಗಳನ್ನು ನಾವು ಗಮನಿಸಿದಾಗ ನಂಬಲಿಕ್ಕೆ ಅಸಾಧ್ಯವಾದ ರೀತಿಯಲ್ಲಿ ನಾವು ಸೂಕ್ಷ್ಮ ಅಧ್ಯಯನಗಳನ್ನು ನಡೆಸಲು ಸಮರ್ಥರಾಗಿದ್ದೇವೆಂದು ಅರಿವಿಗೆ ಬರುತ್ತದೆ.

ಈವರೆಗೆ ಅಷ್ಟಾಗಿ ಪ್ರಚಲಲಿತದಲ್ಲಿ ಬರದ ಹಾಗೂ ಪ್ರಾದೇಶಿಕ ಅಧ್ಯಯನವನ್ನು ಇನ್ನೂ ಗಂಭೀರವಾಗಿ ನಡೆಸಬಹುದಾದ ಕೆಲ ಮಾರ್ಗಗಳನ್ನು ಇಲ್ಲಿ ಉಲ್ಲೇಖಿಸಬಹುದು. ಪ್ರಾರಂಭದಲ್ಲಿ ಐತಿಹಾಸಿಕ ಭೂಗೋಲದ ಅನ್ವೇಷಣೆಯನ್ನು ನಡೆಸಬಹುದು. ಈ ಕ್ಷೇತ್ರದಲ್ಲಿ ಬಹಳಷ್ಟು ಕೆಲಸ ನಡೆಯದೇ ಇರುವುದು ಈ ಅಧ್ಯಯನದ ಒಂದು ಸವಾಲು ಕೂಡ ಆಗಿದೆ. ನಮಗೆ ಸಿಗುವ ಆಧಾರಗಳು ಈ ಅರಸರ ರಾಜ್ಯದ ಗಡಿಗಳ ಕುರಿತು ಒಮ್ಮತದ ಮಾಹಿತಿಯನ್ನು ಕೊಡದಿರುವುದು ಒಂದು ಮುಖ್ಯ ತೊಡಕಾಗಿದೆ. ಬಹುಬಾರಿ ಒಂದು ರಾಜ್ಯದ ಗಡಿ ಇನ್ನೊಂದರಲ್ಲಿ ಸುಲಭ. ಆದರೆ ಅವರ ರಾಜ್ಯದ ಗಡಿಗಳನ್ನು ಸ್ಪಷ್ಟವಾಗಿ ಗುರುತಿಸುವುದು ಕಷ್ಟ. ಈಗ ಸಿಕ್ಕುವ ಆಕಾರಗಳನ್ನೇ ಇಟ್ಟುಕೊಂಡು ಅವುಗಳ ನಕಾಶೆ ತಯಾರಿಸಿ ರಾಜವಂಶ ಹಾಗೂ ಕಾಲಾನುಕ್ರಮಣಿಕೆಗಳಲ್ಲಿ ಅವನ್ನು ನಿರೂಪಿಸುವ ಕೆಲಸ ಆಗಬೇಕು.

ಮತ್ತೊಂದು ಆಸಕ್ತಿ ಪೂರ್ಣಕ್ಷೇತ್ರ ಎಂದರೆ ಸ್ಥಳನಾಮಗಳ ಅಧ್ಯಯನ. ಸ್ಥಳಗಳನ್ನು ಗುರುತಿಸಿ ಅವುಗಳ ಮೂಲದ ಕುರಿತು ವಿಶ್ಲೇಷಣೆ ನಡೆಸಬಹುದು. ಈ ಸ್ಥಳನಾಮಗಳನ್ನು ಒಂದು ನಗರೀಕರಣದ ಸಂರ್ಭದಲ್ಲಿ ಅಧ್ಯಯನಕ್ಕೊಳಪಡಿಸಿ, ಆಯಾ ಪ್ರದೇಶದ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಆರ್ಥಿಕ ಪ್ರಗತಿಯ ಕುರಿತು ಕೂಡ ನಾವು ತಿಳಿದುಕೊಳ್ಳಬಹುದು.

ಜನಸಂಖ್ಯೆ ಅಧ್ಯಯನದ ಮೇಲೆ ಕೂಡ ವಿಪುಲ ಕೆಲಸವನ್ನು ನಡೆಸಬಹುದು. ಜನಸಂಖ್ಯೆ ಅಧ್ಯಯನದಲ್ಲಿ ಕೇವಲ ಜನಸಂಖ್ಯೆಯ ಕುರಿತು ಅಧ್ಯಯನ ಮಾತ್ರ ಇರುವುದಿಲ್ಲ, ಜೊತೆಗೆ ಆ ಜನರ ಸಾಮಾಜಿಕ, ಸಾಂಸ್ಕೃತಿಕ ಹಿನ್ನಲೆಯ ಕುರಿತು ಅಧ್ಯಯನ ನಡೆಸಲು ವಿಪುಲ ಅವಕಾಶವಿದೆ. ಆಧುನಿಕ ಪೂರ್ವಕಾಲದಲ್ಲಿ ದೊಡ್ಡ ಪ್ರಮಾಣದಲ್ಲಿ ನಡೆದ ವಲಸೆಗಳನ್ನು ಕುರಿತ ಅಧ್ಯಯನಗಳನ್ನು ಖಂಡಿತವಾಗಿ ಉಪೇಕ್ಷಿಸಬಾರದು. ವಿವರಣೆಗಳಿಗೆ ನಿಲುಕದ ಹಳ್ಳಿ ಪಟ್ಟಣಗಳ ನಾಶ, ನಗರ ಕೇಂದ್ರಗಳ ಅವನತಿಯನ್ನು ವಿವರಿಸಬೇಕಾಗುತ್ತದೆ. ಏಕೆ ಜನಸಂಖ್ಯಾಭರಿತ ಪ್ರಾದೇಶಗಳು ನಿರ್ಜನವಾಗುತ್ತವೆ. ಹಾಗೂ ಜನರು ಏಕೆ ಬಹು ಸಂಖ್ಯೆಯಲ್ಲಿ ವಲಸೆ ಹೋಗುತ್ತಾರೆ ಎಂಬ ಪ್ರಶ್ನೆ ಆಸಕ್ತಿ ಪೂರ್ಣವಾದ ಉತ್ತರಗಳನ್ನು ನೀಡಬಲ್ಲದು. ಉತ್ತರವಾಗಿ ಬರ, ಸಾಂಕ್ರಮಿಕ ರೋಗ ಮುಂತಾದವು ಕಂಡು ಬರುತ್ತವೆ. ಹಾಗಾಗಿ ಇಂಥ ಪ್ರತ್ಯೇಕ ಕಾರಣಗಳೇ ಮತ್ತೊಂದು ವಿವರವಾದ ಅಧ್ಯಯನಕ್ಕೆ ದಾರಿ ಮಾಡಿಕೊಡುತ್ತವೆ.

ಐತಿಹಾಸಿಕ ಸಮಾಜ ಶಾಸ್ತ್ರವು ತ್ವರಿತವಾಗಿ ಬೆಳೆಯುತ್ತಿರುವ ಮತ್ತೊಂದು ಕ್ಷೇತ್ರವಾಗಿದೆ. ಜಾತಿ ಮತ್ತು ವರ್ಗಗಳ ಅಧ್ಯಯನ ಹಾಗೂ ಸೂಕ್ಷ್ಮ ಹಾಗೂ ಸ್ಥೂಲ ಮಟ್ಟದ ಸಾಮಾಜಿಕ ವ್ಯವಸ್ಥೆಗೆ ಅವುಗಳ ಪ್ರಸ್ತುತತೆಗಳನ್ನು ತಿಳಿದುಕೊಳ್ಳುವುದು ಮಹತ್ವದ್ದಾಗಿದೆ. ಹಾಗೂ ಸಾಮಾಜಿಕ ಸಂಬಂಧಗಳಲ್ಲಿ ಆಂತರಿಕ ತಳಮಳಗಳನ್ನು ಕೂಡ ತಿಳಿದುಕೊಳ್ಳಬಹುದಾಗಿದೆ. ಲಿಂಗ ಅಧ್ಯಯನಗಳು ಕೂಡ ಕೇವಲ ಸಂತ್ರಸ್ತ ವರ್ಗಗಳ ಕುರಿತು ಮಾತ್ರವಲ್ಲದೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಬೆಳವಣಿಗೆಯಲ್ಲಿ ಸ್ತ್ರೀ ಪುರುಷ ಸಂಬಂಧಗಳ ಚಲನಶೀಲತೆಯನ್ನು ತಿಳಿದುಕೊಳ್ಳಲು ಸಹ ಕರಿಸುತ್ತವೆ.

ಇಂದು ಪ್ರಚಲಿತದಲ್ಲಿ ಬರುತ್ತಿರುವ 'ನ್ಯೂ ಹಿಸ್ಟರಿಸಿಸಂ' ಎಂಬ ಮಾರ್ಗದಲ್ಲಿ ಸಂಸ್ಕೃತಿಯನ್ನು ಸಾಹಿತ್ಯ, ಜಾನಪದ ಹಾಗೂ ಪೂಜಾ ಪಂಥಗಳ ಮೂಲಕ ಅಧ್ಯಯನ ಮಾಡುವ ಒಲವು ಬೆಳೆಯುತ್ತಿದೆ. ಸಾಂಪ್ರದಾಯಿಕ ಇತಿಹಾಸದ ಆಕರದಲ್ಲಿ ಅಷ್ಟಾಗಿ ಕಾಣಸಿಗದ ಈ ಉಪೇಕ್ಷಿತ ವಿಷಯಗಳು ಇದರಿಂದಾಗಿ ಮಹತ್ವ ಪಡೆಯುತ್ತಿವೆ. ಸಾಂಸ್ಕೃತಿಕ ಮಾನವಶಾಸ್ತ್ರ, ಪರಿಸರ ಮತ್ತು ಜೀವಾವಲಂಬನೆಯ ಅಧ್ಯಯನಗಳು ಕೂಡ ಇತಿಹಾಸದಲ್ಲಿ ಇಲ್ಲಿಯವರೆಗೆ ಬಳಸಿಕೊಳ್ಳದ ಕ್ಷೇತ್ರಗಳಾಗಿದ್ದು ಇನ್ನು ಮುಂದಾದರೂ ಅವನ್ನೂ ಬಳಸಿಕೊಳ್ಳಬಹುದಾಗಿದೆ.

ಆಡಳಿತ ವ್ಯವಸ್ಥೆಯನ್ನು ಕುರಿತ ಕೃತಿಗಳು ಸಾಮಾನ್ಯವಾಗಿವೆ. ಆದರೆ ರಾಜ್ಯ ನಿರ್ಮಾಣ ಹಾಗೂ ಬುಡಕಟ್ಟು ಹಂತದಿಂದ ರಾಜ್ಯದ ಹಂತಕ್ಕೆ ನಡೆದ ಸ್ಥಿತ್ಯಂತರಗಳ ಕುರಿತ ಅಧ್ಯಯನ ಅಷ್ಟಾಗಿ ನಡೆದಿಲ್ಲ. ಅಂಥ 'ಸೂಕ್ಷ್ಮ' ಅಧ್ಯಯನಗಳಿಂದ ಪ್ರಾದೇಶಿಕ ಚಿಕ್ಕ ಪುಟ್ಟ ನಾಯಕರು ಅಥವಾ ಸಾಮಂತರು ಹಾಗೂ ಅವರ ಮೇಲಿನ ಸ್ವಾಮಿಗಳ ಸಂಕೀರ್ಣ ಸಂಬಂಧವನ್ನು ಅರಿಯಲು ಕೆಲ ಒಳನೋಟಗಳನ್ನು ಪಡೆಯಬಹುದು. ಇಂಥ ಅಧ್ಯಯನಗಳು ಒಂದು ರಾಜ್ಯ ಸಾಮಂತಶಾಹಿ (ಫ್ಯೂಡಲ್) ಆಗಿತ್ತೇ? ಸೈನ್ಯ ಕೇಂದ್ರಿತವಾಗಿತ್ತೆ ಅಥವಾ ಸೆಗ್ಮೆಂಟರಿ ಹಾಗೂ ಧಾರ್ಮಿಕ ಅಧಿಕಾರವಾಗಿತ್ತೆ ಎಂಬುದನ್ನು ತಿಳಿಸಬಹುದು. ಅಂಥ ಅಧ್ಯಯನಗಳನ್ನು ಮಾಡುವಾಗ ಅವುಗಳ ಪೂರಕ ಅಂಶಗಳಾದ ನ್ಯಾಯ ಪದ್ಧತಿ, ಆಡಳಿತ ಯಂತ್ರ ಮುಂತಾದ ವಿಷಯಗಳು ಆಯಾ ಕ್ಷೇತ್ರಕ್ಕೇ ಸಂಬಂಧಿಸಿ ಬೆಳಕಿಗೆ ಬರುತ್ತವೆ.

ಆರ್ಥಿಕ ಪರಿಸ್ಥಿತಿ ಮತ್ತು ಬೆಳವಣಿಗೆಗಳು ನಮ್ಮ ಅಧ್ಯಯನಕ್ಕೆ ಅಪಾರ ಅವಕಾಶವನ್ನು ಸೃಷ್ಟಿಸುತ್ತವೆ. ಭೂಕಂದಾಯ, ನೀರಾವರಿ, ಅಳತೆ ಪದ್ಧತಿ, ವ್ಯಾಪಾರ, ನಾಣ್ಯ ಪದ್ಧತಿ ಎಲ್ಲವೂ ಆರ್ಥಿಕ ಬೆಳವಣಿಗೆಯ ಸೂಚನೆಗಳಾಗಿವೆ. ಇವುಗಳಲ್ಲಿ ಪ್ರತಿಯೊಂದನ್ನು ಪ್ರತ್ಯೇಕವಾಗಿ ಅಧ್ಯಯನಕ್ಕೊಳಪಡಿಸಬಹುದಾಗಿದೆ. ಭೌತಿಕ ಸಂಪನ್ಮೂಲಗಳ ಸಾಗಣೆ, ವಿತರಣೆ, ಉಪಭೋಗ ಹಾಗೂ ಹಂಚಿಕೆ ಮುಂತಾದವು ಆರ್ಥಿಕ ಬೆಳವಣಿಗೆಯ ಮಾಪನವನ್ನು ರೂಪಿಸಲು ಅತ್ಯವಶ್ಯವಾಗಿವೆ. ಇದರ ಮೂಲಕ ಒಂದು ಕಾಲದಲ್ಲಿ ಎಷ್ಟು ಪ್ರಗತಿಯನ್ನು ಸಾಧಿಸಲಾಯಿತು ಎಂಬುದನ್ನು ತಿಳಿದುಕೊಳ್ಳಬಹುದು. ವ್ಯಾಪಾರ, ತಂತ್ರಜ್ಞಾನ ಹಾಗೂ

ಕೈಗಾರಿಕೆಗಳ ಬೆಳವಣಿಗೆ ಕೂಡ ಒಂದು ಕಾಲದಲ್ಲಿ ಸಾದಿತವಾದ ಅಭಿವೃದ್ಧಿಯನ್ನು ಸೂಚಿಸುತ್ತವೆ.

ಈ ಮೇಲಿನ ಕ್ಷೇತ್ರದ ಸಂಬಂಧಿಸಿ ಇರುವ ಆಕರಗಳ ಒಂದು ವ್ಯವಸ್ಥಿತ ಅಧ್ಯಯನ ಆಯಾ ಸೂಕ್ಷ್ಮ ಪ್ರದೇಶದ ಕುರಿತು ಹೊಸ ಮಾಹಿತಿಯನ್ನು ನೀಡುವುದಷ್ಟೇ ಅಲ್ಲದೇ ಐತಿಹಾಸಿಕ ತಥ್ಯಾಂಶಗಳನ್ನು ಅರಿಯಲೂ ಸಹಾಯವಾಗುತ್ತವೆ. ಇವು ನಾವು ಈಗಾಗಲೇ ಕಟ್ಟಿಕೊಂಡ ಸುವರ್ಣಯುಗದ ಭ್ರಮೆಯನ್ನು ಒಡೆಯಲೂಬಹುದು. ಇಲ್ಲಿ ಕೇವಲ ಕೆಲವು ಕ್ಷೇತ್ರಗಳನ್ನು ಮಾತ್ರ ಸೂಚಿಸಲಾಗಿದೆ. ವಾಸ್ತವವಾಗಿ ಇನ್ನೂ ಅನೇಕ ಕ್ಷೇತ್ರಗಳು ಕೂಡ ಇಲ್ಲಿ ಹೆಸರಿಸದೇ ಉಳಿದಿವೆ. ಹಾಗೂ ಅವೂ ಮಹತ್ವದ್ದಾಗಿವೆ. ಒಬ್ಬ ವಿದ್ವಾಂಸನ ಪ್ರತಿಭೆಯು ಇಂಥ ಉಪೇಕ್ಷಿತ ಕ್ಷೇತ್ರಗಳನ್ನು ದುಡಿಸಿಕೊಂಡು ನಮ್ಮ ಜ್ಞಾನದ ಸೀಮೆಯನ್ನು ವಿಸ್ತರಿಸುತ್ತದೆ ಎಂದು ಹೇಳಬಹುದು.

ಅಂತ್ಯದಲ್ಲಿ ಒಂದು ಎಚ್ಚರಿಕೆಯ ಮಾತೂ ಅಗತ್ಯ. ಸೂಕ್ಷ್ಮ ಪ್ರದೇಶದ ಅಧ್ಯಯನವನ್ನು ನಡೆಸಲು ಒಬ್ಬ ವಿದ್ವಾಂಸನು ಸರಿಯಾದ ವಿಧಾನವನ್ನು ಅನುಸರಿಸಬೇಕಾಗುತ್ತದೆ. ಅವನು ಈ ವೃತ್ತಿಯಲ್ಲಿ ತರಬೇತಿ ಹೊಂದಿರಬೇಕಾಗುತ್ತದೆ. ಆಗ ಮಾತ್ರ ಆತನು ತನ್ನ ವಿಶ್ಲೇಷಣೆಯಲ್ಲಿ ಪರಿಪೂರ್ಣತೆ ಸಾಧಿಬಹುದು. ಅದಿಲ್ಲದಿದ್ದರೆ ಅವನು ಸಾರ್ವಜನಿಕರಿಗೆ ಸುಳ್ಳು ಮಾಹಿತಿಗಳನ್ನು ನೀಡುತ್ತಿರುತ್ತಾನೆ. ಆತನು ನಿಷ್ಪಕ್ಷಪಾತಿಯಾಗಿ ತನ್ನ ನಿರ್ಣಯಗಳನ್ನು ಅಳೆಯಬೇಕು. ಇದು ಏಕೆ ಅತ್ಯಗತ್ಯ ಎಂದರೆ ಪ್ರಾದೇಶಿಕ, ಸ್ಥಾನಿಕ ಅಧ್ಯಯನಗಳಲ್ಲಿ ತೀರ ಸಂಕುಚಿತ ಆಸಕ್ತಿಗಳು ಹಾಗೂ ಭಾವನೆಗಳು ನೈಜ ಇತಿಹಾಸವನ್ನೂ ಕೊಲ್ಲಬಹುದು. ಅದು ಪ್ರಾದೇಶಿಕ ದುರಹಂಕಾರ ಹಾಗೂ ಉಪರಾಷ್ಟ್ರೀಯತೆಗೆ ದಾರಿ ಮಾಡಬಹುದು.

ಹಾಗಾಗಿ ಹೊಸ ಮಾಹಿತಿಯನ್ನು ಪಡೆಯುವ ಅದ್ಭುತ ಅವಕಾಶವನ್ನು ಕಲ್ಪಿಸುವ ಈ ಪ್ರಾದೇಶಿಕ ಅಧ್ಯಯನಗಳು ಬಹುಜನರ ಹಿತಾಸಕ್ತಿಗೆ ಧಕ್ಕೆ ತರೂ ಬಲ್ಲವು. ಈ ಎಚ್ಚರಿಕೆ ಹಾಗೂ ವಿಮರ್ಶಾತ್ಮಕ ಸತೋಲನೆಯಿಂದ ಐತಿಹಾಸಿಕ, ಸಾಂಸ್ಕೃತಿಕ ಹಾಗೂ ಸಾಮಾನ್ಯ ಮಾಹಿತಿಯನ್ನು ಉಪೇಕ್ಷಿತ ಪ್ರದೇಶದ ಕುರಿತು ಪಡೆದು ಅದ್ಬುತ ನಡೆಸಿ ಇಡಬೇಕೆಂದಲ್ಲ. ಈ ಪ್ರತ್ಯೇಕ ಮಾಹಿತಿಗಳನ್ನು ಒಂದು ಸೈದ್ಧಾಂತಿಕ ಚೌಕಟ್ಟಿನಲ್ಲಿ ಇತಿಹಾಸದ ಪೂರ್ಣ ಜ್ಞಾನದಲ್ಲಿ ಅರಿಯಬೇಕು.

ಕೊನೆಯದಾಗಿ ಆಕರದ ಕುರಿತು ಒಂದು ಮಾತನ್ನು ಪ್ರಸ್ತಾಪಿಸಲೇಕು. ಪ್ರಾದೇಶಿಕ ಅಧ್ಯಯನಕ್ಕೆ ಸಂಬಂಧಿಸಿ ಮಾಹಿತಿಯನ್ನು ಸಂಗ್ರಹಿಸುವುದು ವಿದ್ವಾಂಸರಿಗೆ ಅಗಾಧವಾದ ಕೆಲಸವಾಗಿದೆ. ನಮಗೆ ಸಿಗುವ ಆಧಾರ ತೀರ ಅತ್ಯಲ್ಪವಾಗಿರಬಹುದು, ಅಪೂರ್ಣವಾಗಿರಬಹುದು, ತಪ್ಪಾಗಿರಬಹುದು ಅಥವಾ ಕೆಲವೊಮ್ಮೆ ದಾರಿ ತಪ್ಪಿಸುವಂತೆಯೂ ಇರಬಹುದು. ಸಂಶೋಧಕರು ಆಗಾಗ್ಗೆ ಇಂಥ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತದೆ. ಎಷ್ಟು ಚೆನ್ನಾಗಿ ಹಾಗೂ ಪ್ರಾಮಾಣಿಕವಾಗಿ ಇಂಥ ತೊಡಕನ್ನು ಬಿಡಿಸಿಕೊಳ್ಳುತ್ತಾರೆ ಎಂಬುದು ಅವರವರ ಚಾರಿತ್ರ್ಯಕ್ಕೆ ಬಿಟ್ಟಿದ್ದು. ಈ ಸಂಬಂಧಿಸಿ ಒಂದು ಹೇಳಿಕೆಯನ್ನು ಉದ್ಧರಿಸುವ ಮೂಲಕ ಮಾತನ್ನು ಮುಗಿಸುತ್ತೇನೆ. ‘ಇತಿಹಾಸವನ್ನು ಸುಳ್ಳನ್ನಾಗಿಮಾಡುವವರಿಗೆ ದೈವೀ ಶಿಕ್ಷೆ ಕಾದಿದೆ.’

ಅನುವಾದ: **ರಾಜಾರಾಮ ಹೆಗಡೆ**

ಮಲೆಕರ್ನಾಟಕದ ಅರಸು ಮನೆತನಗಳು: ಛಾಯಾಚಿತ್ರಗಳು



ಕ್ರಿ.ಶ. ೯೦೩ರ ಕೆರೆಹಳ್ಳಿ ಶಾಸನ ಲೇಖನ - ೭



ಸೂರ್ಯ ನಾರಾಯಣ, ಒಟೂರು ಲೇಖನ - ೭



ಕಮ್ಮಟೇಶ್ವರ ದೇವಾಲಯ, ಹುಂಚ ಲೇಖನ - ೩



ಪುಷ್ಕರಣಿ, ಹುಂಚ ಲೇಖನ - ೩




ಗುಡ್ಡದ ಬಸದಿಯ ಕಂಬಗಳು, ಹುಂಚ ಲೇಖನ - ೩




ಅಂಬಿಕಾಯಕ್ಷಿ, ಹುಂಚ ಲೇಖನ - ೩




ಬೋಗಾರ ಬಸದಿ, ಹುಂಚ ಲೇಖನ - ೩




ತ್ರಿಮೂರ್ತಿ ದೇವಾಲಯ, ಬಂದಳಿಕೆ ಲೇಖನ - ೪



ಬೊಪ್ಪೇಶ್ವರ ದೇವಾಲಯ ಜಾಲಂದ್ರಗಳಲ್ಲಿ ಕೆತ್ತನೆ, ಬಂದಳಿಕೆ ಲೇಖನ - ೪




ಶೈವ ದೇವಾಲಯ - ಶಾಂತಿನಾಥ ಜಿನಾಲಯ - ವೀರಭದ್ರ ದೇವಾಲಯದ ಎದುರಿನ
ದ್ವಾರಪಾಲಕ, ಉದ್ರಿ ಲೇಖನ - ೫



ಮಲ್ಲಿಕಾರ್ಜುನ ದೇವಾಲಯ, ನಾಡಕಳಸಿ ಲೇಖನ - ೭



ಈಶ್ವರ ದೇವಾಲಯ, ಹೊಸಗುಂದ ಲೇಖನ - ೭



ಚೆನ್ನಸೆಟ್ಟಿ ಕೊಪ್ಪದ ವೀರಗಲ್ಲು ಲೇಖನ - ೭



ಈಶ್ವರ ದೇವಾಲಯದ ಕಕ್ಷಾಸನದ ಮೇಲಿನ ಶಿಲ್ಪಗಳು, ಹೊಸಗುಂದ ಲೇಖನ - ೭



ಶಾಸನ ಶಿಲ್ಪ, ಹಾಲೇಬೇಲೂರು, ಲೇಖನ - ೯




ವಾಸುದೇವ ದೇವಾಲಯ, ಹಾಲೇಬೇಲೂರು ಲೇಖನ - ೯



ಕಲಾನಾಥೇಶ್ವರ ದೇವಾಲಯ, ಆರಗ ಲೇಖನ - ೧೨



ಪುಷ್ಕರಣಿ, ಸಂತೇಬೆನ್ನೂರು ಲೇಖನ - ೧೩





ನಾಗರಖಂಡ - ೭೦


ಜಿಡ್ಡುಳಿಗೆ -೭೦


ಬೆಳಗುತ್ತಿ ಸಿಂಧರು


ಹೊಸಗುಂದ-ಕಲಸೆ


ಹಾಲೆ ಬೇಲೂರು ಕದಂಬರು


ಆರಗ ವಿಭಾಗ


ಸಂತೆಬೆನ್ನೂರು-ತರೀಕೆರೆ
ಪಾಳೆಯಗಾರರು



ಮಲೆಕರ್ನಾಟಕದ ಅರಸು ಮನೆತನಗಳು: ಲೇಖಕರ ವಿಳಾಸಗಳು

೧. ರಾಜಾರಾಮ ಹೆಗಡೆ
ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ
ಶಂಕರಘಟ್ಟ – ೫೭೭ ४೫೧, ಶಿವಮೊಗ್ಗ ಜಿಲ್ಲೆ

೨. ಅಶೋಕ ಶೆಟ್ಟರ್
ರೀಡರ್, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ – ೫೮೦ ೦೦೩

೩. ಶ್ರೀಪಾದರಾವ್ ಬಿಚ್ಚುಗತ್ತಿ
ಎಲಸೆ, ಹಳೇ ಸೊರಬ, ಸೊರಬ ತಾಲೂಕು, ಶಿವಮೊಗ್ಗ ಜಿಲ್ಲೆ

೪. ಜಿ.ಸರ್ವಮಂಗಳ
ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ, ಕುವೆಂಪು ವಿಶ್ವವಿದ್ಯಾಲಯ,
ಶಂಕರಘಟ್ಟ – ೫೭೭ ४೫೧, ಶಿವಮೊಗ್ಗ ಜಿಲ್ಲೆ

೫. ಭೋಜರಾಜ ಪಾಟೀಲ
ಕನ್ನಡ ಉಪನ್ಯಾಸಕರು, **M.A.S.C.** ಕಾಲೇಜ್, ಹಂಸಭಾವಿ – ೫೮೧ ೧೦೯
ಹಿರೇಕೆರೂರ ತಾಲೂಕು, ಹಾವೇರಿ ಜಿಲ್ಲೆ

೬. ಕೋಟೆ ಮಲ್ಲಿಕಾರ್ಜುನ
ಇತಿಹಾಸ ಉಪನ್ಯಾಸಕರು, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ

೭. ಜಗದೀಶ
ನಂ.೬೬, ಮೊದಲನೇ ಅಡ್ಡರಸ್ತೆ, ಹೊಸಮನೆ ಬಡಾವಣೆ
ಶಿವಮೊಗ್ಗ – ೫೭೭ ೨೦೧

೮. ಟಿ. ಮುರಿಗೇಶಿ
ಇತಿಹಾಸ ಉಪನ್ಯಾಸಕರು, **M.S.R.C.** ಪದವಿ ಕಾಲೇಜು
ಶಿರ್ವ – ೫೭೪ ೧೧೬, ಉಡುಪಿ ಜಿಲ್ಲೆ

೯. ಮ. ಸಕಲೇಶ್
ಇತಿಹಾಸ ಉಪನ್ಯಾಸಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು
ಹಳೇ ನಗರ, ಭದ್ರಾವತಿ, ಶಿವಮೊಗ್ಗ ಜಿಲ್ಲೆ

೧೦. ಎಚ್.ಎಂ.ನಾಗರಾಜರಾವ್
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೫೭೦ ೦೦೬

೧೧. ಪಿ.ಕೆ.ರಾಜಶೇಖರ
ಪ್ರವಾಚಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೫೭೦ ೦೦೬

೧೨. ಬಿ.ಎಸ್.ರಾಮಭಟ್ಟ
ಪದ್ಮಶ್ರೀ ೧೩೯ E, ಮೂರನೇ ತಿರುವು, ಗೋಪಾಲಗೌಡ ಬಡಾವಣೆ, ಗೋಪಾಳ,
ಶಿವಮೊಗ್ಗ

೧೩. ಸಂತೇಬೆನ್ನೂರು ಸುಮತೀಂದ್ರ ನಾಡಿಗ್
ವರದಿಗಾರ – ಪ್ರಜಾವಾಣಿ, ಡೆಕ್ಕನ್‌ಹೆರಾಲ್ಡ್
ಸಂತೇಬೆನ್ನೂರು – ೫೭೭ ೫೫೨, ಚನ್ನಗಿರಿ ತಾಲೂಕು, ದಾವಣಗೆರೆ ಜಿಲ್ಲೆ

೧೪. ಡಿ.ಎನ್.ಯೋಗೀಶ್ವರಪ್ಪ
ರೀಡರ್, ಇತಿಹಾಸ ವಿಭಾಗ, ಶ್ರೀ ಸಿದ್ಧಗಂಗಾ ಮಹಿಳಾ ಕಾಲೇಜು
ತುಮಕೂರು – ೫೭೧ ೧೦೨

೧೫. ಕೆಳದಿ ಗುಂಡಾಜೋಯಿಸ
ಕೆಳದಿ, ಸಾಗರ ತಾಲೂಕು, ಶಿವಮೊಗ್ಗ ಜಿಲ್ಲೆ

೧೬. ಟಿ.ಪಿ.ವಿಜಯ
ಪ್ರವಾಚಕರು, ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩ ೨೭೬, ಹೊಸಕೋಟೆ ತಾಲೂಕು, ಬಳ್ಳಾರಿ ಜಿಲ್ಲೆ

೧೭. ಎಸ್.ಎ.ಬಾರಿ
ಮುಖ್ಯಸ್ಥರು, ಇತಿಹಾಸ ಮತ್ತು ಪ್ರಾಕ್ತನಶಾಸ್ತ್ರ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ – ೫೭೭ ೪೫೧
ಶಿವಮೊಗ್ಗ ಜಿಲ್ಲೆ